೧

ನಿರಂಜನ

# ಸ್ವಾಮಿ ಅಪರಂಪಾರ



ಐತಿಹಾಸಿಕ ಕಾದಂಬರಿ

ಐತಿಹಾಸಿಕ ಕಾದಂಬರಿ

ಡಿ. ವಿ. ಕೆ. ಮೂರ್ತಿ :: ಮೈಸೂರು-೪

ರೂ. 5.50

مـ

# ಸ್ವಾಮಿ ಅಪರಂಪಾರ

ನಿರಂಜನ

KARNATAKA BOOK CENT
609, Avenue Road, BANGALORE-56000
ಕರ್ನಾಟಕ ಬುಕ್ ಸೆಂಟರ್
೬೦೯, ಅವಿನ್ಯೂ ರೋಡ್, ಬೆಂಗಳೂರು-೫೬೦೦೦೨

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು-೪

*SWAAMI APARAMPAARA*—A Historical novel in Kannada by Niranjana. Fourth Edition 1977 : Published by D. V. K. Murthy, Mysore-570 004.

ಮೊದಲನೆಯ ಮುದ್ರಣ : ೧೯೬೭
ಎರಡನೆಯ ಪರಿಷ್ಕೃತ ಮುದ್ರಣ : ೧೯೭೬
ಮೂರನೆಯ ಮುದ್ರಣ : ೧೯೭೭
ನಾಲ್ಕನೆಯ ಮುದ್ರಣ : ೧೯೭೭

© ನಿರಂಜನ

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಆಚಾರ್ಯ

ತೀ. ನಂ. ಶ್ರೀ.

ಅವರಿಗೆ

## ಈ ಕೃತಿ....

ಅಪರಂಪಾರ ಕಥಾನಾಯಕನಾಗಿರುವ ಈ ಕಾದಂಬರಿ ಐತಿಹಾಸಿಕ. ಇದರ ವಸ್ತು ಹತ್ತೊಂಭತ್ತನೆಯ ಶತಮಾನದ್ದು. ಸ್ವತಂತ್ರ ರಾಜ್ಯವಾಗಿದ್ದ ಕೊಡಗಿನ ಅರಸ ಚಿಕವೀರ ರಾಜೇಂದ್ರನನ್ನು ಆಂಗ್ಲರು ಪದಚ್ಯುತಗೊಳಿಸಿದ್ದು, ನಷ್ಟವಾದ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಅಪರಂಪಾರನ ನಾಯಕತ್ವದಲ್ಲಿ ನಡೆದ ಯತ್ನ, ಅನಂತರದ ಹೃದಯ ವಿದ್ರಾವಕ ಘಟನೆಗಳು—ಹೀಗೆ ಕ್ರಿಸ್ತಶಕ ೧೮೨೦ರಿಂದ ೧೮೭೦ರ ವರೆಗಿನ ಐದು ದಶಕಗಳ ಕಾಲಾವಧಿಯ ಒಂದು ಕಥೆ ಇಲ್ಲಿದೆ.

'ಕಲ್ಯಾಣಸ್ವಾಮಿ'ಯನ್ನು ಬರೆದಾಗ ಈ ಕಾದಂಬರಿಯ ಅಸ್ಪಷ್ಟ ಚಿತ್ರವೊಂದು ನನ್ನನ್ನು ಕಾಡಿತು. ಹೆಚ್ಚಿನ ಅಧ್ಯಯನ—ಸಂಶೋಧನೆಗಳ ಫಲವಾಗಿ ಆ ಚಿತ್ರದ ಎತ್ತರ ಬಿತ್ತರಗಳು ಸ್ಫುಟಗೊಂಡುವು. ಈ ಕೃತಿ ರೂಪು ತಳೆಯಿತು.

**ನಿರಂಜನ**

## ಗ್ರಂಥಋಣ

1. MANUAL OF COORG, A GAZETTEER—*Richter*
2. MYSORE AND COORG—*Rice*
3. A TINY MODEL STATE OF SOUTH INDIA—*Muthanna*
4. HISTORY OF FREEDOM MOVEMENT IN KARNATAKA, VOL. 1—*Krishna Rao; Halappa*
5. MANGALORE—*Venn*
6. ರಾಜೇಂದ್ರನಾಮೆ—ಕೃಷ್ಣಯ್ಯ ; ಸುಬ್ಬರಾವ್
7. ಪಟ್ಟೋಲೆ ಪಳಮೆ—ಚಿಣ್ಣಪ್ಪ
8. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ—ಗಣಪತಿರಾವ್

## ೧

ಕೊಡಗಿನ ರಾಜಧಾನಿಯಾದ ಮಡಕೇರಿ ಮಲಗಿ ನಿದ್ರಿಸುತ್ತಿತ್ತು. ಊರು ಕನವರಿಸು ತ್ತಿತ್ತೇನೋ ಎನ್ನುವಂತೆ ಕುಡುಕನೊಬ್ಬ ಬೀದಿಯಲ್ಲಿ ತೂರಾಡುತ್ತ ವಿಕಾರ ಸ್ವರಗಳನ್ನು ಹೊರಡಿಸುತ್ತಲಿದ್ದ.

ಲಿಂಗರಾಜನ ಮಗ ಚಿಕವೀರರಾಜ ತಂದೆಯ ಮರಣದ ಬಳಿಕ ರಾಜ್ಯದ ಗದ್ದುಗೆ ಯನ್ನೇರಿ ಮೂರು ತಿಂಗಳು ಕಳೆದಿದ್ದುವು. ಅದು ಶಾಲಿವಾಹನ ಶಕ ಸಾವಿರದೇಳುನೂರ ನಾಲ್ವತ್ತೆರಡನೆಯ ವರ್ಷ ; ವಿಕ್ರಮ ಸಂವತ್ಸರ. ಪಟ್ಟಾಭಿಷೇಕ ಸಮಾರಂಭದ ಸಡಗರವೆಲ್ಲ ಮುಗಿದು ನಿತ್ಯದ ಜೀವನ ಕ್ರಮಕ್ಕೆ ರಾಜ್ಯ ಮರಳಿತ್ತು.

ನಾಲ್ಕು ದಿನಗಳಿಗೆ ಹಿಂದೆ ಮೃಗಯಾ ವಿನೋದಕ್ಕೆ ತೆರಳಿದ್ದ ಅರಸು ಆ ಸಂಜೆಯಷ್ಟೇ ರಾಜಧಾನಿಗೆ ಹಿಂತಿರುಗಿದ್ದ. ಯುದ್ಧದಲ್ಲಿ ಜಯಿಸಿ ಬಂದವರ ಉತ್ಸಾಹದಿಂದ, ಬೇಟೆಯ ಪರಿವಾರ ಪೌರರ ಕಣ್ಣಿಗೆ ಹಬ್ಬದೂಟವನ್ನು ಬಡಿಸುತ್ತ, ಕೋಟೆಯನ್ನು ಹೊಕ್ಕಿತ್ತು. ಯುವಕ ಚಿಕವೀರರಾಜನ ಗುಂಡುಗಳಿಗೆ ಬಲಿಯಾದ ನಾಲ್ಕು ಹೆಬ್ಬುಲಿಗಳು ಬೇಟೆಯ ಭಟರು ಹೊತ್ತ ಬಿದಿರುಗಳ ಮೇಲಿಂದ ಜನರನ್ನು ನೋಡುತ್ತಿದ್ದುವು. ರಾಜಬೀದಿಯಲ್ಲಿ ಪ್ರಜಾಸಮುದಾಯದ ವಂದನೆ—ಜಯಕಾರಗಳನ್ನು ಸ್ವೀಕರಿಸುತ್ತಅಶ್ವಾರೂಢನಾದ ಅರಸು ಅರಮನೆಯ ಕಡೆಗೆ ಸಾಗಿದ. ಅಪ್ರತಿಮ ಗುರಿಕಾರರಾದ ಚೆಟ್ಟಿ—ಕರ್ತು ಸೋದರರು, ಅಂತರಂಗದ ಸಖನಾದ ಪುಟ್ಟಬಸವ, ಮೂವರು ನಾಲ್ವರು ಕಾರ್ಯಕಾರರು, ರಾಜನನ್ನು ಹಿಂಬಾಲಿಸಿದರು. ತುತೂರಿಯ ಸ್ವಾಗತ ಕೇಳಿಬಂದಂತೆ, ಕುದುರೆಗಳು ನಡಿಗೆಯ ಗತಿ ಯನ್ನು ಕುಂಠಿತಗೊಳಿಸಿದುವು.

ಚಿಕವೀರರಾಜ ಬೇಟೆಯ ಸಂಗಡಿಗರನ್ನು ಬೀಳ್ಕೊಟ್ಟು, ತನ್ನ ದರ್ಶನಕ್ಕಾಗಿ ಕಾದಿದ್ದ ರಾಣಿಯೊಡನೆ ಕುಶಲ ಮಾತುಗಳನ್ನಾಡಿದ. ಸ್ನಾನದ ಮನೆಗೆ ನಡೆದು ತೈಲಾಭ್ಯಂಜನದಿಂದ ಮೈಯ ದಣಿವಾರಿಸಿಕೊಂಡು, ಭೋಜನಗೃಹವನ್ನು ಪ್ರವೇಶಿಸಿದ.

ಆ ರಾತ್ರಿ ಎಂದಿನ ಕಟ್ಟಳೆಗಿಂತ ತುಸು ಬೇಗನೆ ರಾಣೀವಾಸದಲ್ಲಿ ದೀಪ ಆರಿತು...

ಜನವೆಲ್ಲ ನಿದ್ದೆ ಹೋದಂತೆ ಕಂಡರೂ ಕೋಟೆಯ ದಕ್ಷಿಣ ಭಾಗದಲ್ಲಿದ್ದ ಸೆರೆಮನೆಯಲ್ಲಿ ಹೊಂಗೆ ಎಣ್ಣೆಯ ದೀಪ ಮಂದ ಪ್ರಕಾಶದಿಂದ ಉರಿಯುತ್ತಿತ್ತು. ಅಭಿಷಿಕ್ತನಾದೊಡನೆಯೇ ಅರಸ ಹಿಡಿದು ತಂದಿರಿಸಿದ್ದ ಮಿಕಗಳೆರಡು ಒಂದು ಕೊಠಡಿಯಲ್ಲಿ ಕೊನೆಯುಸಿರನ್ನೆಳೆಯು ತ್ತಿದ್ದುವು. ಎಳೆಯರಿಬ್ಬರು ಅನ್ನಾಹಾರಗಳಿಲ್ಲದೆ ಆಗಲೇ ಒಂದು ತಿಂಗಳು ದಾಟಿತ್ತು. ಬೇಟೆಗೆ ಹೊರಡುವುದಕ್ಕೆ ಮುನ್ನ ಬಸವ ಅಣತಿಮಾಡಿದ್ದ :

"ಈ ಹೊತ್ತಿನಿಂದ ನೀರೂ ನಿಲ್ಲಿಸಿಬಿಡಿ."

ತುತೂರಿಯ ಸದ್ದು ರಾಜನ ಪುನರಾಗಮನವನ್ನು ಸಾರಿತ್ತು. ಇರುಳಿನ ಸರದಿಯ ಕಾವಲುಗಾರರ ತಂಡ ಸೆರೆಮನೆಗೆ ಬಂದಿತು. ಇಂದು ಆ ಪಾದಗಳಲ್ಲಿ ಹೆಚ್ಚಿನ ಚುರುಕು. ಅವರ ಮುಖ್ಯಸ್ಥ ಸ್ವಲ್ಪ ಕುತೂಹಲದಿಂದ ಆ ಇಬ್ಬರು ಕೈದಿಗಳನ್ನು ಕುರಿತು ವಿಚಾರಿಸಿದ:

"ಏನಂತವೆ ?"

ಉತ್ತರ :

"ಇಲ್ಲಪ್ಪೋ. ಇನ್ನೂ ಉಸಿರಾಡ್ತಾ ಅದೆ."

ನಡುವಿರುಳಿನ ಹೊತ್ತಿಗೆ ಸ್ವಲ್ಪ ಹೊತ್ತು ಪವಡಿಸಲು ಮುಖ್ಯಸ್ಥ ಸಿದ್ಧತೆ ಮಾಡಿ ಕೊಳ್ಳುತ್ತಿದ್ದಂತೆ, ಕಾವಲುಗಾರನೊಬ್ಬ ಧಾವಿಸುತ್ತ ಬಂದ. ಅವನ ಧ್ವನಿಯಲ್ಲಿ ಕಾತರ ವಿತ್ತು.

"ಒಬ್ಬರದನಕ ಸದ್ದಿಲ್ಲ. ಎರಡನೆಯವರು ಕೈಕಾಲು ಬಡೀತವರೆ."

ಇರಲಿ, ನೀನು ಹೋಗು—ಎಂದು ಹೇಳಬೇಕೆನಿಸಿತು ಮುಖ್ಯಸ್ಥನಿಗೆ. ಆದರೆ ಆ ಇಬ್ಬರು ಕಣ್ಣು ಮುಚ್ಚಿದರೊ ? ಸನ್ನಿಧಾನಕ್ಕೆ ಸುದ್ದಿ ಮುಟ್ಟಿಸುವುದು ತಡವಾಗಬಾರದು. ನೋಡಿ ಬರುವುದೇ ಮೇಲು—ಎಂದುಕೊಂಡು, ಮುಖ್ಯಸ್ಥ ಕಾವಲುಗಾರನನ್ನು ಹಿಂಬಾಲಿಸಿದ.

ಇನ್ನೊಬ್ಬ ಕಾವಲುಗಾರ ಬಾಗಿಲಕಿಂಡಿಯನ್ನು ಸರಿಸಿ ಕಂದೀಲಿನ ಬೆಳಕನ್ನು ಒಳಕ್ಕೆ ಹಾಯಿಸಿದ. ಮುಖ್ಯಸ್ಥ ಇಣಿಕಿ ನೋಡಿದ. ಒಂದು ದೇಹ ಮಿಸುಕುತ್ತಿರಲಿಲ್ಲ. ಚಡಪಡಿ ಸುತ್ತಿದ್ದ ಇನ್ನೊಂದರ ಕಣ್ಣಾಲಿಗಳು ಛಾವಣಿಯನ್ನು ದಿಟ್ಟಿಸುತ್ತಿದ್ದುವು. ಮುಖದ ಮೇಲೆ ಬೆಳಕು ಬಿದ್ದುದನ್ನೂ ಆ ಜೀವ ಗಮನಿಸಲಿಲ್ಲ. ಗಂಟಲಿನಿಂದ ಗೊಗ್ಗರ ಧ್ವನಿ ಹೊರಟಿತು. 'ನೀರು' ಎಂಬ ಕ್ಷೀಣ ಪದವೊಂದು ಅಲೆಯುತ್ತ ಕೊಠಡಿಯನ್ನು ತುಂಬಿತು. ನಿಟ್ಟುಸಿರು ಬಿಡಲೆಂದು ಮುಖ್ಯಸ್ಥ ಉಸಿರೆಳೆದುಕೊಳ್ಳುತ್ತಿದ್ದಂತೆಯೇ ಆ ಶರೀರದ ಎದೆ ಗೂಡು ಮೇಲ್ಮೊಗವಾಗಿ ಸೆಟೆಯಿತು. ಕ್ಷಣಾರ್ಧದಲ್ಲಿ ಮೈ ನಿಡಿದುಕೊಂಡಿತು. ತಲೆ ಮಗ್ಗುಲಿಗೆ ವಾಲಿತು.

ಆ ಕೈದಿಯ ಕಥೆ ಮುಗಿಯಿತು—ಎಂದು ತೋರಿತು ಮುಖ್ಯಸ್ಥನಿಗೆ. ಆತ ತನ್ನ ಸಡುವಿನಲ್ಲಿದ್ದ ಕೀಲಿ ಕೈಗಳ ಗೊಂಚಲಿನಿಂದ ಒಂದನ್ನಾರಿಸಿ ಬೀಗವನ್ನು ತೆರೆದ. ಬಾಗಿಲು ಕಿರ್ರೆಂದು ಸದ್ದುಮಾಡುತ್ತ ಒಳಮೊಗವಾಗಿ ಸರಿಯಿತು. ಒಳಕ್ಕೆ ಕಾಲಿರಿಸಿದವರನ್ನು ದುರ್ವಾಸನೆ ಇದಿರುಗೊಂಡಿತು.

ಆಗ ತಾನೇ ಅಸುನೀಗಿದವನನ್ನು ಮುಖ್ಯಸ್ಥ ಮುಟ್ಟಿ ನೋಡಿದ. ನಾಡಿ ಬಡಿತ ನಿಂತಿತ್ತು. ಮೈ ತಣ್ಣಗಿತ್ತು. ಇನ್ನೊಬ್ಬನಂತೂ ಸಂಜೆಯವೇಳೆಗೇ ಶವವಾಗಿರಬೇಕು. ಮಂಡಿಯೂರಿದ್ದ ಮುಖ್ಯಸ್ಥ ಗಡಬಡಿಸಿ ಎದ್ದು, ಕಾವಲುಗಾರನೊಡನೆ ಹೊರಬಂದ. ಕೊಠಡಿಯ ಬಾಗಿಲನ್ನು ಪುನಃ ಭದ್ರಗೊಳಿಸಿದ.

ಗಟ್ಟಿಯಾಗಿ ಯೋಚಿಸುತ್ತ ಅವನೆಂದ :

"ಸನ್ನಿಧಾನಕ್ಕೆ ಅರಿಕೆ ಮಾಡ್ಬೇಕು. ಆದರೆ ಈ ಅಪರಾತ್ರೆಯಾಗೆ ಎಬ್ಬಿಸೋಣ ಹ್ಯಾಗೆ ? ...ಬಸವಯ್ಯನವರು ಅರಮನೆಯಾಗೇ ಇದ್ದರೆ ಚೆಂದಾಯ್ತು. ಇಲ್ಲದಿದ್ದರೊ ?"

ಬದುಕಿದ್ದವರಿಗಿಂತಲೂ ಸತ್ತವರು ಹೆಚ್ಚು ಅಪಾಯಕರ ಎನ್ನುವಂತೆ ಮುಖ್ಯಸ್ಥ ಕಂಪಿಸುತ್ತಿದ್ದ ಸ್ವರದಲ್ಲಿ ಆಜ್ಞಾಪಿಸಿದ :

"ಭದ್ರ ! ಹುಷಾರಾಗಿರಿ ! ತಲೆ ಹೋದಾತು..."

ಆತ ಬೇಗ ಬೇಗನೆ ಕಾಲಿರಿಸುತ್ತ ಅರಮನೆಯ ಪಶ್ಚಿಮದ್ವಾರದ ಕಡೆಗೆ ನಡೆದ.

ಅಲ್ಲಿ ಸೇವಕರನ್ನು ಹಿಂಬಾಲಿಸಿ, ಬಸವ ಮಲಗಿದ್ದ ಕೊಠಡಿಯನ್ನು ಕೆಲವೇ ನಿಮಿಷ ಗಳಲ್ಲಿ ಸೆರೆಮನೆಯ ಮುಖ್ಯಸ್ಥ ತಲಪಿದ. ಬಸವನೂ ಕಾರ್ಯಕಾರ ಐಯಣ್ಣನೂ ಗಾಢನಿದ್ರೆ ಯಲ್ಲಿದ್ದರು. ಐಯಣ್ಣನನ್ನೇ ಎಬ್ಬಿಸುವುದು ಮೇಲು—ಎಂದು ಮುಖ್ಯಸ್ಥ ಬಾಗಿ, ಮೈಮುಟ್ಟಿ, ಎರಡು ಮೂರು ಸಾರೆ ಕರೆದ :

"ಐಯಣ್ಣ ! ಓಯ್ ಐಯಣ್ಣ !"

ಮತ್ತೂ ಒಮ್ಮೆ ಕರೆದಾಗ ಆ ಧ್ವನಿಗೆ ಬಸವ ಐಯಣ್ಣರಿಬ್ಬರಿಗೂ ಎಚ್ಚರವಾಯಿತು. ಐಯಣ್ಣ ಕೇಳಿದ :

"ಯಾರದು ?"

ಬಸವ ಗದರಿದ :

"ಏನದು ?"

"ವೀರಪ್ಪ-ನಂಜುಂಡಪ್ಪ ಇಬ್ಬರೂ ತೀರ್ಕೊಂಡವರೆ. ಶವಗಳನ್ನ..."

"ಏನು ? ಏನು ?"

ನಿದ್ದೆ ಹಾರಿ ಹೋಗಿ, ತಮಗೆ ಕೇಳಿಸಿದುದೇನೆಂಬುದು ಸ್ಪಷ್ಟವಾದಾಗ, ಬಸವನೂ ಐಯಣ್ಣನೂ ಗಡಬಡಿಸಿ ಎದ್ದರು.

ಮುಖ್ಯಸ್ಥ ಆರಂಭಿಸಿದ್ದ ವಾಕ್ಯವನ್ನು ಅಲ್ಲಿಗೇ ಬಿಟ್ಟು, ಬೇರೆಯೇ ಅಂದ :

"ಅಪರಾತ್ರಿಯಾಗೆ ಎಬ್ಬಿಸಿದೆ. ತಪ್ಪಾಯ್ತು. ಸನ್ನಿಧಾನಕ್ಕೆ ಈ ಸುದ್ದಿಯನ್ನ..."

ಇರುಳಿನಲ್ಲಿ ಕೈಯಾಡಿಸಿ ಬಸವನೆಂದ :

"ಬೇಡ. ಇಷ್ಟಕ್ಕೆಲ್ಲ ಮಹಾರಾಜರನ್ನು ಎಬ್ಬಿಸೋದು ಬೇಡ. ಶವಗಳನ್ನ ಅಡವಿಗೆ ಒಯ್ದು ಚೆಲ್ಲಿದರಾಯ್ತು. ನರಿ-ಹದ್ದುಗಳ ಪಾಲಾಗಲಿ."

ಆ ಯೋಚನೆಯನ್ನು ಕಾರ್ಯಗತಗೊಳಿಸುವ ರೀತಿಯನ್ನೂ ತಾನೇ ನಿರ್ಧರಿಸಿ ಅವನೆಂದ :

"ಐಯಣ್ಣ, ಶವಗಳ ವಿಲೇವಾರಿ ನೀವು ಮಾಡಿ ಬರ್ತೀರೊ ?"

ಉತ್ತರ ಥಟ್ಟನೆ ಬಂತು :

"ಆಗಲಿ."

"ಜತೇಲಿ ಯಾರನಾರ ಕರಕೊಂಡ್ಹೋಗಿ."

"ಹ್ಞ."

ಐಯಣ್ಣ ಎದ್ದು, ನಿಲುವಂಗಿಯನ್ನು ತೊಟ್ಟುಕೊಂಡು, ತಲೆಯ ಮೇಲೆ ಉಣ್ಣೆಯ ಟೊಪ್ಪಿಯನ್ನಿಟ್ಟು, ಬಿಚ್ಚುಗತ್ತಿಯನ್ನು ಟೊಂಕಕ್ಕೆ ಬಿಗಿದು, ಹಾವುಗೆಗಳನ್ನು ಮೆಟ್ಟಿ, "ನಡೆಯಿರಿ" ಎಂದು ನುಡಿದ.

"ಬೆಳಗಾಗೋದರೊಳಗೆ ಕೆಲಸ ಮುಗೀಲಿ" ಎಂದ ಬಸವ, ಕೊಠಡಿಯ ಬಾಗಿಲ ಹೊರಗೆ ನಿಂತು.

ಆತನಿಗೆ ಬಾಗಿ ನಮಿಸಿ, ಸೆರೆಮನೆಯ ಮುಖ್ಯಸ್ಥ ಮುಂದಾದ. ಸೇವಕ ಹಿಡಿದ ಸೊಡರು ಅವರಿಬ್ಬರನ್ನೂ ಅರಮನೆಯ ಪಶ್ಚಿಮ ದ್ವಾರಕ್ಕೆ ಒಯ್ದಿತು.

ಐಯಣ್ಣ ಕೇಳಿದ :

"ಶಂಕರಪ್ಪನ ಮನೆ ಗೊತ್ತೇನಪ್ಪ ?"

"ಚಾವಡಿಕಾರ ಶಂಕರಪ್ಪ ಅಲ್ಲವಾ ?"

"ಅವನೇ."

"ಗೊತ್ತು."

"ಒಬ್ಬ ಆಳು ಅಲ್ಲಿಗೆ ಹೋಗಿ, ಕೋಟೆಯ ದಿಡ್ಡಿ ಬಾಗಿಲಿಗೆ ತಕ್ಷಣ ಬರಹೇಳ್ಲಿ."

"ಹೂಂ."

"ಶವಗಳನ್ನ ಹೊರಕ್ಕಿಡಿ. ಲಾಯದಿಂದ ನನ್ನ ಕುದುರೆ ತರ್ತೀನಿ."

"ಹಾಗೇ ಆಗಲಿ."

...ಮುಂದೆ ಸ್ವಲ್ಪ ಹೊತ್ತಿನಲ್ಲೇ ಕುದುರೆಗಳೂ ಸವಾರರೂ ದಿಡ್ಡಿ ಬಾಗಿಲಲ್ಲಿ ಸಜ್ಜಾಗಿ ನಿಂತರು. ಸೆರೆಮನೆಯ ಕಾವಲುಗಾರರು ಶವಗಳನ್ನು ಹೊತ್ತು ತಂದರು. ಚಡಪಡಿಸಿ ಜೀವ ಬಿಟ್ಟ ಕೈದಿಯ ಶವವನ್ನು ಐಯಣ್ಣನ ಕುದುರೆಯ ಬೆನ್ನಮೇಲೇರಿಸಿ ಜೀನಿಗೆ ಬಿಗಿದರು. ನಿಶ್ಚಲವಾಗಿದ್ದ ಇನ್ನೊಂದನ್ನು ಶಂಕರಪ್ಪನ ಕುದುರೆಯ ಬೆನ್ನಿಗೇರಿಸಿದರು.

ಕೃಷ್ಣ ಪಕ್ಷದ ಚಂದ್ರಬಿಂಬವೆಲ್ಲೋ ಮೂಡಿ ಮಬ್ಬು ಬೆಳಕನ್ನು ಹರಡಿತ್ತು. ಐಯಣ್ಣ ಕುದುರೆಯನ್ನೇರಿದ. ಶಂಕರಪ್ಪ ಹಿಂಬಾಲಿಸಿದ. ಕೋಟೆಯ ತಪ್ಪಲಲ್ಲಿ ಇಳಿಜಾರು ದಾರಿಯಲ್ಲಿ ಮುಂದೆ ಸಾಗಿ, ಇಬ್ಬರೂ ಅಡವಿಯ ಹಾದಿ ಹಿಡಿದರು.

ಇತ್ತ ದಿಡ್ಡಿ ಬಾಗಿಲು ಮುಚ್ಚಿಕೊಂಡಿತು. ಸೆರೆಮನೆಯ ಮುಖ್ಯಸ್ಥ ಸ್ವಸ್ಥಾನವನ್ನು ಸೇರಿದ. ಹೊರೆ ಇಳಿದ ಸಮಾಧಾನದಿಂದ ಎರಡು ಘಳಿಗೆಗಳ ನಿದ್ದೆಗಾಗಿ ಆತ ಮೈ ಚಾಚಿದ.

ಎರಡು ಮೂರು ಹರದಾರಿಗಳ ದೂರ ಇಕ್ಕಟ್ಟಿನ ದಾರಿಯಲ್ಲಿ ಕುದುರೆಗಳು ವೇಗವಾಗಿ ಮಾರ್ಗ ಕ್ರಮಿಸಿದುವು. ಬಳಿಕ ಸವಾರರು ಇಳಿದು ಬಿಚ್ಚುಗತ್ತಿಗಳಿಂದ ದಾರಿ ಬಿಡಿಸಿ ಕೊಳ್ಳುತ್ತ, ಕುದುರೆಗಳನ್ನು ನಡೆಸಿಕೊಂಡು, ಮತ್ತೂ ಒಂದಿಷ್ಟು ದೂರ ಕಾಡಿನ ಒಳ ಹೋದರು.

"ಸಾಕು ಅಲ್ಲವಾ, ಶಂಕರಪ್ಪ ?" ಎಂದ ಐಯಣ್ಣ.

"ಹೂಂ."

ಐಯಣ್ಣ ಕಟ್ಟುಗಳನ್ನು ಸಡಿಲಿಸಿ, ಶವವನ್ನು ಕೆಳಕ್ಕೆ ತಳ್ಳಿ, ನಾಲ್ಕು ಹೆಜ್ಜೆ ಎಳೆದು. ಕೈಗಳನ್ನು ಕೊಡವಿಕೊಂಡ.

ಐಯಣ್ಣನೆಂದ :

"ಇವನು ಚಿಕ್ಕವನು—ನಂಜುಂಡಪ್ಪ."

ಪ್ರತಿಕ್ರಿಯೆಯಾಗಿ ಯಾವ ಮಾತೂ ಶಂಕರಪ್ಪನಿಂದ ಬರಲಿಲ್ಲ. ಐಯಣ್ಣ ಹೊರಳಿ ನೋಡಿದ. ಅಲ್ಲಿ ಶಂಕರಪ್ಪ, ತನ್ನ ಕುದುರೆಯ ಮೇಲಿದ್ದುದನ್ನು ಹಗುರವಾಗಿ ಕೆಳಗಿಳಿಸುವ ಕಾರ್ಯದಲ್ಲಿ ನಿರತನಾಗಿದ್ದ.

ದೂರದಿಂದಲೆ ಐಯಣ್ಣ ಕೇಳಿದ :

"ಬದುಕಿದ್ದಾಗ ಇರದಿದ್ದ ಕನಿಕರ ಸತ್ತ ಮ್ಯಾಕೆ ಬಂತೇನಪ್ಪ ?"

ಏನೋ ಹೇಳಲೆಂದು ಹೊರಟ ಶಂಕರಪ್ಪ, ಮಾತನ್ನು ಹಿಂದಕ್ಕೆ ನೂಕಿ ಹೆ-ಹ್ಹೆ ಎಂದು ನಕ್ಕ. ಧ್ವನಿ ಒಡೆದಿತ್ತು. ತನ್ನ ಕಾಲ ಸಪ್ಪಳವನ್ನು ತೀವ್ರಗೊಳಿಸಿ, ದೇಹವನ್ನು ತುಸು ದೂರ ಪೊದೆಯ ಮೇಲೆ ಎಳೆದಂತೆ ಮಾಡಿ, ಮರಳಿ ಕುದುರೆಯ ಬಳಿಗೆ ಆತ ಬಂದ.

"ಓಗಾನ ಕಾರ್‍ಯಕಾರರೇ."

"ನಡಿ."

ಅಶ್ವಗಳನ್ನು ಕಿರುದಾರಿಯ ತನಕ ನಡೆಸಿ, ಪುನಃ ಅವುಗಳನ್ನೇರಿ, ಐಯಣ್ಣ ಮತ್ತು ಶಂಕರಪ್ಪ ಮಡಕೇರಿಗೆ ಅಭಿಮುಖರಾದರು.

ಬರುತ್ತ, ಚಾವಡಿಕಾರನೊಡನೆ ಕಾರ್‍ಯಕಾರನೆಂದ :

"ಚಿಕವೀರರಾಜರ ದಾರಿಯಲ್ಲಿದ್ದ ಎರಡು ಮುಳ್ಳನ್ನೂ ಕಿತ್ತು ಬಿಸಾಡಿದ್ದಾಯ್ತು. ಇನ್ನು ಯಾವ ಆತಂಕವೂ ಇಲ್ಲ."

ಶಂಕರಪ್ಪ ಉತ್ತರವಿತ್ತ :

"ಎಲ್ಲಾ ಮಹಾದೇವನ ಮಾಯೆ, ಕಾರ್ಯಕಾರರೇ."

"ಇನ್ನೇನಿದ್ದರೂ ಅವರ ತಂಗಿಯಿಂದ, ಅರಮನೆಯ ಅಳಿಯನಿಂದ ಅಡ್ಡಿ ಬರಬೇಕು. ಅದರ ನಿವಾರಣೆ ಸುಲಭ, ಅಂತಿಟ್ಕೊ."

"ಹುಂ."

ಕುದುರೆಗಳ ಮೇಲೆ ಸಮಾನ ಎತ್ತರದಲ್ಲಿ ಕುಳಿತಿದ್ದರೇನಾಯ್ತು ? ಕಾರ್ಯಕಾರ ಕಾರ್ಯಕಾರನೇ, ಚಾವಡಿಕಾರ ಚಾವಡಿಕಾರನೇ. ಅವರ ನಡುವೆ ಸಲಿಗೆಯ ಸಂಭಾಷಣೆ ಶಕ್ಯವಿರಲಿಲ್ಲ. ಅಲ್ಲದೆ ರಾಜಕಾರಣಕ್ಕೆ ಸಂಬಂಧಿಸಿದ ಅಂತಹ ಮಾತುಕತೆಯಲ್ಲಿ ಶಂಕರಪ್ಪನಿಗೆ ಆಸಕ್ತಿಯೂ ಇರಲಿಲ್ಲ.

ಮಡಕೇರಿ ಸಮೀಪಿಸಿದಂತೆ ಐಯಣ್ಣನೆಂದ :

"ಇದೇ ಈಗ ಬೆಳ್ಳಿ ಮೂಡಿದೆ. ಅಲ್ಲವಾ ? ನಾನು ದಿಡ್ಡಿ ಬಾಗಿಲಿಂದ ಕೋಟೆಯೊಳಕ್ಕೆ ಹೋಗ್ತೀನಿ. ನೀನು ಬೇಕಿದ್ದರೆ ನೇರ ರಸ್ತೇಲೇ ಮನೆಗೆ ಹೊರಟ್ಹೋಗು."

"ಆಗಲಿ ಕಾರ್ಯಕಾರರೇ."

ಇಬ್ಬರ ದಾರಿಗಳು ಬೇರೆ ಬೇರೆಯಾದುವು.

ಶಂಕರಪ್ಪನೀಗ, ಕುದುರೆ ಮುಂದೆ ನಡೆಯುತ್ತಿದ್ದರೂ ತನ್ನ ದಾರಿ ಕಾಣದ ಕುರುಡ. ಯಾವ ತೀರ್ಮಾನಕ್ಕೂ ಬರಲಾಗದೆ ಅವನ ತಲೆ ಚಿಟ್‌ಬಿಟ್ಟೆಂದು ಸಿಡಿಯಿತು.

ಕುದುರೆ, ಒಡೆಯನ—ತನ್ನ—ಮನೆಯನ್ನು ಬಲ್ಲುದು.

ನಿರ್ಜನ ಬೀದಿಯಲ್ಲಿ ಅದು ಸಾಗುತ್ತಲಿದ್ದಂತೆ. ಯಾವನೋ ಒಬ್ಬ ಕತ್ತಲೆಯ ಸಂದಿಯಿಂದ ಅದಕ್ಕೆ ಅಡ್ಡವಾಗಿ ಧುಮುಕಿದ.

"ನಿಲ್ಲು ! ನಿಲ್ಲು ! ಯಾ-ಯಾ-ಯಾರದು ?"

ಬೆಚ್ಚಿಬಿದ್ದ ಸವಾರ, ಸುಧಾರಿಸಿಕೊಂಡು, ಸ್ವರವೇರಿಸಿ ನುಡಿದ :

"ನಾನು ಚಾವಡಿಕಾರ ಶಂಕರಪ್ಪ. ತಡೀತಿರೋರು ಯಾರು ?"

"ನಾವು ಕೊಡಗು ಸಿಂಹಾಸನಾಧೀಶ್ವರ ಚಿಕವೀರ ರಾ-ರಾ-ರಾಜೇಂದ್ರ ಒಡೆಯರು !"

ಆತ ಬೀದಿಯ ಉದ್ದಗಲಗಳನ್ನು ಅಳೆಯುತ್ತಿದ್ದ ಕುಡುಕ.

ಅದನ್ನು ಅರಿತೊಡನೆಯೇ ಶಂಕರಪ್ಪ, ಕುದುರೆಯ ವೇಗವನ್ನು ಹೆಚ್ಚಿಸಿದ. ಕುಡುಕನ ಹತ್ತಿರ ಬಂದಾಗ ಪಾದದಿಂದ ಅವನನ್ನು ಒದೆದು ನೂಕಿದ.

"ತೊಲಗಾಚೆ !"

ಕುದುರೆ ನಿರಾತಂಕವಾಗಿ ಮುಂದುವರಿಯಿತು.

ಕುಡುಕ ಕುಸಿದು ಬಿದ್ದಲ್ಲಿಂದ ಎದೆ ಬಡಿದುಕೊಂಡು ಅತ್ತ :

"ಪಟ್ಟ ಹೋಯ್ತುಪೋ ಹೋಯ್ತು. ನಮ್ಮ ಆಜ್ಞೆ ಪಾಲಿಸೋರಿಲ್ಲಪೋ ಇಲ್ಲ... ಅಯ್ಯೋ...ಹಯ್ಯೋ !"

೨

ತನ್ನ ಮನೆಯನ್ನು ಸಮೀಪಿಸುತ್ತಲಿದ್ದಂತೆ ಚಾವಡಿಕಾರ ಶಂಕರಪ್ಪನಿಗೆನಿಸಿತು :
"ಇದೆಲ್ಲ ವಿಧಿಯ ಆಟ."

ಶಂಕರಪ್ಪನ ಮನೆತನ ಅವನ ತಂದೆ ಶಿವಬಸಪ್ಪನ ಕಾಲದಿಂದಲೂ ಅರಸರ ಊಳಿಗದಲ್ಲಿತ್ತು. ಸುಮಾರು ಹನ್ನೆರಡು ವರ್ಷಗಳಿಗೆ ಹಿಂದಿನ ಮಾತು. ಚಿಕವೀರರಾಜನ ದೊಡ್ಡಪ್ಪ ದೊಡ್ಡವೀರರಾಜ ಆಳುತ್ತಲಿದ್ದ ಕಾಲ. ಸುದೀರ್ಘವೂ ಸುಭದ್ರವೂ ಆದ ಅವನ ಆಳ್ವಿಕೆಯ ಕೊನೆಯ ದಿನಗಳು ಮಾತ್ರ ಆತನಿಗೂ ಕೊಡಗಿಗೂ ಯಾತನಾಮಯವಾಗಿದ್ದುವು. ಪ್ರೀತಿಯ ಮಡದಿ ಮಹದೇವಮ್ಮಾಜಿ ಸತ್ತಂದಿನಿಂದ ಅರಸನಿಗೆ ಮತಿಭ್ರಮಣೆಯುಂಟಾಯಿತು. ಅವನಿಗೆ ಪುತ್ರಸಂತತಿ ಇರಲಿಲ್ಲ. ತನ್ನ ಬಳಿಕ ತನ್ನ ಮಗಳು ಪಟ್ಟವನ್ನೇರಬೇಕೆಂಬುದು ಅವನ ಆಸೆಯಾಗಿತ್ತು. ಆದರೆ ಆ ಆಸೆಯನ್ನು ವಿಫಲಗೊಳಿಸಲು ತನ್ನ ಬಂಧುಗಳೂ ಪ್ರಜೆಗಳೂ ಹೊಂಚು ಹಾಕುತ್ತಿರುವರು; ತನ್ನನ್ನು ಕೊಲ್ಲಲು ಸಂಚು ನಡೆಸುತ್ತಿರುವರು ;—ಎಂದು ದೊರೆ ಆಗಾಗ್ಗೆ ಭ್ರಮಿಸಿದ. ಮಾನಸಿಕ ರೋಗದಿಂದ ನರಳುತ್ತಿದ್ದ ಅಂಥದೊಂದು ಘಳಿಗೆಯಲ್ಲಿ ತನ್ನ ಒಡಹುಟ್ಟಿದವರಿಬ್ಬರನ್ನು, ಅಪ್ಪಾಜಿ—ಲಿಂಗರಾಜರನ್ನು ಕೊಲೆ ಮಾಡಲು ಹಂತಕರನ್ನು ಆತ ಕಳುಹಿದ. ಒಂದು ತಂಡ ಅಪ್ಪಂಗಳಕ್ಕೂ ಇನ್ನೊಂದು ತಂಡ ಹಾಲೇರಿಗೂ ಹೋದುವು. ಹಾಗೆ ಕಳುಹಿದ ಸ್ವಲ್ಪ ಹೊತ್ತಿನಲ್ಲಿ ಅರಸನ ಬುದ್ಧಿ ಸ್ತಿಮಿತಕ್ಕೆ ಬಂತು. ತನ್ನ ಒಡಹುಟ್ಟಿದವರನ್ನು ಕೊಲೆ ಮಾಡಬಾರದೆಂದು ಆಜ್ಞಾಪಿಸಿ ಪುನಃ ದೂತರನ್ನು ಅಟ್ಟಿದ. ಆದರೆ ಅಪ್ಪಂಗಳ ಜಹಗೀರಿಗೆ ತೆರಳಿದ ದೂತರು ಅಲ್ಲಿಗೆ ತಲಪುವುದಕ್ಕೆ ಮುಂಚೆಯೇ ಅಪ್ಪಾಜಿಯ ಕೊಲೆಯಾಗಿತ್ತು. ಹಾಲೇರಿಗೆ ಧಾವಿಸಿದ ದೂತರು ಲಿಂಗರಾಜನ ಪ್ರಾಣ ಉಳಿಸಲು ಸಮರ್ಥರಾದರು.

ಆ ತಂಡದ ನಾಯಕನಾಗಿದ್ದವನು ಹಿರಿಯ ಚಾವಡಿಕಾರ ಶಿವಬಸಪ್ಪ.

ಈಗ ?

ದೊರೆ ಮಗನೊಬ್ಬನ ಜೀವ ಉಳಿಸುವ ಅವಕಾಶ ಶಿವಬಸಪ್ಪನ ಮಗನಿಗೆ ಲಭ್ಯವಾಗಿದೆ...

ಅಪ್ಪಾಜಿಯ ಮರಣದ ಬಳಿಕ ಅವನ ಸಂಸಾರವನ್ನು ಸಲಹುವ ಭಾರವನ್ನು ಲಿಂಗರಾಜನ ಮೇಲೆ ಹೊರಿಸಲಾಗಿತ್ತು. ಅಣ್ಣ ಅರಸನ ಅಪೇಕ್ಷೆಯಂತೆ ಲಿಂಗರಾಜ ಅಪ್ಪಂಗಳದ ಅರಮನೆಯಲ್ಲಿ ವಾಸಿಸತೊಡಗಿದ್ದ.

ಆದರೆ, ಲಿಂಗರಾಜನ ಮಗ ಚಿಕವೀರರಾಜ ತಾನು ಅರಸನಾದಾಗ, ತನ್ನ ಬಾಲ್ಯದ ಒಡನಾಡಿಗಳಾದ ದಾಯಾದಿ ಸೋದರರ—ಅಪ್ಪಾಜಿಯ ಮಕ್ಕಳ ಸಾವನ್ನು ಬಯಸುವನೆಂದು ಯಾರು ಭಾವಿಸಿದ್ದರು ?

ಶಂಕರಪ್ಪ ಕೇಳಿ ಬಲ್ಲ. ಅರಸೊತ್ತಿಗೆಗಳ ಕಥೆಯೇ ಹೀಗೆ. ಒಬ್ಬ ಪಟ್ಟವೇರಬೇಕಾದರೆ ನಾಲ್ಕು ಜನ ಇತರ ಹಕ್ಕುದಾರರ ಇಲ್ಲವೆ ಸಮೀಪ ಸಂಬಂಧಿಗಳ ತಲೆಗಳುರುಳಬೇಕು. ಅರಸು ದುಷ್ಟ ಎಂದು ಇದರ ಅರ್ಥವಲ್ಲ. ಇದೊಂದು ರಾಜನೀತಿ. ರಾಜ್ಯಭಾರ ಸುಗಮವಾಗಲು ಹಲವರು ಕೈಗೊಳ್ಳುವ ಮೊದಲ ಕ್ರಮ.

ಮನೆ ಸಮೀಪಿಸಿತು. ಮುಂದುಗಡೆ, ಹಲವು ಸಂಭವಗಳಿಗೆ ಸಾಕ್ಷಿಯಾದ ನೂರಾರು

ವರ್ಷ ಹಳೆಯದಾದ ಆಲದ ಮರವೊಂದಿತ್ತು, ಶಂಕರಪ್ಪನ ಅಪ್ಪನ ಅಪ್ಪ ನೆಟ್ಟುದು. ಕುದುರೆಗೆ ಕಡಿವಾಣ ಹಾಕಿ ಆ ಮರದ ಕರಿ ನೆರಳಲ್ಲಿ ಶಂಕರಪ್ಪ ನಿಂತ.

ತನ್ನ ತಂದೆ ಈಗ ಇದ್ದಿದ್ದರೆ ಯಾವ ರೀತಿ ವರ್ತಿಸುತ್ತಿದ್ದ ?

ಐಯಣ್ಣನಿಗೆ ತಾನು ಹೇಳಿದ್ದೆ ಎಂದರೆ, ಕತ್ತು ಹಿಸುಕಿ ಅರಸುಮಗನ ಕತೆಯನ್ನು ಆಗಲೇ ಆತ ಮುಗಿಸಿಬಿಡುತ್ತಿದ್ದ.

'ಬದುಕಿದ್ದಾಗ ಇರದಿದ್ದ ಕನಿಕರ ಸತ್ತ ಮ್ಯಾಕೆ ಬಂತೇನಪ್ಪ ?' ಎಂದು ಪರಿಹಾಸ್ಯದ ಧ್ವನಿಯಲ್ಲಿ ಐಯಣ್ಣ ಕೇಳಿದಾಗ ತಾನು ಉತ್ತರವಿತ್ತಿರಲಿಲ್ಲ. ಯಾಕೆ ? ಕೆಳಕ್ಕಿಳಿಸುತ್ತಿದ್ದ ವೀರಪ್ಪನ ದೇಹದಲ್ಲಿ ಕಾವಿದ್ದುದನ್ನು ತಾನು ಗಮನಿಸಿದಾಗ, ಐಯಣ್ಣನಿಗೆ ಕೂಗಿ ಹೇಳ ಬೇಕೆಂದು ಒಂದು ಕ್ಷಣವೇನೋ ಅನಿಸಿತ್ತು. ಆದರೂ ತನಗರಿಯದಂತೆಯೇ ಆ ಯೋಚನೆ ಯನ್ನು ಹತ್ತಿಕ್ಕಿದ್ದ. ಯಾಕೆ ?

ಈಗ ತಾನು ಆ ತಾಣಕ್ಕೆ ಮರಳಿ ನೆರವು ನೀಡದೆ ಇದ್ದರೆ, ವೀರಪ್ಪಾಜಿಯ ಅವಸಾನ ವಾಗುವುದು ಖಂಡಿತ. ಶುಶ್ರೂಷೆಯಿಲ್ಲದೆ ಬದುಕುವ ಸ್ಥಿತಿಯಲ್ಲಿ ಆತನಿರಲಿಲ್ಲ. ಆಗ ವಾಸ್ತವವಾಗಿ ತಾನೇ ಆತನ ಕೊಲೆಗಡುಕನಾಗುವೆನಲ್ಲ ?

ಆದರ ಬದಲು ಅಲ್ಲಿಗೆ ಧಾವಿಸಿದೆನೋ—ಅದು ರಾಜದ್ರೋಹವೆನ್ನಿಸಲಾರದೆ ?

ಹೇಗೆ ?

ವೀರಪ್ಪ ಪರಕೀಯನಲ್ಲ. ರಾಜಮನೆತನದವನೇ. ಅರಮನೆಯ ಉಪ್ಪುಂಡ ತಾನು ಆತನನ್ನು ಉಳಿಸುವುದು ತಪ್ಪಲ್ಲ.

ಚಿಕವೀರರಾಜನ ಬದಲು ಆತ ಅರಸನಾಗಲಿ ಎನ್ನುತ್ತಿದೆಯೇನು ತನ್ನ ಮನಸ್ಸು ? ಛೆ ! ಎಂದಿಗೂ ಇಲ್ಲ. ಅಂಥ ವಿಚಾರವಿದ್ದರೆ ಅದು ರಾಜದ್ರೋಹ ಎನಿಸಬಹುದು.

ತಾನು ತೋರಿಸುವುದು ದಯೆಯನ್ನು, ಮಾನವ ಸಹಜವಾದ ದಯೆಯನ್ನು.

ದಯೆಯೇ ಧರ್ಮದ ಮೂಲವಯ್ಯ—

ನಂಜರಾಜ ಪಟ್ಟಣದ ಸ್ವಾಮಿಗಳು ಒಮ್ಮೆ ಅಂದಿರಲಿಲ್ಲವೆ ಆ ಮಾತನ್ನು?

ತನ್ನ ಒಳತೋಟಿ ಕುದುರೆಗೂ ಅರ್ಥವಾಗಿದೆಯೇನೊ. ಕೆನೆಯದೆ ನಿಂತಿದೆ, ಪಾಪ.

...ಶಂಕರಪ್ಪನ ತಲೆ ಚೂರು ಚೂರಾಗುವಂತೆ ಸಿಡಿಮಿಡಿಗುಟ್ಟಿತು. ಎಲ್ಲಿಯೋ ಏನೋ ತೊಡಕು ಎಂಬಂತೆ ಎದೆಗುಂಡಿಗೆ ಹೊಯ್ದಾಡಿತು.

ತಲೆಯೆತ್ತಿ ಶಂಕರಪ್ಪ ಆಲದೆಲೆಗಳ ದಟ್ಟನೆಯ ಛಾವಣಿಯನ್ನು ನೋಡಿದ.

ಇದೊಂದು ಅದ್ಭುತ ಶಕ್ತಿ, ತಾನೊಂದು ಕೀಲುಗೊಂಬೆ—ಎನಿಸಿತು ಅವನಿಗೆ.

ಮನಸ್ಸಿನಲ್ಲೆ ಆತ ಕೇಳಿದ :

'ಅಪ್ಪನವರೆ, ನೀವಿದ್ದಿದ್ದರೆ ಈಗೇನು ಮಾಡುತ್ತಿದ್ದಿರಿ ?'

ಮುಂಜಾವದ ಬರುವಿಕೆಯನ್ನು ಸಾರುತ್ತ ತಂಗಾಳಿ ಒಯ್ಯನೊಯ್ಯನೆ ಬೀಸಿಬಂತು. ಮರದೆಲೆಗಳಿಂದ ಚಳಿ ಚಳಿ ಎಂಬ ಇಂಚರ ಹೊರಟಿತು.

ಆ ಕ್ಷಣದಲ್ಲಿ ಎಲ್ಲವೂ ಸ್ಪಷ್ಟವಾದಂತೆ, ಹೃದಯ ಹಗುರಗೊಂಡಂತೆ, ಶರೀರ ಚುರುಕಾ ದಂತೆ ಶಂಕರಪ್ಪನಿಗೆ ಅನಿಸಿತು.

ತನ್ನ ಮುಂದಿನ ದಾರಿಯನ್ನು ನಿಚ್ಚಳವಾಗಿ ಆತ ಕಂಡ.

ವೇಳೆ ಇರಲಿಲ್ಲ. ತಡಮಾಡುವಂತಿರಲಿಲ್ಲ ಆತ. ಮನೆಗೆ ಹೋದನೋ ಮಡದಿಯೊಡನೆ

ಮಾತನಾಡಬೇಕು. ನಿಸ್ಸಂದೇಹವಾಗಿಯೂ ಅವಳು ಒಪ್ಪುವವಳೇ. ಆದರೆ ಕಾಲಹರಣ.

ದೀರ್ಘನಿದ್ರೆಯಿಂದ ಎದ್ದವನ ಲವಲವಿಕೆಯಿಂದ, ಶಂಕರಪ್ಪ ಕಡಿವಾಣವನ್ನು ತುಸು ಎಡಕ್ಕೆ ಜಗ್ಗಿ ಕುದುರೆಯನ್ನು ಹಿಮ್ಮುಖವಾಗಿಸಿದ. ಹಿಂಗಾಲುಗಳಿಂದ ಅದರ ಪಕ್ಕೆಗಳನ್ನು ತಿವಿದು, ಅವನೆಂದ :

"ನಡಿ !"

ಎಲ್ಲಿಗೆ ಎಂಬುದನ್ನು ಬಲ್ಲುದೇನೋ ಎಂಬಂತೆ, ಬಂದ ದಾರಿಯಲ್ಲೇ ಹಿಂದಕ್ಕೆ ವೇಗವಾಗಿ ಓಡತೊಡಗಿತು ಕುದುರೆ.

ಶಂಕರಪ್ಪ ಅಂದುಕೊಂಡ :

"ಬೆಳಗಾತ ಐಯಣ್ಣ ಕರೆ ಕಳಿಸಬಹುದು. ಮಹಾಸ್ವಾಮಿಯವರಿಂದ ಇನಾಮು ಪಡೆಯೋದಿರತದೆ. ಅದಕ್ಕೂ ಮೊದಲು ಮಹಾದೇವ ಮೆಚ್ಚುವ ಈ ಕೆಲಸ ಮಾಡಿ ಮುಗಿಸಬೇಕು."

ಕಾಡಿನೆಡೆಗೆ ನಾಗಾಲೋಟದಿಂದ ಅಶ್ವ ಓಡಿದಾಗ ಮತ್ತೆ ಮತ್ತೆ ಶಂಕರಪ್ಪನಿಗೆ ಅನಿಸಿತು:

"ಇದೆಲ್ಲ ಮೇಲಿರುವವನ ಆಟ. ಆ ಸೂತ್ರಧಾರನ ಕೈಯಲ್ಲಿ ನಾನೊಂದು ಆಟಿಗೆ."

## ೩

ಅರಣ್ಯ ಪ್ರದೇಶವನ್ನು ಹೊಕ್ಕು ತಾಣವನ್ನು ತಲಪಿದಾಗ, ವೀರಪ್ಪನ ದೇಹವನ್ನು ಕಾಣದೆ ಶಂಕರಪ್ಪ ಕಕ್ಕಾವಿಕ್ಕಿಯಾದ. ನಂಜುಂಡಪ್ಪನ ಶವವೊಂದೇ ಅಲ್ಲಿ ಬಿದ್ದಿತ್ತು.

ಘಾತವಾಯಿತು ಎಂದುಕೊಂಡ ಶಂಕರಪ್ಪ. ತಾನು ಈ ಮೊದಲೇ ಬರಬೇಕಾಗಿತ್ತು; ತಡಮಾಡಿ ತಪ್ಪಾಯಿತು. ಯಾವುದೋ ಕ್ರೂರ ಮೃಗ ರಾಜಕುಮಾರನ ಶರೀರವನ್ನು ಎಳೆದೊಯ್ದಿರಬೇಕು.

ಆ ಸಾಧ್ಯತೆ ಆತ್ಮರಕ್ಷಣೆಯ ಎಚ್ಚರಕ್ಕೆ ಶಂಕರಪ್ಪನನ್ನು ಕುಲುಕಿತು. ಚಿರತೆಯೋ ಹುಲಿಯೊ ! ತನ್ನ ಮೇಲೂ ಕುದುರೆಯ ಮೇಲೂ ಅದು ಎರಗಬಹುದು...

ಶಂಕರಪ್ಪನ ಕೈ ಬಿಚ್ಚುಗತ್ತಿಯನ್ನು ಹಿರಿದು ಹಿಡಿಯಿತು.

ಕುದುರೆಯನ್ನೆಳೆದುಕೊಂಡು ಇಲ್ಲಿಂದ ತಾನು ಪಾರಾಗಿ ಹೋಗಲೆತ್ನಿಸುವುದಲ್ಲವೆ ವಿಹಿತ ?

ಒಳದನಿ ನುಡಿಯಿತು :

ಅವಸಾನವೇನಾಯಿತೆಂದು ಕಣ್ಣಾರೆ ಕಂಡು ಹೋಗು...

ಕ್ಷಣವೊಂದು ಯುಗ...

ಸದ್ದೇ ಇಲ್ಲವಲ್ಲ ವ್ಯಾಘ್ರನದು ?

ಅಷ್ಟರಲ್ಲಿ ಮನುಷ್ಯ ಜೀವದ ಕ್ಷೀಣ ಧ್ವನಿ ಶಂಕರಪ್ಪನಿಗೆ ಕೇಳಿಸಿತು.

ಆರ್ತನಾದವಲ್ಲ—ನರಳಾಟ.

ಒಂದೇ ಉಸಿರಿಗೆ ಶಂಕರಪ್ಪ ಅತ್ತ ನೆಗೆದ. ಅಲ್ಲಿ ವೀರಪ್ಪ ಬೋರಲಾಗಿ ಬಿದ್ದಿದ್ದ. ಆ ಗಂಟಲಿನಿಂದ ಧ್ವನಿ ಹೊರಟಿತ್ತು. ನರಭಕ್ಷಕನ ಸುಳಿವೇ ಅಲ್ಲಿರಲಿಲ್ಲ.

ಶಂಕರಪ್ಪನಿಗೆ ಸ್ಪಷ್ಟವಾಯಿತು. ವೀರಪ್ಪನಿಗೆ ಪ್ರಜ್ಞೆ ಬಂದು, ತೆವಳುತ್ತಾ ಅತ್ತಿತ್ತ

ಸರಿಯಲು ಆತ ಯತ್ನಿಸಿರಬೇಕು ; ನಾಲ್ಕು ಮಾರು ಹೋಗುವುದರೊಳಗೆ ಶಕ್ತಿ ಸಾಲದೆ ಸುಮ್ಮನಾಗಿರಬೇಕು.

ಬಿಚ್ಚುಗತ್ತಿಯನ್ನು ಉಡಿಗೆ ಸೇರಿಸಿ ಶಂಕರಪ್ಪ, ವೀರಪ್ಪನ ಶರೀರದ ಬಳಿ ಮಂಡಿ ಯೂರಿದ. ಉಸಿರಾಟವಿತ್ತು. ಕಣ್ಣವೆಗಳು ಮಾತ್ರ, ಮುಚ್ಚಿದರೆ ತೆರೆಯಲಾಗದಷ್ಟು ತೆರೆದರೆ ಮುಚ್ಚಲಾಗದಷ್ಟು, ಬಸವಳಿದಿದ್ದುವು.

ಲಗುಬಗೆಯಿಂದ ಶಂಕರಪ್ಪ, ವೀರಪ್ಪನನ್ನೆತ್ತಿ ಜೀನಿನ ಮುಂಭಾಗದಲ್ಲಿ ಕುದುರೆಯ ಕೊರಳಿಗೆ ಅಡ್ಡಲಾಗಿ ಇರಿಸಿದ. ತನ್ನ ರುಮಾಲನ್ನು ಬಿಚ್ಚಿ, ದೇಹ ಜಾರಿ ಬೀಳದಂತೆ ಕುದುರೆಯ ಕತ್ತನ್ನು ಬಳಸಿ ಅದನ್ನು ಕಟ್ಟಿದ.

ಅವನ ಒಳದನಿ ನುಡಿಯಿತು :

'ನಂಜುಂಡಪ್ಪನ ಶವ ಅಲ್ಲೇ ಬಿದ್ದಿದೆ. ಒಂದಷ್ಟು ಟೊಂಗೆಗಳನ್ನು ಕಡಿದು ಹಾಕಿ ಅದನ್ನು ಮರೆಮಾಡಬಾರದೆ ?'

ಆ ಯೋಚನೆಗೆ ಉತ್ತರವೆನ್ನುವಂತೆ ಶಂಕರಪ್ಪ ತನ್ನಷ್ಟಕ್ಕೆ ಗೊಣಗಿದ :

ಅದೇನೋ ಸರಿ. ಆದರೆ ತಡವಾಯ್ತದೆ, ಸತ್ತವನು ಹ್ಯಾಗೋ ಸತ್ತ. ಬದುಕಿರುವವನಿಗಾಗಿ ನನ್ನ ಕೈಲಾದಷ್ಟು ಮಾಡ್ತೀನಿ."

ಕುದುರೆ ಕೆನೆದು, ಶಂಕರಪ್ಪನ ಗೊಣಗಾಟವನ್ನು ಕೊನೆಗಾಣಿಸಿತು.

ಕಡಿವಾಣವನ್ನು ಕೈಯಲ್ಲಿ ಹಿಡಿದು ಶಂಕರಪ್ಪ, ದಾರಿಯತನಕ ಕುದುರೆಯನ್ನು ನಡೆಸಿಕೊಂಡು ಬಂದು ಅದನ್ನೇರಿದ.

ಅಲ್ಲಿಗೆ ಬರುತ್ತಿದ್ದಾಗಲೇ ತಾನಿಡಬೇಕಾದ ಮುಂದಿನ ಹೆಜ್ಜೆಯನ್ನು ಆತ ನಿರ್ಧರಿಸಿದ್ದ. ಅದಕ್ಕೆ ಅನುಗುಣವಾಗಿ, ಮಡಕೇರಿಯ ದಾರಿಯಿಂದ ಬಲಕ್ಕೆ ಹೊರಳಿ, ಒಂದು ಹರದಾರಿ ದೂರದಲ್ಲಿದ್ದ ಹೊಸಳ್ಳಿಗೆ ಆತ ಕುದುರೆಯನ್ನೋಡಿಸಿದ.

ಹೊಸಳ್ಳಿಯ ಮಲ್ಲಪ್ಪಗೌಡ, ಶಂಕರಪ್ಪನ ಬಂಧು. ಅವನು ಜಮ್ಮದ ರೈತ. ಊಳಿಗಕ್ಕೆ ಉಂಬಳಿಯಾಗಿ ಅರಮನೆಯಿಂದ ಪಡೆದ ಹೊಲ ಅವನದು. ಅರಸನ ಕರೆ ಬಂದಾಗ, ಖಡ್ಗಧಾರಿಯಾಗಿ, ಸರ್ವಕಾರ್ಯಕಾರನ ಮುಂದೆ ಆತ ಉಪಸ್ಥಿತನಾಗುವ ; ಹೋರಾಟವಿಲ್ಲದ ವೇಳೆಯಲ್ಲಿ ಹಳ್ಳಿಯಲ್ಲೇ ಇರುವ.

ಈಗ ಆತನ ನೆರವನ್ನು ಶಂಕರಪ್ಪ ಪಡೆಯಬೇಕು.

ಬೆಳಕು ಹರಿಯಲು ಇನ್ನೂ ಎರಡು ಘಳಿಗೆ ಇದ್ದಂತೆ ಶಂಕರಪ್ಪ ಹೊಸಳ್ಳಿಯನ್ನು ತಲಪಿದ. ಅಷ್ಟು ಹೊತ್ತಿನಲ್ಲೇ ಎದ್ದು ಒಬ್ಬಿಬ್ಬರು ರೈತರು ದೂರದ ಹೊಲಗಳಲ್ಲಿ ರೆಂಟೆ ಹೊಡೆಯತೊಡಗಿದ್ದರು. ಬೇಗ ಬೇಗನೆ ಶಂಕರಪ್ಪ, ತನ್ನ ಬಂಧುವಿನ ಸೋಗೆ ಮಾಡದ ಮನೆಯನ್ನು ಸಮೀಪಿಸಿದ.

ಅಡುಗೆ ಮನೆಯ ಗವಾಕ್ಷಿಯಲ್ಲಿ ಬೆಳಕು ಕಾಣಿಸುತ್ತಿತ್ತು. ಹಾಡಿನ ಸಾಲುಗಳು ಮಧುರ ಕಂಠದಿಂದ ಹೊರಟು ಮನೆಯ ಹೊರಕ್ಕೆ ನುಸುಳುತ್ತಿದ್ದುವು.

ಆಡೂ ಮಕ್ಕಳ ಕಂಡು ಬೇಡಿತ್ತ ನನ ಜೀವ ।
ಕೇಳಿದ್ದನೇನ ಶಿವರಾಯ ।
ಕೇಳಿದ್ದನೇನ ಶಿವರಾಯ—ಹೊಟ್ಯಾಗ ।
ಮೂಡಿದ್ದನೇನ ಮಗ ರಾಮು ॥

ಕುದುರೆಯಿಂದಿಳಿದ ಶಂಕರಪ್ಪನಿಗೆ ಹಾಡಿನ ಉತ್ತರಾರ್ಧ ಸ್ಪಷ್ಟವಾಗಿ ಕೇಳಿಸಿತು. ಹೊಸಳ್ಳಿ ಹತ್ತಿರವಾದಂತೆ, ತನ್ನ ಬಂಧು ಏನನ್ನುವನೋ ಎಂದು ಕಾಡಿದ್ದ ಚಿಂತೆ ಈಗ ದೂರವಾಗಿ, ಶಂಕರಪ್ಪನ ಮನಸ್ಸು ಪ್ರಸನ್ನವಾಯಿತು.

ಅವನು ಮನೆಯ ಕದವನ್ನು ತಟ್ಟಿದ.

"ಮಲ್ಲಪ್ಪಣ್ಣ, ಮಲ್ಲಪ್ಪಣ್ಣ !"

ಒಳಗಿನಿಂದ ಪ್ರಶ್ನೆ ಕೇಳಿ ಬಂತು :

"ಯಾರು ?"

ಆವರೆಗೂ ಹಾಡುತ್ತಲಿದ್ದ ಕಂಠ. ಮನೆಯೊಡತಿ ಅಕ್ಕವ್ವ.

"ನಾನು ಶಂಕರಪ್ಪ, ಅತ್ತಿಗೇ."

"ಓ ! ಇರಿ, ಬಂದ್ನಿ."

ಮಲ್ಲಪ್ಪಗೌಡನನ್ನು ಎಬ್ಬಿಸಿ ಬಂದೇ ಅಕ್ಕವ್ವ ಹೊರಬಾಗಿಲಿನ ಅಗಣಿ ತೆಗೆದಳು.

"ಬನ್ನಿ ಒಳಕ್ಕೆ. ಇದೇನು ಇಷ್ಹೊತ್ನಲ್ಲಿ ? ಕಾಲಿಗೆ ನೀರು ತರಲಾ ?"

"ಅಗತ್ಯದ ಜಂಬ್ರ. ಮಲ್ಲಪ್ಪಣ್ಣ ಎದ್ದರಾ ?"

ಮಲ್ಲಪ್ಪಗೌಡನ ಮಡದಿ ಮಬ್ಬು ಬೆಳಕಿನಲ್ಲಿ ಕುದುರೆಯನ್ನು ನೋಡಿದಳು. ಅದು ಹೊತ್ತಿದ್ದ ಹೇರನ್ನು ಗಮನಿಸಿದಳು. ಯೋಚನೆ ಗಂಟಿಕ್ಕಿ ಅವಳ ಹುಬ್ಬುಗಳು ಮೇಲಕ್ಕೆ ಸರಿದುವು. ಆಕೆ ಸರಕ್ಕನೆ ಒಳಹೋದಳು.

ಎದ್ದ ಮಲ್ಲಪ್ಪಗೌಡನಿಗೆ 'ಅಗತ್ಯದ ಜಂಬ್ರ' ಎಂಬ ಮಾತು ಕೇಳಿಸಿತ್ತು. ಆತ, ಪಂಚೆಯನ್ನು ನಡುವಿಗೆ ಬಿಗಿದು, ಅಂಗವಸ್ತ್ರವನ್ನು ಭುಜದ ಮೇಲೆ ಹಾಕಿಕೊಂಡು, "ಬಾ, ಶಂಕರಪ್ಪ" ಎನ್ನುತ್ತ ಹೊಸ್ತಿಲನ್ನು ದಾಟಿ ಬಂದ.

ಪಿಸುದನಿಯ ಕೆಲವೇ ಮಾತುಗಳಲ್ಲಿ ಶಂಕರಪ್ಪ ತನ್ನ ಬಂಧುವಿಗೆ ವಿಷಯವನ್ನು ತಿಳಿಸಿದ. ಮಲ್ಲಪ್ಪನ ಮುಖವನ್ನು ಮೋಡ ಕವಿದುದನ್ನಾಗಲೀ ಒಂದು ಕ್ಷಣ ಆತ ಅಧೀರನಾದುದನ್ನಾಗಲೀ ಶಂಕರಪ್ಪ ಗಮನಿಸಲಿಲ್ಲ. ಗಮನಿಸುವ ಸ್ಥಿತಿಯಲ್ಲೇ ಅವನಿರಲಿಲ್ಲ.

ಶಂಕರಪ್ಪನೆಂದ :

"ನಿನ್ನನ್ನೇ ನೆಚ್ಕೊಂಡು ಬಂದೆ, ಮಲ್ಲಪ್ಪಣ್ಣ."

ಮಲ್ಲಪ್ಪ ಉಗುಳುನುಂಗಿ ಪ್ರಯತ್ನಪೂರ್ವಕವಾಗಿ ಧ್ವನಿ ಹೊರಡಿಸುತ್ತ ಅಂದ :

"ಹಿಡಕೊ. ಒಳಕ್ಕೆ ಒಯ್ಯಾನ."

ಕಟ್ಟನ್ನು ಬಿಚ್ಚಿ, ವೀರಪ್ಪನನ್ನು ಅವರಿಬ್ಬರೂ ಮನೆಯೊಳಕ್ಕೆ—ಒಳ ಕೊಠಡಿಗೆ—ಒಯ್ದರು.

ಅಕ್ಕವ್ವ ದೀಪ ತಂದಿರಿಸಿದಳು.

ವೀರಪ್ಪನಿಗೆ ಮತ್ತೆ ಪ್ರಜ್ಞೆ ತಪ್ಪಿತ್ತು. ತೀರಿಯೇ ಹೋದನೇನೋ ಎಂಬ ಶಂಕೆ ಶಂಕರಪ್ಪನಿಗೆ.

...ಇಷ್ಟು ಪ್ರಯಾಸಪಟ್ಟದ್ದೂ ವ್ಯರ್ಥ ಆಯಿತೇ..."

ಮಲ್ಲಪ್ಪನೆಂದ :

"ಇರು, ನೋಡಾನ."

ಪತ್ನಿಯನ್ನುದ್ದೇಶಿಸಿ ಆತ ನುಡಿದ :

"ನೀರುತತ್ತಾ. ಬಿರ್ರನೆ."

ಶೈತ್ಯೋಪಚಾರದ ಫಲವಾಗಿ ವೀರಪ್ಪನಿಗೆ ಪ್ರಜ್ಞೆ ಮರಳಿತು.

"ಮಹಾದೇವನ ಕೃಪೆ" ಎಂದ ಶಂಕರಪ್ಪ.

ಮಲ್ಲಪ್ಪ ಹೆಂಡತಿಯೊಡನೆ ಅಂದ :

"ಒಸಿ ನೀರಿಗೆ ಎರಡು ಹನಿ ನಿಂಬೆಹಣ್ಣಿನ ರಸ ಹಿಂಡಿ, ಒಂದು ಅರಳು ಉಪ್ಪು ಆಕಿ, ತಕಂಬಾ."

...ಮೊದಲ ಗುಟುಕು ಪ್ರಯಾಸದಿಂದ ಗಂಟಲ ದಾರಿಯಾಗಿ ಎಡವುತ್ತ ಜಠರವನ್ನು ಸೇರಿತು. ಇನ್ನೊಂದು ಗುಟುಕು ಸರಾಗವಾಗಿ ಇಳಿಯಿತು. ತುಟಿಗಳು ಬಿಗಿದುಕೊಂಡು, ಮೌನವಾಗಿ, ಸಾಕು—ಎಂದುವು.

"ಜಾಸ್ತಿ ಕುಡಿಸಿದರೆ ವಾಂತಿಯಾಗ್ಬೌದು" ಎಂದ ಮಲ್ಲಪ್ಪ.

ಶಂಕರಪ್ಪ ಕೇಳಿದ :

"ಇನ್ನು ಭಯವಿಲ್ಲ, ಅಲ್ಲವಾ ?"

ತಗ್ಗಿದ ಸ್ವರದಲ್ಲಿ ಅಕ್ಕವ್ವ ಕೇಳಿದಳು :

"ಇದು ಯಾರು ?"

"ಆ ಮ್ಯಾಕೆ ಹೇಳ್ತೀನಿ" ಎಂದು ಮಲ್ಲಪ್ಪ ಎದ್ದ.

ಏಳುತ್ತ ಶಂಕರಪ್ಪನೆಂದ :

"ನಾನಿನ್ನು ಓಗಲಾ ?"

"ಬೆಳಗಾಗೋದರೊಳಗೇ ನೀನು ಗಾಡಿ ಬಿಡೋದು ಕ್ಷೇಮ."

ಕೊಠಡಿಯನ್ನು ದಾಟಿ ಅವರು ಜಗಲಿಗೆ ಬಂದರು.

ಎದೆಯ ಮೇಲಿನ ಭಾರವನ್ನು ಇಳಿಸಲೆತ್ನಿಸುತ್ತ ಮಲ್ಲಪ್ಪನೆಂದ :

"ಅಂತೂ ಒಳ್ಳೇ ಎಡವಟ್ನಲ್ಲಿ ಸಿಕ್ಕಿಸ್ದೆ ಶಂಕರಪ್ಪ. ತಲೆ ಹೋಗೋ ಕೆಲಸ."

"ನೀನೇ ಹೇಳು ಮಲ್ಲಪ್ಪಣ್ಣ. ಬೇರೇನು ಮಾಡೋಕಾಗ್ತಿತ್ತು ?"

ನಿಟ್ಟುಸಿರು ಬಿಟ್ಟು, ಮಲ್ಲಪ್ಪ ನುಡಿದ.

"ಇವರು ಸರ್ಹೋಗ್ಬೇಕಾದರೆ ಇನ್ನೂ ಆರೇಳು ದಿವಸ ಹಿಡಿದಾತು. ತಿರ್ಗಾ ನೀನು ಬರ್ತಿತಾನೆ ?"

"ಯಾಕ್ಬರ್ಲಿ ? ನನ್ನ ಕರ್ತವ್ಯ ಮಾಡಿದ್ದಾಯ್ತು."

"ಸರಿ, ನನ್ನ ಕರ್ತವ್ಯ ಇನ್ನೊಂದು ವಾರದ ಮಟ ಜೋಪಾನ ಮಾಡೋದು. ಆಗಲಿ—ಮಾಡ್ತೀನಿ. ಆಮ್ಯಾಕೆ ?"

"ನನಗೆ ತಿಳೀದು."

"ಒಳ್ಳೇ ನೆಂಟ ಗಂಟುಬಿದ್ದ."

"ನಿನ್ನದೇನು ಅಂಬೋಣ ?"

"ಕೈಮುಗಿದು, ಓಗ್ಬನ್ನಿ ನಮ್ಮಪ್ಪ, ನಿಮ್ಮ ದಾರಿ ನಿಮಗೇ—ಅನ್ನೋದು."

"ಸರಿ, ಮಲ್ಲಪ್ಪಣ್ಣ. ಅಂಗೇ ಮಾಡಿ."

"ಇದರ ಪ್ರಸ್ತಾಪ ಎಲ್ಲೂ ಆಗಬಾರ್ದು."

"ಉಂಟೆ ?"

"ಹೊರಡು ಅಂಗಾರೆ."

ಇಬ್ಬರೂ ಅಂಗಳಕ್ಕಿಳಿದರು.

ರುಮಾಲನ್ನು ತಲೆಗೆ ಸುತ್ತಿಕೊಂಡು, ತನ್ನ ಕುದುರೆಯ ಭುಜತಟ್ಟಿ, ಶಂಕರಪ್ಪ ಅದನ್ನೇರಲು ಅಣಿಯಾದ. ತನ್ನ ಬಂಧುವಿಗೆ ಕೃತಜ್ಞತೆಯರ್ಪಿಸಬೇಕು ಎಂದು ಅವನಿಗನಿಸಿತು. ಆದರೆ ಮಾತು ಹೊರಡಲಿಲ್ಲ. ಗಂಟಲು ಒತ್ತರಿಸಿತು.

ಕುದುರೆಯ ಮೇಲೆ ಹಾರಿ ಕುಳಿತು ಅವನೆಂದ:

"ಬರ್‍ತೀನಿ, ಮಲ್ಲಪ್ಪಣ್ಣ."

ಉತ್ತರವಿತ್ತ ಮಲ್ಲಪ್ಪಗೌಡನ ಧ್ವನಿಯಿೀಗ ದೃಢವಾಗಿತ್ತು.

"ಹ್ಞ, ಹೋಗ್ಬಾ. ನೆಪ್ಪಿರ್‍ಲಿ. ಹೊಸಳ್ಳಿಗೆ ನೀನಿವತ್ತು ಬಂದೇ ಇಲ್ಲ—ಕಂಡೆಯಾ ?"

"ಇಲ್ಲ—ಇಲ್ಲ..."

ಹೊಲಗಳನ್ನು ಬಳಸಿಕೊಂಡು ಕುದುರೆ ದಾರಿಯತ್ತ ಓಡಿತು.

ಮಲ್ಲಪ್ಪ, ಕುದುರೆ ಕಣ್ಮರೆಯಾಗುವವರೆಗೂ ಅಂಗಳದಲ್ಲಿ ನಿಂತಿದ್ದು, ನಿಟ್ಟುಸಿರುಬಿಟ್ಟು, ಮನೆಯೊಳಕ್ಕೆ ಕಾಲಿರಿಸಿದ.

ಮಡದಿಯನ್ನು ಕರೆದು ಅವನೆಂದ:

"ಜೋಕೆ, ಇಸ್ಯ ಯಾರಿಗೂ ಗೊತ್ತಾಗ್ಬಾರದು."

"ಹೂಂ."

"ಆತ ಅರಸುಕುಮಾರ."

"ನಾನೂ ಅಂಗೇ ಅಂದ್ಕೊಂಡೆ."

"ಮಹಾಸ್ವಾಮಿಗಳ ದೊಡ್ಡಪ್ಪನ ಮಗ."

"ಹುಡುಗರಿಗೆ ಏನು ಹೇಳಾನ ?"

"ಅವರ ಮಾವ ; ಮೈಸೂರು ಸೀಮೆಯಿಂದ ಬಂದವನೆ; ಕಾಯಿಲೆ...ಅನ್ನು."

"ಹೂಂ."

"ಆದಷ್ಟು ಬಿರ್‍ನೆ ಕಳಿಸಿಬಿಡಾನ."

"ಹ್ಞು. ಒಸಿ ಓಡಾಡೋ ಅಂಗಾಗ್ಲಿ, ಪಾಪ."

"ಏನಿದ್ರೂ ಒಂದು ವಾರ. ಸೆರಗ್ನಾಗೆ ಕಟ್ಕೊಂಡಿರೋ ಕೆಂಡ. ಉಷಾರಾಗಿರ್‍ಬೇಕು."

"ಆಗಲಿ."

೪

ದಾಸಿ ಬಂದು ರಾಣಿಗೆ ಅರಿಕೆ ಮಾಡಿದಳು :

"ಅರಮನೆಯ ಮಹಾದ್ವಾರನ ತೆರೆದಿದ್ದಾರೆ, ಅಮ್ಮಣ್ಣಿ, ಬೋ ಗದ್ದಲ. ಸರದಾರರೂ ಕಾರ್‍ಯಕಾರರೂ ಬರತಾ ಅವರೆ."

ಕೊಡಗಿನ ರಾಣಿ ಗೌರಮ್ಮ ಷೋಡಶ ವರ್ಷಗಳ ಚೆಲುವೆ. ಮುಂದೆ ಮಗನ ಪಟ್ಟದರಸಿಯಾಗಲೆಂದು ಗತಿಸಿದ ಲಿಂಗರಾಜ ಕೊಡವರ ಜನದಿಂದ ಆರಿಸಿ ತಂದಿದ್ದ ಹೆಣ್ಣು. ಬೆಳಿಗ್ಗೆ ತಡವಾಗಿ ಎದ್ದವಳು, ಮಜ್ಜನ ಮುಗಿಸಿ, ತಲೆಗೂದಲ ಸಿಕ್ಕು ಬಿಡಿಸಿಕೊಳ್ಳುತ್ತ ಬಿಸಿಲುಮಂಟಪದಲ್ಲಿ ನಿಂತಿದ್ದಳು.

ದಾಸಿಯ ಕಡೆ ತಿರುಗಿ ಅವಳೆಂದಳು :

"ಇವತ್ತು ರಾಜಸಭೆ ನಡೀತದೆ. ಬೇಟೆಯಿಂದ ವಾಪಸಾಗುವ ಹೊತ್ತಿಗೆ ರಾಜಧಾನಿಗೆ ಬರಬೇಕೂಂತ ಮುಖ್ಯರಿಗೆಲ್ಲಾ ಮೊದಲೇ ರಾಯಸ ಹೋಗಿತ್ತು."

"ಅಂಗಾ ?" ಎಂದು ದಾಸಿ ರಾಗವೆಳೆದಳು.

ಸೂರ್ಯರಶ್ಮಿ ರಾಣಿಯ ಮುಖದ ಮೇಲೆ ನರ್ತಿಸುತ್ತಿತ್ತು. ಬೇಟೆಯಿಂದ ಮರಳಿದ ಅರಸನೊಡನೆ ಇರುಳನ್ನು ಕಳೆದು ಈಕೆ ಸುಖಿಯಾಗಿದ್ದಾಳೆ—ಎಂದುಕೊಂಡಳು ದಾಸಿ. ಮರುಕ್ಷಣವೇ 'ನಾಚಿಕೆ ಇಲ್ಲದವಳು ನಾನು ; ಎಂಥ ಯೋಚ್ನೆ ಮಾಡ್ತಿದೇನೆ' ಎಂದು ತನ್ನನ್ನೇ ಹಳಿದಳು. 'ರತಿದೇವಿಯಂಥ ರೂಪ. ಇನ್ನು ಸ್ತ್ರೀ ವಾಟಿಕೆಯವರನ್ನು ಯಾರು ಕೇಳ್ತಾರೆ ?' ಎನಿಸಿತು. ರಾಣಿಗೆ ತನ್ನ ದೃಷ್ಟಿ ತಾಕಬಾರದೆಂದು ಮಡಚಿದ ಬೆರಳುಗಳನ್ನು ತಲೆಗೆ ಸೋಂಕಿಸಿ, ಆಕೆ ನೆಟಿಕೆ ಮುರಿದಳು.

"ಅದೇನು ಮಾಡ್ತಿದೀಯಾ ?" ಎಂದು ಕೇಳಿದಳು ರಾಣಿ.

"ಏನಿಲ್ಲ ನಮ್ಮವ್ವ ! ಸಿಕ್ಕು ನಾ ಬಿಡಿಸಲಾ ?"

ರಾಣಿ ನಕ್ಕು ನುಡಿದಳು :

"ಬೇಡ. ನೀನು ಹೋಗಿ ಮಹಾಸ್ವಾಮಿಯವರು ಸಿದ್ಧರಾಗ್ತಿದಾರೇನೋ ನೋಡು. ರಾಜಸಭೆಗೆ ಸವಾರಿ ಹೊರಡೋಕ್ಮುಂಚೆ ನನಗೆ ಬಂದು ಹೇಳು.

"ಊನ್ರಮ್ಮಣ್ಣಿ."

ದಾಸಿ ತೆರಳಿದೊಡನೆ ರಾಣಿ, ಬಿಸಿಲು ಮಂಟಪದಿಂದ ಇಳಿದು, ಮುಂಭಾಗದ ಜಾಲಂದ್ರ ದತ್ತ ಬಂದಳು. ಗೋಡೆಯನ್ನು ಕೊರೆದು ಮಾಡಿದ ಆ ತೂತಿನಿಂದ ಆಕೆ ಹೊರಕ್ಕೆ ದೃಷ್ಟಿ ಹಾಯಿಸಿದಳು. ಮೇಲಣ ಜಾಲಂದ್ರದಿಂದ ಊರು ಕಾಣಿಸುತ್ತಿತ್ತು. ಹಳ್ಳತಿಟ್ಟುಗಳಲ್ಲಿ ಮನೆಗಳು ತುಂಬಿದ ಜೇನುತೊಟ್ಟಿ ಮಡಕೇರಿ. ಅದರ ಮೂಡು ಭಾಗ ಅಲ್ಲಿಂದ ಕಾಣಿಸು ತ್ತಿತ್ತು. ಊರ ಹೊರವಲಯದಲ್ಲಿ ದಟ್ಟನೆಯ ಹಸಿರು ; ಅರಣ್ಯ. ಅದರಾಚೆಗೆ ನೀಲಿ ಬೆಟ್ಟ. ಆ ಬೆಟ್ಟದ ಹಿಂಬದಿಯಲ್ಲಿ ಇನ್ನೊಂದು ಬೆಟ್ಟ ಸಾಲು. ಮಂಜಿನ ಪರದೆ ನೀಲ ಗಗನದಿಂದ ಇಳಿದು ಬೆಟ್ಟದ ಕೋಡುಗಳನ್ನು ಮುಟ್ಟಿದಂತಿತ್ತು. ಐದು ಯೋಜನ ಉದ್ದ ಮೂರು ಯೋಜನ ಅಗಲದ ಫಲವತ್ತಾದ ಭೂಮಿ ಕೊಡಗು. ಅದಕ್ಕೆ ತಾನು ರಾಣಿ...

ಗೌರಮ್ಮ ತುಸು ಬಾಗಿ ಕೆಳಗಿನ ಜಾಲಂದ್ರದಿಂದ ನೋಡಿದಳು. ಪಲ್ಲಕ್ಕಿಗಳಲ್ಲಿ ಬಂದು ಇಳಿಯುತ್ತಿದ್ದವರು ಕೆಲವರು. ಅಶ್ವಾರೂಢರಾಗಿ ಬರುತ್ತಿದ್ದವರು ಕೆಲವರು. ಕಾಲ್ನಡಿಗೆ ಯಿಂದ ಕಡಿದು ದಾರಿಯಲ್ಲಿ ಏರಿ ಬರುತ್ತಿದ್ದವರು ಕೆಲವರು.

ಗೌರಮ್ಮ ಅಂದುಕೊಂಡಳು :

'ಇವರೆಲ್ಲ ಸ್ವಾಮಿನಿಷ್ಠರಾದ ಪ್ರಜಾ ಪ್ರಮುಖರು. ಇಂಥವರ ಬೆಂಬಲ ಇರೋದ ರಿಂದಲೇ ರಾಜಶ್ರೀ ಇಲ್ಲಿ ಸುರಕ್ಷಿತವಾಗಿ ನೆಲೆಸಿದಾಳೆ.'

ಅಷ್ಟರಲ್ಲಿ ಕೊಂಬು ತಮಟೆಗಳು ಮೊಳಗಿದುವು. ಗೌರಮ್ಮ ಅತ್ತ ನೋಡಿದಳು. ಚಾವಡಿಕಾರರೂ ಅರಮನೆಯ ಊಳಿಗದವರೂ ಸೇರಿಕೊಂಡು, ಬೊಂಬುಗಳ ನೆರವಿನಿಂದ ನೇರವಾಗಿ ನಿಲ್ಲಿಸಿದ್ದ ನಾಲ್ಕು ಹೆಬ್ಬುಲಿಗಳನ್ನು ಹೊತ್ತು ತರುತ್ತಿದ್ದರು. ರಾಣಿ ಉತ್ಸುಕತೆ ಯಿಂದ ಅವುಗಳನ್ನು ದಿಟ್ಟಿಸಿ ನೋಡಿದಳು. ಹಿಂದಿನ ರಾತ್ರೆ, ತನ್ನನ್ನು ತೋಳ ತೆಕ್ಕೆಯಲ್ಲಿ ಬಿಗಿದಪ್ಪಿ, ಆ ಹುಲಿಗಳನ್ನು ತಾನು ಗುಂಡಿಕ್ಕಿ ಕೊಂದ ಬಗೆಯನ್ನು ಅರಸ ಬಣ್ಣಿಸಿದ್ದ...

ಮಹಾದ್ವಾರದೆದುರು ಒಂದೊಂದು ಬದಿಗೆ ಎರಡೆರಡರಂತೆ ಹೆಬ್ಬುಲಿಗಳನ್ನು ನಿಲ್ಲಿಸಿದರು. "ದ್ವಾರಪಾಲಕರು!" ಎಂದು, ಧ್ವನಿ ತನಗೆ ಕೇಳಿಸುವಂತೆ ಅಂದು, ರಾಣಿ ನಸುನಕ್ಕಳು. ಕೆಳಗೆ ನೆರೆದಿದ್ದ ಜನಸಂದಣಿ ಹೆಬ್ಬುಲಿಗಳನ್ನು ನೋಡಿ ಹರ್ಷಧ್ವನಿ ಮಾಡಿತು.

"ಕೊಡಗು ಸಿಂಹಾಸನಾಧೀಶ್ವರ ಚಿಕವೀರರಾಜೇಂದ್ರ ಒಡೆಯ ಭೂಪಾಲರಿಗೆ—ಜಯವಾಗಲಿ!"

ಪ್ರಜೆಗಳ ಧ್ವನಿಗೆ ತನ್ನದನ್ನೂ ಸೇರಿಸಬೇಕೆಂದು ಬಯಕೆಯಾಯಿತು ಗೌರಮ್ಮನಿಗೆ. ಆದರೆ ನಕ್ಕು, ತಾನು ಹುಚ್ಚು ಹುಡುಗಿ—ರಾಣಿ ಅನ್ನೋದನ್ನು ಮರೆಯೋದೇ ? ಗೌರವ ಸಲ್ಲುತ್ತಿರುವುದು ತನಗೇ ಅಲ್ಲವೆ ?—ಎಂದುಕೊಂಡಳು.

ಬಾಗಿಲ ಬಳಿ ಕೆಮ್ಮಿದ ಸದ್ದಾಯಿತು. ದಾಸಿ.

"ಏನು ?" ಎಂದು ರಾಣಿ ಕೇಳುತ್ತಿದ್ದಂತೆಯೇ, ದಾಸಿ ಬಿನ್ನವಿಸಿದಳು :

"ರಾಣಿಯವರೆಲ್ಲಿ ಅಂತ ಮಹಾಸ್ವಾಮಿಯವರು ಕೇಳತಾ ಅವರೆ."

"ಬಂದೆ."

ಅವಸರವಾಗಿ, ತಲೆಗೂದಲ ತುದಿ ಗಂಟಿಕ್ಕಿ, ಗೌರಮ್ಮ ದಾಸಿಯನ್ನು ಹಿಂಬಾಲಿಸಿದಳು. ಓಡುತ್ತ ಹೋಗೋಣವೆನಿಸಿತು. ಆದರೆ ಅರಸನ ಆಣತಿ ನೆನಪಾಯಿತು :

"ನೀವು ರಾಣಿಗೆ ತಕ್ಕ ಗಾಂಭೀರ್ಯದಿಂದ ನಡೀಬೇಕು."

ತವರಿನಲ್ಲಿ ಗಂಡನಿಗೆ ಸಮನಾದ ದಿಟ್ಟತನದಿಂದ ಓಡಿ ಆಡಿದವಳಿಗೆ ಗಂಭೀರ ನೋಟ ನಿಲುವು ಕಷ್ಟವಾಗಿರಲಿಲ್ಲ. ಆದರೆ ಚಿಗರೆಯ ನೆಗೆತವನ್ನು ಬಿಟ್ಟುಕೊಟ್ಟು ಮಂದಗಮನೆಯಾಗುವುದು ಸ್ವಲ್ಪ ಪ್ರಯಾಸದ್ದಾಗಿತ್ತು.

ಎಲಾ, ಈ ದಾಸಿ ಮಾಯವಾದಳಲ್ಲ!

ಖಾಸಾ ಸನ್ನಿಧಿಯ ಕೊಠಡಿ. ಅಲ್ಲಿ ಚಾಕರರ ಸುಳಿವಿಲ್ಲ.

"ಬನ್ನಿ."

ಒಡೆಯನ ಯುವಕ ಕಂಠ. ಕಿವಿಗೆ ಇಂಪು.

ಗೌರಮ್ಮ ಒಳಕ್ಕೆ ಕಾಲಿರಿಸಿದಳು.

ಅರಸ ಅವಳನ್ನು ಬರಸೆಳೆದುಕೊಂಡ.

ನೋಟ ಕಣ್ಣು ಕೋರೈಸುವಂತಿತ್ತು. ಕಾಲು ತೊಡೆಗಳಿಗೆ ಅಂಟಿಕೊಂಡ ಬಿಳಿ ಷರಾಯಿಯ ಮೇಲೆ ಹಳದಿ ಬಣ್ಣದ ನಿಲುವಂಗಿ. ಸ್ವರ್ಣದ ಕಟಿಬಂಧ. ಅದರಲ್ಲಿ ತೂಗುತ್ತಿದ್ದ ರತ್ನಖಚಿತ ಹಿಡಿಯ ಕರವಾಳ. ಕಿವಿಯಲ್ಲಿ ಹರಳೋಲೆಗಳು. ಹಿಂದಕ್ಕೆ ಬಾಚಿದ್ದ ತಲೆಗೂದಲನ್ನು ಭದ್ರವಾಗಿ ಅದುಮಿ ಹಿಡಿದಿದ್ದ, ವಜ್ರವೈಢೂರ್ಯಗಳ ಪ್ರಭೆಯಿಂದ ಬೆಳಗುತ್ತಿದ್ದ ಬಂಗಾರದ ಕಿರೀಟ. ಪಾದಗಳಿಗೆ, ರಜಪುತಾನದ ಮೋಚಿಗಳು ಅನರ್ಘ್ಯ ರತ್ನಗಳನ್ನಿರಿಸಿ ಹೊಲಿದಿದ್ದ ಪಾದರಕ್ಷೆಗಳು.

ರಾಜನೆಂದ :

"ನಾವು ಖುಷಿಯಲ್ಲಿದೇವೆ."

ರಾಣಿ, ಸಂಕೋಚಪಟ್ಟುಕೊಳ್ಳುತ್ತ, ಅರಸನ ಹಿಡಿತದಿಂದ ಬಿಡಿಸಿಕೊಳ್ಳುತ್ತ ಅಂದಳು :

"ತಮ್ಮ ಸಂತೋಷವೇ ನನ್ನ ಸಂತೋಷ. ರಾಜಸಭೆಗೆ ತಡವಾಗ್ತಿದೆ."

"ಒಳ್ಳೇದು. ನಿಮ್ಮ ಅಪ್ಪಣೆಗಾಗಿ ಕಾದಿದ್ವಿ."

"ಇಂಥ ಮಾತು ಕೇಳಿದರೆ ನನಗೆ ನಾಚಿಕೆಯಾಗುತ್ತೆ."

"ಒಂದು ಸುದ್ದಿ ತಿಳಿಸಿ ಹೋಗೋಣಾಂತ—"

"ಹೇಳೋಣಾಗಲಿ."

"ನಮ್ಮ ದಾಯಾದಿಗಳು ಕಳೆದ ರಾತ್ರೆ ತೀರಿಕೊಂಡ್ರು."

ಸಿಡಿಲ ಸದ್ದು ಕೇಳಿಸಿದಂತಾಗಿ ಗೌರಮ್ಮ "ಹಾ !" ಎಂದು ಬಾಯಿ ತೆರೆದಳು. ಅರಸನ ಕೈ ಅಡ್ಡಿಮಾಡಿತು.

ರಾಜನೆಂದ :

"ಶೋಕಿಸುವುದಲ್ಲ. ಇದು ಸಂತೋಷಪಡುವ ಸಮಯ. ಇನ್ನು ನಮ್ಮ ಅರಸೊತ್ತಿಗೆಗೆ ಕಂಟಕವಿಲ್ಲ."

ರಾಣಿಗೆ ಇದು ಸುಲಭವಾಗಿ ಅರ್ಥವಾಗದ ಮಾತು.

"ಇಲ್ಲೇ ಕೋಟೆಮನೆಯಲ್ಲಿ ಇದ್ದರು, ಅಲ್ಲವಾ ?"

"ಹ್ಞ. ಮಾರಿ ಬೇನೆ ಬಡೀತು" ಎಂದು ನುಡಿದು, ಅರಸ ನಕ್ಕ.

ಗಾಬರಿಗೊಂಡು ಗೌರಮ್ಮನೆಂದಳು :

"ಮಾರಿ ಬೇನೆ ?"

ತುಸು ಅಸಮಾಧಾನ ಬೆರೆತ ಧ್ವನಿಯಲ್ಲಿ ರಾಜನೆಂದ :

"ಹೌದು. ನಮ್ಮ ವಿರೋಧಿಗಳೆಲ್ಲಾ ಮಾರಿ ಬೇನೆ ಬಡಿದೇ ಸಾಯುತಾರೆ."

"ಪಾಪ, ರಾಜಮ್ಮಾಜಿ ಇನ್ನು ವಿಧವೆ."

"ರಾಜಮ್ಮಾಜಿ ? ವೀರಪ್ಪಾಜಿಯ ಹೆಂಡತೀನಾ ? ಅದಕ್ಕೇನು ಗೊತ್ತು ಸಂಸಾರದ ಸುಖ ? ಎಂಟು ವರ್ಷದ ಹಸುಳೆ. ಗಂಡನ ಮೈ ಸೋಂಕಿದ್ದರೆ ತಾನೆ ?"

"ತಾಯಿ ಮನೆಯಿಂದ ಇಲ್ಲಿಗೆ ಕರೆಸಿಬಿಡೋಣವಾ ? ಎಷ್ಟೆಂದರೂ ನಾದಿನಿ..."

ಅಸಹನೆಯಿಂದ ಅರಸನ ಹುಬ್ಬುಗಳು ಕೊಂಚ ಮೇಲಕ್ಕೇರಿದುವು. ಪದಗಳನ್ನು ನಿಧಾನವಾಗಿ ಉಚ್ಚರಿಸುತ್ತ ಅವನೆಂದ :

"ಅರಮನೆಯಲ್ಲಿ ಆಕೆ ಇರೋದು ಬೇಡ. ಅಪ್ಪಂಗಳದಲ್ಲಿ ನಮ್ಮ ತಂಗಿಯ ಜತೆ ಇರಲಿ. ದೊಡ್ಡೋಳಾದ ಮೇಲೆ ಯಾರನ್ನಾದರೂ ಕಟ್ಟಿಕೋತಾಳೆ."

"ಛಿ ! ಛಿ !"

ತನ್ನ ಪರಿಹಾಸ್ಯದ ಮಾತು ಕೇಳಿ ರಾಣಿ ಹೇಸಿದುದನ್ನು ಕಂಡು, ಅರಸ ನಕ್ಕು, ಹೊರ ಹೋಗಲೆಂದು ನಾಲ್ಕು ಹೆಜ್ಜೆಗಳನ್ನಿರಿಸಿ, ಅಲ್ಲಿಂದಲೆ ಕತ್ತು ಹೊರಳಿಸಿ ರಾಣಿಯ ಕಡೆ ನೋಡಿ, ಅಂದ :

"ನಿಮ್ಮ ಮೇಲೆ ನನಗೆ ಬೇಸರವಾಗಿದೆ."

ಕಕ್ಕಾವಿಕ್ಕಿಯಾದ ರಾಣಿ ತಲೆ ಎತ್ತಿ ಪತಿಯನ್ನು ನೋಡಿದಳು; ಆತನ ಮುಖದಲ್ಲಿ ಬೇಸರದ ಛಾಯೆಯಿರಲಿಲ್ಲ. ತುಟಿಗಳಲ್ಲಿ ತುಂಟತನದ ನಗೆಯಿತ್ತು.

ಧೈರ್ಯ ತಳೆಯುತ್ತ ಆಕೆ ಕೇಳಿದಳು :

"ಯಾಕೊ ?"

"ನಮಗೊಬ್ಬ ವಂಶೋದ್ಧಾರಕನನ್ನು ತಂದೊಪ್ಪಿಸುವ ವಿಷಯ ನೀವು ಯೋಚಿಸ ಬೇಕು."

ರಾಣಿ ಲಜ್ಜೆಯಿಂದ ಅವನತಶಿರಳಾದಳು. ಅವಳ ಕೆನ್ನೆಗಳು ಕೆಂಪೇರಿದುವು.

ಅದನ್ನು ಕಂಡು ಅರಸ ಸಂತುಷ್ಟನಾಗಿ, ಹುಬ್ಬು ಹಾರಿಸುತ್ತ, ದೃಢನಡಿಗೆಯಿಂದ ಹೊರ ಕೊಠಡಿಗೆ ನಡೆದ.

ಅಲ್ಲಿ ದಿವಾನರು ಕಾದಿದ್ದರು.

೫

ದಿವಾನರಾದ ಲಕ್ಷ್ಮೀನಾರಾಯಣನೂ ಅಪ್ಪಾರಂಡ ಬೋಪಣ್ಣನೂ ಎದ್ದು ನಿಂತು, ಅರಸನಿಗೆ ತಲೆಬಾಗಿ ನಮಿಸಿದರು.

ಚಿಕವೀರರಾಜ ಕೇಳಿದ :

"ಕಾಯಿಸಿದೆವೆ ?"

"ಇಲ್ಲ, ಇಲ್ಲ" ಎಂದ, ಲಕ್ಷ್ಮೀನಾರಾಯಣ.

ಬೋಪಣ್ಣನೆಂದ :

"ದರಬಾರಿನಲ್ಲಿ ಜನ ಮಹಾಸ್ವಾಮಿಯವರ ಹಾದಿ ಕಾಯುತ್ತಾ ಇದಾರೆ."

"ನಡೆಯಿರಿ" ಎಂದ ಅರಸ.

ದಿವಾನರು ಪರಸ್ಪರರ ಮುಖಗಳನ್ನು ನೋಡುತ್ತಲಿದ್ದುದನ್ನು ಗಮನಿಸಿದ ಚಿಕವೀರ ರಾಜ ಕೇಳಿದ :

"ಏನು ?"

"ನೀವು ಹೇಳಿ ಬೋಪಣ್ಣ" ಎಂದ ಲಕ್ಷ್ಮೀನಾರಾಯಣ.

ಬೋಪಣ್ಣ ನುಡಿದ :

"ಅಪ್ಪಾಜಿರಾಜರ ಮಕ್ಕಳ ವಿಷಯ ಪ್ರಜೆಗಳಲ್ಲಿ ಗುಸುಗುಸು ಮಾತು ನಡೀತಿದೆ."

"ಇದು ಅರಮನೆಗೆ ಸಂಬಂಧಿಸಿದ ಸಂಗತಿ ಅಲ್ಲವೆ ?"

"ನಿಜ. ಆದರೂ, ಸಂದೇಹಕ್ಕೆ ಆಸ್ಪದವಿರದ ಹಾಗೆ—"

"ಅವರು ಕೈದಿಗಳಾಗಿದ್ದದ್ದನ್ನ ಬಲ್ಲಿರಿ. ಸೆರೆಮನೆಯಲ್ಲಿ ತೀರಿಕೊಂಡ್ರು. ಯಾರೇನು ಮಾಡೋಕಾಗತದೆ ? ಮಾರಿ ಬೇನೆಗೆ ಬಲಿಯಾದರು. ಈಶ್ವರ ಸಂಕಲ್ಪ—ಕರೆಸಿಕೊಂಡ..."

ದಿವಾನರು ಪರಸ್ಪರರನ್ನು ಮತ್ತೊಮ್ಮೆ ನೋಡಿದರು.

ಬೋಪಣ್ಣನೆಂದ :

"ಕಾಯಿಲೆಯಿಂದ ಸತ್ತರೂಂತ ರಾಜಸಭೆಯಲ್ಲಿ ಖಾವಂದರೇ ಜಾಹೀರು ಮಾಡಿವರೆ ಚೆನ್ನಾಯ್ತದೆ."

"ಅಷ್ಟೇ ತಾನೆ ? ಆಗಲಿ. ಹೋಗೋಣ ಇನ್ನು ?" ಎಂದ ಅರಸ.

ಹೊಸ್ತಿಲನ್ನು ಆತ ದಾಟುತ್ತಲಿದ್ದಂತೆ ಚಾಮರ ಬೀಸುವ ಚಾಕರರು ಇದಿರಾದರು. ರಾಜದಂಡ ಕಾಣಿಸಿಕೊಂಡಿತು. ಸ್ತುತಿಪಾಠಕರು ಪ್ರತ್ಯಕ್ಷರಾದರು.

ಎರಡು ಉಚ್ಚ ಕಂಠಗಳು ಒಂದಾಗಿ ನುಡಿದುವು :

"ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಅಪ್ರತಿಮ ವೀರ ನರಪತಿ ಕೊಡಗು ಸಂಸ್ಥಾನದ ಶ್ರೀ ರತ್ನಸಿಂಹಾಸನಾಧೀಶ್ವರ ಶ್ರೀ ಚಿಕವೀರರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಬಿಜಯಂಗೈಯುತ್ತಿದಾರೆ. ಹುಷಾರ್ ! ಹುಷಾರ್ !!"

ಕೊಂಬು ಕಹಳೆಗಳು ರಾಜನ ಆಗಮನವನ್ನು ಸಾರಿದುವು.

ಚಿಕವೀರರಾಜೇಂದ್ರ ಅಲಂಕೃತ ಸಿಂಹಾಸನವನ್ನು ಏರಿ ಕುಳಿತಂತೆ, ಎದ್ದು ನಿಂತಿದ್ದ ಸಭಾಸದರು ಕರತಾಡನ ಮಾಡುತ್ತಲಿದ್ದಂತೆ, ಉಘೇ ಉಘೇ ಎಂಬ ಜಯಘೋಷ ಧ್ವನಿಸಿ ಪ್ರತಿಧ್ವನಿಸುತ್ತಿದ್ದಂತೆ, ಆರಾಧ್ಯನೊಬ್ಬ ಸ್ವಸ್ತಿಪದವನ್ನಾರಂಭಿಸಿದ.

ಆತನ ಕಂಚಿನ ಕಂಠ ಕೇಳಿಸಿದೊಡನೆಯೇ ಸಭೆ ನೀರವವಾಯಿತು.

"ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ।

ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ॥"

ಆರಾಧ್ಯ ತಲೆಯ ಮೇಲ್ಗಡೆ ಅಂಗೈಗಳನ್ನು ಜೋಡಿಸಿ ವಂದಿಸುತ್ತ ವರ್ತುಲಾಕಾರ ವಾಗಿ ತಿರುಗಿ, ಸ್ವಸ್ಥಾನದಲ್ಲಿ ಆಸೀನನಾದ.

ಸಿಂಹಾಸನದ ಮೇಲೆ ಕುಳಿತ ಚಿಕವೀರರಾಜೇಂದ್ರ ಸುತ್ತಲೂ ದೃಷ್ಟಿಯನ್ನೋಡಿಸಿದ. ಅವನ ಎಡ ಮಗ್ಗುಲ ಸಾಲಿನ ಮೊದಲಲ್ಲಿ ದಿವಾನದ್ವಯರು ಕುಳಿತಿದ್ದರು. ಲಿಂಗರಾಜನ ಕಾಲದಲ್ಲಿ ರಾಜಮಂತ್ರಿಗಳಲ್ಲಿ ಒಬ್ಬನಾಗಿದ್ದು ಮುಂದೆ ಆ ಸ್ಥಾನದಲ್ಲಿರಲು ನಿರಾಕರಿಸಿದ್ದ ಚೆಪ್ಪುಡೀರ ಪೊನ್ನಪ್ಪ ಅವರ ಹಿಂದೆ ತುಸು ದೂರದಲ್ಲಿದ್ದ. ಬೋಪುದಿವಾನನ ಎಡಕ್ಕೆ ಬಸವನಿದ್ದ. ಅವನ ಪಕ್ಕದಲ್ಲಿ ಅರಸನ ಆಪ್ತಕೋಟಿಯಲ್ಲೊಬ್ಬನಾದ ಅಬ್ಬಾಸ್ ಅಲಿಯಿದ್ದ. ಅವರಾಚೆಗೆ ವೈಶ್ಯ ಪ್ರಮುಖರ ಸಂದಣಿ ನೆರೆದಿತ್ತು. ಎದುರು ಮಗ್ಗುಲು ಕೊಡಗು ಸೇನೆಯ ನಾಲ್ವರು ಸರ್ವಕಾರ್ಯಕಾರರಿಂದ ಆರಂಭವಾಗಿತ್ತು. ಬಂಗಾರದ ಅಂಚಿನ ಕಡು ಗೆಂಪು ಬಣ್ಣದ ಶಿರಸ್ತ್ರಾಣವಾದ ಕೊಂಬುಟೊಪ್ಪಿಯನ್ನು ಅವರು ಧರಿಸಿದ್ದರು. ಷರಾಯಿಯ ಮೇಲಣ ಅಂಗಿಗೆ ಕುಪ್ಪಸದ ಕವಚವಿತ್ತು. ಕೆಂಪು ರೇಶ್ಮೆಯ ನಡುಕಟ್ಟನ್ನು ಬಿಗಿದಿದ್ದರು. ಆ ಕಟ್ಟಿನಿಂದ ಬೆಳ್ಳಿಯ ಸರಪಣಿಯ ಪೀಚೆಕತ್ತಿ ತೂಗಾಡುತ್ತಿತ್ತು. ಅಧಿಕಾರಲಾಂಛನದ ಖಡ್ಗಗಳು ಇನ್ನೊಂದು ಪಾರ್ಶ್ವದಿಂದ ನೆಲವನ್ನು ಸೋಂಕುತ್ತಿದ್ದುವು. ಅವರ ಬಲಕ್ಕೆ ಹಲವಾರು ಕಾರ್ಯಕಾರರಿದ್ದರು: ಕೊಡಗರು, ಶಿವಾಚಾರದವರು, ಬಯಲು ಸೀಮೆಯಿಂದ ಬಂದು ಅರಸನ ದಂಡಿನಲ್ಲಿ ಉದ್ಯೋಗಿಗಳಾದ ಗೌಡರು ಹಾಗೂ ಇಬ್ಬರು ಮಾಪಿಳ್ಳೆಯರು. ಅವರ ಹಿಂದೆ ಸಾಲಾಗಿ ಜಮೇದಾರರೂ ಜಮೇದಾರರ ಹಿಂದೆ ನೂರಾರು ಜನ ಚಾವಡಿ ಕಾರರೂ ನಿಂತಿದ್ದರು. ಈ ಸೇನಾ ವಿಭಾಗದ ಬಲ ಪಾರ್ಶ್ವ, ನಾಡ ಪ್ರಮುಖರಾದ ತಕ್ಕರಿಂದ—ಕೊಡವರಿಂದ—ತುಂಬಿತ್ತು. ಈ ಎರಡೂ ಸಾಲುಗಳ ಕೊನೆಯಿಂದ ಮಹಾದ್ವಾರದವರೆಗೆ ಒಳಬರಲು ಶಕ್ತರಾಗಿದ್ದ ರಾಜಧಾನಿಯ ಪ್ರಜೆಗಳೂ ಅವರನ್ನು ಬಳಸಿ ಪಡಿವಳರೂ ದಟ್ಟವಾಗಿ ನಿಂತಿದ್ದರು. ಮಹಾದ್ವಾರದ ಹೊರಗೆ ಅಪಾರ ಜನಸಂದಣಿ ಯಿತ್ತು. ನೆರೆದ ಪ್ರಮುಖರಲ್ಲಿ ಹೆಚ್ಚಿನವರನ್ನು ಮುಖಪರಿಚಯದಿಂದ ಅರಸ ಬಲ್ಲ. ಪಟ್ಟಾಭಿಷೇಕದ ಸಮಯದಲ್ಲಿ ಮುಜುರೆಯೊಪ್ಪಿಸಿದಾಗ ಅವರನ್ನೆಲ್ಲ ಆತ ಕಂಡಿದ್ದ.

ಎಲ್ಲರ ದೃಷ್ಟಿಯೂ ಅರಸನ ಮೇಲೆ ನೆಟ್ಟಿತ್ತು. ಯಾವುದೋ ಮಹತ್ವದ ಕಾರಣ ಕ್ಕಾಗಿ ಈ ರಾಜಸಭೆಯನ್ನು ಕರೆದಿರಬೇಕು ಎಂದು ತರ್ಕಿಸಿದ್ದರು ಕೆಲವರು. ರಾಜ್ಯದ ವಿವಿಧ ಭಾಗಗಳ ಮುಖ್ಯಸ್ಥರೊಡನೆ ನಿಕಟ ಸಂಪರ್ಕ ಹೊಂದಲು ಬಯಸಿ ವಿಶೇಷ ದರಬಾರನ್ನು ಅರಸ ನಡೆಸಿದ್ದಾನೆ, ಎಂದು ಊಹಿಸಿದ್ದರು ಬೇರೆ ಕೆಲವರು. ಲಿಂಗರಾಜನ ದಕ್ಷತೆ ದರ್ಪಗಳ ಅರಿವಿದ್ದ, ಆತನ ಆಡಳಿತವನ್ನು ಮೆಚ್ಚಿಕೊಂಡಿದ್ದ ಪ್ರಜಾಕೋಟಿ ಆ ಅರಸನ ಪುತ್ರನಲ್ಲೂ ಅವೇ ಗುಣಗಳನ್ನು ಕಾಣಲು ಉತ್ಸುಕವಾಗಿತ್ತು.

ರಾಜನ ಸಂಜ್ಞೆಯಂತೆ ಬೋಪಣ್ಣ ಸಿಂಹಾಸನದ ಬಳಿಗೆ ಸಾಗಿದ. ತಗ್ಗಿದ ದನಿಯಲ್ಲಿ ಆತನೇನನ್ನೊ ನುಡಿದಂತೆ ಕಂಡಿತು. ಸಮ್ಮತಿಸೂಚಕವಾಗಿ ಬೋಪಣ್ಣ ತಲೆಯಾಡಿಸಿದಂತೆಯೂ ತೋರಿತು.

ಬೋಪಣ್ಣ ಸ್ವಸ್ಥಾನಕ್ಕೆ ಮರಳಿ ಅಲ್ಲಿ ನಿಂತ. ಅವನ ಅಂಗೈಗಳೆರಡೂ ಒಂದನ್ನೊಂದು ಆತುವು. ಮಧ್ಯವಯಸ್ಸಿಗೆ ಅದೇ ಆಗ ಪದಾರ್ಪಣಮಾಡುತ್ತಲಿದ್ದ ಆತನ ನಿಲುವು ಭವ್ಯವಾಗಿತ್ತು. ಮಾತನಾಡುವುದಕ್ಕೆ ಪೂರ್ವಭಾವಿಯಾಗಿ ಅವನ ದೃಷ್ಟಿ ಸಭೆಯನ್ನೊಮ್ಮೆ ಈಕ್ಷಿಸಿತು.

ಮಹಾದ್ವಾರದ ಬಳಿ ಇನ್ನೂ ಗುಸುಗುಸು ಮಾತು ನಡೆದಿತ್ತು. ಚಾವಡಿಕಾರರು ಕೆಲವರು, "ಶ್ ! ಸದ್ದು—ಸದ್ದು !" ಎಂದು ಗದರಿದರು.

ಸಾಸಿವೆಕಾಳು ಬಿದ್ದರೂ ಸಪ್ಪಳವಾಗುವಂಥ ನೀರವತೆ ನೆಲೆಸಿತು.

ಬೋಪಣ್ಣ ನಿಂತಲ್ಲಿಂದ ತಲೆಯನ್ನು ತುಸು ಬಾಗಿಸಿ ಅರಸನಿಗೆ ನಮಿಸಿದ. ಸಭಿಕರನ್ನು ಉದ್ದೇಶಿಸಿ ಮಾತು ಆರಂಭಿಸಿದ :

"ಕೊಡಗಿನ ಹತ್ತು ಸಮಸ್ತರೇ, ಮಹಾಸ್ವಾಮಿಯವರ ಆದೇಶದಂತೆ ನಾನು ಈಗ ಮಾತನಾಡತಾ ಇದ್ದೇನೆ. ಎಡೆನಾಡು, ಗಡಿನಾಡು, ಏಳುಸಾವಿರ ಸೀಮೆ, ಉಮ್ಮತ್ತನಾಡು, ತಾವುನಾಡು, ನಾಲ್ಕುನಾಡು, ಬೈಂಗುನಾಡು, ಬೆಪ್ಪುನಾಡು, ಕಿಗ್ಗತ್ತನಾಡು ಮುಂತಾದ ಮೂವತ್ತೈದು ನಾಡುಗಳ ತಕ್ಕರು ಇಲ್ಲಿ ನೆರೆದಿದ್ದೀರಿ. ನಮ್ಮ ಸೈನ್ಯದ ಸರ್ವಕಾರ್ಯಕಾರರು, ಕಾರ್‍ಯಕಾರರು, ವರ್ತಕ ಪ್ರಮುಖರು ಇಲ್ಲಿ ಕೂಡಿದ್ದೀರಿ. ಇದರಿಂದ ಮಹಾಸ್ವಾಮಿಯವರಿಗೆ ಸಂತೋಷವಾಗಿದೆ, ನನಗೂ ಸಂತೋಷವಾಗಿದೆ. ಆಳಿದ ಮಹಾಸ್ವಾಮಿ ಲಿಂಗರಾಜ ಒಡೆಯರು ಕಾಲವಾದ ಮೇಲೆ ನಮ್ಮ ರಾಜ್ಯ ಚುಕ್ಕಾಣಿ ಇಲ್ಲದ ಹಡಗಾಗ್ತದೆ ಅಂತ ಭಾವಿಸಿದವರಿದ್ದರು. ಆವರ ಸುಪುತ್ರರಾದ ಚಿಕವೀರರಾಜೇಂದ್ರ ಒಡೆಯರ್ ಬಹದ್ದೂರರು ಪಟ್ಟವೇರಿ, ಪ್ರಜೆಗಳು ನಿರ್ಭಯವಾಗಿರಬಹುದು ಅಂತಲೂ ರಾಜ್ಯದಲ್ಲಿ ಶಾಂತಿ ಸುಭಿಕ್ಷ ನೆಲೆಸ್ತದೆ ಅಂತಲೂ ನಂಬಿಕೆ ಹುಟ್ಟಿಸಿದ್ದಾರೆ. ಮೊನ್ನೆ ಪಟ್ಟಾಭಿಷೇಕವಾದಾಗ ಸನ್ನಿಧಾನದಲ್ಲಿ ತಾವೆಲ್ಲ ನಿಷ್ಠೆಯನ್ನು ಪ್ರಕಟಿಸಿದ್ದೀರಿ. ಇದೇ ರೀತಿಯ ರಾಜಭಕ್ತಿ ಮುಂದೆಯೂ ಇರತದೆ ಅನ್ನೋದರಲ್ಲಿ ಸಂಶಯವಿಲ್ಲ. ಹೆಚ್ಚಿಗೆ ಹೇಳೋದಾದರೂ ಏನುಂಟು ? ಅಂಥದೇನಿದ್ದರೂ ಮಹಾಸ್ವಾಮಿಗಳೇ ಅಪ್ಪಣೆಕೊಡಿಸಬೇಕೂಂತ ತಮ್ಮ ಪರವಾಗಿ ನಾನು ಅರಿಕೆಮಾಡಿಕೊಳ್ಳುತಾ ಇದೇನೆ."

ಸಭೆ ಕರತಾಡನ ಮಾಡಿತು. ಜಯಘೋಷ ಕೇಳಿಸಿತು :

"ಕೊಡಗು ಸಿಂಹಾಸನಾಧೀಶ್ವರ ಚಿಕವೀರರಾಜೇಂದ್ರ ಉಘೇ, ಉಘೇ !"

ಪ್ರಜಾ ಪ್ರಮುಖರ ಮುಂದೆ ತಾನು ಆಡಬೇಕಾದ ಮಾತುಗಳ ಬಗೆಗೆ ಬಹಳ ದಿನಗಳಿಂದ ಚಿಕವೀರರಾಜ ಯೋಚಿಸಿದ್ದ. ಮನಸ್ಸಿನಲ್ಲೇ ಅದೆಷ್ಟೋ ಬಾರಿ ಅಂಥ ಮಾತುಗಳನ್ನು ಆತ ಆಡಿಯೂ ಇದ್ದ. ಆದರೆ ಈಗ, ದಿವಾನ ತನ್ನ ಸ್ಥಾನದಲ್ಲಿ ಕುಳಿತಾಗ, ಸಭಿಕರ ಕರತಾಡನ ಜಯಘೋಷಗಳ ಭೋರ್ಗರೆತದ ಮುಂದೆ, ತನ್ನ ಎಲ್ಲ ವಿಚಾರಗಳೂ ತೇಲಿಹೋದಂತೆ ಅವನಿಗೆ ಅನಿಸಿತು. ಏನೂ ತೋಚುತ್ತಿಲ್ಲವಲ್ಲ—ಎಂದುಕೊಂಡ ಆತ. ಎಷ್ಟು ನಿಶ್ಶಬ್ದ ! ಸಹಸ್ರ ಕಣ್ಣುಗಳು ತನ್ನನ್ನೆ ದಿಟ್ಟಿಸುತ್ತಿರುವುವಲ್ಲ ! ತನ್ನ ಮಾತುಗಳ ನಿರೀಕ್ಷೆಯಲ್ಲೆ ಇವರು ಕುಳಿತಿರುವರಲ್ಲ ! ಎಂದು ಚಿಕವೀರರಾಜ ಕಕ್ಕಾವಿಕ್ಕಿಯಾದ. ನಿಟ್ಟುಸಿ

ರೊಂದು ಅವನಿಂದ ಹೊರಬಿತ್ತು. ತನ್ನೆರಡೂ ಅಂಗೈಗಳನ್ನು ಸಿಂಹಾಸನದ ಮೇಲೆ ಆತ ಬಿಗಿಗೊಳಿಸಿದ. ಧಿಮಿಗುಡುತ್ತಿದ್ದ ಮಿದುಳು ಯಾವುದನ್ನೋ ಅರಸುತ್ತ ಸಾಗಿತ್ತು. ಆ ದೃಶ್ಯ—ತುಂಬಿದ ಸಭೆಯಲ್ಲಿ ಹಿಂದೊಮ್ಮೆ ತನ್ನ ತಂದೆ ಪದಗಳನ್ನು ತೂಗಿ ತೂಗಿ ಆಡು ತ್ತಿದ್ದ ದೃಶ್ಯ. ಆತ ಹೇಗೆ ಆರಂಭಿಸಿದ್ದ ?

"ನನ್ನ ಮಕ್ಕಳೇ !"

ಓ !—ತಾನು ಚಿಕ್ಕವನು. ಹಾಗೆ ಸಂಬೋಧಿಸಬಾರದೆಂದು ನಿರ್ಧರಿಸಿದ್ದೆ, ಅಲ್ಲವೆ ? ಹೇಗೆ ಮತ್ತೆ ?

"ಕೊಡಗಿನ ಪ್ರಜಾ ಪ್ರಮುಖರೇ !"

ಯೋಚಿಸಿದ್ದ ಪದಗಳು ಧ್ವನಿ ತಳೆದು ಹೊರಬಂದಿದ್ದುವು. ಮೌನದ ಕಟ್ಟೆಯೊಡೆಯಿ ತೆಂದು ಉಳಿದ ಪದಗಳೂ ಹೊರಬೀಳತೊಡಗಿದುವು.

"ನಮ್ಮ ಪರಮ ಪೂಜ್ಯ ತಂದೆಯವರ ಸ್ಥಾನದಿಂದ ನಾವು ಈಗ ಮಾತಾಡತಾ ಇದೇವೆ."

['ದೂರವಿರುವವರೆಲ್ಲ ಕತ್ತುಗಳನ್ನು ಮುಂದಕ್ಕೆ ಚಾಚುತ್ತಿದ್ದಾರೆ. ಕೇಳಿಸುತ್ತಿಲ್ಲ. ತಾನು ಸ್ವರವೇರಿಸಬೇಕು.']

"ಸಾಯುವ ಕಾಲಕ್ಕೆ ನಮ್ಮ ತಂದೆ ನಮ್ಮನ್ನ ಕರೆದು ಹೇಳಿದರು : 'ಮಗಾ, ಸಿಂಹದ ಹೊಟ್ಟೇಲಿ ಹುಟ್ಟಿದೀಯಾ. ಸಿಂಹವಾಗಿ ಬಾಳು. ಶೌರ್ಯದಲ್ಲಿ, ಸಾಹಸದಲ್ಲಿ, ಆಡಳಿತ ಸಾಮರ್ಥ್ಯದಲ್ಲಿ ಫರಂಗಿಯವರಿಗಿಂತ ನಾವು ಕಮ್ಮಿ ಇಲ್ಲಾಂತ ತೋರಿಸಿಕೊಟ್ಟಿದೇನೆ. ಆ ದೊಡ್ಡಸ್ತಿಕೇನ ಉಳಿಸ್ಕೊಂಡು ಬಾ.' ಇಲ್ಲಿ ಇದನ್ನ ಯಾಕೆ ಹೇಳತಾ ಇದೇವೆ ಅಂದರೆ, ಕೈಲಾಸವಾಸಿ ತಂದೆಯವರ ದೊಡ್ಡ ದಾರಿಯಲ್ಲಿ ಮುಂದುವರೀಬೇಕು ಅನ್ನುವದೇ ನಮ್ಮ ನಿಶ್ಚಯವಾಗಿದೆ.

[ಕರತಾಡನ. ಇಷ್ಟನ್ನು ಚೆನ್ನಾಗಿ ಹೇಳಿದಂತಾಯ್ತು. ಇನ್ನು ಸುಲಭ.]

"ಪಟ್ಟಾಭಿಷೇಕದ ಕಾಲದಲ್ಲಿ, ಅಂಗ್ರೇಜಿ ಕಡೆಯ ಪ್ರತಿನಿಧಿ ಹಾಜರಿದ್ದದ್ದನ್ನು ನೀವು ಬಲ್ಲಿರಿ. ಅವರ ಖಿಲ್ಲತ್ತುಗಳನ್ನು ನಾವು ಸ್ವೀಕರಿಸಿದೆವು. ಅತಃಪ್ರಾಕು ನಮ್ಮ ದೊಡ್ಡ ತಂದೆ ದೊಡ್ಡವೀರರಾಜರ ಕಾಲದಿಂದ ನಮ್ಮ ರಾಜ್ಯದ್ದೂ ಅಂಗ್ರೇಜಿಯವರದೂ ಸಖ್ಯ ನಡೆದಿದೆ. ಮುಂದೆಯೂ ಆ ಸಖ್ಯಕ್ಕೆ ಊನಬರುವುದಿಲ್ಲ ಅಂತಲೇ ನಾವು ಭಾವಿಸಿದೇವೆ. ಆದರೆ ಕೆಲವು ಜನ ಅಂಗ್ರೇಜಿಯವರು, ನಾವು ಅವರ ಸಾಮಂತರಾಜರು ಅಂಬೋ ಅರ್ಥ ಬರೋಹಾಗೆ ವರ್ತಿಸಿದ್ದಾರೆ. ಇದು ತಪ್ಪು ತಿಳಿವಳಿಕೆಯಿಂದ ಆಗಿರಬಹುದಾದಂಥ ಚೂಕಿ. ಇದನ್ನು ಅವರು ತಿದ್ದಿಕೋತಾರೆ ಅಂತ ನಾವು ನಂಬಿದೇವೆ. ಹಾಲೇರಿ ವಂಶದ ಅರಸರು ಸುಮಾರು ಎರಡು ನೂರು ವರ್ಷ ರಾಜ್ಯಭಾರ ಮಾಡಿಕೊಂಡು ಬಂದಿರತಕ್ಕಂಥಾ ಈ ದೇಶ —ಕೊಡಗು—ಸ್ವತಂತ್ರ ರಾಜ್ಯ ಅಂಬೋದನ್ನ ಯಾವ ಕಾಲಕ್ಕೂ ನಾವು ಮರೀಬಾರದು.

[ಜಯಕಾರ. ಹರ್ಷೋದ್ಗಾರ.]

"ಇನ್ನೊಂದು ವಿಷಯ. ನಮ್ಮ ತಂದೆಯವರು ದೇಶವನ್ನೆಲ್ಲಾ ಅಳೆಸಿ, ಇಂಥಿಂಥಾ ಭೂಮಿಗೆ ಇಷ್ಟಿಷ್ಟು ಕಂದಾಯ ಅಂತ ನಿರ್ಧರಿಸಿದ್ದು ಸರಿಯಷ್ಟೆ ? ಲಿಂಗರಾಜಕೋಲು ಅಂತ ಪ್ರಸಿದ್ಧವಾಗಿರುವ ಆ ಪದ್ಧತಿಯೇ ಇನ್ನು ಮುಂದೆಯಾದರೂ ಜಾರಿಯಲ್ಲಿರತದೆ. ಕ್ಷಾಮಡಾಮರ ಬಂದು ರೈತಾಪಿ ಜನರಿಗೆ ತೊಂದರೆಯಾದರೆ, ನಮ್ಮ ಹಿರಿಯರು ಮಾಡು

ತ್ತಿದ್ದ ಹಾಗೆ ನಾವಾದರೂ ಪರಿಹಾರ ಕೊಡುತ್ತೇವೆ. ಅಲ್ಲದೆ, ಅವರ ಕಾಲದ ಧರ್ಮ ಕಾರ್ಯಗಳೆಲ್ಲ ಯಾವ ಚ್ಯುತಿಯೂ ಇಲ್ಲದೆ ಮುಂದೆಯೂ ನಡೀತವೆ.

[ಸಭಿಕರಿಗೆ ಇದರಿಂದ ಸಂತೋಷ: ಅದಕ್ಕಾಗಿ ಜಯಕಾರ.]

"ನಾಡುಗಳ ಶಾಂತಿ ಸಮೃದ್ಧಿ ತಕ್ಕರಿಗೆ ಸೇರಿದೆ.

[ತಕ್ಕರು ಗೋಣಾಡಿಸುತ್ತಿದ್ದಾರೆ.]

"ಗಡಿ ಬಂದೋಬಸ್ತು ಕಾರ್ಯಕಾರರ ಜವಾಬುದಾರಿಯಾಗಿದೆ.

[ಕಾರ್ಯಕಾರರು, ಹೌದು—ಹೌದು ಎಂದು ತಲೆ ಆಡಿಸುತ್ತಿದ್ದಾರೆ.]

"ನಮ್ಮ ರಾಜ್ಯದ ಗಡಿಯಲ್ಲೆಲ್ಲ ನಿಶಾನಿ ಕಲ್ಲುಗಳನ್ನು ನಾವು ನೆಡಿಸುತ್ತೇವೆ. ಕೊಡಗು ಭದ್ರ ಮುಚ್ಚಳದ ಪೆಟ್ಟಿಗೆಯ ಹಾಗಿರಬೇಕು. ಹೊರಗಿನ ಮಂದಿ ಬಂದು ಭದಿ ಸಂಧಾನ ವನ್ನೋ ಫಿತೂರಿಯನ್ನೋ ನಡೆಸೋದಕ್ಕೆ ಇನ್ನು ಯಾವ ಅವಕಾಶವೂ ಇರುವುದಿಲ್ಲ. ವೈರಿಗಳು ದಂಡೆತ್ತಿ ಬಂದದ್ದೇ ಆದರೆ ನಾವು ಶೂರರಂತೆ ಹೋರಾಡತೇವೆ.

[ಉಘೇ! ಉಘೇ!]

"ಕೊಡವರಲ್ಲಿರುವ ಒಂದು ಗಾದೆಯುಂಟಲ್ಲ. ಆಣ್ ಪೊತ್ತಿತ್ ಚಾವಂಡು.

["ವ್ಹಾ! ವ್ಹಾ!"]

"ಯುದ್ಧದಲ್ಲಿ ಸಾಯುವುದು ಗಂಡಸಾದವನಿಗೆ ತಕ್ಕಂಥಾದ್ದು.

[ಸಾವು ಎಂದೆನೆ? ಇಲ್ಲಿ ಅದರ ಪ್ರಸ್ತಾಪ ಮಾಡಿಬಿಡಬೇಕು. ಧ್ವನಿಯಲ್ಲಿ ವ್ಯಥೆ ತೋರಿಸಬೇಕು.]

"ಈ ಸಂದರ್ಭದಲ್ಲಿ ಒಂದು ದುಃಖದ ಸಂಗತಿ ನಾವು ತಿಳಿಸಬೇಕಾಗಿದೆ. ನಮ್ಮ ದೊಡ್ಡ ತಂದೆ ಕೈಲಾಸವಾಸಿ ಅಪ್ಪಾಜಿ ಅರಸರ ಇಬ್ಬರು ಮಕ್ಕಳು ಮಾರಿಬೇನೆ ಬಡಿದು ತೀರಿಕೊಂಡ್ರು.

["ಹಾ!" ನೂರಾರು ಕಂಠಗಳಿಂದ ಏಕಕಾಲದ ಶೋಕಧ್ವನಿ. ನಂಬದವರೂ ಇರ ಬಹುದು. ಯೋಚಿಸುವುದಕ್ಕೆ ಅವರಿಗೆ ಎಡೆಯನ್ನೇ ಕೊಡಬಾರದು. ಮತ್ತಷ್ಟು ಧ್ವನಿ ಏರಿಸಬೇಕು.]

"ಈ ಸಂಕಟವನ್ನೂ ನಾವು ಸಹಿಸುತ್ತೇವೆ. ಚಿಕ್ಕ ವಯಸ್ಸಲ್ಲೇ ತಂದೆಯನ್ನೂ ಹೆತ್ತ ತಾಯಿಯನ್ನೂ ನಾವು ಕಳಕೊಂಡೆವು. ದೊಡ್ಡ ಹೊರೆಯನ್ನು ನಮ್ಮ ತಲೆಯ ಮೇಲಿಟ್ಟು ಅವರು ಶಿವಾಧೀನರಾಗಿದ್ದಾರೆ. ಆದರೆ ನಮ್ಮ ಪ್ರಜೆಗಳ ಪ್ರೀತಿ ವಿಶ್ವಾಸ ನಿಷ್ಠೆ ಆ ಹೊರೆ ಯನ್ನು ಹೂವಿಗಿಂತಲೂ ಹಗುರ ಮಾಡತದೆ ಅಂತ ನಾವು ನಂಬಿದೇವೆ. ಕಡೆಯದಾಗಿ, ನಮ್ಮ ಪ್ರಜೆಗಳಿಗೆ ನಾವು ಹೇಳತೇವೆ: ನಿರ್ಭಯದಿಂದ ನಿಮ್ಮ ಮನೆಯಲ್ಲಿ ಒಕ್ಕಲಾಗಿ ಬಾಳುತಾ ಇರಿ. ಸಿಂಹದ ಹೊಟ್ಟೆಯಲ್ಲಿ ಹುಟ್ಟಿದ ನಾವು ಸಿಂಹವಾಗಿ ನಿಮ್ಮನ್ನು ಕಾಪಾಡು ತೇವೆ."

[ಮುಗಿದೇ ಹೋಯಿತಲ್ಲ! ದೀರ್ಘ ಕರತಾಡನ. ಜಯಕಾರ.]

ಚಿಕವೀರರಾಜ ತನ್ನ ಬಗೆಗೆ ತಾನು ಸಂತುಷ್ಟನಾದ. ಸಿಂಹಾಸನದ ಕೈಗಳನ್ನು ಹಿಡಿದಿದ್ದ ಅವನ ಅಂಗೈಗಳೀಗ ಸಡಿಲಗೊಂಡುವು; ಮಿಸುಕಿದುವು. ಚಾಮರಗಳು ಬೀಸಿ ತರುತ್ತಿದ್ದ ಗಾಳಿ ಹಿತಕರವಾಗಿ ಕಂಡಿತು...

ಅರಸನ ಮಾತುಗಳನ್ನು ಅತ್ಯಂತ ಎಚ್ಚರದಿಂದ ಕೇಳಿದ ಬೋಪಣ್ಣ ವಿಸ್ಮಿತನಾಗಿದ್ದ.

ನಾಡಪ್ರಮುಖರಲ್ಲಿ ಅಸಮಾಧಾನಕ್ಕೆ ಕಾರಣವಾಗಬೇಕಾಗಿದ್ದ ಅಂಶವೂ—ವೀರಪ್ಪ, ನಂಜುಂಡಪ್ಪರ ಸಾವು—ಮಾತಿನ ಪ್ರವಾಹದಲ್ಲಿ ಹೇಗೆ ಮರೆಯಾಗಿತ್ತು! ಅಂಗ್ರೇಜಿಯವರ ವಿಷಯದಲ್ಲಿ ಅರಸ ಹಾಗೆ ಶಂಕೆ ವ್ಯಕ್ತಪಡಿಸಬಾರದಾಗಿತ್ತು...ಯೌವನಕ್ಕೂ ವಿವೇಕಕ್ಕೂ ನಂಟಿಲ್ಲ—ಅನ್ನೋಣ...ಆದರೂ ಈ ದೊರೆಮಗ ತೋರಿಸಿರುವ ಕೆಚ್ಚು ಸಾಧಾರಣ ವಾದ್ದಲ್ಲ...

ಕರತಾಡನ ಮುಗಿಯುತ್ತ ಬಂದಿತ್ತು. ತನ್ನ ಕರ್ತವ್ಯದ ಬಗೆಗೆ ಜಾಗೃತನಾದ ಬೋಪಣ್ಣ ದಿವಾನ ಲಕ್ಷ್ಮೀನಾರಾಯಣನೊಡನೆ ಪಿಸು ನುಡಿದ:

"ತಕ್ಕರು, ಕಾರ್ಯಕಾರರೆಲ್ಲ ಎರಡು ದಿನ ಇದ್ದು ವೀಳ್ಯ ತಗೊಂಡು ಹೋಗಲಿ ಅಂತ ಅಪ್ಪಣೆ ಕೊಡಿಸೋಣವೊ? ದರಬಾರು ಮುಗಿದಂತಾಯ್ತಲ್ಲ. ಬಿಸಿಲೇರಿದೆ."

"ಹಾಗೇ ಮಾಡಿ" ಎಂದ ಲಕ್ಷ್ಮೀನಾರಾಯಣ, ತನ್ನೆದುರಲ್ಲೇ ಬೆಳೆದು ಅರಸನಾದ ಚಿಕವೀರರಾಜನನ್ನು ಅಚ್ಚರಿ—ಮೆಚ್ಚುಗೆಗಳ ಮಿಶ್ರನೋಟದಿಂದ ನೋಡುತ್ತ.

ದಿವಾನ ಬೋಪಣ್ಣ ಎದ್ದು ಸಿಂಹಾಸನದ ಕಡೆಗೆ ನಡೆದ, ಅರಸನಿಗೆ ಸಲಹೆ ನೀಡಲು.

ಆದರೆ, ಆತ ತೀರ ಹತ್ತಿರಕ್ಕೆ ಬರುವುದಕ್ಕೆ ಮುನ್ನ ಚಿಕವೀರರಾಜನೇ ನುಡಿದ:

"ಇನ್ನು ಏಳಬಹುದು, ಅಲ್ಲವೆ? ಬಂದವರು ಎರಡು ದಿನ ರಾಜಧಾನಿಯಲ್ಲಿರಲಿ. ವೀಳ್ಯ—ಉಡುಗೊರೆಗಳನ್ನು ಸ್ವೀಕರಿಸಿ ತಮ್ಮ ಊರುಗಳಿಗೆ ಹೋಗುವರಂತೆ."

ರಾಜಾಜ್ಞೆ ನ್ಯಾಯೋಚಿತವಾದುದೇ ಆದರೂ ಬೋಪಣ್ಣನ ಪಾಲಿಗೆ ಅನಿರೀಕ್ಷಿತ ವಾಗಿತ್ತು. ಆತ ತಡೆದು ನಿಂತು, ಚುಟುಕಾಗಿ, "ಅಪ್ಪಣೆ" ಎಂದ.

ರಾಜನ ಆದೇಶವನ್ನು ಬೋಪಣ್ಣ ಸಭೆಗೆ ತಿಳಿಸಿದಾಗ, ಮತ್ತೊಮ್ಮೆ ಹರ್ಷೋದ್ಗಾರ ಜಯಕಾರಗಳು ಹುಚ್ಚೆದ್ದು ಕುಣಿದುವು.

ಅರಸ ಎದ್ದು ನಿಂತ. ಕೊಂಬು ತಮಟೆಗಳು ಸದ್ದುಮಾಡಿದುವು. ಸಭೆಯೂ ಎದ್ದು ನಿಂತಿತು. ಜೋಡಿಸಲ್ಪಟ್ಟ ಕೈಗಳನ್ನೂ ಬಾಗಿದ ತಲೆಗಳನ್ನೂ ಚಿಕವೀರರಾಜ ನೋಡಿ, ಮಂದಸ್ಮಿತನಾದ. ಪ್ರತಿವಂದನೆಯೆಂದು ತಲೆಯನ್ನು ತುಸು ಆಡಿಸಿ, ಚಾಮರಗಳನ್ನೂ ರಾಜದಂಡವನ್ನೂ ಹಿಂಬಾಲಿಸುತ್ತ ಸಭಾಭವನದಿಂದ ಅರಮನೆಯ ಒಳಭಾಗಕ್ಕೆ ಆತ ನಿರ್ಗಮಿಸಿದ.

ಮನೆಗೆ ತೆರಳಲು ಅಪ್ಪಣೆ ಕೇಳಲೆಂದು ದಿವಾನದ್ವಯರು ರಾಜನ ಹಿಂದೆ ನಡೆದರು.

ಅನುಮತಿ ಪಡೆದು ಬಂದು, ಪಲ್ಲಕಿಗಳನ್ನೇರಲೆಂದು ಹೊರಗೆ ಸಾಗಿದಾಗ ಬೋಪಣ್ಣ ತನ್ನ ಸಹೋದ್ಯೋಗಿಯೊಡನೆ ಅಂದ:

"ಈ ಅರಸು ಪಂಜರದ ಗಿಣಿಯಲ್ಲ, ಮಾತು ಕಲಿಸಿಕೊಡಬೇಕಾದ ಅಗತ್ಯ ಕಾಣೆ!"

ಲಕ್ಷ್ಮೀನಾರಾಯಣನೆಂದ:

"ಗಿಣಿ ಅಂದಿರಾ? ಅಲ್ಲ, ಗಿಡುಗ. ಆಕಾಶದಲ್ಲಿ ಸ್ವಚ್ಛಂದವಾಗಿ ಹಾರುವ ಪಕ್ಷಿರಾಜ."

೬

ಆ ಸಂಜೆ ಅರಮನೆಗೆ ಬರಬೇಕೆಂದು ಶಂಕರಪ್ಪನಿಗೆ ಕರೆಬಂದಿತ್ತು.

ಹೊಸಳ್ಳಿಯಿಂದ ಹೊರಟ ಆತ ಮಡಕೇರಿಯನ್ನು ತಲಪಿದ್ದು ಸೂರ್ಯನುದಿಸಿ ಎರಡು ಘಳಿಗೆಯಾದಾಗ. ಊರನ್ನು ಬಳಸಿಕೊಂಡು ನಿರ್ಜನ ದಾರಿಯಲ್ಲಿ ಅವನು ಮನೆ ಸೇರಿದ್ದ.

ಗಂಡ ರಾತ್ರಿ ಎದ್ದು ಹೋದ ಬಳಿಕ ಶರಣವ್ವ ಬಹಳ ಹೊತ್ತು ಎಚ್ಚರವಾಗಿಯೇ ಇದ್ದಳು. ಮಲಗಿದ್ದ ಮಕ್ಕಳ ಬಳಿ ಆಕೆ ಗೋಡೆಗೊರಗಿ ಕುಳಿತಳು. ಅಲ್ಲಿಯೇ ತೂಕಡಿಕೆ ಬಂತು. ಒಮ್ಮೆ ಬಾಗಿಲು ತಟ್ಟಿದ ಸದ್ದು ಕೇಳಿಸಿದಂತಾಗಿ ಗಕ್ಕನೆ ಎದ್ದಳು. ಗವಾಕ್ಷಿಯಿಂದ ಹೊರನೋಡಿದಳು. ಯಾರೂ ಇರಲಿಲ್ಲ. 'ಇಲ್ಲ. ನನಗೆ ಭ್ರಮೆ. ಇವರು ಬರುವ ಸುಳಿವಿಲ್ಲ. ಬೆಳಗಾಗತದೋ ಏನೋ. ಮಲಕೊಳ್ಳೋದು ವಾಸಿ' ಎಂದುಕೊಂಡು, ಮಕ್ಕಳ ಮಗ್ಗುಲಲ್ಲಿ ಪವಡಿಸಿದಳು.

ರಾತ್ರೆ ನಿದ್ರಾಭಂಗವಾಗಿದ್ದರೂ ಬೆಳಿಗ್ಗೆ ಎಂದಿನಂತೆ ಬೇಗನೆ ಅವಳಿಗೆ ಎಚ್ಚರವಾಯಿತು. ರಾಜಕಾರ್ಯದಮೇಲೆ ಹೋದ ಗಂಡ ಬಳಲಿ ಬರುತ್ತಾನೆ; ಸ್ನಾನಕ್ಕಿರಲಿ—ಎಂದು ಬಿಸಿನೀರು ಕಾಯಿಸಿದಳು. ಅಕ್ಕಿಯ ಹಿಟ್ಟು ಕಲಸಿ ರೊಟ್ಟಿ ತಟ್ಟಿದಳು.

ಊಹೂಂ. ಬೆಳಗಾದರೂ ಕೈಹಿಡಿದವನ ಸುಳಿವಿಲ್ಲ. ಮಕ್ಕಳೆದ್ದುವು. ಹಿರಿಯವನು ಕೇಳಿದ :

"ಅಪ್ಪಾವರೆಲ್ಲಿ ?"

"ಈಗ ಬರ್ತಾರೆ. ನೀವೆಲ್ಲಾ ಮುಖ ತೊಳಕೊಳ್ಳಿ" ಎಂದಳು ತಾಯಿ.

ಸೂರ್ಯನ ಕಿರಣಗಳು ಮುಡಕೇರಿಯ ಸಂದಿಗೊಂದಿಗಳನ್ನು ಹೊಕ್ಕಾಗ ಶರಣವ್ವನ ಹೃದಯ ಡವಡವನೆ ಹೊಡೆದುಕೊಳ್ಳತೊಡಗಿತು.

ಅಷ್ಟೇ ತೀವ್ರವಾಗಿತ್ತು, ಮತ್ತೆ ಸ್ವಲ್ಪ ಹೊತ್ತಿನಲ್ಲೇ ಗಂಡ ಬಂದಾಗ ಆದ ಆನಂದಾನುಭವ.

ಕುದುರೆಯನ್ನು ಮನೆಯ ಮಾಡದ ಮರೆಯಲ್ಲಿ ಕಟ್ಟುತ್ತ, ಶಂಕರಪ್ಪನೆಂದ :

"ಇವನಿಗೆ ತಿನಿಸು ನೀರು ಕೊಡು."

ಮೊದಲ ಆರೈಕೆ ಬಾಳ್ವೆಯ ಜತೆಗಾರನಾದ ಕುದುರೆಗೆ.

ಗಂಡ ಮೈಗೆ ನೀರೆರೆದುಕೊಳ್ಳುತ್ತಿದ್ದಾಗ ಶರಣವ್ವ ಕೇಳಿದಳು :

"ದೂರ ಹೋಗಿದ್ರಾ ?"

"ಹೂಂ."

"ಭಾರೀ ಜಂಬ್ರನಾ ?"

"ಹೂಂ."

ಇಂಥ ಉತ್ತರವೆಂದರೆ, ವಿವರವಾಗಿ ಮಾತನಾಡಲು ಗಂಡನಿಗೆ ಮನಸ್ಸಿಲ್ಲ, ಅದು ರಹಸ್ಯದ ರಾಜಕಾರ್ಯ, ಎಂದರ್ಥ. ಆಗ ಒತ್ತಾಯಪಡಿಸಿ ಕೇಳುವವಳೂ ಅವಳಲ್ಲ.

ಆದರೂ ತನ್ನ ಮನಸ್ಸಮಾಧಾನಕ್ಕಾಗಿ ಒಂದು ಉತ್ತರದ ಅಗತ್ಯ ಆಕೆಗಿತ್ತು.

"ಏನಾದರೂ ಅಪಾಯವಿತ್ತಾ ?"

"ಅಂಥದೇನಿರ್ಲಿಲ್ಲ" ಎಂದ ಶಂಕರಪ್ಪ.

ಹೆಂಡತಿಯನ್ನು ಆತ ಕೇಳಬೇಕಾಗಿದ್ದ ಒಂದು ಪ್ರಶ್ನೆಯೂ ಇದ್ದಿತು.

"ನನ್ನನ್ನು ಕೇಳ್ಕೊಂಡು ಯಾರಾದರೂ ಬಂದಿದ್ದರಾ ?"

"ಇಲ್ಲ" ಎಂದಳು ಶರಣವ್ವ, ಬಾಳೆ ಎಲೆಯ ಮೇಲೆ ರೊಟ್ಟಿಗಳನ್ನು ಒಟ್ಟುತ್ತಾ.

ಉಪಾಹಾರ ಮುಗಿಸಿದ ಶಂಕರಪ್ಪನಿಗೆ ನಿದ್ದೆಹೋಗುವ ಮನಸ್ಸಾಯಿತು.

"ಇವತ್ತು ದರಬಾರು" ಎಂದು ಹೆಂಡತಿ ನೆನಪು ಮಾಡಿಕೊಡದೇ ಇದ್ದಿದ್ದರೆ ಆತ ನಿದ್ರಿಸಿಯೂ ಬಿಡುತ್ತಿದ್ದ.

ಇಂಥದನ್ನೂ ತಾನು ಮರೆಯೋದು ಅಂದರೆ ? ಶಂಕರಪ್ಪನಿಗೆ ಆಶ್ಚರ್ಯ. ರಾತ್ರೆಯ ಘಟನೆಗಳು ಅಸಮಾನ್ಯವಾಗಿದ್ದುದರಿಂದಲೇ ತಾನು ಹೀಗೆ ಮಂಕಾಗಿದ್ದೇನೆ—ಎಂದುಕೊಂಡ.

ಅವನ ಮಕ್ಕಳಾಗಲೇ ರಾಜರು ಕೊಂದು ತಂದಿದ್ದ ಹೆಬ್ಬುಲಿಗಳನ್ನು ಹತ್ತಿರದಿಂದ ನೋಡಲು ಹೋಗಿದ್ದರು.

ಉಡುಪು ಧರಿಸಿ ಶಂಕರಪ್ಪನೂ ಒಳಕೋಟೆಯ ಕಡೆಗೆ ನಡೆದ.

ಅರಮನೆಯ ಸಂಭ್ರಮ ಅವನ ಮೇಲೆ ಜಾಲ ಬೀಸಿತು. ತನಗಾಗಿದ್ದ ದಣಿವು, ತಾನು ಮಾಡಿದ್ದ ಕಾರ್ಯ, ಎರಡೂ ಶಂಕರಪ್ಪನ ನೆನಪಿನಿಂದ ಮರೆಯಾದುವು. ಸಹಸ್ರ ಜನರಲ್ಲಿ ಒಬ್ಬನಾಗಿ ಉತ್ಸಾಹದಿಂದ ಆತ ಅತ್ತಿತ್ತ ಓಡಾಡಿದ.

ಹಿಂದೆ ಎಳೆಯನಾಗಿದ್ದಾಗ ಶಂಕರಪ್ಪ ತನ್ನ ತಂದೆಯ ಮಗ್ಗುಲಲ್ಲಿ ನಿಂತು ಲಿಂಗರಾಜರ ಪಟ್ಟಾಭಿಷೇಕವನ್ನು ಕಂಡಿದ್ದ. ಮುಂದೆ ಕೆಲ ವರ್ಷಗಳಲ್ಲೇ ತಾನೂ ಚಾವಡಿಕಾರನಾಗಿ ರಾಜಸಭೆಗಳಲ್ಲಿ ಓಡಾಡಿದ್ದ. ಚಿಕವೀರರಾಜರ ಪಟ್ಟಾಭಿಷೇಕದ ಕಾಲಕ್ಕೆ ಆರೇಳು ವರ್ಷಗಳ ತನ್ನ ಹಿರಿಯ ಹೈದನೊಡನೆ ಮಹಾದ್ವಾರದ ಬಳಿ ಪಡಿವಳನಾಗಿ ದುಡಿದಿದ್ದ.

ಅಂತಹ ಸಮಾರಂಭಗಳೆಂದರೆ ಶಂಕರಪ್ಪನಿಗೆ ಎಲ್ಲಿಲ್ಲದ ಉತ್ಸಾಹ. ಜನಸಾಗರದಲ್ಲಿ ಆತನೊಂದು ಅಲೆ. ಇತರರೊಡನೆ ಒಂದಾಗಿ ಕೈತಟ್ಟುವ ; ಜಯಕಾರಗಳನ್ನು ಮಾಡುವ. ಜನಜಂಗುಳಿಯ ಅಂಟುಜಾಡ್ಯಕ್ಕೆ ಅವನು ಸುಲಭ ಬಲಿ. ಸಾರಾಯಿಯ ಅಮಲಿಗಿಂತ ತೀವ್ರತರವಾಗಿರುತ್ತಿತ್ತು ಅಂತಹ ಘಳಿಗೆಯಲ್ಲಿ ಆತ ಅನುಭವಿಸುತ್ತಿದ್ದ ಉತ್ಕಟಭಾವ. ಕೊಂಬು ತಮಟೆಗಳ ಸಪ್ಪಳಕ್ಕೆ ಅವನ ಮೈ ಯಾವಾಗಲೂ ಪುಲಕಗೊಳ್ಳುತ್ತಿತ್ತು.

ಚಿಕವೀರರಾಜೇಂದ್ರ ದರಬಾರನ್ನು ಪ್ರವೇಶಿಸಿ, ವಂದನೆ ಸ್ವೀಕರಿಸಿ, ಸಿಂಹಾಸನದ ಮೇಲೆ ಮಂಡಿಸಿದ ಠೀವಿ ಅವನನ್ನು ಮಂತ್ರಮುಗ್ಧನನ್ನಾಗಿ ಮಾಡಿತು. ಬೋಪಣ್ಣ ಮಾತನಾಡಿದಾಗಲೂ, ಕೆಲ ಮುಖ್ಯ ವಿಷಯಗಳನ್ನು ಕುರಿತು ಅರಸ ಅಪ್ಪಣೆ ಕೊಡಿಸಿದಾಗಲೂ ಶಂಕರಪ್ಪ ಮೈಮರೆತು ತಲೆದೂಗಿದ. 'ಅಣ್ ಪೊತ್ತಿತ್ ಚಾವಂಡು' ಎಂದು ಅರಸನೆಂದಾಗ, ಇತರರ ಜತೆ ತಾನು 'ವ್ಹಾ ! ವ್ಹಾ !' ಎಂದು ಉದ್ಗರಿಸಿದ. ಮೂರಿ ಬೇನೆ ತಗಲಿ ಅಪ್ಪಾಜಿ ಅರಸರ ಮಕ್ಕಳು ಸತ್ತರು ಎಂದು ರಾಜ ತಿಳಿಸಿದಾಗ, ಜನಸಮುದಾಯದೊಡನೆ ತಾನೂ ದುಃಖೋದ್ಗಾರವೆತ್ತಿದ. ಅರಸನ ವೀರೋಚಿತ ಮಾತುಗಳಿಂದ ಅವನ ಬಾಹುಗಳು ಸ್ಫುರಿಸಿದುವು. ಕೊಂಬುತಮಟೆಗಳ ಸದ್ದು ದರಬಾರು ಮುಗಿಯಿತೆಂದು ಸಾರಿದಾಗ, ಅರಸ ನಿರ್ಗಮಿಸಿದಾಗ, ಆವರೆಗಿನ ಅನುಭವಕ್ಕೆ ಕಿರೀಟಪ್ರಾಯವಾಗಿ ಶಂಕರಪ್ಪನ ಕಣ್ಣುಗಳಿಂದ ಆನಂದಬಾಷ್ಪ ಸುರಿಯಿತು.

ದರಬಾರು ಮುಗಿದಮೇಲೆ ಜನಸಂದಣಿ ಬೇರೆ ಬೇರೆ ದಾರಿಗಳಲ್ಲಿ ಹಲವು ಉಪನದಿಗಳಾಗಿ ಹರಿಯಿತು. ಮಕ್ಕಳು ಶಂಕರಪ್ಪನನ್ನು ಕೂಡಿಕೊಂಡರು.

ಸಾಮಾನ್ಯ ಪ್ರಜೆಗಳೆಲ್ಲರ ಪ್ರತಿಕ್ರಿಯೆಯೂ ಒಂದೇ ಆಗಿತ್ತು :

"ತಂದೆಗೆ ತಕ್ಕ ಮಗ !"

ಹಲವರೆಂದರು :

"ಮಹಾಸ್ವಾಮಿಯೇ ಹೇಳಿದಹಾಗೆ ಸಿಂಹದ ಹೊಟ್ಟೆಯಲ್ಲಿ ಹುಟ್ಟಿದ ಸಿಂಹ !"

ಶಂಕರಪ್ಪನದಾದರೂ ಅದೇ ಅಭಿಪ್ರಾಯ.

ಹಾದಿ ಬೇರೆಯಾಗಿ ಶಂಕರಪ್ಪ ತನ್ನ ಮನೆಯ ಕಡೆಗೆ ನಡೆಯತೊಡಗಿದಾಗ ಮಾತ್ರ, ಭಾವೋದ್ವೇಗ ಉನ್ಮಾದಗಳು ಇಳಿದುವು. ಕಳೆದ ರಾತ್ರೆಯ ಘಟನೆಗಳ ನೆನಪು ತನ್ನ ಸ್ಥಾನ ದಲ್ಲಿ ಮತ್ತೆ ವಿರಾಜಮಾನವಾಯಿತು.

ಮನೆ ಸೇರಿದಾಗ ಮಾನಸಿಕವಾಗಿಯೂ ದೈಹಿಕವಾಗಿಯೂ ಆತ ಬಳಲಿದ್ದ.

'ಅಪ್ಪಾಜಿ ಅರಸರ ಮಕ್ಕಳು ಮಾರಿಬೇನೆ ತಗಲಿ ತೀರಿಕೊಂಡ್ರು.'

ಅರಸನಾಡಿದ ಆ ಮಾತು ಈಗ ಬೆತ್ತಲೆಯಾಗಿ ಶಂಕರಪ್ಪನನ್ನು ಅಣಕಿಸಿತು. ಅವನ ತಲೆ ಈಟಿಯ ತೀಕ್ಷ್ಣ ತಿವಿತಗಳಿಗೆ ಗುರಿಯಾಯಿತು.

ಅವನ ಮಕ್ಕಳಾದರೋ ಅಮಿತ ಉತ್ಸಾಹದಲ್ಲಿದ್ದರು. ಅವರು ಮಹಾದ್ವಾರದ ಹೊರಗೇ ನಿಂತು ಸಂಭ್ರಮದಲ್ಲಿ ಭಾಗಿಗಳಾದವರು. ತಾವು ಕಂಡ ಹೆಬ್ಬುಲಿಗಳನ್ನು ಎಷ್ಟು ಬಣ್ಣಿಸಿದರೂ ಅವರಿಗೆ ತೃಪ್ತಿ ಇಲ್ಲ.

ಶರಣವ್ವ ಗಂಡನ ಕಡೆ ನೋಡಿ ಅಂದಳು :

"ಊಟಕ್ಕೆ ನೀಡ್ತೀನಿ. ಉಂಡು, ತುಸು ಅಡ್ಡಾಗುವಿರಂತೆ."

"ಹೂಂ" ಎಂದ ಶಂಕರಪ್ಪ."

...ಮಲಗಿದ ಶಂಕರಪ್ಪನನ್ನು ಗಾಢನಿದ್ರೆ ಆವರಿಸಿತು.

ನಿದ್ದೆಯಲ್ಲಿ ಅವನಿಗೆ ಹೊಸಳ್ಳಿಯ ಕನಸು ಬಿತ್ತು. ತಾನು ಕುದುರೆಯ ಮೇಲೆ ಕುಳಿತಿದ್ದ. 'ಹೊಸಳ್ಳಿಗೆ ನೀನು ಬಂದಿದ್ದನ್ನ ಮರೀಬ್ಯಾಡ !' ಎಂದು ಮಲ್ಲಪ್ಪಗೌಡ ಕೂಗಿ ಹೇಳುತ್ತಿದ್ದ. 'ಹ್ಞ ಹ್ಞ' ಎನ್ನುತ್ತ ತಾನು ಕಡಿವಾಣ ಸಡಿಲಬಿಟ್ಟ. ಕುದುರೆ ನೆಲ ಮುಟ್ಟದೆಯೇ ಹಾರುತ್ತ ಸಾಗಿತು. ಬೆಳಗಾಗುವುದರೊಳಗೆ ದುರ್ಗ ಸೇರಬೇಕು ಎಂಬ ನಿಶ್ಚಯದಿಂದ ಅಶ್ವದ ಪಾರ್ಶ್ವಗಳನ್ನು ಪದೇ ಪದೇ ಪಾದಗಳಿಂದ ತಿವಿದ. ಆದರೂ ಸೂರ್ಯೋದಯವಾಗಿಯೇ ಬಿಟ್ಟಿತು. ರಶ್ಮಿಗಳು ಅವನ ಕಣ್ಣುಗಳನ್ನು ಚುಚ್ಚಿದುವು.

ಶಂಕರಪ್ಪ ಕಣ್ಣು ತೆರೆದ. ಪಶ್ಚಿಮಾಭಿಮುಖನಾಗಿದ್ದ ಸೂರ್ಯನ ಕಿರಣಗಳು ಗವಾಕ್ಷಿಯಿಂದ ಒಳಕ್ಕೆ ತೂರಿ ಬಂದಿದ್ದುವು. ಶರಣವ್ವನ ಸ್ವರ ತಲೆವಾಗಿಲಿಂದ ಕೇಳಿ ಬರುತ್ತಿತ್ತು :

"ಅವರು ಮಲಕೊಂಡವರೆ."

ಅಂಗಳದಿಂದೊಂದು ಒರಟು ಧ್ವನಿ ಅನ್ನುತ್ತಿತ್ತು :

"ನಾನು ಅರಮನೆ ವಾಲೆಕಾರ. ತುರ್ತು ಕೆಲಸ. ಎಬ್ಬರ್ಸಿ."

ಕನಸಿನ ಎತ್ತರದಿಂದ ಸಮತಟ್ಟಾದ ನೆಲಕ್ಕೆ ಆಗಲೇ ಇಳಿದಿದ್ದ ಶಂಕರಪ್ಪ ಹೌಹಾರಿ ಎದ್ದ.

"ಯಾರು ? ಒಳಗ್ಬರ್ರಿ..." ಎನ್ನುತ್ತ ಆತ ತಲೆವಾಗಿಲ ಕಡೆ ನಡೆದ.

ಹೊರಗಿದ್ದ ಮನುಷ್ಯನೆಂದ :

"ನಾನಣ್ಣ. ಅರಮನೆ ವಾಲೆಕಾರ. ಇವತ್ತು ಚಂಜೆನಾಗೆ ನೀವು ಬರಬೈಕಂತೆ. ಮಹಾ ಸ್ವಾಮಿಯವರ ಅಪ್ಪಣೆ. ಓಗಿ ತಿಳಿಸೂಂತ ಕಾರ್‍ಯಕಾರ ಐಯಣ್ಣ ಅಂದ್ರು."

"ಹ್ಞ—ಹ್ಞ...ಬರತೇನೆ, ಬರತೇನೆ" ಎಂದ ಶಂಕರಪ್ಪ.

## ೭

ಕಾಲ್ನಡಿಗೆಯಿಂದ ಅರಮನೆಗೆ ಹೋದ ಶಂಕರಪ್ಪ ಮುಖಮಂಟಪದ ಬಳಿ ಪುಟ್ಟಬಸವನ ಕಣ್ಣಿಗೆ ಬಿದ್ದ.

ಬಸವ ಅರಸನ ಓರಗೆಯವನು. ಅನಾಥನಾಗಿದ್ದರೂ ರಾಜಕುಮಾರನ ಒಡನಾಡಿಯಾಗಿ ಪ್ರಭಾವಶಾಲಿ ವ್ಯಕ್ತಿ ಎನಿಸಿಕೊಂಡವನು. 'ಇವನ ಬುದ್ಧಿ ಬೋ ಚುರುಕು' ಎನ್ನುತ್ತಿದ್ದರು ಜನ ಆತನ ಬಗೆಗೆ.

ಬಸವನನ್ನು ಉದ್ದೇಶಿಸಿ ಶಂಕರಪ್ಪನೆಂದ :

"ಅಡ್ಡಬಿದ್ದೆ."

"ಯಾರೊ ನೀನು ?"

ಬಸವನ ಧ್ವನಿಯಲ್ಲಿ ದರ್ಪವಿತ್ತು.

"ಶಂಕರಪ್ಪ, ಚಾವಡಿಕಾರ."

"ಯಾಕೆ ಬಂದೆ ?"

"ಕಾರ್ಯಕಾರ ಐಯಣ್ಣ ಕರೆಕಳಿಸಿದ್ರು."

ಬಸವನ ಮುಖಭಾವದಲ್ಲಿ ಬದಲಾವಣೆಯಾಯಿತು. ತುಟಿಗಳ ಮೇಲೊಂದು ಮುಗುಳು ನಗೆ ಮಿಂಚಿ ಮಾಯವಾಯಿತು :

"ನೀನಾ ? ಹುಂ...ಇಲ್ಲೇ ಇರು."

ಬಸವ ಅರಮನೆಯ ಒಳಗಡೆಗೆ ಹೊರಟುಹೋದ.

ಶಂಕರಪ್ಪ ಕೊಂಚ ಅಳುಕುತ್ತಲೇ ಬಂದಿದ್ದ. ಐಯಣ್ಣನಿಗೆ ತನ್ನ ಮೇಲೇನಾದರೂ ಸಂದೇಹ ಉಂಟಾಗಿರಬಹುದೇ ಎಂಬ ದಿಗಿಲು. ಮೈಯೆಲ್ಲ ಕಣ್ಣು, ಮೈಯೆಲ್ಲ ಕಿವಿ. ಬಸವ "ನೀನಾ !" ಎಂದಾಗ, ಆ ಧ್ವನಿಯಲ್ಲಿ ಮಾಧುರ್ಯ ಕಂಡಂತಾಗಿ, ಶಂಕರಪ್ಪನ ದುಗುಡ ಸ್ವಲ್ಪ ಕಡಮೆಯಾಯಿತು.

ಆದರದ ಕಾತರ ತುಂಬಿದ ನೋಟದಿಂದ ಅವನು ಐಯಣ್ಣನ ದಾರಿ ಕಾದ.

ಒಂದೋ, ಕೈಗಳಿಗೆ ಬಂಗಾರದ ಕಡಗ ; ಇಲ್ಲವೆ, ಕಾಲುಗಳಿಗೆ ಕಬ್ಬಿಣದ ಸಂಕೋಲೆ...

ಕಾಯುತ್ತ, ಮತ್ತೆ ಮತ್ತೆ ಆತ ತನ್ನಷ್ಟಕ್ಕೆ ಅಂದುಕೊಂಡ :

'ಉಡುಗೊರೆ ಸಿಕ್ಕಿತು ಅಂತ ಸಂತೋಷಪಡುತ್ತೇನೆಯೆ ? ಇಲ್ಲ. ಹಾಗೆಯೇ, ಸಂಕೋಲೆ ಬಿತ್ತು ಅಂತ ನಾನು ವ್ಯಥೆಪಡಬಾರದು.'

"ಬಾ ಶಂಕರಪ್ಪ."

ಹಾಗೆ ಕರೆದವನು ಮುಖಮಂಟಪದಲ್ಲಿ ಕಾಣಿಸಿಕೊಂಡ ಐಯಣ್ಣ. ಮಾರ್ದವತೆ ತುಂಬಿದ ಧ್ವನಿ.

ಪಾದರಕ್ಷೆಗಳನ್ನು ಕಳಚಿ ಶಂಕರಪ್ಪ ಐಯಣ್ಣನನ್ನು ಹಿಂಬಾಲಿಸಿದ.

ಜಗಲಿಯ ಉದ್ದಕ್ಕೂ ನಡೆದು, ಎರಡು ಕೊಠಡಿಗಳನ್ನು ದಾಟಿ, ಗೃಹಾರಾಮದಲ್ಲಿದ್ದ ಲತಾಮಂಟಪವನ್ನು ಅವರು ತಲಪಿದರು.

ಅಲ್ಲಿ ಅರಸ ಆರಾಮಪೀಠದಮೇಲೆ ಆಸೀನನಾಗಿದ್ದ. ತುಸು ದೂರದಲ್ಲಿ ಅವನ ಇಕ್ಕೆಲಗಳಲ್ಲಿ ತಗ್ಗಾದ ಪೀಠಗಳ ಮೇಲೆ ಬಸವನೂ ಅಬ್ಬಾಸ್ ಅಲಿಯೂ ಕುಳಿತಿದ್ದರು.

ಐಯಣ್ಣ ಲತಾಮಂಟಪದ ಬಾಗಿಲನ್ನು ದಾಟಿ ನಾಲ್ಕು ಹೆಜ್ಜೆ ಮುಂದುವರಿದು ನಿಂತ.

ಹೊಸ್ತಿಲ ಹೊರಗೇ, ಶಂಕರಪ್ಪ ಭಕ್ತಿಯಿಂದ ಕೈಜೋಡಿಸಿದ.

ಕಿರೀಟವಿಲ್ಲದ, ನೀಳಕೂದಲನ್ನು ಹಿಂದಕ್ಕೆ ಬಾಚಿದ, ಸಡಿಲವಾದ ನಿಲುವಂಗಿ ತೊಟ್ಟ, ಗೌರಾಂಗನಾದ ದೊರೆ. ಸದಾ ಚಲಿಸುವ ಜಾಗೃತ ಕಣ್ಣಾಲಿಗಳು. ರಾಜನ ಸನ್ನಿಧಿಗೆ ಬಂದು ತಾನು ಪುನೀತನಾದೆ, ಎಂದುಕೊಂಡ ಶಂಕರಪ್ಪ.

ಅರಸ ಕೇಳಿದ :

"ಕರಕೊಂಡು ಬಂದೆಯಾ, ಐಯಣ್ಣ ?"

"ಹೌದು, ಮಹಾಸ್ವಾಮಿ."

ಶಂಕರಪ್ಪನನ್ನು ಕುರಿತು ರಾಜನೆಂದ :

"ಇಲ್ಲಿ ಬಾ."

ಒಲವು ಧ್ವನಿಯಲ್ಲಿ. ಆದರೂ ಶಂಕರಪ್ಪನ ಕಂಕುಳು ಬೆವತಿತು. ಪಾದಗಳೋ ಕೆಳಕ್ಕೆ ಬೇರುಬಿಟ್ಟಿದ್ದುವು.

ಬಸವನೆಂದ :

"ಬಾರಪ್ಪ ಒಳಕ್ಕೆ. ಮಹಾಸ್ವಾಮಿಯವರು ಕರೀತವರೆ."

ಶಂಕರಪ್ಪ ಕಷ್ಟಪಟ್ಟು ಕಾಲುಗಳನ್ನು ಕಿತ್ತು ಮುಂದಕ್ಕೆ ನಡೆದು, ನಡುಬಾಗಿಸಿ ಅರಸನಿಗೆ ನಮಿಸಿದ.

ರಾಜನೆಂದ :

"ನೀನು ನಂಬಿಗಸ್ಥ ಅಂತ ಕೇಳಿದೆವು, ಸಂತೋಷ."

ತನ್ನ ಕೊರಳಿನಿಂದ ಪಚ್ಚೆಕಲ್ಲಿನ ಪದಕವಿದ್ದ ಬಂಗಾರದ ಸರವನ್ನು ಅರಸ ಬಿಚ್ಚಿ ಹಿಡಿದು, ಶಂಕರಪ್ಪನ ಕಡೆಗೆ ಕೈ ಚಾಚಿದ.

"ತಗೋ."

ಶಂಕರಪ್ಪ ದಿಕ್ಕು ತೋಚದೆ ನಿಂತ.

ಅಬ್ಬಾಸ್ ಅಲಿಯೆಂದ :

ಮಹಾಸ್ವಾಮೇರು ಬಹುಮಾನ ಕೊಡತಾ ಅವರೆ. ಇಸಕೋ."

ಎರಡೂ ಅಂಗೈಗಳನ್ನು ಮುಂದಕ್ಕೆ ಚಾಚಿ ಅರಸನಿತ್ತ ಉಡುಗೊರೆಯನ್ನು ಸ್ವೀಕರಿಸಿ ಶಂಕರಪ್ಪ ಮತ್ತೊಮ್ಮೆ ವಂದಿಸಿದ.

ಚಿಕವೀರರಾಜ ನುಡಿದ :

"ಇನ್ನು ಮುಂದೆ ಬೇಹಿನ ಚಾವಡಿಯಲ್ಲಿ ನಿನಗೆ ಕೆಲಸ. ಅರಮನೆಯ ಖಾಸಾ ಚಾಕರನಾಗಿರಬೇಕು, ತಿಳೀತಾ ?"

ಶಂಕರಪ್ಪ ತೊದಲಿದ :

"ತಿಳೀತು ಮಹಾಸ್ವಾಮಿ."

ಅರಸ ಆಪಾದಮಸ್ತಕವಾಗಿ ಶಂಕರಪ್ಪನನ್ನು ದಿಟ್ಟಿಸುತ್ತಿದ್ದಂತೆ ಬಸವನೆಂದ :

"ನಿನ್ನ ಸ್ವಾಮಿಭಕ್ತಿ ನೋಡಿ ಮಹಾಸ್ವಾಮೇರು ಉಡುಗೊರೆ ಕೊಟ್ರು. ನೆಪ್ಪಿರಲಿ. ಅರಮನೆಯ ಅನ್ನ ತಿನ್ನತಾ ಇದೀಯೆ. ನಮಕ್‌ಹರಾಮಿ ಮಾಡಿದಿ ಅಂದರೆ ನಿನಗೆ ಶಾಸ್ತಿ ಆದಾತು. ನಿನ್ನೆ ರಾತ್ರಿ ನಡೆದದ್ದನ್ನ ಯಾರಿಗಾದರೂ ಬಾಯಿಬಿಟ್ಟು ಹೇಳಿದಿ ಅಂದರೆ ನಿನಗೆ ಎಂಥ ಶಿಕ್ಷೆ ಸಿಕ್ಕಾತು ಗೊತ್ತೇನೊ ?"

ಎಂಥ ಕಟು ಮಾತುಗಳು ! ತನ್ನ ಪ್ರೀತಿಯ ರಾಜನ ಪರವಾಗಿ ಯಾರೇ ಆದರೂ ಈ ರೀತಿ ಆಡಬೇಕೆ ? ತನ್ನ ನಿಷ್ಠೆಯನ್ನು ಕುರಿತು ಶಂಕಿಸಬೇಕೆ ಇವರು ? ಭೀತನಾಗಿ ಅಲ್ಲ, ಅವಮಾನಿತನಾಗಿ ಶಂಕರಪ್ಪನ ಮುಖ ಕಪ್ಪಿಟ್ಟಿತು.

ಗದ್ಗದ ಕಂಠದಿಂದ ಅವನೆಂದ :

"ನಮಕ್‌ಹರಾಮಿ ಮಾಡಿದ್ನಿ ಅಂದರೆ ಮಹಾಸ್ವಾಮೇರು ನನ್ನ ಚಕ್ಕಳ ಸುಲಿದು ಎಕ್ಕಡ ಮಾಡಕೋಬಹುದು."

ಅಬ್ಬಾಸ್ ಅಲಿಯೆಂದ :

"ಎಕ್ಕಡವಂತೆ ಎಕ್ಕಡ ! ನಿನ್ನ ತಲೆ ಉರುಳಾತು ಹುಷಾರ್ !"

ಸಣ್ಣನೆ ನಕ್ಕು ಅರಸನೆಂದ :

"ನಮ್ಮ ಸೇವಕರ ವಿಷಯದಲ್ಲಿ ಇಂಥ ನಿಷ್ಠುರ ಮಾತು ಅಗತ್ಯವಿಲ್ಲ, ಅಲ್ಲವೇನಪ್ಪ ? ನೀನು ಇನ್ನು ಹೋಗು. ಐಯಣ್ಣ, ಕೊಟ್ಟಿಗೆಯವನಿಗೆ ಹೇಳಿ ವೀಳ್ಯದೊಟ್ಟಿಗೆ ಸಿಹಿ ಭೋಜನಕ್ಕೆ ಬೇಕಾಗುವ ಸಾಮುಗ್ರಿ, ಈ ಚಾವಡಿಕಾರನಿಗೆ ಕೊಡಿಸು."

ರಾಜ ತೋರಿದ ವಾತ್ಸಲ್ಯ ಶಂಕರಪ್ಪನ ಹೃದಯವನ್ನು ಮುಟ್ಟಿತು. ಆ ಸ್ಪರ್ಶಕ್ಕೆ ಸಂತಸದ ಕಂಬನಿ ಅವನ ಕಣ್ಣುಗಳಲ್ಲಿ ಚಿಮ್ಮಿತು. ನಾಲ್ಕು ಹೆಜ್ಜೆ ಮುಂದೆ ಸರಿದು ಅರಸನ ಅಡಿಗಳಿಗೆ ಎರಗಿ ಎದ್ದು, ಆತ ಐಯಣ್ಣನನ್ನು ಹಿಂಬಾಲಿಸಿದ.

ಕೊಟ್ಟಿಗೆಯಿಂದ ದೊರೆತ ದೊಡ್ಡ ಮೂಟೆಯನ್ನು ಭುಜಕ್ಕೇರಿಸಿ ಶಂಕರಪ್ಪ ತನ್ನ ಗೃಹಕ್ಕೆ ಅಭಿಮುಖವಾಗಿ ತೆರಳಿದ.

ಹೆಜ್ಜೆಗಳು ಹಗುರವಾಗಿದ್ದುವು. ಹಕ್ಕಿಯಂತೆ ಹಾರಬೇಕೆನಿಸಿತು ಅವನಿಗೆ.

ಇದ್ದಕ್ಕಿದ್ದಂತೆ ಬಸವ ಆಡಿದ ಒಂದು ಮಾತು ಅವನಿಗೆ ನೆನಪಾಯಿತು :

'ನಿನ್ನೆ ರಾತ್ರಿ ನಡೆದದ್ದನ್ನ ಯಾರಿಗಾದರೂ ಬಾಯಿಬಿಟ್ಟು ಹೇಳಿದಿ ಅಂದರೆ—!'

ಅದನ್ನು ಶಂಕರಪ್ಪ ಮೆಲುಕು ಹಾಕಿದ. ಒಮ್ಮೆಲೆ ಅವನ ಮುಖ ಬೆಳಗಿತು. ನಕ್ಕು, ತನ್ನಷ್ಟಕ್ಕೆ ಆತನೆಂದ :

'ಅಲ್ಲಾ ! ನಿನ್ನೆ ರಾತ್ರಿ ನಡೆದದ್ದನ್ನ ಯಾರಿಗೇ ಆಗಲಿ ಬಾಯಿಬಿಟ್ಟು ಹೇಳೋದಾದರೂ ಉಂಟಾ ?'

## ೮

ಚಿಕವೀರರಾಜ ಮಡಕೇರಿಯಲ್ಲಿ, ತನ್ನ ದಾಯಾದಿ ಸೋದರರ ಸಾವನ್ನು ರಾಜಸಭೆಯಲ್ಲಿ ಜಾಹೀರು ಮಾಡುತ್ತಲಿದ್ದ ವೇಳೆಯಲ್ಲೇ, ಹೊಸಳ್ಳಿಯ ಮಲ್ಲಪ್ಪಗೌಡನ ಮನೆಯಲ್ಲಿ ವೀರಪ್ಪಾಜಿ ಮೆಲ್ಲಮೆಲ್ಲನೆ ಚೇತರಿಸಿಕೊಳ್ಳುತ್ತಲಿದ್ದ.

ಬೆಳಗಾದೊಡನೆ ಹುಡುಗರು ತಂಗಳುಂಡು, ದನಕರುಗಳನ್ನು ಮೇಯಿಸಲೆಂದು ಒಯ್ದರು. ತೋಟದಲ್ಲಿ ದುಡಿಯಲೆಂದು ಬಂದ ಆಳುಗಳಿಗೆ ದಿನದ ಕೆಲಸವನ್ನಷ್ಟು ಹೇಳಿ ಮಲ್ಲಪ್ಪಗೌಡ, ಮೈ ಸ್ವಸ್ಥವಿಲ್ಲವೆಂದು ಕಾರಣ ಕೊಟ್ಟು, ಮನೆಯಲ್ಲೇ ಉಳಿದ. ಅಕ್ಕವ್ವ ತಾಯ್ತನದ ಕಕ್ಕುಲತೆಯಿಂದ ವೀರಪ್ಪನ ಆರೈಕೆ ಮಾಡಿದಳು.

ಗಂಡನನ್ನು ಅವಳು ಕೇಳಿದಳು :

"ಪಂಡಿತರನ್ನು ಕರೆಸೋದು ಬ್ಯಾಡ ಅಂದಿರಾ ?"

ಹಾಗೆ ಕೇಳಿದುದು ಎರಡನೆಯ ಬಾರಿ.

ಮಲ್ಲಪ್ಪ ಖಚಿತ ಮಾತುಗಳಲ್ಲಿ ಉತ್ತರವಿತ್ತ :

"ಬ್ಯಾಡ ಅಂತ ಒಮ್ಮೆ ಹೇಳಲಿಲ್ಲವಾ ? ಅನ್ನಾಹಾರ ಇಲ್ದೆ ಹಿಂಗಾಗಿದೆ. ಇನ್ನೊಂದು ದಿವಸದ ಒಳಗೆ ಸರಿ ಹೋಗುತಾರೆ."

ಒಳಗಿನ ಸಂಕಟ ಅಕ್ಕವ್ವನನ್ನು ಮಾತಾಡಗೊಟ್ಟಿತು :

"ನಿಮಗೆ ಭಯ. ಕಳಿಸಿಕೊಡೋ ಏಚ್ನೆ ಒಂದನ್ನೆ ಮಾಡತಾ ಇದೀರಾ..."

ಒತ್ತರಿಸುತ್ತಿದ್ದ ಭಾವನೆಗಳನ್ನು ಅದುಮಿ ಮಲ್ಲಪ್ಪನೆಂದ :

"ಸಾಕು. ನಾನೂ ಮನುಸ್ಯನೇ, ಮರ ಅಲ್ಲ."

ತನ್ನ ಮಾತು ಒಂದು ತೂಕ ಹೆಚ್ಚಾಯಿತೆಂದು ವ್ಯಥೆಗೊಂಡು ಅಕ್ಕವ್ವನೆಂದಳು.

"ಏನೋ ಅಂದುಬುಟ್ಟೆ. ಮನಸ್ಸಿಗೆ ಹಚ್ಚಕೋಬ್ಯಾಡಿ. ರಾಜಕಾರ್ಯ ಹೆಣ್ಣು ಹೆಂಗಸಿಗೇನು ತಿಳೀತದೆ ? ನಿಮಗೆ ಹ್ಯಾಗೆ ಸರಿತೋರ್‍ತತೋ ಹಂಗೆ ಮಾಡಿ."

"ಅವರಿಗೆ ಎಚ್ಚರವಾದಾಗ ಹೇಳು. ಒಂದಿಷ್ಟು ಗಂಜಿ ನೀರು ಕುಡಿಸೋಕೆ ನೋಡಾನ."

"ಹೂಂ."

ನಿಂಬೆಹಣ್ಣಿನ ರಸದ ಸೇವನೆಯ ಬಳಿಕ ನಿದ್ದೆ ಹೋದ ವೀರಪ್ಪ ನಾಲ್ಕು ಘಳಿಗೆ ಬಿಟ್ಟು ಪುನಃ ಎಚ್ಚರಗೊಂಡಾಗ, ಅಕ್ಕವ್ವ ಕೇಳಿದಳು :

"ಗಂಜಿ ನೀರು ತರಲಾ ?"

ವೀರಪ್ಪನ ಕಣ್ಣುಗಳು ಶೂನ್ಯ ನೋಟದಿಂದ ಅಕ್ಕವ್ವನನ್ನು ದಿಟ್ಟಿಸಿ, ಬಳಲಿ, ಮತ್ತೆ ಮುಚ್ಚಿಕೊಂಡುವು—ಕ್ಷಣ ಹೊತ್ತು. ಹೊರಳುವ ಶಕ್ತಿ ಇರಲಿಲ್ಲ ಆ ನಾಲಿಗೆಗೆ. ಒಣಗಿ ಹಿಪ್ಪೆಯಾಗಿದ್ದ ತುಟಿಗಳಷ್ಟೇ ಏನನ್ನೋ ಬಯಸಿ ಚಲಿಸಿದುವು.

ಗಂಡನನ್ನು ಅಕ್ಕವ್ವ ಒಳಕ್ಕೆ ಕರೆದಳು. ಆಕೆಯೂ ಮಲ್ಲಪ್ಪನೂ ಬಾಳೆಎಲೆಯ ಕಿಣ್ಣದಲ್ಲಿ ತುಸು ಗಂಜಿನೀರನ್ನು ವೀರಪ್ಪನಿಗೆ ಕುಡಿಸಿದರು.

ಎರಡು ಗುಟುಕು ಒಳಗೋಗಿತ್ತಷ್ಟೆ. ಇನ್ನು ಬೇಡವೆಂದು ಆ ಜೀವ ತಲೆಯಲ್ಲಾಡಿಸಿತು.

ಮತ್ತೆ ನಿದ್ದೆ.

ಮಧ್ಯಾಹ್ನ ಮಲ್ಲಪ್ಪ ಉಂಡ. ಅಕ್ಕವ್ವನೂ ಊಟದ ಶಾಸ್ತ್ರ ಮುಗಿಸಿದಳು.

ಸಂಜೆ ವೀರಪ್ಪನಿಗೆ ಎಚ್ಚರವಾದಾಗ ನಿಶ್ಶಕ್ತಿಯಿಂದ ಮುಖ ಮ್ಲಾನವಾಗಿದ್ದರೂ, ಬಳಲಿಕೆ ಪರಿಹಾರವಾದ ಕಳೆ ಇತ್ತು. ಮಲ್ಲಪ್ಪನನ್ನೂ ಅಕ್ಕವ್ವನನ್ನೂ ದಿಟ್ಟಿಸಿ ನೋಡಿದ ಬಳಿಕ, ವೀರಪ್ಪನ ಹಣೆ ನಿರಿಗೆಗಟ್ಟಿತು. ತಲೆಯನ್ನು ಅತ್ತಿತ್ತ ಹೊರಳಿಸಲೆತ್ನಿಸುತ್ತ ಆತ ಯಾರನ್ನೋ ಅರಸುತ್ತಿದ್ದ...

"ನೀರು."

ಸ್ಪಷ್ಟವಾಗಿ ಕೇಳಿಬಂತು ಪದ.

ಮಗುವಿಗೆ ಹಾಲುಣಿಸುವ ಗಿಂಡಿಯಲ್ಲಿ, ಕಾಸಿ ತಣಿಸಿದ ನೀರನ್ನು ಅಕ್ಕವ್ವ ಕುಡಿಸಿದಳು.

ಕುಡಿದು ಸ್ವಲ್ಪ ಹೊತ್ತಿನ ಬಳಿಕ ವೀರಪ್ಪನ ಗಂಟಲಲ್ಲಿ ಗೊರಗೊರ ಸದ್ದಾಯಿತು. ದಂಪತಿ ಕಾತರಗೊಳ್ಳುತ್ತಿದ್ದಂತೆಯೇ ವೀರಪ್ಪನ ನಾಲಿಗೆ ಮಿಸುಕತೊಡಗಿ ಕ್ಷೀಣ ಧ್ವನಿ ಕೇಳಿಸಿತು :

"ನಂಜುಂಡ ಎಲ್ಲಿ ?"

ಮಲ್ಲಪ್ಪನೆಂದ :

"ಅವರು ಇಲ್ಲಿಲ್ಲ. ನೀವು ನಿಶ್ಚಿಂತೆಯಾಗಿರಬೇಕು."

"ಇದು ಬಂದೀಖಾನೆ ಅಲ್ಲ ?"

"ಅಲ್ಲ, ಹಿತವರ ಮನೆ."

ಹಾಗೆಂದು ತಾನಾಗಲೇ ಊಹಿಸಿದ್ದೆ ಎನ್ನುವಂತಿತ್ತು ವೀರಪ್ಪನ ಮುಖಭಾವ.

ಕಾಲದ ಮರೆಯಲ್ಲಿ ಅಡಗಿದ್ದುದನ್ನು ಕೆದಕಿ, ಕಳೆದ ಘಟನೆಗಳನ್ನು ನೆನಪಿಗೆ ತಂದುಕೊಳ್ಳಲು ಆತ ಯತ್ನಿಸಿದ. ಎಲ್ಲವೂ ಮಸಕುಮಸಕಾಗಿತ್ತು. ತೃಪ್ತಿಯಾಗಲಿಲ್ಲ. ಯೋಚಿಸಲು ಮಾಡಿದ ಯತ್ನದಿಂದ ಅವನಿಗೆ ದಣಿವಾಯಿತು. ಮಂಪರು ಬಂದಂತಾಗಿ ನಿದ್ದೆ ಆವರಿಸಿತು.

ಸಂಜೆಯಾಯಿತು. ಆಳುಗಳು ವರದಿಯೊಪ್ಪಿಸಿ ತೆರಳಿದರು. ದನಕರುಗಳು ಹಟ್ಟಿಗೆ ಬಂದುವು. ಹುಡುಗರು ಉಂಡು ಮಲಗಿದರು.

ಆ ಇರುಳು ಮಲ್ಲಪ್ಪ ಅಕ್ಕವ್ವರ ಪಾಲಿಗೆ ಅರ್ಧ ಎಚ್ಚರದ ಅರ್ಧ ನಿದ್ರೆಯ ರಾತ್ರೆ. ಮೊದಲು ಇಬ್ಬರೂ ಮಗ್ಗುಲಲ್ಲಿ ಕುಳಿತರು. ಬಳಿಕ ಒಬ್ಬರಾದ ಮೇಲೊಬ್ಬರು ಸರದಿಯಾಗಿ ಕಾವಲಾದರು.

ವೀರಪ್ಪನದು ಗಾಢ ನಿದ್ರೆ. ಬೆಳಗಿನ ಜಾವವಷ್ಟೇ ಆತ ಎಚ್ಚರಗೊಂಡ. ದೀಪದ ಬೆಳಕಿನಲ್ಲಿ ತೂಕಡಿಸುತ್ತ ಕುಳಿತ ಮಲ್ಲಪ್ಪನನ್ನು ನೋಡಿ ಆತ ಕೇಳಿದ :

"ಎಷ್ಟನೇ ಪ್ರಹರ ?"

"ಕೋಳಿ ಕೂಗಿಯಾಯಿತು" ಎಂದ ಮಲ್ಲಪ್ಪ.

"ನಂಜುಂಡ ಇಲ್ಲ ಅಲ್ಲವಾ ?"

"ಇಲ್ಲ, ಸೋಮಿಯೋರೆ. ಏನಾರ ಬೇಕೆ ?"

"ಬೇಡ."

ಮಲ್ಲಪ್ಪನಿಗೆ ಧೈರ್ಯ ಬಂತು. ಇನ್ನು ಅಪಾಯವಿಲ್ಲ ; ಈ ಹಗಲು ಈತ ಎದ್ದು ಕುಳಿತುಕೊಳ್ಳುತ್ತಾರೆ—ಎನಿಸಿತು.

ಬೆಳಿಗ್ಗೆ ವೀರಪ್ಪ ಹಕ್ಕಿಗಳ ಇಂಚರಕ್ಕೆ ಕಿವಿಗೊಟ್ಟ. ಹಸು ಹೋರಿಗಳು ಹಟ್ಟಿಯಿಂದ ಅಂಬಾ ಅಂದುವು. ದೂರದಲ್ಲೆಲ್ಲೋ ಹೊಲದ ಅಂಚಿನಲ್ಲಿ ಯಾವನೋ ಹಾಡುತ್ತಿದ್ದ. ಕ್ಷೀಣವಾಗಿ ಕೇಳಿಸುತ್ತಿದ್ದ ಆಲಾಪನೆ ಸುಶ್ರಾವ್ಯವಾಗಿತ್ತು. ಪದಗಳು ಸ್ಪಷ್ಟವಾಗಿರಲಿಲ್ಲ.

ಮಲ್ಲಪ್ಪ ಹತ್ತಿರ ಬಂದಾಗ, ತಾನು ಏಳಬೇಕು, ಶೌಚಕ್ಕೆ ಹೋಗಬೇಕು—ಎಂದು ವೀರಪ್ಪ ಸನ್ನೆ ಮಾಡಿದ.

"ಸೋಮಿಯೋರು ಏಳಬಾರ್ದು" ಎಂದ ಮಲ್ಲಪ್ಪ.

ಅಕ್ಕವ್ವ ಮಣ್ಣಿನ ಮಡಕೆಯನ್ನು ತಂದಿರಿಸಿ ಕದವೆಳೆದುಕೊಂಡು ಹೊರಟುಹೋದಳು...

...ವೀರಪ್ಪನಿಗೆ ಸ್ವಲ್ಪ ಹಾಯೆನಿಸಿತು.

ಕಣ್ಣೆವೆಗಳನ್ನು ಮುಚ್ಚಿಯೇ ಒಂದೆರಡು ಸಾರೆ ನೀಳವಾಗಿ ಉಸಿರೆಳೆದು ಬಿಟ್ಟು, ವೀರಪ್ಪನೆಂದ :

"ಶಿವಗೆ ಕರುಣೆ ಇಲ್ಲ. ಸಾವು ಬರಲಿ ಎಂದಿದ್ದೆ ; ಆದರೂ ಬದುಕಿ ಉಳಿದೆ."

ಕಂಪಿಸುವ ಧ್ವನಿಯಲ್ಲಿ ಮಲ್ಲಪ್ಪನೆಂದ :

"ಹಂಗೆಲ್ಲ ಮಾತಾಡ್ಬಾರದು ಸೋಮಿಯೋರು."

"ನಂಜುಂಡ ಶಿವಪಾದ ಸೇರಿದ, ಅಲ್ಲವಾ ?"

"ಎಲ್ಲಾ ಅವನ ಚಿತ್ತ. ನಮ್ಮ ಕೈಯಾಗೇನೈತೆ ?"

"ನೀವು—ನೀವು ಯಾರು ?"

"ನೀವು ಅನಬೇಡಿ, ಒಡೆಯ. ನಾನು ಮಲ್ಲಪ್ಪ—ಜಮ್ಮ ಕೊಡವ."

"ಹೂಂ...ಎಲ್ಲಿಯ ಒಡೆಯ ? ಎಲ್ಲಿಯ ಸೇವಕ ? ಯಾವ ಜನ್ಮದ...ಋಣಾನು ಬಂಧವೊ ಇದು ?"

ವೀರಪ್ಪನ ಕಣ್ಣುಗಳಿಂದ ಕಂಬನಿ ಸುರಿಯಿತು ; ಎರಡೂ ಬದಿಗಳಲ್ಲಿ ಹರಿದು ಕಿವಿಗಳನ್ನು ತೋಯಿಸಿತು. ಮಲ್ಲಪ್ಪ ತನ್ನ ಉತ್ತರೀಯದಿಂದ ಕಣ್ಣೀರನ್ನು ಒರೆಸಿದ.

"ಸೋಮಿಯೋರು ಅಳಬಾರದು. ಜೀವಕ್ಕೆ ತ್ರಾಸ ಆಗತದೆ..."

ತನ್ನ ಕಣ್ಣುಗಳೂ ಹನಿಗೂಡಿದ್ದುದನ್ನು ಮಾತ್ರ ಮಲ್ಲಪ್ಪ ಗಮನಿಸಲಿಲ್ಲ.

ವೀರಪ್ಪ ಅಳು ನಿಲ್ಲಿಸಿದ. ಆದರೆ ಆಹಾರ ಸೇವಿಸಲೊಪ್ಪಲಿಲ್ಲ. ಒಂದಿಷ್ಟು ದ್ರವ ಆಹಾರವಾದರೂ ಹೊಟ್ಟೆಯನ್ನು ಸೇರದಿದ್ದರೆ, ಆ ದೇಹಕ್ಕೆ ತ್ರಾಣಬರುವ ಬಗೆ ಹೇಗೆ ?

ಮಲ್ಲಪ್ಪನೂ ಅಕ್ಕವ್ವನೂ ಪರಿಪರಿಯಾಗಿ ಕೇಳಿಕೊಂಡರು. ಆತ ನೀಡಿದುದೊಂದೇ ಉತ್ತರವನ್ನು :

"ನನಗೇನೂ ಬೇಡ. ನಾನು ಶಿವಪಾದ ಸೇರಬೇಕು."

ರಾಜಛಲ. ಇದೊಳ್ಳೆಯ ಆಪತ್ತು ಬಂತೆಂದು ಮಲ್ಲಪ್ಪ ದಂಪತಿ ಕಳವಳಗೊಂಡರು.

ಕಡೆಯಲ್ಲಿ ಕಣ್ಣಲ್ಲಿ ನೀರು ತಂದುಕೊಂಡು ಅಕ್ಕವ್ವ ಅಂದಳು :

"ಹಂಗಾರೆ ನಾವೂ ಅನ್ನ ನೀರು ಬಿಡತೀವು."

"ಅದೇ ಸರಿ" ಎಂದ ಮಲ್ಲಪ್ಪ.

ಗೋಡೆಗೊರಗಿ ಕುಳಿತ ಮಲ್ಲಪ್ಪ ಅಕ್ಕವ್ವರನ್ನು ವೀರಪ್ಪ ಒಂದೇ ಸಮನೆ ದಿಟ್ಟಿಸಿದ.

ಇವರನ್ನು ಸಂಕಟಕ್ಕೆ ಗುರಿಮಾಡಲು ಯಾವ ಅಧಿಕಾರ ತನಗೆ ?

ವೀರಪ್ಪ ತನ್ನ ನಿರ್ಧಾರವನ್ನು ಬಿಟ್ಟುಕೊಟ್ಟ.

ಸಂಜೆಯ ವೇಳೆಗೆ, ತಾನು ಬದುಕಿ ಉಳಿದ ಬಗೆಯನ್ನು ತಿಳಿಯುವ ಕುತೂಹಲ ವೀರಪ್ಪನಿಗೆ ಉಂಟಾಯಿತು.

"ನಂಜುಂಡ ಸತ್ತಾಗ ನನಗೆ ಪ್ರಜ್ಞೆ ಇರಲಿಲ್ಲಾಂತ ಕಾಣತದೆ."

"ಹ್ಞ, ಸೋಮಿಯೋರೆ."

"ರಾತ್ರೆ ಹೊತ್ತು."

"ಹ್ಞ, ಇಬ್ಬರನ್ನೂ ಮಹಾದೇವ ಕರಕೊಂಡ ಅಂತ ಕಾಡಿಗೆ ಸಾಗಿಸಿದ್ರು."

"ಅಲ್ಲಿ ನೀನು ನನ್ನ ಕಂಡೆಯಾ ?"

"ಇಲ್ಲ, ಕಾಡಿಗೆ ಕೊಂಡುಹೋದವರಲ್ಲಿ ಒಬ್ಬ ನನ್ನ ಬಂಧು. ಶಂಕರಪ್ಪ ಅಂತ. ಚಾವಡಿಕಾರ. ಅವ ನಿಮ್ಮನ್ನ ಇಲ್ಲಿಗೆ ತಂದು ಬಿಟ್ಟ."

ಕಾಡುಮೃಗಗಳಿಗೆ ತುತ್ತಾಗುವುದು ತಪ್ಪಿತ್ತು.

ಆಯುಸ್ಸು ಮುಗಿದಿರಲಿಲ್ಲವೇನೊ ಪಾಪಿಯಾದ ತನಗೆ...ತಲೆದಂಡ ತೆರಬೇಕಾದ ಸಂಭವವಿದ್ದರೂ ಈ ಸಾಮಾನ್ಯ ಜನ ತನ್ನ ನೆರವಿಗೆ ಬಂದರಲ್ಲ ?

ಅಷ್ಟು ಸ್ವಲ್ಪ ಸಂಭಾಷಣೆಯೂ ವೀರಪ್ಪನಿಗೆ ಆಯಾಸವನ್ನುಂಟುಮಾಡಿತು. ಆತ ನಿದ್ದೆಗೆ ಶರಣುಹೋದ.

೬

"ಅಕಟಕಟ ! ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ ! ಶಿವ ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ ? ಏಕೆ ಹುಟ್ಟಿಸಿದೆ ?"

—ನರಳಾಟದ ಹಿನ್ನೆಲೆಯಲ್ಲೆ ಬಿಡಿ ಬಿಡಿಯಾಗಿ ಬರುತ್ತಲಿದ್ದ ಪದಗಳು.

ನಿದ್ದೆಯ ಪರದೆ ಹರಿಯತೊಡಗಿದಾಗ, ತನ್ನ ಪತ್ನಿ ಹಾಡುತ್ತಿರಬೇಕು—ಎಂದು ಕೊಂಡ ಮಲ್ಲಪ್ಪ. ತಕ್ಷಣವೆ, ಅಲ್ಲ—ಕ್ಷೀಣವಾಗಿದ್ದರೂ ಇದು ಗಂಡಸಿನ ಗಂಟಲು ಎನ್ನಿಸಿತು. ಆತ ಕಂಬಳಿಯನ್ನು ಸರಿಸಿ ಎದ್ದು ಕುಳಿತು ಕಣ್ಣು ಹೊಸಕಿಕೊಂಡ.

ವಚನದ ಧ್ವನಿ ಬರುತ್ತಲಿದ್ದುದು ತನ್ನ ಕೊಠಡಿಯಿಂದಲೇ. ನುಡಿಯುತ್ತಿದ್ದವನು ವೀರಪ್ಪ.

ಒಳಗಿನ ಅಳಲೆಲ್ಲ ಬಿಸಿಯುಸಿರಿನೊಡನೆ ತುಣುಕು ತುಣುಕಾಗಿ ಹೊರಬೀಳುತ್ತಿತ್ತು.

"ಎಚ್ಚರವಾಯ್ತಾ ಮಲ್ಲಪ್ಪ ?"

"ಹೂಂ, ಸೋಮಿಯೋರೆ."

ಏಳಲೆತ್ನಿಸಿದ ವೀರಪ್ಪ ಶಕ್ತಿ ಸಾಲದೆ, ದಿಂಬನ್ನು ಗೋಡೆಗೆ ಸರಿಸಿ, ಒರಗಿ ಕುಳಿತಿದ್ದ. ಅದನ್ನು ಕಂಡು ಮಲ್ಲಪ್ಪನೆಂದ :

"ಇನ್ನೆರಡು ದಿವಸ ಸೋಮಿಯೋರು ಶ್ರಮಪಡಬಾರದು. ಜೀವ ಹಣ್ಣಾಗದೆ."

"ಹ್ಞ, ಮಲ್ಲಪ್ಪ. ಹಣ್ಣಾಗಿದೆ; ಹೀಚುಗಾಯಿಯೇ ಹಣ್ಣಾಗಿದೆ. ಆದರೆ ಉದುರಲೊಲ್ಲದು, ಉದುರಲೊಲ್ಲದು."

"ಸೋಮಿಯೋರು ಸಂತೋಸ್ವಾಗಿರಬೇಕು."

"ಯಾಕಾಗಿ ಸಂತೋಷ, ಮಲ್ಲಪ್ಪ ? ಭೂಮಿಯ ಮೇಲಿನ ನನ್ನಾಟ ಇನ್ನೂ ಮುಗೀವಲ್ಲದು ಎಂದೆ ?"

"......"

"ಒರಗಿ ಕೂತಿದ್ದೆ. ಎಳಮೆಯಲ್ಲಿ ಅಯ್ಯನವರು ಹೇಳಿಕೊಟ್ಟಿದ್ದ ವಚನಗಳು ನೆನಪಾದುವು. ಅನ್ನುತ್ತಾ ಇದ್ದೆ. ಇದರಿಂದಲೇ ಜೀವದ ಸಂಕಟ ಶಮನವಾಗಬೇಕು, ಮಲ್ಲಪ್ಪ."

"ನಾನು ಪಾಮರ, ಸೋಮಿಯೋರೆ. ನನಗೆ ಇದೇನು ಅರ್ಥವಾಗತದೆ ?"

"ಅರಿದೆವು, ಅರಿದೆವು—ಎಂಬಿರಿ. ಅರಿದ ಪರಿ ಎಂತು ಹೇಳಿರೆ ? ಅರಿದವರು ಅರಿದೆವೆಂಬರೆ ?—ಇದೂ ಒಂದು ವಚನ, ಮಲ್ಲಪ್ಪ. ಮಹಾದೇವನ ಮಹಿಮೆಯನ್ನು ಪೂರ್ತಿಯಾಗಿ ತಿಳಿದ ಮಾನವರುಂಟೆ ?"

ಮಲ್ಲಪ್ಪ ಎದ್ದು ನಿಂತ. ಯೋಚಿಸುವುದಕ್ಕೆ ಮುನ್ನವೇ ಆತ ಬಾಗಿ ವೀರಪ್ಪನಿಗೆ ನಮಸ್ಕರಿಸಿದ.

"ಯಾಕೆ ? ಯಾಕೆ ?"

"ನಾನು ಚಾಕರ. ಒಡೆಯರ ಅಡಿಮುಟ್ಟೋದು ನನ್ನ ಧರ್ಮ."

"ಒಡೆಯ—ಚಾಕರ. ಅದೇ ಮಾತು, ಮತ್ತೆ. ನಾವಿಬ್ಬರೂ ಮೇಲಿರುವ ಶಿವನ ಅಡಿ ಮುಟ್ಟಬೇಕು ಕಂಡೆಯಾ, ಮಲ್ಲಪ್ಪ ?"

ಅಕ್ಕವ್ವ, ಈ ಮಾತುಕತೆಗೆ ಕಿವಿಗೊಡುತ್ತ, ಹೊರಗೆ ನಿಂತಿದ್ದಳು. ಮುಂಜಾವದಲ್ಲಿ ತಾನೆದ್ದ ಸ್ವಲ್ಪ ಹೊತ್ತಿನಿಂದ ವೀರಪ್ಪ ನುಡಿಯುತ್ತಿದ್ದ ವಚನಗಳನ್ನು ಆಕೆ ಆಲಿಸಿದ್ದಳು. ದೊರೆಮಗನ ವರ್ತನೆ ಆವಳಿಗೆ ವಿಚಿತ್ರವೆನಿಸಿತ್ತು.

ಅವಳು ಮೆಲ್ಲನೆ ಅಂದಳು :

"ನೀರು ಕಾದಿದೆ. ತರಲಾ ?"

ವೀರಪ್ಪನೆಂದ :

"ಬಚ್ಚಲತನಕ ಹೋಗುವ ಆಸೆ. ಸ್ವಲ್ಪ ಕೈ ಹಿಡಿಯಬೇಕಲ್ಲ, ಮಲ್ಲಪ್ಪ."

"ಎತ್ತಿಕೊಂಡು ಹೋಗತೀನಿ, ಸೋಮಿಯೋರೆ."

"ಬೇಡ. ಭುಜದ ಆಸರೆ ಕೊಟ್ಟರಾಯಿತು."

ವೀರಪ್ಪ ನಾಲ್ಕು ಹೆಜ್ಜೆಗಳನ್ನಿಡಲು ಮಲ್ಲಪ್ಪನೊಬ್ಬನದೇ ಅಲ್ಲ, ಅಕ್ಕವ್ವನ ಸಹಾಯವೂ ಬೇಕಾಯಿತು. ಬಾಧೆ ಕಳೆದು, ಮುಖ ತೊಳೆಸಿಕೊಂಡು, ಮೈಗಿಷ್ಟು ನೀರನ್ನು ಹನಿಯಿಸಿ ವೀರಪ್ಪ ಕೊಠಡಿಗೆ ಮರಳಿದ.

ಅಕ್ಕವ್ವನನ್ನು ಕುರಿತು ಅವನೆಂದ :

"ಅವ್ವಾ, ನನ್ನ ಪಾಲಿಗೆ ತಾಯಿಯಾಗಿ ನೀನು ಬಂದೆ. ಭೂಮಿಗೆ ಭಾರವಾದವನು ನಿನಗೆ ಹೊರೆಯಾಗಲಿಲ್ಲ, ಅಲ್ಲವಾ ?"

ಕಂಠ ಬಿಗಿದಂತಾಗಿ ಪ್ರತಿ ಮಾತೇನನ್ನೂ ಅಕ್ಕವ್ವ ಹೇಳದೇ ಹೋದಳು...

ಅಂದು ಮಲ್ಲಪ್ಪ ಆಳುಗಳೊಡನೆ ತಾನೂ ತೋಟದ ಕೆಲಸಕ್ಕೆ ಹೋದ.

ಹುಡುಗರೋ ಆಳುಗಳೋ ಯಾರೋ ನುಡಿದು, ಮಲ್ಲಪ್ಪನ ಮನೆಗೆ ನೆಂಟರು ಬಂದಿರುವರೆಂಬ ಸುದ್ದಿ ಹಬ್ಬಿತ್ತು. ಸಂಧಿಸಿದ ಒಬ್ಬಿಬ್ಬರು ಕೇಳಿಯೂ ಕೇಳಿದರು :

"ಯಾರು ಬಂದವರೇ, ಮಲ್ಲಪ್ಪ ?"

"ಮೈಸೂರು ಸೀಮೆಯೋನು. ದೂರದ ಸಂಬಂಧ."

"ಮೈ ಉಸಾರಾಗಿಲ್ವಂತೆ ?"

"ಜರ ಕಣಪ್ಪ."

"ಅವುಸದಿ ಪಂಡಿತರು ಕೊಡತವರಾ ?"

"ಜರಕ್ಕೆಲ್ಲ ಏನವುಸದಿ ? ಯಾಡು ದಿನ ಇದ್ದು ಹೋತದೆ."

...ಮುಚ್ಚಂಜೆಯ ವೇಳೆಗೆ ವೀರಪ್ಪನಿದ್ದ ಕೊಠಡಿಯಿಂದ ಮತ್ತೆ ಧ್ವನಿ ಕೇಳಿಸಿತು :

"ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ ! ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ ! ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ !"

ಅಕ್ಕವ್ವ ದೀಪ ಹಚ್ಚಿ, ಭಯಭಕ್ತಿಯಿಂದ ಅದನ್ನು ತಂದು, ಕೊಠಡಿಯಲ್ಲಿರಿಸಿದಳು.

ವೀರಪ್ಪ ಕೇಳಿದ :

"ದೀಪ ತಂದಿಟ್ಟರೆ ಮನಸ್ಸನ್ನು ಕವಿದ ಕತ್ತಲೆ ಹೋದಾತಾ ತಾಯಿ ?"

"ಬೈಗಾಯ್ತು. ಅದಕ್ಕೆ ತಂದೆ" ಎಂದಳು ಅಕ್ಕವ್ವ.

"ನಿಜ, ನಿಜ."

"ನೆಂಚಿಕೊಳ್ಳೋದಕ್ಕೆ ಏನಾದರೂ ಮಾಡಬೇಕ ?"

"ನನಗಾಗಿ ಏನೂ ಬೇಡ ತಾಯಿ."

ಆತ ಬೇಡವೆಂದರೇನಾಯಿತು ? ಹುಡುಗರು ಆರಿಸಿ ತಂದಿದ್ದ ಮಾವಿನ ಕಾಯಿಗಳಿದ್ದುವು. ಕಡಿಮೆ ಖಾರಹಾಕಿ ಗೊಜ್ಜು ಮಾಡುವೆ—ಎಂದುಕೊಂಡಳು ಅಕ್ಕವ್ವ.

ಮನೆ ತಲಪಿ ಕೈಕಾಲು ತೊಳೆದು ಮಲ್ಲಪ್ಪ ಒಳಬಂದ.

"ಸೋಮಿಯೋರು ಏಚಿಸ್ತಾ ಕುಂತಿದೀರಿ" ಎಂದ.

"ಹ್ನ್ಞ, ಮಲ್ಲಪ್ಪ. ಯೋಚನೆ, ಈ ಜೀವಕ್ಕೆ ಅನುಗಾಲವೂ ಯೋಚನೆ. ಬದುಕಿ ಉಳಿದದ್ದಾಯ್ತು, ಇನ್ನು ಮುಂದೇನು ? ಅಂತ ನೂರು ಸಾರೆ ನನ್ನನ್ನೇ ನಾನು ಕೇಳತಾ ಇದೀನಿ. ಉತ್ತರ ಹೊಳೀವಲ್ಲದು."

"ಮೈ ನೆಟ್ಟಗಾಗಲಿ, ಏನಿದ್ದರೂ ಆಮ್ಯಾಕೆ ಅಲ್ಲವಾ ?"

"ಇನ್ನು ಎರಡು ಮೂರು ದಿವಸ. ಮುಂದೆ ನಾನು ಹೊರಡಬಹುದು. ಆದರೆ ಎಲ್ಲಿಗೆ ಅನ್ನೋದು ತಿಳೀತಿಲ್ಲ."

ತನ್ನ ಮನಸ್ಸಿನಲ್ಲಿದ್ದುದನ್ನು ಹೊರಗೆಡವಲೆತ್ನಿಸಿ ಮಲ್ಲಪ್ಪನೆಂದ :

"ಈ ಸೀಮೆಯನ್ನನಕಾ ನೀವು ಬಿಟ್ಟು ಹೋಗ್ಬೇಕಾತದೆ."

ವೀರಪ್ಪ ಸಣ್ಣನೆ ನಕ್ಕ, ಕಣ್ಣೆವೆಗಳನ್ನೊಮ್ಮೆ ಮುಚ್ಚಿ ತೆರೆದ.

"ಇಲ್ಲಿದ್ದರೆ ಪ್ರಾಣ ಭಯ, ಅಲ್ಲ ?...ಮರವನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯಬೇಕು !"

ಗಡಿದಾಟಿ ಮೈಸೂರು ಸೀಮೆಗೆ ಹೋದರೆ ಮೇಲಲ್ಲವಾ ?"

"ಇನ್ನೂ ಸ್ವಲ್ಪ ಸಮಯ ಇದೆಯಲ್ಲ, ಮಲ್ಲಪ್ಪ. ಮಹಾದೇವ ಏನು ಬುದ್ಧಿ ಕೊಡುತಾನೋ ನೋಡೋಣ."

"ಸರಿ, ಸೋಮಿಯೋರೆ."

...ಹಿತ್ತಿಲ ಬಾಗಿಲಿನತ್ತ ಗಂಡ ಬಂದಾಗ ಅಕ್ಕವ್ವ ಗಂಭೀರವಾಗಿ ನುಡಿದಳು :

"ಸೋಮಿಯೋರಿಗೆ ಶಿವಮರುಳು."

ಹೌದೆನ್ನುವಂತೆ ಮಲ್ಲಪ್ಪ ತಲೆಯಾಡಿಸಿದ.

## ೧೦

ವೀರಪ್ಪ ಹೊಸಳ್ಳಿಗೆ ಬಂದ ಆರನೆಯ ದಿನ, ದರಬಾರಿನಲ್ಲಿ ಭಾಗವಹಿಸಿದ್ದ ತಕ್ಕನೊಬ್ಬ ಪುಲಿಕೋಟೆಗೆ ಹೋಗುವ ಮಾರ್ಗವಾಗಿ ಆ ಹಳ್ಳಿಗೆ ಬಂದ. ಹಿರಿಯ ಕೊಡವನಾದ ಬೆಳಿಚಂಡ ಮಂದಣ್ಣನ ಮನೆಯಲ್ಲಿ ಸ್ವಲ್ಪ ಹೊತ್ತು ಹರಟೆಗೆ ನಿಂತು ಪ್ರಯಾಣ ಮುಂದುವರಿಸಿದ.

ಆ ಹರಟೆಯ ಫಲವಾಗಿ ಮಡಕೇರಿಯ ಸಮಾಚಾರಗಳು ಕರ್ಣಾಕರ್ಣಿಕೆಯಾಗಿ ಹೊಸಳ್ಳಿಯ ಎಲ್ಲ ಮನೆಗಳಿಗೂ ತಲಪಿದುವು.

ತಾನು ಕೇಳಿದುದನ್ನು ಮಲ್ಲಪ್ಪ ವೀರಪ್ಪನಿಗೆ ಅರುಹಿದ :

"ದರಬಾರು ಬೋ ಸಡಗರದಿಂದ ಆಯ್ತಂತೆ. ಈಗಿನ ಮಹಾಸ್ವಾಮೇರು ಸಾಮರ್ಥ್ಯವಂತ ಅಂತ ತಕ್ಕರ ಅಂಬೋಣ."

ವೀರಪ್ಪನ ಕಾಲುಗಳಿಗೆ ಬಲವೂ ಮೈಗೆ ಕಸುವೂ ಮರಳಿದ್ದುವು. ಆತ ಅತ್ತಿತ್ತ ನಡೆಯುತ್ತ ಮಲ್ಲಪ್ಪನ ಮಾತುಗಳನ್ನು ಕೇಳಿದ.

ನಿರ್ವಿಕಾರ ಧ್ವನಿಯಲ್ಲಿ ವೀರಪ್ಪನೆಂದ :

"ಈಗಿನ ಅರಸು ಸಮರ್ಥ ಅಂಬೋದರಲ್ಲಿ ಸಂಶಯವಿಲ್ಲ. ದೊರೆಮನೆತನದಲ್ಲಿ ಅವನೇ ದಕ್ಷ. ಇದು ನಿಜ ಮಲ್ಲಪ್ಪ."

ಅರಸನನ್ನು ವೀರಪ್ಪ ನಿಂದಿಸಬಹುದೆಂದೇನೂ ಮಲ್ಲಪ್ಪ ನಿರೀಕ್ಷಿಸಿರಲಿಲ್ಲ. ಆದರೆ ಈ ಹೊಗಳಿಕೆ ಮಾತ್ರ ಅವನ ಪಾಲಿಗೆ ನುಂಗಲಾರದ ತುತ್ತಾಯಿತು.

ಪದಗಳಿಗಾಗಿ ತಡವರಿಸುತ್ತ ಮಲ್ಲಪ್ಪನೆಂದ.

"ದರಬಾರಿನಲ್ಲಿ ಸೋಮಿಯೋರ ಸುದ್ದಿ ಬಂತಂತೆ."

"ಏನೊಂತ ?"

"ಮಾರಿ ಬ್ಯಾನೆ ಬಡಿದು ನೀವಿಬ್ಬರೂ ಶಿವಪಾದ ಸೇರಿದಿರೀಂತ ಮಹಾಸ್ವಾಮಿಯೋರು ದುಃಖಪಟ್ಕೊಂಡು ಹೇಳಿದರಂತೆ."

ಹೌದೋ ಅಲ್ಲವೋ ಎನ್ನುವಂತೆ ಕಿರುನಗೆಯೊಂದು ವೀರಪ್ಪನ ಮುಖವನ್ನು ಬೆಳಗಿದಂತಾಯಿತು. ಆತನೆಂದ :

"ಅದು ನಿಜ, ಮಲ್ಲಪ್ಪ. ಅಪ್ಪಾಜಿ ಅರಸರ ಮಕ್ಕಳು—ವೀರಪ್ಪ, ನಂಜುಂಡಪ್ಪ—ತೀರಿಕೊಂಡ್ರು."

ಮಲ್ಲಪ್ಪ ದುಃಖಿತನಾದ. ವೀರಪ್ಪನ ವಿಚಾರ ಸರಣಿ ದಿಗಿಲುಗೊಳಿಸುವಂತಿತ್ತು.

"ಸೋಮಿಯೋರು ಎಂಗೆಂಗೋ ಮಾತಡತಾ ಅದೀರಿ."

"ನ್ಯಾಯವಾದ್ದನ್ನೇ ಹೇಳ್ತಿದೀನಿ. ನಾನು ಹುಟ್ಟಿದ್ದು ಮೊನ್ನೆ. ಬೆಳಗಿನ ಜಾವ ಈ ಮನೆಗೆ ಬಂದೆ ನೋಡು, ಆಗ. ಇದು ಪುನರ್ಜನ್ಮ, ಮಲ್ಲಪ್ಪ."

ಮಲ್ಲಪ್ಪಗೌಡ ಇದಿರಾಡದೆ ಸುಮ್ಮನಿದ್ದ. ಅವನ ಮನಸ್ಸನ್ನು ಕೊರೆಯುವ ಇನ್ನೊಂದು ವಿಷಯವಿತ್ತು. ಹೇಳಲೋ ಬೇಡವೋ ಎಂದು ಅವನು ಅನುಮಾನಿಸಿದ.

"ಏನು ಯೋಚಿಸ್ತಾ ಇದೀಯೆ ?" ಎಂದು ವೀರಪ್ಪಾಜಿ ಕೇಳಿದ.

ನಿಟ್ಟುಸಿರು ಬಿಟ್ಟು ಮಲ್ಲಪ್ಪನೆಂದ :

"ಮನೆಗೆ ನೆಂಟ ಬಂದಿದಾನೇಂತ ಹಳ್ಳೀಲಿ ಹೇಳಿದ್ದೆ. ಎಲ್ಲರೂ ಕೇಳುವವರೇ. ಜರ ಬಂದ್ಯಲ್ಲ, ಹೆಂಗಿವೆ ? ಈಗ ವಾಸಿ ಅಂದರೆ, ಮನೆಯೊಳಗೇ ಮಡಗಿದೀಯಲ್ಲ, ನಾವೇನು ನೋಡಬಾರದೊ ಮೈಸೂರು ನೆಂಟನ್ನ ?—ಅನ್ನೋರು. ಒಬ್ಬಿಬ್ಬರನಕಾ ನಾಳೆ ಬರತೇವು, ನೆಂಟ ಬಂದದ್ದಕ್ಕೆ ಹಬ್ಬದೂಟ ಹಾಕು. ಅಂದ್ರು."

"ನಿಜ, ಮಲ್ಲಪ್ಪ. ಮನುಷ್ಯನಾದವನಿಗೆ ಸಂಶಯ ಸಾಜ. ನಾಳೆ ನಸುಕಿನಲ್ಲೆ ಇಲ್ಲಿಂದ ನಾನು ಹೊರಡತೀನಿ."

ಮಲ್ಲಪ್ಪ ಸರಾಗವಾಗಿ ಉಸಿರಾಡಿದ.

"ನಿಮ್ಮಿಷ್ಟ. ನಾನು ಹೆದರ್ಕೊಂಡಿವ್ನಿ ಅಂತ ನೀವು ತಿಳಕೋಬಾರದು."

"ಇಲ್ಲಣ್ಣ. ಅಂಥ ವಿಚಾರ ಮಾಡೇನ ?"

"ದೂರ ಪ್ರಯಾಣ ಮಾಡತೀರ ?"

"ನಂಜರಾಜಪಟ್ಣದಲ್ಲಿ ಶಿವಾಚಾರ್ಯ ಸ್ವಾಮಿಗಳು ಅಂತ ಅದಾರೆ. ಮೊದಲು ನಾನು

ಅವರ ಸನ್ನಿಧಿಗೆ ಹೋಗತೀನಿ."

"ಬೊ ಉಸಾರಾಗಿ ಹೋಗಬೇಕಾತದೆ ಸೋಮಿಯೋರೆ."

"ಸಾವಿಗಂಜೆನು. ಸಾವಿಗಂಜೆನು, ಮಲ್ಲಪ್ಪ."

"ಗುರುತು ಸಿಕ್ಕರೆ ಘಾತ ಆದಾತು."

"ಯಾರಿಂದ ?"

"ಅದನ್ನ ನಾ ಬಾಯಿಬಿಟ್ಟು ಹೇಳಬೇಕಾ ?"

ವೀರಪ್ಪಾಜಿ ನಕ್ಕ.

"ಆಗಲಿ ಅಣ್ಣ. ಎಚ್ಚರವಾಗೇ ಇರತೀನಿ."

...ವೀರಪ್ಪನ ನಿರ್ಧಾರವನ್ನು ಹೆಂಡತಿಗೆ ಮಲ್ಲಪ್ಪ ತಿಳಿಸಿದ.

ಶಂಕರಪ್ಪ ಬಂದು ಹೊರೆ ಇಳಿಸಿ ಹೊರಟ ಘಳಿಗೆಯಲ್ಲಿ, ಮಲ್ಲಪ್ಪ ಯೋಚಿಸಿದ್ದ : ಇವರು ಆರೋಗ್ಯವಂತರಾದೊಡನೆ ಕೈಮುಗಿದು, 'ಓಗ್ಬನಿ ನಮ್ಮಪ್ಪ, ನಿಮ್ಮ ದಾರಿ ನಿಮಗೆ'—ಅಂತ ಅನ್ನಬೇಕೆಂದು. ಈಗ ಆ ನೆನವು ಕಹಿಯಾಗಿತ್ತು.

"ನಂಜರಾಜಪಟ್ಣ ಮಟ ಆದರೂ ನೀವು ಓಗಬೇಕು, ಅಲ್ಲವಾ ?" ಎಂದು ಕೇಳಿದಳು ಅಕ್ಕವ್ವ.

"ಸರಿ ಅಷ್ಟು ಮಾಡೋದು ನಮ್ಮ ಧರ್ಮ. ಆದರೆ ಅವರು ಒಪ್ಪತಾರೋ ಇಲ್ಲವೋ."

"ಅದನ್ನ ಅವರಿಗೆ ತಿಳಿಸೋದು ಯಾತಕ್ಕೆ ?"

"ಮತ್ತೆ ?"

"ಒತ್ತಾರೆ ಅವರು ಒಂಟಾಗ ನೀವೂ ಜತೆಗಿದ್ದರಾಯ್ತು."

"ಹುಂ, ಏನೇ ಅನ್ನು, ಇದು ಜವಾಬುದಾರಿ ಕೆಲಸ."

"ಇರಲೇಳಿ. ಈಸು ಮಾಡೋಕಾಗಲ್ಲವಾ ?"

ಮಲ್ಲಪ್ಪ ನೆಟ್ಟದೃಷ್ಟಿಯಿಂದ ಹೆಂಡತಿಯನ್ನೆ ಒಂದು ಕ್ಷಣ ನೋಡಿದ.

"ಏನು ?" ಎಂದಳಾಕೆ.

ಬೆರಳಲ್ಲಿ ಚಿಟಿಕೆ ಹೊಡೆದು ಮಲ್ಲಪ್ಪನೆಂದ :

"ಹೊಳೀತು ಉಪಾಯ ! ಬೋ ಸುಲುಭವಾಗಿ ನಾವು ನಂಜರಾಜಪಟ್ಟಣ ಸೇರತೀವಿ."

"ಏನುಪಾಯ ? ಹಾಗೆ ?" ಎಂದು ಅಕ್ಕವ್ವ ಉತ್ಸುಕಳಾಗಿ ಪ್ರಶ್ನಿಸಿದಳು.

ಧ್ವನಿ ತಗ್ಗಿಸಿ ಮಲ್ಲಪ್ಪನೆಂದ :

"ಕೇಳು. ಹೇಳತೀನಿ."

## ೧೧

ಬುತ್ತಿಯ ಸಿದ್ಧತೆ ಮುಗಿಸಿ ಅಕ್ಕವ್ವ ಮಲಗಿದಾಗ ನಡುವಿರುಳು ದಾಟಿದ್ದರೂ, ಮೊದಲ ಕೋಳಿ ಕೂಗಿದೊಡನೆಯೇ ಅವಳಿಗೆ ಎಚ್ಚರವಾಯಿತು. ದೀಪ ಹಚ್ಚಿ, ಪ್ರಯಾಣ ಹೊರಡಲಿದ್ದವರನ್ನು ಎಬ್ಬಿಸಲೆಂದು ಅವರು ಮಲಗಿದ್ದ ಕೊಠಡಿಯ ಬಳಿಗೆ ಆಕೆ ಸಾಗಿದಳು.

ಅಲ್ಲಿಂದ 'ಶಿವ ಶಿವ ಶಿವ' ಎಂದು ವೀರಪ್ಪನ ಧ್ವನಿ ಕೇಳಿ ಬಂತು.

ಅಕ್ಕವ್ವ ಮಾತನಾಡುವದಕ್ಕೆ ಮುಂಚೆಯೇ ವೀರಪ್ಪನೆಂದ :

"ನಾನು ಎಚ್ಚರಾಗಿದೀನಿ ತಾಯಿ. ಹೇಳಿ ಹೋಗೋಣಾಂತ ಕಾದಿದ್ದೆ. ಇನ್ನು ಹೊರಡತೀನಿ. ಮಲ್ಲಪ್ಪಣ್ಣನ್ನ ಎಬ್ಬಿಸೋದು ಬ್ಯಾಡ."

"ಚೆನ್ನಾಯ್ತು!" ಎಂದಳು ಅಕ್ಕವ್ವ.

"ಹಿರಿಯಾ, ಹಿರಿಯಾ!" ಎಂದು ಧ್ವನಿ ಏರಿಸಿ ಗಂಡನನ್ನು ಆಕೆ ಕರೆದಳು.

ವೀರಪ್ಪ ನಿರುಪಾಯನಾಗಿ ತಾನೇ ಮಲ್ಲಪ್ಪನ ಮೈಮುಟ್ಟಿ ಸೋದರ ವಾತ್ಸಲ್ಯದಿಂದ ಕರೆದ :

"ಮಲ್ಲಪ್ಪಣ್ಣ, ಮಲ್ಲಪ್ಪಣ್ಣ..."

ಮಲ್ಲಪ್ಪ ಧಡಕ್ಕನೆದ್ದು, "ಬೆಳಗಾಯ್ತಾ? ಬೆಳಗಾಯ್ತಾ?" ಎಂದು ಕೇಳಿದ.

"ಎದ್ದು ಬನ್ನಿ" ಎಂದು ಅಕ್ಕವ್ವ ಆದೇಶವಿತ್ತಳು.

ವೀರಪ್ಪನೆಂದ :

"ನಾನ ಹೊರಡಬೇಕಲ್ಲ, ಅಣ್ಣ? ಹೇಳಿ ಹೋಗೋಣ ಅಂತ ಕರೆದೆ."

"ಹೋ!"

ಇಬ್ಬರೂ ಎದ್ದರು. ವೀರಪ್ಪ ಬಹಿರ್ದೆಶೆ—ಮುಖಮಾರ್ಜನಗಳನ್ನು ಮುಗಿಸಿಬಂದು ಸ್ವಲ್ಪ ಹೊತ್ತು ಶಿವಧ್ಯಾನದಲ್ಲಿ ನಿರತನಾದ.

ಒಳಗೆ ಮಡಕೆಯಲ್ಲಿ ಅಕ್ಕಿ ಕೊತಕೊತ ಕುದಿದು ಗಂಜಿಯಾಯಿತು.

ಮಲ್ಲಪ್ಪ ಪ್ರಯಾಣದ ಉಡುಪನ್ನು ತೆಗೆದಿರಿಸಿದ.

"ಬನ್ನಿ" ಎಂದು ಅಕ್ಕವ್ವ ಇಬ್ಬರನ್ನೂ ಕರೆದಳು.

...ಗಂಜಿ ಕುಡಿಯುತ್ತ ವೀರಪ್ಪನೆಂದ :

"ಅವ್ವ, ಈ ದೇಹದಲ್ಲಿ ಜೀವ ಇರುವನಕ ನಿನ್ನ ಕೈಯಿಂದ ಅನ್ನ ಉಂಡದ್ದನ್ನ ನೆನಪಿಡಿತೀನಿ."

ಆತ ಉಣ್ಣುವುದನ್ನು ನೋಡುತ್ತ ಅಕ್ಕವ್ವ ನಿಂತಿದ್ದಳು. ಅರಸುಕುಮಾರನಾಗಿ ಸುಖವಾಗಿ ಇರಬಹುದಾಗಿದ್ದವನಿಗೆ ಎಂಥ ದುರ್ಗತಿ ಪ್ರಾಪ್ತವಾಗಿತ್ತು! ಯಮಪಾಶದಿಂದ ಬಂಧಿತನಾದ ಮೇಲೂ ಪುರಾತನರ ಪುಣ್ಯವಿಶೇಷದಿಂದ ಈತ ಬದುಕಿ ಉಳಿದಿದ್ದ. ಭವಿಷ್ಯತ್ತಿನಲ್ಲಿ ಇನ್ನೇನು ಕಾದಿದೆಯೊ ಇವನಿಗೆ?

ತನ್ನ ಯೋಚನೆಗಳ ಅಲೆಗಳ ಮೇಲೇರಿ ಸಾಗಿದ್ದ ಅಕ್ಕವ್ವನಿಗೆ, ವೀರಪ್ಪ ನುಡಿದ ಕೃತಜ್ಞತೆಯ ಮಾತು ಕೇಳಿಸಿತು. ಆದರೆ ಅದಕ್ಕೆ ಪ್ರತಿಯಾಗಿ ತಾನೇನು ಹೇಳಬೇಕೆಂದು ಅವಳಿಗೆ ತೋಚಲಿಲ್ಲ.

ಆಕೆಯ ಕಣ್ಣುಗಳನ್ನು ಮಂಜು ಕವಿಯಿತು. ಒಸರಿದ ಕಂಬನಿಯನ್ನು ಸೆರಗಿನಿಂದ ಆಕೆ ಒರೆಸಿಕೊಂಡಳು.

ಕೈತೊಳೆದು ಬಂದ ವೀರಪ್ಪ ಮನೆಯ ಮಕ್ಕಳು ಮಲಗಿದ್ದೆಡೆ ಒಂದು ಕ್ಷಣ ನಿಂತ. ಅವರ ಮುಖಗಳನ್ನು ನೋಡಿದ.

"ಮಹಾದೇವ ನಿಮಗೆ ಒಳ್ಳೇದು ಮಾಡಲಿ" ಎಂದ.

ಮಲ್ಲಪ್ಪನ ಎದೆಗುಂಡಿಗೆಯ ಗತಿ ತೀವ್ರವಾಯಿತು. ತಾನು ಆಡಬೇಕಾದ ಮಾತುಗಳನ್ನು ನೆನಪಿಗೆ ತಂದುಕೊಳ್ಳುತ್ತ ಆತ ಚಡಪಡಿಸಿದ.

"ಇನ್ನು ಹೊರಡಲಾ?" ಎಂದು ಕೇಳಿದ ವೀರಪ್ಪ.

ಮಲ್ಲಪ್ಪ, ತನ್ನ ಕಾತರವನ್ನು ಮರೆಮಾಡಲೆತ್ನಿಸುತ್ತ ದಪ್ಪಗಂಟಲಲ್ಲಿ ಒಂದೇ ಉಸುರಿಗೆ ಅಂದ :

"ಸೋಮಿಯೋರು ನಾ ಹೇಳಿದ್ದನ್ನ ಕೇಳಬೇಕು. ಮುಖ್ಯವಾದ್ದೆಂದರೆ, ವೇಷ ಮರೆಸೋದು. ಇಕಾ, ರೈತನ ಉಡುಪು. ಧೋತರ ಉಟ್ಕೊಳ್ಳಿ. ಕಂಬಳಿ ಹೆಗಲ ಮೇಲೆ ಹಾಕ್ಕೊಳ್ಳಿ. ಈ ಬಡಿಗೆ ಹಿಡಕೊಳ್ಳಿ. ರುಮಾಲು ನಾ ಸುತ್ತತೀನಿ. ದಾರೀಲಿ ಯಾರೇ ಮಾತಾಡಿಸಿದರೂ ನೀವು ಸುಮ್ಮನಿರಬೇಕು—"

ವೀರಪ್ಪ ನಕ್ಕು, ನಡುವೆ ಬಾಯಿ ಹಾಕಿದ :

"ಅವರೆಲ್ಲ ನಾನು ಮೂಕ ಅಂದ್ಕೊಂಡ್ರೊ ?"

"ಮೂಕ ಅಲ್ಲ. ಮದುವೆಗೆ ಹೆಣ್ಣು ಹುಡುಕ್ಕೊಂಡು ಓಗೋ ಗಂಡು. ಬೋ ನಾಚಿಕೆ. ಉತ್ತರ ಯಾನಿದ್ರೂ ಸೋದರಮಾವ ನಾ ಕೊಡತೇನೆ !"

"ಇದೇನು ಮಲ್ಲಪ್ಪ ? ನನ್ನ ಸಂಗಾತ ಬರೋ ಯೋಚನೆಯೊ ?"

ಮಲ್ಲಪ್ಪ ಮಂಡಿಯೂರಿ ಕುಳಿತು, ಕೈ ಜೋಡಿಸಿದ :

"ಈ ಒಂದು ಪ್ರಾರ್ಥನೆ ನಡಸ್ಕೊಡಿ. ನಂಜರಾಜಪಟ್ಣ ಮಟ ಬಂದು ನಿಮ್ಮನ್ನ ಸ್ವಾಮಿಗಳಿಗೊಪ್ಪಿಸಿ ವಾಪಸಾಗತೀನಿ."

"ಹೌದು ಸೋಮಿಯೋರೆ" ಎಂದು ಅಕ್ಕವ್ವ ಧ್ವನಿ ಕೂಡಿಸುತ್ತಲಿದ್ದಂತೆ, ವೀರಪ್ಪ ನೆಂದ :

"ಛೆ ! ಛೆ ! ನಿಮ್ಮಿಬ್ಬರ ಪಾದಮುಟ್ಟಿ ಆಶೀರ್ವಾದ ಬೇಡಿಕೋಬೇಕೂಂತ ನಾನಿದ್ದರೆ, ಅಣ್ಣನೇ ಮಂಡಿಯೂರಿ ಕೈ ಜೋಡಿಸೋದಾ ? ಏಳು ಮಲ್ಲಪ್ಪಣ್ಣ. ಒಪ್ಪಿದೆ."

ಎಳೆಯನ ಉತ್ಸಾಹದಿಂದ ಮಲ್ಲಪ್ಪ ಜಿಗಿದು ನಿಂತ.

ಕೆಲವೇ ನಿಮಿಷಗಳಲ್ಲಿ ಸೋದರಮಾವನೂ ಅಳಿಯನೂ ಪಯಣಕ್ಕೆ ಸಿದ್ಧರಾದರು. ವೀರಪ್ಪ, ಅಕ್ಕವ್ವನ ಪಾದಗಳಿಗೆ ನಮಿಸ ಹೋದ.

"ಉಂಟೆ ಸೋಮಿಯೋರಾ ?" ಎನ್ನುತ್ತ ಆಕೆ ಹಿಂದೆ ಹಿಂದಕ್ಕೆ ಸರಿದಳು.

ಗದ್ಗದ ಕಂಠದಿಂದ ವೀರಪ್ಪನೆಂದ :

"ಹೋಗ್ಬರತೀನಿ, ತಾಯಿ."

"ನಂಜರಾಜ ಪಟ್ಣ ತಲಪೋಕೆ ಎರಡು ಮೂರು ದಿನ ಹಿಡೀತದೆ. ಯಾನಿದ್ದರೂ ಮುಂದಿನ ವಾರ ಇದೇ ಸಮಯದೊಳಗೆ ಬಂದುಬಿಡತೀನಿ" ಎಂದ ಮಲ್ಲಪ್ಪ, ಹೆಂಡತಿಯೊಡನೆ.

ಬುತ್ತಿಯ ಗಂಟು, ಮಡಚಿದ ಕಂಬಳಿ, ಅದರೊಳಗೆ ಬಚ್ಚಿಟ್ಟ ಬಿಚ್ಚುಗತ್ತಿ ಇಷ್ಟರೊಡನೆ ಮಲ್ಲಪ್ಪ ಮುಂದಾದ ; ವೀರಪ್ಪ ಹಿಂಬಾಲಿಸಿದ. ಅವರ ಬರಿ ಪಾದಗಳು ಸದ್ದಿಲ್ಲದೆ ಅಂಗಳವನ್ನು ದಾಟಿದುವು.

ಅಂಗಳದ ಅಂಚಿನ ತನಕ ಹೋಗಿ ಅಕ್ಕವ್ವ ಅವರನ್ನು ಬೀಳ್ಕೊಟ್ಟಳು.

## ೧೨

ಮಲೆತಿರಿಕೆ ಬೆಟ್ಟದ ತಪ್ಪಲಲ್ಲಿದ್ದ ಆ ಹಳ್ಳಿಗೆ ರಾಜದೂತರು ಬಂದು ತಲಪಿದಾಗ ನಡುಮಧ್ಯಾಹ್ನವಾಗಿತ್ತು.

ಸಶಸ್ತ್ರನಾದ ಒಬ್ಬ ಕುದುರೆ ಸವಾರ, ನಾಲ್ವರು ಚಾವಡಿಕಾರರು, ಬರಿದು ಮೇನೆಗಳು ಎರಡು, ಎಂಟು ಜನ ಬೋವಿಗಳು. ಕಡಿದಾದ ದಾರಿಯಲ್ಲಿ ಇವರು ಇಳಿದು ಬಂದಾಗ ಬೆರಗಾಗಿ ನೋಡಿದವರು ಕೆಲವರು ; ಭಯದಿಂದ ಓಡಿದವರು ಕೆಲವರು.

ಹಳ್ಳಿಯ ಮುಖ್ಯಸ್ಥನಾದ ಗುರಿಕಾರ ಪೊನ್ನಯ್ಯ ಅವರನ್ನು ಇದಿರ್ಗೊಂಡ.

ಬಂದವರು, ತಾವು ಸನ್ನಿಧಾನದ ದೂತರು—ಎಂದರು.

"ಏಂಬ್ರ ?"

ಕುದುರೆಯಿಂದ ಕೆಳಗಿಳಿದ ಮುಖ್ಯಸ್ಥನೆಂದ :

"ಮಹಾಸ್ವಾಮಿಯೋರ ನಿರೂಪ ತಕಂಡು ಬಂದೀವಿ, ಗಂಗಮ್ಮನವರಿಗೆ."

ಮೇನೆಗಳನ್ನು ಕಂಡಾಗಲೇ, ಆ ದೂತರು ಬಂದ ಉದ್ದೇಶವನ್ನು ಪೊನ್ನಯ್ಯ ಊಹಿಸಿದ್ದ.

"ನಡೀರಿ. ಅವರ ಮನೆ ಕೆಳಮೂಲೆಯಲ್ಲಾಯ್ತು" ಎಂದು ದಾರಿ ತೋರಿಸುತ್ತ, ಗುರಿಕಾರ ಮುಂದಾದ.

ಹಾದಿಯಲ್ಲಿ ಪೊನ್ನಯ್ಯ ಕೇಳಿದ :

"ಮಡಕೇರೀಲಿ ಎಲ್ಲಾ ಚಂದ ?"

"ರಾಜದೂತರ ಮುಖ್ಯಸ್ಥ ಮಾತುಗಾರನಾಗಿರಲಿಲ್ಲ. ನಗೆಯೂ ಸುಳಿಯುತ್ತಿರಲಿಲ್ಲ ಆ ಮುಖದ ಮೇಲೆ. ಆತ ಚುಟುಕಾಗಿ ಉತ್ತರವಿತ್ತ :

"ಚಂದ."

...ದೂತ ಪರಿವಾರ—ಅದಕ್ಕಿಂತಲೂ ವಿಶೇಷವಾಗಿ ಮೇನೆಗಳು—ಬರುತ್ತಿದ್ದುದನ್ನು ಕಂಡು ಗಂಗಮ್ಮ ದಿಗ್ಭ್ರಾಂತಳಾದಳು. ಆದರೂ ಒಳಗಿನ ಸಂಕಟವನ್ನು ತೋರಗೊಡದೆ ಧೈರ್ಯ ತಳೆದಳು.

ಸ್ಥಿತಿವಂತೆಯಾದ ವಿಧವೆ ಹೆಂಗಸು ಗಂಗಮ್ಮ. ಅವಳು ತಾಯಿಯಾದುದು ತಡವಾಗಿ. ಆ ತಾಯ್ತನವೂ ನಾಲ್ಕು ನಾಲ್ಕೇ ತಿಂಗಳ ಸುಖ. ಹುಟ್ಟಿದ ಮೂರು ಗಂಡುಮಕ್ಕಳೂ ಹಲ್ಲು ಮೂಡುವುದಕ್ಕೆ ಮುನ್ನವೇ ಕಣ್ಣು ಮುಚ್ಚಿದುವು. ನಾಲ್ಕನೆಯದು ಹೆಣ್ಣು, ಇದೂ ಅಲ್ಪಾಯುವಾಗುವುದೆಂದೇ ಅವಳಿಗೆ ಅನಿಸಿತ್ತು. ಹಾಗಾಗದೆ ಮಗು ಬದುಕಿ ಉಳಿಯಿತು. ಆದರೆ, ಮಾತು ಬಂದು, 'ಅಪ್ಪಾ' ಎಂದು ಕರೆಯಲು ಶಕ್ತವಾಗುವುದಕ್ಕೆ ಮೊದಲೇ ತಂದೆಯನ್ನು ಕಳೆದುಕೊಂಡಿತು. ತಾಯಿ ಆ ಕೂಸನ್ನು ಜೋಪಾನದಿಂದ ಸಾಕಿದಳು.

ಮಗುವಿನ ಪಾಲನೆಯಷ್ಟೇ ಕಠಿನತರವಾಗಿತ್ತು, ಹೊಲ ತೋಟಗಳ ಯಾಜಮಾನ್ಯ. ಅವಳು ಶ್ರೀಮಂಗಲನಾಡಿನ ಹೆಣ್ಣು. ಅಲ್ಲಿ ನಿರ್ಗತಿಕನಾಗಿ ಜೀವಿಸುತ್ತಿದ್ದ ತನ್ನ ಕಿರಿಯ ಸೋದರನನ್ನು ಅವಳು ತನ್ನ ಬಳಿಗೆ ಕರೆಸಿಕೊಂಡಳು. ಆತ ತನ್ನ ಸಂಸಾರದೊಡನೆ ಅಲ್ಲಿಗೆ ಬಂದು ಬೀಡು ಬಿಟ್ಟ. ಅವನ ಕಿರಿಯ ಮಕ್ಕಳು, ಗಂಗಮ್ಮನ ಮಗಳು ಶಾಂತವ್ವನಿಗೆ ಆಟ ವಿನೋದಗಳಿಗೆ ಜತೆಯಾದರು.

ಕೆಲವೇ ತಿಂಗಳ ಹಿಂದಿನ ಮಾತು. ಕೊಡಗು ಸಿಂಹಾಸನಾಧೀಶ ಲಿಂಗರಾಜನ ಗತಿಸಿದ ಅಣ್ಣ ಅಪ್ಪಾಜಿ ಅರಸನ ಹಿರಿಯ ಮಗ ವೀರಪ್ಪಾಜಿಗೆ ಹೆಣ್ಣು ಹುಡುಕಿಕೊಂಡು, ಮಡಕೇರಿಯಿಂದ ಕೆಲವರು ಬಂದರು. ಗಂಗಮ್ಮನ ಎಂಟು ವರ್ಷದ ಮಗಳನ್ನು ಕಂಡು ಸಂಧಾನ

ನಡೆಸಿದರು. ಗಂಗಮ್ಮ ಒಪ್ಪಲಿಲ್ಲ. ಮಹಾಸ್ವಾಮಿಯವರಿಂದಲೇ ನಿರೂಪ ತರಿಸಿದರು. ಆಕೆ ಅಸಹಾಯಳಾದಳು.

ಅಪ್ಪಂಗಳಕ್ಕೆ ವಧುವನ್ನೊಯ್ದು ಮದುವೆ ನಡೆಯಿತು. ಶಾಂತವ್ವನಿಗೆ ಅದೊಂದು ಕನಸು. ದೊರೆತ ಜತೆಗಾರನೋ ಆಕೆಗಿಂತ ಹತ್ತು-ಹನ್ನೆರಡು ವರ್ಷ ದೊಡ್ಡವ. ಮಾತಿಲ್ಲ ಕತೆಯಿಲ್ಲ. ಋತುಮತಿಯಾಗುವತನಕ ತವರಿನಲ್ಲೇ ಇರಬೇಕು ತಾನೆ ಹುಡಗಿ? ರಾಜಮ್ಮಾಜಿ ಎಂಬ ಹೊಸ ಹೆಸರು ಪಡೆದ ಶಾಂತವ್ವ ತಾಯಿಯೊಡನೆ ಹುಟ್ಟಿದ ಹಳ್ಳಿಗೆ ಹಿಂತಿರುಗಿದಳು.

ಲಿಂಗರಾಜ ಮದುವೆಗೆ ಬಂದಿರಲಿಲ್ಲ. ದೇಹಾಲಸ್ಯ ಎಂದಿದ್ದರು. ಮುಂದೆ ಸ್ವಲ್ಪ ಸಮಯದಲ್ಲೇ ಆತ ನಿಧನಹೊಂದಿದ.

ಪಟ್ಟಕ್ಕಾಗಿ ಅರಸುಮಕ್ಕಳ ನಡುವೆ ನಡೆಯುವ ಕದನವನ್ನು ಕುರಿತು ಗಂಗಮ್ಮ ಬಲ್ಲಳು. ಮುಂದೇನಾಗುವುದೋ ಎಂದು ಆಕೆ ಗಾಬರಿಗೊಂಡಳು. ಹೆಚ್ಚು ತಡವಿಲ್ಲದೆ ವಾರ್ತೆ ಬಂದಿತು. ಪಟ್ಟವನ್ನೇರಿದ ಚಿಕವೀರರಾಜ, ವೀರಪ್ಪನನ್ನೂ ಆತನ ತಮ್ಮನನ್ನೂ ಬಂಧಿಸಿ ಮಡಕೇರಿಗೊಯ್ದು ಕೋಟೆಯೊಳಗೆ ಕೈದಿಗಳಾಗಿ ಮಾಡಿದ್ದ.

"ಇನ್ನು ಋಣಾನುಬಂಧ ಹರಿದಂತೆಯೇ. ಮಗೂ ಹಣೇಲಿ ಬರೆದಿತ್ತು. ಏನು ಮಾಡೋಕಾಗತದೆ?" ಎಂದು ನಾಲ್ಕು ಜನರೆದುರು ಆಡಿಕೊಂಡು ಗಂಗಮ್ಮ ಅತ್ತಳು. ಇದೊಂದೂ ಅರ್ಥವಾಗದ ಮಗಳು, ಎಂದಿನಂತೆ ಆಟ ವಿನೋದಗಳಲ್ಲಿ ನಿರತಳಾದಳು.

ಬಳಿಕ ಇದ್ದುದೊಂದೇ ಭಯ. ಚಿಕವೀರರಾಜ ಧೀರನೆಂದು ಕೇಳಿಬಲ್ಲಳು ಗಂಗಮ್ಮ. ಆದರೆ, ಕ್ರೂರಿಯೂ ಆಗಿರುವನೆಂದರೆ, ತನ್ನ ಮಗಳನ್ನು ಮಡಕೇರಿಗೆ ಹಿಡಿದೊಯ್ಯಬಹುದು; ಬಲಾತ್ಕಾರದಿಂದ ಉಪಪತ್ನಿಯಾಗಿ ಮಾಡಿಕೊಳ್ಳಬಹುದು. ಅಂಥ ದುರ್ದಿನ ಬರದಿರಲಿ—ಎಂದು ದೇವರಿಗೆ ಗಂಗಮ್ಮ ಹರಕೆ ಹೊತ್ತಳು.

ಆ ದೇವರು ತನ್ನ ಕೈ ಬಿಟ್ಟನೇ ಹಾಗಾದರೆ? ಕಾಣಿಸುತ್ತಿರುವುದು ಎರಡು ಮೇನೆಗಳು. ಒಂದು ಶಾಂತವ್ವನಿಗೋಸ್ಕರ. ಇನ್ನೊಂದು? ಬೇರೆ ಯಾವಳಾದರೂ ಹರೆಯದ ಹುಡಗಿಯನ್ನೂ ಹಿಡಿದೊಯ್ಯುವರೋ ಏನೋ...

ಗಂಗಮ್ಮನ ಮನೆ ಸಮೀಪಿಸುತ್ತಿದ್ದಂತೆಯೇ ಗುರಿಕಾರ ಪೊನ್ನಯ್ಯ ಕೂಗಿ ನುಡಿದ:

"ಸನ್ನಿಧಾನದಿಂದ ನಿರೂಪ ಬಂದದೆ."

ಗಂಗಮ್ಮ ಒಳಗಿನ ಅಳುಕನ್ನು ತೋರಗೊಡದೆ, "ಎಲ್ಲರೂ ಬರ್ರಿ. ಕುಂತ್ಕೊಳ್ಳಿ" ಎಂದಳು. ಆಳುಗಳನ್ನು ಕುರಿತು, "ಇವರಿಗೆಲ್ಲ ಆಸರೆಗೆ ತಂದ್ಕೊಡ್ರೋ" ಎಂದು ಆದೇಶವಿತ್ತಳು.

ಕುದುರೆ ಸವಾರನಿತ್ತ ಕಾಗದದ ಸುರುಳಿಯನ್ನು ಕೈಯಲ್ಲಿ ಹಿಡಿದುಕೊಂಡು ಗಂಗಮ್ಮ ಎಂದಳು:

"ನಮಗೆ ಓದು ಬರದಲ್ಲ. ಇದರೊಳಗೆ ಏನನೆಯೋ ಹೇಳಿ ಗುರಿಕಾರರೇ."

ತನ್ನ ಹಿರಿಮೆಯ ಪ್ರದರ್ಶನಕ್ಕೆ ಆ ಅವಕಾಶ ದೊರೆಯುವುದೆಂದು ಮೊದಲೇ ತಿಳಿದಿದ್ದ ಪೊನ್ನಯ್ಯ, ಕುದುರೆ ಸವಾರನ ಕಡೆಗೊಮ್ಮೆ ದೃಷ್ಟಿಬೀರಿ, ನಿರೂಪವನ್ನು ಗಂಗಮ್ಮನಿಂದ ಸ್ವೀಕರಿಸಿ, ತೆರೆದು ಓದಿದ:

"ಮಾತೋಶ್ರೀ ಗಂಗಮ್ಮನವರಿಗೆ, ಸನ್ನಿಧಾನದಿಂದ ಬರೆದಿರುವದೇನೆಂದರೆ:

ಈ ನಿರೂಪ ಕಂಡ ತಕ್ಷಣ ತಂಗಿ ರಾಜಮ್ಮಾಜಿಯವರೂ ತಾವೂ ಅಪ್ಪಂಗಳ ಅರಮನೆಗೆ ಹೊರಟು ಬರಬೇಕು. ಅಲ್ಲಿ ತಮ್ಮ ವಾಸಕ್ಕೆ ಏರ್ಪಾಟು ಮಾಡಿಯದೆ. ಮೇನೆಗಳನ್ನು ಕಳಿಸಿದೇವೆ. ಅಂತಾ—ಮೊಹರುನಿಶಿ ಅಂಕಿತ."

"ಮಡಕೇರಿಗೆ ಅಲ್ಲ ಹಂಗಾರೆ" ಎಂದಳು ಗಂಗಮ್ಮ.

"ಅಲ್ಲ. ಅಪ್ಪಂಗಳಕ್ಕೆ."

ಇದು ಹೊಸ ವಿಚಾರ, ಎಂದುಕೊಂಡಳು ಗಂಗಮ್ಮ.

—ತನ್ನನ್ನು 'ಮಾತೋಶ್ರೀ' ಎಂದು ಅರಸು ಸಂಬೋಧಿಸಿದ್ದ. 'ತಂಗಿ' ಎಂದು ಕರೆದಿದ್ದ ರಾಜಮ್ಮಾಜಿಯನ್ನು. ಅಪ್ಪಂಗಳಕ್ಕೆ ಬರಬೇಕು—ಎಂದಿದೆ ನಿರೂಪದಲ್ಲಿ. ಪ್ರಾಯಶಃ ತನ್ನ ಅಳಿಯನನ್ನು ಬಿಟ್ಟಿರುವರೇನೊ ? ದಾಯಾದಿಗಳ ನಡುವೆ ಸಾಮರಸ್ಯ ಉಂಟಾಯಿತೇನೊ?

ನಿರೂಪವನ್ನು ತನ್ನ ಕೈಗಿತ್ತವನ ಕಡೆಗೆ ತಿರುಗಿ, "ಯಾವತ್ತು ಹೊರಡಬೇಕು ?" ಎಂದು ಗಂಗಮ್ಮ ಕೇಳಿದಳು.

ಆತನೆಂದ :

"ಇವತ್ತು ರಾತ್ರೆಯೇ."

"ಭಟರೂ ಬೋವಿಗಳೂ ನಡೆದು ಬಂದವರೆ. ವಿಶ್ರಾಂತಿ ಬ್ಯಾಡೇನು ?"

"ಅಪ್ಪಂಗಳಕ್ಕೆ ನಿಮ್ಮನ್ನು ಮುಟ್ಟಿಸಿ ಇಸ್ರಾಂತಿಪಡೀತೇವು."

"ಹಾಗೋ ? ಒಳ್ಳೇದು. ಶಾಸ್ತ್ರಿಗಳನ್ನು ಕರೆಸಿ ಮುಹೂರ್ತ ನೋಡಿಸತೇವಿ."

"ನೋಡಿಸಿ. ಆದರೆ ಹೊರಡೋದು ಮಾತ್ರ ಇವತ್ತು ರಾತ್ರೆಯೇ."

ಇಷ್ಟೇಕೆ ಈತ ಅವಸರಪಡಿಸುತ್ತಿದ್ದಾನೆ ? ಅಳಿಯನಿಗೇನಾದರೂ ಅಸ್ವಾಸ್ಥ್ಯ ಆಗಿರಲಾರದಷ್ಟೆ ?—ಎಂದು ಗಂಗಮ್ಮ ಚಿಂತಿಸಿದಳು.

ಆದರೂ ಬಾಹ್ಯದ ಗಾಂಭೀರ್ಯವನ್ನು ಸಡಲಿಸದೆ, "ಆಗಲಿ. ರಾಜಾಜ್ಞೆ ಪಾಲಿಸತೇವೆ ; ನೀವೆಲ್ಲ ಮಿಾಯಗೀಯ ಮುಗಿಸಿ, ಉಂಡು, ದಣುವಾರಿಸ್ಕೊಳ್ಳಿ" ಎಂದಳು.

"ಹೊರಡತೀರಿ ನೀವು. ಹೋಗಿಬನ್ನಿರವ್ವ" ಎಂದು ನುಡಿದು, ಗುರಿಕಾರ ತನ್ನ ಮನೆಯ ಹಾದಿಹಿಡಿದ.

ಕುತೂಹಲದಿಂದ ನೆರೆದ ಜನ, ಮಗಳೊಡನೆ ಗಂಗಮ್ಮ ಅಪ್ಪಂಗಳಕ್ಕೆ ಹೊರಡುವ ಸುದ್ದಿಯನ್ನು ಮುಟ್ಟಿಸಲೆಂದು ಚೆದರಿದರು.

ಒಳಗೆ ತಮ್ಮನನ್ನು ಕರೆದು, "ಅಳಿಯ ಕೋಟೆಮನೆಯಾಗದಾರೋ ಅಪ್ಪಂಗಳದಾಗದಾರೋ ತಿಳಕೋ. ಯಾವನಾದರೂ ಚಾವಡಿಕಾರನ್ನ ಗುಟ್ಟಾಗಿ ಕರೆದು ಕೇಳು" ಎಂದಳು, ಗಂಗಮ್ಮ.

ಅವಳ ಸೋದರ ತಿಳಿಯಲು ಪ್ರಯತ್ನಪಟ್ಟ ; ವಿಫಲನಾದ.

"ಒಬ್ಬರೂ ಬಾಯಿ ಬಿಡವಲ್ರು. ಗೊತ್ತಿಲ್ಲ ಅಂತಾರೆ"—ಅಂದ.

ಗಂಗವ್ವನ ಹಣೆಯಲ್ಲಿ ನೆರಿಗೆ ಮೂಡಿತು.

'ಬಹುಶಃ ಈ ಜನಕ್ಕೆ ತಿಳೀದೇನೂ ಇರಬಹುದು' ಎಂದು ತನ್ನನ್ನು ತಾನೆ ಆಕೆ ಸಮಾಧಾನಪಡಿಸಿದಳು.

ಪ್ರಯಾಣಕ್ಕೋಸ್ಕರ ಸಿದ್ಧತೆಗಳಾಗುತ್ತಿದ್ದುದನ್ನು ನೋಡಿದ ಮೇಲೆ, ರಾಜದೂತರ ಮುಖ್ಯಸ್ಥ ಮೊದಲಿನಷ್ಟು ಬಿಗಿಯಾಗಿರಲಿಲ್ಲ.

ಶಾಂತವ್ವ ತಾಯಿಯನ್ನು ಕೇಳಿದಳು :

"ಇನ್ನೊಂದ್ಸಾರ್ತಿ ಅಲ್ಲಿಗೇ ಓಗ್ಬೇಕನಮ್ಮ ? ತಿರ್‍ಗಾ ಮದುವೆ ಮಾಡತಾರ ?"

"ನಿನ್ನ ತಲೆ !" ಎಂದಳು ಗಂಗಮ್ಮ. ಆಕೆಗೆ ನಗೆಯೂ ಬಂತು, ಅಳುವೂ ಬಂತು.

—ಸೂರ್ಯೋದಯಕ್ಕೆ ನಾಲ್ಕು ಘಳಿಗೆ ಹೊತ್ತೇರುತ್ತ ಆ ತಾಯಿ ಮಗಳು ಅಪ್ಪಂಗಳಕ್ಕೆಂದು ಹೊರಟರು.

## ೧೩

ಚಿಕವೀರರಾಜನ ತಂಗಿ, ದೇವಮ್ಮಾಜಿ. ಲಿಂಗರಾಜ ತನ್ನ ಮಗನಿಗೆ ಕಟ್ಟುನಿಟ್ಟಾದ ವಿದ್ಯಾಭ್ಯಾಸ—ಶಸ್ತ್ರಾಭ್ಯಾಸಗಳನ್ನು ಮಾಡಿಸಿದ. ರಾಜ್ಯಾಡಳಿತದ ಕಡೆಗೆ ಅವನ ಗಮನವನ್ನು ಸೆಳೆದ. ತಾನು ಅನುಭವದಿಂದ ಕಲಿತ ರಾಜಕಾರಣದ ಮೂಲಸೂತ್ರಗಳನ್ನು ಅವನಿಗೆ ಹೇಳಿಕೊಟ್ಟ. ರಾಜನ ನಿಷ್ಠುರ ರೀತಿನೀತಿಗಳಿಗೆ ರಾಜಕುಮಾರನೂ ಹೊರತಾಗಿರಲಿಲ್ಲ, ದೇವಮ್ಮಾಜಿಯಾದರೆ ಹಾಗಲ್ಲ, ಅವಳೇನು ತಪ್ಪು ಮಾಡಿದರೂ ಅರಸ ಸಿಟ್ಟಾಗುತ್ತಿರಲಿಲ್ಲ. ಆತ ಅವಳನ್ನು ಮುದ್ದಿಸಿ ಮುದ್ದಿಸಿ ಬೆಳೆಸಿದ. ಹಿಂದೆ ಲಿಂಗರಾಜನ ಹಿರಿಯಣ್ಣ ದೊಡ್ಡವೀರರಾಜ ಗಂಡು ಸಂತಾನವಿಲ್ಲದೆ ಸತ್ತಾಗ ಆತನ ಮಗಳು ರಾಜ್ಯವಾಳತೊಡಗಿದ್ದಳು. ಅದನ್ನು ಲಿಂಗರಾಜನೇ ಮುಕ್ತಾಯಗೊಳಿಸಿದ್ದ. ಆ ಕೆಲಸ ಹೆಣ್ಣಿಗೆ ಹೇಳಿದ್ದಲ್ಲ ಎಂದು ಅವನ ಭಾವನೆ. ತನ್ನ ಮಗಳು ಒಳ್ಳೆಯ ಗೃಹಿಣಿಯಾಗಿ ಬಾಳಬೇಕು, ತನ್ನ ತರುವಾಯ ಪಟ್ಟವೇರುವ ತನ್ನ ಮಗನಿಗೆ ನೆರವಾಗಬಲ್ಲ ಸುಗುಣಿಯೊಬ್ಬನಿಗೆ ಅವಳನ್ನು ಮದುವೆ ಮಾಡಿಕೊಡಬೇಕು, ಆತನನ್ನು ಮನೆಯಳಿಯನನ್ನಾಗಿ ಇರಿಸಿಕೊಳ್ಳಬೇಕು—ಇದು ಲಿಂಗರಾಜನ ಯೋಚನೆ. ಅದನ್ನವನು ಕೃತಿಗಿಳಿಸಿದ. ಕೊಡವರಲ್ಲಿ ತಾನು ಮೆಚ್ಚಿದ ಯುವಕನೊಬ್ಬನನ್ನು ತಂದು, ಅವನಿಗೆ ಲಿಂಗಧಾರಣೆ ಮಾಡಿಸಿ, ಚನ್ನಬಸಪ್ಪನೆಂದು ಹೆಸರಿಟ್ಟು, ಅಳಿಯನಾಗಿ ಸ್ವೀಕರಿಸಿದ.

ಚಿಕವೀರರಾಜನಿಗೆ ಚನ್ನಬಸಪ್ಪನೆಂದರೆ ತಾತ್ಸಾರ. ಭಾವನನ್ನು ಸಮಾನತೆಯಿಂದ ಅವನೆಂದೂ ಕಂಡವನಲ್ಲ. ಬಾಲ್ಯದಲ್ಲಿ ತಂಗಿಯನ್ನು 'ಗಿಣಿ' ಎಂದು ಆತ ಕರೆಯುವುದಿತ್ತು. ಈಗ ಅದು ಪರಿಹಾಸ್ಯದ ಮೂದಲಿಕೆಯ ಪದವಾಯಿತು. 'ಗಿಣಿ ಗಂಡ' ಎನ್ನುವುದು ಭಾವನಿಗೆ ಆತ ನೀಡಿದ ಬಿರುದಾಯಿತು.

ಲಿಂಗರಾಜನ ಮೋಹದ ಮಡದಿ ಸೂಚನೆ ಇತ್ತಳು :

'ಮಗಳನ್ನೂ ಅಳಿಯನನ್ನೂ ಅಪ್ಪಂಗಳದಲ್ಲಿ ಇರಿಸೋಣ, ಆಗದೆ ?'

ಕಿರಿಯರ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದ ಲಿಂಗರಾಜನಿಗೆ, ಅದೇ ಸರಿ ಎನಿಸಿತು.

ಮತಿಭ್ರಮಣೆಯಾದಾಗ ದೊಡ್ಡವೀರರಾಜ, ಅಪ್ಪಂಗಳದಲ್ಲಿದ್ದ ತನ್ನ ತಮ್ಮ ಅಪ್ಪಾಜಿಯನ್ನು ಕೊಲೆಮಾಡಿಸಿದನಷ್ಟೆ. ಮುಂದೆ ಆತನಿಗೆ ತಿಳಿವು ಮೂಡಿ ಪಶ್ಚಾತ್ತಾಪವಾದಾಗ, ಹಾಲೇರಿಯನ್ನು ಬಿಟ್ಟು ಬಂದು ಅಪ್ಪಂಗಳದಲ್ಲಿ ವಾಸಿಸಬೇಕೆಂದೂ ಅಪ್ಪಾಜಿಯ ಮಕ್ಕಳನ್ನು ಸಲಹಬೇಕೆಂದೂ ಕಿರಿಯ ತಮ್ಮ ಲಿಂಗರಾಜನಿಗೆ ಆಜ್ಞಾಪಿಸಿದನಷ್ಟೆ. ಅಂದಿನಿಂದ ಅರಸನಾದವರೆಗೂ ಲಿಂಗರಾಜ ಅಲ್ಲಿಯೇ ವಾಸಿಸಿದವನು. ಸೊಗಸಾದ ಅರಮನೆ. ಲಿಂಗರಾಜ ದಕ್ಷತೆಯಿಂದ ಊರ್ಜಿತ ಸ್ಥಿತಿಗೆ ತಂದ ಜಹಗೀರು. ಚಿಕವೀರರಾಜನೂ

ದೇವಮ್ಮಾಜಿಯೂ ಬಾಲ್ಯದ ಸುಮಾರು ಮೂರು ಸಂವತ್ಸರಗಳನ್ನು ಅಲ್ಲಿಯೇ ಕಳೆದವರು. ದೂರವೋ, ಒಂದೇ ಹರಿದಾರಿ ಮಡಕೇರಿಯಿಂದ. ಈಗ ಆ ಅರಮನೆಯನ್ನೂ ಜಹಗೀರನ್ನೂ ಅಳಿಯನಿಗೆ ಉಡುಗೊರೆಯಾಗಿ ಕೊಟ್ಟು ಮಗಳೊಡನೆ ಅಲ್ಲಿಗೆ ಕಳುಹುವ ಯೋಚನೆ ಲಿಂಗರಾಜನಿಗೆ ಸಮಂಜಸವಾಗಿ ಕಂಡಿತು.

ಹಾಗೆ ಚನ್ನಬಸಪ್ಪನೂ ದೇವಮ್ಮಾಜಿಯೂ ಅಪ್ಪಂಗಳಕ್ಕೆ ಹೋದರು. ದೇವಮ್ಮಾಜಿಗೆ ಆ ದೂರ, ನಡುಮನೆಗೂ ಅಂಗಳಕ್ಕೂ ಇರುವ ಅಂತರ ಎಷ್ಟೋ ಅಷ್ಟೆ. ಹಗಲಿರಲಿ ಇರುಳಿರಲಿ, ತಾಯಿ ಮನೆಯ ನೆನಪಾದರೆ ಸಾಕು ಒಡತಿಯನ್ನು ಹೊತ್ತು ಬೋವಿಗಳು ಮಡಕೇರಿಗೆ ಓಡಬೇಕಾಗುತ್ತಿತ್ತು. ಮಡದಿಯನ್ನು ಚನ್ನಬಸಪ್ಪ ಕುದುರೆಯ ಮೇಲೆ ಕುಳಿತು ಹಿಂಬಾಲಿಸುತ್ತಿದ್ದ.

ಆದರೆ, ತವರು ತವರಲ್ಲ ಎನ್ನುವ ಸ್ಥಿತಿ ದೇವಮ್ಮಾಜಿಯ ಪಾಲಿಗೆ ಬಹಳ ಬೇಗನೆ ಉಂಟಾಯಿತು. ತಂದೆಯ ದೇಹಾಂತ, ಆ ಶೋಕವನ್ನು ತಾಳಲಾರದೆ ವಜ್ರದ ಪುಡಿ ತಿಂದು ತಾಯಿಯ ಮರಣ, ಇವು ರಾಜಕುಮಾರಿಯ ಕನಸಿನಲೋಕಕ್ಕೆ ಕೊಳ್ಳಿ ಇಕ್ಕಿದುವು. ಅಪ್ಪಂಗಳವನ್ನೆ ತನ್ನ ಮನೆ ಎಂದು ದೇವಮ್ಮಾಜಿ ಕಾಣುವಂತಾಯಿತು...

...ಆ ಅಪ್ಪಂಗಳವನ್ನೀಗ ಗಂಗಮ್ಮನೂ ರಾಜಮ್ಮಾಜಿಯೂ ಬಂದು ತಲಪಿದರು. ಒಂದು ಹಗಲು ಒಂದು ಇರುಳು ನಡೆದು ಮೂರನೆಯ ಪೂರ್ವಾಹ್ನ ನೇಸರು ಕೆಂಡವಾಗುವುದಕ್ಕೆ ಮುಂಚೆಯೇ ಅವರು ಅಲ್ಲಿಳಿದರು.

ಯಾವಾಗ ಎಂದು ನಿರ್ದಿಷ್ಟವಾಗಿ ತಿಳಿದಿರದಿದ್ದರೂ ಇವರು ಬರುತ್ತಾರೆ ಎನ್ನುವುದು ದೇವಮ್ಮಾಜಿಗೆ ಗೊತ್ತಿತ್ತು. ಓಲೆಕಾರನೊಬ್ಬ ರಾಜಧಾನಿಯಿಂದ ಬಂದು ಆ ಸುದ್ದಿಯನ್ನು ತಿಳಿಸಿಹೋಗಿದ್ದ. ಅವಳಿಗಾಗಲೀ ಚನ್ನಬಸಪ್ಪನಿಗಾಗಲೀ ಅದು ಬಗೆಹರಿಯದ ಸಮಸ್ಯೆ. ಇವರನ್ನೀಗ ಅರಸು ಕರೆಸುವುದರಲ್ಲಿ ಯಾವ ಗೂಢವಿದ್ದೀತು ?

ದೇವಮ್ಮಾಜಿ ಅಂದಳು :

"ನಾವು ಇಲ್ಲಿ ನಮ್ಮಷ್ಟಕ್ಕೆ ಸುಖವಾಗಿರೋದು ಅಣ್ಣನಿಗೆ ಇಷ್ಟವಿಲ್ಲ. ಇವರ ಕರಕರೆ ಒಂದಿರಲಿ ಅಂತ ಕಳಿಸತಿದಾನೆ. ಗಂಡ ಸತ್ತ ಹುಡುಗಿ ಇಲ್ಲಿಗೆ ಬರೋ ಅಗತ್ಯವಾದರೂ ಏನು ?"

ಆ ಮನೋಭೂಮಿಕೆಯಲ್ಲಿ ನಿಂತೇ ದೇವಮ್ಮಾಜಿ ಬಂದವರನ್ನು ಇದಿರ್ಗೊಂಡಳು.

ಮೇನೆಯಿಂದಿಳಿದ ಗಂಗಮ್ಮ ದೊರೆಮಗಳನ್ನು ಗೌರವ ತೋರಿಸಿ ಮಾತನಾಡಿಸಿದಳು.

"ಚಂದಾಕಿದೀರಾ ?" ಎಂದು ಕೇಳಿದಳು.

ತಾನು ಹೀಗೆ ಕೇಳುವ ಬದಲು ಇವಳೇ ಪ್ರಶ್ನಿಸುತ್ತಿದ್ದಾಳಲ್ಲಾ—ಎಂದು ದೇವಮ್ಮಾಜಿಗೆ ಆಶ್ಚರ್ಯ.

ಅದಕ್ಕೂ ಹೆಚ್ಚಿನ ಅಚ್ಚರಿಗೆ ರಾಜಮ್ಮಾಜಿ ಕಾರಣಳಾದಳು.

ತನ್ನ ಜೊತೆಗಾರನೆಲ್ಲಾದರೂ ಕಾಣಿಸುವನೇನೋ ಎಂದು ಚಿಗರೆಗಣ್ಣುಗಳನ್ನು ಅತ್ತಿತ್ತ ಹೊರಳಿಸಿದ. ದೇವಮ್ಮಾಜಿಯನ್ನು ಕಂಡೊಡನೆ ನಾಚಿ ಮುದ್ದೆಯಾದ, ರಾಜಮ್ಮಾಜಿಯ ಹಣೆಯಮೇಲೆ ಕುಂಕುಮವಿತ್ತು !

ದೇವಮ್ಮಾಜಿ ಅವಾಕ್ಕಾಗಿ ನಿಂತಳು.

ವೀರಪ್ಪ ಸತ್ತುದನ್ನು ಇವರು ಅರಿಯರು—ಎಂಬುದು ಆಕೆಗೆ ಕೆಲ ಕ್ಷಣಗಳಲ್ಲೇ ಮನದಟ್ಟಾಯಿತು.

"ಬನ್ನಿ. ಬಾ ತಂಗಿ" ಎಂದಳು ದೇವಮ್ಮಾಜಿ.

ತನಗೆ ನಮಿಸಿದ ಕುದುರೆ ಸವಾರನನ್ನೂ ಚಾವಡಿಕಾರರನ್ನೂ ಆಳುಗಳನ್ನೂ ಉದ್ದೇಶಿಸಿ ಚೆನ್ನಬಸಪ್ಪ ದರ್ಪದಿಂದ ಅಂದ:

"ಮಡಕೇರಿಗೆ ಸಂಜೆನಾಗ ಓಗ್ರಿ, ತಿಳೀತಾ ?"

"ಆಗಲಿ ಬುದ್ಧಿ" ಎಂದ ಮುಖ್ಯಸ್ಥ.

ಅರಮನೆಯ ದಕ್ಷಿಣ ಮೂಲೆಯ ಎರಡು ಕೋಣೆಗಳನ್ನು ತೆರವು ಮಾಡಲಾಗಿತ್ತು. ಅತಿಥಿಗಳನ್ನೂ ಅವರ ಹಡಪ ಗಂಟುಗಳನ್ನೂ ಅಲ್ಲಿಗೆ ದೇವಮ್ಮಾಜಿ ಸಾಗಿಸಿದಳು.

ಯಾವ ರೀತಿಯಲ್ಲೂ ಸುಸಜ್ಜಿತವಲ್ಲದ ಸಾದಾ ಕೊಠಡಿಗಳು. ನಾಲ್ಕು ದಿನಗಳ ಮಟ್ಟಿಗೆ ಬಂದವರಿಗೆ ಹೆಚ್ಚೇನು ಬೇಕು ?—ಎನ್ನುವಂತೆ ಗೋಡೆಗಳು ಮೂಕವಾಗಿದ್ದುವು.

ಗಂಗಮ್ಮನ ಮುಖ ಕೆಂಪೇರಿತು. ಇದು ಅವಮಾನವಲ್ಲದೆ ಇನ್ನೇನು ?

ಬೀಗರನ್ನು ಕಾಣುವ ಬಗೆಯೆ ಇದು ?

ಕಾಠಿನ್ಯ ಬೆರೆತ ಸ್ವರದಲ್ಲಿ ಅವಳೆಂದಳು:

"ಅಳಿಯದೇವರನ್ನ ಕೋಟೆಮನೆಗೆ ಕರಸಿಕೊಂಡರೂಂತ ಕೇಳಿದ್ವಿ. ವಾಪಸು ಬಂದಿದಾರೇನು ?"

ಬಾಗಿಲ ಕಡೆ ನೋಡುತ್ತ ನಿಂತಿದ್ದ ದೇವಮ್ಮಾಜಿ ಗತ್ತಿನಿಂದ ಕತ್ತು ಹೊರಳಿಸಿ, "ನಿಮಗೆ ಗೊತ್ತಿಲ್ಲ ? ನಿಮ್ಮ ಅಳಿಯ ಆಗಲೇ ತೀರ್ಕೊಂಡ್ರು. ಮಾರಿಬೇನೆಯಂತೆ. ಯಾವ ಬೇನೆಯೋ ಯಾರಿಗೆ ಗೊತ್ತು ? ನಿಮ್ಮ ಅಳಿಯ ಅವರ ತಮ್ಮ ಇಬ್ರೂ ಹೋದ್ರು" ಎಂದು, ಒಂದೇ ಉಸಿರಿಗೆ ಅಂದಳು.

ಗಂಗಮ್ಮನಿಗೆ ಸಿಡಿಲೆರಗಿದಂತಾಯಿತು. ಆದರೂ ಮೂರ್ಛಿತಳಾಗಲೊಪ್ಪದೆ; ದೇವಮ್ಮಾಜಿಯ ಕಡೆಗೆ ಆಕೆ ನೆಗೆದಳು. ಅವಳ ಎರಡೂ ಭುಜಗಳನ್ನು ಹಿಡಿದು ಬಲವಾಗಿ ಕುಲುಕಿದಳು.

"ಬಿಡ್ತು ಅನ್ನು ತಂಗಿ! ಬಿಡ್ತು ಅನ್ನು! ಹಿಂಗೂ ಚ್ಯಾಷ್ಟಿ ಮಾಡತಾರಾ ? ಇದೇನ ತಂಗಿ ನೀ ಯೋಳ್ತಿರೋದು ?"

ದೇವಮ್ಮಾಜಿ ಗಂಗಮ್ಮನ ಕೈಗಳನ್ನು ಕೆಳಕ್ಕಿಳಿಸಲು ನಿಷ್ಫಲವಾಗಿ ಯತ್ನಿಸುತ್ತ, ಪ್ರತಿಭಟಿಸಿದಳು:

"ನಾ ಯಾಕವ್ವ ಸುಳ್ಹೇಳ್ಲಿ ?"

ಮೈಯೆಲ್ಲ ಕಂಪಿಸುತ್ತ ಗಂಗಮ್ಮ ಕೋಪಾವಿಷ್ಟಳಾಗಿ ನುಡಿದಳು:

"ಅಯ್ಯೋ ಚಂಡಾಲರಾ! ಆ ದೂತರು ನನಗೇನೂ ಯೋಳ್ಲೇ ಇಲ್ವಲ್ಲಾ!"

"ಯಾಕೆ ಹೇಳಾರು ? ಬಾಯಿ ಬಿಟ್ಟರೆ ತಲೆ ಓದಾತು ಅಂತ ಎದರ್ಸಿರ್ಬೇಕು."

ದೇವಮ್ಮಾಜಿಯಿಂದ ದೂರ ಸರಿದು ತನ್ನ ಕಾಲುಗಳ ಮೇಲೆಯೇ ನೆಟ್ಟಗೆ ನಿಲ್ಲಲು ಗಂಗಮ್ಮ ಯತ್ನಿಸಿದಳು. ಬವಳಿ ಬಂದಂತಾಯಿತು.

ತಾಯಿಯ ಚೀರಾಟ ಕೇಳಿದ ರಾಜಮ್ಮಾಜಿ ಬೆದರಿ ಪಿಳಿಪಿಳಿ ಕಣ್ಣು ಬಿಡುತ್ತ ಗೋಡೆಯ ಬಳಿ ನಿಂತಿದ್ದಳು. ಅವಳು "ಅಮ್ಮಾ!" ಎಂದು ಕೂಗಿಕೊಳ್ಳುವುದಕ್ಕೂ, ಅರಸುತ್ತ ಬಂದ

ತಾಯಿಯ ದೃಷ್ಟಿ ಅವಳನ್ನು ತಲಪುವುದಕ್ಕೂ ಸರಿಹೋಯಿತು. ಬೆಂಕಿ ಬಿದ್ದ ಮನೆಯೊಳಗಿಂದ ತೊಟ್ಟಿಲಕೂಸನ್ನು ತರಲು ಧಾವಿಸುವವಳಂತೆ ಗಂಗಮ್ಮ ಮಗಳೆಡೆಗೆ ನುಗ್ಗಿ ಅವಳನ್ನು ಭದ್ರವಾಗಿ ಎದೆಗವಚಿಕೊಂಡಳು.

"ಕಂದಾ ! ಕಂದಾ ! ಏನಾಗ್ಹೋಯ್ತು ಮಗಳೇ ! ಅಯ್ಯೋ ! ಹಯ್ಯೋ !"

ಗಂಗಮ್ಮನ ಪಾದಗಳೀಗ ಕುಸಿದುವು. ಬಿಗಿಹಿಡಿದಿದ್ದ ಮಗಳೊಡನೆ ಆಕೆ ಧೊಪ್ಪನೆ ಬಿದ್ದಳು.

ತಾಯಿಯ ಆರ್ತನಾದದಿಂದ, ಯಾಕೆ ? ಏನು ? ಎಂದು ತಿಳಿಯದಿದ್ದರೂ ಹೆತ್ತವಳ ದುಃಖದಲ್ಲಿ ಭಾಗಿಯಾಗುತ್ತ ಮಗಳೂ ಆರಂಭಿಸಿದ ರೋದನದಿಂದ, ಅಪ್ಪಂಗಳದ ಅರಮನೆಯ ಆ ಮೂಲೆ ಪ್ರತಿಧ್ವನಿಸಿತು.

ದೇವಮ್ಮಾಜಿಗೂ ದುಃಖವಾಯಿತು. ಅವಳು ಸಂತೈಸಲೆತ್ನಿಸಿದಳು :

"ಸುಮ್ಕಿರಿ ! ಸುಮ್ಕಿರಿ !"

ವೇಗವಾಗಿ ಹೆಜ್ಜೆಗಳನ್ನಿಡುತ್ತ ಚನ್ನಬಸಪ್ಪ ಅಲ್ಲಿಗೆ ಬಂದು, ಬಾಗಿಲ ಹೊರಗೆ ನಿಂತು, ಅಂದ :

"ಅಳಬಾರದು, ಅಳಬಾರದು."

ಗಂಗಮ್ಮನನ್ನೂ ರಾಜಮ್ಮಾಜಿಯನ್ನೂ ಅಲ್ಲಿಗೆ ತಂದುಬಿಟ್ಟವರಿಗೆ ಸಂದರ್ಭ ತಿಳಿಯಿತು. ಅವರ ಮುಖ್ಯಸ್ಥ ಬಂದು ಚನ್ನಬಸಪ್ಪನೊಡನೆ ಇಳಿದನಿಯಲ್ಲಿ ಅಂದ :

"ಅಪ್ಪಣೆ ಕೊಡಬೇಕು. ನಾವು ಈಗಲೇ ಮಡಕೇರಿಗೆ ಹೋಗತೀವಿ."

ಚನ್ನಬಸಪ್ಪ ಸಿಟ್ಟಾಗಿ, "ಏನಂದೆ ?" ಎಂದು ಗದರಿದ.

ಆ ಸಂಕಟದ ಮಧ್ಯೆಯೂ ದೂತನ ವಿನಂತಿಯನ್ನು ಕೇಳಿಸಿಕೊಂಡ ಗಂಗಮ್ಮ ಏಳಲೆತ್ನಿಸುತ್ತ ಚೀರಿದಳು :

"ಹೋಗುವವರು ನಾವು. ನಮ್ಮನ್ನ ವಾಪಸ್ಸು ಹಳ್ಳಿಗೆ ಮುಟ್ಟಿಸಿ ನೀ ಬೇಕಾದಲ್ಲಿಗೆ ಓಗಪ್ಪ."

"ಆಕಡೆಗಿರು. ಇತ್ತ ಬರಬಾರದು : ಅರಮನೆ ಹೆಣ್ಣುಮಕ್ಕಳು ಇರುವಲ್ಲಿಗೆ ಚಾಕರರು ಬರತಾರಾ ? ನಡಿಯೋ !" ಎಂದು ಚನ್ನಬಸಪ್ಪ ಹುಬ್ಬೇರಿಸಿ ನುಡಿದ.

ದೂತರ ಮುಖ್ಯಸ್ಥನೆಂದ :

"ನಾವಿಲ್ಲಿ ಇರಬಾರದು ಧಣಿಗಳೆ. ಹೊರಡತೇವಿ. ತಪ್ಪೇನಿದ್ದರೂ ಉಡೀಲಿ ಹಾಕ್ಕೋಬೇಕರಾ."

"ಹೋಗು ! ಹಾಳಾಗ್ಹೋಗು ನಿನ್ನ ಕೆಟ್ಟ ಮೋರೆ ತಗೊಂಡು !"

ಹೊರಟುಹೋದ ದೂತನನ್ನೊಮ್ಮೆ ಕೆಂಗಣ್ಣಿನಿಂದ ನೋಡಿ, ಗಂಗಮ್ಮನ ಕಡೆ ತಿರುಗಿ, ರಮಿಸುವ ಧ್ವನಿಯಲ್ಲಿ ಚನ್ನಬಸಪ್ಪನೆಂದ :

"ಛು ! ಛು ! ನೀವು ಯಾವ ಚಿಂತೇನೂ ಮಾಡಬಾರದು. ನಾವಿಲ್ಲವಾ ? ನಾವಿಲ್ಲವಾ ?"

## ೧೪

ಮಾರನೆಯ ದಿನ ಕೊಡಗಿನ ರಾಣಿ ಗೌರಮ್ಮ ಅಪ್ಪಂಗಳಕ್ಕೆ ಬಂದಳು.

ಅನ್ನ ನೀರು ಮುಟ್ಟದೆ ಇರುಳೆಲ್ಲ ರೋದಿಸಿ ಯೋಚಿಸಿ ಬೆಂಡಾಗಿದ್ದ ಗಂಗಮ್ಮ ಅದೇ

ಆಗ ಸ್ನಾನ ಮಾಡಿ, ಹಣೆಗೆ ವಿಭೂತಿ ಬಳೆದುಕೊಂಡು, ಮುಡಿ ಕಟ್ಟಿಕೊಳ್ಳದೆಯೇ, ಶಿವನನ್ನು ಧ್ಯಾನಿಸುತ್ತ ಕುಳಿತಿದ್ದಳು.

ಹಿಂದಿನ ರಾತ್ರೆ, "ಏನಾದರೂ ತೆಗೊಳ್ಳಿ" ಎಂದು ಪರಿಪರಿಯಿಂದ ದೇವಮ್ಮಾಜಿ ಕೇಳಿದ್ದರೂ ಗಂಗಮ್ಮ ಕೊಟ್ಟುದೊಂದೇ ಉತ್ತರ :

"ನನಗೇನೂ ಬ್ಯಾಡ."

"ರಾಜಮ್ಮಾಜಿನಾದರೂ ತಗೊಳ್ಳಿ—" ಎಂದಳು ದೇವಮ್ಮಾಜಿ ಕಡೆಯಲ್ಲಿ.

ಗಂಗಮ್ಮ ಆಕ್ಷೇಪಿಸಲಿಲ್ಲ.

"ಕರಕೊಂಡು ಓಗಮ್ಮ. ಶಾಂತೂ, ಓಗು ಅಕ್ಕನ ಜತೆಗೆ."

ಹಸಿದಿದ್ದ ರಾಜಮ್ಮಾಜಿ, ಅಪ್ಪಂಗಳದ ಒಡತಿಯನ್ನು ಹಿಂಬಾಲಿಸಿದಳು.

ಅರೆಮನಸ್ಸಿನ ಉಣಿಸು. ಅರ್ಧದಲ್ಲೇ ರಾಜಮ್ಮಾಜಿ ಅಂದಿದ್ದಳು :

"ಸಾಕು."

ತಾಯಿ ಇದ್ದೆಡೆಗೆ ಆಕೆ ಮರಳಿದಳು. ಸ್ವಲ್ಪ ಹೊತ್ತಿನಲ್ಲೇ ಅವಳಿಗೆ ನಿದ್ದೆ ಬಂತು.

ಬೆಳಿಗ್ಗೆ ಅವಳೂ ಮಿಂದು ಹಣೆಗೆ ವಿಭೂತಿ ಹಚ್ಚಿಕೊಂಡು ತಾಯಿಯ ಮಗ್ಗುಲಲ್ಲಿ ಕುಳಿತಳು.

...ಅಪ್ಪಂಗಳಕ್ಕೆ ಬಂದ ಗೌರಮ್ಮ ದೇವಮ್ಮಾಜಿಯನ್ನು ಹಿಂಬಾಲಿಸಿ ನೇರವಾಗಿ ತಾಯಿ—ಮಗಳಿದ್ದ ಕೊಠಡಿಯನ್ನು ಹೊಕ್ಕಳು.

ಸಪ್ಪಳವಾಯಿತೆಂದು ಗಂಗಮ್ಮ ಕಣ್ಣು ಬಿಟ್ಟು ನೋಡಿದಳು. ಯಾರು ?—ಎಂಬುದು ಮೊದಲ ನೋಟಕ್ಕೆ ಹೊಳೆಯಲಿಲ್ಲ. ತನ್ನ ಮಗಳ ಮದುವೆಯಲ್ಲಿ ಕಂಡಿದ್ದಳು ಆ ಶೋಭನಾಂಗಿಯನ್ನು. ಗೌರಮ್ಮ ಅಲ್ಲವೆ ? ರಾಣಿ. ತಾನು ಏಳಬೇಕು.

ಏಳಲು ಅವಕಾಶವನ್ನೇ ಕೊಡದೆ ಗೌರಮ್ಮ ಬಂದು ಆಕೆಯ ಪಾದಗಳನ್ನು ಹಿಡಿದಳು.

"ಬಿಡಿ ತಾಯಿ" ಎಂದಳು ಗಂಗಮ್ಮ.

ನಮಿಸಿದ ಬಳಿಕ ಗೌರಮ್ಮ, ತಾನೂ ನೆಲದಮೇಲೆ ಕುಳಿತಳು. ಅಲ್ಲಿದ್ದ ಒಂಟಿ ಪಲ್ಲಂಗದ ಮೇಲೆ ದೇವಮ್ಮಾಜಿ ಆಸೀನಳಾದಳು.

ಗೌರಮ್ಮನ ಆಗಮನ, ನಡುಬಿಸಿಲಲ್ಲಿ ತೂರಿಬಂದ ಬೆಳುದಿಂಗಳಿನ ಹಾಗಿತ್ತು ಗಂಗಮ್ಮನ ಪಾಲಿಗೆ. ಆದರೂ ನಿರ್ವಿಕಾರ ಮುಖಭಾವದಿಂದ ರಾಣಿಯನ್ನು ಅವಳು ದಿಟ್ಟಿಸಿದಳು.

ಗಂಗಮ್ಮನನ್ನೂ ರಾಜಮ್ಮಾಜಿಯನ್ನೂ ಒಂದು ಕ್ಷಣ ನೋಡುತ್ತಲಿದ್ದು, ನಿಟ್ಟುಸಿರು ಬಿಟ್ಟು, ಗೌರಮ್ಮ ಅಂದಳು :

"ನೋಡ್ಕೊಂಡು ಹೋಗಾನ ಅಂತ ಬಂದೆ, ಅತ್ತೆಮ್ಮ."

ಗಂಗಮ್ಮ ಉತ್ತರವೀಯಲಿಲ್ಲ. ಕ್ಷಣ ಬಿಟ್ಟು ಗೌರಮ್ಮನೇ ಅಂದಳು :

"ರಾಜಮ್ಮಾಜೀನ ಅರಮನೆಗೆ ಕರೆಸಿಕೋಬೇಕು ಅಂತ ಮನಸ್ಸಿತ್ತು. ಆದರೆ ಒಡೆಯರು, ತಾಯಿ-ಮಗಳಿಗೆ ಅಪ್ಪಂಗಳಾನೆ ಹಿಡಿಸಾತು, ಅಂದರು. ಮೈದುನಂದಿರು ಹುಟ್ಟಿ ಬೆಳೆದ ತಾವು. ಇದೇ ಪಸಂದಾಗ್ತದೆ ಅಂತ ನನಗೂ ಅನಿಸಿತು."

ರಾಜ ಅಷ್ಟನ್ನೇನೂ ಹೇಳಿರಲಿಲ್ಲ. ರಾಣಿ ಕಲ್ಪಿಸಿಕೊಂಡು ನ್ಯಾಯೋಚಿತವೆನಿಸಿದುದನ್ನು ಅಂದಿದ್ದಳು.

ಅದನ್ನು ಕೇಳಿದಮೇಲೆ ಎರಡು ಕ್ಷಣ ಮೌನವಾಗಿದ್ದು ಗಂಗಮ್ಮನೆಂದಳು :

"ಏನ ಕೊಟ್ಟು ಎಂತ ಸೌಭಾಗ್ಯ ಕೊಂಡಂತಾಯ್ತು, ತಾಯಿ. ನಮಗೂ ದೊರೆ ಕುಲಕ್ಕೂ ಋಣ ಹರೀತು."

ಕಿರಿಯವಳಾದರೂ ತಿಳಿವಳಿಕೆಯ ಮಾತನ್ನು ಗೌರಮ್ಮ ಆಡಿದಳು :

"ಅದು ಹ್ಯಾಗೆ ? ಲೋಕ ಏನಂದಾತು ? ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ರಾಜಮ್ಮಾಜಿ ಈಗ ಕೊಡಗು ಅರಮನೆಗೆ ಕಳ್ಳುಬಳ್ಳಿ. ಒಡವೆ ಇಲ್ಲೇ ಇರಬೇಕು ಅಲ್ಲವಾ ?"

"ನನಗಿರೋದೂ ಇದೊಂದೇ ಒಡವೆ. ಅದನ್ನ ಬಿಟ್ಟು ನಾ ಇರತೀನಾ ?"

ಪಲ್ಲಂಗದ ಮೇಲಿಂದ ದೇವಮ್ಮಾಜಿ ಮಾತು ಸೇರಿಸಿದಳು.

"ಆ ಒಡವೇನ ಕೊಟ್ಟುಬಿಟ್ಟದೀರಿ, ಅಲ್ಲವಾ ಅತ್ತೆ ?"

ಕೊಟ್ಟಿದ್ದು ನಿಜ. ಬಿಟ್ಟದ್ದು ಸುಳ್ಳು. ಹಳ್ಳಿಗೆ ವಾಪಾಸು ಒಗೋದಕ್ಕೆ ನಮಗೆ ಅನುಮತಿ ಕೊಟ್ಟರಾದಾತು. ದೊರೆಯ ಹತ್ತಿರ ನಾವು ಬೇಡ್ಕೊಳ್ಳೋದು ಇದನ್ನೇ."

ಗೌರಮ್ಮ ಮುಖ ಬಾಡಿಸಿ ಕುಳಿತಳು.

ಗಂಗಮ್ಮನೇ ಅಂದಳು :

"ಶಾಂತೂಗೇನು ತಿಳೀತದೆ ? ಅದು ಮಗು. ದೊಡ್ಡೋಳಾಗಿದ್ದಿದ್ದರೆ ಬೇರೆ ಮಾತಾಗ ತಿತ್ತು."

ಗೌರಮ್ಮನ ತುಟಿಗಳು ಪ್ರಯಾಸದಿಂದ ತೆರೆದುಕೊಂಡುವು.

"ನಾ ಕೇಳಕೋತೀನಿ, ಅತ್ತೆಮ್ಮ. ಇವತ್ತು ಬ್ಯಾಡ. ಇನ್ನೂ ಸ್ವಲ್ಪ ದಿನ ಬಿಟ್ಟು ಇದರ ಯೋಚನೆ ಮಾಡಾನ. ಸೂತಕ ಕಳೀಲಿ. ಮಡಕೇರಿಗೂ ಒಮ್ಮೆ ಬನ್ನಿ."

ತುಸು ಮೆತ್ತಗೆ ಆಕೆಯೇ ಮತ್ತೂ ಅಂದಳು :

"ಇಲ್ಲಿ ನಿಮಗೇನೂ ಕಷ್ಟ ಆಗದಹಾಗೆ ನೋಡಿಕೋತೇನೆ. ಏನು ಬೇಕಿದ್ದರೂ ಹೇಳಿ ಕಳಿಸಿ."

ರಾಣಿಯನ್ನು ದುರದುರನೆ ನೋಡಿ ದೇವಮ್ಮಾಜಿ ಅಂದಳು :

"ಇಲ್ಲಿ ಎಲ್ಲಾ ಅದೆ. ಬಂದವರಿಗೆ ನಾವೇನೂ ಕಮ್ಮಿ ಮಾಡೋದಿಲ್ಲ ಅತ್ತಿಗೆ."

ಗೌರಮ್ಮ ನೊಂದವಳಂತೆ ದೇವಮ್ಮಾಜಿಯ ಕಡೆ ನೋಡಿದಳು.

"ಕಮ್ಮಿ ಮಾಡತೀರಿ ಅಂದೆನೆ ? ಅಪ್ಪಂಗಳದ ಮನೆ ಬೇರೆ ಅಲ್ಲ, ಮಡಕೇರಿ ಮನೆ ಬೇರೆ ಅಲ್ಲ—ಅಂತ ತಿಳಿಸ್ದೆ. ತಪ್ಪಾಯಿತಾ ?"

ಗಂಗಮ್ಮನೆಂದಳು :

"ಯಾರದೂ ತಪ್ಪಿಲ್ಲ. ಗಂಡನ ಮನೇಲಿ ಅದರ ಕೊರತೆ ಇದರ ಕೊರತೆ ಅಂತ ಹೆಣ್ಣು ಎಲ್ಲಾದರೂ ದೂರತದ ? ದೇವಮ್ಮಾಜಿ ಅವಳ ತಂಗಿಗೇನೂ ಕಮ್ಮಿ ಮಾಡಲ್ಲ."

ದೇವಮ್ಮಾಜಿ ಎಷ್ಟೆಂದರೂ ಅರಸುಮಗಳು. ಗೌರಮ್ಮ ಕುಲದಿಂದ ಹೊರಗೆ ಬಂದು ರಾಣಿಯಾದವಳು. ಆ ತಾರತಮ್ಯವನ್ನು ದೇವಮ್ಮಾಜಿ ಮರೆಯಬೇಕು ಹೇಗೆ ? ಬಿಗು-ಮಾನದ ದೃಷ್ಟಿಯಿಂದ ಗೌರಮ್ಮನನ್ನು ಆಕೆ ನೋಡಿದಳು.

ಸಹನಶೀಲತೆ ಮೈಗೂಡಿದ್ದ ಗೌರಮ್ಮ ವಿಷಯ ಬದಲಿಸಿ, "ರಾಜಮ್ಮಾಜಿ, ಇಲ್ಲಿ ಬಾ ತಂಗಿ" ಎಂದು ಕರೆದಳು.

"ಒಗು ಶಾಂತೂ" ಎಂದಳು ಗಂಗಮ್ಮ.

ರಾಜಮ್ಮಾಜಿ ಸಂಕೋಚಪಡುತ್ತ, ಸರಳವಾಗಿಯಾದರೂ ಸಾಲಂಕೃತಳಾಗಿದ್ದ ಗೌರಮ್ಮನ ಬಳಿಗೆ ಬಂದಳು.

"ಕೂತ್ಕೋ ರಾಜಮ್ಮಾಜಿ."

ಗೌರಮ್ಮನ ಮಗ್ಗುಲಲ್ಲಿ ಆಕೆ ಕುಳಿತಳು.

ತನ್ನ ಬಾಹುವಿನಿಂದ ಅವಳನ್ನು ಗೌರಮ್ಮ ಬಳಸಿದಳು. ಮತ್ತೊಂದು ಕೈಯಿಂದ ಮುಂಗುರುಳನ್ನು ನೇವರಿಸಿದಳು. ಮುಗ್ಧೆ ಬಾಲೆಗೆ ಈ ಪ್ರೀತಿ ಪ್ರದರ್ಶನ ಅಪ್ಯಾಯಮಾನವಾಗಿತ್ತು.

ಗೌರಮ್ಮ ಉಗುಳು ನುಂಗಿ, ತನ್ನ ತೋಳನ್ನು ಸಡಿಲಿಸಿಕೊಂಡಳು. ಕ್ಷಣ ಹೊತ್ತು ಮೌನವಾಗಿದ್ದು, "ಬರತೇನೆ, ಅತ್ತೆಮ್ಮ, ನೀವು ಏಳಬೇಡಿ" ಎಂದಳು.

ಆದರೂ ಗಂಗಮ್ಮ ಎದ್ದು, "ಓಗ್ಬನ್ನಿ, ತಾಯಿ" ಎಂದು ಗದ್ಗದಿತಳಾಗಿ ಅಂದಳು.

...ಗೌರಮ್ಮ ಮೇನೆಯ ಬಳಿಗೆ ನಡೆಯತೊಡಗಿದಾಗ ದೇವಮ್ಮಾಜಿ ಕೇಳಿದಳು :

"ಹಂಗೇ ಒರಡತೀಯಾ ಅತ್ತಿಗೆ ?"

"ಬಾಳ ಹೊತ್ತಾತು. ಇನ್ನೊಂದ್ಸಾರ್ತಿ ಬರತೀನಿ."

"ಬಂದವರ್ನ ಸರಿಯಾಗಿ ನೋಡ್ಕಂಡಿಲ್ಲ, ಹಂಗೆ—ಹಿಂಗೆ ಅಂತ ಅಣ್ಣನಿಗೇನೂ ಹೇಳಬ್ಯಾಡ, ಕಂಡೆಯಾ ?"

"ಹುಚ್ಚಿ ! ಎಂಥೆಂಥಾ ಯೋಚನೆ ಮಾಡತೀಯಮ್ಮ."

ಗೌರಮ್ಮ ಮೇನೆಯನ್ನು ಹೋಗುತ್ತಲಿದ್ದಂತೆ ಅವಳನ್ನು ಬೀಳ್ಕೊಡುವ ಔಪಚಾರಿಕ ಮಾತನ್ನಾಡಲು ಚನ್ನಬಸಪ್ಪನೂ ಅಲ್ಲಿಗೆ ಬಂದ.

## ೧೫

ನಂಜರಾಜಪಟ್ಟಣ ಕಾವೇರಿ ನದಿಯ ದಕ್ಷಿಣ ದಂಡೆಯಲ್ಲಿತ್ತು. ವೀರಪ್ಪಾಜಿಯೂ ಮಲ್ಲಪ್ಪಗೌಡನೂ ಉತ್ತರದಿಂದ ನದಿಯನ್ನು ಸಮೀಪಿಸುತ್ತಲಿದ್ದಂತೆ ಮಧ್ಯ ವಯಸ್ಕನಾದ ಒಬ್ಬ ಜಂಗಮನನ್ನು ಕಂಡರು.

ವೀರಪ್ಪನೆಂದ :

"ಇವರಕೂಡೆ ಮಾವ-ಅಳಿಯ ಸಂಬಂಧದ ಕಥೆ ಬೇಡ, ಮಲ್ಲಪ್ಪಣ್ಣ. ಆಗದಾ ?"

"ಹೆಂಗೂ ಪಟ್ಣಕ್ಕೆ ಬಂದದ್ದಾಯ್ತು. ಇನ್ನು ನಿಮ್ಮಿಷ್ಟ" ಎಂದು ಮಲ್ಲಪ್ಪ ಉತ್ತರವಿತ್ತ.

ಜಂಗಮನೂ ನದಿಯ ಕಡೆಗೇ ಸಾಗಿದ್ದ. ದಾರಿಹೋಕರಿಬ್ಬರನ್ನು ನೋಡಿ ಅವನು ನಡಿಗೆಯನ್ನು ನಿಧಾನಗೊಳಿಸಿದ. ಇವರು ಹತ್ತಿರಬಂದಂತೆ ಜಂಗಮ ಕೇಳಿದ :

"ಯಾವೂರಾಯ್ತು ?"

ವೀರಪ್ಪ ಮಲ್ಲಪ್ಪರಿಬ್ಬರೂ ಆತನಿಗೆ ನಮಸ್ಕರಿಸಿದರು.

"ಮಡಕೇರಿ ನಾಡಿನಿಂದ ಬರತಾ ಇದೀವಿ, ಅಯ್ಯನವರೆ" ಎಂದ ವೀರಪ್ಪ.

"ಪಟ್ಣಕ್ಕೆ ಹೊಂಟಿದೀರೊ ?"

"ಹೌದು ಅಯ್ಯನವರೇ. ಶಿವಾಚಾರ್ಯಸ್ವಾಮಿಗಳ ದರ್ಶನಕ್ಕೇಂತ ಹೊಂಟಿದೀವಿ."

"ಸಂತೋಷ. ಪಟ್ಣಕ್ಕೆ ಹೊಸಬರೊ ?"

"ಹೌದರೀ."

"ಈ ಪಟ್ಣದ ಐತಿಹ್ಯ ಗೊತ್ತಾ ?"

"ಚೂರುಪಾರು ಬಲ್ಲೆವಿ. ಅಯ್ಯನವರ ಬಾಯಿಂದ ಕೇಳೋದು ಪುಣ್ಯ ಅಂದ್ಕೊತೀವಿ."

"ಶಿವ ಶಿವ ಶಿವ" ಎಂದ ಜಂಗಮ. ನಿಮಿಷ ಮೌನದಿಂದಿದ್ದು ದಾರಿ ನಡೆಯುತ್ತ ಪಟ್ಣದ ಐತಿಹ್ಯವನ್ನು ಆತ ಹೇಳತೊಡಗಿದ.

"ಸುಮಾರು ನೂರು ವರ್ಷಕ್ಕೆ ಹಿಂದೆ ಇಲ್ಲಿ ಪಟ್ಣನೇ ಇರಲಿಲ್ಲ. ಆಗ ಇದೊಂದು ಕುಗ್ರಾಮ. ಹೆಸರು ಹೊಳೆಸಾಲಳ್ಳಿ...

* * *

ಅದು, ಹಾಲೇರಿ ವಂಶದ ಸಿರಿಬಾಯಿ ದೊಡ್ಡವೀರಪ್ಪ ಕೊಡಗನ್ನು ಆಳುತ್ತಲಿದ್ದ ಕಾಲ. ಆಗ ಮೈಸೂರು ಸಂಸ್ಥಾನದಲ್ಲಿ ಚಿಕ್ಕದೇವರಾಯ ಒಡೆಯ, ಇಕ್ಕೇರಿ ಸಂಸ್ಥಾನದಲ್ಲಿ ದೊಡ್ಡ ಚನ್ನಮ್ಮಾಜಿ, ಸ್ವಾದೆ ಸಂಸ್ಥಾನದಲ್ಲಿ ಸದಾಶಿವರಾಜ, ಬೇಲೂರು ಸಂಸ್ಥಾನದಲ್ಲಿ ವೆಂಕಟಾದ್ರಿನಾಯಕ. ಚಿರಕಾಲ ಸಂಸ್ಥಾನದಲ್ಲಿ ವೀರವರ್ಮರಾಜ ರಾಜ್ಯಭಾರ ಮಾಡುತ್ತಿದ್ದರು.

ಪೆರಿಯಾಪಟ್ಟಣ ಪ್ರದೇಶವನ್ನು ಆಗ ದೊಡ್ಡವೀರಪ್ಪನ ಸಂಬಂಧಿಕನಾದ ನಂಜುಂಡ ಅರಸು ಆಳುತ್ತಿದ್ದ. ಅವನ ಚಾಕರ ಜನ ಕೆಲವರು, "ಫವುಜು ಕಳುಹಿಸಿಕೊಟ್ಟರೆ ಈ ಕೋಟೆ ನಿಮ್ಮ ಕೈವಶಮಾಡಿಕೊಡುತ್ತೇವೆ" ಎಂದು ಮೈಸೂರಿನ ದೊರೆಯೊಡನೆ 'ಚದಿ ಸಂಧಾನ' ನಡೆಸಿದರು. ಚಿಕ್ಕದೇವರಾಯ ಆ ಕೋಟೆಯನ್ನೂ ಸುತ್ತಲಿನ ಸೀಮೆಯನ್ನೂ ಗೆಲ್ಲಲು ಸಿದ್ಧನಾದ.

ಇದು ತಿಳಿದು ನಂಜುಂಡರಸನು ಚಿಂತೆಗೀಡಾದ. ಮಡಕೇರಿಗೆ ಹೋಗಿ ಸಹಾಯ ಪಡೆಯೋಣವೆಂದು, ಪೆರಿಯಾಪಟ್ಟಣದಲ್ಲಿ ತನ್ನ ಮಗ ವೀರರಾಜನನ್ನು 'ಮಡಗಿ' ಪ್ರಯಾಣ ಹೊರಟ. ಈ ವಾರ್ತೆಯನ್ನು ತಿಳಿದ ಚಿಕ್ಕದೇವರಾಯ ಅವಸರ ಅವಸರವಾಗಿ ಪೆರಿಯಾಪಟ್ಟಣಕ್ಕೆ ಸೇನೆಯನ್ನೊಯ್ದು ಮುತ್ತಿಗೆ ಹಾಕಿದ. ದೊಡ್ಡವೀರಪ್ಪ ಸಿದ್ಧೇಶ್ವರ ಬೆಟ್ಟವನ್ನು ತಲಪುವ ವೇಳೆಗಾಗಲೇ ಪೆರಿಯಾಪಟ್ಟಣದಲ್ಲಿ ನಿಕರದ ಕಾಳಗ ನಡೆದಿತ್ತು. ಕಿರಿಯವನಾದ ವೀರರಾಜ, ಶರಣಾಗತಿಗಿಂತ ವೀರ ಮೃತ್ಯು ಮೇಲೆಂದು, ತನ್ನ ಕುಟುಂಬವನ್ನೆಲ್ಲ ಕೈಯಾರೆ ಕೊಂದು, ತಾನೂ ಹೋರಾಡುತ್ತ ಮಡಿದ. ಇದನ್ನು ಕೇಳಿದ ದೊಡ್ಡವೀರಪ್ಪ, "ದುಡುಕಿದ ರಾಗದು. ಇನ್ನು ಮೈಸೂರವರು ಬಡಾಯಿಸಿ ಕೊಡಗಿನ ಸೀಮೆಯೊಳಕ್ಕೆ ನುಗ್ಗಿ ಬಂದಾರು" ಎಂದು, ಎಲ್ಲೆಗಟ್ಟಿನ ಬಂದೋಬಸ್ತನ್ನಷ್ಟು ಮಾಡಿ, ಮಡಕೇರಿಗೆ ಹಿಂತಿರುಗಿದ.

ಅಲ್ಲಿದ್ದ ನಂಜುಂಡರಸ, ನಡೆದ ವೃತ್ತಾಂತವನ್ನೆಲ್ಲ ತಿಳಿದಾಗ ಅಪಾರ ವ್ಯಥೆಗೆ ಗುರಿಯಾದ.

ಆಗ ದೊಡ್ಡವೀರಪ್ಪ, "ನಿಮ್ಮ ಕುಮಾರರು ತೀರಿಹೋದಾಗ್ಲೂ ಆ ಮೈಸೂರವರು ಮಾಡಿದ್ದಕ್ಕೆ ಪ್ರತಿ ಜವಾಬು ಕೊಡುವ ಬಗ್ಗೆ ನಿಮ್ಮ ಅಣ್ಣನ ಮಗನಾಗಿ ನಾವು ಹಾಜರು ಇದ್ದೇವೆ. ಇದರಮೇಲೆ ನಮ್ಮ ಅರಮನೆಯಲ್ಲು ಇರುವಂತಹ ಚಿಕ್ಕವರು ದೊಡ್ಡವರು ಸಹ ತಮ್ಮ ಮಕ್ಕಳೋಪಾದಿಯಲ್ಲಿ ಇದ್ದಾರೆ. ತಾವು ಎಲ್ಲಾ ಬಗೆಯಲ್ಲು ನಿಶ್ಚಿಂತರಾಗಿ ಇರಬೇಕು" ಎಂದು ಸಂತೈಸುವ ಮಾತನ್ನಾಡಿದ.

ಅದಕ್ಕೆ ನಂಜುಂಡರಸನೆಂದ :

"ಮುಪ್ಪಿನ ವೇಳೆಯಲ್ಲಿ ನೋಡಬಾರದಂಥಾ ಅವಸ್ಥೆ ಮಹಾದೇವನು ತೋರಿಸಿದ. ನಾವಿನ್ನು ಈ ಲೋಕದ ಆಸೆ ತೊರೆದು ಶಿವಧ್ಯಾನ ಮಾಡಿಕೊಂಡು ಇರತೇವೆ. ನಮ್ಮ ಕೈಯಿಂದ ಬಿಟ್ಟುಹೋದಂಥ ಸೀಮೆಯನ್ನು ನೀವು ಸಾಧಿಸಿಕೊಳ್ಳಬೇಕು. ನಮ್ಮ ಆಯುಷ್ಯ ತೀರುವ ಪರಿಯಂತ ಇರುವ ಬಗ್ಗೆ ಒಂದು ಮನೆ, ನಮ್ಮ ಮನೆ ದೇವರಾದ ವೀರಭದ್ರ ದೇವರಿಗೆ ಒಂದು ದೇವಸ್ಥಾನ ಸಹ, ಕಟ್ಟಿಸಿಕೊಡಬೇಕು. ಇದಲ್ಲದೆ ನಮ್ಮ ಹೆಸರಲ್ಲಿ ಒಂದು ಲಿಂಗಪ್ರತಿಷ್ಠೆ ಮಾಡಬೇಕು ಎಂಬುದಾಗಿ ನಮ್ಮ ಮನಸ್ಸಿನಲ್ಲಿ ಇದೆ. ಈ ಬಗ್ಗೆ ಕಾವೇರಿ ಹೊಳೆಕೆರೆಯಲ್ಲಿ ಒಂದು ದೇವಸ್ಥಾನ ಕಟ್ಟಿಸಿ, ಅದರಲ್ಲಿ ನಮ್ಮ ಹೆಸರಿಂದ ಲಿಂಗಪ್ರತಿಷ್ಠೆ ಮಾಡಿಸಿ, ನಮ್ಮ ಆಯುಷ್ಯ ತೀರಿದಮೇಲೆ ಆ ದೇವಸ್ಥಾನದ ಮುಂದೆ ನಮ್ಮ ಸಮಾಧಿ ಮಾಡಿ ಅದರ ಮೇಲೆ ಕಲ್ಲುಮಂಟಪ ಕಟ್ಟಿಸಿ ಅದರ ಒಳಗೆ ಬಸವೇಶ್ವರ ದೇವರ ಪ್ರತಿಷ್ಠೆ ಮಾಡಿಸಬೇಕು."

* * *

ಕತೆ ಹೇಳುತ್ತಲಿದ್ದ ಜಂಗಮ, ಶ್ರೋತೃಗಳಾಗಿದ್ದ ವೀರಪ್ಪ ಮತ್ತು ಮಲ್ಲಪ್ಪ, ಆಗಲೇ ಕಾವೇರಿಯ ದಂಡೆಯನ್ನು ತಲಪಿದ್ದರು. ಮೇಲುಗಡೆಯೆಲ್ಲ ಕುಣಿಯುತ್ತ ಕುಪ್ಪಳಿಸುತ್ತ ಕಾವೇರಿ ಬಂದಿದ್ದರೂ ಅಲ್ಲಿ ಸ್ವಲ್ಪ ದೂರದ ತನಕ ಆಕೆ ಶಾಂತವಾಗಿ ಹರಿಯುತ್ತಿದ್ದಳು.

ಜಂಗಮನೆಂದ :

"ಇಳೀರಿ. ಇಲ್ಲೆಲ್ಲಾ ಮೊಣಕಾಲಮಟ ನೀರು. ನಾವೆಲ್ಲಾ ಪಾಪಿಗಳೇ! ಇದನ್ನು ದಾಟಿ ಆ ಕಡೆಗೆ ಹೋದಮ್ಯಾಲೆ ದೇವರ, ಸ್ವಾಮಿಗಳ, ದರ್ಶನವಾಗತದೆ."

ಅವರೆಲ್ಲ ನದಿಗಿಳಿದು ದಾಟತೊಡಗಿದಂತೆ, ಜಂಗಮ ಕತೆ ಮುಂದುವರಿಸಿದ :

"ಮುಂದೇನಾಯ್ತು ಅಂದರೆ...

* * *

ನಂಜುಂಡರಸನಿಗೆ ಒಪ್ಪಿಗೆಯಾದ ಹೊಳೆಸಾಲಲ್ಲಿಯಲ್ಲಿ ದೊಡ್ಡವೀರಪ್ಪ ಒಡೆಯ ಒಂದು ಅರಮನೆಯನ್ನು ಕಟ್ಟಿಸಿ, ಅದರ ಸುತ್ತ ಕಂದಕ ತೆಗೆಸಿದ. ನಂಜುಂಡರಸ ಅಲ್ಲಿ ವಾಸಿಸುವಂತೆ ಮಾಡಿ, ಆ ಊರಿಗೆ ನಂಜುಂಡರಾಜಪಟ್ಟಣ ಎಂದು ಹೆಸರಿಟ್ಟ. ಅರಸನ ಮೈಗಾವಲಿಗೆ ಏಳುನೂರ ಜನ ಕೊಡಗರನ್ನು ನೇಮಿಸಿದ. ಹೇರಳ ದ್ರವ್ಯ ವೆಚ್ಚಮಾಡಿ ವೀರಭದ್ರ ದೇವಸ್ಥಾನವನ್ನು ಕಟ್ಟಿಸಿದ. ಇನ್ನೊಂದು ದೇವಾಲಯವನ್ನು ಕಲ್ಲಿನಿಂದ ಕಟ್ಟಿಸಿ, ಅದರಲ್ಲಿ ಲಿಂಗಪ್ರತಿಷ್ಠೆಮಾಡಿ, ಅದನ್ನು ನಂಜುಂಡೇಶ್ವರ ಎಂದು ಕರೆದ.

ಕೆಲ ದಿನಗಳಮೇಲೆ ನಂಜುಂಡರಸನು ಶಿವಾಧೀನನಾದ. ದೊಡ್ಡವೀರಪ್ಪ ಆ ದೇವಸ್ಥಾನದ ಮುಂದೆ ಸಮಾಧಿಮಾಡಿಸಿ, ಅದರ ಮೇಲೆ ಕಲ್ಲುಮಂಟಪವನ್ನು ಕಟ್ಟಿಸಿ, ಒಳಗೆ ದೊಡ್ಡದಾಗಿ ಬಸವೇಶ್ವರ ದೇವರ ಪ್ರತಿಷ್ಠೆ ಮಾಡಿಸಿ, ದೇವಸ್ಥಾನದ ವೆಚ್ಚದ ಬಗ್ಗೆ ಆಚಂದ್ರಾರ್ಕಪರ್ಯಂತ ಧರ್ಮ ನಡೆಯುವುದಕ್ಕೋಸ್ಕರ ಕೆಲ ಭೂಮಿಯನ್ನು 'ಉತ್ತಾರು' ಬಿಟ್ಟ : ದೇವಾಲಯಗಳ ಮೇಲ್ವಿಚಾರಣೆಗಾಗಿ ಅರಸ ಸ್ವಾಮಿಗಳೊಬ್ಬರನ್ನ ನೇಮಿಸಿದ.

* * *

ಆ ಮೂವರೂ ನದಿಯನ್ನಾಗಲೇ ದಾಟಿದ್ದರು.

ಜಂಗಮನೆಂದ :

"ಇದಿಷ್ಟು ಸ್ಥಳಪುರಾಣ. ಈಗಿರೋ ಸ್ವಾಮಿಗಳು ಮೂರನೆಯವರು. ಇಲ್ಲಿ ಕರ ಪಾದ ಮುಖ ಇಷ್ಟು ತೊಳೆದು ಮೇಲಕ್ಕೆ ಹೋಗೋಣ."

"ಆಗಲಿ, ಅಯ್ಯನವರೆ" ಎಂದ ವೀರಪ್ಪ.

ಅಂಗೈಯಿಂದ ನೀರನ್ನೆತ್ತಿ ಮುಖಕ್ಕೆ ಅಪ್ಪಳಿಸುತ್ತ, "ಮೈ ತೊಳೀಬಹುದು, ಮನಸ್ನ ತೊಳಿಯೋದು ಕಷ್ಟ, ಅಲ್ಲವೇನಯ್ಯಾ ?" ಎಂದು ಹೇಳಿ ಜಂಗಮ ನಗೆಯಾಡಿದ.

ಮೂವರೂ ಪಾವಟಿಗೆಗಳನ್ನೇರಿದರು. ಪಶ್ಚಿಮದ ಗುಡ್ಡದಾಚೆಗೆ ಸೂರ್ಯನಾಗಲೇ ಮರೆಯಾಗಿದ್ದ.

ಎತ್ತರದಲ್ಲಿ ನಿಂತು ಜಂಗಮನೆಂದ :

"ಅಕಾ, ಅಲ್ಲಿ ಕಾಣ್ತಿರೋದು ನಂಜುಂಡೇಶ್ವರ ದೇವಾಲಯ. ಅದರ ಎದುರಿಗಿದ್ಯಲ್ಲಾ ಬಸವೇಶ್ವರ ಮಂಟಪ. ಈ ಕಡೆಗಿರೋದು ವೀರಭದ್ರ ದೇವಾಲಯ. ಅರಮನೆ ಯಾವುದು ಅಂತೀರಾ ? ತಿರುಪೆಯವನ ದೃಷ್ಟಿ ಗುರುಮನೆ ಕಡೆಗೇ ಜಾಸ್ತಿ. ಹುಂ. ಬಲಕ್ಕೆ ಆ ಕಡೆ ಗಿದೆಯಲ್ಲಾ ಅದೇ ಅರಮನೆ. ಈಗ ತುಸು ಪಾಳು ಬಿದ್ದದೆ."

ಮೂರು ಬೇರೆ ಬೇರೆ ಘಂಟೆಗಳಿಂದ ನಿನಾದ ಕೇಳಿಸತೊಡಗಿತು. ಸಂಜೆಯ ಗಾಳಿಯಲ್ಲಿ ಅಲೆಯಲೆಯಾಗಿ ಬಂದು, ಕಾವೇರಿ ನದಿಯನ್ನು ದಾಟಿ, ಅದು ಉತ್ತರಕ್ಕೆ ಹೋಯಿತು.

ಜಂಗಮನೆಂದ :

"ಬಿರ್ರನೆ ಬನ್ನಿ. ಈಗ ಪೂಜಾ ಸಮಯ."

## ೧೬

ಪಟ್ಟಣದ ಐತಿಹ್ಯವನ್ನು ಹೇಳಿದ ಜಂಗಮ, ಶಿವಾಚಾರ್ಯಸ್ವಾಮಿಗಳ ಪರಿವಾರದವನೇ ಆಗಿದ್ದ.

ಆತನೆಂದ :

"ಅರ್ಚಕರ ಕೆಲಸ ಮುಗಿಯಲಿ. ಈ ಭಕ್ತಾದಿಗಳು ಪ್ರಸಾದ ತಗೊಂಡು ಭುಕ್ತಾದಿ ಗಳಾಗತಾರಲ್ಲ, ಆಗ ನೀವೂ ಕೈಯೊಡ್ಡಿ ! ಅದಾದಮೇಲೆ ಗುರುಸನ್ನಿಧಿಗೆ ನಿಮ್ಮನ್ನ ಕರ ಕೊಂಡು ಹೋಗತೇನೆ."

ಪೂಜಾಕ್ರಮಗಳು ಮುಗಿಯಲು ಎರಡು ಘಳಿಗೆ ಹಿಡಿಯಿತು.

ಕಡಾಯಿಗಳಲ್ಲಿ ಪ್ರಸಾದ ಸಿದ್ಧವಾಗಿತ್ತು. ಅದಕ್ಕೆ ಸ್ವಾಮಿಗಳು ಪ್ರೋಕ್ಷಾಳನ ಮಾಡಿ ದರು. ನೂರಾರು ಜನರಿಗೆ ವಿತರಣೆ ಆರಂಭವಾಯಿತು.

ವೀರಪ್ಪ—ಮಲ್ಲಪ್ಪರನ್ನು ಹುಡುಕಿಕೊಂಡು ಜಂಗಮ ಬಂದ :

"ಪ್ರಸಾದ ಮುಟ್ಟಿತಾ ? ಬೇಗ ಭುಂಜಿಸಿ, ಮಠದಲ್ಲಿ ಜನ ಸೇರೋದಕ್ಕೆ ಮುಂಚೆ ಸ್ವಾಮಿಗಳ ಹತ್ತಿರಕ್ಕೆ ನಿಮ್ಮನ್ನ ಒಯ್ಯುತೇನೆ."

...ಕೆಲವೇ ನಿಮಿಷಗಳಲ್ಲಿ ಈ ಮೂವರೂ ಮಠದ ಕಡೆಗೆ ನಡೆದರು. ತಾಳೆಯ ಗರಿ ಗಳನ್ನು ಜೋಡಿಸಿ ಇಡುತ್ತಲಿದ್ದ ಸ್ವಾಮಿಗಳಿಗೆ ಇವರು ಉದ್ದಂಡ ಪ್ರಣಾಮ ಮಾಡಿದರು.

ತೂಗು ಕಂದೀಲುಗಳ ಬೆಳಕಿನಲ್ಲಿ, ತೇಜಃಪುಂಜವಾದ ಅವರ ಮುಖವನ್ನು ವೀರಪ್ಪಾಜಿ ಕಂಡ. ವೃದ್ಧರು. ಆದರೂ ಹತ್ತು ಹನ್ನೆರಡು ವರ್ಷಗಳಿಗೆ ಹಿಂದೆ ಅವರನ್ನು ನೋಡಿ ದ್ದಾಗ ಹೇಗಿದ್ದರೋ ಈಗಲೂ ಹಾಗೆಯೇ ಇದ್ದಂತೆ ವೀರಪ್ಪನಿಗೆ ಕಂಡಿತು.

ಅಂಗೈ ಆಡಿಸಿ ಆಶೀರ್ವದಿಸುತ ಸ್ವಾಮಿಗಳು, "ಸಂಜೆಗೆ ಬಂದೆಯಾ ಸಿದ್ಧಲಿಂಗ?" ಎಂದು ಕೇಳಿದರು.

ಜಂಗಮ ಎದ್ದು ನಿಂತು "ಹೂಂ. ಗುರುಗಳೆ" ಎಂದ.

"ಇವರು?"

"ತಮ್ಮ ದರ್ಶನಕ್ಕೆ ಬರತಾ ಇದ್ದರು. ದಾರಿಯಲ್ಲಿ ಸಿಕ್ಕರು."

ಸ್ವಾಮಿಗಳ ಕೈ ಸೂಚನೆಯಂತೆ ವೀರಪ್ಪನೂ ಮಲ್ಲಪ್ಪನೂ ಕುಳಿತುಕೊಂಡರು.

ಸಿದ್ಧಲಿಂಗನೆಂದ:

"ಮಡಕೇರಿ ಕಡೆಯಿಂದ ಬಂದಿದಾರೆ."

ವೀರಪ್ಪಾಜಿ ನುಡಿದ:

"ನಾನು ವೀರಪ್ಪ. ಈತ ಮಲ್ಲಪ್ಪ."

ಸ್ವಾಮಿಗಳು ಕೇಳಿದರು:

"ರೈತವಾರಿ ಮಾಡತಿದೀರಾ?"

"ಇವನು ರೈತ, ಜಮ್ಮಕೊಡವ."

"ನೀನು?"

"ನನ್ನ ಮನೆಗೆ ತಾವೊಮ್ಮೆ ದಾಸೋಹಕ್ಕೆ ಬಂದಿದ್ರಿ. ನಮ್ಮ ತಂದೆ ಪಾದಪೂಜೆ ಮಾಡಿದ್ರು."

"ಹೌದೆ? ಯಾವೂರಲ್ಲಿ?"

"ಅಪ್ಪಂಗಳದಲ್ಲಿ."

"ಅಪ್ಪಂಗಳ!"

ಸ್ವಾಮಿಗಳ ಕಣ್ಣುಗಳು ಪ್ರಭಾಯುತವಾದುವು. ಅವರೆಂದರು:

"ನೀನು ವೀರಪ್ಪಾಜಿ, ಅಲ್ಲವಾ? ರಾಜೇಂದ್ರನಾಮೆ ಬರಸೋದಕ್ಕೇಂತ ನಿಮ್ಮ ದೊಡ್ಡಪ್ಪ ಕರೆಸ್ಕೊಂಡಿದ್ರು. ಆಗ ಅಪ್ಪಂಗಳಕ್ಕೂ ಬಂದಿದ್ವಿ. ನೀನು ಆಗ ಎಂಟು ಹತ್ತರ ಹುಡುಗನಾಗಿದ್ದೆ ಅನಿಸುತ್ತೆ. ನಿನ್ನ ತಮ್ಮ ಒಬ್ಬ ಇದ್ದ, ಅಲ್ಲವಾ?"

"ಅವನು ತೀರಿಕೊಂಡ, ಸ್ವಾಮಿಗಳೇ."

ಸಿದ್ಧಲಿಂಗ ಥಟ್ಟನೆದ್ದು ವೀರಪ್ಪನ ಬಳಿ ಸಾರಿ, ಕಣ್ಣುಗಳನ್ನು ಅಗಲಿಸಿ ಅವನನ್ನು ನೋಡತೊಡಗಿದ.

"ಮರುಳೆ, ಅದೇನು ಹಾಗೆ ನೋಡತಿದೀಯಾ?" ಎಂದು ಕೇಳಿದರು ಸ್ವಾಮಿಗಳು.

ಸಿದ್ಧಲಿಂಗ ಗೋಗರೆದ:

"ಗುರುಗಳೇ! ಇದೊಳ್ಳೇ ಪೇಚಾಟವಾಯ್ತಲ್ಲ!"

"ಏನಯ್ಯಾ ಅದು?"

"ನಾನು ಬರುತ್ತಾ ಭಾರೀ ಸುದ್ದಿ ತಂದಿದ್ದೆ. ಪರಿವಾರ ಸೇರಿದಾಗ ಎಲ್ಲರ ಮುಂದೆ ತಮಗೆ ಅದನ್ನ ತಿಳಿಸಬೇಕು ಅಂತ ಇದ್ದೆ. ಇದೇನಾಗ್ಹೋಯ್ತು!"

"ಏನು ಸುದ್ದಿ?"

"ಗುರುಪಾದಕ್ಕೆ ಮೊದಲೇ ಅರಿಕೆ ಮಾಡತೀನಿ. ನನ್ನ ಮುಂದೆ ಒಂದು ಸಮಸ್ಯೆ ಹೆಡೆ ಎತ್ತುತ್ತಾ ಅದೆ. ಅದು ಬಗೆ ಹರೀತೋ ನಾ ಬದುಕಿದೆ. ಇಲ್ಲದೇ ಹೋದರೆ

ಸಿದ್ಧಲಿಂಗನಿಗೆ ಹುಚ್ಚು ಹಿಡೀತದೆ."

"ಶಿವಮರುಳಿಗಿಂತಲೂ ಮಿಗಿಲಾದ ಹುಚ್ಚು ಅದ್ಯಾವುದೋ ಸಿದ್ಧಲಿಂಗ? ಏನೋ ಕಥೆ?"

"ಅಪ್ಪಾಜಿ ಅರಸನ ಮಕ್ಕಳು ಮಾರಿ ಬೇನೆಗೆ ತುತ್ತಾದರೂಂತ ಮಹಾರಾಜರೇ ಖುದ್ದಾಗಿ ಸ್ವಲ್ಪ ಸಮಯದ ಹಿಂದೆ ನೆರೆದ ಸಭೆಯಲ್ಲಿ ಅಪ್ಪಣೆ ಕೊಡಿಸಿದರಂತೆ. ಊರಿಗೆ ಹೋಗತಿದ್ದ ಒಬ್ಬ ತಕ್ಕ ಸಿಕ್ಕ. ಆತ ಹೇಳಿದ."

ಸ್ವಾಮಿಗಳು ಮಾತನಾಡಲಿಲ್ಲ. ಯೋಚನಾಪರರಾದಂತೆ ಕಂಡಿತು. ಕ್ಷಣಕಾಲ ಸುಮ್ಮನಿದ್ದು, ವೀರಪ್ಪನೆಡೆಗೆ ಅವರು ದೃಷ್ಟಿ ಹೊರಳಿಸಿದರು.

ವೀರಪ್ಪ ಅರಿಕೆ ಮಾಡಿದ :

"ಜಂಗಮರ ಮಾತು ಒಂದು ರೀತಿಯಲ್ಲಿ ನಿಜ, ಸ್ವಾಮಿಗಳೆ. ಮಾರಿಬೇನೆ ಅನ್ನಲಾರೆ. ಅಂಥದೇ ಬೇರೋದು ಬೇನೆ. ನಾನೂ ತಮ್ಮನೂ ಸತ್ತೆವು—"

ಸಿದ್ಧಲಿಂಗ ಪಿಸುದನಿಯಲ್ಲಿ ಪ್ರಲಾಪಿಸಿದ :

"ನಾ ಹೇಳಲಿಲ್ಲವಾ ಸ್ವಾಮಿಗಳೆ? ಈಗ ಕಾಪಾಡಿ! ಓ ಗಣನಾಥಾ! ಶಂಭೋ!"

ಸ್ವಾಮಿಗಳು ಗದರಿದರು :

"ಶ್! ಸುಮ್ಮನಾಗು."

ವೀರಪ್ಪ ಮುಂದುವರಿಸಿದ :

"ಶವಗಳನ್ನ ಹೊರ ಹಾಕಿದ್ರು. ನನ್ನೊಬ್ಬನ ದೇಹದ ಕಾವು ಆರಿರಲಿಲ್ಲ. ಒಬ್ಬ ಈ ಮನುಷ್ಯನ ಮನೆಗೆ ನನ್ನನ್ನು ಒಯ್ದು ಮುಟ್ಟಿಸಿದ. ಅಲ್ಲಿ ನಾನು ಪುನರ್ಜನ್ಮ ಪಡೆದೆ. ಅಲ್ಲಿಗೇ ಮುಗಿದುಹೋಗಿದ್ದರೆ ಚೆನ್ನಾಗಿತ್ತು. ಆದರೆ ನನ್ನ ಪಾಪದ ಹೊರೆ ದೊಡ್ಡದು ಅನಿಸತದೆ. ಇನ್ನೂ ಉಳಿದಿದೀನಿ. ಓಂ ಅಂತ ಮತ್ತೆ ಶುರುವಾಗತಾ ಇದೆ."

ಸಿದ್ಧಲಿಂಗ ದಂಗುಬಡಿದವನಂತೆ ಬಿಟ್ಟ ಕಣ್ಣುಗಳನ್ನು ಮುಚ್ಚದೆ ಕುಳಿತ. ಅವನತಶಿರರಾಗಿ ಕಣ್ಣು ಮುಚ್ಚಿ ಕೆಲ ಕ್ಷಣಗಳನ್ನು ಸ್ವಾಮಿಗಳು ಕಳೆದರು.

ಬಳಿಕ ಮೆಲ್ಲನೆ ತಲೆಯೆತ್ತಿ ವೀರಪ್ಪನನ್ನು ನೋಡುತ್ತ ಅವರೆಂದರು :

"ಇದೆಲ್ಲ ಮಹಾದೇವನ ಮಾಯೆ, ವೀರಪ್ಪಾಜಿ. ಆಯುಸ್ಸು ತೀರುವವರೆಗೂ ಭೂಮಿಯ ಮೇಲಿರು ಎನ್ನುತಾನೆ. ಮುಗಿದಾಗ ತನ್ನ ಪಾದಕ್ಕೆ ಕರೆಸಿಕೋತಾನೆ... ಅರಸೊತ್ತಿಗೆಯ ಮೇಲೆ ನಿನಗೆ ಆಸೆಯೆ ಮಗು?"

ವೀರಪ್ಪ ಮೆಲ್ಲಮೆಲ್ಲನೆ ಅಂದ :

"ಗುರುವೆ, ಕರಿಯನಿತ್ತೊಡೆ ಒಲ್ಲೆ, ಸಿರಿಯನಿತ್ತೊಡೆ ಒಲ್ಲೆ. ಹಿರಿದಪ್ಪ ರಾಜ್ಯವನಿತ್ತೊಡೆ ಒಲ್ಲೆ..."

"ಯಾಕೆ ಈ ವಿರಕ್ತಿ, ಮಗು? ನಿನ್ನ ಹೆಂಡತಿ—"

"ನನಗೆ ಯಾರೂ ಇಲ್ಲ. ಗತಜನ್ಮದಲ್ಲಿ ಒಬ್ಬಳು ಕೂಸಿನ ಕೈ ಹಿಡಿದಿದ್ದೆ. ಬೇರೇನೂ ನನಗೆ ತಿಳೀದು. ಈಗನಕ ಯಾವ ಮಾಯೆಯೂ ಇಲ್ಲ."

"ವಯಸ್ಸಿಗೆ ಹಿರಿದಾದ ಮಾತು. ಏನಾಗಬೇಕು ಅಂತೀಯೆ ನೀನು?"

"ಶಿವಭಕ್ತನಾಗಬೇಕು. ತಮ್ಮ ಸೇವೆಯಲ್ಲಿ ಜೀವ ಸವೆಸಬೇಕು—ಅಂತ ಮನಸು ಹೇಳತಾ ಅದೆ."

"ಅದಕ್ಕೆ ಇಲ್ಲಿರಬೇಕಾ ನೀನು ? ಯಾರು ಭಕ್ತನಲ್ಲ ? ಅರಸನೂ ಶಿವಭಕ್ತನೇ. ಆಳೂ ಶಿವಭಕ್ತನೇ."

"ಇಹದ ಮೋಹ ನನಗಿಲ್ಲ, ಸ್ವಾಮಿಗಳೆ. ಗುರುವನ್ನರಸಿ ಬಂದಿದೇನೆ."

"ತನ್ನ ತಾನರಿದವಂಗೆ ಅರಿವೆ ಗುರು, ಮಗು. ಇಲ್ಲಿ ನಿನಗೆ ಸ್ಥಾನವಿಲ್ಲ."

—ಹಾಗೆ ದೃಢ ಸ್ವರದಲ್ಲಿ ಸ್ವಾಮಿಗಳೆಂದರು.

ಒಂದು ಕ್ಷಣ ಕಣ್ಣು ಮುಚ್ಚಿದ್ದು ವೀರಪ್ಪನೆಂದ :

"ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನು ಹುಲಿ, ಕಾಡುಗಿಚ್ಚು, ರಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು, ಅವರ ಕಂಡು ಭಯದಿಂದ, ಹೋಗಲು ದಿಕ್ಕು ತೋರದೆ, ಹಾಳುಬಾವಿಯಂ ಕಂಡು ತಲೆಯೂರಿ ಬೀಳುವಲ್ಲಿ ಹಾವ ಕಂಡು ಬೀಳಲಮ್ಮದೆ ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನು ಹುಳು ಮೈನೂರುವಾಗ ಮೂಗಿನ ತುದಿಯಲೊಂದು ಹನಿ ಮಧುಬಿಂದು ಬೀಳಲಾಗಿ, ಆ ಮಧುವಂ ಕಂಡು ಹಿರಿದಪ್ಪ ದುಃಖವನೆಲ್ಲ ಸೈರಿಸಿ ನಾಲಿಗೆಯಲ್ಲಿ ಆ ಮಧುವ ಸೇವಿಸುವಂತೆ ಈ ಸಂಸಾರ ಸುಖವ ವಿಚಾರಿಸಿ ನೋಡಿದರೆ, ದುಃಖದಾಗರವು..."

ಸ್ವಾಮಿಗಳು ವಿಸ್ಮಿತರಾದರು. ತನ್ಮಯತೆಯಿಂದ ವೀರಪ್ಪ ಆಡುತ್ತಿದ್ದ ಮಾತುಗಳು ಅವರನ್ನು ಯೋಚನಾಪರರನ್ನಾಗಿ ಮಾಡಿದುವು,

ವೀರಪ್ಪನೇ ಮುಂದುವರೆಸಿದ :

"ಇಲ್ಲಿ ಸ್ಥಾನವಿಲ್ಲ ಅಂದಿರಿ. ಆಗ್ರಹ ತೊಡೆ. ದೀಕ್ಷೆಕೊಟ್ಟು ನಾಲ್ಕು ದಿನ ಪಾದದ ಬಳಿ ಇಟಕೊಳ್ಳಿ. ಮುಂದೆ ತಿರುಪೆ ಎತ್ತುತ್ತಾ ದೇಶಾಟನ ಹೊರಡುವೆ."

"ನೋಡೋಣ ಮಗೂ, ಈತನೊ ?"

ಮಲ್ಲಪ್ಪ ಗಂಟಲು ಸರಿಸಿಕೊಂಡು ಕೈಜೋಡಿಸಿ ಅಂದ :

"ನನ್ನ ಕೆಲಸ ಮುಗಿಯಿತು. ವೀರಪ್ಪಾಜಿಯವರಿಗೆ ಅಭಯ ಹಸ್ತ ಕೊಟ್ಟೀರಿ. ನಾಳೆ ನಾ ಮಡಕೇರಿಗೆ ಒರಡತೀನಿ."

ಭಕ್ತಾದಿಗಳು ಬರತೊಡಗಿದುದನ್ನು ನೋಡಿ, ಸ್ವಾಮಿಗಳೆಂದರು :

"ಒಳ್ಳೇದು. ಸಿದ್ಧಲಿಂಗ, ಇಲ್ಲಿ ನಡೆದ ಮಾತುಕತೆ ನೀ ಕೇಳಿಲ್ಲ. ನೆನಪಿನಾಗಿರಲಿ."

ಅರ್ಥವಾಯಿತೆನ್ನುವಂತೆ ಸಿದ್ಧಲಿಂಗ ಗೋಣಾಡಿಸುತ್ತ ನುಡಿದ :

"ಶಿವ ಶಿವಾ ! ಬಾಯಿಬಿಟ್ಟೇನಾ ?"

## ೧೭

ಪ್ರಸಾದ ಸ್ವೀಕಾರದ ಬಳಿಕ ಭಕ್ತಾದಿಗಳು ಒಂದೆರಡು ಘಳಿಗೆ ಶಿವಾಚಾರ್ಯ ಸ್ವಾಮಿಗಳ ಸುತ್ತಲೂ ಕುಳಿತಿದ್ದು ಅವರ ವಿವೇಕವಾಣಿಗೆ ಕಿವಿಗೊಟ್ಟು ಚೆದರುವುದು ನಿತ್ಯದ ಪದ್ಧತಿ. ಆ ಭಕ್ತರಲ್ಲಿ ವಿರಕ್ತರಿದ್ದರು, ಸಂಸಾರಿಗಳಿದ್ದರು. ಪ್ರವಚನ, ಷಟ್‌ಸ್ಥಲ ಮಹಿಮೆಯ ವರ್ಣನೆ, ಯಾವನಾದರೂ ಶಿಷ್ಯನಿಂದ ಶಿವಕಥೆ, ವಚನಗಳ ಪಠನ—ಏನಾದರೊಂದು ದಿನವೂ ನಡೆಯುತ್ತಿತ್ತು. ಒಮ್ಮೊಮ್ಮೆ ಪುರಾಣೇತಿಹಾಸಗಳ ಮಾತುಗಳನ್ನು ಸ್ವಾಮಿಗಳು ಆಡುತ್ತಿದ್ದರು. ಇಲ್ಲವೆ, ಭಕ್ತಾದಿಗಳ ಸುಖದುಃಖಗಳನ್ನು ವಿಚಾರಿಸಿ ಹಿತೋಪದೇಶ ನೀಡುತ್ತಿದ್ದರು.

ಈ ರಾತ್ರೆ, ತಮ್ಮ ಪಟ್ಟದ ಶಿಷ್ಯನನ್ನುದ್ದೇಶಿಸಿ ಶಿವಾಚಾರ್ಯಸ್ವಾಮಿಗಳೆಂದರು :

"ಷಡಕ್ಷರಿ, ಕೊಡಗಿನಲ್ಲಿ ವೀರಶೈವ ರಾಜವಂಶ ಸ್ಥಾಪನೆಯಾದ ಕಥೆ ಇವತ್ತು ಹೇಳಬೇಕು ಅನಿಸತಿದೆ."

ಷಡಕ್ಷರಿಯೆಂದ :

"ಸ್ವಾಮಿಗಳ ಚಿತ್ತ."

ಶ್ರೋತೃಗಳನ್ನುದ್ದೇಶಿಸಿ ಅವರೆಂದರು :

"ಮರುಳರಿರಾ ! ನಮ್ಮ ದೇಶ ಯಾವುದು ?"

ಕೆಲವರೆಂದರು :

"ಕೊಡಗು."

"ಹ್ಞ. ಅದರ ಕತೆ ಬಲ್ಲಿರಾ ?"...

* * *

ಪೂರ್ವದಲ್ಲಿ ಈ ದೇಶಕ್ಕೆ ಮೂರು ಹೆಸರುಗಳಿದ್ದುವು. ಮೊದಲನೆಯದು ಬ್ರಹ್ಮಕ್ಷೇತ್ರ, ಎರಡನೆಯದು ಮತ್ಸ್ಯದೇಶ, ಮೂರನೆಯದು ಕ್ರೋಢದೇಶ.

ತೀರ್ಥಾಟನ ಮಾಡುತ್ತ ಪಶ್ಚಿಮ ಘಟ್ಟಗಳಿಗೆ ಬಂದ ಬ್ರಹ್ಮದೇವ, ಒಂದೆಡೆ ಸುತ್ತಲಿನ ನಿಸರ್ಗ ರಮಣೀಯತೆಗೆ ಮಾರುಹೋಗಿ, ಕೆಲ ಕಾಲ ಅಲ್ಲಿ ನೆಲೆಸಿದನು. ಆತನಿದ್ದ ಪರ್ವತ ಬ್ರಹ್ಮಗಿರಿ ಎನಿಸಿಕೊಂಡಿತು. ಪ್ರದೇಶ ಬ್ರಹ್ಮಕ್ಷೇತ್ರವಾಯಿತು.

ಪುರಾಣಗಳಲ್ಲಿರುವ ಇನ್ನೊಂದು ಕಥೆಯಂತೆ, ಮತ್ಸ್ಯದೇಶದ ರಾಜ ಸಿದ್ಧಾರ್ಥನ ನಾಲ್ವರು ಗಂಡುಮಕ್ಕಳಲ್ಲಿ ಕಿರಿಯವನಾದ ಚಂದ್ರವರ್ಮ ತೀರ್ಥಯಾತ್ರೆ ಮಾಡುತ್ತಾ ಬ್ರಹ್ಮಗಿರಿಯನ್ನು ತಲಪಿದನು. ತನಗೆ ಪ್ರಸನ್ನಳಾದ ಪಾರ್ವತಿಯ ಸೂಚನೆಯಂತೆ ಆ ರಾಜ್ಯವನ್ನಾಳಿದನು. ಅವನು ಮತ್ಸ್ಯದೇಶದಿಂದ ಬಂದವನಾದುದರಿಂದ ಬ್ರಹ್ಮಕ್ಷೇತ್ರವೂ ಮತ್ಸ್ಯದೇಶವೆನ್ನಿಸಿಕೊಂಡಿತು.

ಮುಂದಿನ ಅರಸನಾದ ದೇವಕಾಂತನಲ್ಲಿ, ಆಹಾರ ಧಾನ್ಯಗಳನ್ನು ಬೆಳೆಸಲು ಇದ್ದ ಭೂಮಿ ಸಾಲದೇ ಹೋಯಿತು. ಆಗ ರಾಜಕುಮಾರರೂ ಅವರ ಮಕ್ಕಳೂ ತಮ್ಮ ಉದ್ದನೆಯ ನಖಗಳಿಂದ ಬೆಟ್ಟದ ತಪ್ಪಲುಗಳನ್ನು ಸೀಳಿ ಬಯಲಾಗಿ ಮಾರ್ಪಡಿಸಿದರು. ಆ ಕಾರಣದಿಂದ ಅವರು ಕ್ರೋಢರೆನಿಸಿಕೊಂಡರು. ರಾಜ್ಯ ಕ್ರೋಢದೇಶವಾಯಿತು.

ಪಾರ್ವತಿ ಇಲ್ಲಿ ಲೋಪಾಮುದ್ರೆಯಾಗಿ ಜನಿಸಿ, ಕವೇರನ ಮಗಳಾಗಿ ಕಾವೇರಿ ಎಂಬ ಅಭಿಧಾನದಿಂದ ನದಿಯಾಗಿ ಹರಿದಳು.

ಕಲ್ಯಾಣದ ಕ್ರಾಂತಿಗೆ ಸುಮಾರು ಸಾವಿರ ವರ್ಷಗಳಿಗೆ ಹಿಂದಿನ ತಮಿಳು ಸಾಹಿತ್ಯ, 'ಕುಡಕಮ್' ಎಂಬೊಂದು ರಾಜ್ಯವನ್ನು ಕುರಿತು ಪ್ರಸ್ತಾಪಿಸಿದೆ. ಆರಂಭದಲ್ಲಿ ಸುಮಾರು ಆರುನೂರು ವರ್ಷಗಳ ಕಾಲ ಕದಂಬರು ಈ ರಾಜ್ಯವನ್ನು ಗೆದ್ದು ಆಳಿದರೆಂಬುದಕ್ಕೆ ಆಧಾರಗಳಿವೆ. ಆಗ 'ಮಲೆಪರ ನಂದನವನ' ಎನಿಸಿಕೊಂಡಿತ್ತು ಕೊಡಗು. ಮುಂದೆ ಮೂರುನೂರು ವರ್ಷ ಜೈನರಾದ ಗಂಗರಸರು ಈ ರಾಜ್ಯಕ್ಕೆ ಅಧಿಪತಿಗಳಾಗಿದ್ದರು. ಕೆಲ ಭಾಗಗಳು ಚೆಂಗಾಳ್ವರ ವಶದಲ್ಲಿದ್ದುವು. ಚೋಳರು ಗಂಗರನ್ನು ಸೋಲಿಸಿದಾಗ, ಚೆಂಗಾಳ್ವರು ಚೋಳರ ಮಾಂಡಲಿಕರಾದರು. ಬೇರೆ ಕೆಲ ಭಾಗಗಳನ್ನು ಕೊಂಗಾಳ್ವರು ಆಳಿದರು. ಮುಂದೆ ಕೊಡಗು ಹೊಯ್ಸಳರ ಅಧೀನವಾಯಿತು.

ಚಂಚಲೆ ರಾಜ್ಯಲಕ್ಷ್ಮಿ ಎಷ್ಟೊಂದು ಜನಕ್ಕೆ ಒಲಿದಳು! ಅರಸೊತ್ತಿಗೆಯ ದರ್ಪ ಪ್ರತಿಷ್ಠೆಗಳೆಲ್ಲ ಅದೆಷ್ಟು ಕ್ಷಣಭಂಗುರ!

ಕೆಲ ಕಾಲದ ಬಳಿಕ ವಿಜಯನಗರ ಸಾಮ್ರಾಜ್ಯಕ್ಕೆ ಕೊಡಗು ಒಳಪಟ್ಟಿತು. ವಿಜಯ ನಗರದ ಪತನದ ಅನಂತರ ಕೊಡಗು ಹರಿದು ಹಂಚಿಹೋಯಿತು. ಹಲವಾರು ಪಾಳೆಯ ಗಾರರು ಪರಸ್ಪರ ಕಾದಾಡುತ್ತ ಕೊಡಗಿನ ವಿವಿಧ ಭಾಗಗಳ ಗುಡ್ಡಗಳನ್ನೂ ಬಯಲು ಗಳನ್ನೂ ಆಳುತ್ತಿದ್ದರು.

ಶಾಲಿವಾಹನ ಶಕ ಸಾವಿರದ ಐದುನೂರ ನಾಲ್ವತ್ತರ ಸುಮಾರಿಗೆ ಜಂಗಮನೊಬ್ಬ ಕೊಡಗಿನಲ್ಲಿ ಕಾಣಿಸಿಕೊಂಡ. ಇವನು ವೇಷಧಾರಿ. ವಾಸ್ತವವಾಗಿ, ಇಕ್ಕೇರಿ ಮನೆತನದ ಒಬ್ಬ ರಾಜಕುಮಾರ. ಈತ ಊರೂರು ತಿರುಗುತ್ತ, ಮಡಕೇರಿಯಿಂದ ಒಂದೂವರೆ ಹರದಾರಿ ದೂರದ ಹಾಲೇರಿ ಹಳ್ಳಿಯಲ್ಲಿ ನೆಲೆ ನಿಂತ. ಅವನು ಆಡುತ್ತಿದ್ದ ವಚನಗಳೂ ಮಾಡುತ್ತಿದ್ದ ಪ್ರವಚನಗಳೂ ಜನರ ಮನಸ್ಸನ್ನು ಸೆರೆಹಿಡಿದುವು. ಅವರು ಅವನ ಭಕ್ತ ರಾದರು. ಕಾಣಿಕೆಯಾಗಿ ಬತ್ತವನ್ನೂ ಹೊನ್ನನ್ನೂ ಜಂಗಮನಿಗೆ ತಂದೊಪ್ಪಿಸಿದರು. ಆತನ ನಿವಾಸವನ್ನು ಬೂದಿ ಚಾವಡಿ ಎಂದು ಕರೆದರು. ನಿವಾಸದ ಪಹರೆಯವರು ಚಾವಡಿಕಾರ ರಾದರು.

ವಿರಕ್ತ ಜಂಗಮ ಸ್ವಲ್ಪವೇ ಸಮಯದಲ್ಲಿ ಧೀರನಾಯಕನಾದ. ಚಾವಡಿಕಾರರೆಂದು ಹೆಸರು ಪಡೆದು ಕೊಡವ ಕಟ್ಟಾಳುಗಳು ಅವನ ಅನುಯಾಯಿಗಳಾದರು. ಅವನ ಬಾಹು ಬಲಕ್ಕೆ ಬೆದರಿ ವಿವಿಧ ಪಾಳೆಯಗಾರರು ಆತನಿಗೆ ಕಪ್ಪಕಾಣಿಕೆಯೊಪ್ಪಿಸುವ ಪರಿಸ್ಥಿತಿ ಯೊದಗಿತು. ನಂಬಿದವರಿಗೆ ಅವನು ಇಂಬು ಕೊಟ್ಟನು. ಇದಿರಾಡಿದವರಿಗೆ ಅಂಬು ತೋರಿದನು.

ಹೀಗೆ ಹಾಲೇರಿ ಮನೆತನ ಸ್ಥಾಪಿತವಾಯಿತು. ಛಿನ್ನವಿಚ್ಛಿನ್ನವಾಗಿದ್ದ ಮೂವತ್ತೈದು ನಾಡುಗಳ ಕೊಡಗು ಒಂದು ರಾಜ್ಯ ಎನ್ನಿಸಿತು.

* * *

ಕಥೆಯನ್ನು ಮುಂದುವರಿಸುತ್ತ ಶಿವಾಚಾರ್ಯಸ್ವಾಮಿಗಳೆಂದರು :

"ಈ ಹಾಲೇರಿ ವಂಶದ ಈವರೆಗಿನ ಎರಡು ನೂರು ವರ್ಷಗಳ ಆಳ್ವಿಕೆಯಲ್ಲೂ ಎಷ್ಟೋ ಏಗುಬೀಳುಗಳು ಕಂಡುಬಂದವಲ್ಲಾ. ಈ ರಾಜ್ಯವನ್ನು ಕೈವಶಮಾಡಿಕೊಳ್ಳು ವುದಕ್ಕೆ ಎಷ್ಟು ಜನ ಯತ್ನ ಮಾಡಿದರು! ದಾಳಿ ನಡೆಸಿದರು! ಮುತ್ತಿಗೆ ಹಾಕಿದರು! ರಕ್ತದ ನದಿಗಳು ಏಸೊಂದು ಹರಿದುವು! ಏಸೊಂದು ಹೆಣ್ಣುಮಕ್ಕಳು ವಿಧವೆಯರಾದ್ರು. ಏಸೊಂದು ತಾಯಂದಿರು ಮಕ್ಕಳನ್ನು ಕಳಕೊಂಡ್ರು. ಆದರೂನೂ ಕಾವೇರಿ ತಾಯಿಯ ಪುಣ್ಯದಿಂದ ಈ ದೇಶ ಉಳಕೊಂಡದೆ. ಮಹಾದೇವನ ಕೃಪೆಯಿಂದ ಹಾಲೇರಿ ರಾಜವಂಶ ನಿರಾತಂಕವಾಗಿ ರಾಜ್ಯಭಾರ ಮಾಡತಾ ಅದೆ.

"ಅಂದರೆ, ಇನ್ನು ಕೊಡಗಿಗೆ ಕಂಟಕವಿಲ್ಲಾಂತ ತಿಳಕೋಬಾರದು. ಮಹಾದೇವ ತನ್ನ ಭಕ್ತರನ್ನ ಯಾವಾಗಲೂ ಪರೀಕ್ಷೆ ಮಾಡತಾ ಇರತಾನೆ. ಹೊಸ ಕುತ್ತು ಪರಧರ್ಮೀಯ ರಿಂದ ಬರತದೆ. ನಮ್ಮ ಕಣ್ಣೆದುರಲ್ಲೇ ನಾವು ಏನೇನು ಪರಿವರ್ತನಾ ಕಂಡ್ವಿ! ಖಡ್ಗ ಹಿಡಿದ ಕೈಯಲ್ಲೀಗ ಬಂದೂಕದೆ. ನೇಗಿಲು ಎಳೆಯೋ ಹೋರಿಗಳು ಫಿರಂಗಿ ಎಳೀತವೆ. ಸಾವು ಸಹಸ್ರ ಮುಖದ ರೂಪ ತಳೆದದೆ. ಆಳಿದ ಮಹಾಸ್ವಾಮಿಯವರಾದ ದೊಡ್ಡ

ವೀರಪ್ಪನವರ ಕಾಲದಲ್ಲಿ ಮಿತ್ರರಂತೆ ನಟಿಸಿದ ಆಂಗ್ರೇಜಿಯವರು ಟೀಪೂ ಸತ್ತಮೇಲೆ ಕೊಡಗಿಗೂ ನಾವೇ ಒಡೇರು ಅಂತ ಹೇಳಲಿಲ್ಲವಾ ? ಅವರ ಕೈಕೆಳಗಿನ ಮಾಂಡಲೀಕತನ ನಮ್ಮ ಪಾಲಿಗೆ ಉಚ್ಚಿಷ್ಟ. ನಮ್ಮ ಜನ ಅದನ್ನು ಮುಟ್ಟಿಲ್ಲ. ಲಿಂಗರಾಜನ ಕಾಲದಲ್ಲೂ ಅವರ ಆಟ ನಡೀಲಿಲ್ಲ. ಈಗಲಾದರೂ ಅದು ನಡೀಲಾರದು. ಆದರೂ ಒಂದು ಮಾತು ನಮ್ಮ ನೆಪ್ಪಿನಲ್ಲಿರಬೇಕು. ದಾಯಾದಿ ಕಲಹದಿಂದ ಯಾವ ದೇಶವೂ ಏಳ್ಗೆ ಹೊಂದಿಲ್ಲ. ನಮ್ಮಲ್ಲಿ ಆ ತಾಪ ಹಬ್ಬಿತೋ ಕೊಡಗಿನ ಗಿಡಮರಗಳು ಕಮರಿಹೋಗ್ತವೆ. ಸ್ವಾಭಿಮಾನ ಸ್ವದೇಶಪ್ರೇಮ, ನ್ಯಾಯನಿಷ್ಠೆ ನಮ್ಮಲ್ಲಿ ಕುಗ್ಗಿತೋ ನಾವು ಬೀಳುತ್ತೇವೆ. ಹೌದಾ?"

ನಿಶ್ಶಬ್ದವಾಗಿ ಸ್ವಾಮಿಗಳಿಗೆ ಕಿವಿಗೊಡುತ್ತಿದ್ದ ಶ್ರೋತೃಗಳು ಏನನ್ನೂ ಹೇಳಲಿಲ್ಲ.

ಸ್ವಾಮಿಗಳು ಮುಂದುವರಿಸಿದರು :

"ಕೇಳಿರಿ. ಕಾಯಧರಿಸಿದವ ನವನೀತರೋಮದಂತಿರಬೇಕು. ಮುಕುರದಲ್ಲಿಯ ಪ್ರತಿ ಬಿಂಬದಂತಿರಬೇಕು. ಬೆಟ್ಟದಲ್ಲಿಯ ಕಾಡುಗಿಚ್ಚಿನಂತಿರಬೇಕು. ಅಷಾಢದಲ್ಲಿಯ ಚಂಡ ಮಾರುತನಂತಿರಬೇಕು. ಸರ್ವರಲಿ ಸರ್ವರಂತಾಗಿರಬೇಕು......ಅರ್ಥವಾಯ್ತಾ ? ಹುಂ. ಇವತ್ತಿಗೆ ಸಾಕು ಹೊರಡಿರಿನ್ನು."

ಶ್ರೋತೃಗಳು ಎದ್ದರು. ಸ್ವಾಮಿಗಳಿಗೆ ನಮಿಸಿ ನಮಿಸಿ ಹೊರಟರು.

"ಸಿದ್ಧಲಿಂಗ" ಎಂದು ಕರೆದರು, ಸ್ವಾಮಿಗಳು.

ಸಿದ್ಧಲಿಂಗ ಅವರೆದುರು ನಿಂತ.

ವೀರಪ್ಪ ಮಲ್ಲಪ್ಪರ ಕಡೆ ದೃಷ್ಟಿಹಾಯಿಸಿ ಸ್ವಾಮಿಗಳೆಂದರು :

"ಇವರ ಶಯನಕ್ಕೆ ವ್ಯವಸ್ಥೆಮಾಡು."

ಸಿದ್ಧಲಿಂಗ ಮಾತಿಲ್ಲದೆಯೇ ಸ್ವಾಮಿಗಳ ಅಪ್ಪಣೆಯನ್ನು ಶಿರಸಾವಹಿಸಿ, ಕೈಸನ್ನೆಯಿಂದ ಅತಿಥಿಗಳನ್ನು ಬರಹೇಳಿ, ಕರೆದೊಯ್ದ.

'ಬಾಯಿ ಬಿಟ್ಟೇನಾ ? ಎಂದು ಆತ ಹೇಳಿದ್ದ ಘಳಿಗೆಯಿಂದ ತುಟಿಪಿಟಿಕ್ಕೆಂದಿರಲಿಲ್ಲ !

ಅವನ ಮೆದುಳು ಮಾತ್ರ ಯೋಚನೆಯಿಂದ ತಪ್ತವಾಗಿತ್ತು.

ಗುರುಗಳಿವತ್ತು ಕೊಡಗಿನ ಕಥೆಯನ್ನೇಕೆ ಹೇಳಿದರು ? ಬೂದಿ ಚಾವಡಿಯ ಜಂಗಮ ವೇಷಧಾರಿಯ ಪ್ರಕರಣವಂತೂ ಸೊಗಸಾಗಿತ್ತು.

ಸಿದ್ಧಲಿಂಗ ಒಮ್ಮೆಲೆ ಹೊರಳಿ ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ವೀರಪ್ಪಾಜಿಯನ್ನು ನೋಡಿದ. ತನ್ನನ್ನು ಕಾಡಿದ್ದ ಪ್ರಶ್ನೆಗೆ ಅಲ್ಲಿ ಆತ ಉತ್ತರವನ್ನು ಕಂಡ.

## ೧೪

ನಸುಕಿನಲ್ಲೆದ್ದು ಕಾವೇರಿ ನದಿಯಲ್ಲಿ ಮಿಂದು ಮಠದಲ್ಲಿ ಶಿವಪೂಜೆಯಲ್ಲಿ ನಿರತರಾಗಿದ್ದರು, ಸ್ವಾಮಿಗಳು.

ಊರಿಗೆ ಮರಳಲು ಅಣಿಯಾಗುತ್ತಿದ್ದ ಮಲ್ಲಪ್ಪಗೌಡನನ್ನು ಕಂಡು ಸಿದ್ಧಲಿಂಗನೆಂದ :

"ಸ್ವಾಮಿಗಳಿಗೆ ಹೇಳಿಹೋಗಬೇಕು, ಅಲ್ಲವಾ ? ಒಸಿ ತಾಳು, ಗೌಡ. ಇಗ ಸುದ್ದಿ ಹ್ಯಾಗೆ ತಿಳಿಸಲಿ ? ಪೂಜೆಯ ವೇಳೆ. ನಡುವೆ ನುಗ್ಗಿ ಕರಡಿಯಾಗಲಾ ?"

"ಬ್ಯಾಡಿ, ಅಯ್ಯನವರೆ. ನಾ ಕಾದಿರುತೀನಿ. ನನಗೇನವಸರ ?"

ನದೀ ದಡದ ಪಾವಟಿಗೆಗಳ ಮೇಲೆ ವೀರಪ್ಪಾಜಿಯೂ ಮಲ್ಲಪ್ಪಗೌಡನೂ ಕುಳಿತರು.

ಸೂರ್ಯನ ಹೊಂಗಿರಣಗಳು ಮಲೆಗಳನ್ನು ದಾಟಿ ವೃಕ್ಷರಾಶಿಗಳೆಡೆಯಿಂದ ತೂರಿ ನದಿಯ ನೀರಿನ ಮೇಲೆ ಕುಣಿಯುತ್ತಿದ್ದುವು. ದಡದ ಮೇಲ್ಗಡೆ, ನಂಜರಾಜಪಟ್ಟಣದ ಸ್ತ್ರೀ-ಪುರುಷರು ಬಂದು ದೇವಾಲಯಗಳಲ್ಲೂ ಬಸವಮಂಟಪದಲ್ಲೂ ಘಂಟೆಗಳನ್ನು ಬಾರಿಸುತ್ತಿದ್ದರು. ನದಿಯುದ್ದಕ್ಕೆ ಕೆಳಗಡೆ ಸ್ನಾನಘಟ್ಟವಿತ್ತು. ಹಲವರು ಅಲ್ಲಿ ಮಿಾಯುತ್ತಿದ್ದರು. ಮಹಾದೇವನನ್ನು ಧೇನಿಸುತ್ತ ಮುಳುಗೇಳುತ್ತಿದ್ದರು.

ಈ ಪ್ರಶಾಂತತೆ ವೀರಪ್ಪಾಜಿಯನ್ನು ಬಹಳ ಮಟ್ಟಿಗೆ ಪ್ರಸನ್ನಗೊಳಿಸಿತು. ಆದರೂ ಹೃದಯದ ತಳದಲ್ಲಿ ಬಿಸಿನೀರಿನ ಬುಗ್ಗೆಗಳು ಪುಟಿಯುತ್ತಿದ್ದುವು. ಮನಸ್ಸು ಯೋಚನೆಗಳ ಕುಸ್ತಿಮನೆಯಾಗಿತ್ತು.

ಹಿಂದಿನ ರಾತ್ರೆ ಶಿವಾಚಾರ್ಯ ಸ್ವಾಮಿಗಳಾಡಿದ ನುಡಿಗಳು ಅವರಿಬ್ಬರ ಮೇಲೂ ಪ್ರಭಾವ ಬೀರಿದ್ದುವು. ಒಬ್ಬೊಬ್ಬರ ಮೇಲೆ ಒಂದೊಂದು ತೆರನಾಗಿ.

ಪಾವಟಿಗೆಯ ಮೇಲೆ ಕುಳಿತು ಆ ಮಾತುಗಳನ್ನು ಮೆಲುಕು ಹಾಕುತ್ತಿದ್ದ ಮಲ್ಲಪ್ಪನೆಂದ :

"ಮಠದ ಸ್ವಾಮಿಗಳು ದೊಡ್ಡ ಮನಿಸ್ಯಾರು, ಅಲ್ಲವರಾ ?"

"ಹ್ದ —ಮಲ್ಲಪ್ಪಣ್ಣ."

"ಊರಿನಿಂದ ಮೈಕಾವಲಿಗೆ ಅಂತ ನಿಮ್ಮ ಸಂಗಾತ ಬಂದ್ನಿ. ಇಲ್ಲಿ ಸೋಮಿಗಳ ಅಮೃತದಂಥಾ ಮಾತು ಕೇಳೋ ಯೋಗ ಇತ್ತು."

"ನೀ ಬಂದದ್ದು ಒಳ್ಳೇದಾಯ್ತು, ಮಲ್ಲಪ್ಪಣ್ಣ."

"ನಮ್ಮ ಹೊಲ, ಹ್ವಾರೆ. ಅರಸ ಕರೆದರೆ ಸೇವೆ. ಬಾಳ್ವೆ ಅಂದರೆ ಇಷ್ಟೇ ಅಂತಿದ್ನಿ. ಸೋಮಿಗಳು ಯೋಳಿದ್ದು ಕೇಳಿದ ಮ್ಯಾಕೆ, ನಾವು ದೊಡ್ಡ ದೇಶದ ಮಕ್ಕಳು ಅನ್ನೋ ಹೆಮ್ಮೆ ಉಟ್ಟಿತು."

"ಏಳು-ಬೀಳುಗಳನ್ನ ಅನುಭವಿಸಿರೋ ದೊಡ್ಡ ದೇಶ, ಮಲ್ಲಪ್ಪಣ್ಣ."

"ನಾ ಇನ್ನು ಹೊಸ ಮನಿಸ್ಯನಾಗಿ ನನ್ನ ಹಳ್ಳಿಗೆ ಓಗತೀನಿ, ಸೋಮಿಯೋರೆ."

ಪಾವಟಿಗೆಯ ಮೇಲಿದ್ದ ಕೆಲ ಹರಳುಗಳನ್ನಾಯ್ದು, ಮೌನವಾಗಿ, ಒಂದೊಂದನ್ನೇ ವೀರಪ್ಪಾಜಿ ನೀರಿಗೆಸೆದ.

ಕೈಯಲ್ಲಿದ್ದ ಹರಳುಗಳು ಮುಗಿದ ಮೇಲೆ ವೀರಪ್ಪಾಜಿಯೆಂದ :

"ನೀ ಒಂದು ದಾರಿ ಹಿಡೀತೀಯಾ ; ನಾ ಒಂದು ದಾರಿ ಹಿಡೀತೀನಿ."

"ಮಹಾದೇವ ನಿಮಗೆ ಈ ಕಸ್ಟ ಕೊಡಬಾರದಾಗಿತ್ತು."

"ಕಷ್ಟ ಕೊಟ್ಟಿಲ್ಲ, ಮಲ್ಲಪ್ಪಣ್ಣ. ಪರೀಕ್ಷೆ ಮಾಡತಾ ಇದಾನೆ. ಬದುಕಿ ಉಳಿದೆ ಅಂತ ಈಗ ನನಗೆ ದುಕ್ಕ ಇಲ್ಲ. ಉಳಿದ ಬದುಕನ್ನ ಸಾರ್ಥಕವಾಗಿ ಬಾಳಬೇಕು ಅನ್ನೋ ಹಂಬಲ ಇದೆ."

"ನಿಜ, ಸೋಮಿಯೋರೆ. ನಂಬಿದವರನ್ನ ಶಿವ ನಾನಾ ಬಗೆಯಾಗಿ ಪರೀಕ್ಷೆ ಮಾಡತಾನೆ."

ಅಷ್ಟರಲ್ಲಿ. "ಇಲ್ಲಿ ಕುಂತಿದೀರಾ ? ಬರ್ರೀ"—ಎಂದು, ಮೇಲುಗಡೆಯಿಂದ ಸಿದ್ಧಲಿಂಗ ಕರೆದುದು ಕೇಳಿಸಿತು. ವೀರಪ್ಪಾಜಿಯೂ ಮಲ್ಲಪ್ಪನೂ ಎದ್ದು ಮೆಟ್ಟಲುಗಳನ್ನು ಹತ್ತಿ ಅವನೆಡೆಗೆ ಬಂದರು. ಸಿದ್ಧಲಿಂಗನೆಂದ :

"ಸ್ವಾಮಿಗಳು ಬರಹೇಳಿದರು."

...ಶಿವಾಚಾರ್ಯಸ್ವಾಮಿಗಳು ಹೊರಬಂದು ಮಠದ ಅಂಗಳಕ್ಕಿಳಿದಿದ್ದರು.

ಮಲ್ಲಪ್ಪ ವೀರಪ್ಪಾಜಿಯರಿಬ್ಬರೂ ಅವರ ಪಾದಗಳಿಗೆ ವಂದಿಸಿದರು.

ಸ್ವಾಮಿಗಳು ಮಲ್ಲಪ್ಪನೊಬ್ಬನನ್ನೇ ಉದ್ದೇಶಿಸಿ, ಅಂದರು :

"ಹೊರಡತೀಯಾ ಗೌಡ ? ಒಳ್ಳೇದು. ಪ್ರಸಾದ ತಗೊಂಡು ಹೋಗು. ಶಿವ ಮೆಚ್ಚುವ ಕೆಲಸ ಮಾಡಿದೆ. ನಿರ್ಭಯವಾಗಿರು. ಆಳುವ ದೊರೆಯಲ್ಲಿ ಸಲಹುವ ದೈವದಲ್ಲಿ ಭಕ್ತಿಯಿಂದಿರು. ಧರ್ಮದ ದಾರಿ ಬಿಟ್ಟು ನಡೀಬ್ಯಾಡ. ಹೋಗು."

ಸಜಲನಯನನಾದ ಮಲ್ಲಪ್ಪ ಏನನ್ನೂ ಹೇಳಲಾಗದೆ, ಪಕ್ಕಕ್ಕೆ ಸರಿದು ಕೈಜೋಡಿಸಿ ನಿಂತ.

"ಸ್ವಾಮಿಗಳು ವೀರಪ್ಪಾಜಿಯನ್ನು ಕುರಿತು, "ಮಧ್ಯಾಹ್ನ ಬಾ, ಮಗು. ನಿನ್ನ ಕೂಡೆ ಮಾತಾಡಬೇಕು" ಎಂದು ನುಡಿದು, ಹಾವುಗೆಗಳ ಸದ್ದು ಮಾಡುತ್ತ ಮುಂದಕ್ಕೆ ಹೋದರು.

"ಬನ್ನಿ ಭಕ್ತರೇ" ಎಂದ, ಸಿದ್ಧಲಿಂಗ.

...ಮಲ್ಲಪ್ಪನನ್ನು ಬೀಳ್ಕೊಡಲು, ವೀರಪ್ಪಾಜಿಯೂ ಸಿದ್ಧಲಿಂಗನೂ ನದೀತಟದ ತನಕ ಬಂದರು.

"ನಾನು ಚರಜಂಗಮ. ಇವತ್ತು ಇಲ್ಲಿ ಶಿವ ಅಂದರೆ ನಾಳೆ ನಿನ್ನೂರಲ್ಲಿ ಹರ ಅಂದೇನು. ಗೌಡ, ಪಾದಪೂಜೆ ಮಾಡತೀ ತಾನೆ ?" ಎಂದ ಸಿದ್ಧಲಿಂಗ.

"ಅವಶ್ಯ ಬನ್ನಿ, ಅಯ್ಯನವರೆ. ನನ್ನದು ಹೊಸಳ್ಳಿ."

"ಹೊಸದು ಬ್ಯಾರೇನೋ ? ಬರತೀನಪ್ಪ, ಬರತೀನಿ."

ವೀರಪ್ಪಾಜಿ ಅಗಲಿಕೆಯ ನೋವನ್ನು ಹತ್ತಿಕ್ಕಲೆತ್ನಿಸುತ್ತ ಅಂದ :

"ಹೋಗಿಬಾ ಮಲ್ಲಪ್ಪಣ್ಣ. ನನ್ನ ತಾಯಿಗೆ ಶರಣೆಂಬೆ. ಶಂಕರಪ್ಪನಿಗೆ ಶರಣೆಂಬೆ. ನಿನಗೆ ಶರಣೆಂಬೆ."

ಮಲ್ಲಪ್ಪ, ವೀರಪ್ಪನ ಮಾತುಗಳು ಮುಗಿಯುವುದಕ್ಕೆ ಮುನ್ನವೇ ಆತನ ಪಾದಗಳನ್ನು ಮುಟ್ಟಿದ್ದ.

ವೀರಪ್ಪನೆಂದ :

"ಛೆ ! ಛೆ ! ಏಳಣ್ಣ, ಏಳು."

ಏಳುತ್ತ ಗದ್ಗದಿತನಾಗಿ ಮಲ್ಲಪ್ಪ ನುಡಿದ :

"ಮಹಾದೇವ ನಿಮಗೆ ಎಲ್ಲಾ ಕಾಲಕ್ಕೂ ರಕ್ಷೆಯಾಗಿರಲಿ, ಸೋಮಿಯೋರೆ."

"ಶಿವನಿಚ್ಛೆ ಇದ್ದರೆ ಆಯುಸ್ಸು ತೀರೋದರೊಳಗೆ ಮತ್ತೆ ಕೂಡೇವು. ಇನ್ನು ಹೊರಡು, ಅಣ್ಣ."

ರಕ್ತಸಂಬಂಧಿಗಳಲ್ಲದ ಲೌಕಿಕರಲ್ಲೂ ಇಷ್ಟೊಂದು ಒಲವೆ ?—ಎಂದು ಅಚ್ಚರಿಪಡುತ್ತ ನಿಂತಿದ್ದ ಸಿದ್ಧಲಿಂಗ, "ಆಗಲೆ ಬಿಸಿಲಾಯ್ತು" ಎಂದ.

ಪಾದಗಳನ್ನು ಪ್ರಯಾಸದಿಂದ ಕೀಳುತ್ತ ಒಂದು ಕೈಯಲ್ಲಿ ಕಂಬಳಿಯ ಗಂಟನ್ನೆತ್ತಿಕೊಂಡು, ಇನ್ನೊಂದರಲ್ಲಿ ಧೋತರವನ್ನು ಮೇಲಕ್ಕೆತ್ತಿ ಹಿಡಿದು, ಮಲ್ಲಪ್ಪ ನದಿಯೊಳಗೆ ಕಾಲಿರಿಸಿದ.

ಹತ್ತು ಹತ್ತು ಹೆಜ್ಜೆ ಮುಂದುವರಿದಾಗಲೆಲ್ಲ ಮಲ್ಲಪ್ಪ, ತಿರುಗಿ ನೋಡುತ್ತಿದ್ದ.

ಆತ ನದಿ ದಾಟಿ, ಕಿರುದಾರಿಯಲ್ಲಿ ನಡೆದು, ಪೊದೆಗಳಾಚೆಗೆ ಮರೆಯಾದವರೆಗೂ ವೀರಪ್ಪಾಜಿಯೂ ಸಿದ್ಧಲಿಂಗನೂ ಪಾವಟಿಗೆಗಳ ಮೇಲೆ ನಿಂತರು.

ಬಳಿಕ ಸಿದ್ಧಲಿಂಗ ವೀರಪ್ಪಾಜಿಗೆ ಅಂದ :

"ಇನ್ನು ನಾವೂ ನೀವೂ ಬಂಧುಗಳು, ಬರ್ರಿ."

## ೧೯

"ಬಾ, ಕುಳಿತುಕೋ" ಎಂದರು ಸ್ವಾಮಿಗಳು.

ಅವರೆದುರು ತುಸುದೂರದಲ್ಲಿ ವೀರಪ್ಪಾಜಿ, ಭಕ್ತಿಭಾವದಿಂದ ನೆಲದಮೇಲೆ ಮಂಡಿಸಿದ.

ಹಿಂದಿನ ರಾತ್ರೆ ನಿಲ್ಲಿಸಿದ್ದಲ್ಲಿಂದ ಸಂವಾದದ ಎಳೆಯನ್ನು ಸ್ವಾಮಿಗಳು ಎತ್ತಿಕೊಂಡರು.

"ವಿರಕ್ತರ, ಜಂಗಮರ ಜೀವನದಲ್ಲಿ ಅದೇನು ಸುಖ ಕಾಣತೀಯೆ, ವೀರಪ್ಪಾಜಿ ?"

ಬಾಲ್ಯದಲ್ಲಿ ಕೇಳಿ ಕಲಿತಿದ್ದ, ತಾಡವೋಲೆ ಪ್ರತಿಗಳಿಂದ ಓದಿ ತಿಳಿದಿದ್ದ ವಚನಗಳ ಲ್ಲೊಂದು ವೀರಪ್ಪನ ತುದಿನಾಲಗೆಗೆ ಬಂತು.

"ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತು, ಅಯ್ಯಾ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು, ಅಯ್ಯಾ..."

"ಹುಂ. ಈಗ ರಾಹುಮುಕ್ತನಾಗಬೇಕು ಅನ್ನತೀಯಾ ?"

"ಹೌದು, ಸ್ವಾಮಿಗಳೇ..."

"ಅರಸನ ಮೇಲೆ ನಿನಗೆ ದ್ವೇಷ ಇಲ್ಲ ? ರಾಜ್ಯ ಆಳಬೇಕೆಂಬ ಅಭಿಲಾಷೆ ಇಲ್ಲ ?"

"ಇನಿತೂ ಇಲ್ಲ."

"ಯಾಕೆ ?"

"ತಮ್ಮ ಸಾನ್ನಿಧ್ಯ ಈ ಜೀವಕ್ಕೆ ನೆಮ್ಮದಿ ನೀಡಿದೆ. ಇನ್ನು ಅಮೃತ ಬೇಡ, ಹಾಲಾ ಹಲವೇ ಇರಲಿ—ಎನ್ನಲೆ? ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ? ಚಂದನ ವಿರಲು ದುರ್ಗಂಧವ ಮೈಯಲ್ಲಿ ಪೂಸುವರೆ ? ಸುರಭಿ ಮನೆಯಲ್ಲಿ ಕರೆಯುತ್ತಿರೆ ಹರಿವರೆ ಸೊಣಗನ ಹಾಲಿಂಗೆ ?"

"ವೀರಪ್ಪಾಜಿ, ಇದನ್ನು ಸ್ವಲ್ಪ ಯೋಚಿಸಿ ನೋಡು : ಬಟ್ಟೆಬಯಲೆಲ್ಲ ಗಟ್ಟಿಗೊಂಡೊಡೆ, ಸ್ವರ್ಗ ಮೃತ್ಯು ಪಾತಾಳಕ್ಕೆ ಠಾವಿನ್ನೆಲ್ಲಿಹುದು ? ಮೇಘ ಜಲವೆಲ್ಲ ಮುತ್ತಾದೊಡೆ ಸಪ್ತ ಸಾಗರಂಗಳಿಗೆ ಉದಕವೆಲ್ಲಿಹುದು ?..."

ಸ್ವಾಮಿಗಳಾಡಿದ ವಚನದ ಗೂಢಾರ್ಥವೇನು ಎಂದು ವೀರಪ್ಪ ಚಿಂತಿಸಿದ. ಕ್ಷಣ ತಡೆದು ಅವರೇ ಅಂದರು :

"ರಾಜ್ಯದ ರಕ್ಷಕರಾದವರೆಲ್ಲ ಕೈದು ಕೆಳಗಿಟ್ಟರೆ ಏನಾದೀತು, ವೀರಪ್ಪಾಜಿ ?"

"ನನ್ನ ಮುಂದಿರುವುದು ಎರಡು ವಿಷಯ, ಸ್ವಾಮಿಗಳೇ."

"ಹೇಳು."

"ಒಂದು, ಸಂಸಾರಿಯಾಗಿ ಬಾಳುವುದು. ನನಗದು ಇಷ್ಟವಿಲ್ಲ. ಸಂತಾನ ಪ್ರಾಪ್ತಿಯಾಗಿ ಆ ಸಂತಾನ ಯಾದವೀಕಲಹದ ಕಥೇನ ಮುಂದರಿಸೋದು ನನಗೆ ಬೇಕಿಲ್ಲ. ಇನ್ನೊಂದು, ದೇಶಕ್ಕೆ ಗಂಡಾಂತರ ಒದಗಿದರೆ ನಾನು ಸಲ್ಲಿಸಬೇಕಾದ ಸೇವೆಯ ಪ್ರಶ್ನೆ..."

"ಹ್ಞ, ಆಗೇನು ಮಾಡಬೇಕೆನ್ನುವೆ? ಜಪಮಾಲೆ ಬದಿಗಿರಿಸಿ ಖಡ್ಗಧಾರಿಯಾಗತೀಯೊ?"

ವೀರಪ್ಪ ಉತ್ತರವೀಯಲಿಲ್ಲ. ಅವನ ಮನಸಿನ ಹೊಯ್ದಾಟ ಕಂಡು ಸ್ವಾಮಿಗಳೇ ಅಂದರು :

"ಒಳ್ಳೇದು. ಆ ಪ್ರಶ್ನೇನ ಹಾಗೆಯೇ ಇರಗೊಡು. ಈಗ ಐಹಿಕ ಆಸೆಗಳನ್ನ ಬಿಟ್ಟು ಅಪರಂಪರನಾಗಬೇಕು ಅಂತಿದೀ ಅಲ್ಲವೆ ? ಕಾವಿಯುಡುಗೆ ನಿನಗೆ ರಕ್ಷೆಯಾಗತದೆ."

ವೀರಪ್ಪನ ಕಣ್ಣುಗಳಲ್ಲಿ ಅಪೂರ್ವ ಪ್ರಭೆ ಕಂಡಿತು.

"ಇಷ್ಟು ಅನುಗ್ರಹಿಸಿದಿರಲ್ಲ. ಇದು ನನ್ನ ಭಾಗ್ಯವಿಶೇಷ!"

"ಅನುಗ್ರಹ ಮಲ್ಲಿಕಾರ್ಜುನ ಮಾಡತಾನೆ. ಬೆಟ್ಟದಪುರಕ್ಕೆ ಹೋಗತೀಯಾ ? ನಿನ್ನ ಅಳಲನ್ನ ಅವನ ಮುಂದೆ ತೋಡಿಕೋ. ಅವನೇನು ವಿಧಿಸುತಾನೋ ಅದರಂತೆ ನಡಕೋ."

"ಆಗಲಿ, ಸ್ವಾಮಿಗಳೇ."

"ನಾಳೆ ಏಕಾದಶಿ. ಶಿವರಾತ್ರಿಯ ಪೂಜೆ ಮಲ್ಲಿಕಾರ್ಜುನನಿಗೆ ಸಲ್ಲಿಸತೀಯಾ ?"

"ಅಪ್ಪಣೆ."

ಸ್ವಾಮಿಗಳು ಕೈತಟ್ಟಿದರು. ಕಾಣಿಸಿಕೊಂಡ ಪಟ್ಟದ ಶಿಷ್ಯನಿಗೆ, "ಸಿದ್ಧಲಿಂಗನನ್ನು ಕರೆ" ಎಂದರು.

ಸಿದ್ಧಲಿಂಗ ಬಂದಾಗ,

"ಇವನಿಗೆ ಮುಂಡನ ಮಾಡಿಸು. ಕಾವಿಯುಡಿಸು. ಪಟ್ಟಣದಾಚೆಗೆ ಒಯ್ದು ಬಿಟ್ಟು ಬಾ. ಬೆಟ್ಟದಪುರಕ್ಕೆ ಹೋಗತಾನೆ" ಎಂದು ನಿರ್ದೇಶನವಿತ್ತರು.

ವೀರಪ್ಪಾಜಿ ಸಾಷ್ಟಾಂಗವೆರಗಿ ಸ್ವಾಮಿಗಳ ಪಾದಗಳನ್ನು ಕಂಬನಿಯಿಂದ ತೋಯಿಸಿದ.

ಅವರು ಎರಡೂ ಕೈಗಳಿಂದ ವೀರಪ್ಪನ ಭುಜಗಳನ್ನು ಮುಟ್ಟಿ, "ಏಳು, ಶಿವ ಕಾಪಾಡು ತಾನೆ" ಎಂದರು.

ಅವರ ಕಂಠ ಮಾರ್ದವವಾಗಿತ್ತು...

...ಸಂಗಡಿಗನಾಗಿ ಬಂದ ಸಿದ್ಧಲಿಂಗ, ಪಟ್ಟಣದ ಹೊರ ವಲಯ ದಾಟಿದೊಡನೆ, "ಇನ್ನು ನಾನು ಮರಳತೀನಿ" ಎಂದ.

ವೀರಪ್ಪಾಜಿಯ ಧ್ವನಿ-ಭಾವಗಳು ನಿರ್ವಿಕಾರವಾಗಿದ್ದುವು.

"ಆಗಲಿ."

"ನಮ್ಮ ಬಂಧುತ್ವ ಲಗೂನೆ ಮುಗೀತು."

ವೀರಪ್ಪ ಮುಂದೆ ಮಾತಾಡಲಿಲ್ಲ. ಸಿದ್ಧಲಿಂಗನೇ ಅಂದ :

"ಬೆಳಗ್ಗೆ ಮಲ್ಲಪ್ಪಗೌಡಗೆ ನೀ ಅಂದ ಮಾತನ್ನ ಈಗ ನಾ ಹೇಳತೀನಿ. ಶಿವನಿಚ್ಛೆ ಇದ್ದರೆ ಆಯುಸ್ಸು ಮುಗಿಯೋದಕ್ಕೆ ಮುಂಚೆ ಮತ್ತೆ ಕೂಡೇವು."

ವೀರಪ್ಪ ಮುಂದಕ್ಕೆ ಅಡಿ ಇರಿಸಿದ. ಒಮ್ಮೆಯೂ ತಿರುಗಿ ನೋಡಲಿಲ್ಲ.

ಅವನು ಕಣ್ಮರೆಯಾಗುವವರೆಗೂ ಸಿದ್ಧಲಿಂಗ ಅಲ್ಲೇ ನಿಂತ.

## ೨೦

—"ಅಯ್ನನವರೇ, ನಮ್ಮಲ್ಲಿ ಶಿವಪೂಜೆ ಮಾಡಿ ಹೋಗುತೀರಾ ?"

—"ಅಯ್ನನವರೆ, ದಾಸೋಹಕ್ಕೆ ನಮ್ಮಲ್ಲಿಗೆ ಬರುತೀರಾ ?"

—"ರಾತ್ರೆ ದಾರಿ ನಡೀಬ್ಯಾಡಿ. ಈ ಕಡೆ ಹುಲಿ ಚಿರತೆಗಳು ಬಾಳ. ಕಾಡಾನೆಗಳ ಹಿಂಡೂ ಅಲೀತಾ ಇರತದೆ."

ಸೊರಗಿದ ದೇಹದ ಯುವಕ ಜಂಗಮ ದಾರಿಯುದ್ದಕ್ಕೂ ಜನರ ಗಮನವನ್ನು ಸೆಳೆಯುತ್ತಿದ್ದ.

ಪ್ರಸಾದ—ಒಲ್ಲೆನೆಂಬ. ಶಿವರಾತ್ರಿಯ ಉಪವಾಸದ ಅನಂತರವೇ ಈತನ ಪಾರಣೆ.

ಮೈಸೂರು ಸೀಮೆಯಿಂದ ಧಾನ್ಯಗಳನ್ನು ತರಲೆಂದು ಹೋಗುತ್ತಿದ್ದ ಎತ್ತಿನ ಬಂಡಿಯವನೊಬ್ಬ ಕರೆದ:

"ಅತ್ತಿ ಕುಂತ್ಕೊಳ್ಳಿ, ಅಯ್ಯನವರೆ."

ಇವನ ಉತ್ತರ:

"ಒಲ್ಲೆ. ಬೆಟ್ಟದಪುರಕ್ಕೆ ಹೋಗತಾ ಇದೇನೆ. ನಡೆದುಬಂದ ಭಕ್ತರನ್ನೇ ಮಲ್ಲಿಕಾರ್ಜುನ ಮೆಚ್ಚುವ."

ಸಿದ್ಧೇಶ್ವರನ ಗದ್ದುಗೆಯ ಮಾರ್ಗವಾಗಿ ಕೊಡಗು ಸೀಮೆಯನ್ನು ಜಂಗಮ ದಾಟಿದ. ಗದ್ದುಗೆ ಬೆಟ್ಟದ ಬಳಿ ಎಷ್ಟೊಂದು ಕಾಳಗಗಳಾಗಿದ್ದುವು! ಅವುಗಳಲ್ಲಿ ಎಷ್ಟೊಂದು ನಿರ್ಣಾಯಕವೆನಿಸಿದ್ದುವು! ಹಿಂದೂಗಳಾದ ಯದುವಂಶದ ರಾಜರೂ ಕೊಡಗಿನ ಮೇಲೆ ಕತ್ತಿ ಹಿರಿದಿದ್ದರು. ಮಹಮ್ಮದೀಯರಾದ ಹೈದರಾಲಿ ಟೀಪೂಸುಲ್ತಾನರೂ ದಂಡೆತ್ತಿಬಂದಿದ್ದರು. ರಣಕ್ಷೇತ್ರಕ್ಕೆ ಮೂರನೆಯವರ ಪ್ರವೇಶವೂ ಆಗಿತ್ತು—ಪರಕೀಯರಾದ ಆಂಗ್ಲರ ಚಂಚೂ ಪ್ರವೇಶ. ನೀತಿನೇಮಗಳೊಂದೂ ಇಲ್ಲವಲ್ಲ ಈ ಭೂದಾಹಕ್ಕೆ? ರಾಜ್ಯತೃಷ್ಣೆಗೆ?

ದ್ವಾದಶಿಯ ಮುಚ್ಚಂಜೆ ಪೆರಿಯಾಪಟ್ಟಣ ಬಂತು. ನಂಜರಾಜಪಟ್ಟಣದ ಸ್ಥಾಪನೆಗೆ ಕಾರಣನಾದ ನಂಜುಂಡರಸ ಆಳಿದ ರಾಜಧಾನಿ. ಅಲ್ಲಿಯೇ ಆತನ ಮಗ ವೀರರಾಜ, ಪರಾಭವದ ಅವಮಾನವನ್ನು ಸಹಿಸಲೊಪ್ಪದೆ, ತನ್ನ ಕುಟುಂಬವನ್ನು ಸ್ವತಃ ಖಡ್ಗದಿಂದ ಸಂಹರಿಸಿ, ತಾನು ಚಿಕದೇವರಾಯನ ಸೈನ್ಯದೊಡನೆ ಹೋರಾಡುತ್ತ ಮಡಿದಿದ್ದ. ಅಭಿಮಾನಧನನೆನ್ನಿಸಿಕೊಂಡಾತ ಎಂಥ ಬಲಿದಾನಕ್ಕೂ ಹಿಂಜರಿಯುವುದಿಲ್ಲವಲ್ಲ?

ಜಂಗಮವೇಷ ಧರಿಸಿದ್ದ ವೀರಪ್ಪಾಜಿಯ ಮನಸ್ಸು ಯೋಚನೆಗಳ ಸುಳಿಯಲ್ಲಿ ಗಿರಗಿರ ತಿರುಗುತ್ತ ನಡೆಯಿತು. ಆಗಲೆ ಇರುಳಾಗಿತ್ತು. ಊರಿನ ಧರ್ಮಶಾಲೆ ಕಣ್ಣಿಗೆ ಬಿದ್ದಾಗ, ಇಲ್ಲಿ ವಿರಮಿಸಿ ಮುಂಜಾವದಲ್ಲೆದ್ದು ಮುಂದುವರಿಯುವುದೊಳಿತು—ಎಂದುಕೊಂಡ.

ಧರ್ಮಶಾಲೆ, ದಾರಿಹೋಕರಾದ ಜಂಗಮರು—ಸನ್ಯಾಸಿಗಳು—ಭಿಕ್ಷುಕರಿಂದಲೂ ವ್ಯಾಪಾರಿಗಳಿಂದಲೂ ತುಂಬಿತ್ತು, ಹೊರಗಿನ ಅರಳೀಕಟ್ಟೆಯ ಮೇಲೂ ಕೆಲವರಿದ್ದರು. ಅಲ್ಲಿಯೇ ಒಂದು ಮೂಲೆಯಲ್ಲಿ ವೀರಪ್ಪಾಜಿ ತನ್ನ ಜೋಳಿಗೆಯನ್ನಿರಿಸಿದ. ದೂರದಲ್ಲೊಂದು ಕಂದೀಲು 'ಬಾವಿ ಇಲ್ಲದೆ' ಎಂದು ತೋರಿಸುತ್ತಿತ್ತು. ವೀರಪ್ಪಾಜಿ ಅಲ್ಲಿಗೆ ಸಾಗಿ, ತನ್ನ ಸರದಿಗಾಗಿ ಕಾದು, ನೀರು ಮೊಗೆದು ಕೈ ಪಾದ ಮುಖಗಳನ್ನು ತೊಳೆದ. ಸ್ವಚ್ಛವಾದ ನೀರನ್ನು ನಾಲ್ಕಾರು ಗುಟುಕು ಕುಡಿದ.

ಅರಳೀಕಟ್ಟೆಗೆ ಹಿಂತಿರುಗಿದಾಗ ಅವನ ಜೋಳಿಗೆ ಅಸ್ತವ್ಯಸ್ತವಾಗಿತ್ತು. ಆದರೇನು? ಕಾವಿ ಅಂಚಡಿಗಳ ಹೊರತಾಗಿ ಮುಟ್ಟಿದವನು ಎತ್ತಿಕೊಳ್ಳುವಂಥದು ಅದರಲ್ಲೇನೂ ಇರಲಿಲ್ಲವಲ್ಲ?

ತಿರುದುಂಬವನ ಗಂಟನ್ನೂ ಶೋಧಿಸಿದೆಯಾ ಶಿವನೆ!—ಎಂದು ವೀರಪ್ಪಾಜಿ ಮನಸ್ಸಿನಲ್ಲೇ ಉದ್ಗರಿಸಿದ.

ಅಲ್ಲಿ ಕುಳಿತು ಶಿವಶಿವ ಎನ್ನುತ್ತಿದ್ದಂತೆ ಜೊಂಪು ಹತ್ತಿತು. ನನಗೆ ಶಿವರಾತ್ರಿಯ

5

ಸಂಭ್ರಮ—ಎನ್ನುತ್ತ ತಂಗಾಳಿ ಬಲವಾಗಿ ಬೀಸತೊಡಗಿತು. ಜೋಗುಳದ ಆಲಾಪನೆ ಯಾಯಿತು, ಅರಳೀ ಎಲೆಗಳ ಇಂಚರ. ತೋಳದಿಂಬಿನ ಮೇಲೆ ತಲೆ ಇರಿಸಿ ವೀರಪ್ಪಾಜಿ ಪವಡಿಸಿದ. ಕ್ಷಣಾರ್ಧದಲ್ಲಿ ನಿದ್ದೆ ಅವನಿಗೆ ಆತುಕೊಂಡಿತು.

ನಿದ್ದೆಯಲ್ಲಿ ಅವನೊಂದು ಕನಸು ಕಂಡ. ಅಪ್ಪಂಗಳದ ಅರಮನೆ. ಜಂಗಮರದೊಂದು ತಂಡವೇ ದಾಸೋಹಕ್ಕೆ ಬಂದಿದೆ. ತನ್ನ ತಂದೆ ಅಪ್ಪಾಜಿ ಅರಸು ಅವರೆಲ್ಲರ ಪಾದಪೂಜೆ ಮಾಡುತ್ತಿದ್ದಾನೆ. ತಾಯಿ ಒಳಗೆ ದಾಸೋಹಕ್ಕೆ ಅಣಿ ಮಾಡುತ್ತಿದ್ದಾಳೆ. ಹುಡುಗನಾದ ತಾನು, ಬಂದವರು ಎಷ್ಟೆಂದು ಎಣಿಸುತ್ತಿದ್ದಾನೆ. ಒಂದು, ಒಂದು—ಒಂದೇ...ಇಷ್ಟೊಂದು ಜನ ಇದ್ದರಲ್ಲ, ಈಗ ಕಾಣಿಸುತ್ತಿರುವುದು ಒಬ್ಬರೇ; ಇದೇನು ಸೋಜಿಗ ? 'ಅಮ್ಮಾ !' ಎಂದು ವೀರಪ್ಪಾಜಿ ಕರೆಯುತ್ತಾನೆ, ತಾಯಿಯನ್ನು ಕೇಳಲೆಂದು. ಅಷ್ಟರಲ್ಲಿ ಗುಡುಗಿನಂಥ ಗಂಟಲಲ್ಲಿ ಆ ಜಂಗಮನೆನ್ನುತ್ತಾನೆ : 'ಬಾ ! ಬಂದುಬಿಡು' ಅಮ್ಮ ಹೊರಕ್ಕೆ ಹಣಿಕಿ ನೋಡಿ, ಚೀರುತ್ತ, ಮಗನನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾಳೆ.

...ನಿದ್ರಾಭಂಗ. ಆದರೆ ಕಣ್ಣೆವೆಗಳು ತೆರೆದುಕೊಳ್ಳಲಿಲ್ಲ. ವೀರಪ್ಪಾಜಿ ಮಗ್ಗುಲು ಹೊರಳಿ ಸರಾಗವಾಗಿ ಉಸಿರಾಡಿದ.

ನೆಲ ಮುಟ್ಟಿದೊಡನೆ ಹೇಗೆ ಗಾಢನಿದ್ದೆ ಆವರಿಸಿತ್ತೋ ಹಾಗೆಯೇ ಮುಂಜಾವದಲ್ಲಿ ಥಟ್ಟನೆ ಎಚ್ಚರವೂ ವೀರಪ್ಪಾಜಿಗೆ ಆಯಿತು.

ಧರ್ಮಶಾಲೆಯೊಳಗಿದ್ದ ಬೇರೆ ಕೆಲವರೂ ಒಬ್ಬರನ್ನೊಬ್ಬರು ಕೂಗಿ ಎಬ್ಬಿಸುತ್ತಿದ್ದರು.

ವೀರಪ್ಪಾಜಿ ಜೋಳಿಗೆಯನ್ನೆತ್ತಿಕೊಂಡು ಪೆರಿಯಾಪಟ್ಟಣದ ಉತ್ತರಕ್ಕೆ ಅಭಿಮುಖವಾಗಿ ಬೆಟ್ಟದಪುರದ ಕಡೆಗೆ ನಡೆಯತೊಡಗಿದ.

ದಾರಿಯಲ್ಲಿ ಆತನಿಗೆ ರಾತ್ರೆ ತಾನು ಕಂಡಿದ್ದ ಕನಸಿನ ನೆನಪಾಯಿತು.

ವಿಚಿತ್ರ ಸ್ವಪ್ನ—ಎಂದುಕೊಂಡ. ಏನು ಇದರ ಅರ್ಥ ? ಎಂದೋ ಗತಿಸಿದ ತಾಯಿ ತಂದೆ ಕಂಡುಬಂದರಲ್ಲ ? ಮಾತೆ, ಮಾಯೆ. ಜಂಗಮನ ಜತೆ ಹೋಗಬಾರದು—ಎಂದು ತನ್ನನ್ನು ಆಕೆ ತಡೆಹಿಡಿಯಲೆತ್ನಿಸಿದ್ದಳು.

ಸಂಸಾರದ ಬಂಧನಗಳನ್ನು ಕಡಿದೊಗೆಯಲು ನಿರ್ಧರಿಸಿರುವ ತನ್ನ ಮನಸ್ಸಿನ ತಳ ಮಳವೇ ಕನಸಾಗಿ ಕಾಣಿಸಿರಬೇಕು—ಎಂದುಕೊಂಡ ವೀರಪ್ಪಾಜಿ.

ಇಕ್ಕೆಲಗಳಲ್ಲೂ ಅಡವಿ. ಅದನ್ನು ಸೀಳಿತ್ತು, ವೀರಪ್ಪಾಜಿ ನಡೆಯುತ್ತಲಿದ್ದ ಅಗಲ ಕಿರಿದಾದ ದಾರಿ, ಚೆಂಗಾಳ್ವರ, ಚೋಳರ, ಹೊಯ್ಸಳರ, ವಿಜಯನಗರದ ಸಮ್ರಾಟರ, ಮೈಸೂರರಸರ, ಕೊಡಗಿನ ರಾಜರ ದಂಡುಗಳೆಲ್ಲ ಆ ನೆಲವನ್ನು ತುಳಿದಿದ್ದುವು. ಕೆಲವು ಶತಮಾನಗಳಿಂದ ಲಕ್ಷಾಂತರ ಯಾತ್ರಿಕರು ಆ ಹಾದಿಯಾಗಿ ಸಾಗಿದ್ದರು. ಎತ್ತಿನ ಬಂಡಿಗಳು ಆಳದ ಸಮಾನಾಂತರ ರೇಖೆಗಳೆರಡನ್ನು ಉದ್ದಕ್ಕೂ ಊರಿಹೋಗಿದ್ದುವು.

ದೂರದಲ್ಲೆಲ್ಲಿಂದಲೋ ಹುಲಿಯ ಗರ್ಜನೆ ಕೇಳಿಸಿತು. ಒಂದು ಆನೆಯೂ ಘೀಳಿಟ್ಟಂತಾ ಯಿತು. ಊರಿಗೆ ಬೇಗನೆ ಹಗಲಾಗುತ್ತದಾದರೂ ಕಾಡಿನೊಳಗಿನ್ನೂ ಕತ್ತಲೆಯೇ ಎಂದು ಜಂಭದಿಂದ ಗೂಬೆಗಳೆರಡು ಒಂದರ ಬಳಿಕ ಇನ್ನೊಂದು ಗೂಗೂ ಎಂದು ದನಿ ಮಾರ್ದನಿ ಗೊಡುತ್ತಿದ್ದುವು.

ದೂರದಲ್ಲೊಂದು ಕೆನ್ನಾಯಿ ದಾರಿಗಡ್ಡ ನಿಂತಿತ್ತು. ಮನುಷ್ಯನನ್ನು ಸಾಯಿಸುವ ಸಾಮರ್ಥ್ಯ ಉಳ್ಳದ್ದು.

ಆದರೆ ಇದರ ಪರಿವೆ ವೀರಪ್ಪಾಜಿಗೆ ಇರಲಿಲ್ಲ.

ಆತ ಹತ್ತಿರ ಬರುತ್ತಲಿದ್ದಂತೆ ಕೆನ್ನಾಯಿ ಕಾಡು ಸೇರಿ ಮಾಯವಾಯಿತು.

ಸ್ವಲ್ಪ ದೂರದ ಬಳಿಕ ಆ ಕೆನ್ನಾಯಿ ಮತ್ತೊಮ್ಮೆ ಅಡ್ಡಗಟ್ಟಿ ನಿಂತಿತು.

ಅದರ ರೂಪದಲ್ಲಿ ಶಿವ ಕಾಣಿಸಿಕೊಂಡಿದ್ದಾನೆ—ಎಂಬ ಭ್ರಮೆ ವೀರಪ್ಪನಿಗೆ. ಆತ ಕೂಗಿ ನುಡಿದ :

"ನಿಲ್ಲು ಶಿವ! ಬರತೀನಿ!"

ಕೆನ್ನಾಯಿ ಸರಕ್ಕೆಂದು ಸರಿದುಹೋಯಿತು.

ಹೀಗೆ ನಾಲ್ಕಾರು ಸಾರೆ ಕಣ್ಣುಮುಚ್ಚಾಲೆಯಾಡಿತು ಆ ವನ್ಯಮೃಗ.

ಅಡವಿ ದಾಟಿದ ಬಳಿಕ ಬರಿಯ ಬೆಟ್ಟಗಳು ಕೆಲವು. ತುಸು ದೂರ ಒಂದು ಮಗ್ಗುಲಿಗೆ ಬಯಲು. ಸೂರ್ಯ. ಪುನಃ ಕಾಡುಮರಗಳು : ನಂದಿ, ಮತ್ತಿ, ತೇಗು, ಹೊನ್ನೆ, ಹೆಬ್ಬಲಸು ...ಕೆಲ ಮರಗಳು ಒಂದಕ್ಕೊಂದು ಹೆಣೆದುಕೊಂಡು ಸಂಸಾರ ನಡೆಸಿದ್ದುವು. ಕೆಲ ಕೊಂಬೆಗಳು ಪರಸ್ಪರ ತೀಡಿದಂತೆ ಅವ್ಯಾಹತವಾಗಿ ಕಿಯೋ–ಮಿರೋ ಎಂದು ಸದ್ದಾಗುತ್ತಿತ್ತು.

ವೀರಪ್ಪಾಜಿ ಸುಮಾರು ಮೂರು ಹರಿದಾರಿ ದೂರ ಕ್ರಮಿಸಿರಬೇಕು. ಬೆಟ್ಟದ ಬುಡದಲ್ಲಿ ಹಸುರು ಛಾವಣಿಯ ಕೆಳಗೆ ಹರಡಿದ್ದ ಊರು ಕಾಣಿಸಿತು. ಬೆಟ್ಟದಪುರ. ನಡೆದ ಪಾದಗಳು ಸೋತಿರಲಿಲ್ಲ. ಯಾವ ಶ್ರಮವೂ ಆಗಿರಲಿಲ್ಲ ವೀರಪ್ಪಾಜಿಗೆ. ಶಿವರಾತ್ರಿಯ ತಂಗಾಳಿಯ ರೆಕ್ಕೆಗೆ ಜೋತಾಡಿ ತಾನು ತೇಲಿಬಂದಂತೆ ಅವನಿಗೆ ಅನಿಸಿತು.

ಊರಿಗೆ ಬೆನ್ನೆಲುಬಾಗಿ ನಿಂತಿದ್ದ ಕೋನಾಕೃತಿಯ ಬೆಟ್ಟ. ಅದರ ಸುತ್ತಲೂ ಅರಣ್ಯ. ಬೆಟ್ಟದ ತುದಿಯ ಮೇಲೆ ಗುಡಿ. ಅಲ್ಲಿ ಮಲ್ಲಿಕಾರ್ಜುನನನ್ನು ವೀರಪ್ಪ ಕಾಣಬೇಕು.

"ಹರಹರ ಮಹಾದೇವ!" "ಹರಹರ ಮಹಾದೇವ!"

ನೂರಾರು ಕಂಠಗಳಿಂದ ಬರುತ್ತಿರುವ ಈ ಘೋಷ? ಸಂತೆಮಾಳದಂತಿದೆಯಲ್ಲ ಊರು?

"ಹರಹರ ಮಹಾದೇವ!" "ಹರಹರ ಮಹಾದೇವ!"

ಬೆಟ್ಟವನ್ನು ಸುತ್ತಿರುವ ಅಡವಿಯೊಳಗಿಂದ ಅಲೆಅಲೆಯಾಗಿ ಆಕಾಶಕ್ಕೇರುತ್ತಿರುವ ಈ ಕೂಗು? ಅಲ್ಲೇನು ಮಾಡುತ್ತಿದೆ ಜನಸಂದಣಿ?

ವೀರಪ್ಪನ ಹೃದಯ ನಕ್ಕಿತು :

'ಇಂದು ಶಿವರಾತ್ರೆ! ಹತ್ತೂರುಗಳಿಂದ ಬಂದಿರುವ ಭಕ್ತಾದಿಗಳು ಮಲ್ಲಿಕಾರ್ಜುನನ ದರ್ಶನಕ್ಕೆ ಹೋಗತಾ ಇದಾರೆ. ಇವತ್ತು ಜಾತ್ರೆ!'

## ೨೧

ಜಾತ್ರೆಗೆ ಬಂದವರು ಹತ್ತು ಸಹಸ್ರಕ್ಕೂ ಹೆಚ್ಚು ಜನ. ಬೆಟ್ಟದ ಬೋಳು ಶಿಖರದ ಸುತ್ತಲೂ ಅವರ ಬೀಡು. ಹರಕೆ ಕಾಣಿಕೆಗಳನ್ನು ತಲೆಯ ಮೇಲೆ ಅವರು ಹೊತ್ತು ತಂದಿದ್ದರು. ಪಾರಣೆಯ ಊಟಕ್ಕೋಸ್ಕರ ಮಠಕ್ಕೆ ಒಪ್ಪಿಸಲೆಂದು ಅಕ್ಕಿಬೇಳೆಗಳನ್ನು ಎತ್ತುಗಳ ಮೇಲೆ ಹೇರಿದ್ದರು.

ಮಠ, ಗುಡಿಯ ಸನಿಹದಲ್ಲಿತ್ತು. ಅಲ್ಲಿನ ಸ್ವಾಮಿಗಳೇ ಮಲ್ಲಿಕಾರ್ಜುನನ ಅರ್ಚಕರು. ಕಾವಿ ಲಂಗೋಟಿ, ಕೊರಳಲ್ಲಿ ಲಿಂಗ, ಭುಜದ ಮೇಲೆ ಕಂಬಳಿ. ಹೃಷ್ಟಪುಷ್ಟ ಶರೀರ.

ಜನಸಾಮಾನ್ಯರ ನಡುವೆ ಕಂಬಳಿಸ್ವಾಮಿ ಎಂದು ಅವರು ಪ್ರಖ್ಯಾತರಾಗಿದ್ದರು. ಜಾತ್ರೆಗೆ ಬಂದವರೆಲ್ಲರಿಗೂ ದೇವಾಲಯದಿಂದಲೇ ದಾಸೋಹವಾಗುತ್ತಿತ್ತು. ಈ ಕಾರಣದಿಂದಲೇ, ಬೆಟ್ಟದ ಮೇಲಿನ ದೇವರು 'ಅನ್ನದಾನಿ ಮಲ್ಲಿಕಾರ್ಜುನ' ಎನಿಸಿಕೊಂಡಿದ್ದ.

ಆ ಬೆಟ್ಟದ ಮೇಲೆ ಒಂದು ಕೊಳವಿತ್ತು. ಶಿವರಾತ್ರಿಯ ತನಕ ಅದರಲ್ಲಿ ನೀರಿದ್ದು, ಆ ಬಳಿಕ ಬತ್ತುತ್ತಿತ್ತು.

ಬೆಟ್ಟದ ಸುತ್ತಲೂ ಅಸಂಖ್ಯ ಬಿಲ್ವವೃಕ್ಷಗಳಿದ್ದುವು.

ಉಪವಾಸ ಶಿವಪೂಜೆ ಜಾಗರಣೆಗಳ ಹಬ್ಬ, ಶಿವರಾತ್ರಿ.

ಆ ಜನಸಾಗರದಲ್ಲೊಂದು ಹನಿಯಾಗಿ ವೀರಪ್ಪಾಜಿ ಮೈಮರೆತ. ಮಿಂದು ಮಡಿಯುಟ್ಟು ಮೌನದಿಂದ ಜಪಧ್ಯಾನಮಾಡಿದವರು ಕೆಲವರು. ಬೆಟ್ಟದಪುರದಲ್ಲೇ ಶುಚಿರ್ಭೂತರಾಗಿ ಬಂದಿದ್ದ ಇತರ ಅಸಂಖ್ಯ ಯಾತ್ರಿಕರು. ಶಿವಮಹಿಮೆಯನ್ನು ಹೊಗಳಿ ಹಾಡುತ್ತ ಹೊತ್ತುಗಳೆದರು. ಬಿಲ್ವಪತ್ರೆ ಪುಷ್ಪಗಳಿಂದ ಹಲವರು ಹರನರ್ಚನೆಯನ್ನು ಮಾಡಿದರು. ಹಗಲು, ಇರುಳಿನ ನಿರೀಕ್ಷೆಯಲ್ಲಿ ಕಳೆಯಿತು. ಇರುಳು, ಬೆಳಗಿನ ನಿರೀಕ್ಷೆಯನ್ನು ಮಾಡಿತು. ಅಷ್ಟವಿಧಾರ್ಚನೆ, ಷೋಡಶ ಉಪಚಾರ, ಇಷ್ಟಲಿಂಗಾರ್ಚನೆಗಳಾದುವು. ನೂರಾರು ರೈತರು ವಾಸಕಂಸಾಳೆಗಳನ್ನು ನುಡಿಸುತ್ತ ಮಲ್ಲಿಕಾರ್ಜುನನ ಪಾದಗಳಿಗೆ ನಮೋ ಎಂದರು.

"ಪಲ್ಲಕ್ಕಿ ಕೊಟ್ಟೂರ ಮಲ್ಲಯ್ಯ ಒಲ್ಲೆಂಬ
ಮಲ್ಲೆನೆಂಬೂವ ಮರಿಗುದರಿ
ಮಲ್ಲೆನೆಂಬೂವ ಮರಿಗುದರಿ ಕೊಟ್ಟಾರ
ಮೆಲ್ಲನೆ ಮಡವನಿಳಿದಾನ"

—ಎಂದು ಹೆಂಗಸರು ಹಾಡಿದರು.

ಕಂಬಳಿಸ್ವಾಮಿಗಳಿಂದ ಮಹಾಪೂಜೆಯಾದ ಬಳಿಕ ಪಾರಣೆ ನಡೆಯಿತು. ಜಂಗಮರಿಗೆ ಹಾಲು ಸಕ್ಕರೆ ಜೇನು ಪಾನಕ ಎಳನೀರು ಬಾಳೆಯಹಣ್ಣು, ಸಂಸಾರಿಗಳು ಭಕ್ಷ್ಯ ಭೋಜ್ಯಗಳುಳ್ಳ ಪ್ರಸಾದವನ್ನುಂಡರು...

ಮಾರನೆಯ ಬೆಳಗ್ಗೆ ಜಾತ್ರೆಯ ಪರಿಷೆ ಕರಗಿತು. ಜನರ ಕಲರವದಿಂದ ತುಂಬಿದ್ದ ಬೆಟ್ಟ ಈಗ ನೀರವವಾಯಿತು.

ದೇವಾಲಯದ ಹೊರಗೆ ನಂದಿಯ ಶಿಲಾಮೂರ್ತಿಗೊರಗಿ ಕುಳಿತಿದ್ದ ವೀರಪ್ಪಾಜಿಯನ್ನು ಮಂಪರು ಕವಿಯಿತು. ಸೂರ್ಯನ ಹೂಕಿರಣಗಳ ಸ್ಪರ್ಶದಿಂದ ಅವನಿಗೆಚ್ಚರವಾಯಿತು.

ಶಿವರಾತ್ರೆಗೆಂದು ಬಂದಿದ್ದ ಜಂಗಮರಲ್ಲಿ ಕೆಲವರಿನ್ನೂ ಅಲ್ಲಲ್ಲಿ ಸುಳಿದಾಡುತ್ತಿದ್ದರು.

ಮಾಘಮಾಸದ ಗಾಳಿ ಶಿವನುತ್ಸವ ಮುಗಿಯಿತೆಂದು, ಶಿವಶಿವಶಿವ, ಎನ್ನುತ್ತ ಮಾಯವಾಗತೊಡಗಿತ್ತು.

ವೀರಪ್ಪಾಜಿ ದೇವಾಲಯವನ್ನು ಹೊಕ್ಕು ಲಿಂಗಕ್ಕೆ ಸಾಷ್ಟಾಂಗವೆರಗಿದ. ಎದ್ದು ಅದರ ಎದುರು ಕುಳಿತು ಅಂತರ್ಮುಖಿಯಾದ.

ಅವನ ಹೃದಯ ಗೋಗರೆಯಿತು :

ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ

ನರವ ತಂತಿಯು ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಎನ್ನ ಉರದಲೊತ್ತಿ ನಿನ್ನ ಜಯಗಾನವಂ ಬಾರಿಸು, ತಂದೇ..."

ಆತ ಬೇಡಿಕೊಂಡ :

"ಕಾಯ ಸಮಾಧಿಯನೊಲ್ಲೆ, ನೆನಹು ಸಮಾಧಿಗೆ ನಿಲ್ಲೆ
ಕೈಲಾಸವೆಂಬ ಭವಸಾಗರವನೊಲ್ಲೆ—ಎನ್ನ ಅಲ್ಲಿಗೆ ಇಲ್ಲಿಗೆ
ಎಂದೆಳೆಯದೆ ನಿನ್ನಲ್ಲಿ ಕೂಟಸ್ಥಮಾಡು ನಿಃಕಳಂಕ ಮಲ್ಲಿಕಾರ್ಜುನಾ"

ಬದುಕಿನ ದೂರಪಯಣದಲ್ಲಿ ಒಂದು ಹಂತವನ್ನಷ್ಟೆ ತಲಪಿದ್ದೆ ತಾನು. ಉಳಿದ ಮಾರ್ಗವನ್ನು ಇನ್ನು ಕ್ರಮಿಸಬೇಕು. ಅದಿರುವ ದಿಕ್ಕು ಯಾವುದು ?

ದೇವರೊಡನೆ ಆತ ದೂರು ನುಡಿದ :

"ಕಳವಳದ ಮನವು ತಲೆಕೆಳಗಾಗಿಪ್ಪುದು. ಸುಳಿದು ಬೀಸುವ ಗಾಳಿ ಉರಿಯಾಗಿರ್ಪುದು. ಬೆಳದಿಂಗಳು ಬಿಸಿಲಾಗಿರ್ಪುದು..."

ತನಗೆ ದಾರಿ ತೋರುವುದೇನು ಕಷ್ಟವೆ ದೇವರಿಗೆ ?

"ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ. ಬೇಡುಬೇಡೆಲೆ ಹಂದೇ. ಕಣ್ಣು ಬೇಡಿದಡೀವೆ. ತಲೆಯ ಬೇಡಿದಡೀವೆ..."

ದೇವರ ಸಾಮರ್ಥ್ಯಕ್ಕೆ ಮೀರಿದುದು ಯಾವುದು ?

"ಕಾಳಿದಾಸಂಗೆ ಕಣ್ಣನಿತ್ತೆ ; ಓಹಿಲಯ್ಯನ ನಿಜಪುರಕೊಯ್ದೆ. ನಂಬಿ ಕರೆದಡೆ ಓ ಎಂದೆ ; ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ..."

ವೀರಪ್ಪಾಜಿಯ ಕಣ್ಣುಗಳಿಂದ ಕಂಬನಿ ಕೋಡಿಗಟ್ಟಿ ಹರಿಯಿತು. ಮೈ ಥರಥರನೆ ಕಂಪಿಸಿತು. ಬವಳಿ ಬರುವಂತಾಯಿತು ಅವನಿಗೆ...

ಯಾರೋ ಹೊರಗಿನಿಂದ ಕರೆದರು :

"ಅಪಾ, ಈ ಕಡೆ ಬನ್ನಿ. ಸ್ವಾಮಿಗಳು ಬರತಾರೆ."

ಉತ್ತರ ಇಲ್ಲದುದನ್ನು ಕಂಡು ಆ ವ್ಯಕ್ತಿ ಧ್ವನಿ ಏರಿಸಿ ನುಡಿಯಿತು :

"ಕೇಳಿಸ್ತೇನ್ರಪಾ ? ಬರ್ರೀ ಅಂದೆ."

ಆತ, ಮಠದ ಪರಿವಾರದಲ್ಲೊಬ್ಬ—ಜಂಗಮ. ಒಳ ಬಂದು ವೀರಪ್ಪಾಜಿಯ ಮೈ ಮುಟ್ಟಿ ಅವನೆಂದ :

"ಏಳ್ರೀ..."

ಗಾಬರಿಗೊಂಡು ಆತ ಕೂಗಿ ಕರೆದ :

"ಗಡಾನೆ ಬರ್ರೀ. ಇಲ್ಲೊಬ್ಬ ಅಯ್ಯ ಮೂರ್ಛೆ ಹೋಗಿದಾರೇ."

ಇಬ್ಬರು ಮೂವರು ಜಂಗಮರು ಓಡಿಬಂದರು. ವೀರಪ್ಪಾಜಿಯನ್ನೆತ್ತಿ ಹೊರತಂದು ಜಗಲಿಯ ಮೇಲೆ ನೆರಳಲ್ಲಿ ಮಲಗಿಸಿದರು, ತಣ್ಣೀರು ತರಿಸಿ ಶೈತ್ಯೋಪಚಾರ ಮಾಡಿದರು...

...ಮೂರ್ಛೆ ಹೋಗಿದ್ದ ಆ ಕೆಲ ನಿಮಿಷಗಳಲ್ಲಿ ಮಲ್ಲಿಕಾರ್ಜುನ ತನ್ನೊಡನೆ ಮಾತನಾಡಿ ದಂತೆ ವೀರಪ್ಪಾಜಿಗೆ ಭಾಸವಾಗಿತ್ತು. ಪದಗಳು ಅಲೆಯಲೆಯಾಗಿ ಬಂದು ಪ್ರಜ್ಞೆಯ ಭೇರಿ ಯನ್ನು ಬಡೆದಿದ್ದುವು :

"ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರ ಎಂಬೀ

ಎಂಟು ಸುತ್ತಿನ ಕೋಟೆಯನ್ನು ಅನುಭವಿಗಳ ಮತವಿಡಿದು ಹೋಗು: ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರ ಎಂಬ ನೀತಿಯ ಐದು ದಾರಿಗಳಲ್ಲಿ ನಡೆ; ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಅರಿವಿನ ಆರು ಮೆಟ್ಟಿಲುಗಳನ್ನೇರು; ಲಿಂಗಾಂಗ ಸಾಮರಸ್ಯ ಎಂಬ ದ್ವಾರವನ್ನು ಹೊಗು...ನೀನಿನ್ನು ಅಪರಂಪಾರ."

ವೀರಪ್ಪಾಜಿ ತೊದಲಿದ್ದ:

"ದೀಕ್ಷೆ?"

"ಇನ್ಯಾತರ ದೀಕ್ಷೆ?!"

ಕ್ಷಣಕಾಲ ಸುಮ್ಮನಿದ್ದು ವೀರಪ್ಪಾಜಿ ಮತ್ತೊಂದು ಪ್ರಶ್ನೆ ಕೇಳಿದ್ದ:

"ದೇಶಕ್ಕೆ ಆಪತ್ತೊದಗಿದಾಗ?"

"ಅಂಥಾ ಗಳಿಗೆಯಲ್ಲಿ ನಿನ್ನಿಂದೇನಾಗಬೇಕೋ ಅದನ್ನು ಮಾಡಿಸಿಕೊಳ್ಳುವೆ. ಈಗ ಯಾಕೆ ಆ ಚಿಂತೆ? ಹೋಗು."

ಆನಂದ ಉಕ್ಕೇರಿ ದೇವರ ಪಾದಗಳನ್ನು ಹಿಡಿಯಲೆತ್ನಿಸಿದ್ದ ವೀರಪ್ಪಾಜಿ...

ಅತ್ತ ಬಂದ ಸ್ವಾಮಿಗಳು ಬಾಗಿ ನೋಡಿ ಕೇಳಿದರು:

"ಏನಾಯಿತು? ಯಾರು?"

ಶಿವರಾತ್ರಿಗೇಂತ ಬಂದವನಿರಬೇಕು. ಯಾರೋ ತಿಳೀದು."

ಅಷ್ಟರಲ್ಲಿ ಪ್ರಜ್ಞೆ ಮರಳಿದ ಜಂಗಮ, ತನ್ನ ಸುತ್ತಲೂ ಬಿರುನೋಟ ಬೀರುತ್ತ ಎದ್ದು ಕುಳಿತು, ಅಂದ:

"ನಾ ಇನ್ನು ಹೊರಡತೀನಿ. ಹೋಗು—ಅಂದ ಮಲ್ಲಿಕಾರ್ಜುನ."

ಸ್ವಾಮಿಗಳೆಂದರು:

"ಹೌದು? ಎಲ್ಲಿಗೆ?"

ಯಾರು ಪ್ರಶ್ನಿಸಿದರೆಂಬುದನ್ನು ಗಮನಿಸದೆ ಜಂಗಮನೆದ್ದುನಿಂತು, ತಾರಕ ಸ್ವರದಲ್ಲಿ ನುಡಿದ:

"ದಾರಿ ಬಿಡಿ! ದಾರಿ ಬಿಡಿ! ಬಸವಕಲ್ಯಾಣಕ್ಕೆ ಹೋಗುವೆ! ಉಡುತಡಿಗೆ! ತೀರ್ಥಾಟನೆಗೆ!"

"ನಿನ್ನ ಹೆಸರೇನು?" ಎಂದು ಕೇಳಿದರು, ಸ್ವಾಮಿಗಳು.

ಈಗಲೂ ಅವರನ್ನು ನೇರವಾಗಿ ದಿಟ್ಟಿಸದೆ ಜಂಗಮನೆಂದ:

"ನಾನು ಅಪರಂಪಾರ!"

ನೆರೆದಿದ್ದವರಲ್ಲೊಬ್ಬ, ಈತ ಅರೆಮರುಳನಂತಿದಾನೆ—ಎಂದು ಸನ್ನೆ ಮಾಡಿ ತೋರಿಸಿದ. ಉಳಿದವರು ನಕ್ಕರು.

ಆ ಕಡೆಗೆ ಲಕ್ಷ್ಯವನ್ನೇ ಕೊಡದೆ ಅಪರಂಪಾರ ಬೆಟ್ಟದಿಂದ ಇಳಿಯತೊಡಗಿದ.

## ೨೨

ಚಿಕವೀರರಾಜೇಂದ್ರ, ಪಟ್ಟಾಭಿಷಿಕ್ತನಾದ ವಿಕ್ರಮ ಸಂವತ್ಸರದಿಂದ ವಿರೋಧಿ ಸಂವತ್ಸರದವರೆಗೆ, ಹತ್ತು ವರ್ಷಗಳ ಕಾಲ, ಕೊಡಗಿನ ಪ್ರಜೆಗಳು ನೆಮ್ಮದಿಯಿಂದ ಜೀವಿಸಿದರು.

ಆರಂಭದಲ್ಲಿ ತನ್ನ ದಾರಿಯ ಕಂಟಕಗಳ ನಿವಾರಣೆಗಾಗಿ ಅರಸು ತೋರಿದ ಕ್ರೌರ್ಯವೀಗ ಹಳೆಯ ಮಾತಾಗಿತ್ತು. ಯುವಕನಾದ ರಾಜ ಕೊಡಗಿನ ಯುವಜನಾಂಗದ ಆಶೋತ್ತರಗಳ ಸಾಕಾರಮೂರ್ತಿಯಾಗಿದ್ದ.

ಚಿಕವೀರರಾಜನ ಆಡಳಿತದಲ್ಲಿ ಬಿಗುವು ಬಹಳ. ಆಲಸಿಗಳನ್ನೂ ಮೈಗಳ್ಳರನ್ನೂ ಕಂಡರೆ ಅವನು ಕಿಡಿ ಕಾರುತ್ತಿದ್ದ. ಅದು ತಂದೆಯಿಂದ ಆನುವಂಶಿಕವಾಗಿ ಆತ ಪಡೆದಿದ್ದ ಗುಣ. ಲಿಂಗರಾಜನ ಕಾಲದಲ್ಲಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಿದ್ದ ದಿವಾನರಿಬ್ಬರು—ವಿಶೇಷ ವಾಗಿ ಬೋಪಣ್ಣ—ಹೊಸ ಅರಸ ಕಿರಿಯವನೆಂಬ ಕಾರಣದಿಂದ ತಮ್ಮ ಕುಂದಿದ ಅಧಿಕಾರ ವನ್ನು ಬಲಪಡಿಸಿಕೊಳ್ಳಲು ಯತ್ನಿಸಿದರು. ಆದರೆ ಚಿಕವೀರರಾಜ ಅದಕ್ಕೆ ಅವಕಾಶವೀಯ ಲಿಲ್ಲ.

ಅರಸನ ಯುವಕ ಸ್ನೇಹಿತರಲ್ಲಿ ಒಬ್ಬ, ಬಸವ. ಇನ್ನೊಬ್ಬ ಮಲೆಯಾಳದಿಂದ ಅಲೆಯುತ್ತ ಬಂದು ತನ್ನ ಧೈರ್ಯ ಸ್ಥೈರ್ಯಗಳಿಂದ, ಅಭಿರುಚಿಗಳಿಂದ, ರಾಜನನ್ನು ಮೆಚ್ಚಿಸಿದ ಅಬ್ಬಾಸ್‌ಅಲಿ. ಇವರ ಸಹವಾಸ ದೊರೆಗೆ ಇಷ್ಟವಾಗಿತ್ತು.

ಚಿಕವೀರರಾಜ ಗದ್ದುಗೆಯೇರಿದ ಮೂರನೆಯ ವರ್ಷ ನಡೆದೊಂದು ಬೇಟೆ ಕೊಡಗಿನಲ್ಲಿ ಮನೆಮನೆಯ ಮಾತಾಯಿತು. ಹಾರುತ್ತಿರುವ ಹಕ್ಕಿಯ ಕಣ್ಣಿಗೇ ಗುರಿ ಹೊಡೆಯುವ ಸಾಮರ್ಥ್ಯವಿದ್ದ ದೊರೆ, ನಾಲ್ವತ್ತು ದಿನಗಳ ಅಖಂಡ ಬೇಟೆಯಲ್ಲಿ ಇಸ್ನೂರ ಮೂವತ್ತ ಮೂರು ಆನೆಗಳನ್ನು ಗುಂಡುಹೊಡೆದು ಕೆಡವಿದ. ಕೊಡಗಿನ ಪ್ರಜೆಗಳ ದೃಷ್ಟಿಯಲ್ಲಿ ಅದು ಅಸಮ ಸಾಹಸವಾಗಿತ್ತು. ಆ ಬೇಟೆಯಲ್ಲಿ ಭಾಗಿಗಳಾದಾಗ ಬಳಲದಿದ್ದವರು ಇತರರಿಗೆ ಅದನ್ನು ಬಣ್ಣಿಸಿ ಬಸವಳಿದರು.

ಆಗ ಎರಡು ವರ್ಷಗಳ ಹಸುಳೆ, ಅರಸುಗುವರಿ. ಹುಟ್ಟಿದ್ದು ಗಂಡಾಗಲಿಲ್ಲ ಎಂಬ ಬೇಸರ ಕೆಲದಿನಗಳಷ್ಟೇ ರಾಜನನ್ನು ಕಾಡಿತ್ತು. ಆದರ ಬಾಲಲೀಲೆಗಳನ್ನು ಕಂಡಮೇಲೆ, ಮೋಹದ ಮಡದಿಯ ಒಡನಾಟವೂ ಪುನಃ ದೊರೆಯತೊಡಗಿದ ಬಳಿಕ, ಮಗುವನ್ನು ಆತ ಪ್ರೀತಿಸಿದ.

ಮುಂದೆ ತೊದಲುತ್ತ, "ಅಪ್ಪಾಜಿ..." ಎಂದು ತನ್ನ ತಂದೆಯನ್ನು ಅದು ಕರೆಯ ತೊಡಗಿದಾಗ, "ಇದೇ ಸ್ವರ್ಗ ಸುಖ" ಎಂದುಕೊಂಡ ಅರಸ. ಬಿಡುವಿನ ವೇಳೆಯನ್ನೆಲ್ಲ ಆತ ಮಗುವಿನೊಡನೆ ಕಳೆಯುತ್ತಿದ್ದ. ದೊರೆಯ ಕೃಪಾಕಟಾಕ್ಷಕ್ಕಾಗಿ ಹಂಬಲಿಸುತ್ತಿದ್ದ ಅಂತಃ ಪುರದ ಇತರ ಹೆಣ್ಣುಗಳು ಇದನ್ನು ಕಂಡು ಕರುಬುವಂತಾಯಿತು.

ಒಮ್ಮೆ ರಾಣಿ ಗೌರಮ್ಮನೆಂದಳು :

"ಹೆಣ್ಣು ಮಗುವನ್ನೇ ಇಷ್ಟೊಂದು ಮುದ್ದಿಸುತ್ತೀರಿ. ಇನ್ನು ಗಂಡಾದರೆ ಹೇಗೋ ?"

ಆದರೆ ಅವಳ ಆ ಆಸೆ, ದಿನಕಳೆದಂತೆ, ಈಡೇರುವ ಲಕ್ಷಣಗಳು ಕಾಣಿಸಲಿಲ್ಲ, ಚೊಚ್ಚಲ ಹೆರಿಗೆಯಲ್ಲಿ ದೇಹಕ್ಕಂಟಿದ ಅಸ್ವಾಸ್ಥ್ಯ, ಬದುಕಿನುದ್ದಕ್ಕೂ ಅವಳ ಜತೆಗಿರುವಂತೆ ಕಂಡಿತು.

ಅಪ್ಪಂಗಳದ ಅರಮನೆಯಲ್ಲಿ ಮಾತ್ರ ಈರ್ಷ್ಯೆಯ ಕುಡಿಯೊಂದು ತನ್ನ ಸುತ್ತಲೂ ನಾಲಿಗೆ ಚಾಚಲೆತ್ನಿಸುತ್ತ ಮಂದವಾಗಿ ಉರಿಯುತ್ತಿತ್ತು. ಚಿಕವೀರರಾಜನ ಆಡಳಿತ ಸುಭದ್ರ ವಾಗಿ ನೆಲೆಯೂರಿದುದು ಚನ್ನಬಸಪ್ಪನಿಗೆ ನಿರಾಸೆಯನ್ನುಂಟುಮಾಡಿತ್ತು. ಚಿಕವೀರರಾಜ ನನ್ನು ತಳ್ಳಿಹಾಕಿ ಅವನ ತಂಗಿ—ತನ್ನ ಮಡದಿ—ಪಟ್ಟವೇರುವುದು ಸಾಧ್ಯವಾದೀತು ; ಆಕೆ ಯನ್ನು ಮುಂದಿಟ್ಟು ತಾನೇ ಕೊಡಗನ್ನಾಳಬಹುದು—ಎಂದು ಚೆನ್ನಬಸಪ್ಪ ಮನದಲ್ಲಿ ಮಂಡಿಗೆ ತಿಂದಿದ್ದ. ಅರಸನದು ಹೆಣ್ಣುಮಗು ; ತನಗೊಂದು ಗಂಡು ಹುಟ್ಟಿತೆಂದರೆ,

ಗೌರಮ್ಮನಿಗೆ ಮುಂದೆ ಪುತ್ರಸಂತಾನ ಆಗಲಿಲ್ಲವೆಂದರೆ, ತನ್ನ ಸಂತತಿಗೇ ಮುಂದೆಯೂ ಪಟ್ಟ ದೊರೆವುದು—ಎಂದೂ ಆತ ಯೋಚಿಸಿದ್ದ. ಅವನ ದುರದೃಷ್ಟದಿಂದ ದೇವಮ್ಮಾಜಿ ಗರ್ಭವತಿಯಾಗಲೇ ಇಲ್ಲ.

ಹತಾಶನಾದ ಘಳಿಗೆಯಲ್ಲಿ ಒಡಲ ಸಂಕಟವನ್ನು ಚನ್ನಬಸಪ್ಪ ಹರಿಯಬಿಡುತ್ತಿದ್ದ :

"ಅವನ ತಲೆ ಚಿನ್ನದ್ದು, ನಮ್ಮ ತಲೆ ಮಣ್ಣಿಂದಾ ? ಸಾಹಸದಲ್ಲಿ ಅವನಿಗಿಂತ ನಾವೇನು ಕಮ್ಮಿ ?"

ಇದು ಬಡಿವಾರದ ಮಾತಲ್ಲವೆಂದು ದೇವಮ್ಮಾಜಿ ಬಲ್ಲಳು. ಆತ ಆಕೆಗೆ ಪತಿಯಾಗಿ ದೊರೆತುದೂ ಅಸಾಧಾರಣವಾದೊಂದು ರೀತಿಯಲ್ಲಿ. ಅವಳ ತಂದೆ ಲಿಂಗರಾಜನೊಮ್ಮೆ ಗ್ರಾಮಾಂತರ ಪ್ರದೇಶಕ್ಕೆ ಕಂದಾಯ ನಿಗದಿ ಮಾಡಲೆಂದು ಹೋದವನು ಒಂದೆಡೆ ವಿಹರಿಸು ತ್ತಿದ್ದ. ದೂರದಲ್ಲೊಂದು ಎಮ್ಮೆ ಮೇಯುತ್ತಿತ್ತು. ಅದರ ಮೇಲೊಂದು ಕಾಗೆ ಕುಳಿತಿತ್ತು.

ಲಿಂಗರಾಜನೆಂದ :

"ಗುಂಡು ಹಾರಿಸಿ ಆ ಕಾಗೇನ ಹೊಡೀಬೇಕು. ಎಮ್ಮೆ ಸಾಯಬಾರದು. ಇಂಥ ಗುರಿ ಕಾರರು ಯಾರಿದೀರಿ ? ಬನ್ನಿ."

ಪರಿವಾರದಲ್ಲಿದ್ದವರು ಒಬ್ಬರ ಮುಖವನ್ನೊಬ್ಬರು ನೋಡಿದರು.

"ಇಷ್ಟೇನಾ ನಿಮ್ಮ ಗಂಡಸ್ತನ ?" ಎಂದು ಲಿಂಗರಾಜ ಮೂದಲಿಸಿದ.

ಆಗ ಒಬ್ಬ ಯುವಕ-ಕೊಡವ ಮುಂದೆ ಬಂದ. ಗೌರಾಂಗ, ಎತ್ತರದ ನಿಲುವು, ತೆಳ್ಳಗಿನ ದೇಹ, ಮೂಗು ಮಾಟವಾಗಿತ್ತು. ಆತ ಮಕ್ಕಾಟಿ ಅಪ್ಪಣ್ಣ.

ಉಳಿದವರು ಬೆರಗಾಗಿ ಅವನನ್ನು ನೋಡಿದರು.

ಯುವಕನನ್ನು ಆಪಾದಮಸ್ತಕ ದಿಟ್ಟಿಸಿ ಅರಸನೆಂದ :

ಮಿಕಿಮಿಕಿ ನೋಡ್ಕೊಂಡು ಯಾಕ್ನಿಂತಿದೀಯಾ ಮದುವೆಗಂಡಿನ ಹಾಗೆ ? ಹಾರಿಸು ಗುಂಡು."

ಅಪ್ಪಣ್ಣ ಗುರಿಯಿಟ್ಟು ಹೊಡೆದ. ಕಾಗೆ ಸತ್ತು ಕೆಳಗೆ ಬಿತ್ತು. ಎಮ್ಮೆ ಕೋಡುಗಳನ್ನೆತ್ತಿ ಬೆನ್ನಿನ ಕಡೆ ದೃಷ್ಟಿ ಹೊರಳಿಸಿ, ಎರಡು ಹೆಜ್ಜೆ ಮುಂದೆ ಸಾಗಿ ಪುನಃ ಮೇಯತೊಡಗಿತು. ಗುಂಡಿನ ಹೊಗೆ ಪುಟ್ಟ ಮೋಡವಾಗಿ ಮೇಲೆ ಹೋಯಿತು.

"ಭಳಿರೆ ಅಪ್ಪಣ್ಣ !" ಎಂದು ಜನರು ಚಪ್ಪಾಳೆ ತಟ್ಟಿದರು.

ಅರಸ ತಾನೂ ಕೈತಟ್ಟಿ ಹರ್ಷಪ್ರದರ್ಶನ ಮಾಡಿದ.

ರಾಜಧಾನಿಗೆ ಹೊರಡುತ್ತ ದೊರೆ, ಮಕ್ಕಾಟಿ ಅಪ್ಪಣ್ಣನ ಹಿರಿಯರು ಯಾರೆಂದು ವಿಚಾರಿಸಿದ. ಅವರನ್ನು ಅರಮನೆಗೆ ಬರಹೇಳಿದ.

ಅಪ್ಪಣ್ಣ ಚನ್ನಬಸಪ್ಪಣ್ಣನಾಗಿ ರಾಜಕುಮಾರಿ ದೇವಮ್ಮಾಜಿಯ ಕೈಹಿಡಿದ ಬಗೆ ಅಂದು.

ವರ್ಷಗಳು ಕಳೆದಂತೆ ದೇವಮ್ಮಾಜಿ ಮಡಕೇರಿಯ ಅರಮನೆಗೆ ಹೋಗುವುದು ಕಡಿಮೆ ಯಾಯಿತು. ಅರಸನನ್ನು ಕುರಿತು ಚನ್ನಬಸಪ್ಪ ಆಡುತ್ತಿದ್ದ ಕಹಿ ನುಡಿಗಳಿಗೆ ಬೋಪಣ್ಣ ಕಿವಿಗೊಡುತ್ತಿದ್ದ. ಮಡಕೇರಿಗೆ ಬಂದರೂ ಅರಮನೆಯೊಳಗೆ ಕಾಲಿರಿಸದೆಯೇ ಚನ್ನಬಸಪ್ಪ ಹಿಂತಿರುಗುವುದಿತ್ತು. ಅಪ್ಪಂಗಳದ ದಾರಿಯಾಗಿ ಬಂದ ತಕ್ಕರು ಸರ್ವಕಾರ್ಯಕಾರರಲ್ಲಿ ಕೆಲವ ರೊಡನೆ, ತನ್ನ ಮನಸ್ಸಿನ ಬೇಗುದಿಯನ್ನು ಅವನು ತೋಡಿಕೊಳ್ಳುತ್ತಿದ್ದ.

ಇಂತಹ ವಿರಸ ರಹಸ್ಯವಾಗಿ ಉಳಿಯುವುದಿಲ್ಲ. ಅರಮನೆಯ ಅಳಿಯನ ಔದ್ಧತ್ಯ ಸಹಜ

ವಾಗಿಯೇ ದೊರೆಯನ್ನು ಕೋಪಾವಿಷ್ಟನನ್ನಾಗಿ ಮಾಡಿತು. ಆದರೂ ಆತ, ಚೆನ್ನಬಸಪ್ಪ ತನ್ನ ತಂಗಿಯ ಪತಿ ಎಂಬ ಕಾರಣದಿಂದ ಸಂಯಮ ತಳೆದ.

ಒಮ್ಮೆ ತಂಗಿ ದೇವಮ್ಮಾಜಿ ಬಂದಿದ್ದಾಗ, ಅರಸ ಆಕೆಗೆ ಅಂದ :

"ಒಸಿ ನಾಲಿಗೆ ಬಿಗಿ ಹಿಡೀಬೇಕು ಅಂತ ನಿನ್ನ ಗಂಡನಿಗೆ ಹೇಳು."

ಇದನ್ನು ಕೇಳಿದಾಗ ಚೆನ್ನಬಸಪ್ಪ, "ಇವನು ಬಾಳ ಕುದುರ್‍ಕೊಂಡ" ಎಂದು ರೇಗಾಡಿದ.

ಆ ವೇಳೆಗಾಗಲೇ ಈಸ್ಟ್ ಇಂಡಿಯಾ ಕಂಪೆನಿ, ಭಾರತದ ಬಹುಭಾಗದಲ್ಲಿ ಬಲವಾಗಿ ಬೇರುಬಿಟ್ಟಿತು. ಟೀಪೂ ಹತನಾದ ಬಳಿಕ ಆಂಗ್ಲರ ರಾಜ್ಯವಿಸ್ತರಣಕಾರ್ಯ ಸುಗಮವಾಯಿತು. ದೇಶೀಯ ಭಾಷೆಗಳನ್ನರಿಯದ ಪರಕೀಯ ಜನ ಆರು ಸಾವಿರ ಮೈಲುಗಳ ದೂರದಿಂದ ಬಂದು ರಾಜ್ಯ ಕಟ್ಟಿದ ರೀತಿ ಅದ್ಭುತವಾಗಿತ್ತು.

ಆ ಅವಧಿಯಲ್ಲಿ ಕಿತ್ತೂರಿನ ಸ್ವತಂತ್ರ ರಾಜ್ಯದ ಪತನವಾಯಿತು. ಅದು, ಕೊಡಗಿನ ಉತ್ತರಕ್ಕೆ ಸುಮಾರು ನೂರು ಹರದಾರಿಗಳ ದೂರದಲ್ಲಿದ್ದ ಅರಸೊತ್ತಿಗೆ. ರಾಣಿ ಚೆನ್ನಮ್ಮ ಆಂಗ್ಲರಿಗೆ ಶರಣೆನ್ನದೆ ಅಸಮ ಸಾಹಸದಿಂದ ಕಾದಿದಳು. ಸ್ವಕೀಯರೇ ಒಬ್ಬಿಬ್ಬರ ದ್ರೋಹ ಚಿಂತನೆ ಚೆನ್ನಮ್ಮನ ಪರಾಭವವನ್ನು ಸುಲಭಗೊಳಿಸಿತು. ಐದುವರ್ಷ ಆಂಗ್ಲರಸೆರೆಯಲ್ಲಿದ್ದು ರಾಣಿ ಅಸುನೀಗಿದಳು.

ಕಿತ್ತೂರಿನ ಕಥೆಯನ್ನು ಕೇಳಿದ ಚಿಕವೀರರಾಜ ತನ್ನ ಕುಡಿಮೀಸೆಯನ್ನು ತಿರುವಿ ನುಡಿದ :

"ಕೊಡಗಿನ ತಂಟೆಗೆ ಈ ಜನ ಬರಲಿ. ಆಗ ತೋರಿಸೇವು !"

ಕಿತ್ತೂರಿನ ಪ್ರಕರಣದ ಬಳಿಕ ಚೆನ್ನಬಸಪ್ಪನ ಯೋಚನೆ ನಿರ್ದಿಷ್ಟವಾದ ಹೊಸತೊಂದು ದಾರಿಯನ್ನು ಹಿಡಿಯಿತು : ಇಂಗ್ಲಿಷರ ನೆರವು ಪಡೆದು ಅರಸನನ್ನು ತಾನು ಉರುಳಿಸಬೇಕು.

ಅದಕ್ಕಾಗಿ, ಕ್ರೌರ್ಯವೇ ಮತ್ತಿತರ ಆರೋಪಗಳನ್ನು ಚಿಕವೀರರಾಜನ ಮೇಲೆ ಹೊರಿಸಿ, ಮೈಸೂರಿನ ಆಂಗ್ಲ ರೆಸಿಡೆಂಟನಿಗೆ ಅವನು ಪತ್ರಗಳನ್ನು ಬರೆದ. ಚಿಕವೀರರಾಜ ತನ್ನ ದಾಯಾದಿಗಳಾದ ವೀರಪ್ಪ–ನಂಜುಂಡಪ್ಪರನ್ನು ಕೊಲ್ಲಿಸಿದನೆಂಬುದು ಆ ಆರೋಪಗಳಲ್ಲಿ ಒಂದು.

ಈ ಮಧ್ಯೆ ವೀರಪ್ಪ ಸತ್ತಿಲ್ಲವೆಂಬ ಕಿಂವದಂತಿಯೊಂದು ಹುಟ್ಟಿ ರೆಕ್ಕೆಪುಕ್ಕ ಬಲಿತು, ಕೊಡಗಿನ ಉದ್ದಗಲಕ್ಕೆ ಸಂಚಾರ ಮಾಡಿತ್ತು. ಬೇಹಿನ ಚಾವಡಿಯಲ್ಲಿ ಊಳಿಗದವನಾಗಿ ನೇಮಕಗೊಂಡ ಶಂಕರಪ್ಪನಾಗಲೀ ಹೊಸಳ್ಳಿಯ ಮಲ್ಲಪ್ಪಗೌಡನಾಗಲೀ ನಂಜರಾಜಪಟ್ಟಣದ ಸಿದ್ಧಲಿಂಗನಾಗಲೀ ಆ ಕಿಂವದಂತಿಗೆ ಮೂಲವಾಗಿರಲಿಲ್ಲ. ಕುಚೋದ್ಯಕ್ಕೆಂದು ಯಾವನೋ ಹಾರಿಬಿಟ್ಟ ಊಹಾಪೋಹ ಬೃಹದಾಕಾರ ತಳೆದಿತ್ತು.

ಅಪ್ಪಂಗಳಕ್ಕೆ ಈ ಸುದ್ದಿ ಮುಟ್ಟಿದಾಗ ಅದನ್ನು ನಂಬಲು ಚೆನ್ನಬಸಪ್ಪ ಸಿದ್ಧನಿರಲಿಲ್ಲ. ಗದ್ದುಗೆಗೆ ಇನ್ನೊಬ್ಬ ಪ್ರತಿಸ್ಪರ್ಧಿ ಇರುವನೆಂಬ ಅಂಶ ಅವನಿಗೆ ಅಪ್ರಿಯವಾಗಿತ್ತು.

ಆದರೆ, ತನ್ನ ಮನಃಕ್ಲೇಶದ ಮಡುವಿನಲ್ಲಿ ಮುಳುಗುತ್ತಿದ್ದ ಗಂಗಮ್ಮ ಆ ಕಡ್ಡಿಗೆ ಆತುಕೊಂಡಳು. ಲೋಕದ ದೃಷ್ಟಿಯಲ್ಲಿ ವಿಧವೆಯಾಗಿದ್ದ ರಾಜಮ್ಮಾಜಿ ಈಗ ಹುಡುಗಿಯಲ್ಲ, ಯುವತಿ. ತಾಯಿಯಾಡಿದ ಪಿಸುನುಡಿ, ಮುಚ್ಚಿಕೊಂಡಿದ್ದ ಅವಳ ಹೃದಯದ ಗವಾಕ್ಷಿಗಳನ್ನು ಮೆಲ್ಲನೆ ತೆರೆಯಿತು. ಬಾಲ್ಯದ ಮಾಯಾಲೋಕದಲ್ಲಿ ತಾನು ಕಂಡ ಪತಿ ಬದುಕಿ ಇರಬಹುದೆಂಬ ಆಸೆ ಕೊನರಿ, ಆತ ಬದುಕಿ ಇರುವನೆಂಬ ನಂಬುಗೆಯಾಗಿ ಮಾರ್ಪಟ್ಟಿತು.

ಮಲೆತಿರಿಕೆಬೆಟ್ಟದ ತಪ್ಪಲಿನಿಂದ ಅಪ್ಪಂಗಳಕ್ಕೆ ಬಂದು ಸೇರಿದ ಮೊದಲ ಒಂದೆರಡು

ವರ್ಷಗಳ ಕಾಲ, ಮಗಳೊಡನೆ ಹಳ್ಳಿಗೆ ಹಿಂತಿರುಗುವ ಕನಸನ್ನೇ ಗಂಗಮ್ಮ ಕಾಣುತ್ತಿದ್ದಳು. ರಾಣಿ ಗೌರಮ್ಮ ಬಾಣಂತಿಯಾಗಿದ್ದಾಗಲೊಮ್ಮೆ, ಮಗಳನ್ನು ಕರೆದುಕೊಂಡು ಮಡಕೇರಿಗೆ ಅವಳು ಹೋಗಿದ್ದಳು. ಕೋಟೆಮನೆಯತ್ತ ಆಕೆಯ ದೃಷ್ಟಿ ಅಲೆದಿತ್ತು. ಅಳಿಯ ಬಂದಿಯಾಗಿ ತೀರಿಕೊಂಡಿದ್ದ ತಾಣ. ಸತ್ತವನನ್ನು ಎಲ್ಲಾದರೂ ಮಣ್ಣು ಮಾಡಿರಬೇಕಲ್ಲ? ಅದನ್ನು ನೋಡಿದರಾಗುತ್ತಿತ್ತು ತಾನು...ಆದರೆ ಆ ಅಪೇಕ್ಷೆಗಳನ್ನು ಆಕೆ ಯಾರಲ್ಲಿ ಹೇಳಿಕೊಳ್ಳಬೇಕು ? ಸುಮ್ಮನಿದ್ದಳು. ತಾನು ಊರಿಗೆ ಮರಳಲು ಅನುಮತಿ ದೊರೆಯದೆ ?—ಎಂದು ರಾಣಿಯನ್ನು ಕೇಳಿದ್ದಳು.

ಈಕೆ ನೀಡಿದ ಉತ್ತರ :

"ರಾಜಮ್ಮಾಜಿ ಜತೆಯಲ್ಲೇ ಇರಿ, ಅತ್ತೆಮ್ಮ : ನಿಮಗೆ ಊರಾದರೇನು ? ಅಪ್ಪಂಗಳವಾದರೇನು ?"

ಅರಮನೆಗೆ ಸಮೀಪದ ಸಂಬಂಧವಾದ ರಾಜಮ್ಮಾಜಿ ಹಳ್ಳಿಗೆ ಹೋಗಲು ಅರಸನ ಒಪ್ಪಿಗೆ ದೊರೆಯದೆಂಬುದು ಸ್ಪಷ್ಟವಾಗಿತ್ತು. ಮಗಳನ್ನು ಬಿಟ್ಟು ತನಗೆ ಬೇರೆ ಯಾರಿದ್ದರು? ಅವಳ ಮೈಗಾವಲಾಗಿ ಇಲ್ಲಿಯೇ ಇರುವುದಲ್ಲವೆ ಒಳಿತು ?

ಗಂಗಮ್ಮನ ಮೌನ ಕಂಡು ದೇವಮ್ಮಾಜಿಯೇ ಅಂದಳು :

"ಬೇಕಿದ್ದರೆ ಹೇಳಿ. ನಾಲ್ಕುನಾಡು ಅರಮನೆಯಲ್ಲಿ ಇರುವಿರಂತೆ. ಮಹಾಸ್ವಾಮಿಯನ್ನು ಒಪ್ಪಿಸುತ್ತೇನೆ."

ಆ ಕುರಿತು ಯೋಚಿಸಿ ಗಂಗಮ್ಮನೆಂದಳು :

"ಬ್ಯಾಡ. ನನ್ನ ಮಗಳಿಗೆ ಅಪ್ಪಂಗಳವೇ ಅಲ್ಲವೆ ಗಂಡನ ಮನೆ ?"

ತಾನೂ ಮಗಳೊಡನೆ ಉಳಿಯುವೆನೆಂಬ ನಿರ್ಧಾರವಿತ್ತು ಧ್ವನಿಯಲ್ಲಿ.

ಮುಂದೆ, ವೀರಪ್ಪಾಜಿ ಸತ್ತಿಲ್ಲವೆಂಬ ಕಿಂವದಂತಿ ಹುಟ್ಟಿದಾಗ ಗಂಗಮ್ಮ ಗೆಲುವಾದಳು. ಯುವತಿಯಾಗಿ ಮಾರ್ಪಟ್ಟಿದ್ದ ಮಗಳ ಮುಖವನ್ನು, ಬರಿ ಹಣೆಯನ್ನು, ಮಾಂಗಲ್ಯ ಸೂತ್ರವಿಲ್ಲದ ಕೊರಳನ್ನು ನೋಡುತ್ತ, ಇವಳ ಬದುಕಿನಲ್ಲಿ ಮುಂದೆ ಹೊಸ ಬೆಳಗು ಮೂಡಿದರೂ ಮೂಡಬಹುದೇನೋ ಎಂಬ ಆಸೆ ತಾಯಿಯಲ್ಲಿ ಮೊಳೆಯಿತು.

## ೨೩

ಐಹಿಕ ಆಸೆಗಳ ಎಲ್ಲ ಕೊಂಡಿಗಳನ್ನೂ ಕಳಚಿ ವಿಮುಕ್ತನೂ ವಿರಕ್ತನೂ ಆದ ವೀರಪ್ಪಾಜಿ ಅಪರಂಪಾರನಾಗಿ, ದಕ್ಷಿಣ ಭಾರತದ ಶೈವ ಕ್ಷೇತ್ರಗಳನ್ನು ಸಂದರ್ಶಿಸಿದ. ಪಾರಮಾರ್ಥಿಕ ಚಿಂತನೆಯಲ್ಲಿ ಮಾಸಗಳನ್ನು—ವರ್ಷಗಳನ್ನು—ಕಳೆದ.

ಅವನ ಇಚ್ಛಾಶಕ್ತಿ ಉಕ್ಕಾಯಿತಾದರೂ ಹೃದಯ ಪರಿಪೂರ್ಣ ನೆಮ್ಮದಿಯ ಆವಾಸವಾಗಲಿಲ್ಲ.

ತನ್ನನ್ನು ತಾನೇ ಬಾರಿಬಾರಿಗೆ ಆತ ಕೇಳುತ್ತಲಿದ್ದ :

"ಯಾಕೆ ಈ ತಳಮಳ ? ಯಾಕೆ ? ಯಾಕೆ ?"

ಪ್ರಜಾಸುಖದ ಪ್ರಶ್ನೆಗಳು, ಕೊಡಗು ಮೈಸೂರು ಮತ್ತಿತರ ರಾಜ್ಯಗಳ ಆಗುಹೋಗುಗಳು, ಅವನ ಆಸಕ್ತಿಯನ್ನು ಕೆರಳಿಸುತ್ತಿದ್ದುವು.

ಅಂತರ್ಮುಖಿಯಾಗಿ ಆತ ಉದ್ಗರಿಸುತ್ತಿದ್ದ.

"ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೆ ? ಸಮುದ್ರವ ದಾಟುವಂಗೆ ಹರಿಗೋಲ ಹಂಗೇಕೆ ? ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೆ ?"

ಉದ್ಗಾರಗಳಷ್ಟೇ ಪ್ರತಿಧ್ವನಿಸುತ್ತಿದ್ದುವು. ನೆಮ್ಮದಿ ದೊರೆಯುತ್ತಿರಲಿಲ್ಲ.

ಬಸವಕಲ್ಯಾಣದಿಂದ ಮರಳಿ ಹೊರಟ ಅಪರಂಪಾರ ಕಿತ್ತೂರಿನ ದಾರಿಯಾಗಿ ಬಂದ.

ಎತ್ತರದ ನಿಲುವಿನ, ದಿಟ್ಟ ನಡಿಗೆಯ, ಗಡ್ಡಮೀಸೆಗಳ, ಕಾವಿ ನಿಲುವಂಗಿಯ, ತೇಜಃಪುಂಜ ಕಣ್ಣುಗಳ, ಸ್ಫುರದ್ರೂಪಿ ವಿರಕ್ತನನ್ನು, ಮೊದಲ ನೋಟಕ್ಕೆ ಮುಸಲ್ಮಾನ ಸಂತನೆಂದು ಹಲವರು ಭಾವಿಸಿದರು; 'ಫಕೀರ ಬಾಬಾ' ಎಂದು ಕರೆದರು. ಜಂಗಮನೆರೆದ ವಚನಾಮೃತವನ್ನು ಸವಿದಾಗ ಅವನನ್ನು ಆರಾಧಿಸಿದರು.

ಕಿತ್ತೂರು ಸಂಪದ್ಭರಿತವಾಗಿತ್ತು. ಪ್ರಜಾನುರಾಗಿಯಾದ ರಾಣಿ, ದಕ್ಷ ಆಡಳಿತವರ್ಗ, ಧೀರ ಸೈನಿಕರು—ಕಿತ್ತೂರಿನ ಸುಖಶಾಂತಿಗೆ ಎಂದೂ ಚ್ಯುತಿ ಇರದು ಎಂಬ ಭಾವನೆಯನ್ನು ಹುಟ್ಟಿಸುತ್ತಿದ್ದರು. ಆದರೆ ಮಾರಿ ಮನೆ ಬಾಗಿಲಿನ ಹೊರಗೆ ಹೊಂಚು ಹಾಕುತ್ತಿತ್ತು. ದಖ್ಖಣದ ಪೀಠಭೂಮಿಯ ಮೂಲೆ ಮೂಲೆಗಳಿಗೂ ಆಂಗ್ಲರ ಅಧಿಕಾರ ಹಸ್ತ ಚಾಚತೊಡಗಿತ್ತು. ಟೀಪೂವಿನ ಕಾಲದಲ್ಲಿ ಮೈಸೂರಿನ ಒಂದಂಗವಾಗಿದ್ದ ಧಾರವಾಡದಲ್ಲಿ ಆಂಗ್ಲ ಅಧಿಕಾರಿಯೊಬ್ಬ ತನ್ನ ಠಾಣ್ಯ ಸ್ಥಾಪಿಸಿದ್ದ. ಇಂಥದರಲ್ಲಿ ಕಿತ್ತೂರು ತನ್ನ ಸ್ವಾತಂತ್ರ್ಯವನ್ನು ಎಷ್ಟು ದಿನ ಕಾಯ್ದುಕೊಳ್ಳುವುದು ಸಾಧ್ಯವಿತ್ತು ?

ಅಪರಂಪಾರನಿಗೆ ಅರಿಯದಂತೆಯೇ ಆ ಚಿಂತೆ ಅವನನ್ನು ಕಾಡುತ್ತಿತ್ತು. ಅಂಥ ಘಳಿಗೆಯಲ್ಲಿ ನೆರೆದವರೆದುರು ಅವನು ನುಡಿಯುತ್ತಿದ್ದ :

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ! ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ ! ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ !"

ಇಹದ ಚಿಂತನೆಯನ್ನು ಮಾಡಬೇಕೆ ಜನಸಾಮಾನ್ಯರು ?—ಪರದ ಚಿಂತನೆಯನ್ನೆ ?

ಅಪರಂಪಾರನೆನ್ನುತ್ತಿದ್ದ :

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ..."

ಅಸಾಧಾರಣ ಜಂಗಮನೊಬ್ಬ ತಮ್ಮ ರಾಜ್ಯಕ್ಕೆ ಬಂದಿರುವ ಸುದ್ದಿ ಕಿತ್ತೂರಿನ ಅರಮನೆಗೆ ಮುಟ್ಟಿತು. ಅಲ್ಲಿಂದ ಆಮಂತ್ರಣ ಬರಲಿದೆ ಎಂದು ತಿಳಿದ ಅಪರಂಪಾರ ಅದನ್ನು ಸ್ವೀಕರಿಸಲು ಇಷ್ಟಪಡದೆ, ಆ ಕ್ಷಣವೇ ಕಿತ್ತೂರನ್ನು ತೊರೆದು ದಕ್ಷಿಣಾಭಿಮುಖವಾಗಿ ಪಯಣ ಬೆಳೆಸಿದ.

ಮುಂದೆ ಕೆಲ ತಿಂಗಳಲ್ಲೇ ಏನಾಗಿಹೋಯಿತು ! ಅಪರಂಪಾರ ಶ್ರೀರಂಗಪಟ್ಟಣವನ್ನು ತಲುಪಿದ್ದನಷ್ಟೆ. ಅಲ್ಲಿ ಆಂಗ್ಲರ ವಲಯದಲ್ಲಿ ಸಂತೋಷ ಸಮಾರಂಭಗಳು ನಡೆಯುತ್ತಿದ್ದುವು. ಕಿತ್ತೂರು ಅವರ ಅಧೀನವಾಗಿತ್ತು. ಅದು, ಶಾಲಿವಾಹನ ಶಕ ೧೭೪೭ರ ತರನ ಸಂವತ್ಸರ.

ಆ ಘಟನೆ ಅಪರಂಪಾರನ ಚಿತ್ತದ ಏಕಾಗ್ರತೆಯನ್ನು ಕದಡಿತು.

ಕಾವೇರೀತಟದಿಂದ ಅಪರಂಪಾರ ಮೈಸೂರಿಗೆ ಹೋದ. ಯುವಕ ಮುಮ್ಮಡಿ ಕೃಷ್ಣರಾಜ ಒಡೆಯ ರಾಜ್ಯವಾಳುತ್ತಿದ್ದ ಕಾಲ. ಆತ ಆಳುತ್ತಿದ್ದ ಎನ್ನುವುದಕ್ಕಿಂತಲೂ ಅವನನ್ನು

ಮುಂದುವರಿಸಿ ಆಂಗ್ಲರೇ ರಾಜ್ಯಭಾರ ಮಾಡುತ್ತಿದ್ದರೆನ್ನಬೇಕು. ತಾನೇ ಪುರುಷಶ್ರೇಷ್ಠರೆನ್ನುವಂತೆ ಪರಕೀಯರು ಓಡಾಡುತ್ತಲಿದ್ದ ಆ ವಾತಾವರಣ ಅಪರಂಪಾರನನ್ನು ಉಸಿರು ಕಟ್ಟಿಸಿತು.

ಆತ ಇಕ್ಕೇರಿಯ ಕಡೆಗೆ ನಡೆದ.

ಇಕ್ಕೇರಿ ! ಎಷ್ಟೊಂದು ಭಾವನೆಗಳನ್ನು ಬಡಿದೆಬ್ಬಿಸುತ್ತಿತ್ತು ಆ ಪದ ! ವೀರರಾದ ರಾಜ ರಾಣಿಯರು ಆಳಿದ ರಾಜ್ಯ. ಮೊಘಲ ಬಾದಶಹನಿಗೂ ಮಣಿದಿರಲಿಲ್ಲ ಅದು. ಮೈಸೂರಿನ ರಾಜಮನೆತನದ ಬಗೆಗಂತೂ ಆ ಜನರಿಗೆ ತಿರಸ್ಕಾರ. "ಇಕ್ಕೇರಿ ಗಂಡ ಮೈಸೂರ ಮಿಂಡ' ಎಂಬ ಮಾತು ತಲೆತಲಾಂತರಗಳಿಂದ ಅಲ್ಲಿ ಬಳಕೆಯಲ್ಲಿತ್ತು. ಅಂಥ ಬಲಾಢ್ಯ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲು ರಣಾಗ್ರೇಸರ ಹೈದರನೊಬ್ಬನೇ ಸಮರ್ಥನಾಗಿದ್ದ.

ಈಗ ? ವಿದೇಶೀಯರ ಕಾಲ್ತುಳಿತಕ್ಕೆ ಅದು ಸಿಲುಕಿತ್ತು.

ಎಷ್ಟು ಬೇಡವೆಂದರೂ ಒಂದು ನೆನಪು ಅಪರಂಪಾರನನ್ನು ಕಾಡುತ್ತಿತ್ತು.

ಹಿಂದೆ ಇಕ್ಕೇರಿಯ ರಾಜಕುಮಾರನೊಬ್ಬ ಜಂಗಮವೇಷಧಾರಿಯಾಗಿ ಕೊಡಗಿಗೆ ಹೋಗಿದ್ದ ; ಅಲ್ಲಿ ಹಾಲೇರಿ ವಂಶವನ್ನು ಸ್ಥಾಪಿಸಿದ್ದ...

ಆ ಕೊಡಗಿನ್ನೂ ಪಾರತಂತ್ರ್ಯದ ನೊಗಕ್ಕೆ ಹೆಗಲು ಕೊಟ್ಟಿರಲಿಲ್ಲ.

ದಾರಿಯಲ್ಲಿ ಯಾರೋ ಅಂದರು :

"ಸೋಮಿಯೋರೆ. ಚಂಜೆಯಾಗಿದೆ. ನಮ್ಮಲ್ಲಿ ತಂಗಿ."

ಉತ್ಕಟ ಭಾವೋದ್ವೇಗಕ್ಕೆ ಸಿಲುಕಿ ಅಪರಂಪಾರನ ಮೈ ಮನಗಳು ತಪ್ತವಾಗಿದ್ದುವು. ಆತನೆಂದ :

"ಉದಯ, ಮಧ್ಯಾಹ್ನ, ಸಂಧ್ಯಾಕಾಲವ ನೋಡಿ ಮಾಡುವ ಕರ್ಮಿ ನೀ ಕೇಳಾ. ಉದಯವೆಂದೇನೋ ಶರಣಂಗೆ ? ಮಧ್ಯಾಹ್ನವೆಂದೇನೋ ಶರಣಂಗೆ ? ಅಸ್ತಮಾನವೆಂದೇನೋ ಶರಣಂಗೆ ?"

ಅಪರಂಪಾರ ಮುಂದುವರಿದ. ಕಾಡು ದಾರಿ, ಕತ್ತಲು. ಕಾಲುಗಳು ಸೋತುವು. ಮರದ ಕೆಳಗಿನ ಪೊದೆಗಳ ನಡುವೆ ಹಸುರಿನ ಮೇಲೆ ಆತ ಮಲಗಿದ.

ಬೆಳಗ್ಗೆ ಅರಣ್ಯದ ಉದಯರಾಗ ಕೇಳಿ ಅವನಿಗೆ ಎಚ್ಚರವಾಯಿತು.

...ಇಕ್ಕೇರಿಯಿಂದ ಮೊಜರಾಬಾದಿಗೆ, ಅಲೆಯುವ ದೇಹ, ಅಲೆಯುವ ಮನ.

ಅಪರಂಪಾರ ಹೋದಲ್ಲೆಲ್ಲ ಆತನ ವ್ಯಕ್ತಿತ್ವದಿಂದ ಆಕರ್ಷಿತರಾದ ಜನ ಅಂದರು :

"ಸೋಮಿಯೋರು ನಮ್ಮ ಹಳ್ಳಿಲೇ ನಿಂತುಬಿಡಬಾರದಾ ? ಮನೆಯೋ ಮಠವೋ ಕಟ್ಟಿಸಿ ಕೊಡತೀವಿ."

ಅಂತಹ ಹಲವಾರು ಪ್ರಾರ್ಥನೆಗಳನ್ನು ಕೇಳಿ ಬೇಸತ್ತ ಅಪರಂಪಾರ ಕಟ್ಟಕಡೆಗೊಮ್ಮೆ "ಹೂಂ" ಎಂದ.

"ಒಂದಷ್ಟು ದಿವಸ ಇಲ್ಲಿರತೀವಿ" ಎಂದು ನುಡಿದ.

ಅದೊಂದು ಹಳ್ಳಿ. ಹೆಸರು ಆವರ್ತಿ. ಅಲ್ಲಿ ವಾಸಿಸತೊಡಗಿದ ಅಪರಂಪಾರ ಸ್ವಲ್ಪ ಕಾಲದಲ್ಲೇ ಪ್ರಖ್ಯಾತನಾದ. ಜನ ಆತನ ದರ್ಶನಕ್ಕಾಗಿ ಮೈಸೂರು ಕಡೆಯಿಂದಲೂ ಬಂದರು, ಕೊಡಗಿನಿಂದಲೂ ಬರತೊಡಗಿದರು.

...ಕಿಂವದಂತಿಯ ತಿದಿಯನ್ನು ಯಾರೋ ಒತ್ತಿದರು.

"ದಿವಂಗತ ಅಪ್ಪಾಜಿ ಅರಸರ ಹಿರಿಯ ಮಗ ವೀರಪ್ಪನ ಹಾಗಿದಾನೆ, ಈ ಸ್ವಾಮಿ."

ಎರಡು ಮೂರು ಕಿವಿಗಳನ್ನು ಅದು ದಾಟುವುದರೊಳಗೆ ಬೇಹಿನವರು ಹಾಗೆ ನುಡಿದ ಜನರನ್ನು ಹಿಡಿದರು. ರಾಜಸಮ್ಮುಖಕ್ಕೆ ಅವರನ್ನೊಯ್ದರು.

ಆಡಿದ ಮಾತಿಗೆ ಆಧಾರವೇನಾದರೂ ಇತ್ತೆ ?

"ಇಲ್ಲರಾ ಮಾಸಾಮಿಯೋರೆ. ಅಂಗೇಂತ ತಮಾಷಿಗೆ ಅಂದ್ವಿ."

ಕಾರ್ಯಕಾರ ಐಯಣ್ಣ ಗದರಿದ :

"ಇನ್ನೊಂದ್ಸಾರ್ತಿ ಹಿಂಗ್ಮಾಡಿದಿರೋ, ನಾವೂ ತಮಾಷಿಗೇ ನಿಮ್ಮ ನಾಲಿಗೆ ಕತ್ತರಿಸಿ ಬಿಟ್ಟೇವು !"

ತುಸು ಯೋಚನೆಗೀಡಾದ ಅರಸ ಅಪ್ಪಣೆ ಕೊಡಿಸಿದ.

"ಐಯಣ್ಣ, ಆ ಸ್ವಾಮಿ ಯಾರೇ ಇರಲಿ. ಇಲ್ಲಿಗೆ ಒಮ್ಮೆ ಕರೆಸಿಬಿಡುವಾ."

ಐಯಣ್ಣನೆಂದ :

"ಹೆಣಗಳನ್ನ ಕಾಡಲ್ಲಿ ಎಸೆದು ಬಂದೋನು, ನಾನು. ನನಗೆ ತಿಳೀದಾ ಪ್ರಭುಗಳೇ?"

ಬಸವನೆಂದ :

"ಅದಕ್ಕಲ್ಲವೋ ! ಆ ಜಂಗಮ ಪವಾಡ ಗಿವಾಡ ಬಲ್ಲ ಅಂತ ಹೇಳತಾರೆ. ಕರಕೊಂಡು ಬಂದು ಭಕ್ತಿಯಿಂದ ಕಾಣಬೇಕಾದ್ದು ಧರ್ಮ."

"ಅಪ್ಪಣೆ."

## ೨೪

ಮೈಸೂರು ರಾಜ್ಯದ ಮಂಜರಾಬಾದು ಪ್ರವೇಶ, ಕೊಡಗಿನ ಗಡಿಸೀಮೆ. ಅದರೊಳಗಣ ಆವರ್ತಿಹಳ್ಳಿಗೆ ಅಪರಂಪಾರ ಸ್ವಾಮಿಗೋಸ್ಕರ ಆಮಂತ್ರಣವನ್ನು ಹೊತ್ತು ಮಡಕೇರಿಯ ಅರಮನೆಯಿಂದ ರಾಜದೂತರು ಬಂದರು. ಬೇಹಿನ ಚಾವಡಿಯ ಶಂಕರಪ್ಪ ಆ ತಂಡಕ್ಕೆ ಮುಖ್ಯಸ್ಥನಾಗಿದ್ದ.

ಕಿಂವದಂತಿಯ ಕಥೆಯನ್ನರಿತಿದ್ದ ಶಂಕರಪ್ಪ, ಸ್ವಾಮಿಯನ್ನು ಕರೆತರುವ ಕೆಲಸಕ್ಕೆ ನಿಯೋಜಿತನಾದಾಗ ತುಸು ಅಳುಕಿದ. ಆತ ವೀರಪ್ಪಾಜಿ ಎಂಬುದೇ ನಿಜವಾದರೆ ಮುಂದೇ ನಾಗುವುದೊ ? ವಿಧಿ ಮತ್ತೆ ತನ್ನನ್ನೆ ಆಟಿಗೆಯಾಗಿ ಬಳಸುತ್ತಿದೆಯಲ್ಲ ?

ಆತ ಚಿಂತಿಸಿದ :

ತಂದೆ ಈಗಿದ್ದಿದ್ದರೆ ಏನು ಮಾಡುತ್ತಿದ್ದರು ?

—ರಾಜಾಜ್ಞೆಯನ್ನು ಪಾಲಿಸುತ್ತಿದ್ದರು.

ಸ್ವಾಮಿನಿಷ್ಠನಾದ ತಾನಾದರೂ ದೊರೆಯ ಅನುಜ್ಞೆಯಂತೆ ನಡೆಯುವವನೇ. ಅಷ್ಟಕ್ಕೂ ತಾನು ಹೋಗುತ್ತಿರುವುದು ಕರೆಯುವ ದೂತನಾಗಿ ತಾನೆ ? ಕಟುಕನಾಗಿ ಅಲ್ಲವಲ್ಲ ?

ಆ ಹತ್ತು ವರ್ಷಗಳ ಅಂತರದಲ್ಲಿ ಹೊಸಳ್ಳಿಯ ತನ್ನ ಬಂಧು ಮಲ್ಲಪ್ಪಗೌಡನನ್ನು ಎರಡು ಮೂರು ಸಾರೆ ಶಂಕರಪ್ಪ ಕಂಡಿದ್ದ. ಮೊದಲ ಸಲ, ನಂಜರಾಜಪಟ್ಟಣಕ್ಕೆ ತಾನು ಹೋದುದನ್ನು ಕುರಿತು ಮಲ್ಲಪ್ಪ ಹೇಳಿದ್ದ :

"ದೊರೆ ಮಗ ದೊಡ್ಡ ಮನಿಸ್ಯ ಕಣಪ್ಪ."

"ಅಯ್ಯನಾಗಿ ಈಕಡೆಗೇನೂ ಬರಲಾರರು ಅನ್ನು."

"ಯಾಕೆ ಬರತಾರೆ? ಆವತ್ನೇ, ಕರಿಯನಿತ್ರೊಡೆ ಒಲ್ಲೆ, ಸಿರಿಯನಿತ್ರೊಡೆ ಒಲ್ಲೆ, ಹಿರಿದಪ್ಪ ರಾಜ್ಯವಿತ್ರೊಡೆ ಒಲ್ಲೆ—ಅಂದ್ರು. ತೀರ್ಥಾಟನೆ ಓಗಿರ್ತಾರೆ. ಕೈಲಾಸಬೆಟ್ಟಕ್ಕೆ ಓಗಿ ಮೂಗುಹಿಡಿದು ತಪಸ್ಸಿಗೆ ಕೂತರೂ ಕೂತರೇ."

ಮುಂದಿನ ಎರಡು ಸಾರೆ ಆ ಬಂಧುಗಳು ಸಂಧಿಸಿದಾಗ ನಡೆದುದು ಮೇಲಿನ ಮಾತಿನ ಪುನರುಚ್ಚಾರವೇ.

ಈಗ ಶಂಕರಪ್ಪ, "ಆದದ್ದಾಗತದೆ. ಮಹಾದೇವನ ಮನಸ್ಸಿನಲ್ಲಿ ಏನೈತೋ ಯಾರು ಬಲ್ಲ?" ಎಂದುಕೊಂಡು, ತನ್ನ ಕಳವಳವನ್ನು ಅಂತರ್ಯದ ಪೆಟಾರಿಯಲ್ಲಿಟ್ಟು ಭದ್ರ ಪಡಿಸಿದ...

...ಅವರ್ತಿಯನ್ನು ತಲಪಿದ ಕುದುರೆ ಸವಾರರಿಗೆ ಸ್ವಾಮಿಯ ದರ್ಶನ ಲಭಿಸುವುದು ಕಷ್ಟವಾಗಲಿಲ್ಲ. ಬಂದವರ ಹಿರಿಮೆಯನ್ನು ಕುದುರೆಗಳೇ ಸಾರಿದುವು. ಶಿಷ್ಯಗಣ ಸುದ್ದಿ ಮುಟ್ಟಿಸಿತು.

ಅಪರಂಪಾರನೆಂದ :

"ಮುಂದೆ ಬರಲಿ."

ತೆರೆದ ಕಣ್ಣನ್ನು ಮುಚ್ಚಲಾರದೆ ಸ್ವಾಮಿಯೆಡೆಗೆ ಸಾಗಿದ ಶಂಕರಪ್ಪನಿಗೆ, ತಾನೊಬ್ಬ ಅಸಾಮಾನ್ಯ ವ್ಯಕ್ತಿಯ ಎದುರಿಗಿರುವೆನೆಂದು ಭಾಸವಾಯಿತು. ಆತ ಇತರ ದೂತರೊಡನೆ ಪ್ರಣಾಮ ಸಲ್ಲಿಸಿದ. ಅರಸನ ಓಲೆಯನ್ನು ಸ್ವಾಮಿಯ ಮುಂದಿರಿಸಿ ಕೈಜೋಡಿಸಿ ನಿಂತ.

ತನ್ನೊಳಗಿನ ಪ್ರಶ್ನೆಗಳಿಗೆ ಉತ್ತರ ಪಡೆಯಲು ಅವನ ಬುದ್ಧಿಶಕ್ತಿ ಯತ್ನಿಸಿತು.

ಈತನೇ ಏನು ತಾನು ಅತ್ತಿತ್ತ ಸಾಗಿಸಿದ್ದ ಜೀವಚ್ಛವ? ಈ ಪ್ರಭಾವಶಾಲೀ ವ್ಯಕ್ತಿ ಯೆಲ್ಲಿ? ಆ ಎಳೆಯ ಜರ್ಜರಿತ ದೇಹವೆಲ್ಲಿ? ಗಡ್ಡಮೀಸೆಗಳೇನೋ ಮುಖದ ಬಾಹ್ಯ ರೇಖೆಗಳನ್ನು ಮರೆಮಾಡಿವೆ. ಇನ್ನು ಧ್ವನಿ?

"ಕೊಡಗಿನ ದೊರೆಯಿಂದ ನಮಗೆ ಆಮಂತ್ರಣ ಬಂದದೆ."

—ಗಂಭೀರವಾಣಿಯಲ್ಲಿ ತನ್ನ ಶಿಷ್ಯವೃಂದವನ್ನು ಉದ್ದೇಶಿಸಿ ಅಪರಂಪಾರ ಆಡಿದ ಮಾತು. ಮುಂದುವರಿದು ಆತ ಅಂದುದು:

"ಸರ್ವಸಂಗವ ತ್ಯಜಿಸಿದ ಶರಣನ ಕಾಣುವ ಆಸೆಯೇಕೋ ಅರಸಂಗೆ?"

ಅಪರಿಚಿತ ಗಂಟಲು. ಹಾಗೆ ನೋಡಿದರೆ, ವೀರಪ್ಪಾಜಿಯ ಧ್ವನಿಯನ್ನು ತಾನು ಕೇಳಿಯೇ ಇಲ್ಲ...

ಶಂಕರಪ್ಪನಿಗನಿಸಿತು :

ತನ್ನದೊಂದು ಭ್ರಮೆ. ಈತ ಮಹಾಮಹಿಮನಾದ ಯಾವನೋ ಜಂಗಮನೇ ಇರಬೇಕು.

ಅವನ ಭಕ್ತಿಭಾವದಿಂದ, ತನ್ನೊಳಗಿನ ಆತಂಕವೊಂದು ದೂರಗೊಂಡ ಸಮಾಧಾನ ದಿಂದ ತುಸು ಕಂಪಿಸಿದ ಸ್ವರದಲ್ಲಿ, ಅರಿಕೆಮಾಡಿಕೊಂಡ :

"ಮಡಕೇರಿಯಾಗೆ ಸ್ವಾಮಿಯೋರ ಪ್ರಸಿದ್ಧಿ ಬಾಳ."

ಅಪರಂಪಾರ ಹಿತವಾಗಿ ನಕ್ಕ. ಶಿಷ್ಯಗಣ ಆ ನಗೆಗೆ ಸೈ ಸೈ ಎಂದು ತಲೆದೂಗಿತು.

ಅಪರಂಪಾರನಿಗೋ ವಿಚಾರಗಳ ತಾಕಲಾಟವನ್ನು ಮರೆಮಾಚುವ ತೆರೆಯಾಗಿತ್ತು ನಗೆ.

ಆಗಂತುಕರು ಮಡಕೇರಿಯ ದೂತರು ಎಂದು ಅರಿತಾಗ, ಅಪರಂಪಾರನ ಎದೆ ಬಡಿತ

ಒಂದರ್ಧ ಕ್ಷಣ ನಿಂತಿತ್ತು. ಅರ್ಧವೇ ಕ್ಷಣ.

'ಮರುಳೆ!' ಎಂದು ತನ್ನ ಮನಸ್ಸನ್ನು ಕಟುವಾಗಿ ಜರೆದು, ರಾಯಸವನ್ನು ಆತ ತೆರೆದಿದ್ದ.

ಓದಿದಾಗ, 'ಶಿವ ಅಗ್ನಿಪರೀಕ್ಷೆಯೊಡ್ಡುತಿರುವನಲ್ಲಾ' ಎಂದು ವಿಸ್ಮಯವಾಯಿತು.

ಆ ವಿಸ್ಮಯ ಭಾವವನ್ನು ತಡವಿಲ್ಲದೆ ತೊಡೆದುಹಾಕಿತು, ತಾನು ಮುಂದಿಡಬೇಕಾದ ಹೆಜ್ಜೆಯನ್ನು ಕುರಿತು ತೀರ್ಮಾನ ಕೈಕೊಂಡ.

ಗಂಭೀರವಾಗಿ ಆತ ಕೇಳಿದ :

"ನಿನ್ನ ಹೆಸರೇನು ?"

"ಶಂಕರಪ್ಪ, ಚಾವಡಿಕಾರ."

ಅಪರಂಪಾರನ ಒಳಗಿನದೊಂದು ಸೂಕ್ಷ್ಮ ತಂತಿಯನ್ನು ಸ್ಪಂದಿಸಿತು. ದೂತರ ಮುಖ್ಯಸ್ಥನ ಉತ್ತರ. ಗವಿಯ ಆಳದಲ್ಲಿ ಹೆಪ್ಪುಗಟ್ಟಿದ ನೆನಪೊಂದು ಮಿಸುಕಿತು.

ನಿಧಾನವಾಗಿ ಆತನೆಂದ :

"ಶಂಕರಪ್ಪ...ಶಂಕರ. ಆಪದ್ಬಾಂಧವ. ದೇವರ ಹೆಸರು."

ಸಮಸ್ಯೆಗಳು ಬಗೆಹರಿದಿದ್ದ ಆ ಸಂದರ್ಭದಲ್ಲಿ, ಅಪರಂಪಾರನ ನುಡಿಯುವ ಪ್ರತಿಕ್ರಿಯೆಯನ್ನೂ ಶಂಕರಪ್ಪನಲ್ಲಿ ಉಂಟುಮಾಡಲಿಲ್ಲ.

ಅವನೆಂದ :

"ಅಯ್ಯನವರಿಗೆ ಯಾವಾಗ ಅನುಕೂಲವಾಗತದೊ—"

ಅಪರಂಪಾರನ ಹುಬ್ಬುಗಳು ಗಂಟಿಕ್ಕಿದುವು.

"ಬರತೇವೆ. ಅಕ್ಷತೃತೀಯೆ ದಾಟಿದಮೇಲೆ ನಮಗೆ ಮನಸಾದಾಗ ಬರತೇವೆ."

"ಇಲ್ಲಿ ಮೇನೆ ಇಲ್ಲದ ಪಕ್ಷದಲ್ಲಿ ಮಡಕೇರಿಯಿಂದ ಕಳಿಸತಾರೆ."

"ಮೇನೆ! ನಮಗೆ? ಹರ ತನ್ನ ಭಕ್ತರ ತಿರಿವಂತೆ ಮಾಡುವ. ನಾವು ನಡೆದು ಬರುತೇವೆ."

"ತಮ್ಮ ಮೈಗಾವಲಿಗೆ..."

"ಮೈಗಾವಲು ? ಹಹ್ಹ...ನಾವೇನು ದೊರೆಗಳೆ ?"

"ದಾರಿ ತೋರಿಸೋದಕ್ಕಾದರೂ—"

"ಮಹದೇವನಿರತಾನೆ. ದಾರಿ ಕಾಣೆನಲ್ಲಾ ಅಂದರೆ, ಹೀಗೆ ಬಾ ಅನ್ನುತಾನೆ. ಎಡವಿದರೆ ಕೈಹಿಡಿದು ಎತ್ತುತ್ತಾನೆ."

ಇದು ಎರಡರ್ಥಗಳ ಮಾತು ಎಂಬುದನ್ನು ಶಂಕರಪ್ಪ ಗ್ರಹಿಸದಾದ. ನೆರೆದ ಇತರರ ಅರಿವಿಗಂತೂ ಅದು ದೂರವಾದದ್ದು. ಅವರು ಏಕಕಂಠದಿಂದ ಅಂದರು :

"ಸಾಜ, ಸಾಜ."

ದೂತರನ್ನು ಕುರಿತು ಅಪರಂಪಾರನೆಂದ :

"ಇನ್ನು ವಿರಮಿಸಿಕೊಳ್ಳಿ. ಇಷ್ಟ ಬಂದಾಗ ನೀವು ಹೊರಡಬಹುದು. ನಾವು ಬೇಗನೆ ಬರತೇವೆ ಅಂತ ಕೊಡಗಿನ ಅರಸರಿಗೆ ತಿಳಿಸಿರಿ."

ರಾಜನ ಅನುಜ್ಞೆಯನ್ನು ಬಹುಮಟ್ಟಿಗೆ ತಾನು ಈಡೇರಿಸಿದಂತಾಯಿತೆಂದು ಶಂಕರಪ್ಪನಿಗೆ ಸಂತೋಷವಾಯಿತು.

**೨೫**

ಅಪರಂಪಾರ ಮಡಕೇರಿಗೆಂದು ಕೈಗೊಂಡ ಕಾಲ್ನಡಿಗೆಯ ಪ್ರವಾಸ ಆ ಜಂಗಮನ ಜೈತ್ರಯಾತ್ರೆಯಾಯಿತು. ದಾರಿಯುದ್ದಕ್ಕೂ ಜನ ಆ ಭವ್ಯಕಾಯನ ಅಡಿಗಳಿಗೆ ಎರಗಿದರು. ದಾಸೋಹಕ್ಕೆ ಆತನನ್ನು ಕರೆದರು. ಅವನಾಡಿದ ವಚನಗಳಿಗೆ ಕಿವಿಗೊಟ್ಟರು.

ಮುಗ್ರೆಬೆಟ್ಟವನ್ನು ಬಳಸಿ ತಪ್ಪಲಿನ ದಾರಿಯಾಗಿ ಅಪರಂಪಾರ ನಡೆದ. ಹಾರಂಗಿ ನದಿಯನ್ನು ದಾಟಿದ. ಆ ಕ್ಷಣ ಮಾದಕವಾದುದೇನನ್ನೋ ತಾನು ಆಘ್ರಾಣಿಸಿದಂತೆ ಆತನಿಗೆ ಭಾಸವಾಯಿತು. ಪಾರಮಾರ್ಥಿಕ ಚಿಂತನೆ ಮನಸ್ಸಿನಿಂದ ದೂರ ಸರಿದು, ಲೌಕಿಕ ವಿಷಯಗಳ ನೆನಪು ಅವನನ್ನು ಕಾಡತೊಡಗಿತು.

ಹಾಲೇರಿಗೆ ಹತ್ತಿರವಾಗುತ್ತಿದ್ದೇನೆ—ಎಂದುಕೊಂಡ ಅಪರಂಪಾರ. ಅಲ್ಲಿಗೆ ಹೋಗಲೆ ತಾನು ? ಯಾಕೆ ?

"ಕಾಯವೆಂಬ ಢಕ್ಕೆಯ ಮೇಲೆ, ಜೀವವೆಂಬ ಹಿಡಿಚೆಂಡು ಬೀಳೆ, ತ್ರಿವಿಧವ ತಾ, ತಾ ಎಂಬಾಸೆ ಓಂ. ಡಿ, ಡಿಂ, ಡಿ ಎನ್ನುತ್ತಿದೆ."

ಅದಕ್ಕೇನು ಮಾಡಬೇಕು ?

"...ಹೊಲಬುದಪ್ಪದೆ ಗೆಲಬೇಕು ಕಾಲವೆಂಬ ಮಾರಿಯ, ಕಾಲಾಂತರ ಭೀಮೇಶ್ವರ ಲಿಂಗವನರಿಯಬಲ್ಲಡೆ !"

ಗತಜನ್ಮದ ತನ್ನ ಪೂರ್ವಜ ಬೇರೂರಿದ ತಾಣ ಹಾಲೇರಿ. ಅಲ್ಲೀಗ ತನಗೇನು ಕೆಲಸ ? ಹಾಲೇರಿ ಅರಮನೆಯ ಮಾಡದ ಕೆಳಗಿರುವ ಹತ್ತಿರದ ದೂರದ ರಾಜಸಂಬಂಧಿಗಳನ್ನು ಕಾಣಲೆ ? ಅವರ ಸುಖದುಃಖ ವಿಚಾರಿಸಲೆ ? ಹಾಗೆ ಮಾಡುವುದರಿಂದ ಸಾಧಿಸಿದಂತಾಗುವುದೇನು ?

ಅಪರಂಪಾರ ತನ್ನಷ್ಟಕ್ಕೆ ನಕ್ಕ. ಹಾಲೇರಿಯ ಕಡೆಗೆ ಹೊರಳಿದ್ದ ಪಾದಗಳನ್ನು ತಡೆದ.

ನೇರವಾಗಿ ನಡೆದರೆ ಸೂರ್ಯಾಸ್ತಕ್ಕೆ ನಾಲ್ಕೈದು ಘಳಿಗೆ ಇದ್ದಾಗಲೇ ಆತ ಮಡಕೇರಿಯನ್ನು ತಲಪಬಹುದು. ಆದರೆ ಪಾದಗಳು ಅವನೊಡನೆ ಕಣ್ಣುಮುಚ್ಚಾಲೆಯಾಡಿದುವು. ಅಡ್ಡದಾರಿಯೊಂದನ್ನು ಹಿಡಿದುವು.

ಆ ಹಾದಿ ಕೊನೆಗಂಡುದು ಅಪ್ಪಂಗಳದಲ್ಲಿ.

ಹಿರಿಯರು ಬಿತ್ತಿದ ಬೀಜ ಮೊಳಕೆಯೊಡೆದು ಸಸಿಯಾದ ಜಾಗ. 'ಗತಜನ್ಮ'ದಲ್ಲಿ ಅದು ತನ್ನ ಬಾಲ್ಯದ ಆಡುಂಬೊಲ. ಅಗ್ಗಿಷ್ಟಿಕೆಯಾಗಿದೆಯಲ್ಲ ಮೆದುಳು ? ಅಪ್ಪಂಗಳದ ಜಹಗೀರಿನ ಹೊರಗೆ ನಿಂತು ಆ ಹಸುರನ್ನೊಮ್ಮೆ ಮನದಣಿಯೆ ನೋಡಿದೆನೆಂದರೆ ಮನಶ್ಶಾಂತಿ ದೊರೆಯುವುದೇನೋ ?

"ಎತ್ತ ಸುತ್ತಿಬಂದರೂ ಊರಿಗೆ ಬಪ್ಪುದು ತಪ್ಪದು..."

ಹೊರವಲಯದಲ್ಲಿ ನಿಲ್ಲದೆ ಒಳಗೆ ಅರಮನೆಯ ಕಡೆಗೇ ಅಪರಂಪಾರನ ಪಾದಗಳು ನಡೆದುವು.

"ಯಾರ ಮನೆಯಾದೊಡೇನು ತಿರುಪೆ ಎತ್ತುವವಗೆ ?"

ಮುಚ್ಚಂಜೆಯ ಹೊತ್ತು. ಜಂಗಮರು ಫಕೀರರು ಸನ್ಯಾಸಿಗಳು ಅಪ್ಪಂಗಳಕ್ಕೆ ಬರುವುದರಲ್ಲಿ ಅಸ್ವಾಭಾವಿಕವಾದುದೇನೂ ಇರಲಿಲ್ಲ. ಆಳುಗಳು ಈ ಸ್ವಾಮಿಯನ್ನು ನೋಡಿದರು.

ಅರಮನೆಯ ಹೆಬ್ಬಾಗಿಲಲ್ಲಿ ವಯಸ್ಸಾದ ಸ್ತ್ರೀಯೊಬ್ಬಳು ನಿಂತಿದ್ದಳು, ಗಂಗಮ್ಮ.

[ತನ್ನ ತಾಯಿಯನ್ನು ಕಾಣುತ್ತಿರುವ ಭ್ರಮೆ ವೀರಪ್ಪನಿಗೆ. 'ಅಮ್ಮಾ! ಅಮ್ಮಾ' ಎಂದು ಕೂಗುತ್ತ ಆಕೆಯ ಬಳಿಗೆ ಓಡುವ ಆಸೆ. ಆದರೆ ಅವಳೀಗ ಈ ಲೋಕದಲ್ಲಿ ಇಲ್ಲವಲ್ಲ? ಈಕೆ ಯಾರು ಹಾಗಾದರೆ? ಎಲ್ಲೋ ನೋಡಿರುವೆನಲ್ಲ?]

'ಮಹಾದೇವ ಮಹಾದೇವ' ಎಂದು ಅಪರಂಪಾರ ಉಚ್ಚರಿಸಬೇಕು ಎನ್ನುವಷ್ಟರಲ್ಲೆ ಆಕೆ ಎಂದಳು:

"ಶರಣು—ಶರಣು...ದಯಮಾಡಿಸಬೇಕು."

ಅರಮನೆಯನ್ನು ಬಳಸಿಕೊಂಡು ಆಕೆ ದಕ್ಷಿಣ ದಿಕ್ಕಿಗೆ ನಡೆದಳು. ಅಪರಂಪಾರ ಅವಳನ್ನು ಹಿಂಬಾಲಿಸಿದ. ಅರಮನೆಯ ದಕ್ಷಿಣ ಮೂಲೆಯನ್ನು ತಲಪುತ್ತಲೆ ಅವನಿಗೆ ಬವಳಿ ಬಂದಂತಾಯಿತು. ಹೊರಜಗಲಿಯ ಮೇಲೆ ಆತ ಕುಳಿತುಬಿಟ್ಟ.

ಹೊಸ್ತಿಲ ಬಳಿ ನಿಂತು ಗಂಗಮ್ಮನೆಂದಳು:

"ಇವತ್ತು ಇಲ್ಲೆ ದಾಸೋಹಕ್ಕೆ ನಿಲ್ಲಬೇಕು."

ಕರ್ಕಶ ಧ್ವನಿಯಲ್ಲಿ ಅಪರಂಪಾರ ನುಡಿದ:

"ಇಲ್ಲ. ನಾವು ದಾರಿತಪ್ಪಿ ಬಂದೆವು. ಈಗಲೇ ಹೋಗಬೇಕು."

"ಹಣ್ಣುಹಂಪಲಾದರೂ ತಗೊಳ್ಳುವಿರಂತೆ."

"ಏನೂ ಬೇಡ."

[ವೀರಪ್ಪ ಮನದೊಳಗೆ ಗೊಣಗಿದ: ಒಳ್ಳೆ ಫಜೀತಿಯಾಯಿತಲ್ಲ? ನಮ್ಮ ಮನೆಯೊಳಗೆ ಬಂದು ಹೊಕ್ಕಿರೋ ಈಕೆ ಯಾರು? ನಾನು ಹೊರಗಿನವನು, ತಾನೇ ಮನೆಯೊಡತಿ ಅನ್ನುವ ಹಾಗೆ ಮಾತಾಡುತ್ತಿದ್ದಾಳಲ್ಲಾ?]

ಅಪರಂಪಾರನ ಒಳದನಿ ಚೀರಿತು:

"ಬೆದಕದಿರು, ಬೆದಕಿದರೆ ಹುರುಳಿಲ್ಲ...ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ ವಿಚಾರಿಸಿದರೆ ಏನೂ ಹುರುಳಿಲ್ಲವಯ್ಯ..."

ಕಣ್ಣಲ್ಲಿ ಕಂಬನಿ ತುಂಬಿ ಗಂಗಮ್ಮನೆಂದಳು:

"ನಮಗೆ ಭಾಗ್ಯವಿಲ್ಲ."

[ವೀರಪ್ಪ: ಅರಮನೆಯೊಳಗಿದೀರಿ. ಭಾಗ್ಯ ಇಲ್ಲ—ಅನ್ನತೀರಿ. ಆಹಾ!]

"ಭಾಗ್ಯ ಅನ್ನೋ ಮಾತೆಲ್ಲ ಮಾಯೆಯ ಮಹಿಮೆ ತಾಯಿ."

"ನಾವು ಇಲ್ಲಿಯವರಲ್ಲ. ಮಲೆತಿರಿಕೆಬೆಟ್ಟದ..."

[ವೀರಪ್ಪನ ಮೆದುಳಲ್ಲಿ ಗುಡುಗಿನ ಸದ್ದಾಯಿತು...ಮಲೆತಿರಿಕೆಬೆಟ್ಟ? ಮಲೆತಿರಿಕೆ—? ಏನು ಹೇಳುತ್ತಿದ್ದಾಳೆ ಆಕೆ?]

"ಏನಂದೆ ತಾಯಿ?"

"ನನ್ನ ಮಗಳನ್ನು ಈ ಮನೆಗೆ ತಂದರು. ಅವಳ ಕೈ ನೋಡಿ ಒಂದು ಮಾತು ತಾವು ಹೇಳಿದರಾಗುತಿತ್ತು."

"ಮಗಳು?"

"ಹ್ಞಾ...ಇಲ್ಲಿ ಬಾ ಶಾಂತವ್ವ...ಏ ಶಾಂತೂ...ರಾಜಮ್ಮಾಜೀ!..."

[ವೀರಪ್ಪ: ಶಾಂತವ್ವ? ರಾಜಮ್ಮಾಜಿ? ಅಯ್ಯೋ! ಇದೇನು? ನಾನಿಲ್ಲಿಂದ ಓಡಬೇಕು, ಓಡಬೇಕು!]

ಅಪರಂಪಾರ ಏಳಲೆತ್ನಿಸುತ್ತಿದ್ದಂತೆ ಒಳಗಿನಿಂದ ಧ್ವನಿ ಹತ್ತಿರಕ್ಕೆ ಬಂತು :

"ಬಂದೆ ಅವ್ವಾ."

ತಾಯಿಯ ಮಗ್ಗುಲಲ್ಲಿ ನಿಂತವಳನ್ನು ಅಪರಂಪಾರ ನೋಡಿದ. ಆ ಜವ್ವನೆಯ ಮುಗ್ಧ ರೂಪರಾಶಿ ಅವನ ಕಣ್ಣುಗಳನ್ನು ಕುಕ್ಕಿತು.

[ವೀರಪ್ಪ : ಏನು ಮಾಡತಾ ಇದೀರಿ ನನ್ನ ? ಏನು ಮಾಡತಾ ಇದೀರಿ ? ಆ ಎಂಟು ವರ್ಷದ ಹುಡುಗಿ...]

ಅಪರಂಪಾರ ಕೇಳಿದ :

"ನನ್ನಿಂದೇನಾಗಬೇಕು, ತಾಯೀ ?"

ಗಂಗಮ್ಮ ಅಂದಳು :

"ನಮ್ಮ ಅಳಿಯಂದಿರು—ಅಪ್ಪಾಜಿ ಅರಸರ ಹಿರಿಮಗ—ಸತ್ತರು ಅನ್ನುತಾರೆ, ಬದುಕಿದ್ದಾರೆ ಅನ್ನುತಾರೆ. ಹಸ್ತಸಾಮುದ್ರಿಕದಿಂದ ಗೊತ್ತಾಗತದೆ ಅಲ್ಲವಾ ? ರಾಜಮ್ಮಾಜಿ, ಕೂತುಕೋ. ಸೋಮಿಯವರಿಗೆ ಅಂಗೈ ತೋರಿಸು."

ರಾಜಮ್ಮಾಜಿ ಹಿಂದೆಗೆದಂತೆ ಕಂಡಿತು. ಆದರೂ ಗುರುತ್ವಾಕರ್ಷಣೆಗೊಳಗಾದವಳಂತೆ ಹೊಸ್ತಿಲ ಮೇಲೆ ಆಕೆ ಕುಳಿತು, ಎರಡೂ ಅಂಗೈಗಳನ್ನು ಮುಂದಕ್ಕೆ ಚಾಚಿದಳು.

[ವೀರಪ್ಪ : ನಾ ಇನ್ನು ತಡೆಯಲಾರೆ. ಒಮ್ಮೆ ಮುಟ್ಟಿದ ಕೈಯನ್ನ ಮುಟ್ಟತೀನಿ ! ನಾನು ಅಳಬೇಕು, ಅಳಬೇಕು !]

"ಹೇಳಿ ಸೋಮಿಯೋರೆ" ಎಂದಳು ಗಂಗಮ್ಮ.

ಶಾಂತಧ್ವನಿಯಲ್ಲಿ, ಕೈಗಳನ್ನು ಮುಟ್ಟದೆ, ದೃಷ್ಟಿಯನ್ನಷ್ಟೆ ಅತ್ತ ಹೊರಳಿಸಿ ಅಪರಂಪಾರನೆಂದ :

"ನಿನ್ನ ಈ ಮಗಳಿಗೆ ಮುತ್ತೈದೆ ಸಾವು ಲಭಿಸತದೆ, ತಾಯೀ."

ಆ ಧ್ವನಿಯ ಮಾಧುರ್ಯಕ್ಕೆ ರಾಜಮ್ಮಾಜಿ ಮನಸೋತಳು. ಅವಳ ಕಂಕುಳು ಬೆವರಿತು.

ಅಪರಂಪಾರನ ಮಾತಿನಿಂದ ಹರ್ಷಿತಳಾದ ಗಂಗಮ್ಮ ಪುನಃ ಪುನಃ ಕೇಳಿದಳು :

"ಹೌದಾ ಸೋಮಿಯೋರೆ ? ಹೌದಾ ಸೋಮಿಯೋರೆ ?"

ಆ ಆನಂದೋದ್ವೇಗದಲ್ಲೂ, ನಿಕ್ಷೇಪ ದೊರೆಯುವ ಸಂಗತಿ ಖಚಿತವಾಗಲೆಂದು ಅವಳೆಂದಳು :

"ನನ್ನ ಮಗಳಿಗೆ ಸಂತಾನಪ್ರಾಪ್ತಿಯಾಗತಾದಾ ಅಷ್ಟು ಹೇಳಿ, ಸೋಮಿಯೋರೆ."

"ಮಹಾದೇವ ! ಮಹಾದೇವ !"

ಗಂಗಮ್ಮ ನೋಡುತ್ತಲಿದ್ದಂತೆಯೇ ಅಪರಂಪಾರ ಎದ್ದುಬಿಟ್ಟಿದ್ದ. ತನ್ನ ಅರಿಕೆಯನ್ನು ಪುನರುಚ್ಚರಿಸಿದಳು ಗಂಗಮ್ಮ. ಉತ್ತರಿಸಲು ಅಪರಂಪಾರ ಅಲ್ಲಿರಲಿಲ್ಲ.

ರಾಜಮ್ಮಾಜಿ ಕುಳಿತಲ್ಲೇ ಇದ್ದಳು. ಗಂಗಮ್ಮ "ಸೋಮಿಯೋರೆ, ಸೋಮಿಯೋರೆ" ಎಂದು ಕರೆಯುತ್ತ ಹೆಬ್ಬಾಗಿಲಿಗೆ ಧಾವಿಸಿದಳು. ಕಾವಿಯುಡುಗೆಯ ವ್ಯಕ್ತಿ ದೂರದಲ್ಲಿ ವೇಗವಾಗಿ ಕಣ್ಮರೆಯಾಗುತ್ತಿದ್ದುದು ಕಾಣಿಸುತ್ತಿತ್ತು.

ಗಂಗಮ್ಮನ ಗಂಟಲು ಕೇಳಿ, ಚನ್ನಬಸಪ್ಪ ಗವಾಕ್ಷಿಯಿಂದ ತಲೆ ಹೊರಗೆ ಹಾಕಿ, "ಯಾರದು ? ಅದೇನು ಗಲಾಟೆ ?" ಎಂದು ಗದರಿದ.

...ಅಪ್ಪಂಗಳಕ್ಕೆ ಬಿರುಗಾಳಿಯಂತೆ ಬಂದು ಬಿರುಗಾಳಿಯಂತೆ ಹೊರಟುಬಿಟ್ಟ ಅಪರಂಪಾರ, ಕವಿಯುತ್ತಿದ್ದ ಕತ್ತಲೆಯನ್ನೂ ಲೆಕ್ಕಿಸದೆ ಮಡಕೇರಿಯ ಕಡೆಗೆ ನಡೆಯುತ್ತ, ತನ್ನಷ್ಟಕ್ಕೆ ಪುನಃ ಪುನಃ ಅಂದ:

"ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೆ? ಅಶನವನುಂಡು ವ್ಯಸನವ ಮರೆದಡೇನು ಬ್ರಹ್ಮಚಾರಿಯೆ? ಭಾವ ಬತ್ತಲೆ ಇದ್ದು ಮನವು ಗಂಭೀರವಾದರೆ ಅದು ಸಹಜ ನಿರ್ವಾಣ ಕಾಣಾ ಗುಹೇಶ್ವರಾ..."

## ೨೬

ಅಪರಂಪಾರ ಇರುಳಿನಲ್ಲಿ ದಾರಿ ನಡೆದು ಮಡಕೇರಿಯನ್ನು ತಲಪಿದ. ಓಂಕಾರೇಶ್ವರ ದೇವಾಲಯಕ್ಕೆ ನಡೆದ. ಮಂದಿರದ ಮುಂದಿನ ಕೊಳ ನಿಶ್ಚಲವಾಗಿತ್ತು. ಅಪರಂಪಾರ ಆ ಶೀತಲ ಜಲದಲ್ಲಿ ಮೈತೊಳೆದ, ಹೊಲೆ ತುಂಬಿದ್ದ ಮನವವನ್ನೂ ತೊಳೆದ. ಮೇಲಕ್ಕೆದ್ದು ಬಂದಾಗ, ಮನಸ್ಸಿಗೆ ನೆಮ್ಮದಿ ಮರಳಿತು. ಗರ್ಭಗುಡಿಯ ಬಾಗಿಲನ್ನು ಮುಚ್ಚಿದ್ದರು. ಅದರ ಮುಂದೆ ಪದ್ಮಾಸನ ಹಾಕಿ ಕುಳಿತು, ಕೈಯಲ್ಲಿ ರುದ್ರಾಕ್ಷಿ ಸರವನ್ನು ಹಿಡಿದು, ಅಪರಂಪಾರ ಶಿವಧ್ಯಾನ ಮಾಡಿದ. ಅದೆಷ್ಟು ಹೊತ್ತು ಹಾಗೆ ಕುಳಿತಿದ್ದನೋ. ಭಾವ ಸಮಾಧಿಯಿಂದ ಎಚ್ಚೆತ್ತಾಗ ಅಪೂರ್ವ ಮನಶ್ಶಾಂತಿ ಅವನಿಗೆ ಲಭಿಸಿತ್ತು. ಬೆಳ್ಳಿ ಮೂಡಿತ್ತು ಆಗಲೇ. ದೀರ್ಘ ನಿದ್ದೆಯಿಂದ ಎದ್ದವನಂತೆ ಅವನು ಉಲ್ಲಸಿತನಾಗಿದ್ದ. ಕೊಳದ ದಂಡೆ ಯುದ್ದಕ್ಕೂ ಆತ ಶತಪಥ ತುಳಿದ. ನೇಸರು ಮೂಡುವ ವೇಳೆಗೆ ದೇವಾಲಯದ ಮುಖ ಮಂಟಪದಲ್ಲಿ ಗೋಡೆಗೊರಗಿ ಕುಳಿತು, ಸ್ವಲ್ಪ ಕಾಲ ವಿರಮಿಸಿದ.

ರಾಜಧಾನಿ ಎಚ್ಚತ್ತು ನಿತ್ಯಕರ್ಮಗಳಲ್ಲಿ ನಿರತವಾಯಿತು. ದೇವಾಲಯದ ಮಾಡವಲ್ಲಿದ್ದ ಸಹಸ್ರಾರು ಪಾರಿವಾಳಗಳ ಕುಟುರ್ ಕುಟುರ್ ಧ್ವನಿಯಿಂದ ವಾತಾವರಣ ತುಂಬಿತು. ಅರ್ಚಕ ಬಂದು ಸ್ನಾನಕ್ಕೆಂದು ಪುಷ್ಕರಿಣಿಗೆ ಇಳಿದ. ಮಿಂದು ಓಂಕಾರೇಶ್ವರನಿಗೆ ನಮಿಸಿ ಹೋಗಲು ಭಕ್ತಾದಿಗಳು ಬಂದರು.

ಅದು, ಲಿಂಗರಾಜ ಒಡೆಯ ಕಟ್ಟಿಸಿ ಪೂರ್ತಿಗೊಳಿಸಿದ್ದ ದೇಗುಲ. ಅರಮನೆ ಪ್ರಜೆಗಳ ಅಭಿಮಾನದ ಕೇಂದ್ರವಾಗಿದ್ದಂತೆ, ಈ ದೇವಾಲಯ ಅವರ ಧರ್ಮನಿಷ್ಠೆಯ ಕುರುಹಾಗಿತ್ತು.

ಗರ್ಭಗುಡಿಯ ಬಾಗಿಲನ್ನು ತೆರೆದಿದ್ದರು. ಅಪರಂಪಾರ ದೇವಾಲಯಕ್ಕೆ ಪ್ರದಕ್ಷಿಣೆ ಬಂದು ಓಂಕಾರೇಶ್ವರನಿಗೆ ನಮಿಸಿದ.

ಹೊರಬಿದ್ದು ಅರಮನೆಯ ದಾರಿಹಿಡಿದ.

ಹಾವುಗೆಗಳ ಸದ್ದು. ರಭಸದ ನಡಿಗೆ. ಹಾರಾಡುತ್ತಿದ್ದ ನಿಲುವಂಗಿ. ಯಾವ ಬೀದಿಗೇ ಆತ ತಿರುಗಲಿ, ಇಕ್ಕೆಲಗಳಲ್ಲೂ ಜನ ನಿಂತು ಅವನನ್ನು ನೋಡಿದರು. ಅವರಲ್ಲಿ ಹಲವರು ಕೈ ಜೋಡಿಸಿ ನಮಸ್ಕರಿಸಿದರು. ಮತ್ತೆ ಹಲವರು ನಡುಬಾಗಿಸಿ ವಂದಿಸಿದರು.

ಅರಮನೆಯ ಕಡೆಗೆ ಆತ ಹೊರಟುದನ್ನು ಕಂಡು ಅನೇಕರು ಅವನನ್ನು ಹಿಂಬಾಲಿಸಿದರು.

ಮಹಾದ್ವಾರದ ಬಳಿ ಪ್ರತಿಹಾರರನ್ನು ಕುರಿತು ಅಪರಂಪಾರನೆಂದ:

"ನಾವು ಬಂದಿದೇವೆ ಅಂತ ಅರಸನಿಗೆ ತಿಳಿಸಿರಿ."

ಪ್ರತಿಹಾರರು ಮುಂದಕ್ಕೆ ಓಡಿದರು. ಅಪರಂಪಾರ ತನ್ನ ನಡಿಗೆಯನ್ನು ಕುಂಠಿತ ಗೊಳಿಸದೆ ಸಾಗಿದ.

ಏನೋ ಕಲರವ ಕೇಳಿಸಿದಂತಾಗಿ ಜಾಲಂಧ್ರದಿಂದ ಹೊರನೋಡಿದ ಕಾರ್ಯಕಾರ ಐಯಣ್ಣ, ಹೊರಕ್ಕೆ ಧಾವಿಸಿ ಬಂದ. ಬೇಹಿನ ಚಾವಡಿಯಿಂದ ಶಂಕರಪ್ಪನನ್ನು ಕೂಗಿ ಕರೆದ :

"ಯಾರೋ ಬರತಾ ಅದಾರೆ, ನೋಡೋ. ಅವರೇನೇನೋ ಸ್ವಾಮಿಗಳು ?"

ನೋಡಿದ ಶಂಕರಪ್ಪ ಹೌದೆಂದು ತಲೆಯಾಡಿಸಿದ.

"ಕರಕೊಂಡ್ಬಾ. ಮುಖಮಂಟಪದಾಗೆ ಕೂತಿರೋಕೆ ಹೇಳು. ನಾನು ಸನ್ನಿಧಾನಕ್ಕೆ ಸುದ್ದಿ ಮುಟ್ಟಿಸತೀನಿ."

ಶಂಕರಪ್ಪ ಮುಂದಕ್ಕೆ ಧಾವಿಸಿ ಅಪರಂಪಾರನ ಚರಣಗಳಿಗೆ ನಮಿಸಿದ.

"ನಾನು ಶಂಕರಪ್ಪ, ಅಯ್ಯನವರೆ."

ಅಪರಂಪಾರ ಕುಳಿತುಕೊಳ್ಳಲಿಲ್ಲ. ಮುಖಮಂಟಪದಲ್ಲಿ ನಿಂತು ನಾಲ್ಕೂ ಕಡೆಗೆ ನೋಡಿದ; ಅತ್ತಿತ್ತ ನಡೆದ.

"ನಿಮ್ಮ ಮಹಾರಾಜರು ಇನ್ನೂ ಎದ್ದಿಲ್ಲವೇನು ?"

"ಮಹಾಸ್ವಾಮಿಗಳು ಯಾವಾಗಲೂ ಒತ್ತಾರೆ ಲಗೂ ಏಳತಾರೆ, ಅಯ್ಯನವರೆ."

"ಹಾಗೋ ? ಆರೋಗ್ಯಕ್ಕೆ ಒಳ್ಳೇದು."

"ತಾವು ಬಂದೀರಿ ಅಂತ ಕಾರ್ಯಕಾರ ಐಯಣ್ಣನವರು ಯೋಳ ಓಗವರೆ."

"ಸರಿ. ಎಷ್ಟು ಹೊತ್ತು ಸಾಧ್ಯವೋ ಅಷ್ಟು ಹೊತ್ತು ಕಾದಿರತೀವಿ."

ವಿಳಂಬವಾಯಿತೆಂದರೆ ಅಯ್ಯ ಹೊರಟುಬಿಡಬಹುದು—ಎಂದು ಶಂಕರಪ್ಪನಿಗೆ ದಿಗಿಲಾಯಿತು.

ಆದರೆ ತಡವಾಗಲಿಲ್ಲ. ಐಯಣ್ಣ ಕಾಣಿಸಿಕೊಂಡ.

ಕೈಜೋಡಿಸಿ ಆತ, "ಶರಣು !" ಎಂದನಾದರೂ, ಕಣ್ಣುಗಳು ಪರೀಕ್ಷಕ ನೋಟದಿಂದ ಅಪರಂಪಾರನನ್ನು ದಿಟ್ಟಿಸಿದುವು.

ಅವನೆಂದ :

"ಚಿತ್ತೈಸಬೇಕು, ಮಹಾಸ್ವಾಮಿಗಳು ದಾರಿ ನೋಡತಾ ಅದಾರೆ."

ಅರಮನೆಯೊಳಗಿನ ದಾರಿಗಳು ತಿಳಿಯದೆ ಅಪರಂಪಾರನಿಗೆ ? ಪೂರ್ವ ಜನ್ಮದಲ್ಲಿ ಹುಡುಗನಾಗಿದ್ದಾಗ ಹತ್ತಾರು ಸಾರೆಯಾದರೂ ಓಡಾಡಿರಲಿಲ್ಲವೆ ಅಲ್ಲಿ ಆತ ?

ಆದರೆ ಈಗ ಅವನು ಕಣ್ಣಿದ್ದೂ ಕುರುಡ.

ಮೊದಲು ಐಯಣ್ಣ, ಅವನನ್ನು ಹಿಂಬಾಲಿಸಿ ಅಪರಂಪಾರ, ಹಿಂದಿನಿಂದ ಶಂಕರಪ್ಪ ಅರಮನೆಯ ಒಳಭಾಗಕ್ಕೆ ನಡೆದರು.

ಅಲ್ಲಿ ಚಿಕವೀರರಾಜೇಂದ್ರ ಗೊಂದಲದಲ್ಲಿ ಸಿಲುಕಿದ್ದ. ಈ ಜಂಗಮನನ್ನು ಹೇಗೆ ಬರ ಮಾಡಿಕೊಳ್ಳಬೇಕು ತಾನು ?

ರಾಣಿ ಗೌರಮ್ಮ ಕೇಳಿದಳು :

"ಪಾದಪೂಜೆ ದಾಸೋಹಗಳಿಗೆ ಅಣಿಮಾಡಬೇಕು. ಅಲ್ಲವೇ ?"

ಮಗಳು ಲಲ್ಲೆಗರೆದಳು :

"ಅಯ್ಯನವರನ್ನು ನಾನು ನೋಡಬಹುದಾ, ಅಪ್ಪಾಜಿ ?"

ತನ್ನ ದಿವಾಣಖಾನೆಯಲ್ಲಿ ಉತ್ಕಂಠಿತನಾಗಿ ನಿಂತ ಅರಸ ಗಡಸು ಸ್ವರದಲ್ಲಿ ಅಂದ :

"ಒಳಕ್ಕೆ ಹೋಗಿ. ಎಲ್ಲಾ ಆಮೇಲೆ ಹೇಳತೀನಿ. ಅವನು ಯಾರು ಅನ್ನೋದು ಮೊದಲು ಗೊತ್ತಾಗಲಿ.

ಆತ ಬಂಗಾರದಂಚಿನ ನಿಲುವಂಗಿಯನ್ನು ಅವಸರದಲ್ಲಿ ತೊಟ್ಟಿದ್ದ. ಕೆಂಪು ಬಣ್ಣದ ರೇಶಿಮೆಯ ಶಾಲನ್ನು ಸೊಂಟಕ್ಕೆ ಬಿಗಿದಿದ್ದ. ನುಣುಪು ತಲೆಗೂದಲನ್ನು ಹಿಂದಕ್ಕೆ ಬಾಚಿತ್ತು.

ಎತ್ತರದ ಪೀಠದ ಮೇಲೆ ಚಿಕವೀರರಾಜೇಂದ್ರ ಕುಳಿತ.

ಸ್ವಾಮಿ ಬಂದಾಗ ತಾನು ಎದ್ದು ನಿಲ್ಲಬೇಕೆ ? ಪ್ರಣಾಮ ಮಾಡಬೇಕೆ ?

ಇಲ್ಲವೆ, ಅಪರಾಧಿಯಂತೆ ಆತನನ್ನು ನಡೆಸಿಕೊಳ್ಳಬೇಕೆ ? ಆತ ವೀರಪ್ಪನಲ್ಲದೇ ಹೋದರೆ, ಹೀಗೆ ತಾನು ಮಾಡುವುದು ತಪ್ಪಾಗುವುದಲ್ಲ ?

ಕುಳಿತವನು ಏಳುವುದಕ್ಕಿಂತ ಮೊದಲೇ ನಿಂತಿರುವುದು ಮೇಲು—ಎಂದು ಚಿಕವೀರ ರಾಜೇಂದ್ರನೆದ್ದು ಅಸಹನೆಯಿಂದ ಆಚೆಗೆ ಈಚೆಗೆ ನಡೆದ. ಹಾವುಗೆಯ ಸದ್ದು ಸಮೀಪಕ್ಕೆ ಬರತೊಡಗಿದಂತೆ, ಬಾಗಿಲಿಗೆ ಬೆನ್ನುಮಾಡಿ, ಗೋಡೆಯ ಮೇಲಿದ್ದ ದೊಡ್ಡವೀರರಾಜೇಂದ್ರ ಹಾಗೂ ಲಿಂಗರಾಜೇಂದ್ರರ ತೈಲಚಿತ್ರಗಳನ್ನು ನೋಡುತ್ತ ನಿಂತ.

ಮೂವರೂ ದಿವಾಣಖಾನೆಯ ಬಾಗಿಲನ್ನು ತಲಪಿದರು. ಐಯಣ್ಣ ಅರಸನ ಗಮನ ಸೆಳೆಯಬೇಕು ಅನ್ನುವಷ್ಟರಲ್ಲೆ, ಉಚ್ಚಕಂಠದಲ್ಲಿ ಅಪರಂಪಾರನೆಂದ :

"ನಾವು ಬಂದಿದೇವೆ !"

ಚಕಿತನಾದ ರಾಜ ಥಟ್ಟನೆ ತಿರುಗಿದ. ಎದುರು ನಿಂತಿದ್ದ ಭವ್ಯಾಕೃತಿಯ ಮುಂದೆ ಅವನ ದರ್ಪದ ಠೀವಿ ಶಿಥಿಲಗೊಂಡಿತು. ಅವನಿಗರಿಯದಂತೆಯೇ ಕೈಗಳು ಮೇಲಕ್ಕೆ ಸರಿದು ಒಂದನ್ನೊಂದು ಮುಟ್ಟಿದುವು.

ಅಪರಂಪಾರನ ಮನಸ್ಸಿನ ಸ್ಥೈರ್ಯ ಲವಲೇಶವಾದರೂ ಕುಸಿಯಲಿಲ್ಲ. ಆಶೀರ್ವದಿಸುವವನಂತೆ ಆತ ಬಲ ಅಂಗೈಯನ್ನು ತುಸು ಮೇಲಕ್ಕೆತ್ತಿ, ವಿಜೇತನ ಠೇಂಕಾರದಂತಿದ್ದ ಸ್ವರದಲ್ಲಿ ಅಂದ :

"ಅರಸ, ಯಾಕೆ ಕರೆಸಿದೆ ?"

ಏಕವಚನದ ಸಂಬೋಧನೆ ಕೇಳಿದ ಚಿಕವೀರರಾಜನಿಗೆ ಹಾವಿನ ಹೆಡೆಯನ್ನು ಮೆಟ್ಟಿದಂತಾಯಿತು. ಅಪರಂಪಾರನಿಗೆ ಕರೆಕಳುಹಿದ ಮೊದಲ ಉದ್ದೇಶದ ನೆನಪು ಜಾಗೃತವಾಯಿತು. ಕೈಬೆರಳುಗಳು ಸಡಿಲಗೊಂಡು, ತೋಳುಗಳು ಎಡಬಲಗಳಲ್ಲಿ ಜೋತುವು. ನೆಟ್ಟದೃಷ್ಟಿಯಿಂದ ಆತ ಅಪರಂಪಾರನನ್ನು ನೋಡಿದ.

ಒಳಬಾಗಿಲ ತೆರೆಯ ಹಿಂಬದಿಯಿಂದ ರಾಣಿ ಗೌರಮ್ಮನೂ ಆಕೆಯ ಮಗಳೂ ಅಸ್ಪಷ್ಟವಾಗಿ ಕಾಣಿಸುತ್ತಿದ್ದ ಸ್ವಾಮಿಯ ಆಕೃತಿಯನ್ನು ಕಂಡರು. ಸಂವಾದವನ್ನು ಆಲಿಸಿದರು.

ಚಿಕವೀರರಾಜನೆಂದ :

"ಕೊಡಗಿನ ಸಿಂಹಾಸನಾಧೀಶ್ವರರಾದ ನಾವು ನಿಮ್ಮನ್ನು ಕುರಿತು ಕೆಲವು ಪ್ರಶ್ನೆ ಕೇಳಬೇಕಾಗಿದೆ."

"ಉತ್ತರ ಕೊಡಲು ಸಿದ್ಧವಾಗಿದೇವೆ" ಎಂದ ಅಪರಂಪಾರ.

ಅರಸ ಕೇಳಿದ :

"ಯಾರು ನೀವು ?"

"ಒಬ್ಬ ಮನುಷ್ಯ."

"ನಿಮ್ಮ ಮನೆಯೆಲ್ಲಿ ?"

"ಇಲ್ಲಾದರೆ ಇಲ್ಲಿ. ಇನ್ನೊಂದೆಡೆಯಾದೊಡೆ ಇನ್ನೊಂದೆಡೆ."

"ನಿಮ್ಮ ತಾಯಿ ಯಾರು ?"

"ಗರ್ಭ."

"ತಂದೆ ?"

"ಸರ್ವಸಂಗಪರಿತ್ಯಾಗಿಯಾದ ಜಂಗಮನ ಕರೆಸಿ ಇಂಥ ಪ್ರಶ್ನೆ ಕೇಳಬಾರದಪ್ಪ."

"ಎಲ್ಲರ ಸಂಗವನ್ನೂ ನೀವು ಬಿಟ್ಟಿರುವುದು ನಿಜವೇ ? ಹಾಗೆಂತ ಲೋಕ ನಿಮ್ಮನ್ನು ಒಪ್ಪಿಕೊಂಡಿದೆಯಾ ?"

"ಸರ್ವಸಂಗಪರಿತ್ಯಾಗ ಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯ ? ಊರೊಳಗಿದ್ದರೆ ಉಪಾಧಿಕನೆಂಬರು. ಅಡವಿಯೊಳಗಿದ್ದರೆ ಮೃಗನೆಂಬರು. ಹೊನ್ನ ಬಿಟ್ಟರೆ ದರಿದ್ರನೆಂಬರು. ಹೆಣ್ಣ ಬಿಟ್ಟರೆ ನಪುಂಸಕನೆಂಬರು. ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು. ಮಾತನಾಡದಿದ್ದರೆ ಮೂಗನೆಂಬರು. ಮಾತನಾಡಿದರೆ, ಜ್ಞಾನಿಗೇಕಯ್ಯ ಮಾತೆಂಬರು. ನಿಜವನ್ನಾಡಿದರೆ ನಿಷ್ಠುರಿ ಎಂಬರು. ಸಮತೆಯ ನುಡಿದರೆ ಅಂಜುವನೆಂಬರು. ಇದು ಕಾರಣ ಕೂಡಲ ಚೆನ್ನಸಂಗಯ್ಯ, ನಿಮ್ಮ ಶರಣ ಲೋಕದಿಚ್ಛೆಯ ನುಡಿಯ..."

ಅರಸನ ಗಂಟಲೊಣಗಿತು. ಉಗುಳು ನುಂಗಿ ಆತನೆಂದ:

"ಯಾರು ನಿಮ್ಮ ಗುರುಗಳು ?"

"ಅನಾದಿಗಣನಾಥನ ಶಿಷ್ಯನು, ಆದಿಗಣನಾಥನು; ಆದಿಗಣನಾಥನ ಶಿಷ್ಯನು ಅಧ್ಯಾತ್ಮ ಗಣನಾಥನು; ಅಧ್ಯಾತ್ಮ ಗಣನಾಥನ ಶಿಷ್ಯನು ವ್ಯೋಮಸಿದ್ಧ ಗಣನಾಥನು; ವ್ಯೋಮಸಿದ್ಧ ಗಣನಾಥನ ಶಿಷ್ಯನು ಬಸವನೆಂಬ ಗಣನಾಥನು; ಬಸವನೆಂಬ ಗಣನಾಥನ ಶಿಷ್ಯನು ಅಲ್ಲಮಪ್ರಭುವೆಂಬ ಗಣನಾಥನು; ಈ ಗಣಂಗಳೆಲ್ಲರ ಶಿಷ್ಯನು ಅಪರಂಪಾರನು —ಗುರುಲಿಂಗ ಜಂಗಮರ ಕಿಂಕರನು."

"ಉಡುವುದಕ್ಕೆ ಉಣ್ಣುವುದಕ್ಕೆ ನೀವೇನು ಮಾಡತೀರಿ ?"

ಅಪರಂಪಾರ ಗಹಗಹಿಸಿ ನಕ್ಕನು. ಅವನ ಧ್ವನಿ ಏರಿತು.

"ಬೆಟ್ಟಕ್ಕೆ ಛಳಿಯಾದೊಡೆ ಏನ ಹೊದ್ದಿಸುವರಯ್ಯ ? ಬಯಲು ಬತ್ತಲೆ ಇದ್ದರೆ ಏನ ನುಡಿಸುವರಯ್ಯ ?...ಹಸಿವಾದೊಡೆ ಭಿಕ್ಷಾನ್ನಗಳುಂಟು. ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು. ಚನ್ನಮಲ್ಲಿಕಾರ್ಜುನನುಂಟು ಆತ್ಮಸಂಗಾತಕ್ಕೆ...ತರಗೆಲೆಯ ಮೇಲಿದ್ದು ನಾವಿಹೆವು. ಸುರಿಗೆಯ ಮೇಲೊರಗಿ ನಾವಿಹೆವು. ಕಿಡಿಕಿಡಿ ಕೆದರಿದೊಡೆ ಎನಗೆ ಹಸಿವು ತೃಷೆ ಅಡಗಿತೆಂಬೆವು. ಮುಗಿಲು ಹರಿದು ಬಿದ್ದರೆ ಎನಗೆ ಮಜ್ಜನಕ್ಕೆರೆದರೆಂಬೆವು...ಗಿರಿ ಮೇಲೆ ಬಿದ್ದರೆ ಎಮಗೆ ಪುಷ್ಪವೆಂಬೆವು..."

ಮುಂದೆ ಏನು ಕೇಳಬೇಕೆಂದು ತೋಚದೆ ಚಿಕವೀರರಾಜ ಮೌನವಾಗಿ ಕೆಲ ಕ್ಷಣ ನಿಂತ.

ಅಪರಂಪಾರನೆಂದ:

"ಪ್ರಶ್ನೆಗಳು ಮುಗಿದುವೆ, ಮಹಾರಾಜ ?"

"ನಿಮಗೆ ಯಾವ ಆಸೆಗಳೂ ಇಲ್ಲವೆ?"

"ಆಸೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗೆ ಉಂಟೆ?"

"ಅದೇನೋ ನಿಜ. ಆಸೆಯೂ ಅರಸರಿಗೇ ; ಚಿಂತೆಯೂ ಅರಸರಿಗೇ...ನಾವು ಒಂದು ದೇವಸ್ಥಾನಕ್ಕೆ ನಿಮ್ಮನ್ನು ಅರ್ಚಕರಾಗಿ ಮಾಡತೀವಿ. ಅಲ್ಲಿ ಇರತೀರಾ?"

"ದೇಹದೊಳಗೆ ದೇವಾಲಯವಿರ್ದು ಮತ್ತೆ ಬೇರೆ ದೇವಾಲಯವೇಕೆ?"

"ಹ್ಣೂ...ಯಾರ ಅಂಜಿಕೆಯೂ ನಿಮಗೆ ಇಲ್ಲವೇ?"

"ಅಂಜಿಕೆ? ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ..."

"ಸ್ವಾಮಿಗಳೆ, ನೀವು ಆಡಿದ್ದರಲ್ಲಿ ಸಟೆಯೊಂದೂ ಇಲ್ಲವಷ್ಟೆ?"

"ಹುಸಿ ಎಂಬುದು ಹೊಲೆ, ಅರಸ. ಶಿವಭಕ್ತಂಗೆ ಹುಸಿ ಎಂಬುದುಂಟೆ?"

ತನ್ನನ್ನು ಕಾಡಿದ್ದ ಸಂದೇಹಗಳು ದೂರವಾದಂತೆ ಚಿಕವೀರರಾಜನಿಗೆ ಕಂಡಿತು. ಈ ಧೀಮಂತ ವ್ಯಕ್ತಿಗೆ ತಾನಿನ್ನು ಪ್ರಣಾಮ ಮಾಡುವುದಲ್ಲವೆ ಲೇಸು?—ಎಂದು ಆತ ಚಿಂತಿಸಿದ.

ತೆರೆಯಾಚೆಗೆ ತನ್ಮಯತೆಯಿಂದ ಅಪರಂಪಾರನ ನುಡಿಗಳನ್ನು ಕೇಳುತ್ತಲಿದ್ದ ರಾಣಿ, ಹೊರಗೆ ಬರಲು ತವಕಿಸಿದಳು.

ತಾನು ಕಾಡಿಗೆಸೆದು ಬಂದಿದ್ದ ಶವಗಳಲ್ಲೊಂದು ಜೀವತಳೆಯಿತೆಂಬ ಕುಹಕದ ಕಥೆ ಸುಳ್ಳೆಂಬುದು ಸಿದ್ಧವಾಯಿತಲ್ಲಾ—ಎಂದು ಐಯಣ್ಣ ಸಂತುಷ್ಟನಾದ.

ಶಂಕರಪ್ಪನೊಬ್ಬನೇ ವಿವಂಚನೆಯ ಚಕ್ರವ್ಯೂಹದೊಳಗಿಂದ ಹೊರಬರದಾದ. ಸ್ವಾಮಿ ಮಹಾನುಭಾವ ಎಂಬುದರಲ್ಲಿ ಸಂಶಯವಿರಲಿಲ್ಲ. ಆದರೆ ಮಲ್ಲಪ್ಪ ಆಡಿದ್ದನಲ್ಲ, ವೀರಪ್ಪಾಜಿಗೆ ಶಿವ ಮರಳು ಎಂದು? ಮಲ್ಲಪ್ಪ ಇಲ್ಲಿ ಇದ್ದಿದ್ದರೆ ನಿಜ ಸಂಗತಿ ತಿಳಿಯಲು ಸಹಾಯವಾಗುತ್ತಿತ್ತು. ಅದೇನಿದ್ದರೂ ಸ್ವಾಮಿಯವರು ಇಲ್ಲಿ ತಂಗಿದಷ್ಟು ದಿನ ಅವರ ಸೇವೆಯನ್ನು ತಾನು ಮಾಡಬೇಕು...ಪುಣ್ಯ ಗಳಿಸಬೇಕು...

ಪ್ರತಿಯೊಬ್ಬರನ್ನೂ ಒಂದೊಂದು ಬಗೆಯ ಯೋಚನೆಯಲ್ಲಿ ಸಿಲುಕಿಸಿದ ಅಪರಂಪಾರ, ಆ ಭೇಟಿಗೆ ಭರತವಾಕ್ಯವೆನ್ನುವಂತೆ ಅಂದ :

"ಪರೀಕ್ಷೆಯಾಯಿತಲ್ಲ, ಮಹಾರಾಜ? ಮಹಾದೇವ ನಿನ್ನನ್ನು ಕಾಪಾಡಲಿ. ನಾವಿನ್ನು ಬರುತೇವೆ. ಶಿವ, ಶಿವ, ಶಿವ!"

ಮಾತು ಮುಗಿಯುವುದರೊಳಗೇ ದಿವಾಣಖಾನೆಯ ಬಾಗಿಲನ್ನು ಅಪರಂಪಾರ ದಾಟಿದ್ದ. ಐಯಣ್ಣನೂ ಶಂಕರಪ್ಪನೂ ದಿಗ್ಮೂಢರಾಗಿ ಬದಿಗೆ ಸರಿದಿದ್ದರು. ರಾಣಿಯೂ ಮಗಳೂ ಹೊರಗೆ ಬಂದಿದ್ದರು.

ಸ್ವಾಮಿಗಳು ಇದ್ದಕ್ಕಿದ್ದಂತೆ ಹೊರಟುಹೋದರಲ್ಲಾ ಎಂದು ಎಲ್ಲರೂ ಆತಂಕ ಪಟ್ಟರು.

ಅಪರಂಪಾರ ತೆರಳಿದೊಡನೆ ಮಾಂತ್ರಿಕ ಪರವಶತೆಯಿಂದ ಮುಕ್ತನಾದವನಂತೆ, ಚಿಕವೀರ ರಾಜನ ಕಣ್ಣುಗಳು ಮಿನುಗಿದುವು. ಆತ ಬಾಗಿಲಿನತ್ತ ಧಾವಿಸಿದ.

"ಸ್ವಾಮಿಯವರೆ, ಸ್ವಾಮಿಯವರೆ!"

ಅಪರಂಪಾರನ ಹಾವುಗೆಗಳ ಸದ್ದು ಅಡಗಿತ್ತು. ಅವನಾಗಲೇ ಮುಖಮಂಟಪವನ್ನು ಮುಟ್ಟಿದ್ದ.

ರಾಜನ ಬದಲು ಐಯಣ್ಣನೂ, ಆತನನ್ನು ಹಿಂಬಾಲಿಸಿ ಶಂಕರಪ್ಪನೂ ಅಪರಂಪಾರನ ಹಿಂದೆ ಓಡಿದರು.

ಓಡುತ್ತ, ಮುಂದಿದ್ದ ಅಪರಂಪಾರನಿಗೆ ಕೇಳಿಸುವಂತೆ ಐಯಣ್ಣ ವಿನಂತಿಮಾಡಿದ:

''ಅಯ್ಯನವರೆ, ಮಹಾಸೋಮಿಯೋರು ಕರೀತಾ ಅವರೆ, ಬರ್‍ರೀ.''

ಅಪರಂಪಾರ ಮಹಾದ್ವಾರವನ್ನು ದಾಟಿದ. ಅವನನ್ನು ಹಿಂಬಾಲಿಸಿ ಬಂದಿದ್ದ ಮಡಕೇರಿಯ ಪೌರರು ಅಲ್ಲಿದ್ದರು. ಜನರ ಗುಂಪು ಸೀಳಿಕೊಂಡು ದಾರಿಮಾಡಿಕೊಟ್ಟಿತು.

ಮುಂದುವರಿದ ಅಪರಂಪಾರ ಸರಕ್ಕನೆ ಹೊರಳಿ ನೋಡಿ ಅಂದ:

"ಇನ್ನೊಮ್ಮೆ ಖಂಡಿತ ಬಂದು ನೋಡತೀವಿ ಅಂತ ನಿಮ್ಮ ಅರಸನಿಗೆ ಹೇಳ್ರಪಾ."

ಅಪರಂಪಾರನ ದೃಷ್ಟಿ ಶಂಕರಪ್ಪನ ಮೇಲೆ ಒಂದು ಕ್ಷಣ ಹೆಚ್ಚಾಗಿ ನೆಟ್ಟಿತು.

ಹಾವುಗೆಗಳು ಸದ್ದುಮಾಡುತ್ತ ತಮ್ಮ ಪಯಣವನ್ನು ಮುಂದುವರಿಸಿದುವು.

## ೨೭

ಶಾಲಿವಾಹನ ಶಕ ೧೭೫೩ ಖರ ಸಂವತ್ಸರದಲ್ಲಿ [ಕ್ರಿಸ್ತಶಕ ೧೮೩೧] ದಕ್ಷಿಣ ಭಾರತ ದಲ್ಲಿ ನಡೆದೊಂದು ಘಟನೆ. ಸ್ವತಂತ್ರರಾಗಿ ಉಳಿಯ ಬಯಸಿದ ಹಿಂದೂಸ್ಥಾನದ ಅರಸರನ್ನೆಲ್ಲ ಅಧೀರರನ್ನಾಗಿ ಮಾಡಿತು. ಅದು, ಮೈಸೂರಿನ ಅರಸ ಮುಮ್ಮಡಿ ಕೃಷ್ಣರಾಜ ಒಡೆಯನ ಪದಚ್ಯುತಿ, ಆವರೆಗೂ ಮೈಸೂರು ರಾಜ್ಯದಲ್ಲಿ ಸೂತ್ರಧಾರ ಮಾತ್ರರಾಗಿದ್ದ ಆಂಗ್ಲರು, ಇನ್ನು ನಾಯಕ ಪಾತ್ರವೂ ತಮ್ಮದೇ ಎಂದರು. ಕೃಷ್ಣರಾಜನ ಮೇಲೆ ಅವರು ಹೊರಿಸಿದ ಆರೋಪಗಳು ಮೂರು: ದುರಾಡಳಿತ, ಅದಕ್ಷತೆ, ದುಂದು ವೆಚ್ಚ—ಟೀಪೂವಿನ ಪತನದ ಬಳಿಕ ನಾಲ್ಕು ವರ್ಷದ ಎಳೆಯ ಮಗುವಿಗೆ—ಯದುವಂಶದ ಕೃಷ್ಣರಾಜನಿಗೆ—ಆಂಗ್ಲರು ಪಟ್ಟ ಕಟ್ಟಿದ್ದರು. ನಿಜ. ಆದರೆ ಆ ಗೊಂಬೆಯರಸ ಮೂವತ್ತೈದರ ಪ್ರಜ್ಞಾವಂತನಾದಾಗ ಬಿಳಿಯರು ಯೋಚನೆಗೀಡಾದರು. ರಾಜ್ಯದ ರೈತಾಪಿ ವರ್ಗದಲ್ಲಿ ಅಶಾಂತಿ ಇದ್ದಿತು. ಜನರ ಸ್ವಾತಂತ್ರ್ಯಕಾಂಕ್ಷೆ ಕಮರಿರಲಿಲ್ಲ. ಹಿಂದೆ ತಮ್ಮ ಕೈಗೊಂಬೆಯಾಗಿದ್ದ ರಾಜ ಈಗ ಬಂಡಾಯಗಾರರ ತಾಳಕ್ಕೆ ತಕ್ಕಂತೆ ಕುಣಿದರೆ? ಅವನನ್ನು ಮೂಲೆಗೊತ್ತಿ ಅಧಿಕಾರ ಸೂತ್ರಗಳನ್ನು ತಾವೇ ವಹಿಸಿಕೊಳ್ಳುವುದು ಮೇಲು —ಎಂದು ಅವರಿಗೆ ತೋರಿತು.

ಅಲ್ಲದೆ ಆ ಕ್ರಮ, ಭಾರತದಾದ್ಯಂತ ತಮ್ಮ ಆಡಳಿತವನ್ನು ಕ್ರೋಡೀಕರಿಸುವ ಯೋಜನೆಯ ಒಂದಂಗವೂ ಆಗಿತ್ತು.

ಅಷ್ಟಾದ ಮೇಲೆ ಅವರ ಕಣ್ಣಲ್ಲಿ ಉಳಿದ ಪುಟ್ಟದೊಂದು ಕಸವೆಂದರೆ ಕೊಡಗು.

ಆ ರಾಜ್ಯದ ನಾಲ್ಕು ದಿಕ್ಕುಗಳಲ್ಲೂ ಬ್ರಿಟಿಷರ ಆಳ್ವಿಕೆಯಿತ್ತು. ನಡುವೆ ಅದೊಂದೇ ಕರಿಯ ಮಚ್ಚೆ. ಅದನ್ನಷ್ಟು ತೊಡೆದರೆ ಯಶೋದುಂದುಭಿಯಲ್ಲಿನ ಅಪಶ್ರುತಿ ಕೊನೆಗಾಣು ವುದು; ಜಂಬೂದ್ವೀಪದ ದಕ್ಷಿಣಾರ್ಧದಲ್ಲಿ ಅವರ ಕೇತು ಪಟ ಸರ್ವತ್ರ ವಿರಾಜಮಾನ ವಾಗುವುದು.

ಕೊಡಗನ್ನು ಕಬಳಿಸುವ ರಾಜಕೀಯ ತೀರ್ಮಾನವನ್ನು ಈಸ್ಟ್ ಇಂಡಿಯಾ ಕಂಪೆನಿ ರಹಸ್ಯವಾಗಿ ಸ್ವೀಕರಿಸಿದ ಮೇಲೆ, ಅದನ್ನು ಕೃತಿಗಿಳಿಸುವ ರಾಜನೈತಿಕ ಕಸರತ್ತುಗಳು ಒಂದೊಂದಾಗಿ ಆರಂಭವಾದುವು.

ಚಿಕವೀರರಾಜ, ರಾಜ್ಯದ ಸುತ್ತಲೂ ನಿಶಾನಿ ಕಲ್ಲುಗಳನ್ನು ನೆಟ್ಟು ಗಡಿಗಳನ್ನು ಭದ್ರಗೊಳಿಸಿದ್ದ. ಅಪ್ಪಣೆ ಚೀಟಿ ಇಲ್ಲದೆ ಒಳಗಾಗಲೀ ಹೊರಗಾಗಲೀ ಯಾರೂ ದಾಟುವಂತಿರಲಿಲ್ಲ. ಮೈಸೂರಿನ ಅರಸನನ್ನು ಇಂಗ್ಲಿಷರು ಗದ್ದುಗೆಯಿಂದ ಇಳಿಸಿದ ಮೇಲಂತೂ ಕೊಡಗಿನ ಗಡಿಗಳ ಪಹರೆ ಬಿಗಿಯಾಯಿತು.

ಕೊಡಗು ರಾಜ್ಯಕ್ಕೆ ಗಂಡಾಂತರದ ದಿನಗಳು ಪ್ರಾಪ್ತವಾಗಲಿವೆ ಎಂದು ಜ್ಯೋತಿಷ್ಕರು ನುಡಿದಿದ್ದರು. ವಾಸ್ತವವಾಗಿ, ಜ್ಯೋತಿಷ್ಕರೇ ಏತಕ್ಕೆ, ಯಾವ ರಾಜಕೀಯ ಮುತ್ಸದ್ದಿಯೂ ಅದನ್ನು ಹೇಳಬಹುದಾಗಿತ್ತು. ಈ ತಿಳಿವಳಿಕೆ ಸಹಜವಾಗಿಯೇ ಪಿತೂರಿ ಗರಿಗೆದರಲು ಕಾರಣವಾಯಿತು.

ದಿವಾನ ಬೋಪಣ್ಣನಿಗೆ, ಕೊಡಗನಾದ ತಾನು ರಾಜ್ಯವಾಳಬೇಕೆಂಬ ಅಪೇಕ್ಷೆ ಇರಲಿಲ್ಲ. ಪ್ರಜೆಗಳು ರಾಜವಂಶದವರಿಗಷ್ಟೇ ನಿಷ್ಠರಾಗಿರುತ್ತಾರೆ ಎಂಬುದನ್ನು ಆತ ಅರಿತಿದ್ದ. ಆದರೆ, ತನಗಿಷ್ಟವಿಲ್ಲದವರನ್ನು ಇಳಿಸಿ ತಾನು ಇಚ್ಛಿಸಿದವರನ್ನು ಪಟ್ಟಕ್ಕೇರಿಸುವ ಸಾಮರ್ಥ್ಯವುಳ್ಳ ಅಮಾತ್ಯ ತಾನಾಗಬೇಕೆಂಬ ಹಂಬಲ ಅವನಿಗಿತ್ತು. ಚಿಕವೀರರಾಜನ ಆಳ್ವಿಕೆಯನ್ನು ಮುಕ್ತಾಯಗೊಳಿಸಲು ತಾನು ಶಕ್ತನಾದೆ ಎಂದರೆ, ಮುಂದೆ ಯಾರನ್ನು ಅದರ ಮೇಲೆ ಕೂಡಿಸಬೇಕು ? ಚಿಕ್ಕವಳಾದ ಅವನ ಮಗಳನ್ನೆ ? ಅಪ್ಪಂಗಳದಲ್ಲಿರುವ ಅವನ ತಂಗಿಯನ್ನೆ ? ಬದಲು, ಮೈಸೂರಿನಲ್ಲಿರುವಂತೆ ಇಂಗ್ಲಿಷರಿಗೇ ರಾಜ್ಯವನ್ನು ವಹಿಸಿಕೊಟ್ಟರೆ ? ಯಾವುದಾದರೂ ಸರಿಯೆ, ತನ್ನ ಹಿರಿಮೆ ಹೆಚ್ಚುತ್ತದೆ, ದಿವಾನಪದವಿ ಅಬಾಧಿತವಾಗಿ ಸಾಗುತ್ತದೆ...

ಇನ್ನೊಬ್ಬನಿದ್ದ. ಚೆಪ್ಪುಡೀರ ಪೊನ್ನಪ್ಪ. ಮಾಜಿ ದಿವಾನ. ಆಂಗ್ಲ ಅಧಿಕಾರಿಗಳು ಕೊಡಗಿಗೆ ವಿಹಾರಾರ್ಥವಾಗಿ ಹಿಂದೆ ಬರುತ್ತಲಿದ್ದಾಗ ಅವರ ಸಖ್ಯವನ್ನು ಸಂಪಾದಿಸಿದ್ದ ಮನುಷ್ಯ. ಆತನೂ ರಾಜ್ಯವಂಶದ ಒಬ್ಬ ವೈರಿ. ವಯಸ್ಸಾಗುತ್ತ ಬಂದಿದ್ದರೂ ಸದಾ ಚುರುಕಾಗಿದ್ದ ಬುದ್ಧಿ. ಈಗ ತಾಳ್ಮೆಯಿಂದ ಸಂಧಿ ಕಾಯುತ್ತಿದ್ದ.

ಅಂತಹ ಸಹನೆ ಸಾಧ್ಯವಾಗದೆ ಕುದಿಯುತ್ತಿದ್ದವನೆಂದರೆ ಚನ್ನಬಸಪ್ಪ. "ದುಡುಕಬೇಡ" ಎಂದು ಬೋಪಣ್ಣ ಹಿತವಚನ ನುಡಿದರೂ ಅವನಿಗೆ ಸಮಾಧಾನವಿಲ್ಲ. ದಿನದಿಂದ ದಿನಕ್ಕೆ ಅವನ ಸಿಡುಕು ಹೆಚ್ಚುತ್ತಿತ್ತು.

ಆ ವರ್ಷ ಕೊಡಗನ್ನು ಕವಿದ ಕಾರ್ಮೋಡಗಳು ಎಂದಿಗಿಂತ ಹೆಚ್ಚು ದಟ್ಟವಾಗಿದ್ದುವು.

## ೨೮

ಧೋ ಧೋ ಎಂದು ಸುರಿಯುತ್ತಿದ್ದ ಮಳೆಯಲ್ಲೇ, ದಿವಾನರಾದ ಬೋಪಣ್ಣ ಹಾಗೂ ಲಕ್ಷ್ಮೀನಾರಾಯಣರಿಗೆ ಅರಸನಿಂದ ಕರೆಬಂದಿತು.

ಲಕ್ಷ್ಮೀನಾರಾಯಣ ಬಂದು ಮುಟ್ಟಿದ ಅರ್ಧ ಘಳಿಗೆಯ ಬಳಿಕ ಬೋಪಣ್ಣನನ್ನು ಹೊತ್ತ ಮೇನೆ ಅರಮನೆಯನ್ನು ತಲಪಿತು.

ರಾಜನ ಅಂತಃಪುರದ ಕೊಠಡಿಯಲ್ಲಿ ಲಕ್ಷ್ಮೀನಾರಾಯಣನಾಗಲೇ ಉಪಸ್ಥಿತನಾಗಿದ್ದ. ಸಹೋದ್ಯೋಗಿ ಒಳಬಂದೊಡನೆ ಎದ್ದು ಗೌರವ ಸೂಚಿಸಿದ.

ತಲೆಯಾಡಿಸಿದ ಬೋಪಣ್ಣನ ವಂದನೆಯನ್ನು ಸ್ವೀಕರಿಸಿ, ಅರಸನೆಂದ :

"ಕೂತುಕೊಳ್ಳಿ."

ರಾಜನ ಮಗ್ಗುಲಲ್ಲಿ ಲಕ್ಷ್ಮೀನಾರಾಯಣನಿಗೆ ಎದುರು ಬದುರಾಗಿ ಬೋಪಣ್ಣ ಕುಳಿತ.

ಚಿಕವೀರರಾಜ ತನ್ನೆದುರಿಗಿದ್ದ ಬಂಗಾರದ ತಟ್ಟೆಯತ್ತ ಬೊಟ್ಟುಮಾಡಿ, "ರಾಜೇಂದ್ರ ನಾಮೆಯ ತಾಡವೋಲೆಯ ಪ್ರತಿ. ಭಂಡಾರದಿಂದ ತರಿಸಿದೇವೆ. ಒಂದೆರಡು ವಿಷಯ ಓದಿ ತಿಳಿಯಬೇಕು ಅನಿಸಿತು. ಲಕ್ಷ್ಮೀನಾರಾಯಣಪ್ಪನವರು ಮೊದಲು ಬಂದರು. ಕುಶಲ ಸಂಭಾಷಣೆ ಮಾಡತಾ ಇದ್ದೇವೆ" ಎಂದ.

ಗಹನವಾದ ಬೇರೇನನ್ನೂ ಮಾತನಾಡಿಲ್ಲವಷ್ಟೆ—ಎಂದು, ತನ್ನ ಸಮಾಧಾನಕ್ಕಾಗಿ ಸೂಕ್ಷ್ಮ ನೋಟದಿಂದ ಲಕ್ಷ್ಮೀನಾರಾಯಣನನ್ನು ಬೋಪಣ್ಣ ದಿಟ್ಟಿಸಿದ. ಮಳೆ ತೊಳೆದ ಗಾಜಿನಂತೆ ಸ್ವಚ್ಛವಾಗಿತ್ತು ಆ ಮುಖ.

ಚಿಕವೀರರಾಜನೆಂದ :

"ಏಳು ವರ್ಷ ಆಯಿತಲ್ಲವೆ ಕಾಸ್ಸಾಮೇಜರ್ ಇಲ್ಲಿಗೆ ಬಂದು ಹೋಗಿ ? ಆವತ್ತು ನನ್ನ ಮನಸ್ಸಿನಲ್ಲಿ ಉತ್ಪನ್ನವಾದ ಶಂಕೆಯ ವಿಷಯ ಹೇಳಿದ್ದೆ. ದಿನ ಕಳೆದ ಹಾಗೆ ಅದು ಬಲ ವಾಗುತ್ತಾ ಬಂದಿದೆಯೆ ಹೊರತು ಕಮ್ಮಿಯಾಗಿಲ್ಲ. ಕಿತ್ತೂರನ್ನು ಇಂಗ್ರೇಜಿಯವರು ವಶಪಡಿಸಿಕೊಂಡದ್ದು, ಮೈಸೂರಿನ ರಾಜನನ್ನು ಪದಚ್ಯುತಮಾಡಿದ್ದು, ಇವೆಲ್ಲಾ ಪರಿಸ್ಥಿತಿ ವಿಷಮಿಸತಾ ಇದೆ ಅಂತ ತೋರಿಸ್ತವೆ. ನೀವೇನಂತೀರಿ ಬೋಪಣ್ಣನವರೆ ?"

ಸ್ವಲ್ಪ ಅನುಮಾನಿಸಿ, ಬೋಪಣ್ಣ ಉತ್ತರವಿತ್ತ :

"ಕೊಡಗು ಸ್ವತಂತ್ರ ರಾಜ್ಯ. ನಾವೂ ಇಂಗ್ರೇಜಿಯವರೂ ದೋಸ್ತರು. ಅದರ ಹೊರ ತಾಗಿ ಈಗ ಬೇರೇನದೆ ?"

"ಈ ಮಾತು ಇಷ್ಟೊಂದು ಸ್ಪಷ್ಟವಾಗಿದ್ದರೆ ನಾನು ಚಿಂತಿಸತಾ ಇರಲಿಲ್ಲ. ಕೊಡಗು ಆಶ್ರಿತ ರಾಜ್ಯ, ಇಂಗ್ರೇಜಿಯವರು ನಮ್ಮ ಮೇಲೆ ನಿಗಾ ಮಡಗಬೇಕು ಅಂತ ಇಲ್ಲಿಂದ ಯಾರೋ ತಳ್ಳಿ ಅರ್ಜಿ ಕಳಿಸಿದ ವಿಷಯ ಬೇಹುಗಾರರು ತಿಳಿಸಿದಾರೆ. ಅದನ್ನು ನೀವು ಬಲ್ಲಿರಿ..."

"ಯಾರೋ ಕ್ಷುದ್ರ ಜನರ ಕೆಲಸ" ಎಂದ ಲಕ್ಷ್ಮೀನಾರಾಯಣ.

"ಮಹಾಸ್ವಾಮಿಗಳು ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೋಬಾರದು" ಎಂದ ಬೋಪಣ್ಣ.

"ನಮ್ಮ ನಮ್ಮಲ್ಲಿ ಒಂದೆರಡು ವಿಷಯ ಸ್ಪಷ್ಟವಾಗಿರಲಿ ಅಂತ ಆ ಪ್ರಸ್ತಾಪ ಮಾಡಿ ದೆವು. ನಮ್ಮ ತೀರ್ಥರೂಪರ ಕಾಲದಲ್ಲಿ ಈ ಮಾತು ಬಂದಿರಲಿಲ್ಲ. ಈಗ ಬಂದದೆ."

ಬೋಪಣ್ಣ ಮಾತನಾಡಲಿಲ್ಲ.

ಚಿಕವೀರರಾಜನೇ ಅಂದ :

"ಲಕ್ಷ್ಮೀನಾರಣಪ್ಪನವರೆ, ಹಾಲೇರಿ ಸಂಸ್ಥಾನ ಹಾಗೂ ಇಂಗ್ರೇಜಿಯವರ ನಡುವೆ ಆದ ಒಪ್ಪಂದದ ವಿಷಯ ಸ್ವಲ್ಪ ಓದತೀರಾ ?"

ಅಷ್ಟು ಹೇಳಿ, ಕೈತಟ್ಟಿ ಸೇವಕನನ್ನು ಕರೆದು, ರಾಜ ಆಜ್ಞಾಪಿಸಿದ :

"ಈ ಪೀಟವನ್ನು ದಿವಾನರ ಮುಂದಿಡು."

—ಲಕ್ಷ್ಮೀನಾರಾಯಣ ರೇಶಿಮೆಯ ಹೊದಿಕೆಯನ್ನು ಬಿಚ್ಚಿ, ಕ್ರಮಸಂಖ್ಯೆಯನ್ನು ಪರಿ ಗಣಿಸಿ, ಮೂರನೆಯ ಕಟ್ಟನ್ನು ತೆರೆದ. ತಾನು ಉಲ್ಲೇಖಿಸಬೇಕಾದ ಭಾಗ ಸರಿಯಾದುದೇ ಎಂಬುದನ್ನೊಮ್ಮೆ ಪರಾಂಬರಿಸಿ, ಆತ ಓದತೊಡಗಿದ.

"ವೀರರಾಜೇಂದ್ರ ಒಡೆಯರವರು, ಸರ್ವ ಬಗೆಯಲ್ಲು ಕಂಪನಿ ಇಂಗ್ರೇಜ ಬಹಾದ್ದರ

ಸರಕಾರ ನಂಬಿ, ಕಪಿತಾನ್ ಬ್ರೋನ್ ಸಾಹೇಬರ ಸಂಗಡ, ಇದೇ ಆಶ್ವೀಜ ಶುದ್ಧ ವಿಜಯ ದಶಮಿಯ ದಿವಸ ಕೊಡಗಿನಿಂದ ಹೊರಟು, ತಲಚೇರಿ ಕೋಟೆಗೆ ಹೋಗಿ, ದೊಡ್ಡ ದೊಡ್ಡ ಸರದಾರರ ಯಾವತ್ತು ಕಂಡು, ಭೇಟಿ ಆಗಿ, ದೋಸ್ತಿ ಪ್ರಸ್ತಾಪವನ್ನು ಮಾಡಿ, ಭಾಷಾ ಪತ್ರಿಕೆ ಪೂರ್ವೋತ್ತರವಾಗಿ ಮಾತನಾಡಿ, ಒಪ್ಪಿ, ಉಭಯ ಕಡೆಯಿಂದಲೂ ಭಾಷಾಪತ್ರಿಕೆ ಬರೆಸಿದ ಕ್ರಮವೆಂತೆಂದರೆ—"

ಲಕ್ಷ್ಮೀನಾರಾಯಣ ತಲೆ ಎತ್ತಿ ಅರಸನ ಕಡೆ ನೋಡಿದ.

"ಮುಂದುವರಿಸಿ" ಎಂದ ಚಿಕವೀರರಾಜ.

"ಶ್ರೀಃ ಇಂಡ್ಯಪ್ರಾಂತ್ಯಕ್ಕೆ ಬಹುಮಾನಪಟ್ಟ ಇಂಗ್ರೇಜಿ ಕಂಪನಿ ಹೆಸರಿಗೆ ತಲಚೇರಿ ಕೋಟೆ ಮೇಜರ್ ರಾಬರ್ಟ್ ಟೇಲರು, ಸೇಂಗುಂದಮಾರ್ರು ಕೊಡಗಿನ ಹಾಲೇರಿ ವೀರರಾಜ ಅರಸುಗಳು, ತಮ್ಮ ಒಳಗೆ ಒಪ್ಪಿಗೆ ಆಗಿ, ಬರೆದುಕೊಟ್ಟ ನಂಬಿಕೆ ಕಾಗದದ ವಿವರ : ಒಂದನೇ ಕಲಂ : ಸೂರ್‍ಯ ಚಂದ್ರ ಇರುವ ಪರ್‍ಯಂತರಕ್ಕೂ ಇಕ್ಕರ್ತರ ಕಡೆ ವಿಶ್ವಾಸಕ್ಕೂ ಹೆಚ್ಚು ಕಡಮೆ ಬಾರದಂತೆ ನಡೆದು ಬರುವಂಥಾದ್ದಕ್ಕೆ ಹೆಚ್ಚು ಕಡಮೆ ಬರಲಿಕ್ಕೆ ಇಲ್ಲಾ. ಎರಡನೇ ಕಲಂ : ಟೀಪುಸುಲ್ತಾನನಿಗೂ ಅವನ ಕಡೆ ಇರುವ ಯಾವತ್ತೂ ಪಕ್ಷದವರಿಗೂ, ಎರಡೂ ಕಡೆಯ ವರು ಅವರು ನಮಗೆ ಶತ್ರು ಎಂತ ಭಾವಿಸಿಕೊಂಡು ಬರಬೇಕು. ಇಂಗ್ರೇಜರಿಗೂ ಅವನಿಗೂ ನಡೆದು ಬರುವಂತ ಲಡಾಯಿಯಲ್ಲು, ಅರಸುಗಳಿಗೆ ಸಮಯ ಸಿಕ್ಕಿದರೆ, ಶತ್ರುವಿಗೆ ತಮ್ಮಿಂದ ಆಗುವಷ್ಟು ನಾಶಮಾಡುವುದಕ್ಕೆ ಹಾಜರಾಗಿ ಇರಬೇಕು. ಬೇರೆ, ಕೊಡಗುಮಲೆ ದಾರಿ ಇಂಗ್ರೇಜರ ಪಾಳ್ಯ ಒಂದು ಸಮಯಕ್ಕೆ ಹೋಗುವಾಗ್ಗೆ ಸಮ್ಮತ ಇರಬೇಕು. ಯಾತ ರಿಂದ ಎಂದರೆ, ಟೀಪುಸುಲ್ತಾನನ ಕಡೆಗೆ ಹೋಗುವ ಸಮಯ ಬಂದರೆ, ಆವಾಗ್ಗೆ ನಮ್ಮ ಪಾಳ್ಯದವರಿಗೆ ರಾತೀಪು, ಜೀನಸು, ನಿಮ್ಮ ಊರಿನಲ್ಲಿರುವಂಥಾದ್ದು ಸಕಾಯ ಕ್ರಯಕ್ಕೆ ಕೊಡಿಸಿ ಸಹಾಯ ಮಾಡಬೇಕು. ಘಟ್ಟದ ಮೇಲೆ ಟೀಪು ಊರಲ್ಲು ನಮಗೂ ಆತಗೂ ಲಡಾಯಿ ಆಗುವಾಗ್ಗೆ, ರಾಜರು ತಮಗೆ ಕೂಡಿದಷ್ಟು ಬಲ ತೆಗೆದುಕೊಂಡು, ಇಂಗ್ರೇಜರ ಕಡೆಯಲ್ಲು ಕೂಡಿ ಇರಬೇಕು. ಮೂರನೆ ಕಲಂ : ನಮ್ಮ ರಾಜ್ಯದಲ್ಲು ಕಂಪೆನಿಗೆ ಆಗುವಂಥ ಸರಕು ಮಾರ್ಯಾದೆಯ ಪ್ರಕಾರ ಸಕಾಯಕ್ರಯಕ್ಕೆ ಕಂಪೆನಿಗೆ ಕೊಡುವ ಬಗ್ಗೆ, ಒಪ್ಪಿಗೆ ಆಗಿ ಇದ್ದೇವೆ. ಬೇರೆ ಟೋಪಿಕಾರ ಜಾತಿಗೆ ಯಾರಿಗೂ ವ್ಯಾಪಾರ ಮಾಡುವುದಕ್ಕೆ ಒಪ್ಪಿಗೆ ಇಲ್ಲಾ. ನಾಲ್ಕನೇ ಕಲಂ : ಕಂಪೆನಿಗೆ ಅನ್ಯೋನ್ಯವಿಡಿದು ನಡೆದು ಬರುವಂಥ ಅರಸುಗಳ ಪ್ರಕಾರಕ್ಕೆ, ಟೀಪುಸುಲ್ತಾನನ ಒಂದು ಹುಕುಂ ನಿಮ್ಮ ಮೇಲೆ ನಡೆಯದಂತೆ ಕಂಪೆನಿಯಿಂದ ಆಗುವಂಥ ಪ್ರಯತ್ನಮಾಡಿ, ನಿಮ್ಮನ್ನು ಇರಿಸಿಕೊಳ್ಳುತ್ತೇವೆ. ಟೀಪುಗೂ ನಮಗೂ ಒಂದು ವೇಳೆ ಒಳ್ಳಿತಾಗಿ ಹೋಗುತ್ತದೆಯಾದರೆ, ತಹನಾಮೆ ಬರೆದು ಇಡುವಾಗ್ಗೆ ಅದರಲ್ಲು, ಕೊಡಗಿನ ರಾಜರು ಕಂಪೆನಿಗೆ ಅನ್ಯೋನ್ಯವಿಡಿದು ನಡೆದು ಬರುವಂಥಾದ್ದು ಅವರ ಮೇಲೆ ಆತನು ಒಂದು ಜೋರಾವರಿಯು ನಡೆಸದಂತೆ ಅದರಲ್ಲು ಬರಸಿಯೇವು. ಐದನೇ ಕಲಂ : ರಾಜರಿಗೆ ಒಂದು ಸಮಯಕ್ಕೆ ಇಲ್ಲಿಗೆ ಬರಬೇಕಾದರೆ, ಅವರ ಕುಟುಂಬ ಮುಂತಾಗಿ, ಆ ಊರಲ್ಲಿರುವ ರೈತರ ಕುಟುಂಬ ಮುಂತಾಗಿ ಘಟ್ಟದ ಕೆಳಗೆ ಬಂದಲ್ಲಿ, ಇಲ್ಲಿಂದ ಒಂದು ಗಾಡದಿ ಸಿಪಾಯಿಗಳ ಕಳುಹಿಸಿಕೊಟ್ಟು, ದಾರಿಮಾರ್ಗದಲ್ಲಿ ಒಂದು ಅಟಕ ಆಗದಂತೆ ತಂದು, ತಲಚೇರಿಯಲ್ಲು ಒಂದು ಮನೆ ಸಹ ಬಿಡಿಸಿಕೊಟ್ಟು, ರಾಜಸ್ಥಿತಿ ಸೌಖ್ಯವಾಗುವ ಪರಿಯಂತರ ರಕ್ಷಣೆಯಮಾಡಿ, ನಿಲ್ಲಿಸಿಕೊಳ್ಳುತ್ತಾ ಇದೆ. ಪುನಃ ರಾಜಸ್ಥಿತಿ ಸೌಖ್ಯವಾಗುತ್ತಲೆ,

ನಿಮ್ಮ ಊರಿಗೆ ಸಂಗಡ ಮನುಷ್ಯರ ಕೊಡಿಸಿ, ಚನ್ನಾಗಿ ಕಳುಹಿಕೊಡುವಲ್ಲಿ ಅಂತರವಿಲ್ಲಾ. ಈ ಕಾರ್ಯಕ್ಕೆ ಅನ್ಯೋನ್ಯ ನಡೆದುಬರುವಲ್ಲಿ, ಎಂದಿಗೂ ಹೆಚ್ಚು ಕಡಿಮೆ ಬಾರದಂತೆ, ಇಕ್ಕರ್ತರಿಗೂ ಅಂತರ ಬರಲಿಕ್ಕಿಲ್ಲಾ. ಈ ಕಾರ್ಯಕ್ಕೆ ಎರಡು ಕಡೆಯವರಿಗೂ ಸಾಕ್ಷಿ : ಶ್ರೀದೇವರು, ಸೂರ್ಯ, ಚಂದ್ರ, ಭೂಮಿ ಸಾಕ್ಷಿ. ಸಾಧಾರಣ ಸಂವತ್ಸರ ಆಶ್ವೀಜ ಬಹುಳ ೫ರಲ್ಲು, ತಲಚೇರಿಯಲ್ಲಿ ಇರುವಂಥ ಮೇಜರ್ ರಾಬರ್ಟ್ ಟೇಲರೂ ಕೊಡಗಿನ ಹಾಲೇರಿ ವೀರರಾಜೇಂದ್ರ ರಾಜರೂ ಒಂದು ಮನಸಾಗಿ ಈ ವರ್ಷ ಈ ತಿಂಗಳು ಈ ದಿನದಲ್ಲು ಬರೆದು ಇಟ್ಟ ನಿಶ್ಚಯ ಆಗದಕ್ಕೆ ನಮ್ಮ ಹೆಸರಲ್ಲು ಗುರ್ತುಹಾಕಿ, ಕಂಪೆನಿ ಮೋಹರ ಮಾಡಿ, ಎರಡು ಕಡೆಗೂ ಬರೆದುಕೊಟ್ಟು ಇದ್ದೇವೆ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ."

ಲಕ್ಷ್ಮೀನಾರಾಯಣನ ಓದಿನುದ್ದಕ್ಕೂ ಬೋಪಣ್ಣ ಮಡಿಲಲ್ಲಿ ಅಂಗೈಗಳನ್ನಿರಿಸಿ ಗಂಭೀರ ವದನನಾಗಿ ಕುಳಿತ. ಒಡಂಬಡಿಕೆಯ ದಾಖಲೆಯನ್ನು ತನ್ನ ಸಹೋದ್ಯೋಗಿ ಓದಿ ಮುಗಿಸಿದ ಮೇಲೂ ಆತ ಮುಖಭಾವವನ್ನು ಬದಲಿಸಲಿಲ್ಲ.

ಒಮ್ಮೆ ಅರಸನ ಮುಖವನ್ನೂ ಒಮ್ಮೆ ಬೋಪಣ್ಣನ ಮುಖವನ್ನೂ ಲಕ್ಷ್ಮೀನಾರಾಯಣ ನೋಡಿದ.

ದೀರ್ಘವಾಗಿ ಉಸಿರೆಳೆದು ಬಿಟ್ಟು ಚಿಕವೀರರಾಜನೆಂದ :

"ಸಾಧಾರಣ ಸಂವತ್ಸರ ಅಂದರೆ ಇವತ್ತಿಗೆ ಸುಮಾರು ನಾಲ್ವತ್ತು ನಾಲ್ವತ್ತೆರಡು ವರ್ಷ ಆಯಿತು. ನಮ್ಮ ದೊಡ್ಡಪ್ಪನವರಿಗೂ ಇಂಗ್ರೇಜಿಯವರಿಗೂ ಆದ ಆ ಒಪ್ಪಂದಕ್ಕೆ ಶ್ರೀದೇವರು, ಸೂರ್ಯ, ಚಂದ್ರ, ಭೂಮಿ ಸಾಕ್ಷಿ ಅಂತ ಹೇಳಲಿಲ್ಲ ? ಶ್ರೀದೇವರನ್ನಿನ್ನೂ ಅವರು ಪದಚ್ಯುತಿ ಮಾಡಿಲ್ಲ. ಸೂರ್ಯಗೋಲ ಉರೀತಾನೇ ಅದೆ. ಕೃಷ್ಣಪಕ್ಷ ಶುಕ್ಲಪಕ್ಷಗಳು ಈಗಲೂ ಅವೆ. ಭೂಮಿ ಮುಳುಗಿಲ್ಲ. ಅಂದ ಮೇಲೆ ಸಾಕ್ಷಿದಾರರೆಲ್ಲ ಅದಾರೆ ಅಂತಾಯ್ತು ಅಲ್ಲವ ಲಕ್ಷ್ಮೀನಾರಾಣಪ್ಪನವರೆ ?"

"ನಿಜ, ಮಹಾಸ್ವಾಮಿ."

"ಆದರೆ ಈ ನಲ್ವತ್ತು ವರ್ಷಗಳಲ್ಲಿ ನಮ್ಮ ಅವರ ಸಖ್ಯ ಯಾವ ಜಾಡು ಹಿಡಿದಿದೆ ? ನಾವದನ್ನ ನೋಡಿರೋದಕ್ಕಿಂತಲೂ ಹೆಚ್ಚು ವರ್ಷ ನೀವು ಕಂಡಿದೀರಿ. ಟೀಪೂನ ಸೋಲಿ ಸೋದಕ್ಕೆ ನಮ್ಮ ದೊಡ್ಡಪ್ಪ ಇಂಗ್ರೇಜಿಯವರಿಗೆ ಬಾಳ ಸಹಾಯ ಮಾಡಿದರಂತಲ್ಲ ? ಒಂದು ದಮಡಿ ಕೂಡಾ ತಕ್ಕೊಳ್ಳದೆ ಕರಾರು ಮಾಡಿದ್ದಕ್ಕಿಂತ ಹತ್ತು ಪಾಲು ಅಕ್ಕಿ ಜಮಾ ಯಿಸಿ ಕೊಟ್ಟರಂತಲ್ಲ ? ಹಲವು ಸಹಸ್ರ ಹೋರಿ ಕುರಿ ಒದಗಿಸಿದರಂತಲ್ಲ ? ಘಟ್ಟದ ಕೆಳಗಿನ ಮಲೆಯಾಳದಿಂದ ಪೆರಿಯಾಪಟ್ಟಣದ ಮಾರ್ಗವಾಗಿ ಮೈಸೂರಿಗೆ ಹೋಗೋಕೆ ದಾರಿ ಬಿಟ್ಟರಂತಲ್ಲ ? ತಾವೂ ದಂಡು ತಕ್ಕೊಂಡು ಮೈಸೂರು ಸೀಮೆಯ ಮೇಲೆ ಬಿದ್ದರಂತಲ್ಲ ? ಇದಕ್ಕೆಲ್ಲ ಪ್ರತಿಫಲವಾಗಿ ಇಂಗ್ರೇಜಿಯವರು ನೀಡಿದ್ದೇನು ?"

ಲಕ್ಷ್ಮೀನಾರಾಯಣನೆಂದ :

"ಟೀಪೂ ಸೋತ ಮೇಲೆ, 'ನೀವು ಆತಗೆ ಕಪ್ಪಕೊಡತಿದ್ದಿರಂತೆ. ಈಗ ವರ್ಷಕ್ಕೆ ಇಪ್ಪತ್ತನಾಲ್ಕು ಸಾವಿರ ರೂಪಾಯಿ ನಮಗೆ ಕೊಡಿರಿ'—ಅಂದರು."

"ಹ್ಞ. ದೊಡ್ಡಪ್ಪ ಪ್ರತಿಭಟಿಸಿದ್ದರಿಂದ, ಹಣ ಬೇಡ—ಆದರ ಬದಲು ಒಂದು ಆನೆ ಸಾಕೊಂತಾಯ್ತು. ಮುಂದೆ ಆನೆ ಕೊಡೋದೂ ನಿಂತುಹೋಯ್ತು."

ಬೋಪಣ್ಣ ತನ್ನ ಸಹೋದ್ಯೋಗಿಯ ಕಡೆ ನೋಡಿ ಅಂದ :

"ಇಂಗ್ರೇಜಿಯವರು ಹಾಗೆ ಕೇಳಿದ್ದು ತಪ್ಪು ತಿಳಿವಳಿಕೆಯಿಂದ ಅನ್ನಿ."

ಚಿಕವೀರರಾಜ ವ್ಯಂಗ್ಯ ಬೆರೆತ ಧ್ವನಿಯಲ್ಲಿ ಅಂದ:

"ನೀವು ಅವರ ಕಡೆ ವಾದಿಸತಾ ಅದೀರಲ್ಲ ಬೋಪಣ್ಣನವರೆ!"

"ಅಂಥಾದ್ದೇನಿಲ್ಲ. ಇದ್ದ ಸಂಗತಿ ಹೇಳ್ದೆ."

"ನಾವು ಇಲ್ಲದ ಸಂಗತಿ ಆಡತಾ ಇಲ್ಲವಲ್ಲ? ಶ್ರೀದೇವರು ಸೂರ್ಯ, ಚಂದ್ರ, ಭೂಮಿ ಸಾಕ್ಷಿಯಾಗಿ ಒಡಂಬಡಿಕೆ ಮಾಡಿಕೊಂಡವರು ಅದನ್ನು ಪಾಲಿಸಬೇಕು. ಸ್ವತಂತ್ರ ರಾಜ್ಯ ಇದ್ದದ್ದು ಬೆಳಗಾಗೋದರೊಳಗೆ ಆಶ್ರಿತ ರಾಜ್ಯ ಹ್ಯಾಗಾಗತದೆ? ಅವರೇನು ದೌಡು ಮಾಡಿ ಗೆದ್ದ ಸೀಮೇನಾ ಇದು? ಕ್ಯಾಪ್ಟನ್ ಮಾಂಕ್, ಇಮಾನ್ಯುಅಲ್ ಪೆರೀರಾ, ಸಾಮ್ಯುಅಲ್ ಜೋಸೆಫ್—ಅವರೆಲ್ಲ ಬಂದು ಹೋದರಲ್ಲ? ಯಾಕೆ? ರಾಜ್ಯ ವ್ಯವಸ್ಥೆ ಹ್ಯಾಗೆ ನಡದದೇಂತ ತಿಳಕೊಂಡು ಬನ್ನಿ—ಅಂದರಂತೆ. ನಮ್ಮದು ಹ್ಯಾಗೇ ನಡೀಲಿ, ಅವರಿಗೇನು?"

ಬೋಪಣ್ಣನೆಂದ:

"ಮಹಾಸ್ವಾಮಿಗಳ ಮನಸ್ಸು ತಿಳೀಲಿಲ್ಲ. ಏನು ಮಾಡಬೇಕು ಅಂತೀರಿ?"

"ಹೇಳತೀನಿ. ತುಸ ಬಗ್ಗಿದರೆ ಸಾಕು, ಬೆನ್ನ ಮೇಲೆ ಕೂತೇವು ಅಂತಾರೆ. ಇಂಥಾದ್ದು ನಡೀಲಿಕ್ಕಿಲ್ಲ; ಸರಿಸಮಾನರೊಳಗೆ ಸಖ್ಯ—ಅಂತ ಸ್ಪಷ್ಟವಾಗಿ ಅನ್ನಬೇಕು. ಅರಮನೆ ಅಳಿಯ ಚನ್ನಬಸಪ್ಪ ಆ ಹೊರಗಿನವರ ಕೂಡೆ ಪತ್ರ ವ್ಯವಹಾರ ಮಡಗಿದಾರೆ ಅಂತ ನಮಗೆ ಸಂಶಯ. ಬೋಪಣ್ಣನವರು ಅವರಿಗೆ ಬುದ್ಧಿವಾದ ಹೇಳಬೇಕು. ಆ ಮೇಲೆ ಹಾಗಾಯಿತು ಹೀಗಾಯಿತು ಅಂತ ದೂರಬಾರದು."

ಬೋಪಣ್ಣನನ್ನು ಕೆಣಕಿದಂತಾಯಿತು.

"ಆತ ಪೂರ್ವಾಶ್ರಮದಲ್ಲಿ ಕೊಡವ ಅಂತ ನನಗೆ ಈ ಮಾತು ಹೇಳೋಣಾಗತದೆಯೊ?"

"ಛೆ! ಛೆ! ನೀವು ಅಂದರೆ ಅವನಿಗೆ ಗೌರವ. ಅರಮನೆಗೆ ಬರದಿದ್ದರೂ ನಿಮ್ಮಲ್ಲಿಗೆ ಬಂದು ಹೋಗತಾನೆ. ಒಂದು ಮಾತು ಹೇಳಿ ನೋಡಿ. ಆತ ಕೇಳಲಿಲ್ಲ ಅಂದರೆ ಮುಂದಿನದು ನಮಗೆ ಸೇರಿದ್ದು."

ಮೌನವೇ ಸಮ್ಮತಿ ಎನ್ನುವಂತೆ ಬೋಪಣ್ಣನೂ ಲಕ್ಷ್ಮೀನಾರಾಯಣನೂ ಕುಳಿತರು.

ಅರಸನೆಂದ:

"ಕಡೆಯದಾಗಿ ಒಂದು ವಿಷಯ. ನಮ್ಮನ್ನು ಎದುರು ಹಾಕಿಕೊಳ್ಳೋ ಮೂರ್ಖತನ ಇಂಗ್ರೇಜಿಯವರು ಮಾಡಲಾರರು. ಒಂದು ಪಕ್ಷಕ್ಕೆ ಆ ದುರ್ಬುದ್ಧಿ ಅವರಿಗೆ ಉಂಟಾದ್ದೇ ಆದರೆ ನಮ್ಮ ರಾಜ್ಯದ ರಕ್ಷಣೆ ನಾವು ಮಾಡೋದಕ್ಕೆ ಶಕ್ತರಾಗಬೇಕು. ಈ ಮಾತು ಎಲ್ಲ ತಕ್ಕರಿಗೆ ಕಾರ್ಯಕಾರರಿಗೆ ಮುಟ್ಟಬೇಕು."

"ಸರಿ. ಅಷ್ಟೇ ಅಲ್ಲವಾ?" ಎಂದ ಬೋಪಣ್ಣ, ಏಳಲು ಸಿದ್ಧನಾಗಿ.

"ಅಷ್ಟೇ. ನೀವಿನ್ನು ಹೊರಡಬಹುದು. ಮಳೆಯೂ ನಿಂತಿದೆ."

ಲಕ್ಷ್ಮೀನಾರಾಯಣ ತಾಳೆಗರಿಯ ಕಟ್ಟುಗಳನ್ನು ಮೊದಲಿದ್ದಂತೆ ಜೋಡಿಸಿ, ರೇಶಿಮೆಯ ಗಂಟುಕಟ್ಟಿ ಎದ್ದು, ಬೋಪಣ್ಣನನ್ನು ಹಿಂಬಾಲಿಸಿದ. ಮುಖಮಂಟಪದವರೆಗೂ ಚಿಕವೀರ ರಾಜ ಅವರ ಜತೆಗೆ ಬಂದ.

ಮಳೆ ನಿಂತು, ಕೆಳಗೆ ಚರಂಡಿಗಳಲ್ಲೂ ಗುಡ್ಡದ ತಪ್ಪಲುಗಳಲ್ಲೂ ಜುಳು ಜುಳು ನೀರು

ಹರಿಯುತ್ತಿತ್ತು. ಮನೆ ಮಾಡಗಳ ಮೇಲಿಂದ ಉಗಿ ಏಳುತ್ತಿತ್ತು. ಮೈ ತೊಳೆದುಕೊಂಡ ಹಸಿರು ಕಣ್ಣಿಗೆ ಹಬ್ಬವಾಗಿತ್ತು.

ಚಿಕವೀರರಾಜನೆಂದ :

"ಗುಡುಗು, ಮಿಂಚು, ಮುಸಲಧಾರೆ—ಯಾವುದಕ್ಕೂ ನಾವು ಹೆದರೋದಿಲ್ಲ. ಯಾಕೆ ? ಸ್ವಲ್ಪ ಹೊತ್ತಿನಲ್ಲೇ ಎಲ್ಲಾ ಶಾಂತವಾಗತದೆ ಅಂತ ನಾವು ಬಲ್ಲೆವು. ಹಾಗೆಯೇ, ಯಾವ ಗಂಡಾಂತರ ಒದಗಿದರೂ ನಾವು ಸ್ಥೈರ್ಯದಿಂದ ಇರತೇವೆ. ಆ ಗಂಡಾಂತರ ಖಂಡಿತವಾಗಿ ಕಳೀತದೆ—ಅಂತ ನಮಗೆ ಗೊತ್ತದೆ."

## ೨೯

ಅಬ್ಬಾಸ್‌ಅಲಿ, ಅಪ್ಪಂಗಳದ ಅರಮನೆಯ ಸುತ್ತಲೂ ಪಹರೆ ಇಡುವುದು ಮೇಲು— ಎಂದು ಅರಸನಿಗೆ ಸಲಹೆ ಮಾಡಿದ. ಆ ಸಂಬಂಧದ ಆಜ್ಞೆಯನ್ನು ಕೃತಿಗಿಳಿಸಲು ಬಸವ ಉದ್ಯುಕ್ತನಾದ.

ಆದರೆ ಕಾರ್ಯ ಮಿಂಚಿತ್ತು. ಚೆನ್ನಬಸಪ್ಪನಾಗಲೀ ದೇವಮ್ಮಾಜಿಯಾಗಲೀ ಅರಮನೆ ಯಲ್ಲಿ ಇರಲಿಲ್ಲ. ಇಬ್ಬರು ಆಪ್ತ ಸೇವಕರನ್ನು ಸಂಗಡ ಕರೆದುಕೊಂಡು ಕುದುರೆಗಳನ್ನೇರಿ ಅವರು ಓಡಿಹೋಗಿದ್ದರು.

ಅದು ಸಂಭವಿಸಿದ್ದು ಹೀಗೆ :

ಅರಸನ ಭೇಟಿಯಿಂದ ಬೋಪಣ್ಣ ಮನೆಗೆ ಮರಳಿದನಷ್ಟೆ. ಆ ರಾತ್ರೆ ಚೆನ್ನಬಸಪ್ಪ ಅಲ್ಲಿಗೆ ಬಂದ.

"ದೊರೆಗೆ ನಿನ್ನ ಮೇಲೆ ಸಂಶಯ. ನೀನು ಹುಷಾರಾಗಿರಬೇಕು" ಎಂದ ಬೋಪಣ್ಣ.

"ನನ್ನನ್ನು ಹಿಡಿದು ಕೋಟೆಮನೆಯಲ್ಲಿ ಕೂಡಹಾಕಬಹುದು ಅಂತಿರಾ ?"

"ಹಾಗೂ ಮಾಡಬಹುದು. ತೋಫಿನ ಬಾಯಿಗಿಟ್ಟು ಸುಡಲೂಬಹುದು. ಯಾರು ಕಂಡ ?"

"ಒಳ್ಳೇದು. ಹಂಗಾರೆ ಸದ್ಯಕ್ಕೆ ಇದು ನಮ್ಮ—ನಿಮ್ಮ ಕಡೇ ಭೇಟಿ. ಇವತ್ತು ರಾತ್ರೆಯೇ ಮೈಸೂರು ಸೀಮೆಗೆ ಹೊರಟುಹೋಗತೇವೆ."

"ದುಡುಕಬೇಡ—ಅಂತಷ್ಟೇ ನಾ ಹೇಳೋದು."

"ಹೇಳೋಕೆ ಹೊಸದೇನೂ ಇಲ್ಲ, ಅಣ್ಣಿ. ಸರಿ. ಇಂಗ್ರೇಜಿ ದಂಡಿನ ಜತೆ ಬರತೀನಿ. ಆಗ ಕಾಣೋಣ."

"ಹೋಗಿ ಬಾ" ಎಂದ ಬೋಪಣ್ಣ.

ಅಪ್ಪಂಗಳವನ್ನು ಚೆನ್ನಬಸಪ್ಪ ತಲಪಿದ ಒಂದೆರಡು ಘಳಿಗೆಯಲ್ಲೇ, ನಾಲ್ಕು ಕುದುರೆ ಗಳು ಪೆರಿಯಾಪಟ್ಟಣದ ಕಡೆಗೆ ಹೊರಟುವು.

ಬೆಳಗ್ಗೆ ಅಪ್ಪಂಗಳಕ್ಕೆ ಬಂದ ರಾಜಭಟರಿಗೆ ಗಂಗಮ್ಮನೆಂದಳು :

"ನಮಗೆ ಒಂದೂ ತಿಳೀದು. ಅವರಿಲ್ಲ ಅನ್ನೋದು ಈಗಷ್ಟೇ ಗೊತ್ತಾಯ್ತು."

ಭಟರು ತಡವಿಲ್ಲದೆ ಮಡಕೇರಿಗೆ ಸುದ್ದಿ ತಲಪಿಸಿದರು.

ಚೆನ್ನಬಸಪ್ಪ ಪತ್ನಿಯೊಡನೆ ಇಂಗ್ಲೀಷರ ಸೀಮೆಗೇ ಓಡಿರಬೇಕೆಂಬ ಬಗೆಗೆ ಎಲ್ಲರದೂ

ಒಮ್ಮತವೇ. ಆದರೆ ಅದರು ಹಿಡಿದದ್ದು ಯಾವ ದಾರಿ ? ಅಪ್ಪಂಗಳಕ್ಕೆ ಹತ್ತಿರದ ಸಂಪಾಜೆ ಗಡಿಗೋ ? ಪೆರಿಯಾಪಟ್ಟಣಕ್ಕೊ ?

ಸಶಸ್ತ್ರ ಕುದುರೆ ಸವಾರರು ಎರಡು ದಿಕ್ಕುಗಳಿಗೂ ಧಾವಿಸಿದರು.

ಸಂಪಾಜೆಯ ಗಡಿಯತ್ತ ಅವರು ಬಂದಿರಲಿಲ್ಲ.

ಪೆರಿಯಾಪಟ್ಟಣದ ಕಡೆಯ ಉಕ್ಕಡದಲ್ಲಿ ಪಹರೆಯವರಿಬ್ಬರು ಅಸಾಮಾನ್ಯ ಗುರಿಕಾರನಾದ ಚನ್ನಬಸಪ್ಪನ ಗುಂಡಿಗೆ ಮಟ ಮಟ ಮಧ್ಯಾಹ್ನ ಬಲಿಯಾಗಿದ್ದರು. ಸಂಜೆ ಬಂದು ಸೇರಿದ ರಾಜಭಟರು ಆ ಶವಗಳನ್ನು ಕಂಡರು.

ಇದನ್ನು ತಿಳಿದ ಚಿಕವೀರರಾಜ ಕಿಡಿಕಿಡಿಯಾದ. ಈ ಪಲಾಯನದ ಹಿಂದೆ ಬೋಪಣ್ಣನ ಕೈವಾಡವಿರಬಹುದೇ ಎಂಬ ಸಂದೇಹ ಅವನಿಗೆ. ಆದರೆ, ಸಾಕಷ್ಟು ಆಧಾರಗಳಿಲ್ಲದೆ, ಬಹಿರಂಗವಾಗಿ ಅವನೇನನ್ನೂ ಆಡಲಾರ.

"ಇರಲಿ. ಇದನ್ನು ಸರಿಪಡಿಸುತ್ತೇನೆ" ಎಂದುಕೊಂಡ ಮನಸ್ಸಿನಲ್ಲೆ.

ದಿವಾನ ಲಕ್ಷ್ಮೀನಾರಾಯಣನನ್ನು ಬರಹೇಳಿ, ನಡೆದುದನ್ನು ತಿಳಿಸಿ, "ಮೈಸೂರಿನ ರೆಸಿಡೆಂಟನಿಗೆ ಒಂದು ಪತ್ರ ಬರೆಯಬೇಕಲ್ಲ" ಎಂದ.

ಲಕ್ಷ್ಮೀನಾರಾಯಣ ವಿನಂತಿ ಮಾಡಿದ:

"ಬೋಪಣ್ಣನವರನ್ನೂ ಒಂದು ಮಾತು ಕೇಳೋಣ—ಆಗದೆ ?"

"ಇದು ಚಿಲ್ಲರೆ ವಿಷಯ. ಇಷ್ಟಕ್ಕೆ ಇಬ್ಬರು ಬೇಕೆ ? ಇದೇನೂ ಸಲಹೆ ತಕ್ಕೊಳ್ಳುವಂಥಾ ಗಹನ ರಾಜಕಾರ್ಯ ಅಲ್ಲವಲ್ಲ ?"

"ತಮ್ಮ ಚಿತ್ತ."

ಪತ್ರ ಸಿದ್ಧವಾಯಿತು. ಒಕ್ಕಣೆಯಲ್ಲಿ ವಿನಯವಿತ್ತು.

"ನಮ್ಮ ತಂಗಿ ದೇವಮ್ಮಾಜಿ ಹಾಗೂ ಆಕೆಯ ಗಂಡ ಚನ್ನಬಸಪ್ಪ ನಮ್ಮ ವಿರುದ್ಧವಾಗಿ ವರ್ತಿಸಿ ತಮ್ಮ ಸೀಮೆಗೆ ಬಂದಿದ್ದಾರೆ. ಅತಃ ಪ್ರಾಕು ನಡೆದುಕೊಂಡು ಬಂದಿರುವ ನಮ್ಮ ನಿಮ್ಮ ಸಖ್ಯವನ್ನು ಲಕ್ಷ್ಯದಲ್ಲಿಟ್ಟು ಅವರಿಬ್ಬರನ್ನೂ ಯಾವ ಕಾರಣದಿಂದಲೂ ತಡಮಾಡದೆ ನಮ್ಮ ರಾಜಧಾನಿಗೆ ಸಶಸ್ತ್ರ ಕಾವಲಿನಲ್ಲಿ ರವಾನೆ ಮಾಡಬೇಕಾಗಿ ಕೋರುತ್ತೇವೆ. ಮಹಾದೇವನ ಅನುಗ್ರಹದಿಂದ ನಾವೆಲ್ಲರೂ ಕ್ಷೇಮ. ನಮ್ಮ ದೋಸ್ತರಾದ ಖಾವಂದರ ಕ್ಷೇಮಸಮಾಚಾರಕ್ಕೆ ಆಗಾಗ್ಗೆ ಬರೆಸುತ್ತಾ ಇರಬೇಕಾಗಿ ನಮ್ಮ ವಿನಂತಿ."

ಸಹಿ ಮೊಹರಿನ ಕೆಳಗೆ ವಿಶದವಾಗಿ ಬರೆಯಲಾಗಿತ್ತು :

'ಕೊಡಗು ಸಿಂಹಾಸನಾಧೀಶ್ವರ ಹಾಲೇರಿ ಸಂಸ್ಥಾನದ ಚಿಕವೀರರಾಜೇಂದ್ರ ಒಡೆಯರ್.'

ಅರಸ ಕುದುರೆ ಸವಾರರಾದ ಇಬ್ಬರು ಓಲೆಕಾರರೊಡನೆ ಪತ್ರವನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟ.

## ೩೦

ಶ್ರೀರಂಗಪಟ್ಟಣವನ್ನು ತಲಪಿದ ಚನ್ನಬಸಪ್ಪ, ಕಾಸ್ಸಾಮೇಜರನೆದುರು, "ಶರಣಾರ್ಥಿಗಳಾಗಿ ಬಂದಿದೇವೆ. ಕೈಹಿಡಿದು ಉದ್ಧಾರ ಮಾಡಬೇಕು" ಎಂದು ಹಿಂದೂಸ್ಥಾನಿಯಲ್ಲಿ ಪ್ರಾರ್ಥಿಸಿದ.

ರೋಗಿ ಬಯಸಿದ್ದೇ ಇಂಥ ಹಾಲನ್ನವನ್ನು. ಅಲ್ಲದೆ, ದೇವಮ್ಮಾಜಿಯೂ ಆಕೆಯ

ಗಂಡನೂ ಕೊಡಗನ್ನು ಬಿಟ್ಟು ಬಂದರಾದೀತೆಂದು ಗುಟ್ಟಾಗಿ ಮೊದಲು ಸೂಚಿಸಿದ್ದವರೇ ಆಂಗ್ಲರು. ರೆಸಿಡೆಂಟನಿಗೆ ಪರಮಾನಂದವಾಯಿತು. ಅತಿಥಿಗಳ ಬಿಡಾರಕ್ಕಾಗಿ ಎಲ್ಲ ಅನುಕೂಲತೆಗಳೂ ಇದ್ದ ಮನೆಯೊಂದನ್ನು ಆತ ಒದಗಿಸಿಕೊಟ್ಟ.

ಜತೆಗೆ ಭರವಸೆಯನ್ನೂ ಇತ್ತ :

"ನೀವೇನೂ ಚಿಂತಿಸಬೇಡಿ. ಚಿಕವೀರರಾಜನು ದುಷ್ಟನೂ ಅನರ್ಹನೂ ಅಂಬೋದಕ್ಕೆ ಒಳ್ಳೆಯವರಾದ ನೀವು ಓಡಿಬಂದಿರುವುದೇ ಸಾಕ್ಷಿ. ಬೇಗನೆ ಅವನನ್ನು ಗಾದಿಯಿಂದ ಇಳಿಸುತ್ತೇವೆ."

ಚೆನ್ನಬಸಪ್ಪ ಯಾಚಿಸಿದ :

"ಕೊಡಗಿನ ಸಿಂಹಾಸನಕ್ಕೆ ನಮ್ಮ ಹೆಂಡತಿ ಹಕ್ಕುದಾರಳು ಅಂಬುವದನ್ನು ಖಾವಂವರು ಒಪ್ಪಬೇಕು."

"ಹ್ಞ–ಹ್ಞ. ಸಕಾಲದಲ್ಲಿ ಯೋಗ್ಯವಾದ್ದನ್ನೇ ಮಾಡುತ್ತೇವೆ. ಮದರಾಸ್ ಗವರ್ನರಿಗೆ ಬರೆಯುತ್ತೇವೆ."

ಚಿಕವೀರರಾಜನ ಪತ್ರ ಕಾಸ್ಸಾಮೇಜರನ ಕೈಸೇರಿತು. ಅದನ್ನು ಆತ ಮದರಾಸಿಗೆ ಕಳುಹಿದ. ಆಗ ಸರ್ ಫ್ರೆಡರಿಕ್ ಆದಮ್ ಮದರಾಸಿನ ಗವರ್ನರ್. ಆತ ಚಿಕವೀರ ರಾಜನಿಗೆ ಉತ್ತರ ಬರೆದ. ಭಾವೀ ಘಟನೆಗಳಿಗೆ ಮುನ್ಸೂಚಿಯಾಗಿತ್ತು ಆ ದೀರ್ಘ ಓಲೆ.

ದಕ್ಷ ರಾಜ್ಯಾಡಳಿತದ ಸೂತ್ರಗಳನ್ನು ವಿವರಿಸಿ, ಅವುಗಳಿಗೆ ಅನುಗುಣವಾಗಿ ಚಿಕವೀರ ರಾಜ ವರ್ತಿಸಬೇಕೆಂದು ಅದರಲ್ಲಿ ಕೇಳಲಾಗಿತ್ತು. ಈಸ್ಟ್ ಇಂಡಿಯಾ ಕಂಪೆನಿ ಸರಕಾರ ಹಿಂದೆಯೇ ಆಜ್ಞಾಪಿಸಿದ್ದಂತೆ, ಕೊಡಗಿನಲ್ಲಾಗುವ ಪ್ರತಿಯೊಂದು ಮರಣದಂಡನೆಯ ಬಗೆಗೂ ಅರಸ ಕಂಪನಿ ಸರಕಾರಕ್ಕೆ ವರದಿ ಕೊಡಬೇಕು ; ಕಂಪನಿ ಸರಕಾರದ ಅಪೇಕ್ಷೆಗೆ ವಿರುದ್ಧವಾಗಿ ರಾಜ ವರ್ತಿಸಬಾರದು—ಎಂದು ಆ ಓಲೆಯಲ್ಲಿ ತಿಳಿಸಲಾಗಿತ್ತು. ಗವರ್ನರನ ಆದೇಶದಂತೆ ಕಾಸ್ಸಾಮೇಜರ್ ರಾಜನೊಡನೆ ಮುಖತಃ ಮಾತನಾಡುವುದಕ್ಕಾಗಿ ಮಡಕೇರಿಗೆ ಬರುವುದಾಗಿ ಅದರಲ್ಲಿ ಸೂಚಿಸಲಾಗಿತ್ತು.

ಆ ಓಲೆಯ ದಿನಾಂಕ : ಸಾವಿರದ ಎಂಟುನೂರ ಮೂವತ್ತಮೂರನೆಯ ಇಸವಿ ಜನವರಿ ಹದಿನೆಂಟನೆಯ ತಾರೀಖು.

ಆ ತಿಂಗಳ ಕೊನೆಯ ವಾರದಲ್ಲಿ ಕಾಸ್ಸಾಮೇಜರ್ ಮಡಕೇರಿಗೆ ಆಗಮಿಸಿದ. ಆಂಗ್ಲ ಮಿತ್ರರ ಆತಿಥ್ಯಕ್ಕೆಂದೇ ದೊಡ್ಡವೀರರಾಜೇಂದ್ರ ಕಟ್ಟಿಸಿದ್ದ ಭವ್ಯ ಅತಿಥಿಗೃಹದಲ್ಲಿ ಆತನ ಬಿಡಾರಕ್ಕೆ ಚಿಕವೀರರಾಜೇಂದ್ರ ಏರ್ಪಾಟು ಮಾಡಿದ.

ಆ ವೇಳೆಯಲ್ಲಿ ಹಲವು ಚಟುವಟಿಕೆಗಳ ಬೀಡಾಗಿತ್ತು ಮಡಕೇರಿ.

ಮುಮ್ಮಡಿ ಕೃಷ್ಣರಾಜನ ಅಂತರಂಗದ ಬಂಟನೊಬ್ಬ—ವೆಂಕೋಜಿ—ರಹಸ್ಯ ರಾಜ ಕಾರ್ಯದ ಮೇಲೆ ಚಿಕವೀರರಾಜನನ್ನು ಕಾಣಲು ಬಂದಿದ್ದ. ಮೈಸೂರು ರಾಜ್ಯವನ್ನು ಮರಳಿ ಪಡೆಯುವ ಯತ್ನದಲ್ಲಿ ಕೊಡಗಿನ ದೊರೆಯ ನೆರವನ್ನು ಒಡೆಯ ಯಾಚಿಸಿದ್ದ.

ಚಿಕವೀರರಾಜ ಕೇಳಿದ :

"ಇಂಗ್ರೇಜಿಯವರ ಹತ್ತಿರ ನಮ್ಮ ಮಾತು ನಡೀತದೇನು ? ಅವರಿಗರ್ಥವಾಗೋದು ಮದ್ದುಗುಂಡಿನ ಭಾಷೆ ಮಾತ್ರ. ನಾಳೆ ನಮಗೂ ಅವರಿಗೂ ಯುದ್ಧವಾದರೆ ಕೃಷ್ಣರಾಜರ ಬೆಂಬಲ ನಮಗೆ ಸಿಕ್ಕಾತೇನು ?"

ವೆಂಕೋಜಿಯೆಂದ :

"ಓ. ಗುಪ್ತವಾಗಿ ಶಸ್ತ್ರಾಸ್ತ್ರಗಳನ್ನೂ ಸೈನಿಕರನ್ನೂ ಒಡೆಯರು ಕೊಡುತಾರೆ."

"ಹಾಗಾದರೆ ಸಂತೋಷ."

ಅದೇ ಸಮಯದಲ್ಲಿ ಮೈಸೂರಿನ ವರ್ತಕನೊಬ್ಬ ರಾಜನ ದರ್ಶನಕ್ಕೆ ಬಂದ. ಆತನ ಹೆಸರು ನೂನ್‌ಲಾಲ್ ಬಾರ್ತಿ.

ಚಿಕವೀರರಾಜನೆಂದ :

"ಚನ್ನಬಸಪ್ಪನನ್ನೂ ಅವನ ಹೆಂಡತಿಯನ್ನೂ ಹೆಡೆ ಮುಡಿ ಕಟ್ಟಿ ಇಲ್ಲಿಗೆ ತರಬೇಕು ಅಂಬೋದು ನಮ್ಮ ಇಚ್ಛೆ. ನಮ್ಮ ಭಟರು ಬರುತ್ತಾರೆ. ನೀವು ಸಹಾಯ ಮಾಡತೀರಾ ?"

ಆತ ಉತ್ತರಿಸಿದ :

"ನನ್ನ ಕೈಲಾದದ್ದು ಮಾಡೇನು, ಮಹಾಸ್ವಾಮಿ."

"ಉತ್ತರ ಹಿಂದೂಸ್ಥಾನವನ್ನು ನೀವು ಬಲ್ಲಿರಾ ?"

"ನಾನು ಆ ಕಡೆಯವನೇ."

"ಸಿಕ್ಖರ ಅರಸರಾದ ರಣಜಿತ್‌ಸಿಂಗರು ಇಂಗ್ರೇಜಿಯವರ ಕಡುವೈರಿ ಅಂತ ಕೇಳಿದೇವೆ."

"ಅದು ನಿಜ."

"ಅವರ ಸಖ್ಯ ಬೆಳೆಸಬೇಕು ಅಂತ ನಮಗೆ ಅಪೇಕ್ಷೆಯಾಗಿದೆ. ನಮ್ಮ ರಾಯಭಾರಿಯಾಗಿ ಅಲ್ಲಿಗೆ ಹೋಗತೀರಾ ?"

ಬಾರ್ತಿಯೆಂದ :

"ಹೋಗಬಲ್ಲೆ. ಆದರೆ ನನಗಿಂತ ಹೆಚ್ಚು ಸುಲಭವಾಗಿ ಈ ಕೆಲಸ ಮಾಡುವಾತ ಒಬ್ಬ ಇದಾನೆ. ಲಾಹೋರ್‌ಸಿಂಗ್ ಅಂತ. ಸಿಕ್ಖ."

"ಈಗ ಅವನೆಲ್ಲಿ ಸಿಗಬೇಕು ?"

"ಅವನೂ ವ್ಯಾಪಾರಿಯೇ. ವೀರರಾಜಪೇಟೆಯಲ್ಲಿ ಇದಾನೆ. ಕರೆಸಬಹುದು."

...ಮಾರನೆಯ ದಿನವೇ ಲಾಹೋರ್‌ಸಿಂಗ್ ರಾಜಾಜ್ಞೆಯಂತೆ ಮಡಕೇರಿಯನ್ನು ತಲಪಿದ. ಲಾಹೋರಿನವನಾದ ಕಾರಣ ಆ ಊರಿನ ಹೆಸರಿಂದಲೇ ಪ್ರಖ್ಯಾತನಾದವನು ಆತ. ಅರಸನ ಅಪೇಕ್ಷೆಯನ್ನು ತಿಳಿದಾಗ ಅವನೆಂದ :

"ಲಾಹೋರ್ ದೂರ. ಆದರೂ ಹೋಗಿಬರತೇನೆ. ಕೆಲಸ ಬಾಳ ಜವಾಬ್ದಾರೀದು."

"ನಮಗೆ ಬಾರ್ತಿಯವರು ಮಾಡುವ ಸಹಾಯಕ್ಕೆ ಪ್ರತಿಯಾಗಿ, ಕೊಡಗಿಗೆ ಬೇಕಾಗುವ ಸಾಮಾನನ್ನೆಲ್ಲ ಮುಂದೆ ಅವರಿಂದ ಕೊಳ್ಳಬೇಕೆಂದು ಮಾಡಿದೇವೆ. ಹಾಗೆಯೇ, ನಿಮಗೆ ಪ್ರತಿಫಲವಾಗಿ, ಇಲ್ಲಿನ ಕರಿಮೆಣಸನ್ನು ಹೊರಕ್ಕೆ ಒಯ್ದು ಮಾರುವ ಗುತ್ತಿಗೆಯನ್ನು ಕೊಡತೇವೆ" ಎಂದ ಚಿಕವೀರರಾಜೇಂದ್ರ.

ಆ ಆಶ್ವಾಸನೆಯಿಂದ ಬಾರ್ತಿಯೂ ಲಾಹೋರ್‌ಸಿಂಗನೂ ತೃಪ್ತರಾದಂತೆ ಕಂಡಿತು...

ಬಿದನೂರಿನ ಪಾಳೆಯಗಾರರಲ್ಲೊಬ್ಬ—ಸೂರಪ್ಪ—ಆಂಗ್ಲರಿಗೆ ವಿರೋಧಿಯಾಗಿದ್ದ. ಆಂಗ್ಲ ಆಡಳಿತಗಾರರಿಗೆ ಅವನು ಒಂದೇ ಸಮನೆ ಕಿರುಕುಳ ಕೊಡುತ್ತಿದ್ದ. ಸಾಕಷ್ಟು ನೆರವು ದೊರೆತರೆ ಆತ ಬಂಡಾಯವೇಳುವುದೂ ಸಾಧ್ಯವಿತ್ತು.

ಅವನೊಡನೆ ಸಖ್ಯ ಬೆಳೆಸುವ ಹೊಣೆಯನ್ನು ಆಪ್ತನಾದ ಬಸವನಿಗೆ ರಾಜ ಒಪ್ಪಿಸಿದ.

ಇತ್ತ ಅತಿಥಿಗೃಹದಲ್ಲಿ ಕಾಸ್ಸಾಮೇಜರ್, ಬೋಪಣ್ಣನೊಡನೆ ಆಪ್ತಾಲೋಚನೆ ನಡೆಸಿದ.

ಕೊಡಗಿನ ಸೇನಾಬಲವನ್ನು ಕುರಿತು ಮಾಹಿತಿ ಸಂಗ್ರಹಿಸಿದ.

ಅರಸನೊಡನೆ ಕಾಸ್ಸಾಮೇಜರನ ಭೇಟಿ ಈ ಹಿನ್ನೆಲೆಯಲ್ಲಿ ನಡೆಯಿತು. ಹಿಂದೂಸ್ಥಾನಿಯಲ್ಲಿ ಆದ ಆ ಮಾತುಕತೆಯಲ್ಲಿ ರಾಜನೈತಿಕ ಕಟ್ಟುಗಳು ಸಡಿಲಿದುವು. ಅದುಮಿ ಹಿಡಿದ ಭಾವನೆಗಳು ಹೊರಕ್ಕೆ ಸಿಡಿದುವು.

ಅರಸ :

"ಇಷ್ಟು ದೂರ ಬರೋದಕ್ಕೆ ಬಹಳ ತೊಂದರೆ ತಗೊಂಡಿರಿ !"

ಕಾಸ್ಸಾಮೇಜರ್ :

"ಸುಖದುಃಖ ವಿಚಾರಿಸಿಕೊಂಡು ಹೋಗೋಣ ಅಂತ ಬಂದೆವು."

"ಸಾಧಾರಣ ಸಂವತ್ಸರದಲ್ಲಿ ಸ್ವತಂತ್ರ ರಾಜ್ಯವಾದ ಕೊಡಗಿನ ದೊರೆಗೂ ಕುಂಪನಿಯವರಿಗೂ ಒಡಂಬಡಿಕೆಯಾಗಿ ಭಾಷಾಪತ್ರಿಕೆ ಬರೆದರಲ್ಲಾ—ಅದರಲ್ಲಿ ಸುಖದುಃಖ ವಿಚಾರಿಸಿಕೊಂಡು ಹೋಗೋದೂ ಒಂದು ಕಲಮೇನೋ ?"

"ಮಹಾಸ್ವಾಮಿ ಹೇಳುತಿರೋದು ಹಳೆಯ ಮಾತು. ಕ್ರಿಸ್ತಶಕ ೧೮೩೦ನೇ ಇಸವೀದ್ದು. ಆದಾದ ಮೇಲೆ ಕಾವೇರಿಯಲ್ಲಿ ಬಹಳ ನೀರು ಹರಿದಿದೆ."

"ಕಾವೇರಿಯಲ್ಲಿ ನೀರು ಯಾವಾಗಲೂ ಹರೀತಿರತದೆ. ನಿಮಗೆ ಗೊತ್ತಿಲ್ಲವೇನೋ, ಪಾಪ !"

"ಇದೊಂದು ಹೇಳೋ ರೀತಿ. ಕಾಲ ಬದಲಾಗಿದೆ ಅಂತ ಅರ್ಥ."

"ಇಂಥ ನಿರರ್ಥಕ ಸಂಭಾಷಣೆ ನಮಗಿಷ್ಟವಿಲ್ಲ. ಸ್ಪಷ್ಟವಾಗಿ ಕೇಳತೀವಿ. ನನ್ನ ತಂಗಿಯನ್ನೂ ಭಾವನನ್ನೂ ಇನ್ನೂ ಶ್ರೀರಂಗಪಟ್ಟಣದಲ್ಲೇ ಯಾಕೆ ಮಡಗಿಕೊಂಡಿದೀರಿ ?"

"ರಕ್ಷಣೆ ಕೇಳಿ ಬಂದವರಿಗೆ ಆಶ್ರಯ ಕೊಡುವುದು ನಮ್ಮ ಧರ್ಮ."

"ಅದನ್ನು ಕಟ್ಟಿಡಿ. ನಮ್ಮ ವಿರುದ್ಧ ಅವರನ್ನು ಉಪಯೋಗಿಸಬಹುದೂಂತ ಯೋಚಿಸಿದೀರೋ ?"

"ನೀವು ಯುವಕರು. ನಿಮಗೆ ರಾಜಕಾರಣ ತಿಳಿಯದು. ಕೊಡಗನ್ನು ಪೆಟ್ಟಿಗೆಯಂ ಹಾಗೆ ಮುಚ್ಚಿಡುವುದು ಸರಿಯಲ್ಲ."

"ನಮ್ಮ ಮನೇನ ಭದ್ರಪಡಿಸಿಕೊಳ್ಳೋದಕ್ಕೆ ಇನ್ನೊಬ್ಬರ ಪರವಾನಿಗಿ ಬೇಕೇನು ?"

"ಹ್ಞ ! ಏನು ಮಾಡಬೇಕಾದರೂ ನಮ್ಮ ಪರವಾನಿಗಿ ಬೇಕು."

"ಸ್ವತಂತ್ರ ರಾಜ್ಯದ ಅರಸನ ಜತೆ ನೀವು ಮಾತಾಡತಾ ಇದೀರಿ, ನೆನಪಿರಲಿ !"

"ಕೊಡಗು ಸ್ವತಂತ್ರ ರಾಜ್ಯ ಅಲ್ಲ. ಇದು ಟೀಪೂನ ಕೆಳಗಿತ್ತು. ಅವನನ್ನು ನಾವು ಸೋಲಿಸಿದೆವು. ಈಗ ನೀವು ನಮ್ಮ ಕೆಳಗೆ ಬಂದಿದೀರಿ."

"ಟೀಪೂಗೆ ನಾವು ಆಶ್ರಿತರಾಗಿದ್ದೆವು ಅನ್ನೋದೇ ಸುಳ್ಳು."

"ಸುಳ್ಳು ? ಕುಂಪನಿ ಸರಕಾರ ಯಾವತ್ತೂ ಸುಳ್ಳಾಡುವುದಿಲ್ಲ. ನೀವು ನಮಗೆ ಅಪಮಾನ ಮಾಡತಿದೀರಿ."

"ಹಾಗಾದರೆ ನೀವು ಇನ್ನು ಗಾಡಿಬಿಡಬಹುದಲ್ಲವೇ ?"

"ಏನೆಂದಿರಿ ? ಗಾಡಿ ? ನಾವು ಮೇನೆಯಲ್ಲಿ ಬಂದೆವು. ಮೇನೆಯಲ್ಲೇ ಹೋಗುತೇವೆ."

ಚಿಕವೀರರಾಜ ನಕ್ಕು ನುಡಿದ :

"ಪಾಪ, ನಿಮಗೆ ವಯಸ್ಸಾಗಿದೆ. ಮೇನೆಯಲ್ಲೇ ಹೋಗಿ."

ಅಷ್ಟು ಹೇಳಿ, ಒಮ್ಮೆಲೆ ಧ್ವನಿ ಏರಿಸಿ, ಆತ ನುಡಿದ :

"ಹೋದ ತಕ್ಷಣ ಚನ್ನಬಸಪ್ಪನನ್ನೂ ಅವನ ಹೆಂಡತಿಯನ್ನೂ ಕಳಿಸಿಕೊಡಿ."

ಎದ್ದು ನಿಂತ ಕಾಸ್ಸಾಮೇಜರನೆಂದ :

"ಇಲ್ಲ, ಸರ್ವಥಾ ಇಲ್ಲ."

ಸಿಂಹಾಸನದ ಹಸ್ತವನ್ನು ಮುಷ್ಟಿಯಿಂದ ಗುದ್ದಿ ಅರಸನೆಂದ :

"ಇದರ ಪರಿಣಾಮ ನೆಟ್ಟಗಾಗದು !"

"ನಾವು ನೆಟ್ಟಗೆ ಮಾಡತೇವೆ."

"ಆಗಲೇ ಅಂದೆ ಹೊರಡಿ ಅಂತ !"

ಕ್ರುದ್ಧನಾದ ಕಾಸ್ಸಾಮೇಜರ್, ರಾಜನಿಗೆ ವಂದಿಸದೆಯೇ ಅಲ್ಲಿಂದ ಹೊರಬಿದ್ದ.

ಮುಂದೆ ನಿಮಿಷವೂ ಮಡಕೇರಿಯಲ್ಲಿ ನಿಲ್ಲದೆ, ಆತ ಶ್ರೀರಂಗಪಟ್ಟಣಕ್ಕೆ ಪಯಣ ಬೆಳಸಿದ.

## ೩೧

ಆವರ್ತಿಯಲ್ಲಿ ತನ್ನ ಕುಟೀರದೆದುರು ಅಂಗಳದಲ್ಲಿ ಅಪರಂಪಾರಸ್ವಾಮಿ ಸೌದೆಯೊಡೆಯುತ್ತಲಿದ್ದ. ಕೊಡಲಿ ಎತ್ತರಕ್ಕೆ ಹಾರಿ ಭರದಿಂದ ಕೆಳಕ್ಕೆ ಬಂದು ದಿಮ್ಮಿಯಲ್ಲಿನ ಸೀಳು ಗುರುತನ್ನು ನೀಳಗೊಳಿಸುತ್ತಿತ್ತು. ಪುನಃ ಲೀಲಾಜಾಲವಾಗಿ ಸೀಳಿನಿಂದೆದ್ದು, ಮೇಲಕ್ಕೆ ನೆಗೆದು ಕೆಳಬಂದು, ಸರಿಯಾದ ಜಾಗದಲ್ಲೇ ದಿಮ್ಮಿಯನ್ನು ಹೊಗುತ್ತಿತ್ತು.

ಕಾವಿಯುಡುಗೆಯ ಕೆಲ ಜಂಗಮರೂ ಇತರ ಕೆಲ ಭಕ್ತಾದಿಗಳೂ ಅರ್ಧವೃತ್ತಾಕಾರವಾಗಿ, ದೂರದಲ್ಲಿ, ಬೆರಗಾಗಿ ನಿಂತಿದ್ದರು.

ಮತ್ತೂ ನಾಲ್ಕೇಟು ಬಿದ್ದ ಬಳಿಕ ಮನುಷ್ಯಗಾತ್ರದ ದಿಮ್ಮಿ ಎರಡು ಹೋಳಾಯಿತು.

ನೆರೆದವರಿಂದ ಮೆಚ್ಚುಗೆಯ ಉದ್ಗಾರ ಹೊರಟಿತು.

ಹಿಂದಿನಿಂದೊಬ್ಬನು ನಡೆದುಬಂದು ತಮ್ಮನ್ನು ಸೇರಿಕೊಂಡುದನ್ನು ಅವರು ಯಾರೂ ಕಾಣರು. ತಾರಕ ಸ್ವರದಲ್ಲಿ ಆ ವ್ಯಕ್ತಿಯೆಂದಿತು :

"ಕಾಯಕವೇ ಕೈಲಾಸ ಕಾಣಿರೋ !"

ಕೊಡಲಿಯನ್ನು ಕೆಳಕ್ಕೆಸೆದು, ತೋಳುಗಳನ್ನು ಅಗಲವಾಗಿ ಚಾಚಿ, ಅಪರಂಪಾರನೆಂದ:

"ಬಂದೆಯಾ ? ಬಾ, ಶಿವ ! ಬನ್ನಿ ಸಿದ್ಧಲಿಂಗ !"

ವ್ಯಕ್ತಿ, ಸಿದ್ಧಲಿಂಗ. ಗುಂಪು ಸೀಳಾಯಿತು. ಸಿದ್ಧಲಿಂಗ ಮುಂದೆ ಬಂದು ಅಪರಂಪಾರನನ್ನು ತಬ್ಬಿಕೊಂಡ.

"ಶರಣು ! ಸ್ವಾಮಿ ಅಪರಂಪಾರ, ಶರಣು !"

ಮಿಲನದ ಉದ್ವೇಗವಿಳಿದಾಗ ಸಿದ್ಧಲಿಂಗ ಕೇಳಿದ :

"ಇದೇನು ನಡೆಸಿದ್ದಿರಿ ಸ್ವಾಮಿಯೋರು ?"

ಅಪರಂಪಾರ ನಸುನಕ್ಕು ನುಡಿದ :

"ಇದನ್ನು ಯಾರು ಒಡೀಬಲ್ಲಿರಿ ಅಂತ ಕೇಳಿದೆವು. ಒಬ್ಬರಾದರೂ ಬೇಡವೆ ! ನೋಡಿ, ಶಿವ ಒಡೀತಾನೆ, ಅಂದೆವು. ಕೊಡಲಿ ಕೈಗೆತ್ತಿಕೊಂಡೆವು."

"ಭಳಿರೆ !"

"ಮೊದಲ ಸಲ ಎತ್ತಿದಾಗಲೇ ದೂರದಿಂದ ಬರುತ್ತಿದ್ದ ನಿಮ್ಮನ್ನು ಕಂಡೆವು. ಮತ್ತೆ ಪ್ರತಿ ಸಲವೂ ಕಣ್ಣಿಗೆ ಬಿದ್ದಿರಿ. ಬಾಹುಗಳಿಗೆ ಬಲ ಬಂತು. ಮರದ ದಿಮ್ಮಿ ಹೋಳಾಯಿತು !"

ಸ್ವಾಮಿಯೊಡನೆ ಅಪರಿಚಿತ ಜಂಗಮನ ಸಮಾಗಮನವನ್ನು ನೋಡುತ್ತ ಜನ ನಿಂತಿದ್ದರು. ಅವರನ್ನು ಉದ್ದೇಶಿಸಿ ಅಪರಂಪಾರನೆಂದ :

"ಅಯ್ಯನವರು ನಂಜರಾಜಪಟ್ಟಣದಿಂದ ಬಂದಿದಾರೆ. ಇವರು ಶಿವಾಚಾರ್ಯಸ್ವಾಮಿಗಳ ಶಿಷ್ಯರು."

ಅಲ್ಲಿದ್ದವರೆಲ್ಲ ಸಿದ್ಧಲಿಂಗನಿಗೆ ಬಾಗಿ ನಮಿಸುತ್ತ "ಶರಣು ! ಶರಣು !" ಎಂದರು.

ಸಿದ್ಧಲಿಂಗ ಉತ್ತರಿಸಿದ :

"ಹ್ಞ. ಶರಣ್ರಪಾ."

ಅಪರಂಪಾರನೆಂದ :

"ಒಳಗೆ ಬನ್ನಿ, ಅಯ್ಯನವರೇ."

...ಅಪರಂಪಾರನ ಖ್ಯಾತಿ ಶಿವಾಚಾರ್ಯರನ್ನು ಮುಟ್ಟಿತ್ತು. ಆತ ಅವರ್ತಿಯಲ್ಲಿರುವನೆಂಬ ಸುದ್ದಿಯೂ ಅವರ ಕಿವಿಗೆ ಬಿತ್ತು. ಶಿಷ್ಯ ಸಿದ್ಧಲಿಂಗನಿಗೆ, "ಹೋಗಿ ನೋಡಿಕೊಂಡು ಬಾ" ಎಂದರು.

ಅಪರಂಪಾರನೆಂದ :

"ಒಂದು ಪ್ರಶ್ನೆ ಕೇಳತೇವೆ. ಲೌಕಿಕ ಎನಬೇಡಿ. ನಂಜರಾಜಪಟ್ಣದಲ್ಲಿ ಸ್ವಾಮಿಗಳು, ಇನ್ನುಳಿದ ನಮ್ಮ ಕಳ್ಳುಬಳ್ಳಿ, ಎಲ್ಲಾ ಕ್ಷೇಮ ?"

"ಓ ಹೋ."

ಸ್ವರ ತಗ್ಗಿಸಿ, ಇದು ಬೇರೆ ಅಧ್ಯಾಯ ಎನ್ನುವಂತೆ ಸಿದ್ಧಲಿಂಗ ಆರಂಭಿಸಿದ :

"ಸ್ವಾಮಿಗಳು ಒಂದು ಮುಖ್ಯ ಸಂಗತಿ ನಿಮಗೆ ತಿಳಿಸಬೇಕೂಂತ ನನ್ನನ್ನು ಕಳಿಸಿದಾರೆ."

"ಹೌದೆ ? ಏನದು ?"

"ಇಂಗ್ರೇಜಿಯವರು ಕೊಡಗಿನ ಮೇಲೆ ದಂಡೆತ್ತಿ ಬರೋ ಸೂಚನೆಗಳವೆ. ಚನ್ನಬಸಪ್ಪದೇವಮ್ಮಾಜಿ ಶ್ರೀರಂಗಪಟ್ಟಣಕ್ಕೆ ಓಡಿಹೋಗಿದಾರೆ. ದೇಶ ಯುದ್ಧಕ್ಕೆ ಅಣಿಯಾಗತಾ ಅದೆ."

ಅವನತಶಿರನಾಗಿ ಅಪರಂಪಾರ ಕುಳಿತ. ಅವನ ಮನಸ್ಸು ಚಿಂತಿಸಿತು :

ಕಾಲಕ್ರಮೇಣ ಈ ಸುದ್ದಿ ತನಗೆ ಗೊತ್ತಾಗಿಯೇ ಆಗುತ್ತಿತ್ತು. ಈಗಲೇ ತಿಳಿಸುವಂತೆ ಸಿದ್ಧಲಿಂಗನನ್ನು ಶಿವಾಚಾರ್ಯ ಸ್ವಾಮಿಗಳು ಅಟ್ಟಿದ ಉದ್ದೇಶವೇನು ? ತನ್ನಿಂದ ಅವರೇನನ್ನು ಅಪೇಕ್ಷಿಸುತಾರೆ ?

"ಸ್ವಾಮಿಗಳು ಇನ್ನೇನಾದರೂ ಅಂದರೆ ?"

"ಹ್ಞ. ಇಂಗ್ರೇಜರು ಗೆದ್ದರೆ ಹಾಲೇರಿ ವಂಶದ ಅವಸಾನವಾಗತದೆ ; ಸ್ವಾತಂತ್ರ್ಯ ನಷ್ಟವಾಗತದೆ; ಧರ್ಮಗ್ಲಾನಿಯಾಗತದೆ."

"ಅದಕ್ಕೆ ?"

"ಇಂಗ್ರೇಜರ ವಿರುದ್ಧ ಜನರನ್ನು ನಾವು ಹುರಿದುಂಬಿಸಬೇಕು—ಅಂದಿದಾರೆ."

"ಇದು ಜಂಗಮರು ಮಾಡುವ ಕೆಲಸವಾ ?"

"ಜಂಗಮರಿನ್ನು ವೀರ ಜಂಗಮರಾಗಬೇಕು—ಅನ್ನುತಾರೆ ಗುರುಗಳು."

ಒಂದು ಕ್ಷಣದ ಮೌನದ ಬಳಿಕ ಅಪರಂಪಾರನೆಂದ :

"ಸರಿ. ಅವರ ಅಪೇಕ್ಷೆ ಅಪ್ಪಣೆಗೆ ಸಮಾನ."

"ನಾವು ಮೈಸೂರಲ್ಲಿ ಇಂಗ್ರೇಜಿ ದಂಡಿನ ಹತ್ತಿರ ಇದ್ದರೆ ಹೆಚ್ಚಿನ ವಿಷಯ ತಿಳೀ ಬಹುದು. ನಾವು ಅಂದರೆ, ನಾನು ಮತ್ತು ನೀವು. ಇನ್ನು ಮುಂದೆ ನಾನು ನಿಮ್ಮನ್ನು ಬಿಟ್ಟಿರತಕ್ಕದ್ದಲ್ಲ ಅಂತ ಗುರುಗಳ ಆಜ್ಞೆಯಾಗಿದೆ.

"ನನ್ನ ಮಟ್ಟಿಗೆ ಇದು ಅನುಗ್ರಹ. ಒಬ್ಬನಿದ್ದೆ. ಇಬ್ಬರಾದೆವು."

"ಇಬ್ಬರು ? ಹೊರಗೆ ನೋಡಿದೆನಲ್ಲಪ್ಪ ಅಷ್ಟೊಂದು ಜನರನ್ನ ? ಎಪ್ಪತ್ತೆ—ಎಂಬತ್ತೆ ?"

"ಅದು ಶಿಷ್ಯಗಣ."

"ಓಹೋ. ನಾವು ಗಣಾಚಾರ್ಯರು ಅನ್ನಿ. ಶಿವ ಶಿವ ಶಿವ !"

## ೩೨

ಮದರಾಸಿನ ಗವರ್ನರನಿಗೂ ಕಲಕತ್ತೆಯಲ್ಲಿದ್ದ ಗವರ್ನರ್ ಜನರಲನಿಗೂ ಕಾಸ್ಸಾ ಮೇಜರನ ವರದಿ ಕಂಡು ಸಮಾಧಾನವೆನಿಸಿತು.

ಅಗ್ನಿ ಸಿದ್ಧವಾಗಿತ್ತು. ಕಬ್ಬಿಣದ ಕೊರಡನ್ನು ಅದಕ್ಕೆ ಹಾಕಿದ್ದರು. ಅದು ಕಾದು ಕೆಂಪಾಗಬೇಕು. ಕೆಂಪು ಬಿಳಿಯಾಗಬೇಕು. ಆ ಬಳಿಕ ಹೊಡೆತ. ಆ ವರೆಗೂ ತಿದಿಯೂದುತ ಇರಬೇಕು.

ನಾಗಪುರದ ರೆಸಿಡೆಂಟನಾದ ಗ್ರ್ಯಾಯೆಮ್ ಬೆಂಗಳೂರಿನ ಹಿತಕರ ಹವೆಯಲ್ಲಿ ಆಗ ವಿಶ್ರಾಂತಿಪಡೆಯುತ್ತಿದ್ದ. ಮಾತುಕತೆಯ ನೆಪದಿಂದ ಆತನನ್ನು ಮಡಕೇರಿಗೆ ಕಳುಹಿಸಿ ದಂಡಯಾತ್ರೆಯ ಯೋಜನೆಯ ವಿವರಗಳನ್ನು ಸಿದ್ಧಪಡಿಸಲು ಕುಂಪನಿ ನಿರ್ಧರಿಸಿತು. ಗ್ರ್ಯಾಯೆಮ್ ಮಾತುಕತೆಗೆ ಬರಲಿರುವುದಾಗಿ ಚಿಕವೀರರಾಜೇಂದ್ರನಿಗೆ ತಿಳಿಸಲಾಯಿತು.

"ಇಂಥ ಭೇಟಿ ಅನಗತ್ಯ" ಎಂದ ರಾಜ.

ಅಗತ್ಯ ಎಂದು ಮನಗಾಣಿಸುವುದಕ್ಕಾಗಿ ಕುಂಪನಿಯ ಇಬ್ಬರು ಚಾಕರರು-ದಾರಾ ಸೇಟ್ ಹಾಗೂ ಕುಲಪಟ್ಟಿ ಕರುಣಾಕರ ಮೆನೊನ್—ಮಡಕೇರಿಗೆ ಬಂದರು. ಒಬ್ಬ ಪಾರಸೀ ವರ್ತಕ ; ಇನ್ನೊಬ್ಬ ತಲಚೇರಿಯಲ್ಲಿ ಮಲೆಯಾಳದ ಕಲೆಕ್ಟರರ ಶಿರಸ್ತೇದಾರ. ಗ್ರ್ಯಾಯೆಮ್ ಮಾಡಲಾಗದಿದ್ದ ಗೂಢಚರ್ಯೆಯನ್ನು ಇವರಿಂದ ಮಾಡಿಸಲು ಇಂಗ್ಲಿಷರು ಯತ್ನಿಸಿದರು. ಆದರೆ ಕೊಡಗಿನಲ್ಲಿ ಇವರನ್ನು ಬಂಧಿಸಲಾಯಿತು.

ಅರಸ ಗದರಿ ಕೇಳಿದ :

"ಯಾರ ಅಪ್ಪಣೆ ಪಡೆದು ನಮ್ಮ ರಾಜ್ಯವನ್ನು ಹೊಕ್ಕಿರಿ ?"

ಮೆನೊನ್ ಉತ್ತರಿಸಿದ :

"ಕುಂಪನಿಯವರ ಅಪ್ಪಣೆ ಚೀಟಿ ಅದೆ, ಮಹಾರಾಜರೇ."

"ಈ ರಾಜ್ಯದ ಒಳಗೆ ಕಾಲಿಡೋದಕ್ಕೆ ಅವರು ಚೀಟಿ ಕೊಡತಾರ ? ಇದೇನು ವಿಲಾಯಿತಿ ಅಂದುಕೊಂಡರಾ ಅವರು ?"

"ಹೀಗೆ ಮಾತಾಡಬಾರದು ಮಹಾರಾಜರೆ. ನಾವು ಸಂಧಾನಕ್ಕೆ ಬಂದಿದೇವೆ."

"ಸಂಧಾನ ನಿನ್ನ ತಲೆ. ಪರದೇಶಿಗಳ ಎಂಜಲು ತಿಂದು ಬದುಕೋ ಕ್ಷುದ್ರ ಜಂತು! ನಮಗೆ ಸರಿಸಮನಾಗಿ ಮಾತಾಡತೀಯ ? ಏ ಸೇಟ್ ನಿನ್ನದೇನು ಕಾರಭಾರ ?"

ತನ್ನ ವರ್ತನೆ ಹೇಗಿರಬೇಕೆಂದು ಆಗಲೇ ನಿರ್ಧರಿಸಿದ್ದ ದಾರಾ ಸೇಟ್ ವಿನಮ್ರನಾಗಿ ಅಂದ :

"ನಾನೊಬ್ಬ ಬಡ ವರ್ತಕ. ವ್ಯಾಪಾರಕ್ಕೆ ಬಂದೆ."

"ಎಲ್ಲರೂ ವ್ಯಾಪಾರಕ್ಕೆಂತಲೇ ಬರತಾರೆ ! ಕಾರ್‍ಯಕಾರ ಐಯಣ್ಣ! ಈ ಬೇಪಾರಿಯನ್ನು ಗಡಿಯಾಚೆಗೆ ಮೈಸೂರಿಗೋ ಮಲೆಯಾಳಕ್ಕೋ ದಾಟಿಸು. ತನ್ನ ಯಜಮಾನರ ಹತ್ತಿರ ದೂರು ಕೊಡಲಿ. ಈ ಮೆನೊನ್, ಶಿರಸ್ತೇದಾರನಂತೆ—ಶಿರಸ್ತೇದಾರ. ಇವನ ಶಿರಸ್ಸನ್ನು ಚೆಂಡಾಡೋಣ ಅನ್ನಿಸತದೆ. ಆದರೂ ಬಿಟ್ಟಿರತೀವಿ. ಒಯ್ದು ಬಂದೀಖಾನೆಯಲ್ಲಿಡಿ. ಚನ್ನಬಸಪ್ಪನನ್ನು ಫರಂಗಿಯವರು ನಮಗೊಪ್ಪಿಸಿದ ಮೇಲೆ ಈತನನ್ನು ಹೊರಗೆ ಬಿಡೋಣ."

ಮೆನೊನ್ ಕೂಗಾಡಿದ :

"ನಾನು ರಾಯಭಾರಕ್ಕೆ ಬಂದವನು. ನನ್ನ ಮೇಲೆ ಕೈಮಾಡಿದರೆ ನಿಮಗೆ ಶಾಸ್ತಿ ಯಾಗತದೆ."

ರಾಜ ಗರ್ಜಿಸಿದ :

"ಕಂಡಿದೀನಿ, ಕಂಡಿದೀನಿ. ಇವನ ಕೆಟ್ಟ ಮುಸುಡು ನೋಡಲಾರೆ. ಎಳಕೊಂಡು ಹೋಗರೋ ಈ ಮುಂಡೇದನ್ನ ಆಚೆಗೆ."

...ಇದಾದ ಸ್ವಲ್ಪ ಹೊತ್ತಿನಲ್ಲೇ ಬೋಪು ದಿವಾನ ಅರಸನ ಭೇಟಿಗೆ ಬಂದ.

ಪಡೆವಳ ಆ ಸುದ್ದಿಯನ್ನು ತಿಳಿಸಿದಾಗ ಚಿಕವೀರರಾಜನ ಹುಬ್ಬು ಗಂಟಿಕ್ಕಿತು. ಬಿಡುವಿಲ್ಲ. ಸಂಜೆ ಬರಲಿ—ಎಂದು ಹೇಳೋಣವೆನ್ನಿಸಿತ್ತು ಮೊದಲು.

ಬೋಪಣ್ಣ ಹೊರಗೆ ಕಾಯುತ್ತಿದ್ದುದನ್ನು ಅರಿತ ರಾಣಿ ಗೌರಮ್ಮ, ರಾಜನ ಬಳಿಗೆ ಬಂದು, "ಏನು ತೊಂದರೆಯೋ ಏನೋ. ಮಾತಾಡಿ ಕಳಿಸಬಾರದೆ ?" ಎಂದಳು.

"ಸ್ವಂತದ ತೊಂದರೆ ಅವನಿಗೆ ಯಾವುದೂ ಇಲ್ಲ. ಇನ್ನೊಬ್ಬರಿಗೆ ತೊಂದರೆ ಕೊಡೋದೊಂದೇ ಆತನಿಗೆ ಗೊತ್ತಿರೋದು. ಹುಂ. ಬರಲಿ" ಎಂದ ಚಿಕವೀರರಾಜೇಂದ್ರ.

ರಾಣಿ ಒಳಕ್ಕೆ ಹೊರಟುಹೋದಳು. ಬೋಪಣ್ಣ ಬಂದು ಯಾಂತ್ರಿಕವಾಗಿ ನಮಿಸಿದ.

ಅರಸನೆಂದ :

"ನಮಗೆ ತಲೆನೋವು. ಈ ಬಿಸಿಲಲ್ಲಿ ಬಂದಿದೀರಲ್ಲ ? ಚುಟುಕಾಗಿ ಹೇಳಿಬಿಡಿ. ಏನು ಸಮಾಚಾರ ?"

"ಕುಂಪನಿಯ ಇಬ್ಬರು ದೂತರು ಬಂದದ್ದು ತಿಳೀತು."

"ಅವರಿಗೆ ಶಿಕ್ಷೆಯಾದದ್ದೂ ತಿಳೀತೊ ?"

"ಅದೂ ತಿಳೀತು."

"ಪರವಾಗಿಲ್ಲ ! ದಿವಾನರು ಸುದ್ದಿ ತರಿಸೋಕೆ ಸಮರ್ಪಕ ವ್ಯವಸ್ಥೆ ಮಾಡಗಿದೀರಿ."

"ನನ್ನನ್ನು ಕರೆಸಿದ್ದರೆ ಚೆನ್ನಾಗಿತ್ತು. ತಾವು ಹಾಗೆ ಮಾಡಿದ್ದು ಸರಿಯಲ್ಲ. ಇದರಿಂದ ಇಂಗ್ರೇಜಿಯವರು ಸಿಟ್ಟಾಗತಾರೆ."

"ಅವರನ್ನು ಸಂತೋಷಪಡಿಸುವುದೊಂದೇ ನಿಮ್ಮ ಕರ್ತವ್ಯ ಅನ್ನೋ ಹಾಗೆ ಮಾತಾಡ ತೀರಲ್ಲ !"

"ನನ್ನ ಸ್ವಾಮಿನಿಷ್ಠೆಯ ವಿಷಯದಲ್ಲಿ ಮಹಾರಾಜರು ಶಂಕೆ ತೋರಿಸತಾ ಇದಾರೆ."

"ನಿಮ್ಮ ಇತ್ತೀಚಿನ ನಡವಳಿಕೆ ಒಂದೂ ಅರ್ಥವಾಗದೆ ಆಶ್ಚರ್ಯಪಡತಾ ಇದೀವಿ."

"ಸಿಂಹಾಸನದ ಸೇವೆಯಲ್ಲೇ ನನ್ನ ಕೂದಲು ನೆರೆಯೋಕೆ ಶುರುವಾಗದೆ. ಇದಕ್ಕಿಂತ ಹೆಚ್ಚು ನಾ ಹೇಳೋದಿಲ್ಲ."

"ನಮಗಿಂತ ನೀವು ವಯಸ್ಸಿನಲ್ಲಿ ದೊಡ್ಡವರು. ನಿಮಗೆ ಗೌರವ ಕೊಡಬೇಕು ಅಂತ ಮನಸ್ಸು. ಆ ಅರ್ಹತೆ ನೀವು ಉಳಿಸಿಕೋಬೇಕು."

"ನನ್ನ ಕರ್ತವ್ಯ ನಾನು ಮಾಡತೇನೆ. ಇಂಗ್ರೇಜಿಯವರ ದ್ವೇಷ ಕಟ್ಟಿಕೊಳ್ಳೋದು ಕ್ಷೇಮ ಅಲ್ಲ."

"ವೈರ ಸಾಧಿಸಬೇಕೂಂತ ನಮಗೇನು ತೀಟೆಯೆ ? ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ಬಿಡಿ—ಅಂತ ಅವರಿಗೆ ಹೇಳತೀವಿ. ಅದರ ಬದಲು, ಆಶ್ರಿತ ರಾಜನಾಗು, ಮಾಂಡಲಿಕ ನಾಗು ಅಂದರೆ ನಾವು ಒಪ್ಪಕೋಬೇಕಾ ?"

"ಇದನ್ನೆಲ್ಲಾ ಸಂಧಾನದ ಮೂಲಕ ಬಗೆಹರಿಸಬೇಕು."

"ನೇರ ಸಂಧಾನವೊ ? ಚದಿ ಸಂಧಾನವೊ ?"

ಬೋಪಣ್ಣ ಥಟ್ಟನೆದ್ದ.

"ಇನ್ನು ನಾನಾಗಿ ಬರುವುದಿಲ್ಲ, ಮಹಾಸ್ವಾಮಿಗಳೆ. ನನ್ನ ಕೂಡೆ ಮಾತಾಡಬೇಕು ಅನಿಸಿದರೆ ತಾವು ಕರೆಕಳಿಸಬಹುದು."

ರಾಜನೆಂದ :

"ಈ ಸುಬುದ್ಧಿ ನಿಮಗೆ ಮೊದಲೇ ಇದ್ದಿದ್ದರೆ, ಈ ವ್ಯರ್ಥ ಮಾತುಕತೇನ ತಪ್ಪಿಸ ಬಹುದಾಗಿತ್ತು."

ಬೋಪಣ್ಣ ಹೊರಟುಹೋದ ಮೇಲೆ, ಚಿಕವೀರರಾಜನ ಮಗಳು ಒಳಬಾಗಿಲಲ್ಲಿ ಕಾಣಿಸಿಕೊಂಡಳು. ಋತುಮತಿಯಾಗಿ ಕೌಮಾರ್ಯದ ಕಳೆಯಿಂದ ಶೋಭಿಸುತ್ತಿದ್ದ ಹುಡುಗಿ.

ಆಕೆ ಕೇಳಿದಳು :

"ಉಣ್ಣೋಕೆ ಬರತೀರಾ, ಅಪ್ಪಾಜಿ ?"

ತನ್ನೆದುರು ಕವಿದ ಕರಿ ಮೋಡಗಳನ್ನು ಅಂಗೈಯಿಂದ ಸರಿಸಿ, ಏಳುತ್ತ, ಚಿಕವೀರ ರಾಜನೆಂದ :

"ಬಂದೆ, ಮರಿ."

## ೩೩

ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿ ಘಂಟಾರವ ಕೇಳಿಸುತ್ತಿತ್ತು. ಅದು ಸಂಜೆಯ ದೀಪಾರಾಧನೆಯ ಹೊತ್ತು. ತುಸು ದೂರದ ಮಸೀದಿಯಿಂದ ಇರುಳಿನ ಪ್ರಾರ್ಥನೆಗಾಗಿ ಕರೆ ಕೇಳಿಬರುತ್ತಿತ್ತು. ಆಂಗ್ಲರ ಸೈನಿಕ ಶಿಬಿರಗಳಲ್ಲಿ ಗಾಯನ ನರ್ತನ ಗಳಾಗುತ್ತಿದ್ದುವು.

ಅದು, ಸುಮಾರು ಮೂರು ದಶಕಗಳಿಗೆ ಹಿಂದೆ ವಿಸ್ತೃತವಾದೊಂದು ಬಲಿಷ್ಠ ರಾಜ್ಯದ

ರಾಜಧಾನಿಯಾಗಿದ್ದ ಪಟ್ಟಣ. ಕೋಟೆಕೊತ್ತಳಗಳ ಸೌಕರ್ಯ ದೇಶೀಯರಿಗೆ ಇರಬಾರದೆಂದು ಆಂಗ್ಲರು ಮೈಸೂರು ನಗರವನ್ನು ಆಡಳಿತದ ಕೇಂದ್ರವಾಗಿ ಮಾಡಿದ್ದರು. ಶ್ರೀರಂಗಪಟ್ಟಣ ಸೇನಾಬಲದ ಠಾಣ್ಯವಾಗಿ ಉಳಿದಿತ್ತು. ಅದನ್ನು ಪೂರ್ತಿಯಾಗಿ ಹಾಳುಗೆಡವಿ, ಸೈನ್ಯವನ್ನು ಬೆಂಗಳೂರಿಗೆ ಒಯ್ಯಬೇಕೆಂಬುದು ಇಂಗ್ಲಿಷರ ಯೋಜನೆಯಾಗಿತ್ತು.

ಕತ್ತಲಾದಾಗ ಪಟ್ಟಣವನ್ನು ತಲಪಿದ ಅಪರಂಪಾರನೂ ಸಿದ್ಧಲಿಂಗನೂ ಚನ್ನಬಸಪ್ಪ ವಾಸವಾಗಿದ್ದ ಮನೆಯನ್ನು ಕಂಡುಹಿಡಿದರು. ಮನೆಯ ಮುಂದೆ ಸಶಸ್ತ್ರ ಕಾವಲುಗಾರರಿದ್ದರು.

''ಶಿವ ಶಂಭೋ ಶಂಕರ ಮಹಾದೇವ !''

—ಎರಡು ಕಂಠಗಳಿಂದ ಬಂದ ಉದ್ಗಾರ.

ಕಾವಲುಗಾರರಲ್ಲಿ ಒಬ್ಬನೆಂದ :

''ಮುಂದಕ್ಕೆ ಓಗ್ರಿ, ಅಪ್ಪಗಳಾ. ಇದು ಧರ್ಮಛತ್ರ ಅಲ್ಲ.''

ಸ್ವರವೇರಿಸಿ ಅಪರಂಪಾರನೆಂದ :

''ಶಿವ, ಶಿವ, ಶಿವ. ಸ್ವಾಮಿಗಳನ್ನ ಮಾತನಾಡಿಸೋ ಧರ್ಮಿಷ್ಠರು ಇಲ್ಲವಾ ಈ ಮನೇಲಿ ?''

ಇದು, ಒಳಗಿದ್ದ ದೇವಮ್ಮಾಜಿಗೆ ಕೇಳಿಸಿತು. ಉಪ್ಪರಿಗೆಯಲ್ಲಿದ್ದ ಚನ್ನಬಸಪ್ಪನ ಕಿವಿಗೂ ಅದು ಬಿದ್ದು, ಆತ ಇಳಿದುಬಂದ.

"ಹೋಗಿ ನೋಡಬಾರದೆ ?" ಎಂದಳು ದೇವಮ್ಮಾಜಿ.

ಚನ್ನಬಸಪ್ಪ ತಲೆಬಾಗಿಲನ್ನು ಸಮೀಪಿಸಿದ, ಬೆಳೆದು ಕೂದಲು ಜಡೆಗಟ್ಟಿದವನೊಬ್ಬ ; ತಲೆಮುಖಗಳನ್ನು ನುಣ್ಣಗೆ ಬೋಳಿಸಿದವನೊಬ್ಬ. ಕಾವಿಯುಡುಗೆಯನ್ನು ಕಂಡೊಡನೆ ಚನ್ನಬಸಪ್ಪ ಕೈಗಳನ್ನು ಜೋಡಿಸಿದ.

"ದಯಮಾಡಿಸಬೇಕು."

"ಕೊಡಗಿನ ಅರಮನೆಯ ಅಳಿಯ ಇಲ್ಲಿದಾರೇಂತ ಕೇಳಿದೆವು."

"ಹೌದು. ನಾನೇ."

ಜಂಗಮರಿಬ್ಬರು ಒಳಗೆ ಕಾಲಿಡುತ್ತಿದ್ದಂತೆ ದೇವಮ್ಮಾಜಿ ಬಂದು ಅವರಿಗೆ ಪ್ರಣಾಮ ಮಾಡಿದಳು. ಚನ್ನಬಸಪ್ಪನೂ ಆಕೆಯನ್ನು ಅನುಸರಿಸಿದ.

ಅವಳನ್ನೂ ಬಲ್ಲವನೇ ಅಪರಂಪಾರ.

"ದೊರೆಮಗಳಲ್ಲವೇ ?"

"ಹೌದು. ತಮಗೆ ಎಲ್ಲಾಯ್ತು?"

"ಹರಿವ ನದಿಗೆ ಮೈಯೆಲ್ಲ ಕಾಲು. ಉರಿವಗ್ನಿಗೆ ಮೈಯೆಲ್ಲ ನಾಲಗೆ. ಬೀಸುವಗಾಳಿಗೆ ಮೈಯೆಲ್ಲ ಕೈ. ತಿರಿದುಂಬ ಜಂಗಮರಿಂಗೆ ಜಗವೆಲ್ಲ ಊರು."

ದೇವಮ್ಮಾಜಿ ಅಂದಳು :

"ಸತ್ಕರಿಸೋಣ ಅಂದರೆ ಇದು ಅರಮನೆಯಲ್ಲ. ಬಡವರ ಹಟ್ಟಿ. ಆದ್ರೂ ದಾಸೋಹಕ್ಕೆ—"

"ಬೇಡ, ತಾಯಿ. ಇನ್ನೊಮ್ಮೆ ತಪ್ಪದೆ ಬಂದೇವು. ಕಾವೇರಿತಟಕ್ಕೆ ಹೊರಟವರು ಎರಡು ಕ್ಷಣ ಇದ್ದು ಹೋಗೋಣ ಅಂತ ಹೊಕ್ಕೆವು."

ಚೆನ್ನಬಸಪ್ಪನೆಂದ :

"ನಾವು ಧನ್ಯರು, ಸ್ವಾಮಿಗಳೇ."

ನಡುಮನೆಯ ಪೀಠವೊಂದರ ಮೇಲೆ ಅಪರಂಪಾರ ಕುಳಿತ. ಸಿದ್ಧಲಿಂಗ ತಾನು ಸ್ವಾಮಿಗಳ ಶಿಷ್ಯ ಎಂಬಂತೆ, ತುಟಿಬಿಗಿದು ವಿನಯದಿಂದ ಪೀಠದ ಹಿಂದೆ ನಿಂತ. ವಿಚಿತ್ರ ಲೋಕನಾಟಕದೊಂದು ದೃಶ್ಯಕ್ಕೆ ಪ್ರೇಕ್ಷಕನಾಗಿದ್ದ ಆತ.

ಅಪರಂಪಾರ ಕೇಳಿದ :

"ಅಪ್ಪಾ, ಎಷ್ಟು ದಿವಸ ಈ ವನವಾಸ ?"

"ನಮ್ಮ ವಿಷಯ ತಾವು ಬಲ್ಲಿರಿ, ಹಂಗಾದರೆ."

"ತ್ರಿಲೋಕಜ್ಞಾನಿಗಳಿಗೆ ತಿಳಿಯದ್ದು ಯಾವುದುಂಟು, ತಮ್ಮಾ ?"

"ತಮ್ಮಲ್ಲಿ ಹೇಳೋದಕ್ಕೆ ಸಂಕೋಚ ಯಾಕೆ ? ಈ ಚಳಿಗಾಲ ಕಳೆದ ಕೂಡಲೇ ದೌಡು ನಡೀತದೆ."

ಅಪರಂಪಾರ ಅಂತರ್ಮುಖಿಯಾದಂತೆ ಚೆನ್ನಬಸಪ್ಪನಿಗೆ ಅನಿಸಿತು.

ದೇವಮ್ಮಾಜಿ ಅಂದಳು .

"ಸೋಮಿಗಳಿಗೆ ನಮ್ಮ ಜಾತಕ ತೋರಿಸಿದರಾಗತಿತ್ತು."

"ಅದಕ್ಕಾಗಿಯೇ ಒಳ್ಳೆಯ ದಿನ ನೋಡಿ ಮತ್ತೊಮ್ಮೆ ಬರತೇವೆ, ತಂಗಿ."

"ತಮ್ಮಿಷ್ಟ."

"ಆದರೂ ಜಾತಕ ನೋಡದೆಯೇ ಅಷ್ಟಿಷ್ಟು ನಾವು ಹೇಳಬಹುದು."

ಚೆನ್ನಬಸಪ್ಪನೆಂದ :

"ಅಪ್ಪಣೆಯಾಗಲಿ !"

"ಒಂದು ನಾಣ್ಣುಡಿಯುಂಟು : ಮಿಗಿಲಾದವನ ಹತ್ತಿರ ಹಗೆ ಸಲ್ಲ, ನಗೆಗಾರನ ಹತ್ತಿರ ಮೈತ್ರಿ ಸಲ್ಲ—ಅಂತ."

"ಸರಿ."

"ಇಂಗ್ರೇಜಿಯವರು ನಗತಾ ಇರತಾರೆ, ಅಲ್ಲವಾ ?"

"ಅದೇನೋ ನಿಜ, ಸ್ವಾಮಿಗಳೇ. ಆದರೆ ನಾವು ಅನಾಥರು, ಏನು ಮಾಡೋಕಾಗತದೆ ?"

"ಸಗಣಿಯ ಬೆನಕಂಗೆ ಸಂಪಿಗೆಯರಳಿನಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಟ್ಟೀತೆ ? ನೀವು ಇಂಗ್ರೇಜಿಯವರನ್ನ ಒಲೈಸುತೀರಿ. ಆದರೆ ಅವರು ತಮ್ಮ ಬುದ್ಧಿ ಬಿಟ್ಟಾರಾ ?"

"ಕೊಟ್ಟ ಮಾತಿಗೆ ಅವರು ತಪ್ಪರು ಅನಿಸತದೆ."

"ಹಹ್ಹ...ಮಳೆ ನೀರನ್ನು ಬಿಟ್ಟು ಮಂಜು ನೀರಿಗೆ ಕೈಯೊಡ್ಡಿದ ಹಾಗೆ ಆಗಲಿಕ್ಕಿಲ್ಲ ವೇನಪ್ಪ ?"

ಚೆನ್ನಬಸಪ್ಪನ ಮುಖ ಗಂಟಿಕ್ಕಿತು. ಇವನೊಳ್ಳೇ ಅಯ್ಯ ಬಂದನಲ್ಲ ?—ಎನಿಸಿತು.

"ಅಲ್ಲಿದ್ದರೆ ಸಾಯುತ್ತಿದ್ದೆವು. ಬದುಕೋಣ ಅಂತ ಇಲ್ಲಿಗೆ ಬಂದೆವು."

ಸಹಸ್ರ ಚೇಳುಗಳು ತನ್ನೆಡೆಗೆ ಬರುತ್ತಿದ್ದಂತೆ ಅಪರಂಪಾರನಿಗೆ ಭಾಸವಾಯಿತು. ಮನಸ್ಸಿನಲ್ಲೆ 'ಥೂ !' ಎಂದು ಅವುಗಳನ್ನು ಆತ ಓಡಿಸಿದ.

"ಮನೆ ಜಗಳ. ಮೂರನೆಯವರು ಬರಬಾರದಿತ್ತು."

"ಇದೆಲ್ಲ ಪ್ರಾಪಂಚಿಕರಿಗೆ ಸೇರಿದ್ದು. ತಮ್ಮಂಥ ವಿರಕ್ತರು ಇದನ್ನು ಮನಸ್ಸಿಗೆ ತಕೋಬಾರದು."

ಚನ್ನಬಸಪ್ಪನ ಧ್ವನಿಯಲ್ಲಿ ಕಾಠಿನ್ಯದ ಛಾಯೆ ಬೆರೆಯಿತು.

"ಸಿಟ್ಟಾಗಬೇಡ, ಚನ್ನಬಸಪ್ಪ. ಸಹಜವ ದುಡಿದರೆ ಯಾರಿಗೂ ಸೇರದು ; ಅಸಹಜ ಕಲ್ಲದೆ ಲೋಕ ಭಜಿಸದು. ರಾಜ್ಯ ಹಾಳಾಗತದೆ ಅಂತ ಸಂಕಟವಾಗಿ ಒಂದು ಮಾತು ಹೇಳೋಕೆ ಬಂದೆವು. ಇನ್ನು ಹೊರಡತೀವಿ."

ಅಪರಂಪಾರ ಎದ್ದ.

ಇಷ್ಟು ಬೇಗ ಸ್ವಾಮಿಗಳು ಹೊರಟರಲ್ಲ ಎಂದು ದೇವಮ್ಮಾಜಿ ಕಕ್ಕಾವಿಕ್ಕಿಯಾದಳು. ಅವಳು ಅಂಜಲೀಬದ್ಧಳಾಗಿ ಅಂದಳು :

"ಹಣ್ಣುಹಂಪಲು ಏನಾದರೂ..."

"ಈಗ ಬೇಡ, ತಾಯಿ" ಎಂದ ಅಪರಂಪಾರ.

"ಹೋಗಲಿ, ಬಿಡು. ಇನ್ನೊಮ್ಮೆ ಬರತಾರೆ" ಎಂದು ಚನ್ನಬಸಪ್ಪ ನುಡಿದ.

ಜಂಗಮರು ಅಂಗಳ ದಾಟುತ್ತಿದ್ದಂತೆ ಅವನೆಂದ :

"ಸ್ವಾಮಿಗಳ ಹೆಸರು ತಿಳೀಲಿಲ್ಲ."

"ನಮ್ಮ ಹೆಸರೆ ? ನಾವು ಅಪರಂಪಾರರು...ಅಪರಂಪಾರರು !"

...ಮನೆಯೊಳಕ್ಕೆ ಮರಳಿದ ಚನ್ನಬಸಪ್ಪ ನಡುಮನೆಯ ಉಯ್ಯಾಲೆಯ ಮೇಲೆ ಕುಳಿತು, 'ಅಪರಂಪಾರ...ಈ ಹೆಸರು ಕೇಳಿರುವೆನಲ್ಲ ? ವೀರಪ್ಪಾಜಿಯೇನು ಈತ ?' ಎಂದು ಗೊಂದಲಕ್ಕೀಡಾದ.

"ಸೋಮಿಗಳು ಹಾಗಂದರೂಂತ ಬೇಜಾರಾಯ್ತಾ ?" ಎಂದು ಕೇಳಿದಳು ದೇವಮ್ಮಾಜಿ, ಬಳಿಯಲ್ಲಿ ನಿಂತು.

"ಇವನು ಠಕ್ಕ ಸನ್ಯಾಸಿ ಅನಿಸತದೆ."

"ಶ್ ! ಹಾಗನ್ನಬಾರದು."

"ಸುಮ್ಮನಿರು !"

ರಾತ್ರೆ ಬಹಳ ಹೊತ್ತು ಚನ್ನಬಸಪ್ಪನಿಗೆ ನಿದ್ರೆ ಹತ್ತಲಿಲ್ಲ.

'ವೀರಪ್ಪಾಜಿಯೆಂಬುದು ನಿಜವಾದರೂ ಇವನೇನು ಅರಸನ ಸ್ನೇಹಿತ ಅಲ್ಲವಲ್ಲ' ಎಂದುಕೊಂಡ ಆತ.

'ಆದರೂ, ಚಳಿಗಾಲ ಕಳೆದ ಕೂಡಲೆ ದೌಡು ನಡೀತದೆ ಅಂತ ನಾನು ಹೇಳಬಾರದಿತ್ತು' ಎಂದು ವ್ಯಥಿತನಾದ.

...ದಾರಿಯಲ್ಲಿ ಅಪರಂಪಾರನೆಂದ :

"ಸಿದ್ಧಲಿಂಗ !"

"ಏನಪ್ಪಣೆ ?"

"ನಾವೀಗ ಹೋಗೋದು ಕಾವೇರಿ ತಟಕ್ಕಲ್ಲ. ಇಲ್ಲಿಂದ ಪಾರಾಗಬೇಕು."

"ಹ್ನು."

"ದಂಡಯಾತ್ರೆಯ ವಿಷಯ ಆತ ಹೇಳಿದನಲ್ಲ—?"

"ಹ್ಞ. ಮಡಕೇರಿಗೆ ಈ ಸಂಗತಿ ಗೊತ್ತಾಗಬೇಕಾ ?"

"ಹೌದು, ನೋಡು. ನೀನೀಗಲೇ ಹೊರಡಬೇಕು. ಮತ್ತೆ ಕೂಡೋಣ."

...ಚೆನ್ನಬಸಪ್ಪ ನಸುಕಿನಲ್ಲೆದ್ದು ಕಾವೇರಿನದಿಯತ್ತ ನಡೆದ. ಆ ಇಬ್ಬರು ಜಂಗಮರು ಎಲ್ಲಾದರೂ ಮಲಗಿರುವರೇನೋ ಎಂದು ದಂಡೆಯಗುಂಟ ಓಡಾಡಿದ. ಕಣ್ಣಿಗೆ ಬೀಳ ದಿರಲು, 'ಕೈಕೊಟ್ಟರು' ಎಂದುಕೊಂಡ. ರೆಸಿಡೆಂಟನಿಗೆ ಹೇಳಬೇಕು, ಸೈನಿಕರನ್ನು ನಾಲ್ಕೂ ದಿಕ್ಕಿಗೆ ಅಟ್ಟಬೇಕು—ಎನಿಸಿತು. 'ನಿನ್ನೆ ರಾತ್ರೆಯೇ ಯಾಕೆ ತಿಳಿಸಲಿಲ್ಲ ? ನೀನು ನಾಲಾಯಕ್ಕು' ಎಂದು ಆತ ಬಯ್ದರೆ ? ಅದನ್ನು ಯೋಚಿಸಿ ಚೆನ್ನಬಸಪ್ಪ ಬೆವರಿದ. ತೆಪ್ಪಗೆ, ಬಂದ ದಾರಿ ಹಿಡಿದು ತನ್ನ ಬಿಡಾರಕ್ಕೆ ನಡೆದ.

ಎಚ್ಚರಗೊಂಡು ಗಂಡನನ್ನು ಕಾಣದೆ, ತನ್ನಲ್ಲೆ ತರ್ಕಿಸಿದ್ದ ದೇವಮ್ಮಾಜಿ ಕೇಳಿದಳು :

"ಸೋಮಿಗಳನ್ನು ಕರಕೊಂಡು ಬರೋಕೆ ಓಗಿದ್ರಾ ?"

"ಹೂಂ. ಸಿಕಲಿಲ್ಲ" ಎಂದ ಚೆನ್ನಬಸಪ್ಪ.

## ೩೪

ಕರುಣಾಕರ ಮೆನೊನ್ ಕೈಸೆರೆ ಹಿಡಿಯಲ್ಪಟ್ಟ ಬಳಿಕ ದಿವಾನ ಬೋಪಣ್ಣ ರಹಸ್ಯ ಕಾರ್‍ಯಾಚರಣೆಯಲ್ಲಿ ನಿರತನಾದ. ವಿವಿಧ ನಾಡುಗಳಲ್ಲಿ ತನ್ನ ವಿಶ್ವಾಸಕ್ಕೆ ಪಾತ್ರರಾಗಿದ್ದ ಕೆಲ ತಕ್ಕರೆಡೆಗೆ ನಂಬುಗೆಯ ಬಂಟರನ್ನು ಕಳುಹಿಸಿದ. ಕೆಲ ಕಾರ್‍ಯಕಾರರೆದುರಿನಲ್ಲಿ ದ್ರೋಹದ ಪುಂಗಿಯೂದಿದ. ರಾಜಧಾನಿಯ ಪ್ರಮುಖ ವರ್ತಕರಿಬ್ಬರು ತನ್ನ ಸಂಚಿನಲ್ಲಿ ಭಾಗಿಯಾಗು ವಂತೆ ಮಾಡಿದ.

ಹಿಂದಿನ ದಿವಾನ ಪೊನ್ನಪ್ಪನ ಪೂರ್ಣ ಬೆಂಬಲ ಅವನಿಗಿತ್ತು. ಲಕ್ಷ್ಮೀನಾರಾಯಣ ನೊಬ್ಬನೇ ವಿಮನಸ್ಕನಾಗಿದ್ದ.

ಯುದ್ಧವೇರ್ಪಟ್ಟು ಇಂಗ್ಲಿಷರ ದಂಡು ಬಂದಾಗ ಪ್ರತಿಭಟನೆಯನ್ನು ಕುಂಠಿತಗೊಳಿಸಿ ಶರಣಾಗತಿಯನ್ನು ಆಗಮಾಡುವುದು ಬೋಪಣ್ಣನ ಹಂಚಿಕೆಯಾಗಿತ್ತು.

...ಶ್ರೀರಂಗಪಟ್ಟಣದಿಂದ ಹೊರಟ ಸಿದ್ಧಲಿಂಗ ಒಂದಿಷ್ಟು ದೂರ ನಡೆದ. ಇದು ವಾಯುವೇಗವೂ ಆಗಲಿಲ್ಲ, ಶರವೇಗವೂ ಆಗಲಿಲ್ಲ—ಎಂದು ಚಿಂತಿಸಿದ. ರಾಜಧಾನಿಗೆ ಹೊರಟಿದ್ದ ಹೇರುಬಂಡಿಯಲ್ಲಿ ಮತ್ತೆ ಒಂದಷ್ಟು ದೂರ ಪ್ರಯಾಣ ಬೆಳೆಸಿದ. ಇದಕ್ಕೀ ನಿದ್ದರೂ ಕುದುರೆ ರಾವುತರೇ ಸರಿ ಎಂದು ಗೊಣಗಿದ. ದಾರಿ ಕವಲೊಡೆಯುವಲ್ಲಿ ಇಳಿದು ಹೊಸಳ್ಳಿಗೆ ಸಾಗಿದ.

ಮಲ್ಲಪ್ಪಗೌಡರನ್ನು ತಾನು ಕಾಣಬೇಕೆಂದು ಸಿದ್ಧಲಿಂಗನಿಗೆ ಹೊಳೆದುದು ಆತ ಹೇರು ಬಂಡಿಯಲ್ಲಿದ್ದಾಗ. ಮಲ್ಲಪ್ಪನನ್ನು ಜತೆಯಲ್ಲಿ ಕರೆದೊಯ್ದರೆ ಮಡಕೇರಿಯಲ್ಲಿ ಕೆಲಸ ಸುಲಭವಾಗುತ್ತದೆ ಎಂದು ಅವನ ಎಣಿಕೆ.

ಹದಿಮೂರು ವರ್ಷಗಳಿಗೂ ಮೇಲಾಗಿತ್ತು ಆ ಇಬ್ಬರು ಪರಸ್ಪರರನ್ನು ಕಂಡು. ಆದರೂ ಸುಲಭವಾಗಿ ಸಿದ್ಧಲಿಂಗನ ಗುರುತು ಹಿಡಿದ, ಮಲ್ಲಪ್ಪ.

"ಅಯ್ಯನವರು ರವಷ್ಟೂ ಬದಲಾಗಿಲ್ಲ."

"ಯಾಕಾದೇನು ? ನನಗೇನು ಮುಪ್ಪೆ, ಸಾವೆ ?"

"ಇಸ್ರಾಂತಿ ತಗೊಳ್ಳಿ."

"ಹುಡುಗನಿದ್ದಾಗಲೇ ಅದಕ್ಕೆ ಎಳ್ಳು ನೀರು ಬಿಟ್ಟೆನಪ್ಪ. ಎಲ್ಲೀದು ವಿಶ್ರಾಂತಿ? ಇಕಾ, ದಾಸೋಹ ಪಾದಪೂಜೆ ಒಂದೂ ಬ್ಯಾಡ. ನಿಂತ ಕಾಲಲ್ಲೆ ಹೊರಡು. ನನ್ನ ಸಂಗಾತ ನೀನು ಮಡಕೇರಿ ತನಕ ಬರಬೇಕು. ಯಾಕೆ? ಏನು?—ಅಂಬೋದೆಲ್ಲಾ ದಾರಿ ಯಾಗೆ ಹೇಳತೀನಿ."

...ದಾರಿಯಲ್ಲಿ ಮಲ್ಲಪ್ಪ ಕೇಳಿದ:

"ನಮ್ಮ ವೀರಪ್ಪಾಜಿಯವರನ್ನ ಆವ್ಯಾಕೆ ಕಂಡದ್ದುಂಟಾ ಅಯ್ಯನವರೆ?"

"ಶ್! ಅಪರಂಪಾರಸ್ವಾಮಿಯವರನ್ನ ಅನ್ನು."

"ಹಂಗಾರೆ ದೊರೆ ಮಗ ಜಂಗಮ ಆದದ್ದು ದಿಟಾನೇ. ಎಲ್ಲೋ ಪುಕಾರು ಕೇಳಿದ್ದೆ."

"ಅವರು, ಜಂಗಮರಲ್ಲಿ ದೊರೆ ಮಗ. ಅವರ ಸಹವಾಸದೋಷದಿಂದ ನಾನು ಈ ಸ್ಥಿತಿಗೆ ಇಳಿದಿದೀನಿ. ನಾ ಅರಮನೆಗೆ ಹೋಗತಿರೋದು ಶಿವಕಥೆ ಮಾಡೋದಕ್ಕಲ್ಲ, ರಾಜಕಾರ್ಯನಿಮಿತ್ತ."

ಮಲ್ಲಪ್ಪನಿಗೆ ಸಂತೋಷ. ಅದರ ಬೆನ್ನಲ್ಲೇ ದಿಗಿಲು.

"ಚೆಂದಾಕಿದಾರೆ, ಅಲ್ಲವರಾ?"

"ಹ್ಞ. ಅರಸನಿಗೆ ಒಂದು ಸುದ್ದಿ ಮುಟ್ಟಿಸಿ ಬಾ ಅಂತ ಅವರೇ ಕಳಿಸಿದ್ರು."

"ಅಂಗಾ? ಅರಮನೆಗೆ ಒಂದ್ಸಾರ್ತಿ ಅಪರಂಪಾರ ಸೋಮಿಯೋರು ಬಂದಿದ್ರು, ಸಿಟ್ಟುಮಾಡ್ಕೊಂಡು ಓದ್ರು—ಅಂತ ಕೇಳಿವ್ನಿ."

"ಎಲ್ಲಿಯ ಸಿಟ್ಟು, ಕಾಮಕ್ರೋಧಗಳನ್ನು ಜಯಿಸಿದ ಪುರುಷಶ್ರೇಷ್ಠನಿಗೆ?"

ಅಪರಂಪಾರ ಕಳುಹಿಸುವ ವಾರ್ತೆ ಏನು ಅಂತ ಮಲ್ಲಪ್ಪ ಕೇಳಲಿ, ಎಂದು ಸಿದ್ಧಲಿಂಗ ಕಾದು ನೋಡಿದ. ನಿರಾಸೆಯಾಯಿತು. ಕಡೆಗೆ ಅವನೇ ಅಂದ:

"ಇಂಗ್ರೇಜಿಯವರು ದಂಡಯಾತ್ರೆಗೆ ತಯಾರು ಮಾಡತಾ ಇದಾರೆ. ಅದನ್ನ ಅರಸನಿಗೆ ತಿಳಿಸಬೇಕಾಗದೆ."

"ಅಂಗಾರೆ ಲಡಾಯಿ ಕಂಡಿತ ಅನ್ನಿ. ಇವತ್ತು ನಾಳೆಯಲ್ಲಿ ಜಮ್ಮ ಕೊಡವರಿಗೆಲ್ಲ ಕರೆ ಬರಬೌದು."

"ಯುದ್ಧ ಅಂದರೆ ಸಾಕು, ಬಾಹು ಸ್ಫುರಿಸತದೆ, ಅಲ್ಲವಾ?"

"ಅಂಗಲ್ಲ, ಅಯ್ಯನವರೆ. ಅರಸರ ಅನ್ನ ತಿನ್ನತೀವಿ. ಅವರ ಸೇವೆ ಮಾಡೋ ಸಮಯ ಬಂದಾಗ ಸಂತೋಸ ಆಗತದೆ."

...ಮಡಕೇರಿಯಲ್ಲಿ ಇವರಿಬ್ಬರು ಚಾವಡಿಕಾರ ಶಂಕರಪ್ಪನನ್ನು ಕಂಡರು. ಸಿದ್ಧಲಿಂಗ ಸ್ವಾಮಿ ಅಪರಂಪಾರರ ದೂತ ಎಂದು ತಿಳಿದಾಗ ಅವನು ಹಿಗ್ಗಿದ; ಬಸವನಿಗೆ ಸುದ್ದಿ ಮುಟ್ಟಿಸಿದ.

ಸ್ವಲ್ಪ ಹೊತ್ತಿನಲ್ಲೆ ಚಿಕವೀರರಾಜೇಂದ್ರನ ಸಮ್ಮುಖಕ್ಕೆ ಸಿದ್ಧಲಿಂಗನನ್ನು ಒಯ್ದರು.

"ಅರಸನಿಗೆ ಜಯವಾಗಲಿ, ಶುಭವಾಗಲಿ; ವೈರಿಕುಲ ಅಳಿಯಲಿ" ಎಂದು ಸಿದ್ಧಲಿಂಗ ಹರಸಿದ.

ನಡೆದು ನಡೆದು ಪಾದಗಳು ಊದಿಕೊಂಡಿದ್ದ, ಮೈಯೆಲ್ಲ ಧೂಳು ತುಂಬಿದ್ದ, ಜಂಗಮ ನತ್ತ ನೋಡಿ ಚಿಕವೀರರಾಜನೆಂದ:

"ಅಯ್ಯನವರು ಶ್ರೀರಂಗಪಟ್ಟಣದಿಂದ ಬಂದಿರಂತೆ."

"ಹ್ದೌ ಮಹಾರಾಜ. ಸ್ವಾಮಿ ಅಪರಂಪಾರರ ಆದೇಶದಂತೆ ಇಲ್ಲಿಗೆ ಬಂದೆವು."

ಅರಸ ವಿಸ್ಮಿತನಾದ. ಮೂರು ವರ್ಷಗಳಿಗೆ ಹಿಂದೆ ಸುಳಿಗಾಳಿಯಂತೆ ಬೀಸಿ ಹೋದ ಅಪರಂಪಾರನ ಪ್ರಸ್ತಾಪ ಇಂತಹ ಹೊತ್ತಿನಲ್ಲಿ ಬರುವುದೆಂದು ಆತ ನಿರೀಕ್ಷಿಸಿರಲಿಲ್ಲ.

ಚಳಿಗಾಲ ಕಳೆದೊಡನೆಯೇ ಆಂಗ್ಲರ ದಂಡಯಾತ್ರೆ...

"ಇದನ್ನ ಸ್ವಾಮಿಯವರೆಲ್ಲಿ ಕೇಳಿದರು ? ಹ್ಯಾಗೆ ತಿಳಿದರು ?"

"ಆ ವಿವರದ ಬಗ್ಗೆ ನಾನು ಆಜ್ಞಪ್ತನಾಗಿಲ್ಲ, ಮಹಾರಾಜ."

"ಒಳ್ಳೇದು. ಈ ರಾಜ್ಯದ ಹಿತಚಿಂತನೆ ಸ್ವಾಮಿಯವರು ಮಾಡುತಿದಾರಲ್ಲಾ—ನಾವು ಧನ್ಯರು."

...ಸಿದ್ಧಲಿಂಗ ಆ ರಾತ್ರೆ ಶಂಕರಪ್ಪನಲ್ಲಿ ತಂಗಿದ.

ವೀರಪ್ಪಾಜಿಯೇ ಅಪರಂಪಾರ ಎಂಬುದನ್ನು ಕಡೆಗೊಮ್ಮೆ ಖಚಿತವಾಗಿ ತಿಳಿದ ಶಂಕರಪ್ಪ ಈಗ ಪರಮ ಸುಖಿ.

"ಬಿಸಿನೀರು ತರ್‍ರಿ. ಅದರಿಂದ ಪಾದಪೂಜೆ ಮಾಡಿದರೆ ಶಿವನಿಗೆ ಈಗ ಹಿತವಾಗತದೆ" ಎಂದ ಜಂಗಮ.

ಆ ಸೇವೆಯನ್ನು ಶಂಕರಪ್ಪ ಸಂತೋಷದಿಂದ ಮಾಡಿದ.

ವಿರಕ್ತನ ವೇಷದಲ್ಲಿ ಗೂಢಚಾರನೊಬ್ಬ ಮೈಸೂರು ರಾಜ್ಯದಿಂದ ಬಂದಿರುವನೆಂಬ ವಾರ್ತೆ ಬೋಪಣ್ಣನಿಗೆ ಮುಟ್ಟಿತು.

ಅದರ ಬೆನ್ನಲ್ಲೆ, ಆತ ಗೂಢಚಾರನಲ್ಲ, ನಿಜವಾದ ವಿರಕ್ತನೇ ಎಂಬ ಸ್ಪಷ್ಟೀಕರಣವೂ ಬಂತು.

ಬೋಪಣ್ಣನೆಂದ :

"ಈ ಜಂಗಮರು ಸೊಕ್ಕಿದರು. ಅವನೆಲ್ಲೇ ಇರಲಿ, ಯಾರಿಗೂ ಸಂಶಯ ಬರದ ಹಾಗೆ ಹಿಡಿದು ತನ್ನಿ."

ಆದರೆ, ಬೋಪಣ್ಣನ ಸೇವಕರ ಕೈಗೆ ಸಿದ್ಧಲಿಂಗ ಸಿಗಲಿಲ್ಲ.

**೩೫**

ಒಂದು ವಾರದ ಅವಧಿಯೊಳಗಾಗಿ ಕರುಣಾಕರ ಮೆನೊನನ್ನು ಬಿಟ್ಟುಕೊಡಬೇಕು. ಇಲ್ಲದೆ ಹೋದರೆ ಪ್ರತಿಫಲ ಅನುಭವಿಸಲು ಸಿದ್ಧನಾಗಬೇಕು.

—ಇದು ಕಾಸ್ಸಾಮೇಜರ್ ಚಿಕವೀರರಾಜೇಂದ್ರನಿಗೆ ಕಳುಹಿದ ಅಂತಿಮ ನಿರೂಪ.

ಅರಸ ಅದನ್ನು ತುಚ್ಛೀಕಾರದಿಂದ ಕಂಡ. ಉತ್ತರಿಸುವ ಗೊಡವೆಗೆ ಹೋಗಲಿಲ್ಲ.

೧೮೩೪ ಮಾರ್ಚ್ ೧೫ರ ಅಂಕಿತವಿದ್ದ ಘೋಷಣೆಯೊಂದನ್ನು ಮದರಾಸಿನ ಗವರ್ನರ್ ಹೊರಡಿಸಿದ :

"ಚಿಕವೀರರಾಜ ತನ್ನ ಹೇಯ ಕೃತ್ಯಗಳಿಂದ ಕಂಪನಿ ಸರಕಾರದ ಸ್ನೇಹವನ್ನೂ ರಕ್ಷಣೆಯನ್ನೂ ಕಳೆದುಕೊಂಡಿದ್ದಾನೆ. ಬ್ರಿಟಿಷರ ಸೈನ್ಯವು ಕೊಡಗಿನ ಮೇಲೆ ದಂಡಯಾತ್ರೆ ಕೈಗೊಳ್ಳುವುದು. ಶಾಂತಿಯಿಂದ ನಡೆದುಕೊಳ್ಳುವವರ ಹಾಗೂ ಬ್ರಿಟಿಷ್ ಪಡೆಗಳಿಗೆ ಸಹಾಯಮಾಡುವವರ ಆಸ್ತಿಪಾಸ್ತಿಗಳನ್ನು ಕಾಪಾಡಲಾಗುವುದು. ವೈರಿಯಾದ ರಾಜನಿಗೆ ಸಹಾಯ ಮಾಡುವವರನ್ನು ದ್ರೋಹಿಗಳೆಂದು ಬಗೆಯಲಾಗುವುದು, ಹಾಗೂ ಅವರಿಗೆ

ತಕ್ಕ ದಂಡನೆ ಕೊಡಲಾಗುವುದು. ಚಿತ್ರದುರ್ಗ, ರಾಯದುರ್ಗ, ಮೈಸೂರು, ಬಳ್ಳಾರಿ, ಮಲಬಾರ್. ಕನ್ನಡ ಜಿಲ್ಲೆ ಮತ್ತಿತರ ಕೊಡಗಿನ ಸುತ್ತಮುತ್ತಲ ನಮ್ಮ ಪ್ರಜೆಗಳ ಸಂಬಂಧಿಕರು ಆ ರಾಜನಲ್ಲಿ ಊಳಿಗಕ್ಕಿದ್ದಾರೆ. ಅವರಿಗೆ ತಿಳಿಯಹೇಳುವುದಕ್ಕೋಸ್ಕರ ಹಾಗೂ ಅವರ ಹಿತರಕ್ಷಣೆಯ ದೃಷ್ಟಿಯಿಂದ ಮೇಲ್ಕಾಣಿಸಿದ ಪ್ರದೇಶಗಳಲ್ಲೂ ಈ ಜಾಹೀರುನಾಮೆಯನ್ನು ಪ್ರಕಟಗೊಳಿಸಲಾಗುತ್ತಿದೆ."

ಇದಕ್ಕೊಂದು ಪ್ರತ್ಯುತ್ತರವನ್ನು ಚಿಕವೀರರಾಜೇಂದ್ರ ರಾಜ್ಯದಾದ್ಯಂತ ಡಂಗುರ ಹೊಡೆಸಿದ :

"ತೊತ್ತಿನ ಮಕ್ಕಳಾದ ಇಂಗ್ರೇಜಿಯವರು ಹೊರಡಿಸಿರುವ ಜಾಹೀರುನಾಮೆಯೊಂದು ಘನತೆವೆತ್ತ ಹಾಲೇರಿ ಸಂಸ್ಥಾನದ ಮಹಾಸ್ವಾಮಿಯವರ ಗಮನಕ್ಕೆ ಬಂದಿದೆ. ಅವರು ಮಹಾದೇವನನ್ನು ಮರೆತು, ದುರಹಂಕಾರದಿಂದ ಮನಸ್ಸಿಗೆ ತೋಚಿದ್ದನ್ನೆಲ್ಲಾ ಕಾಗದದ ಮೇಲೆ ಬರೆದು, ಹಾಲೇರಿ ಸಂಸ್ಥಾನದ ನಿವಾಸಿಗಳ ತಿಳಿವಳಿಕೆಗಾಗಿ ಗಡಿಯಲ್ಲಿ ಅಂಟಿಸಿದ್ದಾರೆ. ದುಷ್ಟರಾದ ಇಂಗ್ರೇಜಿಯವರ ಆ ಜಾಹೀರುನಾಮೆಯ ವಿವರ ಮಹಾದೇವನ ಕಿಂಕರರಾದ ನಾವು ಕಣ್ಣಿನಿಂದ ನೋಡುವುದಕ್ಕಾಗಲೀ ಕಿವಿಯಿಂದ ಕೇಳುವುದಕ್ಕಾಗಲೀ ಅರ್ಹವಾಗಿಲ್ಲ. ಅದನ್ನು ಬರೆದಂಥಾ ಮನುಷ್ಯನನ್ನು ಹಿಡಿದು ತಲೆ ಕಡಿದು ನಾವು ಶಾಸ್ತಿ ಮಾಡೇವು. ಸಂಶಯವಿಲ್ಲಾ.

"ಕಾಫರರಾದ ಪರಂಗಿಯವರು ಹಿಂದೂಸ್ಥಾನವನ್ನು ನಾಶಮಾಡುತ್ತಿದ್ದಾರೆ. ಈಗ ಅವರಿಗೆ ಸಾವು ಸನ್ನಿಹಿತವಾಗಿರುವಾಗ ಯಾವ ಔಷಧಿಯಿಂದೇನು ಪ್ರಯೋಜನ ? ದೇವರು ನಮ್ಮ ಬೆಂಬಲಕ್ಕಿದ್ದಾನೆ...

"ನಮ್ಮ ಕೂಡೆ ಯುದ್ಧ ನಡೆಸಲು ತೀರ್ಮಾನಿಸಿರುವ ಇಂಗ್ರೇಜಿಯವರು, ಯಾವಾಗಲೂ ತಮ್ಮ ಸೈನ್ಯದ ಮುಂದುಗಡೆ ಹಿಂದೂಸ್ಥಾನದ ಕೆಲವು ಕರಿಯ ಜನರನ್ನು ಕಳಿಸುತ್ತಾರೆ. ಲಡಾಯಿಯಲ್ಲಿ ಈ ಕರಿ ಜನರು ಮೊದಲು ಸಾಯಬೇಕೆಂಬುದೇ ಅವರ ಹಂಚಿಕೆಯಾಗಿರುತ್ತದೆ. ಆ ಧೂರ್ತರ ವಿರುದ್ಧ ಶಸ್ತ್ರಾಸ್ತ್ರ ಹಿಡಿದು ಹೋರಾಡಲು ನಾವು ದೃಢಸಂಕಲ್ಪ ಮಾಡಿದ್ದೇವೆ. ಯಾರೇ ಆದರೂ ನಮ್ಮ ಬೆಂಬಲಕ್ಕೆ ಬರದೆ ತಟಸ್ಥವಾಗಿ ಉಳಿದರೆ, ಅದು ದೈವದ್ರೋಹವಾಗುವುದು. ಮುಂದೆ ಇಂಗ್ರೇಜಿಯವರ ಕೈಯಲ್ಲಿ ಅವರು ನಾಶವಾಗುವರು. ಈಗ ನಮ್ಮ ವೈರಿಗಳು ಆಮಿಷ ತೋರಿಸುತ್ತಾರೆ. ಒಂದು ಸಲ್ಲಬೇಕಾದಲ್ಲಿ ಹತ್ತು ಕೊಡುತ್ತೇವೆನ್ನುತ್ತಾರೆ. ಅವರ ಕಾರ್ಯಸಾಧನೆಯಾದ ಮೇಲೆ ಮಾತ್ರ ಪ್ರಜೆಗಳ ಪಾಡು ಕತ್ತೇ ಪಾಡಾಗುತ್ತದೆ. ಮರುಳು ಮಾತಿನ ಬಲೆಗೆ ಯಾರೂ ಬೀಳದಿರಲಿ ! ಸತ್ಯಮೇವ ಜಯತೇ. ಸತ್ಯಕ್ಕೆ ಜಯವಾಗುವುದಲ್ಲದೆ, ಅಸತ್ಯ ಅನ್ಯಾಯಗಳಿಗಲ್ಲ ! ಮಹಾದೇವನಿಗೆ ಮೆಚ್ಚುಗೆಯಾಗುವಂತೆ ಸ್ವಾತಂತ್ರ್ಯ ರಕ್ಷಣೆಗಾಗಿ ನಮ್ಮ ಪ್ರಜೆಗಳೆಲ್ಲ ಹೋರಾಡಲಿ!"

ರಣನಿನಾದವಾಗಿತ್ತು, ಚಿಕವೀರರಾಜೇಂದ್ರನ ಪ್ರತಿಘೋಷಣೆ.

## ೩೬

ಬೋಪಣ್ಣ ಭೇಟಿಗೆ ಬಂದಾಗ ಚಿಕವೀರರಾಜೇಂದ್ರನಿಗೆ ಆಶ್ಚರ್ಯವಾಯಿತು.

"ನಾವಾಗಿ ಕರೆಸದೆ ಬರುವುದಿಲ್ಲ ಎಂದಿದ್ದಿರಿ, ಅಲ್ಲವೆ ದಿವಾನರೆ ?"

ಈ ಬೋಪಣ್ಣ ಹೊಸಬ. ಔದ್ಧತ್ಯದ ಸೋಂಕಿರಲಿಲ್ಲ. ಹೆಜ್ಜೆ ಹೆಜ್ಜೆಗೂ ವಿನಯ.

"ಮಹಾಸ್ವಾಮಿಯವರು ಅದನ್ನು ಮರೆತುಬಿಡಬೇಕು. ಒಂದು ವಿಷಘಳಿಗೆಯಲ್ಲಿ ಏನೋ ಹಾಗಂದೆ. ರಾಜ್ಯಕ್ಕೆ ಆಪತ್ತೊದಗಿದಾಗ ಕೈಕಟ್ಟಿ ಕೂರುತಾರೆಯೇ ? ಪಟ್ಟಾಭಿಷೇಕ ವಾದ ಹೊಸತಿನಲ್ಲಿ ನಮ್ಮದೊಂದು ಗಾದೆ ನೆನಪು ಮಾಡಿಕೊಟ್ಟಿದ್ದಿರಿ. ಆಣ್ ಪೊತ್ತಿತ್ ಚಾವುಂಡು..."

ತನ್ನ ಭುಜಬಲದಲ್ಲೂ ಕೊಡವರ ಹಾಗೂ ಇತರ ಸೈನಿಕರ ನಿಷ್ಠೆಯಲ್ಲೂ ಅಚಲ ವಿಶ್ವಾಸವಿದ್ದ ಚಿಕವೀರರಾಜೇಂದ್ರ, ಬೋಪಣ್ಣನ ಬದಲಾದ ನಡವಳಿಕೆಗೆ ಕಾರಣ ಹುಡುಕು ವುದಕ್ಕಾಗಲೀ ಅರ್ಥಕಲ್ಪಿಸುವುದಕ್ಕಾಗಲೀ ಸಿದ್ಧನಿರಲಿಲ್ಲ. ಆಪತ್ತಿನ ನೆರಳು ಕಂಡಾಗ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಮರೆತು ಜನ ಒಂದಾಗುವುದು ಸಹಜವಾಗಿತ್ತು. ಹೆಚ್ಚೆಂದರೆ ಬೋಪಣ್ಣ ಸ್ವತಃ ಯುದ್ಧರಂಗಕ್ಕೆ ಇಳಿಯದೆ ಇರಬಹುದು—ಎಂದು ಅರಸ ಭಾವಿಸಿದ್ದ. ಆತನಲ್ಲೂ ರಾಜಭಕ್ತಿ ಈಗ ಜಾಗೃತವಾದುದನ್ನು ಕಂಡು ಅವನು ಸಂತುಷ್ಟನಾದ.

ಆದರೂ ತನ್ನ ಆತ್ಮ ಸಮಾಧಾನಕ್ಕಾಗಿ ಸಣ್ಣದೊಂದು ಪರೀಕ್ಷೆ ಇರಲೆಂದು, ಅವನೆಂದ:

"ಹೀಗೆ ನೀವು ಭಾವಿಸೋದು ವೀರೋಚಿತವಾಗಿದೆ. ಹಿಂದೆಯೇ ನಾವು ಎಚ್ಚರಿಕೆ ಕೊಟ್ಟೆವು. ನೀವು, ಇದೆಲ್ಲಾ ತಪ್ಪುಗ್ರಹಿಕೆಯಿಂದ ಆಗಿದೆ ; ಸಂಧಾನದಿಂದ ಬಗೆಹರೀತದೆ—ಎಂದಿದ್ದಿರಿ. ಅದು ನಿಜವಾಗಲಿಲ್ಲ."

"ನನ್ನ ಎಣಿಕೆ ತಪ್ಪಾಯಿತು, ಮಹಾಸ್ವಾಮಿಗಳೆ."

"ಮೆನೊನ್ ಗೂಢಚಾರನಾಗಿ ಬಂದಿದ್ದ. ಬಿಟ್ಟಿದ್ದರೆ, ಎಷ್ಟೋ ವಿಷಯ ವೈರಿಗೆ ಗೊತ್ತಾಗತಿತ್ತು."

"ಅದೂ ನಿಜವೇ."

"ಹಳೇ ಮಾತು ಇನ್ನು ಬಿಡುವಾ. ಈಗ ಏನೇನಾಗಬೇಕು ? ನಿಮ್ಮ ಸಲಹೆ ಕೊಡಿ ರಂತೆ."

"ರಸದು ದಾಸ್ತಾನು ಮಾಡಬೇಕು. ಜಮ್ಮ ಕೊಡವರಿಗೆಲ್ಲ ಹೊರಟುಬರುವ ಹಾಗೆ ನಿರೂಪ ಕಳಿಸಬೇಕು. ಎಲ್ಲ ತಕ್ಕರಿಗೂ ಕಾರ್ಯಕಾರರಿಗೂ ಆಜ್ಞೆ ಕೊಡಬೇಕು."

"ಅಷ್ಟನ್ನು ಈಗಲೇ ಮಾಡಿದೇವೆ."

"ಗಡಿಪಹರೆ ಬಲಪಡಿಸಬೇಕು."

"ಅದಕ್ಕೆ ನಮ್ಮ ಕಾರ್ಯಕಾರರಿದ್ದಾರೆ. ಚೆಟ್ಟಿ ಮತ್ತು ಕರ್ತು ಅಮರಸುಳ್ಯ ಮಾಗಣೆಯ ರಕ್ಷಣೆ ಮಾಡತಾರೆ. ಉತ್ತಯ್ಯ ಪೆರಿಯಾಪಟ್ಣ ಗಡಿಯಲ್ಲಿರತಾನೆ. ಸುಲಕೊತ್ತು ಗಡಿಯಲ್ಲಿ ಕಾರ್ಯಕಾರ ಐಯಣ್ಣನನ್ನು ಇಡತೇವೆ ಹೆಗ್ಗಳ ಘಟ್ಟವನ್ನು ಕಳಿಂಗಯ್ಯ ಕಾಯುತ್ತಾನೆ. ಶನಿವಾರಸಂತೆ ಗಡಿಯಲ್ಲಿ ಮಾದಂಟ ಅಪ್ಪಚ್ಚು ಇರತಾನೆ...ಏನಂತೀರಿ ?"

ಬೋಪಣ್ಣ ಮೈಯೆಲ್ಲ ಕಿವಿಯಾಗಿ ಕೇಳಿದ. ಅಮರಸುಳ್ಯ ಮುಖ್ಯವಾಗಿರಲಿಲ್ಲ. ಉಳಿದದ್ದರಲ್ಲಿ ಐಯಣ್ಣನದೊಂದೇ ಅವನಿಗೆ ಚಿಂತೆ. ಅಪ್ಪಚ್ಚು, ಕಳಿಂಗಯ್ಯ, ಉತ್ತಯ್ಯ ರಂತೂ ಅಂತರಂಗದಲ್ಲಿ ಅವನ ಜನವೇ.

ಮುಖದ ಮೇಲೆ ಸ್ಥಿರ ಮುಗುಳುನಗೆಯೊಂದನ್ನು ಮೂಡಿಸಿ ಬೋಪಣ್ಣನೆಂದ :

"ಯಾವ ಶೂರ ಸೇನಾನಿಯೂ ಇದಕ್ಕಿಂತ ಉತ್ತಮವಾದ ಏರ್ಪಾಟು ಮಾಡಲಾರ, ಮಹಾಸ್ವಾಮಿ."

ಆ ನವುರು ಮಾತಿಗೆ ಚಿಕವೀರರಾಜ ಮಾರುಹೋದ.

"ಅಬ್ಬಾಸ್ ಅಲಿ ಶಸ್ತ್ರಸಾಮಗ್ರಿಗಳ ಪೂರೈಕೆಯ ಉಸ್ತುವಾರಿ ನೋಡತಾನೆ. ಬಸವ ಸರ್ವಕಾರ್ಯಕಾರನಾಗಿ ನನ್ನ ಬಳಿ ಇರತಾನೆ."

"ನನ್ನನ್ನು ಮರೆತಿರಿ !"

"ನೀವು ಸಲಹೆಗಾರರಾಗಿ ರಾಜಧಾನಿಯಲ್ಲಿರತೀರಿ. ಲಕ್ಷ್ಮೀನಾರಾಣಪ್ಪನವರಂತೂ ರಣಚಂಡಿಯ ಭಕ್ತರಲ್ಲವಲ್ಲ. ನೀವೂ ನಾನೂ ಪ್ರಸಂಗ ಬಂದಾಗ ಕಣಕ್ಕಿಳಿಯೋವಾ."

"ಬೋಪು ಹೋರಾಡಿ ಸತ್ತ ಅಂತ ಜನರ ಬಾಯಿಂದ ಅನ್ನಿಸಿಕೊಳ್ಳತೇನೆ."

"ಸಾಯೋದಲ್ಲ—ಗೆಲ್ಲೋದು ಮುಖ್ಯ ಬೋಪಣ್ಣನವರೆ."

"ಆ ಬಗ್ಗೆ ಮಹಾಸ್ವಾಮಿಗಳಿಗೆ ಸಂಶಯವೇ ಬೇಡ."

ಮುಂದೇನು ಹೇಳಬೇಕೆಂಬುದು ತೋಚದೆ, ಮುಗ್ಧ ಭಾವದಿಂದ, ಬೋಪಣ್ಣ ಕುಳಿತ.

"ಕೆಟ್ಟ ಮಾತು ಆಡಬಾರದು ಅಂತ ಸುಮ್ಮನಿದೀರೋ ? ಯಾವುದಾದರೊಂದು ರಂಗದಲ್ಲಿ ಸೋಲಾಯಿತು ಅನ್ನಿ. ಅದಕ್ಕೆ ಗೋಳಾಡಬೇಕಾದ್ದಿಲ್ಲ. ನಮ್ಮ ದೊಡ್ಡತಂದೆ ಯವರ ಕಾಲದಲ್ಲಿ ಏನಾಯಿತು ? ಮಡಕೇರಿಯನ್ನು ಹೈದರ್-ಟೀಪುಗಳು ಹಿಡಿಕೊಂಡ ಮೇಲೂ ನಾಲ್ಕುನಾಡು ಅರಮನೆಯಲ್ಲಿದ್ದುಕೊಂಡು ಅವರು ಹೋರಾಟ ಮುಂದುವರಿಸ ಲಿಲ್ಲ ? ರಾಜ್ಯ ಆಳಲಿಲ್ಲ ?"

"ನಾನೂ ಅದನ್ನೇ ಹೇಳೋಣಾಂತಿದ್ದೆ. ಮಹಾರಾಣಿಯವರನ್ನೂ ರಾಜಕುಮಾರಿ ಯವರನ್ನೂ ನಾಲ್ಕುನಾಡು ಅರಮನೆಯಲ್ಲಿ ಮಡಗೋದು ಮೇಲು."

"ಆ ವ್ಯವಸ್ಥೆ ನಾವು ಮಾಡಿಯೇ ಮಾಡತೇವೆ."

ಬೋಪಣ್ಣ ಏಳುವ ಸೂಚನೆ ಕಂಡಿತು.

"ದಿನಾಗಲೂ ಬೆಳಿಗ್ಗೆ ಬಂದು ಹೋಗುತ್ತಿರಿ, ದಿವಾನರೆ" ಎಂದ ಅರಸ.

"ಅಪ್ಪಣೆ."

"ರಾಜಕಾರ್ಯನಿಮಿತ್ತ ಮಧ್ಯರಾತ್ರಿಯಾದರೂ ಸರಿ ನಿಮ್ಮನ್ನೆಬ್ಬಿಸಿ ನಾವು ತೊಂದರೆ ಕೊಡಬಹುದು !"

"ಮಹಾಸ್ವಾಮಿಯವರು ಪರಿಹಾಸ್ಯ ಮಾಡುತಾರೆ !"

ಚಿಕವೀರರಾಜೇಂದ್ರ ನಗುತ್ತ ಎದ್ದ. ಆಗಲೆ ಎದ್ದು ನಿಂತಿದ್ದ ದಿವಾನನ ಬಳಿ ಸಾರಿ, ಆತನ ಭುಜಗಳನ್ನು ಹಿಡಿದು, ಭಾವೋದ್ವೇಗದಿಂದ ಅವನೆಂದ :

"ಆಗಲಿ, ಬೋಪಣ್ಣ. ಹೋಗಿ ಬನ್ನಿ."

## ೩೭

ಕೊಡಗನ್ನು ನುಗ್ಗಲು ಬಂದುದು ಆರು ಸಾವಿರ ಯೋಧರ ಸುಸಜ್ಜಿತ ಸೇನೆ. ರಾಜ್ಯದ ಮೇಲೆ ಅದು ದಾಳಿ ನಡೆಸಿದ್ದು ಐದು ದಿಕ್ಕುಗಳಿಂದ. ಕರ್ನಲ್ ಲಿಂಡ್ಸೆ ದಾಳಿಕಾರರ ಸರ್ವ ಸೇನಾಪತಿ. ಅವನ ಜತೆಗಾರನಾಗಿ ಬಂದವನು, ಕೊಡಗಿನ ವ್ಯವಹಾರಗಳಿಗಾಗಿ ಗವರ್ನರ್ ಜನರಲನ ರಾಜಕೀಯ ಏಜೆಂಟನೆಂದು ನೇಮಕಗೊಂಡ ಕರ್ನಲ್ ಫ್ರೇಸರ್.

ಕೊಡಗಿನಲ್ಲಿ ವೀರ ಯೋಧರಿಗೆ ಅಭಾವವಿರಲಿಲ್ಲ. ಅಲ್ಲಿದ್ದುದೊಂದೇ ಕೊರತೆ. ಐಕ-ಮತ್ಯದ್ದು. ರಾಜ್ಯದ ಶಕ್ತಿಯನ್ನೆಲ್ಲ ಒಂದುಗೂಡಿಸಿ, ಹೋರಾಡಿ, ಆಂಗ್ಲರನ್ನು ಸೋಲಿಸ ಬಹುದು—ಎಂದು ನಂಬಿದ್ದ ಚಿಕವೀರರಾಜೇಂದ್ರ. ಆದರೆ, ಬೋಪಣ್ಣ—ಪೊನ್ನಪ್ಪರ

ಕಾರಸ್ಥಾನದಿಂದಾಗಿ, ರಾಜ್ಯದ ಅಗಸೆ ಬಾಗಿಲಿನಿಂದ ರಾಜಧಾನಿಯ ದಿಡ್ಡಿ ಬಾಗಿಲಿನವರೆಗೂ ರಕ್ಷಣೆಯ ದುರ್ಗ ಬಿರುಕುಬಿಟ್ಟಿತ್ತು.

ಬೋಪಣ್ಣ ಆತ್ಮವಿಶ್ವಾಸದಿಂದ ದಾಳಿಕಾರರಿಗೆ ಸಂದೇಶ ಕಳುಹಿದ್ದ :

"ಮುನ್ನುಗ್ಗಿ ಬನ್ನಿ. ನಮ್ಮವರು ಹೋರಾಡುವುದಿಲ್ಲ. ಶರಣಾಗುತಾರೆ."

...ಪೂರ್ವಪಡೆ ಸ್ವತಃ ಲಿಂಡ್ಸೆಯ ನಾಯಕತ್ವದಲ್ಲಿ ಏಪ್ರಿಲ್ ೨ರಂದು ಬೆಟ್ಟದಪುರ ದಿಂದ ಹೊರಟು ಸುಲಕೊತ್ತಿಗೆ ಬಂದಿತು. ಕಾವೇರಿಯ ದಂಡೆಯನ್ನು ತಲಪಿತು. ಆದರ ಈಚೆಯ ದಡದಲ್ಲಿತ್ತು ಹೆಬ್ಬಾಲೆ. ಆ ದಡದುದ್ದಕ್ಕೂ ಐಯಣ್ಣನ ನೇತೃತ್ವದಲ್ಲಿ ಕೊಡಗಿನ ಸೈನಿಕರು ಮಣ್ಣಿನ ಗೋಡೆಯನ್ನೇರಿಸಿದ್ದರು. ಆ ಗೋಡೆಯಲ್ಲಿ ಗುಂಡು ಹಾರಿಸುವುದ ಕ್ಕೋಸ್ಕರ ರಂಧ್ರಗಳಿದ್ದುವು. ಗೋಡೆಯ ಮರೆಯಲ್ಲಿ ಬಂದೂಕು, ಭರ್ಜಿ, ಬಿಲ್ಲು ಬಾಣ ಗಳನ್ನು ಧರಿಸಿದ್ದ ಯೋಧರಿದ್ದರು.

ಲಿಂಡ್ಸೆ ಆಕಾಶಕ್ಕೊಂದು ಗುಂಡು ಹಾರಿಸಿ, 'ನಾವು ಬಂದಿದೇವೆ' ಎಂದು ಸಾರಿದ. ಐಯಣ್ಣ ತಾನೊಂದು ಗುಂಡು ಹಾರಿಸಿ, 'ನಾವು ಸಿದ್ಧರಿದ್ದೇವೆ' ಎಂದ.

ಬೋಪಣ್ಣ ಹೇಳಿಕಳುಹಿದ್ದನಲ್ಲ, ಕದನವಾಗದು ಎಂದು ?

ತಮ್ಮ ದಂಡೆಯ ಮೇಲೆ ಆಂಗ್ಲರು ಬಿಳಿಯ ಬಾವುಟವನ್ನೇರಿಸಿದರು. ಒಬ್ಬ ಸೈನಿಕ ಅದನ್ನೆತ್ತಿಕೊಂಡು ನದಿಯನ್ನು ದಾಟಲೆತ್ನಿಸಿದ. ಸುಂಯ್ ಎಂದು ಒಂದು ಗುಂಡು ಬಾವುಟದಲ್ಲಿ ತೂತು ಕೊರೆಯಿತು.

"ಫೈರ್ !"

ತೋಪುಗಳು ಮಾತನಾಡಿದುವು. ಸಿಡಿಗುಂಡುಗಳು ಸೀಮೋಲ್ಲಂಘನ ಮಾಡಿದುವು. ಹೂಂಕಾರ ಚೀತ್ಕಾರಗಳು ಶ್ರುತಿ ಹಿಡಿದುವು. ಮದ್ದುಗುಂಡುಗಳು ಕೆಡವಿದ ಗೋಡೆಯ ಮಣ್ಣು, ಕಾವೇರಿಯ ನೀರನ್ನು ಕಲಕಿತು. ನದಿ ದಾಟತೊಡಗಿದ್ದ ಆಂಗ್ಲ ಪಡೆಯ ಸೈನಿಕರ ರಕ್ತ ಮಲಿನ ನೀರಿನಲ್ಲಿ ಬೆರೆಯಿತು.

ಕೊಡಗಿನ ಸೈನಿಕರು ರಾಮಸ್ವಾಮಿ ಕಣಿವೆಯತ್ತ ಹಿಂದಕ್ಕೆ ಸರಿದರು.

ಮಾರನೆಯ ದಿನ ರಾಮಸ್ವಾಮಿ ದೇವಾಲಯದ ಆಯಕಟ್ಟಿನ ಸ್ಥಳದಿಂದ ಕೊಡಗು ದಳ ಪ್ರತಿಭಟಿಸಿತು. ಆದರೆ, ದೇಗುಲ ಪುಡಿಯಾದೀತೆಂಬ ಭಯವೆ ನುಗ್ಗುತ್ತಿದ್ದವರಿಗೆ ?

ಮುಂದೆ ಹಾರಂಗಿ ಇಂಗ್ಲಿಷರಿಗೆ ತಡೆಬಂಡೆಯಾಯಿತು. ಸಾವು ನೋವುಗಳನ್ನು ಗಮನಿಸದೆ ಅಲ್ಲಿಂದಲೂ ಕೊಡಗು ಸೈನಿಕರನ್ನು ಹಿಂದಕ್ಕೆ ಅಟ್ಟಲು ಬಿಳಿಯರ ದಂಡು ಪದೇ ಪದೇ ಯತ್ನಿಸಿತು.

...ಪೂರ್ವಪಡೆಯ ಇನ್ನೊಂದು ಶಾಖೆ ಕರ್ನಲ್ ಸ್ಟ್ಯುಅರ್ಟ್‌ನ ಹಿರಿತನದಲ್ಲಿ ದಾಳಿಯ ದಿನ ಪೆರಿಯಾಪಟ್ಟಣದಿಂದ ಹೊರಟುಬಂತು. ಕಾವೇರಿಯ ಈಚೆಯ ದಡದಲ್ಲಿ, ರಂಗಸಮುದ್ರದಲ್ಲಿ, ಕೊಡಗು ಸೈನ್ಯದ ತುಕ್ಕಡಿ ಇತ್ತು. ಅದರ ನಾಯಕ ಉತ್ತಯ್ಯ. ಬೋಪಣ್ಣನ ಪ್ರಭಾವಕ್ಕೊಳಗಾಗಿ ಆತನ ಮನಸ್ಸು ಕಲುಷಿತವಾಗಿತ್ತು. ಅವನು ನೀಡಿದ್ದು ನಾಮಮಾತ್ರ ಪ್ರತಿಭಟನೆ. ಆಚೆಯ ದಡದಿಂದ ತೋಪುಗಳು ಗರ್ಜಿಸತೊಡಗಿದಂತೆ ಉತ್ತಯ್ಯ ತನ್ನ ತುಕ್ಕಡಿಯೊಡನೆ ಒಳಪ್ರದೇಶಕ್ಕೆ ನಿರ್ಗಮಿಸಿದ.

ಸ್ಟ್ಯುಅರ್ಟ್ ಕೊಂಡಗೇರಿಯಲ್ಲಿ ಕಾವೇರಿ ನದಿಯನ್ನು ದಾಟಿ ವೀರರಾಜಪೇಟೆಯವರೆಗೂ ಯಾವ ತಡೆಯೂ ಇಲ್ಲದೆ ಮುಂದುವರಿದು ಬೀಡುಬಿಟ್ಟ. ಅಲ್ಲಿ ಪಶ್ಚಿಮದಿಂದ ಬರುವ

ದಂಡಿನೊಡನೆ ಸಹಕರಿಸಿ, ಸಿದ್ಧಾಪುರದ ಮಾರ್ಗವಾಗಿ ಮೈಸೂರಿನೊಡನೆ ಸಂಪರ್ಕ ಬೆಳೆಸಲು ಅವನು ಆಜ್ಞಪ್ತನಾಗಿದ್ದ.

...ಉತ್ತರದ ಪಡೆಗೆ ಮುಖ್ಯಸ್ಥನಾಗಿದ್ದವನು ಕರ್ನಲ್ ವಾಘ್. ಏಪ್ರಿಲ್ ಮೊದಲ ದಿನವೇ ಹೊಸಕೋಟೆಯಿಂದ ಹೊರಟು. ಅಲ್ಲಿ ಕೊಡಗಿನ ಎಲ್ಲೆಯಾದ ಹೇಮಾವತಿ ಯನ್ನು ದಾಟಿ ಕೊಡ್ಲಿಪೇಟೆಯವರೆಗೂ ಯಾವ ಪ್ರತಿಭಟನೆಯೂ ಇಲ್ಲದೆ ಆ ತುಕ್ಕಡಿ ಮುಂದುವರಿಯಿತು.

ಕೊಡ್ಲಿಪೇಟೆಯಲ್ಲಿ ನಡೆದುದು ಪ್ರತಿಭಟನೆಯ ನಾಟಕ ಮಾತ್ರ. ಮುಂದೆ ಮುದ್ರ ವಳ್ಳಿಯಲ್ಲೂ ಅಷ್ಟೆ. ಇನ್ನೇನು, ಹಾರಂಗಿಯಲ್ಲಿ ಪೂರ್ವಪಡೆಯನ್ನು ವಾಘ್ ಸೇರಬೇಕು ಎನ್ನುವಷ್ಟರಲ್ಲೇ ಅನಿರೀಕ್ಷಿತವಾಗಿ ಕಾಳಗ ಸಂಭವಿಸಿತು. ಮಾದಂಟ ಅಪ್ಪಚ್ಚು ಉದ್ದೇಶ ಪೂರ್ವಕವಾಗಿಯೇ ಹಿಮ್ಮೆಟ್ಟುತ್ತಿದ್ದಾನೆ ಎಂಬ ಶಂಕೆ ಅನೇಕ ಚಾವಡಿಕಾರರಲ್ಲಿ ಮೂಡಿ, ಕೊಡಗಿನ ಪಡೆಯಲ್ಲಿ ಗದ್ದಲವಾಯಿತು. ತನ್ನ ಮಾನರಕ್ಷಣೆಗಾಗಿ ಅಪ್ಪಚ್ಚು ಹೋರಾಡಲು ನಿರ್ಧರಿಸಿದ.

ಆಗ ನಡೆದ ಆರು ಘಳಿಗೆಗಳ ನಿಕರದ ಕಾಳಗ ಕೊಡಗಿನ ಸೈನಿಕರೆಂತಹ ವೀರರೆಂಬು ದನ್ನು ತೋರಿಸಿಕೊಟ್ಟಿತು. ಕರ್ನಲ್ ಮಿಲ್ ಎಂಬಾತ ಕೊಡವನೊಬ್ಬನ ಗುಂಡಿಗೆ ಆಹುತಿ ಯಾದ. ರಾಬರ್ಟ್‌ಸನ್, ಬಾಲಿಂಗ್ಟನ್ ಎಂಬವರು ಧರೆಗೆ ಉರುಳಿದರು. ಬಿಳಿಯ ಪಡೆಯ ನೂರಾರು ಜನ ಹತರಾದರು. ದಳ ಮೂರು ಹರದಾರಿಗಳ ದೂರಕ್ಕೆ ಹಿಂದೆ ಸರಿಯಿತು.

...ಪಶ್ಚಿಮದ ಪಡೆ ಕಣ್ಣಾನೂರಿನಿಂದ ಮಾರ್ಚ್ ತಿಂಗಳ ಕೊನೆಯ ದಿನವೇ ಕರ್ನಲ್ ಫಾಲ್ಸನ ನಾಯಕತ್ವದಲ್ಲಿ ಹೊರಟಿತು. ಹೆಗ್ಗಳ ಘಟ್ಟದ ಮೂಲಕ ವೀರರಾಜಪೇಟೆಯನ್ನು ತಲಪಿ ಮಡಕೇರಿಗೆ ಮುಂದುವರಿಯಬೇಕೆಂಬುದು ಆತನಿಗೆ ದೊರೆತಿದ್ದ ಆಜ್ಞೆ.

ಸಾಧಾರಣ ಸಂವತ್ಸರದಲ್ಲಿ ಹೆಗ್ಗಳ ಘಟ್ಟದ ದಾರಿಯಾಗಿಯೇ ದೊಡ್ಡವೀರರಾಜೇಂದ್ರ ತಲಚೇರಿಗೆ ಇಳಿದುಹೋಗಿ, ಆಂಗ್ಲರೊಡನೆ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಂಡಿದ್ದ. ಇಂಗ್ಲಿಷರ ತೋಪುಗಳನ್ನು ಎಳೆಯುವುದಕ್ಕಾಗಿ ಆತ ನೀಡಿದ ಹೋರಿಗಳು ಆ ಘಟ್ಟದ ಮಾರ್ಗವಾಗಿಯೇ ಮಲೆಯಾಳದ ಬಯಲಿಗೆ ಇಳಿದಿದ್ದುವು. ಮುಂದೆ ಟೀಪುವನ್ನು ಸದೆಬಡಿ ಯುವುದಕ್ಕೋಸ್ಕರ ಆ ದಾರಿಯಾಗಿಯೇ ಇಂಗ್ಲಿಷ್ ದಂಡುಗಳು ಕೊಡಗಿಗೆ ಬಂದು ಮೈಸೂರಿಗೆ ಮುಂದುವರಿದಿದ್ದುವು.

ಆ ಪರಿಚಿತ ಹಾದಿಯಲ್ಲಿ, ಅವರೀಗ ತಮ್ಮ ಹಳೆಯ ಮಿತ್ರನ ರಾಜ್ಯದ ಮೇಲೆ ದಾಳಿ ನಡೆಸಲು ಬಂದರು.

ಆದರೆ ದಾರಿ ಸುಗಮವಾಗಿರಲಿಲ್ಲ. ಒಂದರ ಹಿಂದೆ ಒಂದಾಗಿ ಕಲ್ಲಿನ ಗೋಡೆಗಳು ಕಂಡುವು. ಭೀಮ ವೃಕ್ಷಗಳ ಕಾಂಡಗಳು ಹಾದಿಗಡ್ಡವಾಗಿ ಮಲಗಿದ್ದುವು. ಅವುಗಳ ಹಿಂದೆಯೂ ಕೊಡಗಿನ ಸೈನಿಕರಿದ್ದರು. ಇಕ್ಕೆಲಗಳಲ್ಲಿ ಕಾಡುಗಳಲ್ಲೂ ಅವರಿದ್ದರು.

ವಾಸ್ತವವಾಗಿ ಕಾರ್ಯಕಾರ ಕಳಿಂಗಯ್ಯ ಅಡ್ಡಗೋಡೆಯ ಮೇಲೆ ಕುಳಿತಿದ್ದ: ಬೋಪಣ್ಣನ ಯೋಜನೆ ಕೈಗೂಡುವಂತಿದ್ದರೆ ಸಕಾಲದಲ್ಲಿ ತಾನು ಅವನ ಕಡೆಗೆ ಧುಮುಕಬೇಕು. ಅವನು ವಿಫಲನಾಗುವ ಹಾಗಿದ್ದರೆ, ಗಡಿ ರಕ್ಷಣೆಯನ್ನು ಮಾಡಿದ ವೀರ ಎಂದು ರಾಜನ ಹೊಗಳಿಕೆಗೆ ಪಾತ್ರನಾಗಬೇಕು.

ಇದೊಂದನ್ನೂ ತಿಳಿಯದ ಸೈನಿಕರು, ಸ್ಥೈರ್ಯದಿಂದ ಕಲಿಗಳಾಗಿ ಹೋರಾಟ ನಡೆಸಿ

ದರು. ಪರಿಣಾಮವಾಗಿ ಫಾಲ್ಸನ ಪಡೆ ಪ್ರತಿಯೊಂದು ಅಂಗುಲ ನೆಲಕ್ಕೂ ಅಪಾರ ಬೆಲೆ ತೆರಬೇಕಾಯಿತು.

...ಇನ್ನೊಂದು ಪಶ್ಚಿಮದ ಪಡೆ, ಕರ್ನಲ್ ಜಾಕ್ಸನ್ನನ ಮುಖಂಡತ್ವದಲ್ಲಿ, ಮಾರ್ಚ್ ೨೯ನೆಯ ದಿನ ನಡುವಿರುಳು ಕಳೆದ ಮೇಲೆ, ಕಡಲತೀರದ ಕುಂಬಳೆಯಿಂದ ಪೂರ್ವಾಭಿಮುಖವಾಗಿ ಹೊರಟಿತು. ದಾರಿಯುದ್ದಕ್ಕೂ ಹೋರಾಡುತ್ತ ಉಪ್ಪಿನಂಗಡಿ, ಬೆಳ್ಳಾರೆಗಳನ್ನು ದಾಟಿ ನಾಲ್ಕನೆಯ ದಿನ ಸುಬ್ರಹ್ಮಣ್ಯವನ್ನು ತಲಪಿತು.

ಅಲ್ಲಿಂದ ಮುಂದೆ ಸಾಗಿ ಸುಳ್ಯದ ಕೋಟೆಯನ್ನು ವಶಪಡಿಸಿಕೊಳ್ಳುವುದು ಅವನ ಉದ್ದೇಶ. ಆದರೆ ಕುಡಿಯ ಸೋದರರ ನಾಯಕತ್ವದಲ್ಲಿ ಕೊಡಗು ಸೈನಿಕರು ಶಾಖೋಪಶಾಖೆಗಳಾಗಿ ಹೆಜ್ಜೆಹೆಜ್ಜೆಗೂ ಜಾಕ್ಸನ್ನನ ಪಡೆಯೊಡನೆ ಕಾದಿದರು. ಆತ ಅಧೀರನಾದ. ಇಲ್ಲಿಂದ ಪಾರಾಗುವುದೇ ದುಸ್ಸಾಧ್ಯ ಎಂದು ಅವನಿಗನಿಸಿತು. ಅಳಿದುಳಿದ ದಂಡಿನೊಡನೆ ಕುಂಬಳೆಗೆ ಹಿಂತಿರುಗಲು ಯತ್ನಿಸಿದ.

ಆದರೆ, ಬಂದ ದಾರಿಗೂ ಸುಂಕವಿತ್ತು. ಉದ್ದಕ್ಕೂ ಅವನ ಸೈನಿಕರು ಗೋರಿ ಕಂಡರು. ಕೊಡಗಿನ ಯೋಧರು, ರಣೋತ್ಸಾಹದಿಂದ ಆಂಗ್ಲ ಪಡೆಯ ಮೇಲೆ ಎರಗಿ, ಅದನ್ನು ಚೂರುಚೂರಾಗಿ ಕಡಿದೊಗೆದರು.

ಬದುಕಿ ಉಳಿದ ಕೆಲವೇ ಜನರೊಡನೆ ಜಾಕ್ಸನ್ ಕುಂಬಳೆಯನ್ನು ತಲಪಿದ. ಕೊಡಗಿನ ಮೇಲಣ ದಂಡಯಾತ್ರೆ ಅಯಶಸ್ವಿಯಾಯಿತು, ಎಂದು ಆತ ಭಾವಿಸಿದ. ತನ್ನನ್ನು ದಂಡಿನ ವಿಚಾರಣೆಗೆ ಒಳಗುಮಾಡುತ್ತಾರೆ, ಎಂದು ಬೆದರಿದ.

ಆದರೆ, ಅವನು ಕಷ್ಟಪರಂಪರೆಗಳನ್ನು ಅನುಭವಿಸುತ್ತಿದ್ದ ವೇಳೆಯಲ್ಲೇ ಕೊಡಗಿನೊಳಗೆ ಬೇರೆಯೇ ಬಗೆಯ ಘಟನೆಗಳು ನಡೆಯುತ್ತಲಿದ್ದುವು.

## ೩೮

"ಮಹಾಸ್ವಾಮಿಯವರೆ, ಘಾತವಾಯಿತು!"

ಕರೆಕಳುಹಿದ ಬೋಪು ದಿವಾನ ಬರಲಿಲ್ಲವೆಂದು ಅಸಹನೆಯಿಂದ ಅರಸ ಶತಪಥ ತುಳಿಯುತ್ತಲಿದ್ದ.

ಆತನ ಕಿವಿಗೆ ಬಿದ್ದುದು, ಬಸವನ ಆರ್ತನಾದದಂತಹ ಕೂಗು.

ಚಿಕವೀರರಾಜೇಂದ್ರ ಬೆಚ್ಚಿಬಿದ್ದು ಬಾಗಿಲ ಕಡೆಗೆ ನೋಡಿದ. ಅಲ್ಲಿ ಮುಖದಿಂದ ಬೆವರಿಳಿಯುತ್ತಿದ್ದ ಬಸವ ಏದುಸಿರುಬಿಡುತ್ತ ನಿಂತಿದ್ದ. ತಲೆ ಕೂದಲು ಕೆದರಿತ್ತು.

"ಏನಾಯಿತು ಬಸವ?"

ರಣರಂಗಗಳಿಂದ ಕೆಟ್ಟ ಸುದ್ದಿ ಬಂತೇನೋ ಎಂದು ಅರಸನಿಗೆ ಗಾಬರಿ.

"ಬೋಪಣ್ಣ ಕೊನೆಗೂ ಕೈಕೊಟ್ಟ, ಮಹಾಸ್ವಾಮಿ."

ಮನೆಯಲ್ಲಿಲ್ಲವಂತೆ—ಎಂದಿದ್ದ ಕರೆಯಲು ಹೋದ ಚಾವಡಿಕಾರ.

"ಏನಾಯಿತು?"

"ಇಂಗ್ರೇಜಿಯವರಿಗೆ ಶರಣಾಗಬೇಕೂಂತ ನಮ್ಮ ಎಲ್ಲಾ ಗಡಿ ಸೈನ್ಯಗಳಿಗೆ ಬೋಪು ರಾಜಮುದ್ರೆ ಇರೋ ಅನುಜ್ಞೆ ಆಗಲೇ ಕಳಿಸಿದಾನೆ."

ಅದು ಬರಸಿಡಲು.

''ಎಲಾ ಘಾತಕಿ! ಹೀಗೂ ವಂಚಿಸಿದನಾ ? ಇನ್ನು—ಇನ್ನೇನಾಗತದೆ ಬಸವ ?''

''ನಮ್ಮ ಪಡೆಗಳೆಲ್ಲ ಶರಣಾಗತವೆ! ವೈರಿಗಳ ದಂಡು ಇಲ್ಲಿಗೆ ಬರತದೆ !''

ಚಿಕವೀರರಾಜನ ಜಂಘಾಬಲ ಉಡುಗಿತು. ಅವನ ಕಣ್ಣುಗಳನ್ನು ಕತ್ತಲು ಕವಿಯಿತು. ಆ ಸ್ಥಿತಿಯಲ್ಲೂ ಅವನು ಆಕ್ರೋಶ ಮಾಡಿದ :

''ಎಲ್ಲಿ ಬೋಪಣ್ಣ! ಅವನನ್ನು ಹಿಡಕೊಂಡು ಬನ್ನಿ. ಅವನ ಎದೆ ಬಗೀತೀನಿ!''

ಮುಂದಿನ ಕ್ರಮಗಳನ್ನು ಕುರಿತು ಚಿಂತೆಗೀಡಾಗಿದ್ದ ಬಸವ, ರಾಜನನ್ನು ಸಂತೈಸ ಲೆತ್ನಿಸಿದ :

''ಇನ್ನೂ ಹೋರಾಟ ಸಾಧ್ಯ, ಮಹಾಸ್ವಾಮಿ. ಈ ಕ್ಷಣವೆ ನಾವು ನಾಲ್ಕುನಾಡು ಅರಮನೆಗೆ ತೆರಳಬೇಕು. ಅಲ್ಲಿ ಸೈನ್ಯವನ್ನು ಒಟ್ಟುಗೂಡಿಸಬೇಕು. ಇಲ್ಲಿ ಇರೋದು ಅಪಾಯ ! ನಾವು ತಡಮಾಡಬಾರದು !''

ಅರಸ ಶಿಲೆಯಂತೆ ನಿಂತ. ಅವನ ಮುಖದಲ್ಲಿ ಕ್ರೋಧ ಹೆಪ್ಪುಗಟ್ಟಿತ್ತು. ಧ್ವನಿ ಹೊರಡಲಾರದೆ ಗಂಟಲಲ್ಲೆ ಒರಲುತ್ತಿತ್ತು.

ಈ ಮಾತುಕತೆಯನ್ನು ರಾಣಿ ಕೇಳಿಸಿಕೊಂಡಿದ್ದಳು. ಆಕೆ ಶಾಂತವಾಗಿ ಹೆಜ್ಜೆ ಇರಿಸುತ್ತ ತೆರೆಯಿಂದ ಹೊರಬಂದಳು.

ಬಸವನೆಂದ :

"ಮಹಾರಾಣಿಯವರು ಶೋಕಿಸಬಾರದು."

ಯಾವ ಕಂಪನವೂ ಇಲ್ಲದ ಸ್ವರದಲ್ಲಿ ರಾಣಿ ಅಂದಳು :

"ನಾಲ್ಕುನಾಡಿಗೆ ಈಗಲೆ ಹೊರಡೋದೇ ಹ್ಯಾಗೆ ಅಂತ ಕೇಳೋಕೆ ಬಂದೆ."

"ಹೌದು ತಾಯಿ."

"ರಾಜಕುಮಾರಿ ಬಿಸಿಲ ಮಹಡೀಲಿದಾಳೆ. ಕರೀತೇನೆ."

ಕರ್ಕಶವಾಗಿ ಅರಸನೆಂದ :

"ಆಗಲಿ ಬಸವ, ನಾಲ್ಕುನಾಡಿಗೆ ಹೋಗೋಣ."

## ೩೯

ಐದು ಗಡಿಗಳಲ್ಲೂ ಕದನ ಆರಂಭವಾದೊಡನೆಯೇ, 'ಶರಣಾಗತಿಯ ಕೆಲಸ ಸುಲಭ ವಾಗುವುದಿಲ್ಲ'—ಎಂಬುದು ಬೋಪಣ್ಣನಿಗೆ ಮನದಟ್ಟಾಯಿತು. ಸ್ವತಃ ಚಿಕವೀರರಾಜನೂ ರಣರಂಗಕ್ಕಿಳಿದರೆ ವಿಜಯಶ್ರೀ ಇಂಗ್ಲಿಷರಿಗೆ ಒಲಿಯದಿರಲೂ ಬಹುದು—ಎಂದು ಅವನು ಚಿಂತೆಗೀಡಾದ.

ಇದ್ದ ಪರಿಹಾರವೊಂದೇ : ಯುದ್ಧದ ಕ್ಷಿಪ್ರ ಮುಕ್ತಾಯ.

ಅದಕ್ಕೆ ಉಪಾಯ : ದಾಳಿಕಾರರಿಗೆ ಶರಣಾಗಿರೆಂದು ರಾಜನ ಹೆಸರಲ್ಲಿ ಅನುಜ್ಞೆ.

ಅಪ್ಪಚ್ಚು ಮತ್ತು ಉತ್ತಯ್ಯ ಅದಕ್ಕಾಗಿಯೇ ಕಾದಿದ್ದರು. ಕಳಿಂಗಯ್ಯನೂ ಸಮಾ ಧಾನದ ನಿಟ್ಟುಸಿರು ಬಿಟ್ಟ. ಕುಡಿಯ ಸೋದರರಿಗೇನೋ ಅದು ತಲಪಲಿಲ್ಲ.

ಅರಸನ ನಂಬಿಗೆಯ ಕಾರ್ಯಕಾರನಾದ ಐಯಣ್ಣ ಮಾತ್ರ, ಹೀಗೂ ಉಂಟೆ ?—ಎಂದು ವಿಸ್ಮಿತನಾದ.

ಕ್ರಮಕ್ರಮವಾಗಿ ವೈರಿಯನ್ನು ಹಣ್ಣುಮಾಡುವ ಅವನ ಸಮರ ನೀತಿ ಅವರೆಗೂ

ಯಶಸ್ವಿಯಾಗಿತ್ತು. ಯುದ್ಧದ ಮೂರನೆಯ ದಿನ ಒಂದು ಹರದಾರಿ ಮುಂದುವರಿಯು ವುದಕ್ಕೂ ಇಂಗ್ಲಿಷರು ಶಕ್ತರಾಗಿರಲಿಲ್ಲ. ಹೀಗಿದ್ದೂ ಅವರಿಗೆ ಈಗ ತಾನು ಶರಣಾಗ ಬೇಕೆ ?

ಮಾನಸಿಕ ತೊಳಲಾಟದಲ್ಲಿ ಆತ ಸಿಲುಕಿದ್ದಾಗಲೇ ಬೋಪು ದಿವಾನ, ನಾಲ್ಕುನೂರು ಜನ ಕೊಡವ ಯೋಧರೊಡನೆ ಅಲ್ಲಿಗೆ ಆಗಮಿಸಿದ. ಅವನ ಪಕ್ಕದಲ್ಲಿ ಪೊನ್ನಪ್ಪನಿದ್ದ. ಲಕ್ಷ್ಮೀನಾರಾಯಣನನ್ನೂ ಒತ್ತಾಯಪಡಿಸಿ ಕರಕೊಂಡು ಬಂದಿದ್ದ ಆತ.

ಹೋರಾಡುತ್ತಲಿದ್ದ ಸೈನಿಕರು ತಮಗೆ ಸಹಾಯ ಬಂತು ಎಂದುಕೊಂಡರು.

ಈ ಬೋಪು ದಿವಾನನನ್ನು ನಂಬಿ ಕೆಟ್ಟೆವೋ ಹೇಗೆ—ಎಂದು ಫ್ರೇಸರನೂ ಲಿಂಡ್ಸೆಯೂ ಕಾತರಗೊಳ್ಳತೊಡಗಿದ್ದ ವೇಳೆಯಲ್ಲೇ. ಬೋಪಣ್ಣ ಯುದ್ಧರಂಗಕ್ಕೆ ಬಂದಿರುವ ವಾರ್ತೆ ಅವರಿಗೆ ಮುಟ್ಟಿತು.

ಐಯಣ್ಣನನ್ನು ಬೋಪಣ್ಣ ಕೇಳಿದ :

"ಲಡಾಯಿ ನಿಲ್ಲಿಸೂಂತ ಆಜ್ಞೆ ಬರಲಿಲ್ಲವಾ ?"

"ಬಂತು" ಎಂದ ಐಯಣ್ಣ.

"ಮತ್ಯಾಕೆ ಇನ್ನೂ ಗುಂಡಿನ ಶಬ್ದ ಕೇಳತಾ ಇದೆ ?"

"ಆಜ್ಞೆ ಈಗಷ್ಟೇ ಮುಟ್ಟಿತು."

"ಏನ್ಮಾಡೋಣಾಂತ ತಲೆ ತುರಿಸ್ಕೊಂಡು ನಿಂತಿದೀಯಾ ? ರಾಜದ್ರೋಹಿಯಾಗ ತೀಯ ? ನಿನ್ನನ್ನು ಬರ್ತರ್ಫ್ ಮಾಡಿದೀನಿ ! ದಳದ ನಾಯಕತ್ವ ನಾನೇ ವಹಿಸಿಕೊಂಡಿ ದೀನಿ !"

ಐಯಣ್ಣ ಮರುಮಾತನಾಡದೆ, ತನ್ನ ಕೊಂಬು ಟೊಪ್ಪಿಗೆಯನ್ನು ತೆಗೆದು ಕೆಳಗಿರಿಸಿ ಬದಿಗೆ ಸರಿದು ನಿಂತ...

...ತಮ್ಮ ಶಿಬಿರದ ಕಡೆಗೆ ಬರತೊಡಗಿದ ಬಿಳಿಯ ಬಾವುಟ ಕಂಡು ಫ್ರೇಸರ್ ಹರ್ಷಿತ ನಾದ.

'ಕೃತಾರ್ಥನಾದೆ' ಎಂದುಕೊಂಡ ಬೋಪಣ್ಣ, ಫ್ರೇಸರನಿಂದ ತಾನು ಹಸ್ತಲಾಘವವನ್ನು ಪಡೆದಾಗ.

...ಪಶ್ಚಿಮದಲ್ಲಿ ಹೆಗ್ಗಳಘಟ್ಟದ ದಾರಿಯಾಗಿ ಕೊಡಗನ್ನು ಪ್ರವೇಶಿಸುವುದು ಸುಲಭ ಸಾಧ್ಯವಲ್ಲ—ಎಂದು ಕರ್ನಲ್ ಫಾಲ್ಸ್ ಭಾವಿಸತೊಡಗಿದ್ದ. ಅಷ್ಟರಲ್ಲಿ ಮೇಲಿನಿಂದ ಶರಣಾಗತಿಯ ಬಿಳಿಯ ಬಾವುಟ ಕಾಣಿಸಿತು.

ಪಶ್ಚಿಮದ ಪಡೆ ಮೇಲೇರಿ ಉಕ್ಕಡವನ್ನು ದಾಟಿತು.

ಇಲ್ಲಿಯೂ ಉಳಿದ ಮೂರು ಕಡೆಗಳಲ್ಲಿಯೂ ಎಲ್ಲ ಪಡೆಗಳು ನಿಯೋಜಿತ ರೀತಿಯಲ್ಲೇ ಮುಂದೆ ಸಾಗಿ ಮಡಕೇರಿಯನ್ನು ತಲಪಿದುವು.

ಏಪ್ರಿಲ್ ಆರನೆಯ ದಿನ ಇಂಗ್ಲಿಷರು ಮಡಕೇರಿಯ ಕೋಟೆಯನ್ನು ಪ್ರವೇಶಿಸಿದರು. ರಾಜಮನೆತನದ್ದ ಕೇತುಪಟ ಕೆಳಕ್ಕಿಳಿದು, ಅದರ ಸ್ಥಾನದಲ್ಲಿ ಯೂನಿಯನ್ ಜಾಕ್ ಹಾರಾಡಿತು.

ಅದಾದ ಐದನೆಯ ದಿನ ತಾನು ಸಹಿ ಹಾಕಿದ ಇಶ್ತಿಹಾರೊಂದನ್ನು ಫ್ರೇಸರ್ ಹೊರಡಿಸಿದ. ಅದು ಸಾರಿತು :

"ಕೊಡಗು ದೇಶದ ನಿವಾಸಿಗಳು, ಬ್ರಿಟಿಷ್ ಸರಕಾರದ ಅಧೀನದಲ್ಲಿರಬೇಕೆಂದು ಏಕಮತಸ್ಥರಾಗಿ ಇಷ್ಟಪಡುವುದರಿಂದ, ಚಿಕವೀರರಾಜೇಂದ್ರ ಒಡೆಯರಿಂದ ಆಳಲ್ಪಡುತ್ತಿದ್ದ ಈ ದೇಶವನ್ನು ಘನವುಳ್ಳ ಕುಂಪಣಿ ಸರಕಾರದ ತಾಬೆಗೆ ವರ್ಗಮಾಡಲು ಇಂಡಿಯಾ ದೇಶದ ಗವರ್ನರ್ ಜನರಲ್ ಸಾಹೇಬರವರು ಸಂತೋಷಪಡುತ್ತಾರೆ.

"ಈ ದೇಶದ ನಿವಾಸಿಗಳನ್ನು ಪುನಃ ಸ್ವದೇಶೀ ರಾಜರ ಆಳ್ವಿಕೆಗೆ ಬಿಟ್ಟುಕೊಡುವುದಿಲ್ಲವಾಗಿಯೂ ಇವರ ಮುಲ್ಕಿ ಮತ್ತು ಮತಸಂಬಂಧವಾದ ಎಲ್ಲಾ ಪದ್ಧತಿಗಳು ಬಹುಮಾನದಿಂದ ಅಂಗೀಕರಿಸಲ್ಪಡುವುದಾಗಿಯೂ ಮತ್ತು ಇವರ ಭದ್ರತೆ ಸುಖಕ್ಷೇಮಗಳನ್ನು ಹೆಚ್ಚಿಸಲು ಬ್ರಿಟಿಷ್ ಸರಕಾರದವರು ಯಾವಾಗಲೂ ಸಂತೋಷಪಡುವರಾಗಿಯೂ ಇದರ ಮೂಲಕ ಖಂಡಿತವಾಗಿ ತಿಳಿಸಲ್ಪಟ್ಟಿದೆ."

ಫ್ರೇಸರ್, ಕೊಡಗಿನ ಪ್ರಮುಖರ ಸಭೆಯೊಂದನ್ನು ಕರೆಸಿ. ಅವರ ಅಪೇಕ್ಷೆಯಂತೆಯೇ ಆ ಇಸ್ತಿಹಾರನ್ನು ತಾನು ಹೊರಡಿಸುತ್ತಿರುವೆನೆಂದು ನಂಬಿಸುವ ಒಂದು ನಾಟಕವನ್ನು ಆಡಿದ.

ಅನಂತರ ಅರಸನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಲು ಆತ ಉದ್ಯುಕ್ತನಾದ.

## ೪೦

ಆಂಗ್ಲರ ವಿಜಯದ ದಾರುಣ ವಾರ್ತೆ ಮಡಕೇರಿಯಿಂದ ಬಂದಾಗ, ಕುದಿಯು ಸೋದರರಿಗೆ ಆಕಾಶವೇ ಕಳಚಿಬಿದ್ದಂತಾಯಿತು. ಅವರು ಸಂಪಾಜೆ ಘಟ್ಟವನ್ನೇರಿ, ನಾಲ್ಕುನಾಡು ಅರಮನೆಗೆ ಧಾವಿಸಿದರು. ಐಯಣ್ಣನಾಗಲೇ ಅಲ್ಲಿಗೆ ಬಂದಿದ್ದ. ಅವನ ಜತೆಗಾರರಾಗಿದ್ದ ಹುಲಿಕುಂದ ನಂಜಯ್ಯನೂ ಪುಟ್ಟಬಸವನೂ ಬಂದು ತಲಪಿದರು. ಅಬ್ಬಾಸ್ ಅಲಿಯೊಬ್ಬನದೇ ಸುಳಿವಿರಲಿಲ್ಲ.

ನಡೆದುದು ದುಃಸ್ವಪ್ನ ಎಂದೇ ಅವರ ನಂಬಿಕೆ. ಎಚ್ಚರಗೊಳ್ಳಬೇಕು. ಹೋರಾಡಬೇಕು.

ಆದರೆ ಹೇಗೆ? ಸೇನೆ ಗಡಿಗಳಲ್ಲಿ ಹಂಚಿಹೋಗಿರುವಾಗ. ನಾಲ್ಕು ಕಡೆ ದಳಗಳು ಶರಣಾಗತವಾಗಿರುವಾಗ. ಯುದ್ಧ ಮುಂದುವರಿಸುವುದೆಂತು?

ಬಸವನೆಂದ :

"ದುಃಖಪಟ್ಟುಕೊಂಡು ಹೇಳತಾ ಇದೀನಿ. ಬೇಕಿದ್ದರೆ ಇಲ್ಲೇ ನಿಂತು ಹೋರಾಡಿ ಸಾಯೋಣ. ಇಲ್ಲವಾದರೆ, ಸಂಧಾನದ ಸೋಗು ಹಾಕಿ ಸಮಯ ಕಾಯೋಣ. ಸೈನಿಕರೆಲ್ಲ ಒಟ್ಟಾಗೋದಕ್ಕೆ ಕಾಲಾವಕಾಶ ಸಿಕ್ಕರೆ, ಮುಂದೆ ವೈರಿಗಳ ಮೇಲೆ ಎರಗಬೌದು."

ಅಭಿಮಾನಧನನಾದ ಚಿಕವೀರರಾಜ ಈಗ ಅಸಹಾಯ. ತನಗೆ ತಟ್ಟಿದ ಕಳಂಕವನ್ನು ತಾನು ನಿವಾರಿಸಬೇಕು. ಯಶಸ್ವಿಯಾಗಿ ನಿವಾರಿಸಬೇಕು. ಯಾವ ಬಗೆಯಾಗಿ?

ಆತನೆಂದ :

"ಸಂಧಾನ ಅನಿವಾರ್ಯ ಎಂದಾದರೆ ಆಗಲಿ."

ಫ್ರೇಸರನ ಅಪ್ಪಣೆಯಂತೆ ಮಹಾರಾಜನನ್ನೂ ಅವನ ಪರಿವಾರವನ್ನೂ ಕರೆತರುವುದ ಕ್ಕೋಸ್ಕರ ಆಂಗ್ಲ ದಳದ ತುಕಡಿಯೊಂದು ನಾಲ್ಕುನಾಡು ಅರಮನೆಗೆ ಬಂದಿತು. ಅರಸನ ಅಂಗರಕ್ಷಕರು, ಸಂಗಡಿಗರಾದ ಇತರ ಶೂರರು, ಕೈದುಗಳನ್ನು ಕೆಳಗಿಟ್ಟರು.

ಮಗಳೊಡನೆಯೂ ರಾಣಿಯೊಡನೆಯೂ ಮಡಕೇರಿಯ ಅರಮನೆಯನ್ನು ತಲಪಿದ ಚಿಕವೀರರಾಜ, ಫ್ರೇಸರನನ್ನು ತಾನು ಕಾಣಬಯಸುವುದಾಗಿ ಹೇಳಿಕಳುಹಿದ. ಆ ಅಧಿಕಾರಿ ಸಂಜೆಯ ವೇಳೆಗೆ ಅರಮನೆಗೆ ಬಂದ.

ಕಿಟಕಿಯ ಪರದೆಗಳನ್ನೆಲ್ಲ ಮುಚ್ಚಿದ್ದ ದಿವಾಣಖಾನೆಯ ಮಬ್ಬು ಬೆಳಕಿನಲ್ಲಿ ಚಿಕವೀರ ರಾಜೇಂದ್ರ ನಿಂತಿದ್ದ.

ಒಳಕ್ಕೆ ಬಂದ ಫ್ರೇಸರ್, ವಂದಿಸಿ, "ಕುಶಲವೇ ?" ಎಂದು ಹಿಂದೂಸ್ಥಾನಿಯಲ್ಲಿ ಕೇಳಿದಾಗ ಚಿಕವೀರರಾಜ "ಹೀಗಿದೀವಿ" ಎನ್ನುತ್ತಾ ಆತನಿಗೆ ಹಸ್ತಲಾಘವವಿತ್ತ.

ಸ್ಪಷ್ಟೀಕರಣ, ವಾದ-ಪ್ರತಿವಾದ, ವಿನಂತಿಗಳಿಂದ ಯಾವ ಪ್ರಯೋಜನವೂ ಇರಲಿಲ್ಲ. ಕಲಕತ್ತೆಯಲ್ಲಾಗಿದ್ದ ಪೂರ್ವಭಾವಿ ತೀರ್ಮಾನವನ್ನು ಕೃತಿಗಿಳಿಸುವುದಕ್ಕೋಸ್ಕರವಷ್ಟೇ ನಿಯೋಜಿತನಾಗಿದ್ದವನು ಫ್ರೇಸರ್. ಹಾಗೆಂದು ಪ್ರಕಟವಾಗಿ ಹೇಳಲೊಲ್ಲ. ಅಪ್ರತಿಮನಾದ ಕಾರ್ಯಸಾಧಕ ಆತ. ಬೆಣ್ಣೆಯಿಂದ ಕೂದಲೆಳೆಯುವಷ್ಟು ನಯವಾಗಿತ್ತು ಅವನ ಮಾತು. ಅದೇ ಮಿದುತನದಿಂದ ಎದುರಾಳಿಯ ಗುಂಡಿಗೆಯನ್ನೂ ಬಸಿಯಬಲ್ಲ ಸಮರ್ಥನಾಗಿದ್ದ ಆತ.

ಅವನೆಂದ :

"ನಾವು ಗೆದ್ದೆವು, ತಾವು ಸೋತಿರಿ ಅಂತ ಬೇಡ. ತಮ್ಮನ್ನು ಕೈದಿಯಾಗಿ ನಾವು ಪರಿಗಣಿಸುವುದಿಲ್ಲ. ತಮ್ಮ ಬದಲು ತಮ್ಮ ತಂಗಿಯನ್ನೋ ಮತ್ತೊಬ್ಬರನ್ನೋ ಪಟ್ಟದ ಮೇಲೆ ನಾವು ಕೂರಿಸಿಲ್ಲವಷ್ಟೆ ? ಪರಿಸ್ಥಿತಿ ಶಾಂತವಾಗಲಿ, ಅಷ್ಟರವರೆಗೆ ಸಕುಟುಂಬ ಸಪರಿವಾರ ತಾವು ರಾಜ್ಯದ ಹೊರಗಿರೋದು ಮೇಲು. ಗವರ್ನರ್ ಜನರಲ್ ಸಾಹೇಬರೂ ಅದನ್ನೇ ಅಪೇಕ್ಷೆಪಟ್ಟಿದಾರೆ. ಬೆಂಗಳೂರಿಗೆ ಹೋಗುತೀರಾ ? ಬೇಡಿ. ತಮಗೆ ಅದು ಇಷ್ಟವಾಗದು. ವೇಲೂರಿಗೆ ಹೋಗಿ. ತಮ್ಮ ರಾಜಭಂಡಾರವನ್ನೂ ಜತೆಗೆ ತಗೊಳ್ಳಿ. ಅಲ್ಲಿ ನಮ್ಮ ಅತಿಥಿಗಳಾಗಿ ವಾಸಮಾಡಿ ಮುಂದೆ ಎಲ್ಲಾ ಸರಿಹೋಗುತ್ತದೆ."

ಕತ್ತಲಾಗಿತ್ತು. ಚಿಕವೀರರಾಜ ಫ್ರೇಸರನನ್ನು ಮೇಲ್ಮಾಳಿಗೆಗೆ ಕರೆದೊಯ್ದ. ಎಣ್ಣೆಯ ದೀಪದೆದುರು ಅವರ ನೆರಳುಗಳು ನೀಳವಾಗಿ ಗೋಡೆಗಳ ಮೇಲೆ ನರ್ತಿಸಿದುವು.

ಒಂದು ಕ್ಷಣ, 'ಇವನ ಕತ್ತು ಹಿಸುಕಿ ಕೆಳಕ್ಕೆ ಎಸೆದುಬಿಡಲೇ'—ಎನಿಸಿತು ಚಿಕವೀರರಾಜನಿಗೆ. ಹಾಲೇರಿ ವಂಶದ ದೊರೆಯಾದ ತನ್ನೆದುರು ಈ ಯಃಕಶ್ಚಿತ್ ಮನುಷ್ಯ ಐಂದ್ರಜಾಲಿಕ ವಿದ್ಯೆ ತೋರಿಸುತ್ತಿದಾನಲ್ಲಾ...

ಮನಸ್ಸು ಹುಚ್ಚು ಕುದುರೆಯಾಗಬಾರದೆಂದು ಕಡಿವಾಣವನ್ನು ಅರಸ ಜಗ್ಗಿದ, ಬಲವಾಗಿ ಜಗ್ಗಿದ. ಆ ನೋವಿನಿಂದ ತನ್ನ ಮೈಯೇ ನರಳಿ ಕೂಗಿದಂತಾಯಿತು.

ಫ್ರೇಸರ್ ಸ್ವರಾಲಾಪನೆಯನ್ನು ಮತ್ತಷ್ಟು ಮಧುರಗೊಳಿಸಿ ತನ್ನ ಹಾಡನ್ನು ಪುನಃ ನುಡಿಸಿದ.

ಅರಸನಿಗೆ ಉಸಿರುಕಟ್ಟಿದಂತಾಯಿತು. ಈ ಬಂಧನದಿಂದ ತಾನು ಪಾರಾಗಬೇಕು—ಎಂದು ಆತ ಚಡಪಡಿಸಿದ.

—ದಾರಿ ಹುಡುಕಿಕೊಂಡು ಅರಮನೆಯಿಂದ ಹೊರಬಿದ್ದು, ಅಂಗರಕ್ಷಕರೊಡನೆ ತನ್ನ ಶಿಬಿರವನ್ನು ಫ್ರೇಸರ್ ತಲಪಿದಾಗ, ಇರುಳಾಗಿ ಬಹಳ ಹೊತ್ತಾಗಿತ್ತು. ಬೋಪಣ್ಣ ಅವನಿಗಾಗಿ ಕಾದಿದ್ದ.

ಮಂದಹಾಸ ಸೂಸುತ್ತ ಫ್ರೇಸರನೆಂದ :

"ರಾಜಾಧಿರಾಜ ಚಿಕವೀರರಾಜೇಂದ್ರರು ನಾಳೆ ವೇಲೂರಿಗೆ ಪರಿವಾರ ಸಹಿತ ಹೊರಡು ತಾರೆ !"

ಬೋಪಣ್ಣನ ಮುಖ ಹುಣ್ಣಿಮೆಯ ಚಂದ್ರನಾಯಿತು.

## ೪೧

ಸತ್ತ ಬಳಿಕ ಶವಸಂಸ್ಕಾರ.

ಕಣ್ಣೆವೆಗಳು ಕೊನೆಯ ಬಾರಿ ಮುಚ್ಚಿದಾಗ ಅಳು ಮುಂಜುಗಡ್ಡೆಯಾದರೂ ಶವದ ಮೆರೆವಣಿಗೆ ಆರಂಭವಾದೊಡನೆ, ಕಿವಿಯೊಡೆಯುವಂತೆ ಎದೆ ಬಿರಿಯುವಂತೆ ಆರ್ತನಾದ.

ಹಾಗಿತ್ತು, ಚಿಕವೀರರಾಜನ ನಿರ್ಗಮನದ ದೃಶ್ಯ.

ಆ ಘಳಿಗೆಯಲ್ಲೂ ಆತ ಸ್ಥೈರ್ಯ ಕಳೆದುಕೊಳ್ಳಲಿಲ್ಲ. ಬಿದ್ದಂಡ ಸೋಮಯ್ಯನೂ ಹೆಬ್ಬಾಲೆ ತಿಮ್ಮಣ್ಣಗೌಡನೂ ಕಾರ್ಯಕಾರ ಐಯಣ್ಣನೂ ಇತರ ಇನ್ನೂರ ಐವತ್ತು ಜನರೂ ಅರಸನನ್ನು ಹಿಂಬಾಲಿಸಿದರು. ಸ್ವಾಮಿನಿಷ್ಠರಾದ ಉಳಿದ ಪ್ರಮುಖರು ಯಾರೂ ತನ್ನೊಡನೆ ಬರಕೂಡದೆಂದೂ ಅವರು ಕೊಡಗಿನಲ್ಲೇ ಇರಬೇಕೆಂದೂ ಚಿಕವೀರರಾಜ ಆದೇಶವಿತ್ತ.

ದುಃಖ ದುರ್ಭರವಾಗಿದ್ದರೂ ರಾಣಿ ಗೌರಮ್ಮ, ಮುಖಬಾಡಿದ ಮಗಳನ್ನು ತೋಳಿನಿಂದ ಬಳಸಿ, ಗಂಭೀರವದನೆಯಾಗಿ ಮೇನೆಯಲ್ಲಿ ಕುಳಿತಳು.

ಬೋಪಣ್ಣನಾಗಲೀ, ಲಕ್ಷ್ಮೀನಾರಾಯಣನಾಗಲೀ ರಾಜನೆದುರು ಬರಲಿಲ್ಲ. ಬೋಪು ಬಸವನನ್ನು ಅರಸುತ್ತಿದ್ದ. ಆತನ ಬಿಸಿ ರಕ್ತ ಅವನಿಗೆ ಬೇಕಾಗಿತ್ತು.

ಅರಸನಿಂದ ಆಗಲೇ ನಿರೂಪ ತೆಗೆದುಕೊಂಡಿದ್ದ ಪುಟ್ಟಬಸವ ಜನಸಂದಣಿಯಿಂದ ಮಾಯವಾಗಿದ್ದ.

ದಾರಿಯುದ್ದಕ್ಕೂ ಎರಡೂ ಬದಿಗಳಲ್ಲಿ ಪ್ರಜೆಗಳು ಕಿಕ್ಕಿರಿದು ನಿಂತು, ತಬ್ಬಲಿಗಳಾದೆವೆಂದು ತಲೆ ಕೂದಲು ಕಿತ್ತು ಕಿತ್ತು ಪ್ರಲಾಪಿಸುತ್ತಿದ್ದರು.

ಅದನ್ನು ನೋಡಿ, "ಇಂಥ ಪ್ರೀತಿಗೆ ಪ್ರತಿಯಾಗಿ ನಾ ಏನು ಕೊಟ್ಟೆ ?" ಎಂದು ಚಿಕವೀರರಾಜ ದುಃಖಿಸಿದ.

ಹನಿಗೂಡಿದ ಕಣ್ಣುಗಳಿಂದ, ಪ್ರಜೆಗಳ ಪ್ರಣಾಮಗಳಿಗೆ ಪ್ರತಿವಂದನೆ ಮಾಡುತ್ತ, ಅವನು ಮತ್ತೆ ಮತ್ತೆ ಅಂದ :

"ನಾವು ಬೇಗನೆ ಬಂದುಬಿಡತೀವಿ—ಬಂದುಬಿಡತೀವಿ."

* * *

ಶ್ರೀರಂಗಪಟ್ಟಣದಲ್ಲಿ ಕಾಸ್ಸಾಮೇಜರನೆದುರು ಚನ್ನಬಸಪ್ಪ ಕೂಗಾಡಿದ :

"ಇನ್ನೂ ಯಾಕೆ ತಡಮಾಡತೀರಿ ? ಕುದುರೆಗಳಿಲ್ಲವಾ ? ಸಾರೋಟಿಲ್ಲವಾ ? ಮೇನೆಗಳಿಲ್ಲವಾ ? ಯಾವತ್ತು ಹೊರಡೋದು ನಾವು ? ರಾಣಿಯಿಲ್ಲದೆ ಖಾಲಿ ಪಟ್ಟಕ್ಕೇ ಅಭಿಷೇಕ ಮಾಡತೀರಾ ?"

ಕಾಸ್ಸಾಮೇಜರ್ ಸಂತೈಸುತ್ತ ಅಂದ :

"ನೀವು ಶಾಂತವಾಗಿರಬೇಕು. ಸಕಾಲದಲ್ಲಿ ಸರಿಯಾದ್ದನ್ನು ಮಾಡ್ತೇವೆ."

* * *

ಅಪ್ಪಂಗಳದಲ್ಲಿ ಗಂಗಮ್ಮ ಗೋಳಾಡಿದಳು :

"ಅರಮನೆ ರಾಮಾಯಣ ಮುಗಿದಂತಾಯಿತಲ್ಲೇ ? ಮಂಗಳ ಹಾಡತಾ ಇದಾರಲ್ಲೇ ? ನಮ್ಮ ಅಳಿಯ ಇನ್ನೂ ಬರಲಿಲ್ಲವಲ್ಲೇ !..."

ರಾಜಮ್ಮಾಜಿ ತಾಯಿಯನ್ನು ಸಮಾಧಾನಪಡಿಸಿದಳು :

"ಅಳಬೇಡವಮ್ಮ, ಅಳಬೇಡವಮ್ಮ."

* * *

ಹಾಲೇರಿ ಅರಮನೆಯಲ್ಲಿದ್ದ ದೂರದ ರಾಜ ಸಂಬಂಧಿಗಳು ಮಡಕೇರಿ ಕೋಟೆ ಇಂಗ್ಲಿಷರ ಕೈವಶವಾದೊಡನೆ ಊರು ಬಿಟ್ಹೋಡಿದ್ದರು.

ಜಹಗೀರು ನಿರ್ಜನವಾಗಿತ್ತು.

ಇನ್ನೂರೈವತ್ತು ವರ್ಷಗಳಿಗೆ ಹಿಂದೆ ಜಂಗಮ ವೇಷಧಾರಿಯೊಬ್ಬನ ಬಡ ಕುಟೀರ ವಾಗಿದ್ದು ಕ್ರಮೇಣ ರೂಪಾಂತರ ಹೊಂದಿದ ಸೌಧ ಆ ಅರಮನೆ.

ಅದರ ಆವಾರದಲ್ಲಿದ್ದ ಕೊಳದ ತಟದಲ್ಲಿ, ಜಂಗಮನೊಬ್ಬ ಕಣ್ಣು ಮುಚ್ಚಿ ಶಿವಧ್ಯಾನ ದಲ್ಲಿ ನಿರತನಾಗಿದ್ದ. ಆತ ಅಪರಂಪಾರ.

ಧ್ಯಾನ ಸಮಾಧಿಯಿಂದ ಸ್ವಾಮಿಗಳು ಎಚ್ಚರಗೊಳ್ಳುವುದನ್ನೆ ಕಾಯುತ್ತ, ಶಿಷ್ಯ ಸಿದ್ಧಲಿಂಗ ತುಸು ದೂರದಲ್ಲಿ ಕುಳಿತಿದ್ದ.

ಬಿಸಿಲು ನೆತ್ತಿಗೇರಿತು. ಸೂರ್ಯ ಪಡುವಣಕ್ಕಿಳಿದ. ತಾಪ ಕಡಿಮೆಯಾಯಿತು. ಸ್ವಾಮಿ ಅಪರಂಪಾರ ಮಾತ್ರ ನಿಶ್ಚಲನಾಗಿ ಕುಳಿತೇ ಇದ್ದ.

ಸಿದ್ಧಲಿಂಗ ತನ್ನಷ್ಟಕ್ಕೆ ಅಂದುಕೊಂಡ :

"ತಪಸ್ಸಿಗೇ ಕೂತರೋ ಹ್ಯಾಗೆ ? ಮಹಾದೇವ ಪ್ರತ್ಯಕ್ಷನಾಗಿ ವರ ಕೊಟ್ಟ ಹೊರತು ಇವರು ಏಳೋ ಹಾಗೆ ಕಾಣಲಿಲ್ಲ."

## ೪೨

ಜಟೆಗಟ್ಟಿದ ತಲೆಗೂದಲನ್ನೂ ಮೀಸೆ-ಗಡ್ಡಗಳನ್ನೂ ನಾಪಿತನ ಅಲಗಿಗೆ ಬಲಿಕೊಟ್ಟು ಕೊಳದಲ್ಲಿ ಮಿಂದು, ಮಾಲಿನ್ಯ ಕಳೆದು, ವಿಭೂತಿ ಧಾರಣೆ ಮಾಡಿ, ಅಪರಂಪಾರಸ್ವಾಮಿ ನುಡಿದ :

"ಒಂದು ಕೆಲಸ ಆಯಿತು, ಸಿದ್ಧಲಿಂಗ. ಇನ್ನೊಂದು ಉಳಿದಿದೆ. ನಂಜರಾಜಪಟ್ಣಕ್ಕೆ ಹೋಗಿ ಶಿವಾಚಾರ್ಯಸ್ವಾಮಿಗಳ ದರ್ಶನ ಪಡೆಯೋದು."

ಅಪರಂಪಾರನ ಬದುಕಿನಲ್ಲಿ ಇದೊಂದು ಮಹತ್ವದ ಘಟ್ಟ ; ಅಚಲ ನಿರ್ಧಾರವೊಂದನ್ನು ಆತ ಕೈಗೊಂಡಿದ್ದಾನೆ : ಮುಖದಲ್ಲಿ ಅಪೂರ್ವ ಪ್ರಶಾಂತತೆ ಮನೆಮಾಡಿದೆ—ಎಂಬುದನ್ನು ಸಿದ್ಧಲಿಂಗನಾಗಲೇ ಮನಗಂಡಿದ್ದ. ಶಿವಾಚಾರ್ಯಸ್ವಾಮಿಗಳ ಪ್ರಸ್ತಾಪದಿಂದ ಆತ ಚಕಿತ ನಾದ.

"ಗುರುಗಳು ನಿನ್ನೆ ರಾತ್ರಿ ಕನಸಿನಲ್ಲಿ ಕಾಣಿಸಿಕೊಂಡರು. ವಿಶ್ರಾಂತಿ ತಗೋತಾ ಇದ್ದರು. ಮಲಗಿದ್ದಲ್ಲಿಂದಲೇ ಸನ್ನೆಮಾಡಿ ನಮ್ಮಿಬ್ಬರನ್ನೂ ಕರೆದರು, ಎಂದ ಸಿದ್ಧಲಿಂಗ."

ಅಪರಂಪಾರನೆಂದ :

"ಹಾಗಾ ? ಇನ್ನು ವಿಲಂಬ ಬೇಡ. ಹೊರಡೋಣ."

...ಹಗಲು ದಾರಿ ನಡೆದು ಕಾವೇರಿ ನದಿಯನ್ನು ಅವರಿಬ್ಬರೂ ಸಮೀಪಿಸಿದಾಗ, ಸಿದ್ಧಲಿಂಗನೆಂದ :

"ಸ್ವಾಮಿಯವರೆ, ಇದೇ ತಾಣ. ನೆಪ್ಪದೆಯಾ ? ನಾವು ಮೊದಲ ಸಲ ಸಂಧಿಸಿ ಹದಿನಾಲ್ಕು ವರ್ಷ ಸಂದದೆ, ಅಲ್ಲವಾ ?"

"ಹ್ಞ, ಅಯ್ಯನವರೆ ! ಆಗ, ನಂಜರಾಜಪಟ್ಟಣದ ಸ್ಥಳ ಪುರಾಣ ಹೇಳಿದಿರಿ. ಇಲ್ಲಿ, ಈ ಜಾಗದಲ್ಲೇ, ನಾವು ನದಿ ದಾಟಿದಿವಿ...ಪೂರ್ವ ಜನ್ಮದ ಕಥೆ. ಆದರೂ ನೆನಪದೆ."

ಅವರು ಮೌನವಾಗಿ ನದಿಯನ್ನು ದಾಟಿದರು. ಕೈಕಾಲು ಮುಖಗಳಿಗೆ ನೀರು ಹನಿಸಿದರು. ಮೆಟ್ಟಿಲುಗಳನ್ನು ಕಸಕಡ್ಡಿಗಳೂ ತರಗೆಲೆಗಳೂ ಆವರಿಸಿದ್ದುವು. ಮುಚ್ಚಂಜೆಯ ಹೊತ್ತು. ಆದರೂ ಘಂಟೆಗಳ ಸದ್ದು ಕೇಳಿಬರುತ್ತಿರಲಿಲ್ಲ. ಮೌಢ್ಯ ಕವಿದಂತೆ ಪಟ್ಟಣ ಮೌನವಾಗಿತ್ತು.

ಪಾವಟಿಗೆಗಳನ್ನೇರುತ್ತ ಸಿದ್ಧಲಿಂಗನೆಂದ :

"ಯಾಕೋ ಎಡಗಣ್ಣು ಅದರತಿದೆ, ಸ್ವಾಮಿಯವರೆ."

ಅಪರಂಪಾರನಿಗೂ ಇಂತಹದೇ ಎಂದು ಹೇಳಲಾಗದ ಕಸಿವಿಸಿ ಮನದೊಳಗೆ.

"ರಾಹುಗ್ರಸ್ತ ಕೊಡಗು. ಅನಿಷ್ಟಗಳು ಇದ್ದೇ ಇರತವೆ, ಸಿದ್ಧಲಿಂಗ."

ದೇಗುಲಗಳ ಆವರಣ ನಿರ್ಜನವಾಗಿತ್ತು. ಅಪರಂಪಾರನೂ ಸಿದ್ಧಲಿಂಗನೂ ವೀರಭದ್ರ—ನಂಜುಂಡೇಶ್ವರರಿಗೆ ನಮಿಸಿದರು. ಬಸವನ ಪಾದ ಮುಟ್ಟಿದರು. ಇನ್ನು ಮಠದ ಕಡೆಗೆ ಅವರು ಹೆಜ್ಜೆ ಇಡಬೇಕು ಎನ್ನುವಷ್ಟರಲ್ಲೆ, ಹಾವುಗೆಗಳ ಸಪ್ಪಳವಾಯಿತು. ಬರುತ್ತಲಿದ್ದುದು ಗುರುಶಿಷ್ಯ ಪಂಚಾಕ್ಷರಿ, ಅರ್ಚನೆಗೆಂದು, ಪೂಜಾಸಾಮಗ್ರಿಗಳೊಡನೆ.

ಬಂದವರನ್ನು ನೋಡಿ ಅವನೆಂದ :

"ಸಿದ್ಧಲಿಂಗನಾ ? ಇವರು—ಇವರು—ಅಪರಂಪಾರ ಅಲ್ಲವಾ ? ಗುರುಗಳಿಗೆ ದೇಹಾಲಸ್ಯ. ಮಲಗಿಕೊಂಡಿದಾರೆ. ಈ ಎರಡು ದಿವಸದಿಂದ ನಿಮ್ಮಿಬ್ಬರನ್ನೂ ಜ್ಞಾಪಿಸಿಕೋತಾ ಅದಾರೆ. ನೇರ ಹೋಗಿ. ಪೂಜೆ ಮುಗಿಸಿಕೊಂಡು ನಾ ಬರತೇನಿ."

"ಶಿವ. ಶಿವ" ಎಂದ, ಸಿದ್ಧಲಿಂಗ. ಅಪರಂಪಾರನೂ ಕಳವಳಕ್ಕೆ ಗುರಿಯಾದ. ಒಮ್ಮೆಲೆ ಭಾರವಾಗಿ ಕಂಡ ಪಾದಗಳನ್ನು ಪ್ರಯತ್ನಪೂರ್ವಕವಾಗಿ ಬೇಗಬೇಗನೆ ಎತ್ತಿ ಇಡುತ್ತ ಅವರು ಮಠವನ್ನು ತಲಪಿದರು.

ಪಲ್ಲಂಗದ ಮೇಲೆ ಶಿವಾಚಾರ್ಯ ಸ್ವಾಮಿಗಳು ಮಲಗಿದ್ದರು. ಮಿಸುಕುತ್ತಿದ್ದ ಕಣ್ಣೆವೆಗಳು ಅವರು ನಿದ್ರಾಧೀನರಾಗಿಲ್ಲವೆಂದು ಸಾರುತ್ತಿದ್ದುವು.

ಆರ್ತತೆ ತುಂಬಿದ ಧ್ವನಿಯಲ್ಲಿ ಸಿದ್ಧಲಿಂಗನೆಂದ :

"ಗುರುಗಳೆ, ಗುರುಗಳೇ !"

ಶಿವಾಚಾರ್ಯ ಸ್ವಾಮಿಗಳು ಕಣ್ಣು ತೆರೆದು ನೋಡಿದರು. ಅವರ ಮ್ಲಾನಮುಖದ ಮೇಲೆ ಮಂದಹಾಸ ಮಿಂಚಿತು. ಪಾದಮುಟ್ಟಿದವರನ್ನು ಆಶೀರ್ವದಿಸಲೆಂದು ಅವರ ಬಲ ಅಂಗೈ ಮೇಲಕ್ಕೆ ಚಲಿಸಿತು. ತುಟಿಗಳು ಅಲುಗಿದುವು. ಅವರು ಏಳಲೆತ್ನಿಸಿದರು.

"ಬೇಡಿ, ಬೇಡಿ" ಎಂದ ಅಪರಂಪಾರ.

"ಸಿದ್ಧಲಿಂಗು, ಸ್ವಲ್ಪ ಹಿಡಿಯಪ್ಪ" ಎಂದರು ಸ್ವಾಮಿಗಳು.

ಅವರು ದಿಂಬುಗಳಿಗೆ ಒರಗಿ ಕುಳಿತುಕೊಳ್ಳಲು ಅಪರಂಪಾರನೂ ಸಿದ್ಧಲಿಂಗನೂ ನೆರವಾದರು. ಚಾಚಿಕೊಂಡಿದ್ದ ಕಾಲುಗಳಲ್ಲಿ ಒಂದು ಮಾತ್ರ ಮಿಸುಕುತ್ತಿತ್ತು.

ಸ್ವಾಮಿಗಳೆಂದರು :

"ಎಡಗಾಲು, ಕೈ ಕೊರಡು. ಪಾರ್ಶ್ವವಾಯು. ನಾನು ಓಡಾಡುವುದು ಮಹಾದೇವಗೆ ಇಷ್ಟವಿಲ್ಲ. ಮಲಗಿದ್ದಲ್ಲೇ ಇರು—ಎನ್ನುತಾನೆ."

ಸಿದ್ಧಲಿಂಗನ ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕಿತು, ಅಪರಂಪಾರನ ಗಂಟಲು ಕಟ್ಟಿತು.

ಒರಗಿದಲ್ಲಿಂದ ಸ್ವಾಮಿಗಳು ಅಪರಂಪಾರನನ್ನು ಕಣ್ತುಂಬ ನೋಡಿದರು. ಅವರೆಂದರು :

"ಬೆಳೆದು ದೊಡ್ಡವನಾಗಿದೀಯೆ. ಘಟಕ್ಕಿಟ್ಟ ಚಿನ್ನವಾಗಿದೀಯೆ."

ಅಪರಂಪಾರ ಮಾತಿಲ್ಲದೆ ನಿಂತ.

ನೆಲದ ಮೇಲೆ ಕುಳಿತುಕೊಳ್ಳುವಂತೆ ಅವರಿಬ್ಬರಿಗೂ ಸ್ವಾಮಿಗಳು ಸನ್ನೆಮಾಡಿದರು.

"ರಾಜ್ಯ ರಥದ ಗಾಲಿ ಕೀಲಿಲ್ಲದೆ ಮುಗ್ಗರಿಸಿದೆಯಲ್ಲ. ಅಪರಂಪಾರ ? ಕಡೆಗೀಲಿಲ್ಲದೆ ಬಂಡಿ ಹೊಡೆಗೆಡವಿತು; ಕಡೆಗೀಲು ಬಂಡಿಗಾಧಾರ...ಈಗೇನು ಮಾಡುವೆಯಪ್ಪ ? ಮಣಿಯನೆಣಿಸಿ ದಿನ ಕಳೆಯುತೀಯಾ ?"

ಒಂದು ಕ್ಷಣ ನೆಲ ನೋಡುತ್ತಲಿದ್ದು, ತಲೆಯೆತ್ತಿ, ಅಪರಂಪಾರನೆಂದ :

"ಇಲ್ಲ, ಗುರುಗಳೆ. ನನ್ನ ಕರ್ತವ್ಯ ನಾನು ಪಾಲಿಸುತೇನೆ."

"ವೀರಪ್ಪಾಜಿಯಾಗಿ ಅದನ್ನು ಮಾಡತೀಯೊ ? ಅಪರಂಪಾರನಾಗಿಯೊ ?"

"ನಾನೆಂಬಹಂಕಾರದಲ್ಲಿ ನಾನುಂಡೆನಾದರೆ ಎನಗದೇ ಭಂಗ. ಸ್ತುತಿನಿಂದೆಗೆ ನೊಂದೆನಾದಡೆ ಅಂಗೈಯಲ್ಲಿದ್ದ ಗುಹೇಶ್ವರಲಿಂಗಕ್ಕೆ ದೂರ."

"ಸಂತೋಷವಪ್ಪ...ಜನ ಏನೆನ್ನುತಿದಾರೆ ?"

"ಅವರ ಪಾಲಿಗೆ ಇದು ಅನಿರೀಕ್ಷಿತ ಆಘಾತ. ಮಂಕಾಗಿದಾರೆ. ಅವರನ್ನು ಎಚ್ಚರಿಸಬೇಕು."

"ಅಪರಂಪಾರ, ಅಗ್ನಿ ಸುಡಲಲ್ಲದೆ ಸುಳಿಯಲರಿಯದು. ವಾಯು ಸುಳಿವುದಲ್ಲದೆ ಸುಡಲರಿಯದು. ಅಗ್ನಿ ವಾಯು ಕೂಡಿದಲ್ಲದೆ ಅಡಿ ಇಡಲರಿಯದು...ಜನರ ದೇಶಾಭಿಮಾನ ಬೂದಿ ಮುಚ್ಚಿದ ಕೆಂಡವಾಗಿರತದೆ. ಆ ಬೂದೀನ ಚೆದರಿಸಿ ಜ್ವಾಲೇನ ಅಣಿಗೊಳಿಸತೀಯಾ?"

"ತಮ್ಮ ಆಶೀರ್ವಾದಬಲದಿಂದ ಇಷ್ಟನ್ನು ಮಾಡಲಾರೆನೆ ?"

"ಪಣತೆಯೂ ಇದೆ, ಬತ್ತಿಯೂ ಇದೆ. ತೈಲ ಒಂದಿದ್ದರಾಯಿತು. ಜ್ಯೋತಿ ಬೆಳಗುತದೆ ...ಕೊಡಗಿನ ಮನೆಮನೆಯೂ ಪಣತೆ. ಸತ್ಯಜೆಗಳೆಲ್ಲ ಬತ್ತಿಗಳು. ನೀನು ತೈಲವಾಗಿ ಅವರನ್ನು ತೋಯಿಸು. ಸ್ವಾತಂತ್ರ್ಯದ ಜ್ಯೋತಿಯುರಿದು ಆ ಪ್ರಭೆ ಕತ್ತಲೆಯನ್ನು ಓಡಿಸತದೆ."

"ನಾನು ತೈಲವಾಗಿ ತೋಯಿಸುತೇನೆ ಎನ್ನುವುದು ಅಹಂಭಾವದ ಮಾತು. ಮಹಾದೇವ ನನ್ನಿಂದ ಮಾಡಿಸತಾನೆ ಅಂದೇನು."

"ಸರಿ. ಸರಿ...ವೇಲೂರಿಗೆ ಹೋಗಿ ಬರತೀಯೊ ?"

"ಅಪ್ಪಣೆ."

"ಹೇಗೆ ಕಾರ್ಯಪ್ರವೃತ್ತನಾಗತೀಯೆ ?"

"ನಾನು ತಿಳಕೊಂಡಿರೋ ಹಾಗೆ ಇದು ಇಡೀ ಹಿಂದೂಸ್ಥಾನದ ಪ್ರಶ್ನೆ. ನಮ್ಮ ಪ್ರದೇಶದಲ್ಲಂತೂ ಮೂರು ರಾಜ್ಯಗಳಿಗೆ ಒಂದೇ ಬಗೆಯ ದುಃಸ್ಥಿತಿ ಪ್ರಾಪ್ತವಾಗಿದೆ. ಮೈಸೂರು,

ಕೊಡಗು, ಬಿದನೂರು. ಈ ಮೂರು ರಾಜ್ಯಗಳ ಜನ ಒಗ್ಗಟ್ಟಾದರೆ ಈ ಭಾಗದಲ್ಲಿ ಯಶಸ್ವಿಯಾಗಿ ಇಂಗ್ರೇಜಿಯವರನ್ನು ಇದಿರಿಸಬಹುದು. ಆಗ ಹಿಂದೂಸ್ಥಾನದ ಬೇರೆ ಕಡೆಗಳಲ್ಲೂ ಜನ ಏಳುತಾರೆ."

"ಇದಕ್ಕೆಲ್ಲ ಭಾರೀ ಪ್ರಮಾಣದ ಪೂರ್ವಸಿದ್ಧತೆ ಬೇಕು, ಅಲ್ಲ ?"

"ಹ್ಞ. ಅದಾಗುವವರೆಗೆ ಸಂಧಾನದ ನಟನೆ ಮಾಡಬೇಕು."

ಶಿವಾಚಾರ್ಯ ಸ್ವಾಮಿಗಳ ಮುಖಮುದ್ರೆ ಪ್ರಸನ್ನವಾಯಿತು. ಅವರು ಎವೆಗಳನ್ನು ಮುಚ್ಚಿ ಕೆಲ ನಿಮಿಷಗಳನ್ನು ಮಾತಿಲ್ಲದೆ ಕಳೆದರು.

ಮೆಲ್ಲನೆ ಎವೆ ತೆರೆದು, ಅಪರಂಪಾರನನ್ನೇ ದಿಟ್ಟಿಸಿ, ಅವರೆಂದರು :

"ಕಷ್ಟದ ದಾರಿ ; ನಡೆಯದೆ ಅನ್ಯ ಗತಿಯಿಲ್ಲ."

"ಅಳುಕುವುದಿಲ್ಲ, ಗುರುಗಳೇ."

"ನನ್ನದೊಂದು ಹಂಬಲ ! ಕೊಡಗು ಸ್ವತಂತ್ರ ರಾಜ್ಯವಾಗಿ ಮೆರೆಯಬೇಕು—ಅನ್ನೋದು. ಅದು ಈಡೇರತದೆ ಅಂತ ನಂಬಿದೇನೆ."

"ತಾವು ಚಿಂತಿಸಬಾರದು."

"ರಾಜಕುಮಾರನೊಬ್ಬ ಜಂಗಮನಾಗಿ ಈ ದೇಶಕ್ಕೆ ಬಂದು ರಾಜ್ಯ ಕಟ್ಟಿದ. ಈಗ ಜಂಗಮನಾಗಿ ಆ ರಾಜ್ಯವನ್ನು ನೀನು ಪುನಃ ಗಳಿಸತೀಯಾ ?"

"ಅದಕೆ ಈ ಮನವರ್ಪಣ, ತನುವರ್ಪಣ."

ಮತ್ತೊಮ್ಮೆ ಕೆಲ ಕ್ಷಣ ಮೌನವಾಗಿದ್ದು, ಸಿದ್ಧಲಿಂಗನತ್ತ ಸ್ವಾಮಿಗಳು ದೃಷ್ಟಿ ಹೊರಳಿಸಿದರು :

"ನಿನ್ನ ಮನಸ್ಸಿನಲ್ಲಿ ಏನಿದೆ ಅಂತ ಬಲ್ಲೆವು, ಸಿದ್ಧಲಿಂಗು. ಗುರುಗಳಿಗೆ ಅಸ್ವಾಸ್ಥ್ಯ, ಅವರ ಸನ್ನಿಧಿಯಲ್ಲೇ ಇದ್ದು ಸೇವೆ ಮಾಡಬೇಕು—ಅಲ್ಲವೇನಪ್ಪ ?"

"ಹೌದು. ತಂದೆ" ಎಂದ ಸಿದ್ಧಲಿಂಗ.

"ಆದರೆ ನಮ್ಮ ಸೇವೆಗಿಂತ ರಾಷ್ಟ್ರದ ಸೇವೆ ದೊಡ್ಡದಪ್ಪ. ನೀನು ಅಪರಂಪಾರನ ಜತೆಗೇ ಇದ್ದರೆ ನಮಗೆ ಸಂತೋಷ."

"ಎರಡಾಡಲಾರೆ, ಗುರುವೆ."

"ಒಳ್ಳೇದು. ಹೋಗಿ, ಮಕ್ಕಳೆ. ಮಹಾದೇವ ಅನುಗ್ರಹಿಸುತಾನೆ. ಪಂಚಾಕ್ಷರಿ ಪ್ರಸಾದ ಕೊಡತಾನೆ. ದೇಶ ಸ್ವತಂತ್ರವಾದ ದಿನ ಇಲ್ಲಿಗೆ ಬಂದು ನಮಗೆ ಸುದ್ದಿ ಮುಟ್ಟಿಸಿ..."

...ಮೈಸೂರಿಗೆ ಅಭಿಮುಖವಾಗಿ ಅಪರಂಪಾರ ಸಿದ್ಧಲಿಂಗನೊಡಗೂಡಿ ಪಯಣ ಬೆಳೆಸಿದ.

ಅಪರಂಪಾರನೆಂದುಕೊಂಡ :

"ಅಂತರಂಗದ ಅರಿವು ಬಹಿರಂಗದ ಕ್ರಿಯೆ ಈ ಉಭಯ ಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನುಸೂತಕ, ಹಿಂಗಿತ್ತು ಮನಸೂತಕ..."

## ೪೩

ಕೈಹಿಡಿದು ಪಟ್ಟವನ್ನೇರಲು ನೆರವಾದವರೇ ರಟ್ಟೆ ಹಿಡಿದು ಪಟ್ಟದಿಂದ ಕೆಳಕ್ಕಿಳಿಸಿದ್ದರು ಕೃಷ್ಣರಾಜ ಭೂಪನನ್ನು. ಅದು ನಡೆದು ಮೂರು ಸಂವತ್ಸರಗಳು ದಾಟಿದ್ದುವು. ಅಧಿಕಾರ

ಕಸಿದುಕೊಂಡಿದ್ದರೂ ಅರಮನೆಯಿಂದ ಹೊರಹಾಕಿರಲಿಲ್ಲ. ಹೊಸದಾಗಿ ಕಟ್ಟಿಸಿದ ರಾಜಗೃಹ. ಅದರೊಳಗೇ ಕೃಷ್ಣರಾಜ ವಾಸವಾಗಿದ್ದ.

ಚಾಮುಂಡಿಬೆಟ್ಟದ ತಪ್ಪಲಲ್ಲಿ ಮೈಸೂರಿನ ಬೆಳವಣಿಗೆ ಕುಂಟುತ್ತ ಸಾಗಿತ್ತು. ಶ್ರೀರಂಗಪಟ್ಟಣ—ಮೈಸೂರುಗಳ ಅಂತರ ಒಂದು ಕೂಗಳತೆಯ ದೂರ ಎನ್ನುವಂತೆ, ಬಿಳಿಯ ಆಡಳಿತಾಧಿಕಾರಿಗಳ ಹಾಗೂ ಸೈನ್ಯಾಧಿಕಾರಿಗಳ ತಂಡಗಳೂ ಪರಿವಾರಗಳೂ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡುತ್ತಿದ್ದುವು. ಆಂಗ್ಲರಿಗೆ ಅಧೀನನಾಗಿದ್ದು ದಿವಾನ ವೆಂಕಟರಮಣಯ್ಯ ಆಡಳಿತ ನಡೆಸುತ್ತಿದ್ದ.

ಅರಮನೆಯ ತುಸು ದೂರದಲ್ಲಿ ಗರಡಿಮನೆ. ಇನ್ನೊಂದೆಡೆ ಅಗ್ರಹಾರ. ಕೋಟೆಯ ಆವರಣದೊಳಗೂ ಹೊರಗೂ ಅಲ್ಲಿ ಇಲ್ಲಿ ರಾಜಸಂಬಂಧಿಗಳ ನಿವಾಸಗಳು.

ಮುಮ್ಮಡಿ ಕೃಷ್ಣರಾಜ ಒಡೆಯನ ಸಮೀಪದ ಸಂಬಂಧಿಗಳಲ್ಲೊಬ್ಬ, ಮಧ್ಯವಯಸ್ಕನಾದ ಅರಪುರದ ಬಸಪ್ಪಾಜಿ ಅರಸು. ಸ್ವಾಭಿಮಾನಿ. ಮೈಸೂರಿಗೊದಗಿದ ದುರ್ದೆಶೆಯಿಂದ ವ್ಯಥಿತನಾಗಿ, ಏನನ್ನೂ ತಾವು ಮಾಡಲಾರೆವೆ ?—ಎಂದು ಪರಿತಪಿಸುತ್ತಿದ್ದ ವ್ಯಕ್ತಿ.

ಅರಮನೆಗೆ ನಿಷ್ಠರಾಗಿದ್ದ ಕೆಲವರೊಡನೆ ಮಾತನಾಡಿ ಇಷ್ಟನ್ನು ತಿಳಿದುಕೊಂಡ ಅಪರಂಪಾರ, ಬಸಪ್ಪಾಜಿ ಅರಸನ ನಿವಾಸದೆದುರು ಪ್ರತ್ಯಕ್ಷನಾದ.

ಆಳುಗಳು ಭಿಕ್ಷೆ ನೀಡಲು ಬಂದರು. ಜಂಗಮರಿಬ್ಬರು ಕದಲಲಿಲ್ಲ. ಅರಸನ ಮಕ್ಕಳು ಬಂದು ಕೇಳಿದರು :

"ಇನ್ನೇನು ಬೇಕು, ಸ್ವಾಮಿಗೋಳೆ ?"

"ನಿಮ್ಮ ಅಪ್ಪಾಜಿಯವರನ್ನು ಕಾಣಬೇಕು."

ಬಸಪ್ಪಾಜಿ ಅರಸು ಜಂಗಮರನ್ನು ಬರಮಾಡಿಕೊಂಡ.

ರಾಜಕಾರಣವನ್ನು ಪ್ರಸ್ತಾಪಿಸಿದ ಕಾವಿಧಾರಿಗಳ ವಿಷಯದಲ್ಲಿ ಅವನಿಗೆ ಯಾಕೋ ಅವಿಶ್ವಾಸ. ಇವರು ಆಂಗ್ಲರ ಗೂಢಚಾರರಿರಬಹುದೆ ? ತನಗೆ ಆಗದವರು ಯಾರಾದರೂ ಒಳಸಂಚು ಹೂಡಿ ಇವರನ್ನು ಕಳುಹಿರಬಹುದೆ ?

ಆದರೂ, ಎಚ್ಚರ ವಹಿಸಿ ಮಾತನಾಡಿದಷ್ಟೂ, ಮನಸ್ಸೆನ್ನುತಿತ್ತು :

"ಈ ಅಪರಂಪಾರನಂತೂ ಬರಿ ಜೋಳಿಗೆಯವನಂತಿಲ್ಲ. ಇವನು ಅಸಾಧಾರಣ ವ್ಯಕ್ತಿ. ವಂಚಕರು ಹೀಗಿರುತಾರಾ ?''

ಕೊಡಗಿನ ದುರವಸ್ಥೆ ಹಾಗೂ ಆಂಗ್ಲರ ಧೂರ್ತತನಗಳನ್ನು ಕುರಿತು ಅಪರಂಪಾರ ಆಡುತ್ತಿದ್ದ ಮಾತುಗಳನ್ನು ಕೇಳುತ್ತ, ಥಟ್ಟನೆ ಬಸಪ್ಪಾಜಿ ಅರಸನೆಂದ :

"ಪೂರ್ವಾಶ್ರಮದಲ್ಲಿ ತಾವು ಹಾಲೇರಿ ವಂಶಸ್ಥರೊ ?"

ಮಂದಸ್ಮಿತವಾಗಿ ಅಪರಂಪಾರನೆಂದ :

"ಅಪನಂಬಿಕೆಯ ಗುಡ್ಡದಿಂದ ಬಯಲಿನ ವಿಸ್ತಾರಕ್ಕೆ ಬಂದಿರಾ ? ಒಳ್ಳೇದು. ನಿಮ್ಮ ಪ್ರಶ್ನೆಗೆ ಉತ್ತರ ಕೊಡುತೇವೆ. ಹಾಲೇರಿ ವಂಶಕ್ಕೂ ನಮಗೂ ಪೂರ್ವಜನ್ಮದಲ್ಲಿ ಸಂಬಂಧ ವಿದ್ದದ್ದು ನಿಜ. ಆದರೆ ಅದು ಮುಖ್ಯವಲ್ಲ."

"ಕೊಡಗಿನ ಸಿಂಹಾಸನಕ್ಕೆ ಯಾರು ಹಕ್ಕುದಾರರು ಅನ್ನುತೀರಿ ?"

"ಮೈಸೂರಿಗೆ ಯಾರು ? ಮುಮ್ಮಡಿ ಕೃಷ್ಣರಾಜರಲ್ಲವೆ ? ಹಾಗೆಯೇ ಕೊಡಗಿಗೆ ಚಿಕವೀರರಾಜರು. ಇಂಗ್ರೇಜಿಯವರಿಗೆ ಬೇಡವಾದ ಮಾತ್ರಕ್ಕೆ ಪ್ರಜೆಗಳಿಗೆ ಬೇಡವಾಗತಾ

ರೆಯೆ ? ಪ್ರಾಕು ಮೈಸೂರನ್ನು ಯದುವಂಶದ ಅರಸರು ಆಳುತಾ ಇದ್ದಾಗ ಬಿದನೂರು ಸ್ವತಂತ್ರ ರಾಜ್ಯವಾಗಿತ್ತು. ಆ ಸ್ಥಿತಿ ಮತ್ತೆ ಬರಬೇಕಾದ್ದು ಸಾಜ ತಾನೆ ?"

ಬಸಪ್ಪಾಜಿ ತಲೆಯಾಡಿಸಿದನೇ ಹೊರತು, ಪ್ರತ್ಯುತ್ತರ ನೀಡಲಿಲ್ಲ. ಅವನು ಯೋಚನೆ ಗೀಡಾದ.

ಅಪರಂಪಾರನ ಗುರಿ ನಿರೂಪಣೆ ಆಕರ್ಷಕವಾಗಿತ್ತು.

"ಕೊಡಗರು, ಗೌಡರು, ಶಿವಾಚಾರದವರು ಎಲ್ಲ ಸೇರಿ ಅರ್ಧ ಲಕ್ಷ ಜನರ ದಂಡು ಸಿದ್ಧಮಾಡತೇವೆ. ಮೈಸೂರಲ್ಲೂ ಇಕ್ಕೇರಿಯಲ್ಲೂ ಇನ್ನರ್ಧ ಲಕ್ಷ ಆಗ್ತದೆ! ಮರಮರ ಮಥನಿಸಿ ಕಿಚ್ಚು ಹುಟ್ಟಿ ಕಾಳ್ಗಿಚ್ಚಾಗುತದೆ. ಪರಕೀಯರು ಉರಿದು ಹೋಗತಾರೆ."

"ಇಕ್ಕೇರಿಯವರು ಒಪ್ಪಿದಾರೇನು ?"

"ಅಲ್ಲಿಗೆ ಇನ್ನು ಹೋಗತೇವೆ. ವೇಲೂರಿಗೂ ಹೋಗಿಬರತೇವೆ...ಎಲ್ಲಕ್ಕೂ ಮೊದಲು ನಿಮ್ಮ ಕೂಡೆ ಮಾತಾಡಬೇಕು, ಅನಿಸಿತು. ಬಂದೆವು."

"ನನ್ನಲ್ಲಿರಿಸಿದ ವಿಶ್ವಾಸಕ್ಕಾಗಿ ಧನ್ಯ. ಈ ಮಾತು ಹೊರಹೋಗೋದಿಲ್ಲ. ಕುದುರೆ ಹತ್ತೋಕೆ ಬಾರದೆ, ಕೋವಿ ಎತ್ತೋಕೆ ಆಗದೆ, ನಮ್ಮ ಜನ ನಿರ್ವೀರ್ಯರಾಗತಾ ಇದಾರೆ. ಮೊದಲು ಅವರಲ್ಲಿ ಜೀವ ತುಂಬಬೇಕು. ಆಗಲಿ; ಬಹಳ ಎಚ್ಚರದಿಂದ ನಾವು ಮುಂದು ವರಿಯಬೇಕು..."

ಸಂದೇಹದ ಮಂಪರು ಹರಿದು ಬಸಪ್ಪಾಜಿಯ ಮನಸ್ಸು ಜಾಗೃತವಾಗಿ, ತಾನು ಓಡಿಯ ಬೇಕಾದ ದಾರಿ ಇಂಥದೇ ಎಂಬುದನ್ನು ನಿಚ್ಚಳವಾಗಿ ಕಂಡಿತ್ತು.

ಅಪರಂಪಾರನೆಂದ :

"ಇವತ್ತು ರಾತ್ರೆ ಚಾಮುಂಡೇಶ್ವರಿಯ ಸನ್ನಿಧಿಗೆ ಹೋಗೋಣ. ಅಲ್ಲಿ ವಿಶ್ವಾಸದ ಆಣೆ ಆಗಲಿ."

ಬಸಪ್ಪಾಜಿ ಅರಸನೆಂದ :

"ಒಪ್ಪಿಗೆ."

## ೪೪

ಅರಸಾಳು, ಆನಂದಪುರ, ಕಪಾಲಿದುರ್ಗ—ಒಂದೊಂದು ಸ್ಥಳವೂ ಹೆಸರೂ ರೋಮಾಂಚನ ಉಂಟುಮಾಡುತ್ತಿದ್ದುವು.

"ಇದು ಮಾಯಾಲೋಕ, ಸ್ವಾಮಿಯವರೆ" ಎಂದ ಸಿದ್ಧಲಿಂಗ.

ಅಪರಂಪಾರನಿಗೆ ಅದು ಪರಿಚಿತ ಸ್ಥಳ. ದೇಶಪರ್ಯಟನ ಮಾಡುತ್ತ ಹಿಂದೊಮ್ಮೆ ಬಂದಿದ್ದಾಗ ದೇವಗಂಗೆಯ ಬಳಿಯ ಹಳ್ಳಿಯಲ್ಲಿ, ರೈತನೊಬ್ಬನ ಮನೆಯಲ್ಲಿ, ದಾಸೋಹ ಕ್ಕಾಗಿ ಆತ ನಿಂತಿದ್ದ.

ಅಪರಂಪಾರ ಒಂದು ಮನೆಯ ಮುಂದೆ ನಿಂತಾಗ, "ಶಿವ, ಶಂಭೋ, ಶಂಕರ" ಎಂದು ಸಿದ್ಧಲಿಂಗ ಹರನಾಮೋಚ್ಚಾರ ಮಾಡಿದ.

ಸಂಗಡಿಗನತ್ತ ಮುಗುಳುನಗೆ ಬೀರಿ ಅಪರಂಪಾರ ಬಾಗಿಲು ತಟ್ಟಿ, "ಗುರುಮೂರ್ತಪ್ಪ, ಗುರುಮೂರ್ತಪ್ಪ" ಎಂದು ಕರೆದ.

"ಬೇಕಾದವರ ಮನೆಗೇ ಬಂದಿದೇವೆ, ಅನ್ನಿ !" ಎಂದ ಸಿದ್ಧಲಿಂಗ.

ಎಂಟು ಹತ್ತು ವರ್ಷಗಳ ಅಂತರದ ಬಳಿಕ ಕಂಡ ಶರಣನ ಗುರುತು ಹಿಡಿಯಲು ಗುರು ಮೂರ್ತಪ್ಪನಿಗೆ ಒಂದೆರಡು ನಿಮಿಷಗಳು ಬೇಕಾದುವು. ಇವನು ಅಪರಂಪಾರ ಎಂಬುದನ್ನು ಅರಿತಾಗ ಆತ ಹಿಗ್ಗಿದ.

ತನ್ನ ಪಾದಗಳನ್ನು ಗುರುಮೂರ್ತಪ್ಪ ತೊಳೆಯುತ್ತಿರಲು ಅಪರಂಪಾರ ಕೇಳಿದ :

"ಸೂರಪ್ಪನಾಯಕರನ್ನು ಭೇಟಿಯಾಗಬೇಕಲ್ಲ. ಅವರು ಎಲ್ಲಿ ಸಿಗಬಹುದು, ಗುರು ಮೂರ್ತಪ್ಪ ?"

ಉದಕ ಮುಗಿದಿದ್ದ ತಂಬಿಗೆ ಗುರುಮೂರ್ತಪ್ಪನ ಕೈಯಿಂದ ತುಸು ಜಾರಿ ನೆಲಮುಟ್ಟಿತು.

ಅವನೆಂದ :

ಸ್ವಾಮಿಯವರಿಗೆ ಗೊತ್ತಿಲ್ಲಾಂತ ಕಾಣತದೆ. ನಾಯಕರೀಗ ಅಡವಿ ಸೇರಿದಾರೆ. ಇಂಗ್ರೇಜಿಯವರಿರುವ ಕಡೆ ಕಾಣಿಸಿಕೊಳ್ಳೋದಿಲ್ಲ.

"ಸ್ವಲ್ಪ ಸ್ವಲ್ಪ ಕೇಳಿ ಬಲ್ಲೆವು. ಬಿಳಿಯರ ಅಸ್ತಿತ್ವಕ್ಕೇ ನಾಯಕರು ಕಂಟಕಪ್ರಾಯರಾಗಿ ದಾರಂತೆ."

"ಅದು ನಿಜ" ಎಂದು ನುಡಿದು ಗುರುಮೂರ್ತಪ್ಪ ಪೂಜಾಪರಿಕರಗಳನ್ನು ತರಲು ಎದ್ದು ಒಳಹೋದ.

...ದಾಸೋಹ ಸ್ವೀಕರಿಸುತ್ತಿದ್ದ ಅಪರಂಪಾರ, ಮನೆತುಂಬ ಜನರಿದ್ದುದನ್ನು ಗಮನಿಸಿದ.

"ಬೀಗರೊ ನೆಂಟರೊ ಬಂದ ಹಾಗಿದೆ" ಎಂದ.

ಗುರುಮೂರ್ತಪ್ಪ ಏನನ್ನೂ ಹೇಳದೆ ನಸುನಕ್ಕ.

ಪವಡಿಸಿ ದಣಿವಾರಿಸಿಕೊಳ್ಳಲು ಸಿದ್ಧಲಿಂಗ ಅಣಿಮಾಡುತ್ತಲಿದ್ದಂತೆ, ಅವರಿದ್ದ ಕೊಠಡಿ ಯೊಳಕ್ಕೆ ಯಾರೋ ಕಾಲಿಟ್ಟರು.

"ಶರಣು, ಸ್ವಾಮಿಗಳೆ. ನಾನು ಸೂರಪ್ಪ."

ಧ್ವನಿಯಲ್ಲಿ ಒಲವು ತುಂಬಿ ಅಪರಂಪಾರನೆಂದ :

"ಚೆನ್ನಾಯಿತು ! ಭಾಗೀರಥಿ ಇಷ್ಟೊಂದು ಸುಲಭಪ್ರಾಪ್ತಳು ಅಂತ ನಾವು ತಿಳಿದಿರ ಲಿಲ್ಲ. ಪ್ರಾಯಶಃ ದೇವಗಂಗೆಯ ಸಮೀಪದಲ್ಲೇ ನಾವಿರೋದರಿಂದ ಹೀಗಾಗಿದೆಯೋ ಕಾಣೆ ! ಬನ್ನಿ. ಕುಳಿತುಕೊಳ್ಳಿ."

ಮಾಟವಾದ ನಿಲುವು. ಕುಡಿಗಳನ್ನು ಹುರಿಗೊಳಿಸಿದ ಕಿರುಮೀಸೆ ಮುಖವನ್ನು ಆಕರ್ಷ ಣೀಯವಾಗಿ ಮಾಡಿತ್ತು. ಹೊದೆದುಕೊಂಡಿದ್ದ ಉತ್ತರೀಯ, ಹರವಾದ ಎದೆ ಭುಜಗಳನ್ನೂ ಬಲಿಷ್ಠ ತೋಳುಗಳನ್ನೂ ಮರೆಮಾಡಲು ಶಕ್ತವಾಗಿರಲಿಲ್ಲ.

ಸೂರಪ್ಪನೆಂದ :

"ತಮ್ಮ ವಿಷಯ ನಾನು ಬಲ್ಲೆ ಎಂದರೆ ಸ್ವಾಮಿಗಳಿಗೆ ಆಶ್ಚರ್ಯವಾಗಬಹುದು."

"ಗುರುಮೂರ್ತಪ್ಪ ಹೇಳಿದ್ದಾನು."

"ಅಲ್ಲ. ವರ್ಷಗಳಿಗೆ ಹಿಂದೆ ಬಿರುಗಾಳಿಯ ಹಾಗೆ ತಾವು ಊರೂರು ಸುತ್ತುತ್ತಿದ್ದಾಗಲೇ ನನ್ನ ಗೂಢಚಾರರಿಂದ ತಿಳಿದೆ. ಆವರ್ತಿಗೊಮ್ಮೆ ಬರಬೇಕೆಂತಲೂ ಇತ್ತು. ಆಗಲಿಲ್ಲ. ತಮ್ಮನ್ನು ಕಾಣಬೇಕೆಂಬ ಆಸೆ ಅನಿರೀಕ್ಷಿತವಾಗಿ ಈಗ ಫಲಿಸಿದೆ."

"ನಾವೂ ನಿಮ್ಮನ್ನು ನೋಡಬೇಕೆಂತಲೇ ಈ ಕಡೆಗೆ ಬಂದೆವು. ಇಕ್ಕೇರಿಗೂ ಮಡಕೇರಿಗೂ

ಇರುವ ಸಂಬಂಧ ನಿಮಗೆ ತಿಳಿಯದ್ದಲ್ಲ. ಸೋಮಶೇಖರ ನಾಯಕರೂ ದೊಡ್ಡವೀರ ರಾಜೇಂದ್ರ ಒಡೆಯರೂ ಪರಮಾಪ್ತರಾಗಿದ್ದರು.''

''ನಾನು ಅರಿಯೆನೆ ?''

''ಆದರೆ ಈಗ—''

...ಸೂರಪ್ಪ ಕುಶಾಗ್ರಮತಿಯಾಗಿದ್ದ, ಯಾವುದನ್ನೂ ಬಿಡಿಸಿ ಹೇಳಬೇಕಾದ ಅಗತ್ಯ ವಿರಲಿಲ್ಲ.

ತಾನು ಬಂದ ಉದ್ದೇಶವನ್ನು ಅಪರಂಪಾರ ಪ್ರಸ್ತಾಪಿಸಿದೊಡನೆಯೇ ಸೂರಪ್ಪನ ಕಣ್ಣುಗಳು ಮಿಂಚಿದುವು.

''ಘಟ್ಟದ ಕೆಳಗೆ ಕನ್ನಡ ಜಿಲ್ಲೆಗೆ ಹೋಗುವ ಇರಸಾಲು—ಟಪಾಲುಗಳನ್ನು ತಡೆದು ವಶಪಡಿಸಿಕೊಳ್ಳೋದು. ಅಡವಿದಾರಿಯಲ್ಲಿ ಸಣ್ಣ ಸಣ್ಣ ಇಂಗ್ರೇಜಿ ತುಕ್ಕಡಿಗಳ ಮೇಲೆ ಹಲ್ಲೆ ಮಾಡೋದು—ಇದೀಗ ಈಗಿನ ನನ್ನ ಕಾರ್ಯಕ್ರಮ. ಮೈಸೂರಿನ ಅರಸ ಮೆತ್ತಗಿನ ಮನುಷ್ಯ. ಆತ ಹೋರಾಡುತಾನೆ ಅನ್ನೋ ನಂಬಿಕೆ ನನಗಿಲ್ಲ. ಬಸಪ್ಪಾಜಿಯವರ ಮಾತು ಬೇರೆ ಅನ್ನಿ. ಆಗಲಿ, ನೋಡೋಣ. ಇಲ್ಲಿಗೆ ಬರುತ್ತ ಬೆಟ್ಟದ ಸಾಲುಗಳು ಚಕ್ರಾಕಾರದಲ್ಲಿ ಇರುವುದನ್ನು ಕಂಡಿರಲ್ಲ ? ಬಿದನೂರು ಸ್ವತಂತ್ರ ರಾಜ್ಯವಾಗಿರಬೇಕು ಅಂತ ನಿಸರ್ಗದ ನೇಮವಿತ್ತು. ಆ ಸ್ವಾತಂತ್ರ್ಯವನ್ನು ನಮ್ಮವರು ಉಳಿಸಿಕೊಳ್ಳಲಿಲ್ಲ. ಈಗ ಪುನಃ ಅದನ್ನು ಗಳಿಸತೇವಾ ? ಚಿಕವೀರರಾಜರೂ ನನ್ನ ಸ್ನೇಹ ಬಯಸಿದ್ದರು. ಜತೆಯಾಗಿ ಹೋರಾಡುವ ವಿಷಯ ಬಸವಯ್ಯನ ಮೂಲಕ ಆಡಿದ್ದರು. ಆದರೂ ಗ್ರಹಗಳು ಮುನಿದು ಕೊಡಗು ಪರಾಧೀನವಾಯಿತು...'' ಎಂದು, ತನ್ನ ವಿಚಾರಗಳನ್ನು ಸೂರಪ್ಪ ಅಪರಂಪಾರನ ಮುಂದಿರಿಸಿದ.

"ಅದೆಲ್ಲ ನಿಜ, ನಾಯಕರೆ. ಇಂಗ್ರೇಜಿಯವರನ್ನು ಹೊಡೆದೋಡಿಸುವ ಕೆಲಸ ನಾಳೆಯಲ್ಲ ಇವತ್ತೇ ಆಗಲಿ, ಇವತ್ತಲ್ಲ ಈಗಲೇ ಆಗಲಿ—ಅಂತ ನಾವು ಹೇಳುತ್ತಿಲ್ಲ. ಸಿದ್ಧತೆಗೆ ಸಮಯ ಬೇಕು. ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ ? ಜೊಳ್ಳು ತೂರಿದಲ್ಲಿ ಬತ್ತವುಂಟೆ ? ಎಳ್ಳನ್ನೂ ಒಳ್ಳೆಯ ಬತ್ತವನ್ನೂ ನಾವು ಮೊದಲು ಸಂಗ್ರಹಿಸಬೇಕು. ನೆಲನ ಶೋಧಿಸಿ ನೆಲೆಯನರಿಯದೆ ಕೆರೆಯ ಕಟ್ಟಿಸುತಾರಾ ? ಪಾತಾಳದಗ್ಗವಣಿಯ ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ, ತೆಗೆಯಬಹುದೆ ?"

ಅಪರಂಪಾರನ ಮಾತುಗಳನ್ನು ಏಕಾಗ್ರಚಿತ್ತದಿಂದ ಸೂರಪ್ಪ ಆಲಿಸಿದ.

ನಿಟ್ಟುಸಿರುಗರೆದು ಆತನೆಂದ :

"ನಾವು ಧರ್ಮ ಮರೆತು ಕೆಟ್ಟೆವು. ಗುರುಮನೆಯವರಾದ ತಾವು ರಾಜಕಾರ್ಯದ ಹಿತೋಪದೇಶ ಮಾಡುವಾಗ, ಹೆಚ್ಚು ಹೆಚ್ಚಾಗಿ ನನಗೆ ಅದು ಮನವರಿಕೆಯಾಗತದೆ, ಅಹಂಕಾರದಿಂದ ಮೆರೆದು ಪಾಪಿಗಳಾದೆವು. ನಮ್ಮೊಳಗಿನ ಅನೈಕ್ಯವೇ ನಮಗೆ ಮುಳಿವಾಯಿತು...ಆಗಲಿ, ಸ್ವಾಮಿಯೋರೆ. ನನ್ನ ಕರ್ತವ್ಯ ನಾನು ಪಾಲಿಸತೇನೆ."

"ಜನ ಕಣ್ಣೊಳಗೆ ಕಣ್ಣಿದ್ದೂ ಕಾಣಲರಿಯರಯ್ಯ ! ಕಿವಿಯೊಳಗೆ ಕಿವಿಯಿದ್ದೂ ಕೇಳಲರಿಯರಯ್ಯ ! ಅವರನ್ನು ನಾವು ಎಚ್ಚರಿಸಬೇಕು."

"ತಮ್ಮ ವಾಣಿಗೆ ಪ್ರಜೆಗಳು ಕಿವಿಗೊಡುತಾರೆ, ಸಂಶಯವಿಲ್ಲ."

"ನಾವು ನಿಮ್ಮ ಕೂಡೆ ಸಂಬಂಧವಿಟ್ಟಿರತೇವೆ."

"ಇವತ್ತು ಇಲ್ಲಿದೇನೆ. ನಾಳೆ ಇನ್ನೊಂದೂರಲ್ಲಿ. ಏನಿದ್ದರೂ ನನ್ನ ತಾಣ ಗುರುಮೂರ್ತಪ್ಪ ತಿಳಿದಿರತಾನೆ."

"ಇಕ್ಕೇರಿ—ಕೊಡಗುಗಳ ಬಾಂಧವ್ಯ ಶಿವಲಿಂಗಸಾಕ್ಷಿಯಾಗಿ ಏರ್ಪಟ್ಟಿದೆ—ಎಂದು ಕೊಳ್ಳೋಣವೆ ನಾಯಕರೆ ?"

"ಹೌದು, ಸ್ವಾಮಿಗಳೇ. ಕೊಡಗಿನ ಹೋರಾಟದಲ್ಲಿ ನಾವೂ ಸಹಭಾಗಿಗಳು. ಪರಕೀಯರ ವಿರುದ್ಧ ಶಸ್ತ್ರ ಹಿರಿಯುತೇವೆ ಅಂತ ಶಿವಲಿಂಗಸಾಕ್ಷಿಯಾಗಿ ಪ್ರತಿಜ್ಞೆ ಮಾಡುತಿದೇನೆ."

...ದೀರ್ಘ ಮಾತುಕತೆಯಿಂದ ಇರುಳು ಕಿರಿದಾಯಿತು, ಬೆಳ್ಳಿಮೂಡಿ ಬಿದನೂರಿನ ಹಸುರಿನ ಮೇಲೆ ನಸುಬೆಳಕು ನರ್ತಿಸಿತು.

ಸೂರಪ್ಪ ನಾಯಕನೂ ಅವನ ಸಂಗಡಿಗರೂ ಆಗಲೇ ಎಚ್ಚತ್ತಿದ್ದರು. ಸೂರಪ್ಪ ಅಪರಂಪಾರನನ್ನೆಬ್ಬಿಸಿ, ಪಾದಮುಟ್ಟಿ, "ಹೊರಡುತೇವೆ, ಅಪ್ಪಣೆಯಾಗಬೇಕು" ಎಂದ.

"ಮಹಾದೇವ ನಿಮ್ಮ ಮೈಗಾವಲಿಗಿರುತಾನೆ" ಎಂದ ಅಪರಂಪಾರ.

ನಾಯಕ ಅಪರಂಪಾರನ ಅಡಿಗಳ ಬಳಿ ಏನನ್ನೋ ಇರಿಸಿದ.

"ಅಲ್ಪ ಕಾಣಿಕೆ. ಸದಾ ತಮ್ಮ ಹತ್ತಿರವಿರಬೇಕು."

ಅಪರಂಪಾರ ಅದನ್ನೆತ್ತಿಕೊಂಡು, ಮಂದಹಾಸ ಸೂಸಿದ.

"ಆಗಲಿ, ಜಂಗಮನ ಜೋಳಿಗೆಯಲ್ಲಿರತದೆ" ಎಂದ.

ಕಾಣಿಕೆ, ಆಂಗ್ಲ ಸಿಪಾಯರ ಕಪ್ತಾನನೊಬ್ಬನನ್ನು ಹೊಡೆದುರುಳಿಸಿ ಸೂರಪ್ಪ ವಶಪಡಿಸಿ ಕೊಂಡಿದ್ದ ಕೈಬಂದೂಕು, ಸೊಗಸಾಗಿತ್ತು.

## ೪೫

ಗೌರಮ್ಮನೆದ್ದು, ಮಗ್ಗುಲಲ್ಲಿ ಮಲಗಿದ್ದ ಮಗಳ ಹೊದಿಕೆಯನ್ನು ಸರಿಪಡಿಸಿದಳು. ಇನ್ನು ಒಂದೆರಡು ವರ್ಷಗಳಲ್ಲೇ ಹದಿನಾರು ತುಂಬುವ ಕೋಮಲಾಂಗಿ, ಯುವರಾಣಿ. ಕಂಡವರು ದೃಷ್ಟಿ ತಾಕೀತೆಂದು ನೆಟಿಕೆ ಮುರಿಯುವಂತಿತ್ತು ಆಕೆಯ ರೂಪರಾಶಿ. ತಾಯಿಯ ಜೀವಕ್ಕೆ ಅಂಟಿಕೊಂಡೇ ಬೆಳೆದ ಈ ಬಳ್ಳಿ ಒಂದು ಇರುಳನ್ನೂ ಆಕೆಯಿಂದ ಬೇರೆಯಾಗಿ ಕಳೆಯದು.

ಇನ್ನೆರಡು ಘಳಿಗೆ ಬಿಟ್ಟು ಆಕೆ ಎಚ್ಚರಗೊಳ್ಳುವಳು.

ಎಲ್ಲರಿಗಿಂತ ತಡವಾಗಿ ಏಳುವವನು ಅರಸ. ಕಣ್ಣು ತೆರೆದೊಡನೆ ಆತ ಮಗಳನ್ನು ಕೂಗಿ ಕರೆಯುವ :

"ಪುಟ್ಟಮ್ಮಾಜೀ..."

"ಬಂದೇ ಅಪ್ಪಾಜೀ" ಎಂದು ಮಾರ್ನುಡಿದು, ತಂದೆಯ ಬಳಿ ಸಾರಿ ಹಾಸಿಗೆಯ ಮೇಲೆ ಆಕೆ ಕುಳಿತುಕೊಳ್ಳಬೇಕು.

ಈ ನತದೃಷ್ಟೆಯ ಹಣೆಯಲ್ಲಿ ಏನು ಬರೆದಿದೆ ಎಂದು ಓದಲೆಳಸುವವನಂತೆ ಅರಸ ಮಗಳ ಮುಖವನ್ನು ದಿಟ್ಟಿಸಬೇಕು ; ಮುಂಗುರುಳನ್ನು ನೇವರಿಸಬೇಕು.

ಆಗ ಮಗಳೆನ್ನುವಳು :

"ನೀರು ಕಾದದೆ. ಏಳಿ, ಅಪ್ಪಾಜಿ..."

ಅದು ವೇಲೂರಿನ ಕೋಟೆಯೊಳಗಿನ ಅರಮನೆ. ಟೀಪೂ ಮಡಿದ ಬಳಿಕ ಆತನ ಸಂಸಾರವನ್ನು ಕೆಲ ವರ್ಷಗಳ ಕಾಲ ಆಂಗ್ಲರು ಅಲ್ಲಿರಿಸಿದ್ದರು. ಟೀಪೂವಿನ ಮಕ್ಕಳು ರಾಜ ಬಂದಿಗಳಾಗಿ ಅಲ್ಲಿ ದಿನ ಕಳೆದಿದ್ದರು. ಚಿಕವೀರರಾಜ ಕೈದಿಯೆ ? ಹಾಗೆಂದು ನಿರ್ದಿಷ್ಟವಾಗಿ ಹೇಳುವಂತಿರಲಿಲ್ಲ. ಅರಮನೆಯ ಬಾಗಿಲುಗಳನ್ನು ಆಂಗ್ಲ ಪಹರೆಯಾಳುಗಳು ಕಾಯುತ್ತಿರಲಿಲ್ಲ. ಹಾಗಾದರೆ ಆತ ಸ್ವತಂತ್ರನೇ? ಆ ರೀತಿ ನುಡಿಯುವುದೂ ಕಷ್ಟವೇ. ಕೋಟೆ ಬ್ರಿಟಿಷರ ಅಧೀನದಲ್ಲಿತ್ತು; ಅದಕ್ಕೆ ಭದ್ರ ಕಾವಲಿತ್ತು. ಮಡಕೇರಿಗಾಗಲೀ ಇನ್ನೆಲ್ಲಿಗೇ ಆಗಲೀ ಇಷ್ಟಬಂದಂತೆ ಹೊರಟು ಹೋಗುವ ಸ್ವಾತಂತ್ರ್ಯ ಅರಸನಿಗಿರಲಿಲ್ಲ.

ಅರಮನೆಯ ಸುತ್ತಲೂ ಹಲವಾರು ಸಣ್ಣಪುಟ್ಟ ಮನೆಗಳಿದ್ದುವು. ಚಿಕವೀರರಾಜನೊಡನೆ ಹೊರಟು ಬಂದಿದ್ದ ಇನ್ನೂರಕ್ಕೂ ಮಿಕ್ಕಿದ ಪರಿವಾರ ಆ ಮನೆಗಳಲ್ಲಿ ಬಿಡಾರ ಮಾಡಿತು. ಕೊಡಗಿನ ಪಡಿವಾಳರೂ ಚಾವಡಿಕಾರರೂ ಅರಮನೆಯಲ್ಲಿ ಓಡಾಡುತ್ತಿದ್ದರು. ಆದರೆ ಒಬ್ಬನೇ ಒಬ್ಬಾತನಲ್ಲೂ ಶಸ್ತ್ರವಿರಲಿಲ್ಲ.

"ಅಕ್ಕಿ ಮತ್ತಿತರ ಸಾಮಗ್ರಿ ಒದಗಿಸುತೇವೆ" ಎಂದಿದ್ದರು ಆಂಗ್ಲ ಅಧಿಕಾರಿಗಳು.

ಸ್ವಾಭಿಮಾನಿಯಾದ ಚಿಕವೀರರಾಜ ನುಡಿದಿದ್ದ :

"ನಮ್ಮ ವ್ಯವಸ್ಥೆ ನಾವು ಮಾಡಿಕೋತೇವೆ."

ರಾಜಭಂಡಾರವನ್ನು ತನ್ನ ಜತೆಗೆ ತಂದಿದ್ದ ಅರಸ ತನ್ನ ಘನತೆಗೆ ಕುಂದು ತಂದುಕೊಳ್ಳಲಿಲ್ಲ...

...ತಂದೆ ಸ್ನಾನದ ಮನೆಗೆ ಹೋದೊಡನೆ ರಾಜಕುಮಾರಿ ತನ್ನ ತಾಯಿ ಇದ್ದಲ್ಲಿಗೆ ನಡೆದಳು.

ಹಿತ್ತಿಲ ಮರದಲ್ಲೊಂದು ಕಾಗೆ ಒಂದೇ ಸಮನೆ ಕಾಕಾಕಾ ಎನ್ನುತ್ತಿತ್ತು.

ರಾಣಿ ಗೌರಮ್ಮನೆಂದಳು :

"ಯಾರೋ ನೆಂಟರು ಬರೋ ಹಂಗದೆ."

"ನಿನಗೆ ಊರಿನ ಧ್ಯಾನ. ಯಾರು ಬರುತಾರಮ್ಮ ಇಷ್ಟು ದೂರಕ್ಕೆ ?" ಎಂದಳು ರಾಜಕುಮಾರಿ.

ಅಷ್ಟು ಹೊತ್ತಿಗೆ ಪಡಿವಳನೊಬ್ಬ ಬಂದು ನುಡಿದ :

"ಇಬ್ಬರು ಅಯ್ನೋರು ತಲೆಬಾಕಿಲ್ನಾಗೆ ನಿಂತವರೆ. ಊರು ಕಡೆ ಮಂದೀಂತ ಅನಿಸತದೆ."

"ನೆಂಟರು ಬರಲಿಲ್ಲ. ಸ್ವಾಮಿಗಳು ಬಂದರು. ನಡೆಯವ್ವ" ಎಂದಳು ರಾಣಿ.

ಗೌರಮ್ಮನೂ ಆಕೆಯ ಮಗಳೂ ತನ್ನ ಅಡಿಗಳಿಗೆ ಎರಗಿದಾಗ ಅಪರಂಪಾರನ ಕಂಠ ಉಮ್ಮಳಿಸಿತು.

"ಏಳು ತಾಯಿ, ಏಳು ತಂಗೀ. ಮಹಾರಾಣಿ—ಯುವರಾಣಿ ಅಲ್ಲವಾ ? ಮಹಾದೇವ ಕಾಪಾಡುತಾನೆ, ಏಳಿರಿ."

ಅಪರಂಪಾರನ ಧ್ವನಿ ಕೇಳಿ ಗೌರಮ್ಮನ ಮೈ ಪುಲಕಗೊಂಡಿತು. ಗಡ್ಡ ಮೀಸೆಗಳ ವೇಷಧಾರಿಯಲ್ಲ. ಅದೇ ಕಣ್ಣುಗಳು, ಅದೇ ಕಂಠ, ಆ ಠೀವಿಯೇ.

ನಮಿಸಿದವರನ್ನು ಸಿದ್ಧಲಿಂಗನೂ ಆಶೀರ್ವದಿಸಿದ.

[ಈತನೊಬ್ಬ ಆಗ ಇರಲಿಲ್ಲ.]

ಗೌರಮ್ಮನೆದ್ದು, ತಲೆಯ ಮೇಲಣ ಸೆರಗನ್ನು ಸರಿಪಡಿಸಿ, ಪರೀಕ್ಷಿಸುವ ನೋಟದಿಂದ ಅಪರಂಪಾರನನ್ನೊಮ್ಮೆ ನೋಡಿ ಅಂದಳು :

"ಮಡಕೇರಿಯ ಅರಮನೆಗೊಮ್ಮೆ ಸ್ವಾಮಿಗಳು ದಯೆಮಾಡಿಸಿದ್ದ ನೆನಪು."

"ಹೌದು, ತಾಯಿ. ಆಗ ಕರೆಸಿ ಬಂದೆವು ; ಈಗ ನಾವಾಗಿಯೇ ಬಂದಿದೀವಿ."

"ತಾವು ದಾಸೋಹ ಸ್ವೀಕರಿಸದೇ ಹೋದಿರಿ. ಕೊಡಗಿನ ರಾಜ್ಯಲಕ್ಷ್ಮಿಯೂ ಹೊರಟು ಹೋದಳು."

"ಅದಕ್ಕೂ ಇದಕ್ಕೂ ಏನು ಸಂಬಂಧವಮ್ಮ?..."

ಸಿದ್ಧಲಿಂಗನೆಂದ :

"ಸ್ವಾಮಿಗಳು ಪ್ರಸನ್ನರಾಗಿ ಬಂದಿದಾರೆ. ಇನ್ನು ರಾಜ್ಯಲಕ್ಷ್ಮಿಯೂ ಬರತಾಳೆ. ರಾಣಿಯವರೆ."

ಗೌರಮ್ಮನ ಕಣ್ಣುಗಳು ಅಶ್ರುಭರಿತವಾದುವು.

"ತಾವು ಕೂತುಕೋಬೇಕು. ಸನ್ನಿಧಿಗೆ ಸುದ್ದಿ ಮುಟ್ಟಿಸಿ ಬರತೇನೆ" ಎಂದು ನುಡಿದು ಗೌರಮ್ಮ ಮಗಳೊಡನೆ ಒಳ ಹೋದಳು.

ಅರಸ, ಬಹಳ ಕಾಲ ಅಗಲಿದ್ದ ಬಂಧುವನ್ನು ಕಾಣಬಂದವನಂತೆ ಆನಂದೋದ್ವೇಗದಿಂದ, ನಡುಹಜಾರಕ್ಕೆ ಬಂದ. ಅಪರಂಪಾರನನ್ನು ಕಂಡೊಡನೆ, 'ಇವರು ಅವರೇ ಏನು?' ಎಂದು ಕಕ್ಕಾವಿಕ್ಕಿಯಾಗಿ ನಿಂತ.

ಯಾವ ರಕ್ಷೆಯೂ ಇಲ್ಲದ ಅಸಹಾಯ ತಾನು ಎಂಬಂತೆ ಅಪರಂಪಾರನಿಗೆ ಒಂದು ಕ್ಷಣ ಭಾಸವಾಯಿತು. ವಿಶ್ವವ್ಯಾಪಾರವೆಲ್ಲ ಸ್ತಬ್ಧವಾಗಿದೆ, ತಾನೊಂದು ಶಿಲಾಮೂರ್ತಿ—ಎಂದು ಅವನಿಗೆ ಅನಿಸಿತು.

ಆದರೆ ಮರುಕ್ಷಣದಲ್ಲೆ, ಅರಸ ಅವನ ಪಾದಗಳನ್ನು ಮುಟ್ಟಿದ.

ಅಪರಂಪಾರ ಜಾಗೃತನಾಗಿ ಸಲಿಗೆಯ ಧ್ವನಿಯಲ್ಲಿ ಅಂದ :

"ಏಳು ಮಹಾರಾಜ."

ಆ ಸ್ವರ ಕೇಳಿ, ಅರಸನ ಮನಸಿನ ತುಮುಲ ಕೊನೆಗಂಡಿತು. ಆತ ಸಿದ್ಧಲಿಂಗನಿಗೂ ನಮಿಸಿ, ಎದ್ದು ನಿಂತು, ವಿನೀತನಾಗಿ ನುಡಿದ :

"ಸ್ವಾಮಿಗಳೇ, ಅಧಿಕಾರ ಅನಶ್ವರ ಅಂತ ನಾನು ಭಾವಿಸಿದ್ದ ಘಳಿಗೆಯಲ್ಲಿ ಹಿಂದೆ ಒಮ್ಮೆ ಬಂದಿದ್ದಿರಿ. ತಾವು ನನ್ನ ದಾಯಾದಿ ವೀರಪ್ಪನಿರಬಹುದು ಎಂಬ ಶಂಕೆಯೊಂದಿತ್ತು. ಸ್ವಲ್ಪ ಉದ್ಧಟನಾಗಿ ನಾನು ವರ್ತಿಸಿದೆ. ತಪ್ಪನ್ನು ಉಡಿಯಲ್ಲಿ ಹಾಕಿಕೊಂಡು ಮತ್ತೆ ಇಷ್ಟು ದೂರ ಬಂದಿದೀರಿ. ನಾನು ಭಾಗ್ಯಶಾಲಿ."

ಕವಿದು ಬರುತ್ತಿದ್ದ ಕತ್ತಲನ್ನು ಪ್ರಯತ್ನಪೂರ್ವಕವಾಗಿ ದೂರ ಸರಿಸುತ್ತ ಅಪರಂಪಾರನೆಂದ :

"ಹಳೆಯ ಮಾತು ಇನ್ಯಾತಕ್ಕೆ ಅರಸ? ಶಿವನು ಗುರುವಾಗಿ ಬಂದಾಗ ತನುವನ್ನು ನೀಡಬೇಕು ; ಶಿವನು ಲಿಂಗವಾಗಿ ಬಂದಾಗ ಮನವನ್ನು ನೀಡಬೇಕು ; ಶಿವನು ಜಂಗಮನಾಗಿ ಬಂದಾಗ ಧನವನ್ನು ನೀಡಬೇಕು. ಬಲ್ಲೆಯಾ ?"

"ಇಲ್ಲಿರುವುದೆಲ್ಲ ನಿಮಗರ್ಪಿತ, ಸ್ವಾಮಿಗಳೇ. ಅಪ್ಪಣೆಯಾಗಲಿ."

"ಆದರೆ ಈ ಜಂಗಮನಿಗೆ ಬೇಕಾಗಿರುವುದು ನಿನ್ನ ಧನವಲ್ಲ. ನಿನ್ನಿಂದ ಒಂದು ವಾಗ್ದಾನ."

"ಮಾತು ಕೊಡುತೇನೆ. ಕೊಟ್ಟುದಕ್ಕೆ ತಪ್ಪುವುದಿಲ್ಲ."

"ಪ್ರಜೆಗಳು ಬಂದು ಕರೆಯುವಾಗ ಮಡಕೇರಿಗೆ ಮರಳಿ ನೀನು ಅಧಿಪತಿಯಾಗ ಬೇಕು."

ಅಪರಂಪಾರ ನುಡಿದುದನ್ನು ಮೆಲುಕು ಹಾಕುತ್ತ ಅರಸನೆಂದ:

"ಕೊಡಗಿಗೆ ಎಂಥ ಗತಿ ಪ್ರಾಪ್ತವಾಗಿದೆ ಅಂಬೋದನ್ನು ತಾವು ಬಲ್ಲಿರಿ."

"ಸುಖವಳಿದು ಕಷ್ಟವಾಯ್ತೆಂದು ನೀನು ಅಳಲದಿರು. ಮೊದಲು ಸುಖಿಗಳು ಅತಿ ಕಷ್ಟಪಡಲಿಲ್ಲವೆ ಅರಸ ?"

"ನಿಜ...ದ್ರೋಹಿಗಳ ಛದಿಸಂಧಾನದಿಂದ ಹೀಗಾಯಿತು, ಸ್ವಾಮಿಗಳೆ."

"ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕೊಯಿ ದುಂಬ ಕ್ರೂರಕರ್ಮಿಗಳು ಅವರು. ಆ ಜನಕ್ಕೆ ಮಹಾದೇವ ಶಾಸ್ತಿ ಮಾಡುತಾನೆ."

ಗೌರಮ್ಮ ಒಳಬಾಗಿಲ ಬಳಿ ಕಾಣಿಸಿಕೊಂಡು ತಗ್ಗಿದ ಧ್ವನಿಯಲ್ಲಿ ಅಂದಳು:

"ಶಿವಪೂಜೆಗೆ ಅಣಿಮಾಡಲೆ ?"

ಚಿಕವೀರರಾಜನೆಂದ:

"ಹ್ಞ, ಹ್ಞ...ಸೋಮಯ್ಯನನ್ನೂ ಐಯಣ್ಣನನ್ನೂ ಕರೆಸಬೇಕು...ತಿಮ್ಮಣ್ಣಗೌಡನಿಗೂ ಹೇಳಿಕಳಿಸಬೇಕು. ಏ, ಯಾರಲ್ಲಿ ?"

ಅಪರಂಪಾರನೆಂದ:

"ಮಹಾರಾಜ, ನಾವಾಡಿದ್ದು ನಮ್ಮ ನಮ್ಮಲ್ಲೇ ಇರಬೇಕು."

"ಆಗಲಿ, ಆಗಲಿ."

...ಪೂಜೆಯಾಯಿತು. ಪ್ರಸಾದವಾಯಿತು. ಹಗಲು ಕಳೆದು ಇರುಳು ಬಹಳ ಹೊತ್ತಿನ ವರೆಗೆ ಮಾತುಕತೆ ನಡೆಯಿತು.

ಕೊನೆಯಲ್ಲಿ ಚಿಕವೀರರಾಜನೆಂದ:

"ನನ್ನನ್ನು ಬೇಸರ ಕವಿದಿತ್ತು. ಈ ಜೀವನದಲ್ಲಿ ಪುನಃ ಚೇತನ ತುಂಬಿದಿರಿ."

ಅಪರಂಪಾರ ಮುಗುಳುನಕ್ಕ.

"ಹರನೀವ ಕಾಲಕ್ಕೆ ಸಿರಿ ಬೆನ್ನಲ್ಲಿ ಬಕ್ಕು. ಹರಿದು ಹೆದ್ದೊರೆ ಕೆರೆಯ ತುಂಬಿದಂತಯ್ಯ. ನೆರೆಯದ ವಸ್ತು ನೆರೆವುದು ನೋಡಯ್ಯ. ಅರಸು, ಪರಿವಾರ, ಕೈವಾರವಯ್ಯ..."

"ಸಂಪತ್ತು ಸೌಭಾಗ್ಯಗಳ ಯೋಚನೆ ನಾನು ಮಾಡುತಾ ಇಲ್ಲ, ಸ್ವಾಮಿಗಳೆ. ವೀರನಂತೆ ಕಾದಿ ಹಾಲೇರಿ ವಂಶಕ್ಕೆ ತಟ್ಟಿದ ಕಳಂಕವನ್ನು ಹೋಗಲಾಡಿಸಬೇಕು ಅನ್ನೋದೊಂದೇ ನನ್ನ ಹಂಬಲ."

ಅರಸನನ್ನೊಮ್ಮೆ ದಿಟ್ಟಿಸಿ ನೋಡಿ ಅಪರಂಪಾರನೆಂದ:

"ಇಂಗ್ರೇಜಿಯವರೀಗ ಹೊಲಬು ತಪ್ಪಿದ ಮೃಗ. ಕೊಡಗಿನ ಕಾಡಿನಿಂದ ಅದಕ್ಕೆ ವಿಮೋಚನೆ ಇಲ್ಲ. ಅದು ಬಲೆಗೆ ಬೀಳುತದೆ. ನಿನ್ನ ಹಂಬಲ ಈಡೇರುತದೆ."

## ೪೬

ಅಪರಂಪಾರ ವೇಲೂರನ್ನು ಬಿಟ್ಟು ಹೊರಟ ಕೆಲ ದಿನಗಳಲ್ಲಿ ಮೈಸೂರನ್ನು ತಲಪಿದ. ಟಪಾಲಿನಲ್ಲಿ, ಕಾಸ್ಸಾಮೇಜರನನ್ನು ಯೋಚನೆಗೀಡುಮಾಡಿದ ಒಂದು ವರದಿಯಿತ್ತು.

ಅದು, ವೇಲೂರಿನ ಕಲೆಕ್ಟರ್ ಮದರಾಸಿನ ಗವರ್ನರನಿಗೆ ಕಳುಹಿಸಿದ ವರದಿಯ 'ತಾಜಾ ನಕಲು.'

"ಇದನ್ನು ಕುರಿತು ವಿಚಾರಿಸಿ ಬರೆ" ಎಂದು ಷರಾ ಬರೆದಿದ್ದ, ಮದರಾಸಿನ ಗವರ್ನರ್.

ವರದಿಯಲ್ಲಿ ಕಾಸ್ಸಾಮೇಜರನಿಗೆ ಸಂಬಂಧಿಸಿ ಇದ್ದ ಅಂಶವಿದು :

"ಇಬ್ಬರು ಫಕೀರರು—ಇವರನ್ನು ಜಂಗಮರೆಂತಲೂ ದಾಸರೆಂತಲೂ ಕರೆಯುತ್ತಾರೆ—ನಿನ್ನೆ ದಿವಸ ಇಲ್ಲಿಗೆ ಬಂದರೆಂದೂ ಭಿಕ್ಷುಕರಾದ್ದರಿಂದ ಕೋಟೆಯನ್ನು ಪ್ರವೇಶಿಸಲು ಅವರಿಗೆ ಪರವಾನಿಗಿ ಕೊಡಲಾಯಿತೆಂದೂ ಕೊಡಗಿನ ಮಾಜೀ ಅರಸ ಹಾಗೂ ಪ್ರಸ್ತುತ ನಮ್ಮ ಕೈದಿಯಾಗಿರುವ ಚಿಕವೀರರಾಜೇಂದ್ರನ ಜತೆ ಆ ಇಬ್ಬರು ಒಂದು ದಿನ ಇದ್ದರೆಂದೂ ತಿಳಿದುಬಂದಿದೆ. ಸಂಶಯ ಬಂದು ವಿಚಾರಿಸಲಾಯಿತು. ಒಬ್ಬ ಅಪರಂಪಾರಸ್ವಾಮಿಯೆಂದೂ ಇನ್ನೊಬ್ಬ ಅವನ ಶಿಷ್ಯನೆಂದೂ ಇಬ್ಬರೂ ಕೊಡಗಿನವರೆಂದೂ ತಿಳಿದುಬಂತು. ಇವರು ಲಯಕರ್ತನಾದ ಶಿವನ ಭಕ್ತರೆಂದೂ ಯಾವುದಾದರೂ ಮನೆ ಹೊಕ್ಕರೆ ಪೂಜೆಗೆ ನಿಂತುಹೋಗುವುದು ಪದ್ಧತಿಯೆಂದೂ ತಿಳಿಯಿತು. ಚಿಕವೀರರಾಜನ ಜತೆ ನಡೆದಿರಬಹುದಾದ ಮಾತುಕತೆಯ ಬಗ್ಗೆ ಏನೂ ಗೊತ್ತಾಗಲಿಲ್ಲ. ರಾಜನ ಪರಿವಾರದವರು 'ನಾವು ಯಾವ ಪಾಪವನ್ನೂ ಕಾಣದವರು, ಕೇಳದವರು, ಆಡದವರು' ಎಂಬಂತೆ ವರ್ತಿಸುತ್ತಾರೆ. ಸದ್ಯಕ್ಕೆ ಗೊತ್ತಾಗಿರುವುದು ಇಷ್ಟೇ ಆದರೂ, ಖಾವಂದರ ಗಮನಕ್ಕೆ ತರುವುದು ಉಚಿತವೆಂದು ಇಲ್ಲಿ ಬರೆಯಲಾಗಿದೆ."

ಕಾಸ್ಸಾಮೇಜರ್ ಮುಖ್ಯ ಕಾರಕೂನನನ್ನು ಕರೆದು ಆಜ್ಞಾಪಿಸಿದ :

"ಇದರದೊಂದು ತಾಜಾ ನಕಲನ್ನು ಮಡಕೇರಿಗೆ ರವಾನಿಸಬೇಕು. ಇದನ್ನು ಕುರಿತು ವಿಚಾರಿಸಿ ತಿಳಿಸುವಂತೆ—ಎಂದು ಷರಾ ಬರೆಯಬೇಕು."

ಮಡಕೇರಿಯಲ್ಲಿ ಫ್ರೇಸರನ ಬದಲು ಕ್ಯಾಪ್ಟನ್ ಲೀಹಾರ್ಡಿ ಕಮಿಷನರಾಗಿ ಅಧಿಕಾರ ಸ್ವೀಕರಿಸಿದ್ದ. ಕೊಡಗಿನಲ್ಲಿ ತಮಗೆ ನಿಷ್ಠರಾಗಿರುವ ಪ್ರಮುಖರ ಬಗೆಗೆ ಫ್ರೇಸರ್ ಸಾಕಷ್ಟು ತಿಳಿವಳಿಕೆ ಕೊಟ್ಟಿದ್ದನಾದರೂ ಲೀಹಾರ್ಡಿಗೆ ಹೆಜ್ಜೆ ಹೆಜ್ಜೆಗೂ ಅಳುಕು. ಚೆಪ್ಪುದೀರ ಪೊನ್ನಪ್ಪ ಮತ್ತು ಅಪ್ಪಾರಂಡ ಬೋಪಣ್ಣ ಲೀಹಾರ್ಡಿಯ ದಿವಾನರು. ಸಾತ್ವಿಕನಾದ ಲಕ್ಷ್ಮೀನಾರಾಯಣನನ್ನು ನಂಬಿಕೆಗೆ ಅರ್ಹನಲ್ಲವೆಂದು ಫ್ರೇಸರ್ ಆಗಲೇ ಮೂಲೆಗೆ ತಳ್ಳಿದ್ದ. ಲೀಹಾರ್ಡಿಗೆ ತನ್ನ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಭಡತಿಗೆ ಪಾತ್ರನಾಗಬೇಕೆಂಬ ಆಸೆ. ಆದರೆ ದೇಶೀಯರ ಮೋಸದ ಯಾವ ಕಂದಕದಲ್ಲಿ ಬಿದ್ದು ತಾನು ಹೆಳವನಾಗುವೆನೋ ಎಂಬ ದಿಗಿಲು.

'ಇದನ್ನು ಕುರಿತು ವಿಚಾರಿಸಿ ತಿಳಿಸು.'

—ಕಾಸ್ಸಾಮೇಜರನ ಆದೇಶ.

'ಯಾರಿವನು ಈ ಸ್ವಾಮಿ ?'

ಬೋಪಣ್ಣನೆಂದ :

"ಅಪರಂಪಾರ ಎಂದೆ ? ಆ ಹೆಸರು ಕೇಳಿದ್ದ ನೆನಪು. ಚಿಕವೀರರಾಜನ ದಾಯಾದಿ ವೇಷಧಾರಿ ಜಂಗಮನಾಗಿದಾನೆ ಅಂತ ಪುಕಾರು ಹುಟ್ಟಿತ್ತು. ಕಡೆಗೆ ಅಲ್ಲ ಅಂತಾಯ್ತು."

ಪೊನ್ನಪ್ಪನೆಂದ :

"ದಾಯಾದಿಯೊ, ದಾಯಾದಿಯ ಅಪ್ಪನೊ. ಹಿಡಿದುತಂದು ಗತಿಕಾಣಿಸಿದರಾಯ್ತು."

ಲೀಹಾರ್ಡಿಯೆಂದ :

"ಅವನು ಎಲ್ಲಿದಾನೇಂತ ನಮ್ಮ ಗೂಢಚಾರರು ಕಂಡುಹಿಡಿಯಲಿ."

* * *

...ಆ ವೇಳೆಗೆ ಅಪರಂಪಾರ ಕಾಜಗೋಡನ್ನು ತಲಪಿ ಅಪ್ಪಯ್ಯನ ಅತಿಥಿಯಾಗಿದ್ದ. ಅಪ್ಪಯ್ಯ ಆ ನಾಡಿನ ಪ್ರಮುಖ. ಆಂಗ್ಲರಿಗಿದಿರಾದ ಹೋರಾಟದಲ್ಲಿ ಭಾಗಿಯಾಗಲು ಹಾತೊರೆಯುತ್ತಿದ್ದ ಮನುಷ್ಯ.

ಅಲ್ಲಿ ಅಪರಂಪಾರ ಮೈಸೂರು ರಾಜ್ಯದ ಆಡಳಿತಗಾರ ಕಾಸ್ಸಾಮೇಜರನಿಗೆ ಕಳುಹ ಲೆಂದು ಸುದೀರ್ಘ ಪತ್ರವೊಂದನ್ನು ಸಿದ್ಧಗೊಳಿಸಿದ.

ಅದರಲ್ಲಿ ಮುಖ್ಯವಾಗಿದ್ದುದು, ದಕ್ಷಿಣ ಭಾರತದ ಮೂರು ರಾಜ್ಯಗಳ ಮೈಸೂರು, ಬಿದನೂರು, ಕೊಡಗುಗಳ—ಇತಿಹಾಸದ ಸಿಂಹಾವಲೋಕನ; ಪರದೇಶದಿಂದ ಬಂದು ಹಿಂದೂಸ್ಥಾನದ ಭೂಭಾಗಗಳನ್ನು ಪದಾಕ್ರಾಂತ ಮಾಡುವ ನೀತಿ ತಪ್ಪೆಂಬ ವಿನಮ್ರ ಸೂಚನೆ; ಈ ರಾಜ್ಯಗಳನ್ನು ನ್ಯಾಯವಾದ ಹಕ್ಕುದಾರರಿಗೆ ಮರಳಿ ಕೊಟ್ಟು, ಬಂದವರು ತಮ್ಮ ದೇಶಕ್ಕೆ ಹಿಂತೆರಳಿ, ಮಿತ್ರರಾಗಿ ಉಳಿಯಬೇಕೆಂಬ ಕರೆ; ಇಲ್ಲದೆ ಹೋದರೆ ಅನಾಹುತ ಸಂಭವಿಸುವುದೆಂಬ ಎಚ್ಚರಿಕೆ.

ಅಪರಂಪಾರ ಆ ಪತ್ರಕ್ಕೆ 'ಹಾಲೇರಿ ಸಂಸ್ಥಾನದ ರಾಜಗುರು' ಎಂದು ಸಹಿ ಹಾಕಿದ.

ಅಪ್ಪಯ್ಯನನ್ನು ಆತ ಕೇಳಿದ :

"ಯಾರ ವಶ ಕೊಟ್ಟು ಕಳಿಸೋಣ ?"

ಸಿದ್ಧಲಿಂಗನೆಂದ :

"ಸಂಜಯ ನಾನಾಗತೇನೆ, ಸ್ವಾಮಿಗಳೆ."

"ಅವರು ಹಿಡಿದು ಹಾಕಿದರೊ ?"

"ಅಷ್ಟೇ ತಾನೇ ? ನನಗೇನು ಹೆಂಡಿರೆ, ಮಕ್ಕಳೆ—ಅನ್ನಕ್ಕಿನ್ನೇನು ಗತಿ ಅಂತ ಅಳೋದಕ್ಕೆ ?"

"ಸರಿಯಪ್ಪ. ಮೊದಲು ಬಸಪ್ಪಾಜಿ ಅರಸರನ್ನು ಕಂಡು ವಿಷಯ ತಿಳಿಸಿ ಕಾಸ್ಸಾ ಮೇಜರನ ಭೇಟಿಗೆ ನೀವು ಹೋಗಬೇಕು."

"ಹ್ಞ. ಬೇಕಿದ್ದರೆ ಹೇಳಿ, ಮದರಾಸಿಗೂ ಹೋಗಿಬರತೇನೆ. ಅವರಾಚೆಯವನು ಕಲಕತ್ತೆಯಲ್ಲಿದಾನಂತಲ್ಲ, ಅಲ್ಲಿಗೂ ಹೋಗತೇನೆ. ಆಜ್ಞಾಪಿಸುವಿರಾದರೆ ಸಮುದ್ರೋಲ್ಲಂಘನವನ್ನೂ ಮಾಡತೇನೆ."

"ಚೇಳಿನ ಮಂತ್ರವನ್ನು ಈಗ ಪಠಿಸುತಿದೇವೆ. ಹಾವಿನ ಹುತ್ತಕ್ಕೆ ಮುಂದೆ ಕೈ ಹಾಕೋಣ."

## ೪೭

"ಸುಮಾರು ಒಂದು ವರುಷವಾಗತಾ ಬಂತು; ಹೋದವರ ಸುದ್ದಿ ಇಲ್ಲ—ಅಂತ ಸ್ವಲ್ಪ ವಿವಂಚನೆಯಾಗಿತ್ತು. ಅಂತೂ ಬಂದಿರಲ್ಲ. ದಯಮಾಡಿಸಿ, ದಯಮಾಡಿಸಿ" ಎಂದು ಬಸಪ್ಪಾಜಿ ಅರಸು ಸಿದ್ಧಲಿಂಗನ ಕೈಹಿಡಿದು ಒಳಕ್ಕೆ ಕರೆದೊಯ್ದ.

ಇಕ್ಕೇರಿ—ವೇಲೂರುಗಳಿಗೆ ಅಪರಂಪಾರ ಕೈಗೊಂಡ ಪ್ರವಾಸ, ಕಾಜಗೋಡಿನಲ್ಲಿ

ನೆಲೆನಿಂತು ಕೈಗೊಂಡಿರುವ ಸಂಘಟನಾಕಾರ್ಯ—ಈ ವಿವರಗಳನ್ನೆಲ್ಲ ಸಿದ್ಧಲಿಂಗನಿಂದ ಕೇಳಿ ತಿಳಿದು ಬಸಪ್ಪಾಜಿ ಸಂತುಷ್ಟನಾದ.

"ಸ್ವಾಮಿಗಳು ಮತ್ತೇನಪ್ಪಣೆ ಮಾಡಿದಾರೆ ?"

"ಅವರ ಪರವಾಗಿ ಕೌರವರ ಪಾಳೆಯಕ್ಕೆ ನಾನು ಹೋಗಿ ಬರಬೇಕು."

"ಅಂದರೆ ?"

"ಇಕಾ, ಕಾಸ್ಸಾಮೇಜರಿಗೆ ಸ್ವಾಮಿಗಳು ಬರೆದಿರುವ ಪತ್ರ."

ರೇಶಿಮೆಯ ಅರಿವೆಯಲ್ಲಿ ಸುರುಳಿಯಾಗಿದ್ದ ಆ ಕಾಗದವನ್ನು ಬಿಡಿಸಿ, ಕುತೂಹಲದಿಂದ ಬಸಪ್ಪಾಜಿ ಓದಿದ. ಓದಿ ಮುಗಿಯಿತು. ಆದರೆ ಹುಬ್ಬುಗಳು ರೂಪಿಸಿದ್ದ ಪ್ರಶ್ನಾರ್ಥಕ ಚಿಹ್ನೆಗಳು ಹಾಗೆಯೇ ಉಳಿದುವು.

"ಇದನ್ನು ಕೊಡಲೇಬೇಕು ಅಂದರೆ ಸ್ವಾಮಿಗಳು ? ಮುಂಚಿತವಾಗಿಯೇ ಚಟುವಟಿಕೆಯ ಸುಳಿವು ಕೊಟ್ಟಂತಾಗುತದಲ್ಲ ?"

"ಗೂಢಚಾರರು ಓಡಾಡುತಿರುವಾಗ ಸುಳಿವು ಹೇಗೂ ತಿಳೀತದೆ."

"ಅದೇನೋ ನಿಜ."

"ನಮ್ಮದೇನಿದ್ದರೂ ಧರ್ಮಾಚರಣೆ, ಇಂಗ್ರೇಜಿಯವರಿಗೆ ಹೀಗೆ ನಿರೂಪ ಕೊಟ್ಟಿದೇವೆ ಅಂದರೆ ಜನರು ಹುರುಪಾಗುತಾರೆ !"

ಬಸಪ್ಪಾಜಿಯ ಹುಬ್ಬುಗಳು ಸಡಿಲಿದುವು.

"ಸರಿ. ಆದರೆ ನಾವು ಇನ್ನೂ ಹೆಚ್ಚು ಹುಷಾರಾಗಿರಬೇಕು. ಈ ಪತ್ರ ಕೊಟ್ಟು ಏನೂ ಅಪಾಯವಿಲ್ಲದೆ ನೀವು ಹೊರಗೆ ಬಂದಿರಿ ಅಂತ ಇಟ್ಕೊಳ್ಳಿ. ರಾತ್ರೆ ಬೆಟ್ಟದ ಮೇಲೆ ಕೊಳದ ಬಳಿ ಭೇಟಿಯಾಗೋಣ."

"ನಾನು ಜಂಗಮನಾದರೂ ಇಷ್ಟು ಸೂಕ್ಷ್ಮ ತಿಳೀತದೆ ಬಸಪ್ಪಾಜಿ ಅರಸರೆ. ವಾಸ್ತವವಾಗಿ, ನಾನೇ ಹಾಗೆ ಸೂಚಿಸಬೇಕು ಅಂತ ಇದ್ದೆ."

"ಆಗಲಿ, ಅಯ್ಯನವರೆ. ವೈರಿ ಶಿಬಿರಕ್ಕೆ ಹೋಗಿ ರಾಜದೌತ್ಯ ನಿರ್ವಹಿಸಿ ಬನ್ನಿ..."

......................

ಆ ರಾಜದೌತ್ಯ ಅಪೂರ್ವವಾಗಿತ್ತು.

"ಶಿವ ಶಂಭೋ ಶಂಕರ ಮಹಾದೇವ !"

ಆಡಳಿತಗಾರ ಕಾಸ್ಸಾಮೇಜರನ ಕಚೇರಿಯ ಮಹಾದ್ವಾರದಲ್ಲೂ ಅದೇ ಘೋಷ ; ಒಳಗೆ ಆತನೆದುರಲ್ಲೂ ಅದೇ ಘೋಷ.

ರಾಜಕಾರ್ಯ ನಿಮಿತ್ತ ತನ್ನನ್ನು ಕಾಣಬೇಕು—ಎಂದ ಜಂಗಮ. ತನ್ನೆದುರು ಕುರ್ನಿಸು ಮಾಡಲಾಗದ ಉದ್ಧಟ. ಕಾಸ್ಸಾಮೇಜರನ ಕಣ್ಣು ಕೆಂಪಾಯಿತು.

ದುಭಾಷಿಗೆ ಆತ ಹೇಳಿದ :

"ಅದೇನಿದೆಯೋ ಬೇಗನೆ ಬಗುಳಿ ಹೋಗಲಿ."

ದೇಶೀಯನಾದ ದುಭಾಷಿ ಸಿದ್ಧಲಿಂಗನಿಗೆ ಅಂದ :

"ನಿವೇದಿಸುವಂಥಾದ್ದನ್ನು ಲಗೂ ಹೇಳಿ ಹೋಗಿರಿ, ಅಯ್ಯನವರೆ."

ಸಿದ್ಧಲಿಂಗ ತಾನು ತಂದ ಓಲೆಯ ಸುರುಳಿಯನ್ನು ಕಾಸ್ಸಾಮೇಜರನ ಮುಂದಿರಿಸಿದ.

"ಪತ್ರ ? ಯಾರಿಂದ ?" ಎಂದು ಕೇಳಿದ, ಆಂಗ್ಲ ಅಧಿಕಾರಿ.

ಅದನ್ನೆತ್ತಿ ನೋಡಿ ದುಭಾಷಿಯೆಂದ :

"ಅಪರಂಪಾರಸ್ವಾಮಿಯ ಸಹಿಯಿದೆ, ಖಾವಂದರೆ."

"ಯಾರು ? ತಡೆ ! ಅಭರಂಭಾರ ಅಂದೆಯಾ ? ಆ ಮನುಷ್ಯ ? ಏಯ್ ! ನೀನು ಸ್ವಾಮಿಯ ನಂಟನೊ ?"

''ವಿರಕ್ತರಲ್ಲಿ ನಂಟಸ್ತನವೆ ? ಹ್ಞಾ, ಒಂದು ರೀತಿಯಲ್ಲಿ ನಾವು ಆಪ್ತಬಂಧುಗಳು" ಎಂದ ಸಿದ್ಧಲಿಂಗ, ದುಭಾಷಿಯ ಹಾಗೂ ಕಾಸ್ಸಾಮೇಜರನ ಮುಖ ನೋಡುತ್ತ.

ಕಾಸ್ಸಾಮೇಜರನ ಕಣ್ಣುಗಳು ಚುರುಕುಗೊಂಡುವು.

ಆತನೆಂದ :

''ಪತ್ರ ಹಿಂದೂಸ್ಥಾನಿಯಲ್ಲಿದೆಯೋ ಕ್ಯಾನರೀಸಿನಲ್ಲಿದೆಯೊ ?"

''ಕ್ಯಾನರೀಸಿನಲ್ಲಿ'' ಎಂದ, ದುಭಾಷಿ.

''ಒಂದೊಂದೇ ವಾಕ್ಯ ಓದಿ ತರ್ಜುಮೆ ಮಾಡು."

ಸಿದ್ಧಲಿಂಗ ನಿಂತಿದ್ದ.

ಓಲೆಯ ಭಾಷಾಂತರಕ್ಕೆ ಪಠನಕ್ಕೆ ಕಿವಿಗೊಟ್ಟ.

ಕಾಸ್ಸಾಮೇಜರ್ ಮೇಜನ್ನು ಗುದ್ದಿ ಗದರಿದ :

''ಆ ಅಭರಂಭಾರ ಸ್ವಾಮಿ ಮೂರ್ಖನಿರಬೇಕು, ಶತಮೂರ್ಖನಿರಬೇಕು. ಅವನು ಏನೂಂತ ತಿಳಕೊಂಡಿದ್ದಾನೆ ?"

ಸಿದ್ಧಲಿಂಗನ ಕಡೆ ನೋಡಿ ಹಿಂದೂಸ್ಥಾನಿಯಲ್ಲಿ ಅವನೆಂದ :

''ಏಯ್ ! ನಿನಗೆ ಮೊಗಲಾಯಿ ಬರುತದೊ ?''

''ಪರದೇಶೀಯರಾದ ತಮಗೆ ಬರತದೆ. ನನಗೆ ಬರಲಾರದಾ ? ಅಷ್ಟೇ ಅಲ್ಲ. ತಿಳಕೊಳ್ಳಿ ಸಾಹೇಬರೇ. ನೀನು—ನೀವು—ತಾವು ವ್ಯತ್ಯಾಸವೆಲ್ಲ ನನಗೆ ಗೊತ್ತಾಗತದೆ. ಗೌರವದಿಂದ ಮಾತನಾಡಿದರೆ ಚೆನ್ನು.''

"ಮುಚ್ಚು ಬಾಯಿ ! ನಾಲಿಗೆ ಕೆನ್ನೆ ಒಳಗಡೆ ಇಟ್ಟು ಮಾತಾಡಬೇಡ.''

''ಒಳಗಡೆಯೂ ಇಡೋದಿಲ್ಲ. ಉದ್ದವೂ ಬೆಳೆಸೋದಿಲ್ಲ. ಎಷ್ಟು ಅಗತ್ಯವೋ ಅಷ್ಟೇ ಮಾತಾಡತೇನೆ.''

''ನಿನ್ನ ಸ್ವಾಮಿಯ ಹತ್ತರ ಎಷ್ಟು ಫೌಜದೆ ?''

"ಅಪರಂಪಾರ ಸ್ವಾಮಿಯವರು ಫೌಜುದಾರರಲ್ಲ ಸಾಹೇಬರೇ."

''ಮತ್ತೆ ? ಅನಾಹುತವಾದೀತು ಅಂತ ಎಚ್ಚರಿಕೆ ಕೊಡುತಾನಲ್ಲ ! ಅವನಿಗೆ ಮತಿಭ್ರಮಣೆಯಾಗಿದೆಯೊ ?"

"ತಿಳಕೊಳ್ಳಿ ! ಅವಾಚ್ಯ ಪದಗಳನ್ನಾಡಿದರೆ ನಾನು ಕೇಳುವವನಲ್ಲ !"

''ಇಷ್ಟು ಧೈರ್ಯ ! ಹುಂ. ನಿನ್ನನ್ನು ಕಟ್ಟಿಹಾಕಿ ಬಂದೀಖಾನೆಯಲ್ಲಿಡತೇವೆ. ಏನು ಮಾಡತೀಯಾ ?"

ದುಭಾಷಿಯ ಕಡೆ ನೋಡಿ ಸಿದ್ಧಲಿಂಗ ಕನ್ನಡದಲ್ಲಿ ಅಂದ :

"ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೆ ?"

ಕಾಸ್ಸಾಮೇಜರ್ ಗರ್ಜಿಸಿದ :

''ಏನೆಂದ ಅವನು ?"

ದುಭಾಷಿ ನಿವೇದಿಸಿದ :

"ನಿಮಗೆ ಜ್ವರ ಬಂದಿದೆ ; ಹಾಲು ಕೊಟ್ಟರೆ ಬೇಡ ಅನ್ನುತೀರಿ ಅಂತಾನೆ."

"ಹುಚ್ಚುಚ್ಚಾರ ! ನನಗೆಲ್ಲಿಯ ಜ್ವರ ? ಇಂಗ್ರೇಜಿ ಸರಕಾರದ ದೌಲತ್ತಿನ ಮುಂದೆ ಈ ಪಿಟಿಪಿಟಿ ?"

ಸಿದ್ಧಲಿಂಗನೆಂದ :

"ದೌಲತ್ತು ? ಅಯ್ಯಾ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿರಲಿ, ಅಯ್ಯಾ ನಿಮ್ಮ ಪರ ಸ್ಥಲದ ಘನ ನಿಮ್ಮಲ್ಲಿರಲಿ !"

"ಏನೆನ್ನುತಿದಾನೆ ಈತ ?"

ದುಭಾಷಿ ಅರಿಕೆ ಮಾಡಿದ :

"ಅದೊಂದು ಶಿವಶರಣರ ವಚನ, ಖಾವಂದರೇ. ತಾವು ಪರಸ್ಥಲದವರು ಎನ್ನುತ್ತಾನೆ."

ಸಿದ್ಧಲಿಂಗ ಕೇಳಿದ :

"ಸ್ವಾಮಿಗಳ ಪತ್ರಕ್ಕೆ ಉತ್ತರವಿಲ್ಲವೇನು ?"

"ಉತ್ತರ ನಮ್ಮ ಸೈನಿಕರು ಕೊಡುತಾರೆ" ಎಂದ ಕಾಸ್ಸಾಮೇಜರ್.

"ಹಾವಿನ ಬಾಯಕಪ್ಪೆ, ಹಸಿದು, ಹಾರುವ ನೊಣಕ್ಕೆ ಆಸೆ ಮಾಡುವಂತೆ ಶೂಲವ ನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೊ ? ಕೆಡೆ ಒಡಲ ನೆಚ್ಚಿ ಕಡು ಹುಸಿಯನೆ ಹುಸಿದು ಒಡಲ ಹೊರೆವವರ ಕೂಡಲ ಸಂಗಮದೇವಯ್ಯ ನರನೊಲ್ಲ ಕಾಣಿರಣ್ಣ."

ದುಭಾಷಿಯೆಂದ :

"ಇದೂ ಒಂದು ವಚನ, ಸಾಹೇಬರೇ. ತಮ್ಮನ್ನು ಅದು ಟೀಕಿಸತದೆ."

"ನಮ್ಮನ್ನು ಟೀಕಿಸುತದೆ ! ಹುಂ ! ಕಂಪನಿಯ ರಾಯಭಾರಿ ಕುಲಪಟ್ಟಿ ಕರುಣಾಕರ ಮೆನೊನನ್ನು ಕೊಡಗಿನ ಅರಸ ಚಿಕವೀರರಾಜೇಂದ್ರ ಬಂಧಿಸಿಟ್ಟಿದ್ದ. ಈಗ ನಿನ್ನನ್ನು ನಾವು ಬಂಧನದಲ್ಲಿಡುತೇವೆ."

"ನನಗೆ ಗೊತ್ತಿರುವ ಹಾಗೆ ಮೆನೊನ್ ಗೂಢಚರ್ಯೆ ಮಾಡಿದ. ನಾನಾದರೋ ಓಲೆ ಹೊತ್ತ ದೂತನಾಗಿ ಬಂದಿದೇನೆ."

"ಓಲೆಯಾ ? ಅಲ್ಲ ? ಇದು ಬಂಡಾಯ ಪ್ರದರ್ಶನ. ಯಾರಲ್ಲಿ ? ಈ ಫಕೀರನನ್ನು ಬಂಧಿಸಿ ಸೆರೆಯಲ್ಲಿಡಿ !"

"ಶಿವ, ಶಿವ, ಶಿವ !" ಎಂದ, ಸಿದ್ಧಲಿಂಗ. ಒಂದು ಕ್ಷಣ ಅವನ ಪಾದಗಳು ತಣ್ಣಗಾದುವು. ಆದರೂ ಅಧೀರನಾಗದೆ ಆತ ನಿಂತ.

ಸಶಸ್ತ್ರ ಕಾವಲುಗಾರರು ಒಳಬಂದು, ಸಿದ್ಧಲಿಂಗನ ಎಗಡೂ ರಟ್ಟೆಗಳನ್ನು ಹಿಡಿದು ಹಿಂದಕ್ಕೆ ಜಗ್ಗತೊಡಗಿದರು.

ಸಿದ್ಧಲಿಂಗ ಕೂಗಿ ನುಡಿದ :

"ದರ್ಪಿಷ್ಠನಾದ ಕುಂಪಣಿ ಚಾಕರ ! ಇದರ ಫಲ ನೀನು ಉಣ್ಣುತೀಯೆ ! ಜೋಕೆ !"

ಕಾಸ್ಸಾಮೇಜರ್ ಕರ್ಕಶವಾಗಿ ಅಂದ :

"ತೊಲಗಾಚೆ !"

ಹೊರಗೆ ಸೆರೆಮನೆಯ ಕಡೆಗೆ ನಡೆಯುತ್ತ, ಕೈಗಳಿಗೆ ತೊಡಿಸಿದ ಸಂಕೋಲೆಗಳ

ಝಣತ್ಕಾರದ ಹಿನ್ನೆಲೆಯಲ್ಲಿ, ಸಿದ್ಧಲಿಂಗ ತನಗೆ ತಾನೇ ಅಂದುಕೊಂಡ :

"ಅಂಜಬೇಡ, ಅಳುಕಬೇಡ. ಹೋದವರಾರು ? ಇದ್ದವರಾರು ? ಎಲೆ ಮರುಳೆ !"

...ಕಾಸ್ಸಾಮೇಜರ್ ದುಭಾಷಿಗೆ ನಿರ್ದೇಶಗಳನ್ನಿತ್ತ :

"ಆ ಸ್ವಾಮಿಯ ಪತ್ರ ಇಂಗ್ಲೀಷಿಗೆ ತರ್ಜುಮೆಯಾಗಲಿ. ಒಂದು ಪ್ರತಿಯನ್ನು ಮದರಾಸಿನ ಗವರ್ನರರಿಗೂ ಇನ್ನೊಂದನ್ನು ಮಡಕೇರಿಗೂ ಕಳಿಸಬೇಕು. ಕಾಜಗೋಡಿಗೆ ನಮ್ಮ ಗೂಢಚಾರರು ಹೋಗಿ ಅಲ್ಲೇನು ನಡೀತದೆ ಅಂತ ವರದಿ ತರಲಿ."

...ಬಸಪ್ಪಾಜಿ ಅರಸು ಬೆಟ್ಟವನ್ನೇರಲಿಲ್ಲ. ಒಬ್ಬ ಅಯ್ಯನನ್ನು ಸೆರೆಮನೆಗೆ ಸೇರಿಸಿದ ರೆಂಬ ವಾರ್ತೆ ಸಂಜೆಯಾಗುವ ಮೊದಲೇ ಆತನಿಗೆ ತಲಪಿತ್ತು.

ಆ ಸುದ್ದಿಯನ್ನು ಕಾಜಗೋಡಿಗೆ ಮುಟ್ಟಿಸುವುದಕ್ಕೋಸ್ಕರ ಒಬ್ಬ ದೂತನನ್ನು ಕಳುಹಬೇಕೆಂದು ಆತ ನಿರ್ಧರಿಸಿದ.

## ೪೮

ಮೈಸೂರಿನಿಂದ ಬಂದ ಸುದ್ದಿ ಅನಿರೀಕ್ಷಿತವಾಗಿರಲಿಲ್ಲ. ಆದರೂ, ಸಿದ್ಧಲಿಂಗ ನಿಜ ವಾಗಿಯೂ ಬಂಧಿತನೆಂದು, ಇನ್ನು ಬಹಳ ಕಾಲ ಆತನ ಒಡನಾಟವಿರದೆಂದು, ಅಪರಂಪಾರನಿಗೆ ತುಸು ಬೇಸರವಾಯಿತು. ಹೊರಗೆ ಅದನ್ನು ತೋರಗೊಡದೆ, ಅಪ್ಪಯ್ಯ ಮತ್ತು ಇತರ ಹಿಂಬಾಲಕರೆದುರು ಅಪರಂಪಾರ ನುಡಿದ :

"ಪೀಠಿಕಾ ಪ್ರಕರಣ ಇಲ್ಲಿಗೆ ಮುಗಿದಂತಾಯಿತು. ಇನ್ನು ಮೊದಲ ಪರ್ವ."

ಆಂಗ್ಲರ ಆಡಳಿತ ಕೊಡಗಿನಲ್ಲಿ ಕೇಂದ್ರೀಕೃತವಾಗಿದ್ದುದು ಮಡಕೇರಿಯಲ್ಲಿ. ಅವರ ದೊಂದು ರೆಜಿಮೆಂಟು ಅಲ್ಲಿ ಸ್ಥಿರವಾಗಿ ತಳವೂರಿತ್ತು. ಆಕ್ರಮಣಕಾಲದಲ್ಲಿ ಬಂದಿದ್ದ ಪಡೆಗಳು ಹಿಂದಕ್ಕೆ ತೆರಳಿದ್ದುವು, ಹಿಂದೂಸ್ಥಾನದ ಇತರ ಅಳಿದುಳಿದ ಸ್ವಾತಂತ್ರ್ಯ ದುರ್ಗ ಗಳಿಗೆ ಲಗ್ಗೆ ಇಡುವುದಕ್ಕೋಸ್ಕರ. ಪೊನ್ನಪ್ಪ ಬೋಪಣ್ಣರ ಮೂಲಕ, ಅವರಿಗೆ ನಿಷ್ಠರಾದ ನಾಡುಗಳ ತಕ್ಕರನ್ನೂ ಕಾರ್ಯಕಾರರನ್ನೂ ಹಾದು, ಹೋಬಳಿ ಗ್ರಾಮಗಳಿಗೆ ಪರಕೀಯ ಅಧಿಕಾರದ ಜೇಡಬಲೆ ಹರಡಿತ್ತು. ಆದರೆ ಅವು ಅಗೋಚರ ತಂತುಗಳು. ಅಂಟಿಕೊಂಡಿ ದ್ದುದು ನೆಲಕ್ಕೆ. ಆಳುವವರಿಗೆ ಬೇಕಾಗಿದ್ದುದು ಆ ಫಲವತ್ಪ್ರದೇಶದ ಉತ್ಪನ್ನದ ಸಿಂಹ ಭಾಗ. ಸಾಮಾಜಿಕ ಮತ್ತಿತರ ಕಟ್ಟುಕಟ್ಟಳೆಗಳನ್ನು ಪಾಲಿಸುತ್ತೇವೆ ಎಂದಿದ್ದರಲ್ಲ ? ಅದು ಪೊಳ್ಳು ಭರವಸೆ ಎಂಬುದು ಸ್ವಲ್ಪ ಸಮಯದಲ್ಲೇ ಪ್ರಜೆಗಳಿಗೆ ಮನದಟ್ಟಾಯಿತು. ಇನ್ನು ಬಳ್ಳಗಳಲ್ಲಿ ಭತ್ತ ಅಕ್ಕಿಗಳನ್ನು ಅಳೆದುಕೊಟ್ಟರಾಗದು ; ಕಂದಾಯ ಹಣದ ರೂಪದಲ್ಲಿ ಸಂದಾಯವಾಗಬೇಕು ಎಂದರು ಆಂಗ್ಲರು. ಆ ಹೊಸ ವ್ಯವಸ್ಥೆಗೆ ಒಪ್ಪಿದರೆ ರೈತ ಜೀವಚ್ಛವವಾಗಬೇಕು. ಉತ್ಪನ್ನವಾದ ಕಾಳನ್ನೆಲ್ಲ ವರ್ತಕರಿಗೆ ಮಾರಿದರೂ ಕಂದಾಯ ತೆರಲು ಬೇಕಾದ ಹಣ ಹುಟ್ಟುತ್ತಿರಲಿಲ್ಲ. ಜನರು ಹಿಂದಿನಿಂದ ನಡೆದು ಬಂದಿದ್ದ ಭೂವ್ಯವಸ್ಥೆಯನ್ನು—'ಲಿಂಗರಾಜನ ಕೋಲು' 'ಲಿಂಗರಾಜನ ಶಿಸ್ತು'ಗಳನ್ನು—ಸ್ಮರಿಸಿ ಕೊಂಡು, ಇಂಥ ದುರ್ಗತಿಯೊದಗಿತಲ್ಲ ಎಂದು ಗೋಳಾಡಿದರು.

ಕೊಡಗಿನಲ್ಲಿ, ಕೊಡಗಿನ ಭಾಗವಾದ ಘಟ್ಟದ ಕೆಳಗಿನ ನಾಲ್ಕು ಮಾಗಣೆಗಳಲ್ಲಿ, ಅಶಾಂತಿ ಹೊಗೆಯಾಡಿತು.

ಆಗ ಕೇಳಿಸಿತು ಅಪರಂಪಾರನ ವಾಣಿ :

"ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ, ಅದರಲ್ಲಿ ಆಲಿಕಲ್ಲ ಹಸೆಯ ಹಾಸಿದರೇನು ಬಂತು ? ಇದ್ದ ಸುಖ ನಷ್ಟವಾಯ್ತೆಂದು ಅತ್ತರೇನು ಬಂತು ? ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ ? ಪಡೆವೆ ನೀನೆಂದಿಗೆ ವರ ಮುಕ್ತಿ ಸುಖವನು ? ಕೆಡುವ ಕಾಯದ ಮೋಹವನು ಮಾಣು ಮನುಜ !"

ಜನತೆ ಕಿವಿಗೊಟ್ಟು ಆಲಿಸಿತು.

ಅಪರಂಪಾರನೆಂದ :

"ಕರಿಯಂಜುವುದು ಅಂಕುಶಕ್ಕಯ್ಯ. ಗಿರಿಯಂಜುವುದು ಕುಲಿಶಕ್ಕಯ್ಯ. ತಮಂಧ ವಂಜುವುದು ಜ್ಯೋತಿಗಯ್ಯ. ಕಾನನವಂಜುವುದು ಬೇಗೆಗಯ್ಯ. ಪಂಚಮಹಾಪಾತಕ ವಂಜುವುದು ಕೂಡಲ ಸಂಗಮನ ನಾಮಕ್ಕಯ್ಯ. ಪರಕೀಯ ಮರ್ಕಟನಂಜುವುದು ಕಾವೇರಿ ಮಕ್ಕಳ ಠೇಂಕಾರ ಹೂಂಕಾರಕ್ಕಯ್ಯ."

ನಿಜವೆಂದು ಪ್ರಜೆಗಳು ತಲೆದೂಗಿದರು. ಕೊಡಗಿನ ವಿವಿಧ ನಾಡುಗಳಿಗೆ ಪ್ರತಿಭಟನೆಯ ಸಂದೇಶ ಮುಟ್ಟಿಸಲೆಂದು ಅಪರಂಪಾರ ಯಾತ್ರೆ ಕೈಗೊಂಡ.

ಕೊಡ್ಲಿಪೇಟೆ ; ಅಲ್ಲಿಂದ ಸೋಮವಾರಪೇಟೆ...

ಅಪರಂಪಾರನೂ ಅವನ ಸಂಗಡಿಗರೂ ಹೋದಲ್ಲೆಲ್ಲ ಅಭೂತಪೂರ್ವ ಸ್ವಾಗತ ದೊರೆಯಿತು. ಸ್ವಾಮಿ ಅಪರಂಪಾರ ಕೊಡಗಿನ ವಿಮೋಚನೆಗೆಂದೇ ಅವತರಿಸಿರುವ ಮಹಾ ಮಹಿಮ ಎಂದು ಜನ ಹೊಗಳಿದರು.

ಅವರಿಗೆ ಅಪರಂಪಾರನೆಂದ :

"ನಾನು ಘನ ತಾನು ಘನವೆಂಬ ಹಿರಿಯರುಂಟೆ ? ಜಗದೊಳಗೆ ಹಿರಿಯರ ಹಿರಿತನದಿಂದೇನಾಯ್ತು ? ಹಿರಿದು ಕಿರಿದೆಂಬ ಶಬ್ದವಡಗಿದರೆ ಆತನೆ ಶರಣ, ಗುಹೇಶ್ವರಾ."

ವಿವರಿಸುತ್ತ ಆತ ನುಡಿದ :

"ಸಮುದ್ರ ಘನವೆಂಬೆನೆ ? ಧರೆಯ ಮೇಲಡಗಿತ್ತು. ಧರೆ ಘನವೆಂಬೆನೆ ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು. ನಾಗೇಂದ್ರ ಘನವೆಂಬೆನೆ ? ಪಾರ್ವತಿಯ ಕಿರುಕುಣಿಯ ಮುದ್ರಿಕೆಯಾಯಿತ್ತು. ಅಂಥ ಪಾರ್ವತಿ ಘನವೆಂಬೆನೆ ? ಪರಮೇಶ್ವರನ ಅರ್ಧಾಂಗಿಯಾದಳು. ಹಾಗಾದರೆ ಯಾವುದಪ್ಪ ಘನ ? ಹಿರಿತನದ ಮಾತು ಬೇಡಿ, ಮರುಳರಿರಾ ! ಈ ಘಳಿಗೆಯಲ್ಲಿ ನಾವೊಂದು, ನಾಡೊಂದು. ಗುರಿ ಒಂದೇ ! ಬಂದವರನ್ನು ಹೊರಕ್ಕಟ್ಟುವುದು."

ಜನರೆಂದರು :

"ಅಪ್ಪಣೆಯಾದರೆ ಈಗಲೇ ಈ ಕ್ಷಣವೇ ನಿಮ್ಮ ಜತೆ ಹೊರಡುತೇವೆ."

ಅಪರಂಪಾರನೆಂದ :

"ಮನೆಮನೆಯ ಪಣತೆಗೆ ತೈಲ ಸುರಿಯುತಿದೇವೆ. ಬತ್ತಿ ನೆನೆಯಲಿ. ಸೂಡರು ಮುಟ್ಟಿಸುವ ಹೊತ್ತು ಬಂದಾಗ ಕೂಗಿ ಹೇಳುತೇವೆ. ಗಿರಿಗೆ ಗಿರಿ, ಕಾನನಕ್ಕೆ ಕಾನನ, ಮಾರ್ದನಿ ಕೊಡತವೆ. ಆಗ ಏಕಕಾಲದಲ್ಲಿ ಸಹಸ್ರ ಸಹಸ್ರ ಜ್ಯೋತಿಗಳು ಕೊಡಗನ್ನು ಬೆಳಗುತವೆ."

...ಹಾರಂಗಿಯಲ್ಲಿ ದಳವಾಯಿ ವೆಂಕಟಪ್ಪ, ತಾನೂ ತನ್ನ ಕೈ ಕೆಳಗಿನ ಚಾವಡಿಕಾರರೂ ಸ್ವಾಮಿಗಳನ್ನು ಸೇರುವುದಾಗಿ ಘೋಷಿಸಿದ.

ಅಪರಂಪಾರ ನುಡಿದ :

ನಮ್ಮವರೆಲ್ಲ ಅಲ್ಲಲ್ಲೇ ತಂಗಿರಲಿ. ಹಾಲೇರಿ—ಹೊಸಳ್ಳಿ—ಮಡಕೇರಿ ಕಡೆ ನಾವೊಮ್ಮೆ ಹೋಗಿಬರಬೇಕು. ಒಂಟಿಯಾಗಿಯೇ ಹೋಗುವುದು ಮೇಲು."

ವೆಂಕಟಪ್ಪ ವಿಸ್ಮಿತನಾದ.

''ಮಡಕೇರಿಗೂ ಹೋಗಬೇಕೆನ್ನುತೀರಾ ? ಸಿಂಹ ಅಲ್ಲೇ ಅದೆಯಲ್ಲ !''

''ಅದರ ಕೂಡೆ ಕುಸ್ತಿಗೆ ಹೋಗತೇವೆ ಅಂದುಕೊಂಡಿರಾ ? ನಾವು ಗುಪ್ತವಾಗಿರತೇವೆ.''

ಅಪ್ಪಯ್ಯನೆಂದ :

''ಅಂಗರಕ್ಷಕರಾಗಿ ಇಬ್ಬರು ಭಟರು ಜತೆಗಿರಲಿ. ಸ್ವಾಮಿಯವರು ಒಪ್ಪುವುದಾದರೆ ಅವರು ಕಾವಿಯುಟ್ಟು ವೇಷ ಮರೆಸಿಕೊಳ್ಳುತಾರೆ.''

''ನಮ್ಮ ಅಭ್ಯಂತರವಿಲ್ಲ.''

...ಹಾಲೇರಿ ನಾಡಿನಲ್ಲಿ ಪ್ರಮುಖರೊಂದಾಗಿ, "ಅರಮನೆಯ ಅನ್ನ ತಿಂದಿದೇವೆ. ಕೃತಘ್ನರಾದೇವಾ ? ಯಾವಾಗ ಬೇಕೋ ಆಗ ಬರುತೇವೆ. ತಯಾರಾಗಿರುತೇವೆ" ಎಂದು ವಚನವಿತ್ತರು.

...ಅಪರಂಪಾರನನ್ನು ಇದಿರ್ಗೊಂಡ ಸಂಜೆ, ಹೊಸಳ್ಳಿಯ ಮಲ್ಲಪ್ಪಗೌಡ ಪರಮ ಸುಖಿ. ಅಶ್ರುಧಾರೆ ಬತ್ತದ ತೊರೆಯಾಯಿತು. ಅಕ್ಕವ್ವನೂ ಆನಂದಬಾಷ್ಪ ಸುರಿಸುತ್ತ ಓಡಾಡಿದಳು.

ಅವಳು ಬಾರಿಬಾರಿಗೂ ಅಂದಳು :

''ಬಂದಿರಾ ದೇವರೇ ? ಬಂದಿರಾ ನಮ್ಮಪ್ಪ ?''

ನೋಡಿದವರು ತಲೆಬಾಗುವಂತೆ ಮಾಡುವ ಈ ಹಿರಿಯ ವ್ಯಕ್ತಿಯೆಲ್ಲಿ ? ಗಂಜಿ ನೀರು ಕುಡಿಸಿ ತಾನೂ ಬದುಕಿಸಿದ ಆ ಬಡಜೀವವೆಲ್ಲಿ ? 'ದೊರೆ ಮಗನಿಗೆ ಶಿವಮರಳು' ಎನಿಸಿತ್ತು ಆಗ. ಈಗಲೊ ? ಲೋಕವನ್ನೆ ಮರುಳುಗೊಳಿಸುವ ಮಾಂತ್ರಿಕ ಮಹಾನುಭಾವ ಆತ.

ಮಲ್ಲಪ್ಪಗೌಡನಿಗೆ, ದೊಡ್ಡ ಔತಣವೇರ್ಪಡಿಸಬೇಕೆಂಬ ಆಸೆ. ಆದರೆ, ಅದು ಈಗ ಸಲ್ಲದೆಂದು ಆತ ಬಲ್ಲ. ಆಂಗ್ಲರ ಅಭಿಯೋಗಕ್ಕೆ ಮುನ್ನ ಸಿದ್ಧಲಿಂಗ ಅಯ್ಯ ಬಂದಿದ್ದಾಗಲೇ ಮಲ್ಲಪ್ಪಗೌಡನಿಗೆ ಮನದಟ್ಟಾಗಿತ್ತು—ಅಪರಂಪಾರಸ್ವಾಮಿ ತುಳಿಯುತ್ತಿರುವುದು ಕಂಟಕ ತುಂಬಿದ ದಾರಿಯನ್ನು ಎಂಬುದು.

ಅಕ್ಕವ್ವನನ್ನು ಅಪರಂಪಾರ ಕೇಳಿದ :

''ಹಡೆದವ್ವ, ಭಿಕ್ಷೆ ಕೇಳೋಕೆ ಬಂದಿದೇನೆ.''

ಆಕೆ ಮುಗ್ಧೆ.

''ಎಂಥ ಮಾತು ಸೋಮಿಯೋರೆ ! ಇಲ್ಲಿ ಇರುವುದೆಲ್ಲಾ ನಿಮ್ಮದೇ ಅಲ್ಲವಾ ?''

''ಮಲ್ಲಪ್ಪನನ್ನು ನನಗೆ ಕೊಡು. ಒಂದೆರಡು ವರ್ಷದ ಮಟ್ಟಿಗೆ. ಆಮೇಲೆ ತಂದು ಒಪ್ಪಿಸುತೇನೆ."

ಮುಗ್ಧೆಯಾಗ ದಿಟ್ಟೆ.

"ಸಂತೋಸವಾಗಿ ಕಳಿಸಿಕೊಡತೇನೆ, ಸೋಮಿಯೋರೆ. ಮಹಾದೇವ ನನ್ನ ಮಾಂಗಲ್ಯ ಕಾಯುತಾನೆ."

...ಇರುಳಿನ ರಕ್ಷೆಯಲ್ಲಿ ಅವರು ಮಡಕೇರಿಯನ್ನು ತಲಪಿದರು. ಓಂಕಾರೇಶ್ವರ

ದೇವಾಲಯದ ಪುಷ್ಕರಿಣಿಯ ದಂಡೆಯ ಮೇಲೆ ಅಪರಂಪಾರ ಧ್ಯಾನಮಗ್ನನಾದ.

ಮಲ್ಲಪ್ಪ ಶಂಕರಪ್ಪನನ್ನು ಕರೆದುಕೊಂಡು ಬಂದ.

ಅಪರಂಪಾರ ಧ್ಯಾನ ಮುಗಿಸಿ ಎಚ್ಚೆತ್ತಾಗ, ಆತನ ಅಡಿಗಳಿಗೆ ಎರಗಿದ ಶಂಕರಪ್ಪನನ್ನು ಕುರಿತು ಅವನೆಂದ :

"ಬಾ ಬಂಧುವೆ, ಇಷ್ಟು ಹೊತ್ತು ನಿನಗಾಗಿ ಕಾದಿದ್ದೆವು. ಏಳು, ಏಳು."

ಗದ್ಗದಿತನಾಗಿ ಶಂಕರಪ್ಪ ನುಡಿದ :

"ಅನ್ನವಲ್ಲದ ಅನ್ನ ತಿಂದು ದಿನ ಕಳೆಯುತಾ ಇದ್ದೆ. ಕಡೆಗೆ ಬಂದಿರಿ. ನನ್ನ ಜನ್ಮ ಸಾರ್ಥಕ ಆಯಿತು. ಇನ್ನು ನಿಮ್ಮ ಪಾದ ಬಿಟ್ಟಿರಲಾರೆ."

ಶಂಕರಪ್ಪನ ಭುಜಗಳನ್ನು ಮೃದುವಾಗಿ ಮುಟ್ಟಿ, ಅವನನ್ನೆತ್ತಿ, ಅಪರಂಪಾರನೆಂದ :

"ಮಡಕೇರಿಯ ಸ್ಥಿತಿಗತಿಗಳೇನು ಶಂಕರಪ್ಪ ? ಹೇಳು ಕೇಳುತೇವೆ."

## ೪೯

"ಜ್ಯೆಯ್ಯ ಕೊಡಿಚಿರ ಬೋಜ ಪರೆವೆ
ಬೋಜ ಪರಂದ ಫಲ ವೆಚ್ಚಕುಂಡೊ ?
ಜ್ಯೆಯ್ಯ ಕೊಡಿಚಿರ ಕಾಬೆರ ನೋಟೊ
ಇಂಜಿಡೊ ಮಂಜಡೊ ಬೇರಿಂಜ ಪೋಲೆ
ಜ್ಯೆಯ ಕೊಡಿಚಿರ ಕಾಬೆರ ಬೋಜ
ಕಾಬೆರ ಪತ್ತಾಂಗ್ ವೋದಿರ ಬೋಂಡು"

—ಕೊಡವನೊಬ್ಬ ಇಂಪಾಗಿ ಹಾಡುತ್ತಿದ್ದ. ನೆರೆದಿದ್ದ ಜನರಲ್ಲಿ ಹಲವರು ಆಲಿಸುತ್ತಿದ್ದರು. ಉಳಿದವರು ಅಲ್ಲಲ್ಲಿ, ಹಾಡಿಗೆ ಭಂಗ ಬರದಿರಲೆಂದು ಧ್ವನಿ ತಗ್ಗಿಸಿ, ತಮ್ಮ ತಮ್ಮೊಳಗೆ ಮಾತನಾಡುತ್ತಿದ್ದರು.

ಅದು, ಕೆಂಚಮನೆ ಮಂದಯ್ಯನ ಗೃಹ. ಮುಂಭಾಗದ ಹಜಾರ. 'ತೂಕುಂಬೊಳಿಚ'ದ ಬೆಳಕು ಹಜಾರದಲ್ಲಿ ಪಸರಿಸಿತ್ತು. ನೆರೆದವರಲ್ಲಿ ಏಳು ಸಾವಿರ ಸೀಮೆ, ಯಾದವ ನಾಡು, ಹಾಲೇರಿ ನಾಡು, ತಲಕಾವೇರಿ ನಾಡು, ನಾಲ್ಕು ನಾಡು ಮತ್ತಿತರ ಪ್ರದೇಶಗಳ ಪ್ರಮುಖರಿದ್ದರು, ಚಾವಡಿಕಾರರಿದ್ದರು.

ಅವರೆಲ್ಲ ಇದಿರು ನೋಡುತ್ತಿದ್ದುದು ಅಪರಂಪಾರಸ್ವಾಮಿಯ ಬರುವಿಕೆಯನ್ನು.

ಹಾವುಗೆಗಳ ಸಪ್ಪಳವಾಯಿತು. ಮನೆಯ ಹೊರಮೈಯ ಒಂದು ಕೊಠಡಿಯಲ್ಲಿ ಬಿಡಾರ ಮಾಡಿದ್ದ ಅಪರಂಪಾರಸ್ವಾಮಿ, ಶಿವಪೂಜೆಯನ್ನು ಮುಗಿಸಿ, ಮಂದಯ್ಯ—ಶಂಕರಪ್ಪನೊಡನೆ ಹಜಾರಕ್ಕೆ ಆಗಮಿಸಿದ. ಎಲ್ಲರೂ ಎದ್ದು ನಿಂತರು. "ಶರಣು" "ಶರಣು" ಎಂದರು. ಅಪರಂಪಾರ ಅವರ ವಂದನೆಗಳನ್ನು ಸ್ವೀಕರಿಸಿದ.

ಮಂದಯ್ಯನೆಂದ :

"ಹೀಗೆ ದಯಮಾಡಿಸಬೇಕು."

ಅಪರಂಪಾರ ಅವನನ್ನು ಹಿಂಬಾಲಿಸಿ, ಹಜಾರದ ಪಶ್ಚಿಮ ಗೋಡೆಯ ಬಳಿ ಪೂರ್ವ ದಿಕ್ಕಿಗೆ ಮುಖಮಾಡಿ, ಪೀಠದ ಮೇಲೆ ಆಸೀನನಾದ. ಅವನೆದುರು 'ನಡುಬಾಬಾಡೆಯ'

ಜ್ಯೋತಿಯೊಂದನ್ನು ತಂದಿರಿಸಿದರು. ನೆರೆದವರೆಲ್ಲ ಸ್ವಾಮಿಗೂ ಜ್ಯೋತಿಗೂ ಇದಿರಾಗಿ ಕುಳಿತರು.

ಇದು, ದೀರ್ಘ ಸಿದ್ಧತೆಯ ಬಳಿಕ ಏರ್ಪಡಿಸಲಾಗಿದ್ದ ಸಭೆ. ಮಡಕೇರಿಯಿಂದ ಹಿಂತಿರುಗಿದ ಅಪರಂಪಾರ, ಅಂಥದೊಂದು ಸಭೆ ಅಗತ್ಯವೆಂದು ಮನಗಂಡು, ಹಾಲೇರಿ ರಾಜವಂಶಕ್ಕೆ ನಿಷ್ಠರಾಗಿದ್ದ ಹಲವರಿಗೆ ಕರೆ ಕಳುಹಿದ. ಬಿತ್ತಿದ ಬೀಜಗಳು ಮೊಳಕೆಯೊಡೆದಿದ್ದುವು. ಈಗ ಸಸಿಗಳನ್ನು ಪಾತಿಯಿಂದ ಎತ್ತಿ, ಉತ್ತ ಹೊಲಗಳಲ್ಲಿ ಕ್ರಮಬದ್ಧವಾಗಿ ನೆಡುವ ಕಾಲ ಒದಗಿತ್ತು.

ಮಂದಯ್ಯನೆಂದ :

"ಸ್ವಾಮಿಗಳು ಪ್ರವಚನ ಶುರುಮಾಡಬಹುದು."

ಸಾಸಿವೆ ಬಿದ್ದರೂ ಸಪ್ಪಳ ಕೇಳಿಸುವಂತಹ ನೀರವತೆ ಹಜಾರದಲ್ಲಿ ನೆಲೆಸಿತು.

ಅಪರಂಪಾರ ಆರಂಭಿಸಿದ :

"ಕೊಡಗಿನ ಹಲವು ಹದಿನೆಂಟು ನಾಡುಗಳ ಪ್ರಮುಖರೇ, ರಾಜನಿಷ್ಠರಾದ ವೀರಾಗ್ರಣಿಗಳೇ, ಇದು ಪ್ರವಚನವಲ್ಲ—ಕಥೆ, ನಮ್ಮ ಹುಟ್ಟುನಾಡಿನ ಏಳು ಬೀಳುಗಳ ಕರುಣ ಕಥೆ..."

* * *

ಬದುಕಿನ ಜಂಜಡವನ್ನು ತೊರೆದು ದೂರ ಹೋಗಲೆಳಸಿ ತಾನು ಹಿಂದೆಯೊಮ್ಮೆ ಶಿವಾಚಾರ್ಯ ಸ್ವಾಮಿಗಳ ಸನ್ನಿಧಿಗೆ ಹೋಗಿದ್ದನಲ್ಲ ? ಆ ರಾತ್ರೆ ಅವರಾಡಿದ ಮಾತುಗಳು ಅಪರಂಪಾರನ ನೆನಪಿಗೆ ಬಂದುವು.

ಆ ಪದಗಳನ್ನೇ ಈಗ ಅಪರಂಪಾರ ಪುನರುಚ್ಚರಿಸಿದ.

[ಮಲ್ಲಪ್ಪಗೌಡನ ನೆನಪೂ ಮುಸುಕು ಸರಿಸಿ ಹೊರಗಿಣುಕಿತು. ನಂಜರಾಜಪಟ್ಟಣದಲ್ಲಿ ಅವನಿಗಾಗಿದ್ದ ಅನುಭವದ ಪುನರಾವರ್ತನೆಯಾಯಿತು ಈಗಿನದು.]

ಜಂಗಮನೆಂದು ಬಂದವನನ್ನು ಕೊಡವರು ತಮ್ಮ ಅರಸನಾಗಿ ಸ್ವೀಕರಿಸಿದ ಬಗೆ ; ಆ ವರೆಗೆ ಹಲವು ಪಾಳೆಯಗಾರರ ಕೆಳಗೆ ಹರಿದು ಹಂಚಿಹೋಗಿದ್ದ ಕೊಡಗನ್ನು ಆತ ಒಗ್ಗೂಡಿಸಿದ್ದು ; ಸಿರಿಬಾಯಿ ದೊಡ್ಡವೀರಪ್ಪನ ಕಾಲದಲ್ಲಿ ಕೊಡಗು ಉಚ್ಛ್ರಾಯಸ್ಥಿತಿಗೇರಿದ್ದು...

* * *

"ಸದ್ಭಕ್ತಿ ಸದಾಚಾರವಿಲ್ಲದ ಗುರುತ್ವ ಉಂಟೆ ? ಸದ್ಭಕ್ತಿ ಸದಾಚಾರವಿಲ್ಲದ ನಿಜಲಿಂಗ ಉಂಟೆ ? ನಿಜಜಂಗಮ ಉಂಟೆ ? ಸದ್ಭಕ್ತಿ ಸದಾಚಾರ ಇಲ್ಲದ ಶರಣತ್ವ ಉಂಟೆ ? ಸಿರಿಬಾಯಿ ದೊಡ್ಡವೀರಪ್ಪ ಆಚಾರವಂತನಾದ ಧರ್ಮಪರಾಯಣನಾದ ಹಿರಿಯ ವ್ಯಕ್ತಿಯಾಗಿದ್ದ...ಮುಂದೆ ಕೊಡಗು ಮತ್ತೊಮ್ಮೆ ಅನೈಕ್ಯದ ರೋಗಕ್ಕೆ ತುತ್ತಾಯಿತು... ಅನಂತರ ದೊಡ್ಡವೀರರಾಜೇಂದ್ರ ಒಡೆಯರ್ ಅಧಿಕಾರಕ್ಕೆ ಬಂದು ಕೊಡಗಿನ ಹಿರಿಮೆಯನ್ನು ಪುನಃ ಎತ್ತಿ ಹಿಡಿದರು. ಆಂಗ್ಲರ ಮೈತ್ರಿಯನ್ನು ಅವರು ಸಂಪಾದಿಸಿದರು. ಸರಿಯೆನ್ನಿ, ತಪ್ಪೆನ್ನಿ, ಕಾಲಗರ್ಭದಲ್ಲಿ ಈಗಾಗಲೇ ಅಡಗಿಹೋಗಿರುವಂಥ ಘಟನೆ ಅದು. ಟೀಪೂಗಿದಿರು ನಡೆದ ಯುದ್ಧದಲ್ಲಿ ಇಂಗ್ರೇಜಿಯವರಿಗೆ ಆ ರಾಜೇಂದ್ರ ಸಹಾಯ

ಮಾಡಿದರು. ಒಂದೂವರೆ ಲಕ್ಷ ವರಹ ಬೆಲೆಬಾಳುವ ಸರಂಜಾಮು ಸಾಮಗ್ರಿಗಳನ್ನು ಒಂದು ಕವಡೆಯನ್ನೂ ಸ್ವೀಕರಿಸದೆ ಆತ ಇಂಗ್ರೇಜಿಯವರಿಗೆ ಕೊಟ್ಟರು.

"ಅದಕ್ಕೆ ಪ್ರತಿಫಲವಾಗಿ ಅವರಿಗೇನು ಸಿಕ್ಕಿತು ? ಟೀಪೂ ಸೋತ ಬಳಿಕ ಮೈಸೂರಿಗೆ ಅಧಿಕಾರಿಯಾಗಿ ಬಂದ ಕರ್ನಲ್ ಕ್ಲೋಸ್, ಒಂದು ಓಲೆ ಬರೆದು, ಮೈಸೂರು ರಾಜ್ಯದಲ್ಲಿ ನೀವು ಕೊಳ್ಳೆ ಹೊಡೆದಿದೀರಂತೆ ; ಕೆಳಗೆ ನಮೂದಿಸಿರುವುದನ್ನು ನಮ್ಮ ವಶಕ್ಕೊಪ್ಪಿಸಿ—ಎಂದ. ನಮೂದಿಸಿದ್ದೇನು ? ನಗಬೇಡಿ. ಹೇಳುತೇನೆ : ೬೭ ಹೆಂಗಸರು ; ೩೪ ಗಂಡಸರು ; ೧೧ ಹುಡುಗರು ; ೧೦ ಹುಡುಗಿಯರು ; ೧೩೮೩ ಹಸುಗಳು ; ೫೬೪ ಎಮ್ಮೆಗಳು ; ೮೩೪ ಹೋರಿಗಳು ; ೧೨೧ ಎಳೆಗರುಗಳು ; ೭೯ ಕಂಠೀರವ ವರಹಗಳು ; ೮೨ ಬೆಳ್ಳಿ ಆಭರಣಗಳು ; ೬೪ ಜೋಡಿ ಬಂಗಾರದ ಬೆಂಡೋಲೆಗಳು ; ೨೧೫ ಹಿತ್ತಾಳೆ ತಟ್ಟೆಗಳು ; ೯೩ ತಾಮ್ರದ ಪಾತ್ರೆಗಳು ; ೬೭ ಬಂದೂಕುಗಳು ; ೬ ಕುದುರೆಗಳು ; ೧೫೫ ಕುರಿಗಳು ; ೯೫ ಚಾಕುಗಳು ; ೯೬ ಕುಡುಗೋಲುಗಳು ; ೬೦ ಕೊಡಲಿಗಳು ; ೭ ಕಬ್ಬಿಣದ ಸಂಕೋಲೆಗಳು ; ೭೨ ಮೂಟೆ ಬಟ್ಟೆಗಳು...

[ಶ್ರೋತೃಗಳು ನಕ್ಕರು. ಅಪರಂಪಾರ ತಾನೂ ಸಣ್ಣನೆ ನಕ್ಕ.]

"ಎಂಥೆಂಥ ಅಮೂಲ್ಯ ಒಡವೆಗಳು! ಕೊಡಗಿನ ಸಿಂಹಾಸನಾಧೀಶ್ವರ ಒಬ್ಬ ಯಃಕಶ್ಚಿತ್ ದರೋಡೆಗಾರ ಎನ್ನುವ ಹಾಗೆ ಆ ಕ್ಲೋಸ್ ಕಾಗದ ಬರೆದ. ಅದು, ಶ್ರೀದೇವರು ಸೂರ್ಯ ಚಂದ್ರ ಭೂಮಿ ಇರುವ ತನಕ ಮೈತ್ರಿಯಿಂದಿರುತೇವೆ ಎಂದು ಕುಂಪಣಿ ಸರಕಾರ ಒಡಂಬಡಿಕೆ ಮಾಡಿಕೊಂಡಿದ್ದ ಒಬ್ಬ ಸ್ವತಂತ್ರ ರಾಜನಿಗೆ! ನಮ್ಮ ಅರಸ ಆತನಿಗೆ ಉತ್ತರ ಕೊಡಲಿಲ್ಲ. ಬದಲು, ನೇರವಾಗಿ, ಮದರಾಸಿನ ಗವರ್ನರನಿಗೂ ಕಲ್ಕತ್ತೆಯ ಗವರ್ನರ್‌ಜನರಲನಿಗೂ ಪತ್ರ ಕಳುಹಿಸಿದರು. ಅದರಲ್ಲಿ ಏನಂದರು ? 'ಈ ಕರ್ನಲ್ ಕ್ಲೋಸ್ ನಮ್ಮನ್ನೆಂದೂ ನೋಡಿಲ್ಲ. ನಮ್ಮ ಬಗ್ಗೆ ಅವನಿಗೇನೂ ತಿಳಿಯದು. ಒಬ್ಬ ಗುಲಾಮನನ್ನು ಸಂಬೋಧಿಸುವ ಹಾಗೆ ಕಾರಕೂನನ ಕೈಲಿ ನನಗೆ ಕಾಗದ ಬರೆಸಿದ್ದಾನೆ.'

[ಶ್ರೋತೃವೃಂದದಿಂದ : "ಕೇಳಿರಿ ! ಕೇಳಿರಿ !"]

"ಮುಂದೇನಾಯಿತು ? ಅದು ಹಾಗಲ್ಲ, ಹೀಗೆ ; ತಪ್ಪು ತಿಳಿವಳಿಕೆಯಿಂದ ನಡೆದ ಅಚಾತುರ್ಯ ; ನ್ಯಾಯ ದರಿಯಾಫ್ತು ಮಾಡೋಣ—ಅಂದರು. ಆ ಜಾತಿಯೇ ಹಾಗೆ. ಒದೆದಿರೋ ಮುದುರಿಕೋತವೆ. ಬಗ್ಗಿದಿರೋ ಬೆನ್ನಮೇಲೆ ಕೂಡುತವೆ. ಕಂಕುಳಲ್ಲಿ ದೊಣ್ಣೆ ಇಟ್ಟುಕೊಂಡೇ 'ಶರಣಾರ್ಥಿ' 'ಶರಣಾರ್ಥಿ' ಅನ್ನೋದು.

"ಮುಂದೆ ಪಟ್ಟವೇರಿದ ಲಿಂಗರಾಜರು ಸ್ವಾತಂತ್ರ್ಯವನ್ನು ಬಿಟ್ಟುಕೊಡಲಿಲ್ಲ. ದಾರಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಮನೆಗೆ ಕರೆಯಲೂ ಇಲ್ಲ. ಸಂಯಮದಿಂದ ದಕ್ಷತೆಯಿಂದ ರಾಜ್ಯ ಆಳಿದರು.

"ಅವರ ಬಳಿಕ ಘನತೆವೆತ್ತ ಚಿಕವೀರರಾಜೇಂದ್ರ ಒಡೆಯರು ಸಿಂಹಾಸನಾರೂಢರಾದರು. ನಿಮಗೆ ಗೊತ್ತೇ ಇದೆ. ಆಗ ಮಾರಿಬೇನೆಯೊಂದು ತಲೆದೋರಿ ದೊರೆಯ ದಾಯಾದಿಗಳಿಬ್ಬರು ಮಡಿದರು..."

ಒಮ್ಮಿಂದೊಮ್ಮೆಲೆ ಕುಳಿರುಗಾಳಿ ಬೀಸಿದಂತಾಯಿತು. ಸ್ವಾಮಿಯ ಮಾತಿನ ಪ್ರವಾಹದಲ್ಲಿ ತೇಲುತ್ತ ಸಾಗಿದ್ದ ಶಂಕರಪ್ಪ, ತಲೆಗೇನೋ ಬಡೆದಂತಾಗಿ ಕಣ್ಣುಗಳನ್ನರಳಿಸಿ ನೋಡಿದ. 'ಇವನು ಮನುಷ್ಯನಲ್ಲ, ದೇವತೆ' ಎಂದುಕೊಂಡ ಮಲ್ಲಪ್ಪಗೌಡ. ಅಪರಂಪಾರ

ಪೂರ್ವಾಶ್ರಮದಲ್ಲಿ ಪದಚ್ಯುತ ಅರಸನ ಜ್ಞಾತಿ ಎಂದು ಅಸ್ಪಷ್ಟವಾಗಿ ತಿಳಿದಿದ್ದ ಬೇರೆ ಕೆಲವರಿಗೆ, ಇದೇನು, ಹೀಗನ್ನುತಿದಾರೆ'—ಅನಿಸಿತು.

['ಒಂದೇ ನೆಗೆತಕ್ಕೆ ಕಂದಕವನ್ನು ದಾಟಿದೆ. ಇನ್ನು ಮುಂದಕ್ಕೆ ಓಡಬೇಕು' ಎಂದು ಅವಸರಪಟ್ಟ ಅಪರಂಪಾರ.]

"...ಚಿಕವೀರರಾಜರ ಆಳ್ವಿಕೆ, ಸುವರ್ಣ ಲಿಪಿಯಲ್ಲಿ ಬರೆದಿಡುವ ಅಧ್ಯಾಯ ವಾಗತದೆ—ಎಂದು ಪ್ರಜೆಗಳು ಭಾವಿಸಿದರು. ಆದರೆ, ಇದ್ದಕ್ಕಿದ್ದಹಾಗೆ ಏನಾಗಿಬಿಟ್ಟಿತು! ಆಂಗ್ಲರ ಕುಟಿಲ ಕಾರಸ್ಥಾನಕ್ಕೆ ಜಯವಾಯಿತು. ಅವರು ಅನ್ನವನಿಕ್ಕಿ, ಹಿರಣ್ಯ ಕೊಟ್ಟು, ಹೊಗಳುಭಟರನ್ನು ಪಡೆದರು. ನಮ್ಮವರು ಕೆಲವರು ಉಂಡ ಮನೆಗೆ ಎರಡು ಬಗೆದರು.

"ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ? ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ? ಊಹೂಂ. ಸ್ವತಂತ್ರನಾಗಿ ಜೀವಿಸಿದ್ದು, ಮುಂದೆ ಸ್ವಾತಂತ್ರ್ಯವನ್ನು ಕಳೆದುಕೊಂಡವನೊಬ್ಬನೇ ಬಲ್ಲ ಅದರ ಸವಿಯ. ಮನೆಯ ಕೊಳ್ಳೆ ಹೊಡೆದರೆಂದು ಅಳಬೇಕೆ ನಾವು? ಕಡುಗಲಿಗಳಾಗಿ ಆ ಕಳ್ಳರ ಹಿಡಿಯಬೇಕು. ಆಯುಷ್ಯ ತೀರದೆ ಮರಣವಿಲ್ಲ. ಸಾವಿಗ್ಯಾತಕೆ ಅಂಜಬೇಕು ನಾವು? ನಡುಬಾಬಾಡೆಯ ಜ್ಯೋತಿಯ ಎದುರು ಈ ಮಾತು ಹೇಳುತಿದೇನೆ. ಈ ನೆಲದಲ್ಲಿ ಕಾರಣವರಿಗೆ—ವೀರರಿಗೆ—ಬರಗಾಲವಿಲ್ಲ. ಕಾಡುಗಳಲ್ಲಿ ಬೇಟೆಕಾರ ಅಯ್ಯಪ್ಪ ದೇವರ ನೆನೆದು ನಾವು ಬೇಟೆಯಾಡುವುದಿಲ್ಲವೆ? ಮನಸ್ಸಿದ್ದಲ್ಲಿ ಮಹಾದೇವನಿಪ್ಪ. ಅವನ ನೆನೆದು, ಸಪ್ತಸಾಗರಂಗಳ ದಾಟಿ ಬಂದಿರುವ ಕ್ರೂರಮೃಗವನ್ನು ನಾವು ಬೇಟೆಯಾಡಬೇಕು.

"ನಾನು ಮೊರೆವ ನಾದವ ಕೇಳಿದೆ; ಉರಿವ ಜ್ಯೋತಿಯ ನೋಡಿದೆ; ಸುರಿವ ಅಮೃತವ ಸವಿದುಂಡೆ. ಅದಕಾರಣ ತೊರೆದೆ ಜನನ ಮರಣವ. ಚಿತ್ತಮುಟ್ಟಿ ಸೇವೆಯ ಮಾಡುವ ಭಕ್ತ ನಾನು. ಮರ್ತ್ಯ-ಕೈಲಾಸ ನನಗಿಲ್ಲ. ಕೈದು ಹಿಡಿದು ಪರಕೀಯರ ವಿರುದ್ಧ ಹೋರಾಡಿ ಎಂದು ನನಗೋಸ್ಕರ ನಾ ಕೇಳುತ್ತಿಲ್ಲ. ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದರೆ, ನಾನು ಕೈಮುಟ್ಟಿ ಎತ್ತಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಅದೇನು ಕಾರಣವೆಂದಡೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ ಆಸೆ ಮಾಡಿದೆನಾದಡೆ ನೀನಾಗಲೇ ಎನ್ನ ನರಕದಲದ್ದಿ ನೀನೆದ್ದು ಹೋಗಾ ಶಂಭು ಜಕ್ಕೇಶ್ವರಾ...ಮಾಡುವಾತ ನಾನಲ್ಲಯ್ಯ! ನೀಡುವಾತ ನಾನಲ್ಲವಯ್ಯ! ಬೇಡುವಾತ ನಾನಲ್ಲವಯ್ಯ...ಮಹಾದೇವ ಕೂಗಿ ನುಡಿಯುತಿದಾನೆ. ನಿಮಗಾಗಿ ಹೋರಾಡಿ! ನಿಮ್ಮ ಮಕ್ಕಳಿಗಾಗಿ ಹೋರಾಡಿ!"

ಭಾವನೆಗಳು ಉತ್ಕಟಗೊಂಡಿದ್ದ ಶ್ರೋತೃಗಣ ಕೂಗಿತು:

"ಉಘೇ! ಉಘೇ! ಸ್ವಾಮಿ ಅಪರಂಪಾರ ಉಘೇ! ಉಘೇ!"

ಅಪರಂಪಾರನೆಂದ:

"ಚಿಕವೀರರಾಜರಿಗೆ ಜಯವಾಗಲಿ—ಎನ್ನಿ."

ನೆರೆದವರು ಜಯಘೋಷ ಮಾಡಿದರು:

"ಹಾಲೇರಿ ವಂಶೋತ್ಪನ್ನ ಕೊಡಗು ಸಿಂಹಾಸನಾಧೀಶ್ವರ ಚಿಕವೀರರಾಜೇಂದ್ರ ಒಡೆಯರಿಗೆ—ಜಯವಾಗಲಿ!"

## ೫೦

ಹೊಸ ಉಸಿರೊಂದು ಕೊಡಗಿನ ಕಾಡುಬೆಟ್ಟಗಳಲ್ಲಿ, ಗಿರಿ ಕಂದರಗಳಲ್ಲಿ ಸಂಚಾರ ಮಾಡಿತು. ಒಂದು ವೃಕ್ಷ ಸುಯ್ಲಾಡಿ ಇನ್ನೊಂದಕ್ಕೆ ಸುದ್ದಿ ಮುಟ್ಟಿಸಿತು. ಅದು ಸುಯ್ಲಾಡಿ, ಮತ್ತೊಂದಕ್ಕೆ. ಗಿರಿ ಧ್ವನಿಸಿತು. ಕಂದರ ಪ್ರತಿಧ್ವನಿಸಿತು. ಅದು ಬೇರೊಂದು ಗಿರಿಗೆ ಅಪ್ಪಳಿಸಿತು. ಹೀಗೆ...

ಕೆಂಚಮನೆಯಿಂದ ಹಾಲೇರಿ ನಾಡಿಗೆ ಅಪರಂಪಾರನ ಕರೆಯನ್ನು ಹೊತ್ತು ಮರಳಿದವನೊಬ್ಬ ಅಪ್ಪಂಗಳಕ್ಕೂ ಬಂದ.

ಆತ ಚಾವಡಿಕಾರ ಧರ್ಮಪ್ಪ. ಅವನು ಆಡಿದುದನ್ನು ಕೇಳಿ, ಬದುಕಿನ ಗಾಣಕ್ಕೆ ಸುತ್ತು ಸುತ್ತು ಬಂದು ಬಸವಳಿದು ತಲೆಗೂದಲು ನರೆತಿದ್ದ ಗಂಗಮ್ಮ ನಕ್ಕಳು.

"ನಿನ್ನ ಪಾದ ಸೇರತೇನೆ, ಕರಕೋ—ಎಂದರೆ, ಮತ್ತೂ ಮತ್ತೂ ಪರಿಹಾಸ್ಯ ಮಾಡತೀಯ ಶಿವನೆ ?" ಎಂದು ಅತ್ತಳು.

ರಾಜಮ್ಮಾಜಿ ತೇಲುತ್ತಲಿದ್ದುದು ತುಂಬು ನೀರಿನ ನದಿಯ ಮೇಲೆ. ಒಡಕು ದೋಣಿ, ನೀರು ಒಳಕ್ಕೆ ನುಗ್ಗಿದ್ದರೆ ಅದು ಮುಳುಗಬಹುದು. ತನ್ನ ಜಲಸಮಾಧಿಯಾಗಬಹುದು. ಅದನ್ನಾಕೆ ಬಲ್ಲಳು. ಆ ಕಾರಣದಿಂದಲೇ ಎಂಥ ವಾರ್ತೆ ಬಂದರೂ ಅವಳ ಮನಸ್ಸು ಅಂಕೆ ತಪ್ಪುತ್ತಿರಲಿಲ್ಲ. ಪ್ರವಾಹದಲ್ಲಿ ಏನೇನು ತೇಲಿ ಬರುವುದಿಲ್ಲ ? ಬುಡಕಿತ್ತ ಮರಗಳು, ಕುಸಿದ ಮನೆಗಳ ಮಾಡಗಳು; ಆಕಳು; ಜನರು; ವಿಷಜಂತುಗಳು. ಇವೆಲ್ಲವನ್ನು ನಿರ್ವಿಕಾರಭಾವದಿಂದ ನೋಡುತ್ತ ತನ್ನ ದೋಣಿಯಲ್ಲಿ ರಾಜಮ್ಮಾಜಿ ಕುಳಿತಿದ್ದಳು, ಕದಲದೆ.

ಗಂಗಮ್ಮ ಹೇಳಿದಳು :

"ಇಲ್ಲಿಗೊಂದಾವರ್ತಿ ಒಬ್ಬ ಸ್ವಾಮಿಯೋರು ಬಂದರು. ಮುಚ್ಚಂಜೆ ಹೊತ್ತಿನಾಗೆ. ಈ ಮಗುವಿನ ಕೈ ನೋಡಿ, ನಿನಗೆ ಮುತ್ತೈದೆ ಸಾವು ಪ್ರಾಪ್ತವಾಗತದೆ ಅಂದರು. ಇಲ್ಲಿಂದ ಮಡಕೇರಿಗೆ ಹೋದರು ನೋಡು. ಅರಮನೆಯಲ್ಲಿ ಗಲಾಟೆಯಾಯ್ತಂತೆ. ಅವರೇ ಅಪರಂಪಾರ ಅಂತ ಜನ ಆಡಿಕೊಳ್ಳುತಾ ಇದ್ದರು."

ಧರ್ಮಪ್ಪನೆಂದ :

"ಇದ್ದಾತು ತಾಯಿಾ. ನಮ್ಮ ಸ್ವಾಮಿಯೋರು ತಿರುಗದ ತಾಣವಿಲ್ಲ, ನೋಡದ ಜನವಿಲ್ಲ."

ಪಕ್ಕದಲ್ಲಿ ನಿಂತಿದ್ದ ಮಗಳಿಗೆ ಕೇಳಿಸಬಾರದೆಂದು ಬಹಳ ಗೋಪ್ಯವೆನ್ನುವಂತೆ ಗಂಗಮ್ಮ ಪಿಸುದನಿಯಲ್ಲಿ ಅಂದಳು :

"ಈ ಸ್ವಾಮಿಯೋರೇ ಅಪ್ಪಾಜಿ ಅರಸರ ಮಕ್ಕಳು ಅನ್ನೋ ವಿಷಯ ನೀ ಏನಾದರೂ ಕೇಳಿದೀಯಾ ?"

"ಇಲ್ರಾ. ಅಂಗೇನೂ ಇದ್ದಂಗಿಲ್ಲ ಬಿಡಿರಿ."

ರಾಜಮ್ಮಾಜಿಗೆ, ತಾಯಿಯಾಡಿದುದೂ ಆತ ನೀಡಿದ ಉತ್ತರವೂ ಕೇಳಿಸಿದ್ದುವು. ಕತ್ತಿನ ನರವೊಂದು ಟಿಪ್‌ಟಿಪೆಂದು ಬಡಿಯತೊಡಗಿತೇ ಹೊರತು ಮುಖಭಾವ ಬದಲಾಗಲಿಲ್ಲ.

"ಅಂತೂ ಇಂಗ್ರೇಜಿಯವರನ್ನ ಓಡಿಸಿ ಅರಸನನ್ನ ಮರಳಿ ಕರಸತಾರೆ ಅನ್ನು" ಎಂದಳು ಗಂಗಮ್ಮ.

"ಖಂಡಿತ ತಾಯಿ. ಪೊನ್ನಪ್ಪ ಬೋಪಣ್ಣ ಈ ಕೆಲವರನ್ನ ಬಿಟ್ಟರ ಉಳಿಕೆ ಎಲ್ಲರ ಬೆಂಬಲವೂ ಸ್ವಾಮಿಯವರಿಗದೆ."

"ಆ ಚನ್ನಬಸಪ್ಪಂದೇನಾದರೂ ಸುದ್ದಿ ಉಂಟಾ? ಅಪ್ಪಂಗಳ ಜಹಗೀರಿಗೆ ತಿರುಗಿ ಬರತಾನಂತಾ?"

"ಆತ ಕೊಡಗಿನ ಒಳಗೆ ಓಗಕೂಡದೂಂತ ಕುಂಪಣಿಯವರು ತಾಕೀತು ಮಾಡವರಂತೆ, ಇಬ್ಬರನ್ನೂ ಬೆಂಗಳೂರಿಗೆ ಕರಕೊಂಡು ಓಗವರಂತೆ. ಅವರ ಸಂಗಾತ ಇಲ್ಲಿಂದ ಓಡ್ಹೋಗಿದ್ರಲ್ಲ ಛಾವಡಿಕಾರರು—ಅವರೆಲ್ಲಾ ಇಂಗ್ರೇಜಿ ದಂಡಿನಲ್ಲಿ ಭರ್ತಿಯಾದರಂತೆ."

"ಅರಸಾಗಬೇಕೂಂತಿದ್ದ. ಇನ್ನು ಅವರ ಆಳಾಗಿ ಬದುಕತಾನೆ. ಅಯ್ಯೋ..." ಎಂದು, ಗಂಗಮ್ಮ ಉದ್ಗರಿಸಿ, ಅಡುಗೆಯವಳೇನು ಮಾಡುತ್ತಿರುವಳೆಂದು ನೋಡಲು ಒಳ ಹೋದಳು.

ಮಾನಾಡದೆ ನಿಂತಿದ್ದ ಹರೆಯದ ಹೆಣ್ಣು. ದೈವ ಮುನಿಯದೇ ಇದ್ದಿದ್ದರೆ ರಾಣಿಯೂ ಆಗುತ್ತಿದ್ದಳೇನೊ. ತಾನು ಯಾಕೆ ಇನ್ನೂ ಇಲ್ಲೇ ಇರಲಿ?—ಎಂದುಕೊಂಡು ಧರ್ಮಪ್ಪ ನೆದ್ದ.

"ಹೋಗುತೀಯಾ?" ಎಂದು ರಾಜಮ್ಮಾಜಿ ಕೇಳಿದಳು. ಆ ಧ್ವನಿಯಲ್ಲಿ ಮಾಧುರ್ಯವೂ ಇತ್ತು, ಗಾಂಭೀರ್ಯವೂ ಇತ್ತು.

"ಹೊರಡತೀನಿ, ಅಮ್ಮಣ್ಣಿ."

"ಸ್ವಾಮಿಯವರನ್ನ ಮತ್ತೆ ಯಾವತ್ತು ಕಾಣತೀಯಾ?"

"ಇನ್ನೂ ಮೂರು ಹೋಬಳಿ ಸುತ್ತಬೇಕು. ಹೆಚ್ಚೆಂದರೆ ಇನ್ನೆಂಟು ದಿವಸ ಬೇಕೇನೊ?"

ಈಕೆ ಹೀಗೆ ಯಾಕೆ ಕೇಳಿದಳು?—ಎಂದು ಯೋಚಿಸುವುದಕ್ಕೂ ಧರ್ಮಪ್ಪನಿಗೆ ಆಸ್ಪದ ಕೊಡದೆ, ರಾಜಮ್ಮಾಜಿಯೆಂದಳು:

"ಒಂದು ಕೆಲಸ ಮಾಡತೀಯಾ?"

"ಅಪ್ಪಣೆಯಾಗಲಿ, ಅಮ್ಮಣ್ಣಿ."

ರಾಜಮ್ಮಾಜಿ ತನ್ನ ಕೊರಳಿನಿಂದ ಎರಡೆಳೆಯ ರತ್ನಹಾರವೊಂದನ್ನು ತೆಗೆದು, "ಇದನ್ನ ತಗೋ. ಸ್ವಾಮಿಯವರಿಗೆ ಮುಟ್ಟಿಸು" ಎಂದಳು.

ಹಾರ ಬಿಸಿಲಲ್ಲಿ ಚಕಚಕಿಸಿತು. ಧರ್ಮಪ್ಪ ಎರಡೂ ಕೈಯೊಡ್ಡಿ ಅದನ್ನು ಸ್ವೀಕರಿಸಿದ.

"ಯಾರು ಕೊಟ್ಟರೂಂತ ಹೇಳಲಿ?"

"ಅಪ್ಪಂಗಳದ ಸೊಸೆ ಕೊಟ್ಟಳು ಅನ್ನು."

"ಆಗಲಿ, ಅಮ್ಮಣ್ಣಿ."

"ಇನ್ನು ಈ ಕಡೆ ಯಾವತ್ತು ಬರತೀಯಾ?"

"ಗೊತ್ತಿಲ್ಲ, ಅಮ್ಮಣ್ಣಿ. ಲಡಾಯಿ ಲಗೂ ಶುರು ಆಗ್ಬೌದು. ಅದು ಮುಗಿದ ಮೇಲೇ ಬಂದೇನು ಅನಿಸತದೆ."

"ಯಾವತ್ತಾದರೂ ಸರಿ. ಈ ಕಡೆ ಬಂದಾಗಲೆಲ್ಲ ಉಂಡು ಹೋಗುವಿಯಂತೆ."

ಧರ್ಮಪ್ಪ ಹಾರವನ್ನು ರುಮಾಲಿನ ತುದಿಯಲ್ಲಿ ಕಟ್ಟಿ, ಅಂಗಿಯೊಳಗೆ ಬಿಟ್ಟು, ತುಸು ತಲೆಬಾಗಿ ವಂದಿಸಿದ. ರಾಜಮ್ಮಾಜಿ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ. ದ್ವಾರದ ಚೌಕಟ್ಟಿಗೊರಗಿ ಆಕೆ ನಿಂತಳು.

"ಹೋಗಿ ಬರತೀನಿ, ಅಮ್ಮಣ್ಣಿ" ಎಂದು ನುಡಿದು, ಧರ್ಮಪ್ಪ ಅಂಗಳ ದಾಟಿದ. ದೂರದಲ್ಲಿ ಆತ ಮರೆಯಾಗುವವರೆಗೂ ಅವನನ್ನು ದಿಟ್ಟಿಸುತ್ತ ರಾಜಮ್ಮಾಜಿ ನಿಂತಳು.

## ೫೧

ಕೊಡಗಿನಾದ್ಯಂತ ಭೂಗರ್ಭದಿಂದ ಗುಡುಗು ಕೇಳಿಸಿದವನಂತೆ ಆಂಗ್ಲರವನು ತಲ್ಲಣಿಸಿದ. ತನ್ನ ಕನಸಿನ ನಂದನವನವಾದ ಕೊಡಗಿನಲ್ಲಿ ಕಾಳ್ಗಿಚ್ಚಿ ? ಕಂಡು ಅರಿಯದ ಕೇಳಿ ತಿಳಿಯದ ಊರಲ್ಲಿ ಕರಿಯರು ತೋಡುವ ಕಂದಕವೇ ತನಗೆ ಗೋರಿಯಾಗಬೇಕೆ ?

ಲೀಹಾರ್ಡಿ ದೇಶೀಯರೆಲ್ಲರ ಮೇಲೂ ಸಂಶಯ ತಳೆದ. ಆಡಳಿತವನ್ನು ಬಿಗಿಗೊಳಿಸ ಲಾಗದ ತನ್ನ ಅಸಹಾಯಕತೆಗಾಗಿ ಅವರೆಲ್ಲ ನಗುತ್ತಿರುವರೆಂದೇ ಅವನ ಅಂಬೋಣ. ಕುರ್ನಿಸು ಮಾಡಲು ಬಂದವರೆಲ್ಲರ ಪೋಷಾಕಿನೊಳಗೆ ಭರ್ಚಿಯೋ ಬಂದೂಕೋ ಅಡಗಿರು ತ್ತದೆಂಬ ಭಯ ಆತನಿಗೆ.

ದಿವಾನರಾದ ಪೊನ್ನಪ್ಪ-ಬೋಪಣ್ಣರನ್ನು ಕರೆದು ಇರಿಯುವ ನೋಟದಿಂದ ಅವರನ್ನು ದಿಟ್ಟಿಸುತ್ತ, ಲೀಹಾರ್ಡಿಯೆಂದ :

"ಗೂಢಚಾರರು ಇತ್ತೀಚೆಗೆ ತಂದಿರುವ ಸುದ್ದಿಯೇನು ?"

ಬೋಪಣ್ಣನ ಕಡೆಗೊಮ್ಮೆ ನೋಡಿ ಪೊನ್ನಪ್ಪ ಉತ್ತರಿಸಿದ :

"ಕೆಂಚಮನೆಯಲ್ಲಿ ಒಂದು ಸಭೆಯಾದ ವಿಷಯ ಆಗಲೇ ತಿಳಿಸಿದ್ದೇವೆ. ಅದಾದ ಮೇಲೆ ಯಾವ ವಿಶೇಷ ವರ್ತಮಾನವೂ ಬಂದ ಹಾಗಿಲ್ಲ."

"ಆ ಸ್ವಾಮಿಯ ಬೆಂಬಲಕ್ಕಿದ್ದಾರೆ ಅಂತ ನಮಗೆ ಸಂಶಯ ಇರುವವರನ್ನೆಲ್ಲ ಎಲ್ಲಾ ಕಡೆ ಯಾಕೆ ಹಿಡಿದುಹಾಕಬಾರದು ?"

ಬೋಪಣ್ಣನೆಂದ :

"ಆತುರದಿಂದ ದುಡುಕೋದು ಬ್ಯಾಡ. ಸುಮ್ಮಸುಮ್ಮನೆ ಪ್ರಜೆಗಳ ವೈರ ಕಟ್ಟಿಕೊಂಡ ಹಾಗೆ ಆಗತದೆ."

"ಹಾಗಾದರೆ ಏನು ಮಾಡೋಣ—ಅನ್ನತೀರಿ ?"

ಪೊನ್ನಪ್ಪ ಉತ್ತರಿಸಿದ :

"ತಾವು ಧೈರ್ಯದಿಂದಿರಿ. ಇದು ಮಳೆಗಾಲದ ಮಹಾಪೂರ. ಭರ್ರಂತ ಇಳಿದು ಹೋಗತದೆ."

"ಮಹಾಪೂರದಲ್ಲಿ ನಾವು ಕೊಚ್ಚಿ ಹೋದಮೇಲೆ ಅದು ಇಳಿದರೇನು ? ನಿಂತರೇನು ?"

"ಕಲ್ಲು ಬಂಡೆಗಳನ್ನು ನೀರು ಕೊಚ್ಚಿಹಾಕುವುದಿಲ್ಲ" ಎಂದ ಬೋಪಣ್ಣ.

ಪೊನ್ನಪ್ಪನೆಂದ :

"ಆ ಸ್ವಾಮಿಯೊಬ್ಬ ತಲೆತಿರುಕ ಶಿವಭಕ್ತ. ತನ್ನ ಮಿತಿಯೇನು ಅಂಬೋದನ್ನ ಮರೆತು ಹಾರಾಡುತಿದಾನೆ."

"ಆತ ಒಬ್ಬನನ್ನಾದರೂ ರಾಜದ್ರೋಹದ ಆರೋಪ ಹೊರಿಸಿ ಯಾಕೆ ಹಿಡಿಯು ಬಾರದು ?"

"ಇಲ್ಲಿಯೂ ಸಾವಧಾನದಿಂದ ವರ್ತಿಸಬೇಕು. ಪ್ರಜೆಗಳ ದೃಷ್ಟಿಯಲ್ಲಿ ಅವನು ರಾಜ

ಭಕ್ತ, ದ್ರೋಹಿಯಲ್ಲ. ಘನವಂತ ಕಾಸ್ಸಾಮೇಜರ್ ಸಾಹೇಬರಿಗೆ ಬೇರೆ ಅವನು ಹಿತೋಪದೇಶ ಮಾಡಲಿಲ್ಲವೆ ? ಅಲ್ಲದೆ—"

"ಏನು ?"

"ಇವರು ನಿಶಾಚರರು. ತಲೆಮರೆಸಿಕೊಂಡು ಸುಳಿಯುವ ಜನ. ಇವು ಹಿಂಡು ಹಿಂಡಾಗಿ ಅಲೆಯುವ ಆನೆಗಳು..."

ಲೀಹಾರ್ಡಿ ತುಟಿಕಚ್ಚಿ ನುಡಿದ :

"ಚಿಕವೀರರಾಜ ಹೋದಮೇಲೆ ಕಾಡಾನೆಗಳನ್ನು ಬೇಟೆಯಾಡುವ ಸಾಮರ್ಥ್ಯ ಕೊಡವರಲ್ಲಿ ಉಡುಗಿಹೋಯ್ತು ಅನ್ನಿ."

ಪೊನ್ನಪ್ಪ—ಬೋಪಣ್ಣರಿಬ್ಬರೂ ಅಂದರು :

"ಹಾಗಲ್ಲ, ಹಾಗಲ್ಲ."

ಧ್ವನಿ ಏರಿಸಿ ಲೀಹಾರ್ಡಿಯೆಂದ :

"ಹಾಗೂ ಅಲ್ಲ, ಹೀಗೂ ಅಲ್ಲ. ನೀವು ಒಗಟೆಯಾಗಿ ಮಾತಾಡತೀರಿ. ಇದು ಸರಿಯಲ್ಲ. ಕಾಡಿಗೆ ಬೆಂಕಿ ಬಿದ್ದಿದೆ. ಆ ಉರಿ ವ್ಯಾಪಿಸದಂತೆ ನೋಡಿಕೊಳ್ಳಬೇಕು. ತಿಳಿಯಿತೆ ?"

ತಿಳಿಯಿತು—ಎಂಬಂತೆ ದಿವಾನದ್ವಯರು ಗೋಣಾಡಿಸಿದರು...

...ಆದರೆ ಆಡಿದಷ್ಟು ಸುಲಭವಾಗಿರಲಿಲ್ಲ, ಉರಿ ಆರಿಸುವುದು.

ಮರಮರ ಮಥನಿಸಿ ಹುಟ್ಟಿದ ಕಿಚ್ಚು, ಮಾಯಾವಿಯಾದ ಅಗ್ನಿ. ಕುಂಪಣಿ ದೂತರೊಡನೆ ಅದು ಕಣ್ಣುಮುಚ್ಚಾಲೆಯಾಡಿತು.

ಅಪರಂಪಾರ ತಂಡದವರು ಎಲ್ಲೆಡೆಗಳಲ್ಲೂ ಕಾಣಿಸಿಕೊಂಡರು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದರು, ಜನರನ್ನು ಸಜ್ಜುಗೊಳಿಸಿದರು. ಅಸ್ತ್ರ ಹಿರಿದು ಎಲ್ಲರೊಂದಾಗಿ ಹೋರಾಡುವ ಘಳಿಗೆಯನ್ನು ಇದಿರುನೋಡಿದರು.

ಕೆಂಚಮನೆಯಿಂದ ಅಪರಂಪಾರ ಹಾರಂಗಿಗೆ ಬಂದ. ಅಲ್ಲಿಂದ ದಳವಾಯಿ ವೆಂಕಟಪ್ಪ ಹಾಗೂ ಅಪ್ಪಯ್ಯರೊಡಗೂಡಿ ಕಾಜಗೋಡಿಗೆ ಪಯಣ ಬೆಳೆಸಿದ.

ಅಪ್ಪಂಗಳದಿಂದ ಹೊರಟ ಧರ್ಮಪ್ಪ ಅಪರಂಪಾರನನ್ನು ಕಾಣಲು ಒಂದು ತಿಂಗಳೇ ಹಿಡಿಯಿತು. ಕಾಜಗೋಡು ಈಗ ಜೇನುತೊಟ್ಟಿ. ಜನ ಬರುತ್ತಿದ್ದರು, ಹೋಗುತ್ತಿದ್ದರು. ಕಾಲ ಹಗಲು-ಇರುಳುಗಳ ಅಂತರವನ್ನೇ ಮರೆತಂತಿತ್ತು.

ಅದೇ ಆಗ ಮೈಸೂರಿಗೂ ಇಕ್ಕೇರಿಗೂ ದೂತರನ್ನು ಕಳುಹಿ ಅಪರಂಪಾರ ಒಂದು ಕ್ಷಣ ಗೋಡೆಗೊರಗಿ ಕುಳಿತ. ಅಷ್ಟರಲ್ಲಿ ವ್ಯಕ್ತಿಯೊಂದು ತಲೆ ಬಾಗಿಲ ಬಳಿ ಹಣಿಕಿ ಹಾಕಿತು.

"ಧರ್ಮಪ್ಪ ಅಲ್ಲವಾ ? ಬಾ. ಎಂದು ಬಂದೆ ?"

—ಅಪರಂಪಾರ ಕೇಳಿದ.

ಧರ್ಮಪ್ಪ ಸ್ವಾಮಿಗೆ ನಮಿಸಿ, ತಾನು ಹೋದ ಊರುಗಳು, ಕಂಡ ಜನರು, ಪಡೆದ ವಾಗ್ದಾನಗಳು—ಈ ಕುರಿತು ವರದಿಯೊಪ್ಪಿಸಿದ.

ಕೊನೆಯಲ್ಲಿ ಅವನೆಂದ :

"ಅಪ್ಪಂಗಳದಲ್ಲಿ ಅರಮನೆ ತಾವ ಓಗಿದ್ದೆ."

ಶರೀರಕ್ರಿಯೆಯಲ್ಲಿ ಭಂಗ ಉಂಟಾದವನಂತೆ ಅಪರಂಪಾರ ಮಿಸುಕಿದ.

'ಅಲ್ಲಿ ಎಲ್ಲರೂ ಕ್ಷೇಮವೇ ?'—ಎಂದು ರೂಪುಗೊಂಡ ಪ್ರಶ್ನೆ, "ಹೌದೆ ?" ಎಂಬ ಏಕಪದವಾಗಿ ಹೊರಬಿದ್ದಿತು.

"ಸಾಮಿಯೋರು ಒಂದಾವರ್ತಿ ಬಂದು ಓದದ್ದನ್ನ ಗಂಗಮ್ಮಾಜಿ ಜ್ಞಾಪಿಸಿಕೊಂಡ್ರು."

ಅಪರಂಪಾರ ಏನನ್ನೂ ಹೇಳಲಿಲ್ಲ.

ಕಟ್ಟುಬಿಚ್ಚಿ, ರತ್ನಹಾರವನ್ನು ಸ್ವಾಮಿಯ ಎದುರಿಗಿದ್ದ ಮಣೆಯ ಮೇಲಿರಿಸಿ, ಧರ್ಮಪ್ಪನೆಂದ :

"ಸ್ವಾಮಿಯೋರಿಗೆ ತಲಪಿಸೋಕೆ ಅಂತ ಚಿಕ್ಕಮ್ಮಣ್ಣಿಯೋರು ಕೊಟ್ರು. ಅಪ್ಪಂಗಳದ ಸೊಸೆ ಕೊಟ್ಟಿದ್ದೂಂತ ಯೋಳು—ಅಂದ್ರು."

ಹಣತೆಯ ಬೆಳಕಿನಲ್ಲಿ ಹಾರ ಮಿನುಗಿತು.

ಆ ಪ್ರಭೆ ತನ್ನ ಕಣ್ಣುಗಳನ್ನು ಕುಕ್ಕುತ್ತಿದ್ದಂತೆ ಅಪರಂಪಾರನಿಗೆ ಭಾಸವಾಯಿತು. ಎಲ್ಲಿ ಕಂಡಿದ್ದೆ ಇದನ್ನು ? ತಾನು ಅಮ್ಮ ಅಮ್ಮ ಎಂದು ಸೆರಗು ಹಿಡಿದು ಹಿಂದೆಯೇ ಹೋಗುತ್ತಿದ್ದ ಒಂದು ಜೀವ ಇದನ್ನು ತೊಟ್ಟುಕೊಂಡಿರುತ್ತಿತ್ತಲ್ಲ ? ಆಕೆ ಕೊಟ್ಟಳೇನೋ ತನ್ನ ಸೊಸೆಗೆ ?

ಆ ರೂಪ. ಪಾದಗಳೆರಡು. ಎರಡು ಅಂಗೈಗಳು...

ಅಪರಂಪಾರನ ಮೆದುಳು ಸಿಡಿಯತೊಡಗಿತು. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿ, ಶಂಕರಪ್ಪನನ್ನು ಆತ ಕರೆದ :

"ಏನಪ್ಪಣೆ ಸ್ವಾಮಿಯೋರೆ ?" ಎಂದು ಅವನು ಕೇಳಿದಾಗ, "ಇದೊಂದು ಹಾರ ಅಪ್ಪಂಗಳದ ಅರಮನೆಯಿಂದ ಬಂದದೆ. ರಾಜಭಂಡಾರದ ಒಡವೆ. ರಾಜಭಂಡಾರಕ್ಕೇ ಸೇರಬೇಕು. ಆ ತನಕ ಇದನ್ನು ಜೋಪಾನವಾಗಿಟ್ಟಿರಬೇಕಲ್ಲ ?" ಎಂದು ಅಪರಂಪಾರ ನುಡಿದ.

ಶಂಕರಪ್ಪ ಮಣೆಯ ಮೇಲಿಂದ ರತ್ನಹಾರವನ್ನೆತ್ತಿಕೊಂಡು ಅಂದ :

"ನಾನು ತೆಗೆದಿಟ್ಟಿರತೇನೆ."

## ೫೨

ಅಂದು ಅಪರಂಪಾರಸ್ವಾಮಿಯ ಸಂದರ್ಶನಕ್ಕೆ ಅಪರಿಚಿತನೊಬ್ಬ ಬಂದ. ಅವನ ಹೆಸರು ಅಚ್ಚಣ್ಣ. ಕೊಡಗು ಇಂಗ್ಲಿಷರಿಗೆ ವಶವಾದಾಗ ಗ್ರಾಮಾಂತರ ಪ್ರದೇಶವನ್ನು ಸೇರಿ ತಪ್ಪಿಸಿಕೊಂಡು ಹೋಗಿದ್ದ ಕಾರ್ಯಕಾರರಲ್ಲೊಬ್ಬ, ಪುಟ್ಟಬಸವ, ಒಂದು ಓಲೆಯನ್ನು ಅಚ್ಚಣ್ಣನೊಡನೆ ಕೊಟ್ಟು ಕಳುಹಿದ್ದ.

ಆ ಓಲೆ ಅಪರಂಪಾರನನ್ನು ಹರ್ಷಿತನನ್ನಾಗಿ ಮಾಡಿತು.

ಅವನೆಂದ :

"ಮಹಾದೇವ ಮುನಿದಾಗ ಅಶುಭ ಪರಂಪರೆಗಳೇ ಒದಗುತವೆ. ಅವನು ಒಲಿದಾಗ ಶುಭದ ಮೇಲೆ ಶುಭ."

ಯಾರು ಪುಟ್ಟಬಸವ ?

ಆತನೇ ಬರೆದಿದ್ದ :

"ನಾನು ಸ್ವಾಮಿಯರಿಗೆ ಪರಿಚಯಸ್ಥನಲ್ಲ. ತಮ್ಮನ್ನು ಮಾತ್ರ ನಾನು ಒಮ್ಮೆ

ಕಂಡದ್ದುಂಟು. ಸ್ವಾಮೀಯವರು ಮಡಕೇರಿಯ ಅರಮನೆಗೆ ಒಮ್ಮೆ ಭೇಟಿಕೊಟ್ಟಿದ್ದರಲ್ಲ, ಆ ವೇಳೆಯಲ್ಲಿ, ಮುಂದೆ ಬೇಗನೆ ತಮ್ಮ ದರ್ಶನ ತಕ್ಕೊಂಡು ಆಶೀರ್ವಾದ ಪಡೆಯುವ ಭಾಗ್ಯ ಲಭಿಸತದೆ ಅಂತ ನಂಬಿದ್ದೇನೆ. ಈಗ ಈ ಪತ್ರ ಬರೆಯುವ ಉದ್ದಿಶ್ಯ ಏನು ಅಂದರೆ..."

ಉದ್ದೇಶ—

ಕೊಡಗಿನಾದ್ಯಂತ ಆಗುತ್ತಿದ್ದ ಸಿದ್ಧತೆಗಳ ವಿಷಯ ದಾರಿಹೋಕರಿಂದ ಪುಟ್ಟಬಸವನೂ ಅವನ ಸಂಗಡಿಗರೂ ಕೇಳಿ ತಿಳಿದಿದ್ದರು. ಸಂಗಡಿಗರು ಎಂದರೆ, ಹುಲಿಕುಂದ ನಂಜಯ್ಯ, ಚೆಟ್ಟಿ ಕುಡಿಯ ಮತ್ತು ಕರ್ತು ಕುಡಿಯ. ಕುಡಿಯ ಸೋದರರನ್ನು ಅಪರಂಪಾರ ಬಲ್ಲ. ಅವರು ಅಸಮಾನ ವೀರರು. ಚಿಕವೀರರಾಜನಿಗೆ ಗುರಿವಿದ್ಯೆಯನ್ನು ಹೇಳಿಕೊಟ್ಟವರು. [ಆದರೆ ಆ ಸೋದರರೊ? ಚಿಕವೀರರಾಜನ ದಾಯಾದಿಗಳನ್ನಷ್ಟೆ ಬಲ್ಲರು; ಸ್ವಾಮಿ ಅಪರಂಪಾರನನ್ನಲ್ಲ.] ಇಂಗ್ಲಿಷರಿಗೆ ಇದಿರಾಗಿ ನಡೆಯುವ ಬಂಡಾಯದಲ್ಲಿ ಭಾಗಿಗಳಾಗುವ ತವಕ ಅವರಿಗೆ. ದ್ರೋಹಿಗಳನ್ನು ದಂಡಿಸಿ ವಂಚಕರಿಗೆ ಶಾಸ್ತಿ ಮಾಡಿ, ಹಿಂದೆ ಆದ ಪ್ರಮಾದವನ್ನು ಸರಿಪಡಿಸುವ ಹಂಬಲ. ಪ್ರಜೆಗಳು ಈಗೇನೋ ಹತಾಶರು. ಆದರೆ ಅವಕಾಶ ದೊರೆತೊಡನೆ ಅವರು ಕಾದುವರೆಂಬುದರಲ್ಲಿ ಸಂದೇಹವಿರಲಿಲ್ಲ.

ಒಂದು ವಿಶೇಷ ಸಂಗತಿ. ಘಟ್ಟದ ಕೆಳಗಿನ ನಾಲ್ಕು ಮಾಗಣೆಗಳ ಜನರು ಕೆರಳಿದ್ದರು, ಇಂಗ್ಲಿಷರ ಆಡಳಿತದ ರೀತಿನೀತಿಗಳು ಅವರಿಗೆ ಅಪ್ರಿಯವಾಗಿದ್ದುವು. ಸಂಪಾಜೆ ಘಟ್ಟದ ಮಾರ್ಗವಾಗಿ ಬಂದವರು ಆ ಸುದ್ದಿಯನ್ನು ತಂದಿದ್ದರು, ಸುಬ್ರಹ್ಮಣ್ಯದಿಂದ ಬಿಸಿಲೆ ಘಾಟಿಯ ಮಾರ್ಗವಾಗಿ ಬಂದವರೂ ಅದನ್ನು ಪುಷ್ಟೀಕರಿಸಿದ್ದರು...

"...ಅಲ್ಲಿಯ ಜನರನ್ನು ಸುಲಭವಾಗಿ ಒಟ್ಟುಗೂಡಿಸಬಹುದು. ಅಷ್ಟೇ ಅಲ್ಲ. ಮಂಗಳೂರಿನವರೆಗೂ ದೌಡು ನಡೆಸಬಹುದು. ಯಾವುದಕ್ಕೂ ತಮ್ಮ ಸಮ್ಮತಿ ಬೇಕು. ಇಷ್ಟು ವಿವರ ವೇಲೂರಿನಲ್ಲಿ ಸನ್ನಿಧಿಗೆ ಅರಿಕೆಯಾಗಬೇಕು. ಅಲ್ಲದೆ, ನಾಲ್ಕುನಾಡು ಅರಮನೆ ನೋಡಿಕೊಳ್ಳುವವರಿಲ್ಲದೆ ಹಲಾಕು ಆಗಿಯದೆ. ಅಲೆಯುತ್ತ ನಮ್ಮ ದೇಶಕ್ಕೆ ಬಂದ ಅಬ್ಬಾಸ್ ಅಲಿ ತಿರುಗಿ ಮಲೆಯಾಳಕ್ಕೇ ಹೋದ ಅಂತ ಪ್ರತೀತಿ ಆದೆ. ಬಸವಯ್ಯ ನವರು ಏನಾದರೋ ಗೊತ್ತಿಲ್ಲ. ಮಾದಂತ ಅಪ್ಪಚ್ಚು, ಯಾದವ ನಾಡಿನ ಕಳಿಂಗಯ್ಯ ಹಾಗೂ ಉತ್ತಯ್ಯ ಇಂಗ್ರೇಜಿಯವರ ಚಾಕರರಾದದ್ದು ತಮಗೆ ವಿದಿತವೇ ಅದೆ. ಉಳಿಕೆ ಯಾರೂ ಅವರ ಎಂಜಲು ತಿನ್ನಲು ಹೋಗಿಲ್ಲ. ತಾವುನಾಡು, ಬೈಂಗನಾಡಿನವರು ನಮ್ಮ ಕಡೆಗಿದ್ದಾರೆ. ಮುದ್ದಯ್ಯ ತಕ್ಕನವರು ನಮ್ಮನ್ನು ಕೂಡಿಕೊಳ್ಳುವುದಾಗಿ ಮಾತುಕೊಟ್ಟಿದ್ದಾರೆ. ಇರುವ ಸಂಗತಿ ಇಷ್ಟು. ತಮ್ಮ ಆದೇಶ ಏನು ಅಂತ ತಿಳಿಸುವ ಕೃಪೆಮಾಡಬೇಕು. ನಾವು ಕಾದಿರುತ್ತೇವೆ."

ಓಲೆಯನ್ನೋದಿ ಮುಗಿಸಿ, ಅಪ್ಪಯ್ಯನ ಕೈಗೆ ಅದನ್ನು ಕೊಟ್ಟು, ಅಪರಂಪಾರನೆಂದ:

"ನೆಲ ತಳವಾರನಾದೊಡೆ ಕಳ್ಳಂಗೆ ಹೋಗಲೆಡೆಯುಂಟೆ? ನೆನಪಿಡಿ. ಅಚ್ಚಣ್ಣ ನೀನೂ ತಿಳಕೋ, ಕೊಡಗಿನ ಇಡಿಯ ನೆಲವೇ ತಳವಾರನಾಗಿದೆ ಈ ರಾಜ್ಯವನ್ನು ಹೊಕ್ಕಿರುವ ಕಳ್ಳನಿಗೆ ಹೋಗಲು ಇನ್ನು ಎಡೆಯುಂಟೆ? ಕರ್ಪುರದ ಗಿರಿಯನುರಿ ಹಿಡಿದ ಬಳಿಕ ಇದ್ದಿಲುಂಟೆ? ಅವರ ಕರ್ಪುರದ ಗಿರಿಗೇ ನಾವು ಉರಿ ಇಟ್ಟ ಬಳಿಕ ಏನು ಉಳೀತದೆ?"

ಮಾತು ಮಾತಿಗೂ ಅಚ್ಚಣ್ಣ, 'ಅರ್ಥವಾಯಿತು ಅರ್ಥವಾಯಿತು' ಎಂಬಂತೆ ತಲೆಯಾಡಿಸಿದ.

ಅಪರಂಪಾರ ತುಸು ಯೋಚಿಸಿ ನುಡಿದ :

"ಯೋಜನೆ ದಿವ್ಯವಾಗಿದೆ, ಇಲ್ಲಿ ನಾವು ಕೊಳ್ಳಿ ಇಡತೇವೆ. ಪುಟ್ಟಬಸವನೂ ಅವನ ಸಂಗಡಿಗರೂ ಘಟ್ಟದ ಕೆಳಗೆ ದೀವಟಿಗೆ ಹಿಡಿಯಲಿ. ಮೈಸೂರು ಇಕ್ಕೇರಿಗಳು ಉರಿದೇಳಲಿ. ಆಗ ಮಹಾದೇವನ ಹಣೆಗಣ್ಣು ತೆರೆದ ಹಾಗಾಗುತದೆ. ಆ ಬೆಳಕಿನಲ್ಲಿ ಹಿಂದೂಸ್ಥಾನದ ಬೇರೆ ರಾಜ್ಯಗಳ ಜನ ತಮ್ಮ ದಾರಿ ಕುಡುಕೊಳ್ಳುತಾರೆ. ಸರಿಯೆ ಅಪ್ಪಯ್ಯ ?"

ಅಪರಂಪಾರನ ಸಂತೋಷದಲ್ಲಿ ತಾನೂ ಪಾಲುಗೊಳ್ಳುತ್ತ ಅಪ್ಪಯ್ಯನೆಂದ :

"ಸರಿ, ಸ್ವಾಮಿಯವರೆ."

"ಹಾಗಾದರೆ ಪುಟ್ಟಬಸವನಿಗೆ ಒಂದು ಮಾರೋಲೆ ಬರೆಯೋಣಾಗಲಿ. ಒಕ್ಕಣೆ..."

॥ಓಂ॥

ಶ್ರೀ ಶ್ರೀ ಶ್ರೀ ಅಪರಂಪಾರಸ್ವಾಮಿಗಳ ಕಾಜಗೋಡು ಮುಕ್ಕಾಮಿನಿಂದ. ಭಕ್ತಾಗ್ರಣಿ ಪುಟ್ಟಬಸವನಿಗೆ ಬರೆಯುವುದೇನೆಂದರೆ—

ಕ್ಷೇಮ. ಸಾಂಪ್ರತ. ನಿನ್ನ ಓಲೆ ಮುಟ್ಟಿ ಮಹದಾನಂದವಾಯಿತು. ಎಲ್ಲವನ್ನೂ ವಿಚಾರಿಸಿ ನೋಡಿ ನಾವು ಅಭಿಪ್ರಾಯಪಡುವುದೇನೆಂದರೆ...

## ೫೩

ಉರಿಯ ಶಾಖ ಲೀಹಾರ್ಡಿಗೆ ತಗಲಿತು. ಮೈಸೂರಿನ ಕಾಸ್ಸಾಮೇಜರನಿಗೂ ಆ ಹೊಗೆಯಿಂದ ಉಸಿರು ಕಟ್ಟಿತು. ಮದರಾಸಿನ ಗವರ್ನರನೆಂದ : "ಇದೇನು ಮೋಡ ?" ಕಲಕತ್ತೆಯಿಂದ ಗವರ್ನರ್ ಜನರಲ್ ಕೇಳಿದ : "ಅಲ್ಲಿ ಏನು ನಡೆದಿದೆ ?"

ಅವರು ರೂಢಿಗೆ ತಂದ ಶಕೆಯ ಅನ್ವಯ : ಒಂದು ಸಾವಿರದ ಎಂಟುನೂರು ಮೂವತ್ತಾರನೆಯ ಇಸವಿ.

ಕಂಪೆನಿ ಸರಕಾರದಿಂದ ಆಜ್ಞಪ್ತನಾಗಿ ಸ್ಟೋಕ್ಸ್ ಎಂಬಾತ ಮೈಸೂರಿಗೆ ಬಂದು, ರಾಜ್ಯದ ಮುಖ್ಯಾಧಿಕಾರಿಯಾಗಿ ಕಾಸ್ಸಾಮೇಜರನಿಂದ ಅಧಿಕಾರ ವಹಿಸಿಕೊಂಡ.

ಸಡಿಲಗೊಂಡಿತ್ತಲ್ಲವೆ ರಾಜ್ಯಯಂತ್ರ ? ಸ್ಟೋಕ್ಸ್ ತಡಮಾಡಲಿಲ್ಲ. ಕೀಲುಗಳನ್ನೆಲ್ಲ ಬಿಗಿಗೊಳಿಸತೊಡಗಿದ.

ಗವರ್ನರನಿಗೆ ಆತ ಸಲಹೆ ಮಾಡಿದ :

"ಆದಷ್ಟು ಬೇಗನೆ ಆಡಳಿತದ ಕೇಂದ್ರವನ್ನು ಬೆಂಗಳೂರಿಗೆ ವರ್ಗಾಯಿಸುವುದು ಉತ್ತಮ. ಮೈಸೂರಿಗಿರುವ ಮಹತ್ವವನ್ನು ಕಡಿಮೆ ಮಾಡುವುದು ಒಳಿತು. ಆಗ ನಾಗರಹಾವಿನ ವಿಷದ ಹಲ್ಲುಗಳನ್ನೆಲ್ಲ ಕಿತ್ತಹಾಗಾಗುತದೆ."

ಕಾಸ್ಸಾಮೇಜರ್ ದುರ್ಬಲನಾಗಿದ್ದ ; ತನಗೂ ಆತನಿಗೂ ಹೋಲಿಕೆಯಿಲ್ಲ—ಎಂದು ಮೇಲಣವರಿಗೆ ತೋರಿಸಿಕೊಡುವ ಆತುರ ಸ್ಟೋಕ್ಸ್‌ಗೆ.

ಇನ್ನೊಂದು ನಿರ್ಧಾರವನ್ನು ಆತ ಕೈಕೊಂಡ. ರಾಜಕಾರ್ಯದಲ್ಲಿ ಆಸಕ್ತಿ ಇಲ್ಲದವನೆಂದೂ ಸಂಶಯಾಸ್ಪದ ಜನರೊಡನೆ ಸಂಪರ್ಕವಿರಿಸಿಕೊಂಡವನೆಂದೂ ಆರೋಪ ಹೊರಿಸಿ, ದಿವಾನ ವೆಂಕಟರಮಣಯ್ಯನನ್ನು ಅವನು ಉದ್ಯೋಗದಿಂದ ಕಿತ್ತುಹಾಕಿದ.

ಸುತ್ತಲಿನವರು ಆಡಿಕೊಂಡರು :

"ಇವನು ದರ್ಪಿಷ್ಠನಾದ ದೊರೆ."

ಲೀಹಾರ್ಡಿಗೆ ಸ್ಟೋಕ್ಸ್ ಬರೆದ :

"ನಾನು ಮೈಸೂರಿಗೆ ಬಂದು ಅಧಿಕಾರ ವಹಿಸಿಕೊಂಡಿರುವ ವಿಷಯ ನಿಮಗೆ ಗೊತ್ತಿದ್ದೀತು. ಅಪರಂಪಾರಸ್ವಾಮಿ ಮತ್ತು ಅವನ ಸಂಗಡಿಗರ ಹುಟ್ಟಡಗಿಸುವುದು ತಡವಾಗಬಾರದು. ಆ ದಿಶೆಯಲ್ಲಿ ನಮ್ಮಿಂದೇನಾದರೂ ಆಗಬೇಕಿದ್ದರೆ ತಿಳಿಸೋಣಾಗಲಿ."

ಆದರೆ, ಒಂದು ಸಂಗತಿ ಸ್ಟೋಕ್ಸ್‌ಗೆ ತಿಳಿದಿರಲಿಲ್ಲ. ಆ ಪತ್ರವನ್ನು ಆತ ಬರೆಯುತ್ತಿದ್ದ ಘಳಿಗೆಯಲ್ಲೇ ಅಪರಂಪಾರಸ್ವಾಮಿ ಮೈಸೂರು ನಗರದೊಳಕ್ಕೆ ಕಾಲಿರಿಸಿದ್ದ. ಜತೆಗೆ ಅಪ್ಪಯ್ಯ, ವೆಂಕಟಪ್ಪ ಮತ್ತಿತರ ಪ್ರಮುಖರೂ ಇದ್ದರು. ಅವರೆಲ್ಲ ಯಾತ್ರಿಕರಂತೆ ವೇಷ ಮರೆಸಿ ಧರ್ಮಛತ್ರದಲ್ಲಿ ತಂಗಿದ್ದರು.

ಕತ್ತಲಾದ ಬಳಿಕ ಅಪರಂಪಾರನನ್ನು ಬಸಪ್ಪಾಜಿ ಅರಸ ಮನೆಗೆ ಬರಮಾಡಿಕೊಂಡ.

ಗೌರವಾದರಗಳನ್ನು ತೋರುತ್ತ ವಿನೀತನಾಗಿ ಅವನೆಂದ :

"ವಿದ್ಯಮಾನಗಳನ್ನು ತಿಳಿದೆ, ಸ್ವಾಮಿಯವರೆ. ಮೆಚ್ಚುಗೆ ಸೂಚಿಸೋದು ಸರಿಯೋ ತಪ್ಪೋ ಅರಿಯೆ. ಆಗಬೇಕಾದಷ್ಟು ನನ್ನ ಕಡೆಯಿಂದ ಆಗಿಲ್ಲ ಅನ್ನೋದೊಂದೇ ನನ್ನ ಕೊರಗು."

ಅಪರಂಪಾರ ನುಡಿದ :

"ಅದನ್ನು ಇತ್ಯರ್ಥಪಡಿಸೋಣ ಅಂತಲೇ ಬಂದೆವು. ತೆನೆ ಭಾರದಿಂದ ಪೈರು ಬಾಗತೊಡಗಿದೆ. ಕುಯಿಲಿಗೆ ಬರುತೇನೆ ಅಂದಿದ್ದಿರಿ. ಇನ್ನು ಬಹಳ ಸಮಯ ಉಳಿದಿಲ್ಲ."

"ಕೊಟ್ಟ ಮಾತಿಗೆ ತಪ್ಪಲಾರೆ. ನನ್ನ ಧನಕನಕ ಸರ್ವಸ್ವ ಮೀಸಲು. ನಾನೂ ಬರುತ್ತೇನೆ. ಜತೆಯಲ್ಲೂ ಹಲವರನ್ನು ತರುತ್ತೇನೆ."

"ಇಲ್ಲಿ ಬಂಡಾಯವೇಳುವ ಮಾತು ?"

ಬಸಪ್ಪಾಜಿಯ ಉತ್ತರ ತಡವಾಯಿತು :

"ಮೀನ ಮೇಷ ಎಣಿಸುತಾ ಇದಾರೆ. ಕೊನೇ ನಿರ್ಧಾರ ಮಾಡಿಲ್ಲ."

"ಕೃಷ್ಣರಾಜ ಒಡೆಯರನ್ನು ನಾವು ಕಂಡರಾಗುತ್ತಿತ್ತು."

ಕ್ಷಣ ವಿಳಂಬಿಸಿ ಬಸಪ್ಪಾಜಿ ಉತ್ತರವಿತ್ತ :

"ಆಗಲಿ. ಅರಮನೆಗೆ ಹೋಗಿ ಮಾತನಾಡಿ ಬರುತ್ತೇನೆ. ಇದು ಗೋಪ್ಯವಾಗಿ ನಡೆಯಬೇಕಾದ ಸಂಗತಿ."

"ನಾವು ಛತ್ರಕ್ಕೆ ಹೋಗಿ ಇರತೇವೆ, ಆಗದೆ ?"

"ತಮಗೆ ಆಕ್ಷೇಪವಿಲ್ಲವಾದರೆ ತಾವು ಇಲ್ಲಿ ತಂಗಬಹುದು. ಅಂಗರಕ್ಷಕನಾಗಿ ತಮ್ಮ ಕಡೆಯ ಒಬ್ಬಾತ ಇರಲಿ. ಇಲ್ಲಿ ತಾವು ಸುರಕ್ಷಿತವಾಗಿರುತೀರಿ. ಆ ಜವಾಬ್ದಾರಿ ನನ್ನದು."

"ಆಗಲಿ. ಛತ್ರಕ್ಕೆ ಸುದ್ದಿ ಮುಟ್ಟಿಸಿಬಿಡಿ. ಶಂಕರಪ್ಪ ಇಲ್ಲೇ ಹೊರಗಿದಾನೆ. ನಮ್ಮ ಜತೆ ಉಳಿಯಲಿ."

ಸ್ವಲ್ಪ ಸಮಯ ಕಳೆದು ಅಪರಂಪಾರನೆಂದ :

"ಸಿದ್ಧಲಿಂಗ ಅಯ್ಯನನ್ನು ಎಲ್ಲಿ ಸೆರೆಯಲ್ಲಿಟ್ಟಿದಾರೆ, ಬಲ್ಲಿರಾ ?"

"ಶ್ರೀರಂಗಪಟ್ಟಣಕ್ಕೆ ಒಯ್ದರೂಂತ ಕಳೆದ ವರ್ಷ ಕೇಳಿದೆ."

"ಅವರಿಗೊಂದು ಸಂದೇಶ ತಲಪಿಸುವುದು ಸಾಧ್ಯವೇ ?"

"ಸಾಧ್ಯವಾದೀತು, ಅನ್ನಿ."

"ಬಿಡುಗಡೆಯ ದಿನ ದೂರವಿಲ್ಲ ಅಂತ ನಾವು ತಿಳಿಸಿದೇವೆ—ಎಂದರಾಯ್ತು."

ದೂತನಾಗಿ ಬಂದವನೊಬ್ಬನ ವಿಷಯದಲ್ಲಿ ಇಷ್ಟೊಂದು ಅನುಕಂಪ! ಬಸಪ್ಪಾಜಿಯ ಕಣ್ಣುಗಳು ಮಂಜಾದುವು.

"ಸ್ವತಃ ನಾನೇ ಪಟ್ಣಕ್ಕೆ ಹೋಗಿ ಸಂದೇಶ ಮುಟ್ಟೋ ಹಾಗೆ ಏರ್ಪಾಟುಮಾಡುತೇನೆ, ಸ್ವಾಮಿಯವರೆ."

## ೫೪

ರಾತ್ರೆಯ ಊಟದ ಹೊತ್ತು. ಅರಮನೆಯ ಕೈದೋಟದ ಕಡೆಗೆ ನಾಲ್ವರು ವ್ಯಕ್ತಿಗಳು ಚಲಿಸುತ್ತಿದ್ದುದು ಗಮನಕ್ಕೆ ಬಂದು, ಕಾವಲುಗಾರ ಧ್ವನಿ ಏರಿಸಿ ಕೇಳಿದ :

"ಯಾರದು ?"

ವ್ಯಕ್ತಿಗಳಲ್ಲೊಬ್ಬ—ಬಸಪ್ಪಾಜಿ ಅರಸು—ಗಡಸು ಸ್ವರದಲ್ಲಿ ಉತ್ತರವಿತ್ತ :

"ನಾವು ಕಣಪ್ಪ. ಮಹಾಸ್ವಾಮಿಯೋರು ಕರೆಸಿದಾರೆ."

ಕಾವಲುಗಾರನಿಗೆ ಅದು ಪರಿಚಿತ ಗಂಟಲು.

"ಯಾರೂಂತ ತಿಳೀದೆ ಕೇಳ್ದೆ. ತಪ್ಪಾಯ್ತು ನನ್ನೊಡ್ಯಾ" ಎಂದ ಆತ.

ಕೈದೋಟದೊಂದು ಮೂಲೆಯಲ್ಲಿ ಚಪ್ಪರದ ಕೆಳಗೆ ಕಲ್ಲು ಹಾಸುಗೆಯ ಮೇಲೆ ಕೃಷ್ಣರಾಜ ಒಡೆಯ ಕುಳಿತಿದ್ದ. ಕಾವಲುಗಾರ—ಬಸಪ್ಪಾಜಿಯವರ ಸಂಭಾಷಣೆ ಆತನಿಗೆ ಕೇಳಿಸಿತ್ತು.

ವ್ಯಕ್ತಿಗಳು ಹತ್ತಿರ ಬಂದಾಗ ಆತ ಎದ್ದು ನಿಂತ. ಏಳಬಾರದಿತ್ತೇನೋ ಎಂದು, ಅತ್ತಿತ್ತ ನಡೆಯತೊಡಗಿದ.

ಬಂಧುವಿನ ಸಲಿಗೆಯನ್ನು ಧ್ವನಿಯಲ್ಲಿ ತೋರುತ್ತ ಬಸಪ್ಪಾಜಿ ಅರಸನೆಂದ :

"ಬಹಳ ಹೊತ್ತಾಯ್ತ ಬಂದು ?"

ಕೃಷ್ಣರಾಜನೆಂದ :

"ಇಲ್ಲಪ್ಪ, ಇಲ್ಲಪ್ಪ. ನಾವು ಈ ದಾರಿಯಾಗಿ ಬಂದ್ವಿ ; ನೀವು ಆ ದಾರಿಯಾಗಿ ಬಂದಿರಿ."

"ಇವರೇ ಸ್ವಾಮಿಯವರು."

ಅಪರಂಪಾರ ತಾನು ಹೊದೆದಿದ್ದ ಕಂಬಳಿಯನ್ನು ತೆಗೆದು ಇನ್ನೊಂದು ವ್ಯಕ್ತಿಯ—ಅಪ್ಪಯ್ಯನ—ಕೈಗಿತ್ತ. ಕಾವಿಯ ನಿಲುವಂಗಿ ಕೃಷ್ಣರಾಜನಿಗೆ ಕಾಣಿಸಿತು.

ಆತನೆಂದ :

"ಶರಣು."

"ಶರಣು, ಒಡೆಯರು ಕೂತಿರೋಣಾಗಲಿ."

ಅಪ್ಪಯ್ಯ ವೆಂಕಟಪ್ಪರ ಪರಿಚಯವನ್ನೂ ಬಸಪ್ಪಾಜಿ ಮಾಡಿಕೊಟ್ಟ. ಅವರಿಬ್ಬರೂ ತುಸು ದೂರದಲ್ಲಿ ಕುಳಿತರು.

ನಾಲ್ವತ್ತರ ಗಡಿ ದಾಟಿದ್ದ ಅರಸ ಬಕ್ಕತಲೆಯಲ್ಲೆ ಬಂದಿದ್ದರೂ ರಾಜೋಚಿತವಾದ ಪೋಷಾಕನ್ನು ಧರಿಸಿದ್ದ. ಯಾರಾದರೂ ನೋಡುತ್ತಿರುವರೇನೋ ಎಂದು ಅವನ ದೃಷ್ಟಿ ಅತ್ತಿತ್ತ ಚಲಿಸುತ್ತಿತ್ತು.

ತಗ್ಗಿದ ಧ್ವನಿಯಾದರೂ ಮಾತಿನಲ್ಲಿ ಗಾಂಭೀರ್ಯ ತುಂಬಿ, ಅಪರಂಪಾರನೆಂದ :

"ಈ ಭೇಟಿಯ ಉದ್ದೇಶ ಮಹಾರಾಜರಿಗೆ ವೇದ್ಯವಿದ್ದೀತು.''

ಪೀಠಿಕೆ ಅನಗತ್ಯ ಎನ್ನುವಂತೆ ಅಸಹನೆ ತೋರುತ್ತ ಕೃಷ್ಣರಾಜ ಒಡೆಯನೆಂದ :

"ಬಸಪ್ಪಾಜಿ ಹೇಳಿದಾರೆ. ನಮ್ಮಿಂದೇನಾಗಬೇಕು, ತಿಳಿಸಿಬಿಡಿ.''

ಅಪರಂಪಾರ ಸಾವಧಾನವಾಗಿ ಅಂದ :

"ಲೋಕದಲ್ಲಿ ಜನ್ಮತಾಳುವವರೆಲ್ಲ ಮಹಾಪುರುಷರಲ್ಲ. ಆದರೂ ಹುಟ್ಟಿದ ಪ್ರತಿಯೊಬ್ಬನೂ ದೈವತ್ವ ಪ್ರಾಪ್ತಿಗೆ ಪ್ರಯತ್ನಿಸಬೇಕು. ಸಾಧ್ಯವಾಗತದೋ ಇಲ್ಲವೋ ಅನ್ನೋದು ಬೇರೆ ಮಾತು. ನಾವು ಒಂದಷ್ಟು ಜನ ಆ ದಿಕ್ಕಿನಲ್ಲಿ ಅಲ್ಪ ಪ್ರಯತ್ನ ಮಾಡತಾ ಇದ್ದೇವೆ. ಅದೇನೂಂತ ತಮಗೆ ಗೊತ್ತಿದೆ. ಮೈಸೂರಿಗೆ ಅನ್ಯಾಯವಾದಾಗಲೇ ನಾವು ಅಂದು ಕೊಂಡೆವು. ಕೊಡಗಿಗೂ ಈ ದುರ್ಗತಿ ಬೇಗ ಪ್ರಾಪ್ತವಾಗತದೆ, ಅಂತ. ಹಾಗೇ ಆಯ್ತು. ಡೊಂಕಾದದ್ದನ್ನ ಸರಿಪಡಿಸೋಕೆ ಈಗ ನೋಡತಿದೇವೆ.''

ಕೃಷ್ಣರಾಜ ನಡುವೆ ಬಾಯಿ ಹಾಕಿದ :

"ಬಸಪ್ಪಾಜಿ ಎಲ್ಲ ವಿಷಯ ಬಲ್ಲರು. ನಮ್ಮ ಬೊಕ್ಕಸ ಈಗ ಬರಿದಾಗಿದೆ. ಕುಂಪಣಿಯವರು ಕೊಡುವ ಹಣ ಅರಮನೆಯ ವೆಚ್ಚಕ್ಕೇ ಸಾಲದು. ಆದರೂ ನಮ್ಮ ಕೈಲಾದ ಸಹಾಯ ನಾವು ಮಾಡುತೇವೆ.''

ಉಗುಳು ನುಂಗಿ ಅಪರಂಪಾರನೆಂದ :

"ಹಣದ ಮಾತಲ್ಲ. ತಮಗೆ ಅನ್ಯಾಯ ಮಾಡಿದರೂಂತ ಬಹಿರಂಗವಾಗಿ ತಾವು ಸಾರಿದರೆ ಜನ ರೊಚ್ಚಿಗೇಳತಾರೆ. ತಮ್ಮ ಕಡೆಯ ಧೀರರು ಒಬ್ಬಿಬ್ಬರು ದಾರಿ ತೋರಿದರೆ ಇಂಗ್ರೇಜಿಯವರಿಗೆ ಪ್ರಜೆಗಳೇ ಬುದ್ಧಿ ಕಲಿಸತಾರೆ."

''ಬಂಡಾಯವೇಳಬೇಕು ಅಂತಲೆ ನೀವು ಹೇಳೋದು ?''

''ಅದು ಸಾಧ್ಯವಾದರೆ ನಾವು ಧನ್ಯರಾಗುತೇವೆ.''

''ವಿಚಾರಮಾಡಿ ನೋಡುತೇವೆ. ಇಕ್ಕೇರಿಯ ಸೂರಪ್ಪ ನಾಯಕರೂ ನಿಮ್ಮ ಜತೆ ಇದಾರಂತೆ.''

''ಹೌದು ; ಮೈಸೂರು, ಇಕ್ಕೇರಿ, ಕೊಡಗುಗಳು ಸ್ವತಂತ್ರ ರಾಜ್ಯಗಳಾಗಿ ಪುನಃ ಉದಯಿಸೋದನ್ನು ನೋಡಿದರ ನಮ್ಮ ಜನ್ಮ ಸಾರ್ಥಕವಾಗತದೆ.''

ತುಸು ಅನುಮಾನಿಸಿ ಕೃಷ್ಣರಾಜನೆಂದ :

''ಒಂದು ಮಾತು ನಾವು ಹೇಳಿಬಿಡುವುದು ಮೇಲು."

''ತಿಳಿಸೋಣಾಗಲಿ.''

''ಇಕ್ಕೇರಿ ಮೈಸೂರಿನ ಒಂದು ಭಾಗ.''

''ಹೈದರ್ ಗೆದ್ದಮೇಲೆ ಹಾಗಾಯ್ತು. ಈಗಂತೂ ಇಕ್ಕೇರಿ, ಮೈಸೂರುಗಳೆರಡೂ ಇಂಗ್ರೇಜಿಯವರ ವಶದಲ್ಲಿವೆ. ಮೈಸೂರು, ಇಕ್ಕೇರಿಗಳೆರಡೂ ಸ್ವತಂತ್ರವಾದರೆ ಅನ್ಯೋನ್ಯ ಮೈತ್ರಿಯಿಂದ ಇರಬಹುದಲ್ಲ ?"

"ವಿಚಾರಮಾಡಿ ಹೇಳತೇವೆ."

"ಅಪರಾತ್ರಿಯಲ್ಲಿ ಹೀಗೆ ಕರೆಸಿ ತೊಂದರೆ ಕೊಟ್ಟೆವು."

"ಪರವಾಗಿಲ್ಲ. ನಮಗೆ ಅಂಥ ಕೆಲಸವಾದರೂ ಏನಿದೆ ? ಶಿವಮೊಗ್ಗಿಯಿಂದ ದಶಾವತಾರ

ಮೇಳದವರನ್ನು ಕರೆಸಿದ್ವಿ. ಇವತ್ತು ಆಡಿಸೋಣ ಅಂತಿದ್ವಿ. ನಾಳೆಗೆ ಇಟ್ಟುಕೊಂಡರಾಗದೆ ಅಂದರು ಬಸಪ್ಪಾಜಿ. ಒಪ್ಪಿದ್ವಿ. ಇವತ್ತು ಈ ಕಾರ್ಯಕ್ರಮವಾಯ್ತು. ನಾಳೆ ದಶಾವತಾರ ಬಯಲಾಟ."

ಏಳಬೇಕು ಎನಿಸಿತು ಅಪರಂಪಾರನಿಗೆ. ತಾನಾಗಿ ಮೊದಲು ಏಳುವುದು ಅಪಚಾರ ವಾಗುವುದೆಂದು ಸುಮ್ಮನಿದ್ದ. ಬಸಪ್ಪಾಜಿ ಸೂಕ್ಷ್ಮವನ್ನು ಗ್ರಹಿಸಿ, "ಇನ್ನು ಏಳೋಣ, ಆಗದೆ ?" ಎಂದ.

ಕೃಷ್ಣರಾಜ ಒಡೆಯನೆದ್ದ. ಉಳಿದವರೂ ಎದ್ದರು. ವಂದನೆ ಪ್ರತಿವಂದನೆಗಳಾದುವು.

ಅಪರಂಪಾರ ಕಂಬಳಿ ಹೊದೆದುಕೊಂಡ.

ನಾಲ್ವರು ವ್ಯಕ್ತಿಗಳು ಪುನಃ ಕೈದೋಟದಿಂದ ಹೊರಬಿದ್ದರು...

...ದಾರಿಯಲ್ಲಿ ಬಸಪ್ಪಾಜಿ ಕೇಳಿದ :

"ಸ್ವಾಮಿಯವರಿಗೆ ನಿರಾಸೆಯಾಯ್ತೆ ?"

ಅಪರಂಪಾರನೆಂದ :

"ಇಲ್ಲ. ಕಳೆದುಹೋದ ಸ್ವಾತಂತ್ರ್ಯವನ್ನ ಪುನಃ ಗಳಿಸೋದು ಎಷ್ಟು ಕಠಿಣ ಅನ್ನೋದು ಈಗ ಹೆಚ್ಚು ಮಂದಟ್ಟಾಗಿದೆ."

...ಮುಂದೆ ಒಂದೇ ದಿನದ ಅವಧಿಯಲ್ಲಿ ಬೇರೊಂದು ಅನುಭವ ಅಪರಂಪಾರನನ್ನು ಅಣಕಿಸಿತು.

ಕೈದೋಟದಲ್ಲಿ ಭೇಟಿ ನಡೆದ ಮಾರನೆಯ ರಾತ್ರೆ, ಧರ್ಮಛತ್ರದಲ್ಲಿ ಮಲ್ಲಪ್ಪಗೌಡ ಓಡುತ್ತೋಡುತ್ತ ಬಸಪ್ಪಾಜಿ ಅರಸನ ಮನೆಗೆ ಬಂದ. ಶಂಕರಪ್ಪನೂ ಅವನೂ ಒಳ ಕೊಠಡಿಯ ಬಾಗಿಲು ಬಡಿದರು. ಅಪರಂಪಾರನಾಗಲೀ ಬಸಪ್ಪಾಜಿಯಾಗಲೀ ನಿದ್ರಿ ಸಿರಲಿಲ್ಲ.

ಏದುಸಿರು ಬಿಡುತ್ತ ಮಲ್ಲಪ್ಪಗೌಡನೆಂದ :

"ಇಂಗ್ರೇಜಿ ಸಿಪಾಯರು ಛತ್ರವನ್ನ ಸುತ್ತುವರಿದವರೆ. ನಾನು ಹೊರಗೆ ಮರದ ಕೆಳಗೆ ಕಾವಲು ಕುಳಿತಿದ್ದೆ."

ಅಪರಂಪಾರ ಕೇಳಿದ :

"ಛತ್ರದೊಳಗೆ ಯಾರಿದಾರೆ ?"

"ನಮ್ಮವರು ಬಯಲಾಟ ನೋಡೋಕೆ ಓದ ಒಸಿ ಒತ್ನಲ್ಲೇ ಇವರು ಬಂದ್ರು. ನಾಟಕ ಇರದೇ ಓಗಿದ್ರೆ ಎಲ್ರೂ ಸಿಕ್ಹಾಕೊಳ್ತಿದ್ವಿ."

"ಈಗ ? ಅಪ್ಪಯ್ಯ—ವೆಂಕಟಪ್ಪನವರಿಗೆಲ್ಲಾ ತಿಳಿಸಿದಿಯಾ ?"

"ಹ್ಞು. ಅವರೆಲ್ಲಾ ಕೋಟೆ ಹೊರಗೆ ಕಾದ್ಕೊಂಡು ನಿಂತವರೆ. ಏನು ಮಾಡ್ಬೇಕು, ಕೇಳ್ಕೊಂಡ್ಬಾ—ಅಂದ್ರು."

"ಛತ್ರದೊಳಗೆ ಏನಾದರೂ ಸಾಮಾನಿದೆಯಾ ?"

"ಚೂರುಪಾರು ಬಟ್ಟೆಗಂಟು. ಕಂಬಳಿಯನಕಾ ಒದ್ಕೊಂಡೇ ಇದ್ರು. ಬಂದೂಕಗಳನ್ನೂವೆ ತಕೊಂಡೋಗಿದ್ರು."

ಬಸಪ್ಪಾಜಿ ಕಲ್ಲಿನ ಕಂಬದಂತೆ ನಿಂತಿದ್ದ. ಅವನ ಗಂಟಲು ಆರಿಹೋಗಿತ್ತು.

ಅಪರಂಪಾರನೆಂದ :

"ನಾವೀಗ ಹೊರಡತೇವೆ, ಬಸಪ್ಪಾಜಿಯವರೇ. ಮುಂದಿನ ತಾಣದಿಂದ ನಿಮಗೆ ಬರೀ ತೇವೆ."

ಕಷ್ಟಪಟ್ಟು ಬಸಪ್ಪಾಜಿಯೆಂದ :

"ತಮ್ಮನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲಾರೆ. ತಾವು ದೇವತಾ ಮನುಷ್ಯ. ನಾವು ಸಾಮಾನ್ಯ ಮಾನವರು."

"ಅರಮನೆಯಿಂದ ಇಂಗ್ರೇಜಿಯವರಿಗೆ ಸುದ್ದಿ ಹೋಯ್ತೆಂದು ನಿಮಗೆ ವ್ಯಥೆಯೆ ?"

"ಆದದ್ದಾಯಿತಲ್ಲ. ಇನ್ನು ಚಿಂತಿಸಿ ಏನು ಫಲ ?"

"ನಿಮ್ಮ ರಕ್ಷಣೆ ಮಾಡಿಕೊಳ್ಳಿ. ಮುಂದೆ ಎತ್ತ ಏನೂಂತ ಬೇಗನೆ ತಿಳಿಸತೇವೆ. ಬರಲೆ ಬಸಪ್ಪಾಜಿ ಅರಸರೆ ?"

ಬಸಪ್ಪಾಜಿಯ ಕಣ್ಣುಗಳು ಹನಿಗೂಡಿದುವು. ಹೊರಕ್ಕೆ ಓಡಿ ಮನೆಯ ಸಮೀಪ ದಲ್ಲೆಲ್ಲೂ ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಬಂದು, ತಲೆಬಾಗಿಲವರೆಗೂ ಅಪರಂಪಾರನನ್ನು ಹಿಂಬಾಲಿಸುತ್ತ, ಹೆಜ್ಜೆ ಹೆಜ್ಜೆಗೂ ಆತನೆಂದ :

"ಇನ್ನು ತಮ್ಮ ಭೇಟಿ ಯಾವಾಗಲೊ ? ಯಾವಾಗಲೊ ?"

**೫೫**

ಕಾಜಗೋಡು ಅಪರಂಪಾರಸ್ವಾಮಿಯ ಮುಖ್ಯ ಠಾಣ್ಯವಾಯಿತು. ಅಲ್ಲಿಂದ ಆತ ತನ್ನ ಹಿಂಬಾಲಕರಿಗೆ ನಿರೂಪಗಳನ್ನು ಹೊರಡಿಸಿದ.

ಆಂಗ್ಲ ಆಡಳಿತಗಾರರನ್ನು ಕೆಣಕುವ ಕೆಲಸ ಆಗಲೇ ಆರಂಭವಾಗಿತ್ತು.

ಒಂದು ನಿರೂಪದಲ್ಲಿ ಅಪರಂಪಾರನೆಂದ :

"ನಮ್ಮ ತಂಡಗಳು ಹೆದ್ದಾರಿಗಳಲ್ಲೂ ಘಾಟಿ ಮಾರ್ಗಗಳಲ್ಲೂ ಗಸ್ತಿ ತಿರುಗಬೇಕು. ಎಲ್ಲ ಟಪಾಲುಗಳನ್ನೂ ತಡೆಯಬೇಕು. ಒಂದೇ ಒಂದು ಕಾಗದವಾದರೂ ಆಚೆ ಈಚೆ ಹೋಗ ತಕ್ಕದ್ದಲ್ಲ. ಹಾಗೆಯೇ ಇರಸಾಲುಗಳನ್ನು ತಡೆಯಬೇಕು. ಬಿಡಿಗಾಸನ್ನೂ ಅಪವ್ಯಯ ಮಾಡದೆ ಹಣವನ್ನೆಲ್ಲ ದಳಗಳ ಮುಖ್ಯಸ್ಥರು ಜೋಪಾನವಾಗಿಡತಕ್ಕದ್ದು."

ಇನ್ನೊಂದರಲ್ಲಿ ಆತ ಆದೇಶವಿತ್ತ :

ಮಹಾಸಂಭವ ಒಂದರಿಂದ ಸದ್ಯದಲ್ಲೇ ಕೊಡಗು ತಲ್ಲಣಿಸಿ ಹೋಗತದೆ. ಇಲ್ಲಿ ಬೇರೂ ರಿರುವ ಇಂಗ್ರೇಜಿ ಸರಕಾರ ನಶಿಸಿಹೋಗತದೆ. ಆದರೆ ಈ ಸಂಘರ್ಷದಲ್ಲಿ ಇತ್ತಂಡಗಳಿಗೂ ಅಪಾರ ನಷ್ಟ ಉಂಟಾಗತದೆ. ಅನೇಕರು ಸಾವುನೋವುಗಳಿಗೆ ಈಡಾಗತಾರೆ. ಲಡಾಯಿಯಲ್ಲಿ ಇಂಗ್ರೇಜಿಯರ ವಿರುದ್ಧ ನಮ್ಮನ್ನು ಸೇರಬಯಸುವವರೆಲ್ಲ ಇದನ್ನು ನೆನಪಿಡತಕ್ಕದ್ದು. ಇದು ವಾಸ್ತವ ರಣರಂಗದಲ್ಲಿ ನಡೆಯುವ ಪಡೆಕ್ಕಳಿ. ಇದರಲ್ಲಿ ನಾವು ಗೆಲ್ಲಬೇಕು, ಗೆದ್ದು, ವೈರಿಯ ಚಾವುಪರೆಯನ್ನು—ಶೋಕವಾದ್ಯವನ್ನು —ನಾವು ಕೇಳಬೇಕು."

ಮತ್ತೊಂದರಲ್ಲಿ ಆತನೆಂದ :

"ಈ ನಿರೂಪವನ್ನು ಓದುವವರಿಗೆಲ್ಲ ನಾವು ಹೇಳುತೇವೆ : ಏಕೆ ಚಿಂತೆಯನು ಮಾಡುವೆ ಮೂಢ? ವಿಶ್ವನಾಥನಿಹ ಯೋಚನೆ ಬೇಡ. ಆದ್ದರಿಂದ ಏಳಿರಿ! ಅಣಿಯಾಗಿರಿ! ಹೋರಾಡಿರಿ! ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು ? ಮರ್ಕಟನ ಕೈಯಲ್ಲಿ ಮಾಣಿಕ್ಯ ವಿದ್ದು ಫಲವೇನು ? ಆ ಕಾರಣದಿಂದ, ಮನುಷ್ಯ ಜೀವಿಗಳಾಗಿರಿ ! ಚಂದ್ರಾಯುಧ

ಪ್ರಯೋಗಿಸಿರಿ ! ನಿಮ್ಮ ವೀರಮುಖ ಕಾಂತಿಯನ್ನು ದರ್ಪಣದಲ್ಲಿ ನೋಡಿರಿ ! ಸ್ವಾತಂತ್ರ್ಯವೆಂಬ ಮಾಣಿಕ್ಯದ ಬೆಲೆಯನ್ನು ಅರಿಯಿರಿ !"

ಈ ಕರೆಗಳಿಗೆ ಕೊಡಗಿನ ಪ್ರಜೆಗಳು ಓಗೊಟ್ಟರು.

ಮಾಸಗಳು ಉರುಳಿದುವು. ಪ್ರಜಾವಿರೋಧದ ಪ್ರಖರತೆ ಹೆಚ್ಚುತ್ತ ನಡೆಯಿತು.

ಅಭಿಯೋಗದ ದಿನ ಇನ್ನು ದೂರವಿರದು—ಎಂದು ಎಲ್ಲರೂ ಅಂದುಕೊಂಡರು.

ಒಂದು ದಿನ ದೀರ್ಘ ಶಿವಧ್ಯಾನದ ಬಳಿಕ ಅಪರಂಪಾರ ಕೇಳಿದ :

"ಈ ದಿನ ಯಾವ ವಾರ ? ಯಾವ ತಿಥಿ ?"

ಉತ್ತರ ಪಡೆದ ಬಳಿಕ ಕೈಬೆರಳುಗಳಲ್ಲಿ ಎಣಿಕೆ ಹಾಕಿ ಆತನೆಂದ.

"ದಂಡಯಾತ್ರೆಗೆ ದಿನ ಗೊತ್ತುಮಾಡಿದ್ದೇನೆ. ಓಲೆಕಾರರನ್ನು ಕರೆಯಿರಿ !"

ಒಬ್ಬ ಪುಟ್ಟಬಸವನಲ್ಲಿಗೆ, ಇನ್ನೊಬ್ಬ ಸೂರಪ್ಪನಾಯಕನಲ್ಲಿಗೆ, ಮತ್ತೊಬ್ಬ ವೇಲೂರಿಗೆ ಚಿಕವೀರರಾಜನಲ್ಲಿಗೆ, ನಾಲ್ಕನೆಯವನು ಬಸಪ್ಪಾಜಿ ಅರಸನಲ್ಲಿಗೆ, ಮತ್ತೆ ಹಲವರು ಬೇರೆ ಬೇರೆ ನಾಡುಗಳ ಪ್ರಮುಖರಲ್ಲಿಗೆ, ದಳನಾಯಕರಲ್ಲಿಗೆ, ಅಶ್ವಾರೋಹಿಗಳಾಗಿ ದಂಡಯಾತ್ರೆ ಆರಂಭವಾಗುವ ದಿನ ತಿಳಿಸಲೆಂದು ಧಾವಿಸಿದರು.

ಅತ್ಯಂತ ಸಂಕ್ಷಿಪ್ತವಾಗಿತ್ತು ಆ ಸಂದೇಶ. ಅದರಲ್ಲಿದ್ದುದಿಷ್ಟೆ :

"ಅಕ್ಷತೃತೀಯೆ—"

ಎಲ್ಲೆಡೆಗಳಲ್ಲೂ ಆ ಪದ ಮೊಳಗಿ ಮಾರ್ಮೊಳಗಿತು :

"ಅಕ್ಷತೃತೀಯೆ, ಅಕ್ಷತೃತೀಯೆ."

## ೫೭

ಕಾಜಗೋಡಿನಲ್ಲಿ ಒಂದು ಸಾವಿರ ಯೋಧರು ನೆರೆದರು. ಕೆಲವರು ಅಶ್ವಾರೋಹಿಗಳು ; ಉಳಿದವರೆಲ್ಲ ಪದಾತಿಗಳು. ಬಂದೂಕುಗಳು ಕೆಲವರಲ್ಲಿ ; ಖಡ್ಗ ಢಾಲುಗಳು ಬೇರೆ ಕೆಲವರಲ್ಲಿ ; ಈಟಿ ಭರ್ಚಿಗಳು ಇನ್ನಿತರರಲ್ಲಿ ; ಬಿಲ್ಲು ಬಾಣಗಳು ನಿಷ್ಣಾತ ಬೇಡರ ವಶದಲ್ಲಿ.

ಅಕ್ಷತೃತೀಯೆಗೆ ಹಿಂದಿನ ಇರುಳು ಅಪ್ಪಯ್ಯನ ಮನೆಯ ಒಂದು ಕೊಠಡಿಯಲ್ಲಿ. ಅಪರಂಪಾರಸ್ವಾಮಿಯೂ ಅಪ್ಪಯ್ಯನೂ ದಂಡಯಾತ್ರೆಯ ವೇಗ ದಾರಿಗಳನ್ನು ಇತ್ಯರ್ಥ ಪಡಿಸಿದರು.

ಕಾಜಗೋಡಿನಿಂದ ನಸುಕಿನಲ್ಲಿ ಹೊರಟು ಹಾರಂಗಿಯತ್ತ ಸಾಗಬೇಕು. ಮಧ್ಯಾಹ್ನದ ಊಟ ವಿಶ್ರಾಂತಿ ಗೌಡಳ್ಳಿಯಲ್ಲಿ. ಹಾರಂಗಿಯಲ್ಲಿ ವೆಂಕಟಪ್ಪನ ನೇತೃತ್ವದಲ್ಲಿರುವ ದಂಡನ್ನು ಕೂಡಿಕೊಳ್ಳುವುದು. ಅಲ್ಲಿಂದ ಮಡಕೇರಿಗೆ ಬೇರೆ ಬೇರೆ ಕಡೆಗಳಿಂದ ಬಂದ ಯೋಧರೆಲ್ಲ ದಾರಿಯಲ್ಲಿ ಸೇನೆಯನ್ನು ಸೇರಿಕೊಳ್ಳಬೇಕು. ಘಟ್ಟದ ಕೆಳಗಿನ ಕೆಲಸ ಮುಗಿಸಿ ಪುಟ್ಟಬಸವನೂ ಸಂಗಡಿಗರೂ ಮಡಕೇರಿಗೆ ಬರಬೇಕು. ನಿರ್ಣಾಯಕ ಕಾಳಗ ರಾಜಧಾನಿಯಲ್ಲಿ.

ಅಪರಂಪಾರನೆಂದ :

"ಗೌಡಳ್ಳಿಯ ದಾರಿಯಲ್ಲಿ ಕೊಳ ಪುಷ್ಕರಿಣಿ ಯಾವುದೂ ಇಲ್ಲವಾ ? ನಾವೊಂದಿಷ್ಟು ಸ್ನಾನ ಶಿವಪೂಜೆ ಮುಗಿಸಿ ಶಿಬಿರವನ್ನು ಸೇರಬಹುದು."

ಅಪ್ಪಯ್ಯನೆಂದ :

"ಅದೇ. ಗೌಡಳ್ಳಿಗೆ ಒಂದು ಹರದಾರಿ ಈಚೆಗೆ ಬಲಕ್ಕೆ ತಿರುಗಿದರೆ ಸುಮಾರು ಅರ್ಧ ಹರದಾರಿ ದೂರದಲ್ಲಿ ಒಂದು ಪುಷ್ಕರಿಣಿ ಸಿಗತದೆ."

"ಆದರೆ ನಮ್ಮ ಶಂಕರಪ್ಪಗೆ ದಾರಿ ತಿಳೀತದೊ ಇಲ್ಲವೊ ?"

"ಈ ಕಡೆಯುವ ಒಬ್ಬನನ್ನೂ ಜತೆ ಮಾಡಿದರಾಯ್ತು."

ಕೊಠಡಿಯ ಹೊರಗೆ ಒಬ್ಬ ಅತ್ತಿತ್ತ ಸುಳಿದಾಡುತ್ತಿದ್ದ. ಆತನನ್ನು ಉದ್ದೇಶಿಸಿ ಅಪ್ಪಯ್ಯನೆಂದ :

"ಏಯ್ ! ಇಲ್ಲಿ ಬಾ."

ಆತ ಬಂದ.

"ಹೊರಗೇನು ಮಾಡ್ತಿದ್ದೆ ?"

"ಸುಮ್ಕೆ ನಿಂತಿದ್ದೆ."

"ನಿನ್ನ ಹೆಸರೇನು ?"

"ಚಾವಡಿಕಾರ ಮಂಜಣ್ಣ."

"ಯಾವೂರು ?"

"ಹಾರಂಗಿ ಹತ್ತಿರ ಹಳ್ಳಿ."

"ನಿನಗೆ ಗೌಡಳ್ಳಿ ದಾರಿ ಗೊತ್ತಾ ?"

"ಓ."

"ಹಳ್ಳಿ ಈಚೆಗೆ ಬಲಕ್ಕೆ ಕೆರೆ ಸಿಗುತ್ತಲ್ಲ—"

"ಗೊತ್ತು ಬುಡಿ."

"ಕುದುರೆ ಸವಾರಿ ಕಲ್ತಿದೀಯಾ ?"

"ಓ."

"ನಾಳೆ ನಸುಕಿಲಿ ದಂಡು ಹೊರಡ್ತದಲ್ಲ, ಆಗ ನೀನು ಸ್ವಾಮಿಯೋರ ಜತೆ ಇರಬೇಕು. ಅವರಿಗೆ ಕೆರೆ ತೋರಿಸಬೇಕು."

"ಹ್ಞು."

"ಮೈಗಾವಲಿನ ಶಂಕರಪ್ಪನೂ ಜತೆಗಿರತಾನೆ."

"ಆಗಲಿ ಬುದ್ಧಿ."

"ಹೋಗು. ಒಸಿ ಹೊತ್ತು ಮಲಕೋ."

ಅಪರಂಪಾರನೆಂದ :

"ಎಲ್ಲ ಇತ್ಯರ್ಥವಾಯಿತಲ್ಲ ? ಮನಸ್ಸಿಗೆ ನಿದ್ದೆ ಬೇಕಾಗಿಲ್ಲ. ಆದರೆ ದೇಹಕ್ಕೆ ಬೇಕು. ತುಸು ಅಡ್ಡಾಗುತೇವೆ."

ಇರುಳು ಕಳೆಯಿತು. ಕೋಳಿಯ ಕೂಗಿಗೆ ತುತೂರಿಯ ನಿನಾದ ಶ್ರುತಿ ಹಿಡಿಯಿತು. ಸ್ವಲ್ಪವೇ ಹೊತ್ತಿನಲ್ಲಿ ಯೋಧರು ಅಣಿಯಾದರು.

ಅವರನ್ನು "ಬಾಂಧವರೇ" ಎಂದು ಸಂಬೋಧಿಸಿ, ಅಪರಂಪಾರ ನುಡಿದ :

"ನಮ್ಮದು ಸತ್ಯದ ನ್ಯಾಯದ ದಂಡು. ಅಸತ್ಯದ ಅನ್ಯಾಯದ ಕೇತುಪಟವನ್ನು ಧೂಳಿ ದೂಸರ ಮಾಡೋದಕ್ಕೆ ನಾವು ಹೊರಟಿದೇವೆ. ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚಿಯಂತೆ, ಕಂಗಳ

ಮರೆಯಲಡಗಿರ್ದ ಬೆಳಗಿನಂತೆ, ವೈರಿ ಶಿಬಿರದ ಮೇಲೆ ನಮ್ಮ ದಂಡು ಎರಗುತದೆ. ಈಗ ನಾವು ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯುತೇವೆ. ಮುಂದೆ ಬಿರುಗಾಳಿ ಬೀಸಿ ಮರ ಮುರಿವಂತೆ ಮುತ್ತುತೇವೆ. ಕಪಟಿಯಾದ ಧೂರ್ತನಾದ ವೈರಿ ನಮ್ಮ ಮನೆ ಮಠಗಳ ಮೇಲೆ ಈಗ ಸ್ವಾರಿ ಮಾಡುತಿದಾನೆ. ಆ ಆಕ್ರಮಣಕಾರನನ್ನು ನಾವು ಸದೆ ಬಡೆಯಬೇಕು. ನಮ್ಮ ಪಕ್ಷದಲ್ಲಿ ಮಹಾದೇವನಿದ್ದಾನೆ. ಅವರ ಪಕ್ಷದಲ್ಲಿ ಸೈತಾನ ಮಾತ್ರ. ಇದು ಸುರಾಸುರರೊಳಗಿನ ಯುದ್ಧ. ನಾವು ಗೆಲ್ಲುತೇವೆ. ಅಸುರರು ಮಣ್ಣು ಮುಕ್ಕು ತಾರೆ. ಎಲ್ಲರೂ ಜಯಘೋಷಮಾಡಿ. ಹರಹರ ಮಹಾದೇವ!"

"ಹರಹರ ಮಹಾದೇವ!"

ಸಹಸ್ರ ಕಂಠಗಳಿಂದ ಹೊರಟ ಘೋಷ ಗಗನವನ್ನು ಮುಟ್ಟಿತು.

ಸ್ವಾಮಿಯನ್ನು ಹೋರಾಟದ ಸಂಕೇತವನ್ನಾಗಿ ಮಾಡಿ ಯೋಧರೆಂದರು:

"ಅಪರಂಪಾರಸ್ವಾಮಿಯವರಿಗೆ ಜಯವಾಗಲಿ!"

ಅಪರಂಪಾರನೆಂದ:

"ಹೇಳಿರಿ! ಚಿಕವೀರರಾಜೇಂದ್ರ ಒಡೆಯರಿಗೆ ಜಯವಾಗಲಿ."

ಸಹಸ್ರ ಕಂಠಗಳು ಆ ಘೋಷವನ್ನು ಪುನರುಚ್ಚರಿಸಿದುವು.

## ೫೭

ಅಶ್ವಾರೂಢ ಅಪ್ಪಯ್ಯನ ನಾಯಕತ್ವದಲ್ಲಿ ದಂಡು ಧೂಳೆಬ್ಬಿಸುತ್ತ ಸಾಗಿತು.

ಅದರ ಹಿಂದೆ ತುಸು ಅಂತರದಲ್ಲಿ ಮೂರು ಕುದುರೆಗಳು ನಡೆದುವು. ಒಂದರ ಮೇಲೆ ಅಪರಂಪಾರನಿದ್ದ. ಅವನ ಇಕ್ಕೆಲಗಳಲ್ಲಿ ಶಂಕರಪ್ಪ ಮತ್ತು ಮಂಜಣ್ಣನಿದ್ದರು.

ಬಿರುಗಣ್ಣಿನಿಂದ ನೇರ ನೋಡುತ್ತ, ಕುದುರೆಯ ಮೇಲೆ ನೆಟ್ಟಗೆ ಮಿಸುಕದೆ ಕುಳಿತಿದ್ದ ಮಂಜಣ್ಣ ಶಂಕರಪ್ಪನಿಗೆ ವಿಚಿತ್ರವಾಗಿ ಕಂಡ. ಹಾರಂಗಿಯನ್ನು ಕುರಿತು ಅಪರಂಪಾರ ಕೇಳಿದ ಪ್ರಶ್ನೆಗಳಿಗೆಲ್ಲ ಮಂಜಣ್ಣ ಚುಟುಕು ಉತ್ತರಗಳನ್ನಿತ್ತ.

'ಬಹಳ ಮಿತಭಾಷಿ ಈತ. ಸಮರ್ಥನಂತೆ ಕಾಣುತಿದಾನೆ' ಎಂದುಕೊಂಡ ಅಪರಂಪಾರ.

ಬಿಸಿಲು ನೆತ್ತಿಗೇರಿತು. ದಂಡು ಬಹಳ ಮುಂದೆ ಸಾಗಿತು.

ಮಂಜಣ್ಣನೆಂದ:

"ಅಕಾ, ಓ ಅಲ್ಲಿ ಬಲಕ್ಕೆ ಕಿರುದಾರಿ ಕಾಣತದಲ್ಲ ಅಲ್ಲಿ ನಾವು ಹೊರಳಬೇಕು."

"ಅಪ್ಪಯ್ಯನವರು ಹೇಳಿದ ಕೆರೆಗೆ ಆ ದಾರಿ ಹೋಗತದೆ. ಅಲ್ಲವಾ?" ಎಂದು ಶಂಕರಪ್ಪ ಕೇಳಿದ.

"ಹ್ಞ."

ಮಂಜಣ್ಣ ಮೊದಲು ತಿರುಗಿದ. ಅವನ ಹಿಂದೆ ಅಪರಂಪಾರನ ಕುದುರೆ. ಕೊನೆಯ ದಾಗಿ ಶಂಕರಪ್ಪ.

"ಎಂಥ ಹಸಿರು! ಎಷ್ಟೊಂದು ಕಾಡು ಹೂಗಳು! ಸ್ವಾಗತ ಸ್ವಾಗತ ಅಂತ ಒಂದೇ ಸಮನೆ ಉಲಿಯುತಿವೆಯಲ್ಲ ಹಕ್ಕಿಗಳು!" ಎಂದ, ಅಪರಂಪಾರಸ್ವಾಮಿ.

"ದಾರಿಯಲ್ಲಿ ಧೂಳಿಲ್ಲ. ಬಹಳಷ್ಟು ಜನ ದಿನಾ ಇಲ್ಲಿಗೆ ಬರೋದು ಕಾಣೆ" ಎಂದ, ಶಂಕರಪ್ಪ.

ಮಂಜಣ್ಣನೆಂದ :

"ಬರತಾರೆ, ಬರತಾರೆ. ಇಲ್ಲಿನ ಕಾಡುಮೃಗಗಳು ಸಾಧುಪ್ರಾಣಿಗಳ ಹಾಗಿರತವಂತೆ. ದನ ಮೇಯಿಸೋರು ಯೋಳಿದ್ದು ಕೇಳಿವ್ನಿ. ಆಕಳ ಬಂದರೆ ಹುಲಿ ಅದನ್ನ ತಿನ್ನಾಕಿಲ್ವಂತೆ."

ಅಪರಂಪಾರ ಉದ್ಗರಿಸಿದ :

"ಅದ್ಭುತ ! ಇದು ಮಹಾದೇವನ ಮಾಯಾಸೃಷ್ಟಿ !"

ಅವರು ಕೆರೆಯನ್ನು ಸಮೀಪಿಸಿದರು.

ನೀರು ಸ್ವಚ್ಛವಾಗಿತ್ತು. ನಾಲ್ಕಾಳು ತಬ್ಬಿದರೂ ಮುಚ್ಚಲಾಗದಂತಹ ಬಲಿಷ್ಠ ಕಾಂಡಗಳ ಆಲದ ಮರಗಳು ಕೆರೆಯ ದಂಡೆಯುದ್ದಕ್ಕೂ ನಾಲ್ಕಾರು ಕಡೆ ಇದ್ದುವು. ಯಾರೋ ಇತ್ತೀಚೆಗೆ ಬಂದು ವಿಶ್ರಮಿಸಿ, ಅಡುಗೆ ಬೇಯಿಸಿ ಉಂಡು ಹೋಗಿದ್ದರೆಂಬುದಕ್ಕೆ ಸಾಕ್ಷಿಯಾಗಿ, ಕಲ್ಲುಗಳನ್ನು ಜೋಡಿಸಿ ಮಾಡಿದ ಎರಡು ಒಲೆಗಳಿದ್ದುವು. ಕೆದರಿದ ಬೂದಿಯೂ ಅರ್ಧ ಸುಟ್ಟ ಸೌದೆಗಳೂ ಅಲ್ಲಿದ್ದುವು.

ನಕ್ಕು ಅಪರಂಪಾರಸ್ವಾಮಿಯೆಂದ :

"ನೋಡಿದೆಯಾ ಶಂಕರಪ್ಪ ? ಮಹಾದೇವ ಮುಂಚಿತವಾಗಿ ವಿಭೂತಿ ಕಳಿಸಿದಾನೆ."

ಅವರು ಕುದುರೆಗಳಿಂದ ಇಳಿದರು. ಮಂಜಣ್ಣ ಮೂರು ಅಶ್ವಗಳನ್ನೂ ಸಣ್ಣದೊಂದು ಗಿಡಕ್ಕೆ ಕಟ್ಟಿದ.

ಅಪರಂಪಾರ ಜೋಳಿಗೆಯನ್ನು ದಂಡೆಯ ಮೇಲಿರಿಸಿ ನೀರಿನ ಬಳಿ ಸಾರಿದ.

ಮಂಜಣ್ಣ ಅತ್ತಿತ್ತ ಅಲೆಯುತ್ತ ಒಂದು ಮರದ ಕೆಳಗೆ ನಿಂತು, ಮೇಲೆ ನೋಡಿದ.

ಉತ್ಸಾಹದ ಧ್ವನಿಯಲ್ಲಿ ಅವನೆಂದ :

"ಶಂಕರಣ್ಣ. ಬಿರ್ರನೆ ಬಾ. ಕೆಂಪು ಮೋರೆಯ ಒಂದು ಮುಜು ಕುಂತದೆ. ಮನುಷ್ಯನ ಹಂಗೇ ಅದೇ. ಬಾ, ಬಾ !"

ನೀರಲ್ಲಿ ಪಾದಗಳನ್ನು ತೋಯಿಸಿಕೊಂಡಿದ್ದ ಅಪರಂಪಾರ ಗಟ್ಟಿಯಾಗಿ ಅಂದ :

"ಆ ಕೋತಿ ಸಾಕ್ಷಾತ್ ಹನುಮಂತ. ಇದು ಕಿಷ್ಕಿಂಧೆ. ಸಂಶಯವಿಲ್ಲ. ಬಂದೂಕು ಎತ್ತಬೇಡ, ಶಂಕರಪ್ಪ."

ಮಂಜಣ್ಣನ ಬಳಿಗೆ ಬಂದು ಮೇಲಕ್ಕೆ ನೋಡಿ ಶಂಕರಪ್ಪ ಕೇಳಿದ :

"ಎಲ್ಲಿ ? ಕಾಣಿಸೋದಿಲ್ಲ."

"ಅಕಾ—ಅಲ್ಲಿ."

ಕ್ಷಣಾರ್ಧದಲ್ಲಿ ನಡೆದ ಘಟನೆ. ಮಂಜಣ್ಣ ಶಿಳ್ಳು ಹಾಕಿದ. ಶಂಕರಪ್ಪ ಹುಬ್ಬು ಗಂಟಿಕ್ಕಿ ತಿರುಗುವುದರೊಳಗೆ, ತನ್ನ ತೋಳುಗಳಿಂದ ಅವನನ್ನು ಮಂಜಣ್ಣ ಬಲವಾಗಿ ಬಳಸಿ ಹಿಡಿದುಕೊಂಡ.

"ಬಿಡು ! ಬಿಡು ! ಸೋಮಿಯೋರೆ ! ಘಾತ ! ಘಾತ !"

—ಶಂಕರಪ್ಪ ಕೂಗಿ ನುಡಿದ.

ಹೌಹಾರಿದ ಅಪರಂಪಾರ, ದಂಡೆಯ ಮೇಲೆ ಬಿಟ್ಟು ಬಂದಿದ್ದ ಜೋಳಿಗೆಯತ್ತ ಧಾವಿಸಿ, ಸೂರಪ್ಪನಾಯಕ ಕಾಣಿಕೆಯಾಗಿ ಕೊಟ್ಟಿದ್ದ ಬಂದೂಕಿಗೆ ಕೈಹಾಕಿದ.

ಅಷ್ಟರಲ್ಲೇ ಆರು ಜನ ಮರ ಪೊದೆಗಳಿಂದ ಹೊರಕ್ಕೆ ಬಂದಿದ್ದರು. ಮೂವರು

ಶಂಕರಪ್ಪನನ್ನು ಸುತ್ತುವರಿದರು. ಮೂವರು ಅಪರಂಪಾರನನ್ನು ಹಿಡಿದರು. ಸ್ವಾಮಿ ಎತ್ತಿದ ಕೈಬಂದೂಕನ್ನು ಒಬ್ಬ ಕಸಿದುಕೊಂಡ.

ಶಂಕರಪ್ಪ ಪ್ರತಿಭಟಿಸಿದ; ಅಪರಂಪಾರ ತೋಳು ಬೀಸಿದ.

ಆ ಜನರ ಮುಖಂಡನಂತೆ ಕಂಡವನೊಬ್ಬ ಗದರಿ ನುಡಿದ:

"ತೆಪ್ಪಗಿರಿ! ಗದ್ದಲ ಮಾಡಿದರೆ ಇಲ್ಲೇ ಸುಟ್ಟುಹಾಕತೇವೆ."

"ಮೂರ್ಖ! ಸುಡುವವನು ಹರನೊಬ್ಬನೇ!"

—ಎಂದು ಗರ್ಜಿಸಿದ, ಅಪರಂಪಾರಸ್ವಾಮಿ.

ಯಾರೋ ಅವನ ಮುಖಕ್ಕೆ ಗುದ್ದಿದರು.

ಆ ಜನ ಸನ್ನದ್ಧರಾಗಿ ಬಂದಿದ್ದರು. ಅವರಲ್ಲಿ ಹುರಿಮಾಡಿದ ಹಗ್ಗಗಳಿದ್ದುವು. ಕಬ್ಬಿಣದ ಸಂಕೋಲೆಯಿತ್ತು.

ಶಂಕರಪ್ಪನನ್ನೂ ಅಪರಂಪಾರನನ್ನೂ ಅವರು ನೆಲಕ್ಕೆ ಕೆಡವಿದರು. ಬಾಯಿಗಳಿಗೆ ಬಟ್ಟೆ ತುರುಕಿದರು.

ಶಂಕರಪ್ಪನನ್ನು ಒಂದು ಮರಕ್ಕೆ ಬಿಗಿದು ಬಲವಾಗಿ ಕಟ್ಟಿದರು. ಅಪರಂಪಾರನ ಕೈಗಳಿಗೂ ಕಾಲುಗಳಿಗೂ ಸಂಕೋಲೆ ತೊಡಿಸಿದರು.

ಕುದುರೆಗಳು ಅಸಹಾಯವಾಗಿ ಕೆನೆದಾಡಿದುವು. ಹಗ್ಗ ಹರಿಯಲೆತ್ನಿಸಿದುವು.

ಮಂಜಣ್ಣ ಅವುಗಳನ್ನು ಸಂತೈಸಿದ.

ಆ ಜನರು ಅಪರಂಪಾರನ ಬಳಿಗೆ ಕುದುರೆಗಳನ್ನು ಎಳೆದು ತಂದರು.

"ಈ ಕುದುರೆ" ಎಂದ ಮಂಜಣ್ಣ, ಅಪರಂಪಾರ ಕುಳಿತು ಬಂದಿದ್ದರ ಕಡೆಗೆ ಬೊಟ್ಟು ಮಾಡಿ.

ಆ ಜನರ ನಾಯಕ ಅದನ್ನೇರಿದ. ಅವನ ಬೆನ್ನಬಳಿ ಬೋರಲಾಗಿ ಅಪರಂಪಾರನನ್ನು ಕೆಡವಿದರು. ಹಗ್ಗಗಳಿಂದ ಬಿಗಿದು ಜೀನಿಗೆ ಕಟ್ಟಿದರು. ಮಂಜಣ್ಣ ತನ್ನ ಕುದುರೆಯನ್ನು ಹತ್ತಿದ.

"ನ್ಯಾಮಣ್ಣ, ನೀನು ಬಂದ್ಬಿಡು. ಉಳಿದೋರೆಲ್ಲ ಹಿಂದಿನಿಂದ ಬನ್ನಿ, ಎಂದ ಮುಖ್ಯಸ್ಥ.

ಆತ ಹೆಸರು ಹಿಡಿದು ಕರೆದ ಮನುಷ್ಯ, ಶಂಕರಪ್ಪನ ಕುದುರೆಯನ್ನೇರಿದ.

ತಾನು ಕೂಗಿ ಕರೆಯಬೇಕು, 'ಸ್ವಾಮಿಯೋರೆ—ಸ್ವಾಮಿಯೋರೆ' ಎನ್ನಬೇಕು—ಎಂದು ಶಂಕರಪ್ಪ ಚಡಪಡಿಸಿದ. ಆದರೆ ಧ್ವನಿ ಹೊರಬೀಳಲಿಲ್ಲ.

ಕುದುರೆಗಳು ವೇಗವಾಗಿ ಹೊರಟು ಕಣ್ಮರೆಯಾದುದನ್ನೂ ತಂಡದ ಉಳಿದ ನಾಲ್ವರು ಅವುಗಳನ್ನು ಹಿಂಬಾಲಿಸಿ ನಡೆದುಹೋದುದನ್ನೂ ಶಂಕರಪ್ಪ ಅಸಹಾಯನಾಗಿ ಪಿಳಿಪಿಳಿ ಕಣ್ಣು ಬಿಡುತ್ತ ನೋಡಿದ.

## ೫೮

ಕೈದಿಯನ್ನು ಕಂಡ ಲೀಹಾರ್ಡಿ ತನಗಾದ ಆನಂದವನ್ನು ಬಚ್ಚಿಡಲು ಶಕ್ತನಾಗಲಿಲ್ಲ. ಅವನು ಉದ್ಗರಿಸಿದ:

"ಹುರ್ರಾ!"

ದೂತರ ಮುಖ್ಯಸ್ಥ ಅರಿಕೆಮಾಡಿದ:

"ಇವನು ಕೈದಿ. ಜೀವಂತ ಹಿಡಿದು ತಂದಿದೇವೆ. ಇದು ಇವನಲ್ಲಿದ್ದ ಕೈಬಂದೂಕು; ಇಂಗ್ರೇಜಿ ಸರಕಾರಕ್ಕೆ ಸೇರಿದ್ದು. ಹುಜೂರ್ ವಿರುದ್ಧ ದಂಗೆಯೆದ್ದರೆ ಏನಾಗತದೇಂತ ಲೋಕಕ್ಕೆ ತಿಳಿಯಲಿ ಅಂತ ಇವನ ಸಂಗಡಿಗನನ್ನು ಮರಕ್ಕೆ ಕಟ್ಟಿಹಾಕಿದೆವು—"

ಮಧ್ಯೆ ಬಾಯಿಹಾಕಿ ಲೀಹಾರ್ಡಿಯೆಂದ :

"ಅವನು ಯಾರು ? ಯಾಕೆ ಕೊಲ್ಲಲಿಲ್ಲ ?"

"ಒಬ್ಬ ಸಾಮಾನ್ಯ ಸೈನಿಕ, ಅಂಗರಕ್ಷಕ. ಕೊಲ್ಲದೇ ಇದ್ದರೂ ಅವನು ಸತ್ತಹಾಗೆಯೇ. ಹುಲಿ ಬಂದು ತಿನ್ನುತದೆ. ಇಲ್ಲವಾದರೆ ಉಪವಾಸವಿದ್ದು ಕಣ್ಣು ಮುಚ್ಚುತಾನೆ. ಗುಂಡು ಹಾರಿಸಬಾರದು, ವಿದ್ರೋಹಿಗಳ ದಂಡಿಗೆ ಸುಳಿವು ಸಿಗಬಾರದು—ಎಂದಿದ್ದಿರಿ. ಹಾಗೆಯೇ ಮಾಡಿದೇವೆ. ಸದ್ದು ಸಪ್ಪಳವಿಲ್ಲದೆ ಕೆಲಸ ಮುಗಿಸಿದೇವೆ."

"ಭೇಷಕ್ ! ಭೇಷಕ್ ! ನಿನ್ನನ್ನು ಸುಭೇದಾರನಾಗಿ ಮಾಡುತೇವೆ."

"ಖಾವಂದರ ಚಿತ್ತ."

ಕೈಕಾಲುಗಳಲ್ಲಿ ಸರಪಣಿಯನ್ನು ಹೊತ್ತು ಅಪರಂಪಾರ ನಿಶ್ಚಲನಾಗಿ ನಿಂತ. ಅದು ಅರಮನೆಯ ಸಭಾಭವನ. ಆಂಗ್ಲ ಪ್ರಭೃತಿಗಳ ತೈಲಚಿತ್ರಗಳು ಗೋಡೆಗಳಿಂದ ಕೆಳಕ್ಕೆ ನೋಡಿ, "ನಾವು ಅಜೇಯರು !" ಎಂದು ಸಾರುತ್ತಿದ್ದುವು. ಬಿಳಿಯ ಸೈನಿಕರಿಂದ, ಅವರ ಕರಿಯ ಬೆಂಬಲಿಗರಿಂದ, ದ್ವಾರಗಳು ತುಂಬಿದ್ದುವು.

"ಅಪರಂಪಾರರನ್ನು ಬಂಧಿಸಿದರಂತೆ ! ಸ್ವಾಮಿ ಅಪರಂಪಾರರನ್ನು ಬಂಧಿಸಿದರಂತೆ !"

ಸುದ್ದಿ ದಳ್ಳುರಿಯಾಗಿ ಮಡಕೇರಿಯಲ್ಲಿ ಹಬ್ಬಿತ್ತು. ಜನ ಅರಮನೆಯ ಎದುರು ಸಹಸ್ರಗಟ್ಟಲೆಯಲ್ಲಿ ನೆರೆಯತೊಡಗಿದ್ದರು. ಒಳಗಿನ ಬೇಗುದಿ ಅಸಹಾಯವಾಗಿ ಹೆಪ್ಪು ಗಟ್ಟುತ್ತಲಿತ್ತು. ಜನರ ಮುಖಗಳು ನಿಸ್ತೇಜವಾಗಿದ್ದುವು.

ಬಂಧನದಲ್ಲಿ ಅಪರಂಪಾರನ ಧೀಮಂತ ವ್ಯಕ್ತಿತ್ವ ಇಮ್ಮಡಿಸಿತ್ತು. ಮುಷ್ಟಿಯ ಆಘಾತ ದಿಂದ ಬೀಗಿಕೊಂಡಿದ್ದ ತುಟಿಗಳು, 'ಈತ ಅದಮ್ಯ' ಎಂಬ ಭಾವನೆಗೆ ಪುಟಗೊಡುತ್ತಿದ್ದುವು.

ಲೀಹಾರ್ಡಿ ಅಣಕಿಸಿದ :

"ಏಯ್, ಫಕೀರ್ ! ಏನಾಯಿತು ನಿನ್ನ ಬಂಡಾಯ ?"

ಅಪರಂಪಾರ ಅವನನ್ನು ದಿಟ್ಟಿಸಿ ನೋಡಿದನೇ ಹೊರತು ಉತ್ತರವೀಯಲಿಲ್ಲ.

"ಮಾತಾಡೋ ! ಶಿವಧ್ಯಾನಮಾಡತಾ ಇದೀಯೇನು ? ಮೈಸೂರಿನವನಿಗೆ ಸಿಂಹಾಸನ, ಇಕ್ಕೇರಿಯವನಿಗೆ ಪಟ್ಟ, ಚಿಕವೀರರಾಜನಿಗೆ ಗಾದಿ—ಕೊಡಿಸಿದೆಯಾ ?"

ಅಪರಂಪಾರ ತುಟಿಗಳನ್ನು ತೆರೆದ :

"ಈ ಪ್ರಶ್ನೆಗೆ ಈ ಮೂರು ದೇಶಗಳ ಪ್ರಜೆಗಳು ಉತ್ತರ ಕೊಡುತಾರೆ. ಪ್ರಶ್ನಿಸು ವವನು ನೀನು ಯಾರು ? ನಿನ್ನ ಅಧಿಕಾರವನ್ನು ನಾನು ಮಾನ್ಯ ಮಾಡುವುದಿಲ್ಲ. ದಿವಾನ ರನ್ನು ಕರೆಸು."

"ಎಲಾ ! ಏಕವಚನ ! ನೀನು ರಾಜಗುರು ಅಲ್ಲವಾ ? ದಿವಾನರನ್ನು ಕರೆಸಬೇಕೆ ? ಅವರು ನಮ್ಮ ತುಕಡಿ ಜತೆಗೆ ಹಾರಂಗಿಗೆ ಹೋಗಿದಾರೆ ! ತಿಳೀತೇನು ? ನಿನ್ನ ಭಕ್ತಾದಿ ಗಳನ್ನು ಹಿಡಿಯೋದಕ್ಕೆ !"

"ಹುಲುಮಾನವ ! ಬಹಳ ಹಾರಾಡಬೇಡ ! ಮಹಾದೇವನಿಚ್ಛೆ ಇದ್ದಂತಾಗದೆ !"

ಅಪರಂಪಾರನ ಎಡಬಲಗಳಲ್ಲಿದ್ದ ಸಿಪಾಯರು ಗದರಿದರು :

"ಬಾಯ್ಮುಚ್ಚು !"

ಅಪರಂಪಾರನೆಂದ :

"ಶಿವ-ಶಿವ-ಶಿವ...."

ಲೀಹಾರ್ಡಿ ಆಜ್ಞಾಪಿಸಿದ :

"ಇವನನ್ನು ಕೋಟೆಮನೆಯೊಳಗಿಡಿ ! ಸಂಕೋಲೆ ಬಿಚ್ಚಬಾರದು ! ಮಾಯವಾದಾನು ! ಹುಷಾರ್ ! ಅದೇನು ಗದ್ದಲ ಹೊರಗೆ ? ಆ ಕುರಿಗಳನ್ನ ಚದರಿಸಿ. ತಂಟೆಮಾಡಿದವರನ್ನು ಹಿಡಿದುಹಾಕಿ !"

ಮದಗಜದಂತೆ ನಡೆಯುತ್ತಿದ್ದ ಅಪರಂಪಾರನನ್ನು ಅರಮನೆಯ ಹೆಬ್ಬಾಗಿಲಿನಿಂದ ಹೊರತಂದರು.

ಅರ್ಥವಿಲ್ಲದ ಆರ್ತ ಪದವೊಂದು ಜನಜಂಗುಳಿಯಿಂದ ಹೊರಟಿತು. ಅವರ ನಿಟ್ಟುಸಿರು ಭೋರೆಂದಿತು.

ಅಪರಂಪಾರನನ್ನು ಕೋಟೆ ಮನೆಯ ಕಡೆಗೆ ಒಯ್ದರು. ಸ್ವಾತಂತ್ರ್ಯ ಹೋರಾಟದ ಶಿಲ್ಪಿಯನ್ನು ತನ್ನೊಳಗೆ ಬಚ್ಚಿಟ್ಟು ಕಾರಾಗೃಹದ ಬಾಗಿಲು ಮುಚ್ಚಿಕೊಂಡಿತು...

...ಕೋಟೆಮನೆ. ನೀರು ಆಹಾರ ಇಲ್ಲದೆ ನರಳಿದ ನೆಲ.

ಅಲ್ಲಿ ಅಂಗಾತ ಮಲಗಿದ್ದ ಅಪರಂಪಾರನನ್ನು ಆ ನೆನಪು ಕಾಡಿತು.

ಯಾವ ಯುಗದ ಮಾತು ಅದು ?...ಆಗ ತಾನು ಜೀವದಾನ ಪಡೆಯದೆ ಇರುತ್ತಿದ್ದರೇ ಒಳಿತಾಗುತ್ತಿತ್ತೇನೋ ?

ಒಳಿತಾಗುತ್ತಿತ್ತೆ ? ಆಗ ತಾನು ಹುಳುವಾಗಿ ಸಾಯುತ್ತಿದ್ದೆ.

ಈಗ ? ಸತ್ತರೂ ಸರಿಯೆ. ತಾನು ಹುಲಿ—ಹುಲಿ.

## ೫೯

ಅಪರಂಪಾರ ಸಂಘಟಿಸಿದ್ದ ಸ್ವಾತಂತ್ರ್ಯ ಸಂಗ್ರಾಮ ವಿಫಲವಾಯಿತು.

ಗೌಡಹಳ್ಳಿಯ ಶಿಬಿರಕ್ಕೆ ಸ್ವಾಮಿ ಬಾರದುದನ್ನು ಕಂಡು ಅಪ್ಪಯ್ಯ ಭಟರನ್ನು ಪುಷ್ಕರಿಣಿಯ ಕಡೆಗೆ ಹಟ್ಟಿದ. ಅವರು ಕಟ್ಟುಗಳನ್ನು ಬಿಚ್ಚಿ, ಶಂಕರಪ್ಪನನ್ನು ಕೆಳಗಿಳಿಸಿ, ಶೈತ್ಯೋಪಚಾರ ಮಾಡಿ ಶಿಬಿರಕ್ಕೆ ಕರೆತಂದರು.

ಕೆಟ್ಟ ಸುದ್ದಿ ಎಷ್ಟು ಮುಚ್ಚಿಟ್ಟರೂ ಅಂಟುಜಾಡ್ಯದಂತೆ ಹಬ್ಬಿತು. ವೀರರ ಎದೆ ಕಲ್ಲಾಯಿತು ; ಅಳ್ಳೆದೆಯವರು ಅದುರಿದರು.

ಅಪರಂಪಾರನನ್ನು ಹಿಡಿದೊಯ್ದುವರು ಕುಂಪಣಿ ಸರಕಾರದ ಚಾಕರರೇ ; ಹಿಂದಿನ ರಾತ್ರಿ ತಾನು ಮಾತನಾಡಿಸಿದ ಮಂಜಣ್ಣ ಅವರಲ್ಲೊಬ್ಬ ; ಹಿಂದುಮುಂದು ನೋಡದೆ ಸಿಂಹದ ಬಾಯಿಗೆ ಸ್ವಾಮಿಯವರನ್ನು ತಾನು ಒಡ್ಡಿದಂತಾಯಿತು ಎಂದು ಅಪ್ಪಯ್ಯ ಪರಿತಪಿಸಿದ. ತನ್ನ ದುಃಖವನ್ನು ಹೊರಗೆ ತೋರ್ಪಡಿಸದೆ, ಮಲ್ಲಪ್ಪಗೌಡನ ಹಿರಿತನದಲ್ಲಿ ನಾಲ್ವರು ಅಶ್ವಾರೋಹಿಗಳನ್ನು ಮಡಕೇರಿಯ ಕಡೆಗೆ ಆತ ಕಳುಹಿದ.

ಅವನೆಂದ :

"ಬಿರುಗಾಳಿಯಂತೆ ಹೋಗಿ ; ಆ ಧೂರ್ತರನ್ನು ತಡೆದು ನಿಲ್ಲಿಸಿ. ಸ್ವಾಮಿಯವರನ್ನ ಬಿಡಿಸಿಕೊಳ್ಳೋಕಾಗತದೊ ನೋಡಿ."

ಕುದುರೆಗಳು ಬಾಣಗಳಾದುವು. ಆದರೆ ಮುಂದಿದ್ದವರ ಬೆನ್ನು ಹಿಡಿಯಲು ಶಕ್ತವಾಗಲಿಲ್ಲ.

ದಂಡು ಹಾರಂಗಿಗೆ ಹೋಯಿತು. ಆದರೆ ವೆಂಕಟಪ್ಪನ ದಳವನ್ನು ಸೇರುವುದಕ್ಕೆ ಮುನ್ನವೇ ಆಂಗ್ಲ ತುಕ್ಕಡಿಯನ್ನು ಕಂಡಿತು.

ನರಭಕ್ಷಕರ ತೋಪುಗಳು ಗರ್ಜಿಸಿದುವು. ಓಡಿದವರು ಅಡವಿಪಾಲಾದರು. ಹೋರಾಡಿದವರು ಮಾಡಿದರು, ಬಂದಿಗಳಾದರು.

ಆಂಗ್ಲ ತುಕ್ಕಡಿಯ ಇನ್ನೊಂದು ಭಾಗವಾಗಲೇ ವೆಂಕಟಪ್ಪನ ದಳವನ್ನು ಸುತ್ತುವರಿದಿತ್ತು.

* * *

ಹಿಂದೂಸ್ಥಾನದ ಗವರ್ನರ್ ಜನರಲ್ ಸಮಾಧಾನದ ನಿಟ್ಟುಸಿರನ್ನು ಬಿಟ್ಟ.

"ಅಪರಂಪಾರನನ್ನು ಬೆಂಗಳೂರಿಗೊಯ್ದು ಸೆರೆಯಲ್ಲಿಡಿ !"

—ಎಂದು ಆಜ್ಞೆ ಕಳುಹಿದ.

* * *

ಅಶುಭ ವಾರ್ತೆ ಮೈಸೂರನ್ನು ತಲಪಿದಾಗ ಸ್ಟೋಕ್ಸ್ ಅಂದ :

"ಲೀಹಾರ್ಡಿ ಪರವಾಗಿಲ್ಲ."

ಕೃಷ್ಣರಾಜ ನುಡಿದ :

"ಹೀಗಾಗ್ತದೇಂತ ನಮಗೆ ಮೊದಲೇ ಗೊತ್ತಿತ್ತು."

ಬಸಪ್ಪಾಜಿಯೆಂದ :

"ಹೀಗೂ ಆಯ್ತೆ ? ಒಳ್ಳೆಯ ಮನುಷ್ಯರಿಗೆ ಯಾವಾಗಲೂ ಇಂಥದೇ ಗತಿಯೆ ?"

* * *

ಗುರುಮೂರ್ತಪ್ಪನಿಂದ ಸುದ್ದಿ ತಿಳಿದ ಸೂರಪ್ಪನಾಯಕ ಮರುಗಿದ.

ಆತನೆಂದ :

"ಆದದ್ದಾಯಿತು. ಆದರೆ ಇದೇ ಕಥೆಯ ಕೊನೆ ಆಗಬಾರದು. ನಾನಿನ್ನೂ ಬದುಕಿದೇನೆ."

* * *

ವೇಲೂರಿನಲ್ಲಿ ಚಿಕವೀರರಾಜನ ಪರಿವಾರ ಕಂಬನಿ ಮಿಡಿಯಿತು.

ಅರಸನೊಡನೆ ರಾಣಿ ಗೌರಮ್ಮನೆಂದಳು :

"ನಾವು ನಿರ್ಭಾಗ್ಯರು."

ವೇಲೂರಿನ ಕಲೆಕ್ಟರ್ ಚಿಕವೀರರಾಜನ ಭೇಟಿಗೆ ಬಂದು ನುಡಿದ :

"ನೀವು ಕಂಪೆನಿ ಸರಕಾರದ ಅತಿಥಿಗಳಾಗಿ ಕಲಕತ್ತೆಗೋ ಕಾಶಿಗೋ ತೆರಳಿ ಮುಂದೆ ಅಲ್ಲಿಯೇ ವಾಸಮಾಡಬೇಕು ಅಂತ ಗವರ್ನರ್ ಜನರಲರು ಅಪೇಕ್ಷಿಸುತಾರೆ."

* * *

ಅಪ್ಪಂಗಳದಲ್ಲಿ ಗಂಗಮ್ಮ ತಲೆ ಕೆದರಿಕೊಂಡು ಅತ್ತಳು ; ನಕ್ಕಳು.

ತನ್ನಷ್ಟಕ್ಕೇ ಅವಳು ಗಟ್ಟಿಯಾಗಿ ಅಂದುಕೊಂಡಳು :

"ಹುಚ್ಮುಂಡೆ, ಹುಚ್ಮುಂಡೆ, ಇನ್ನೂ ಏನಾದರೂ ಉಳಿದಿದೆಯೇನೆ ?"

ರಾಜಮ್ಮಾಜಿ ದೀರ್ಘವಾಗಿ ನಿಟ್ಟುಸಿರುಬಿಟ್ಟಳು. ಬಿಗಿದ ತುಟಿಗಳನ್ನು ಅವಳು ಎರಡು ಮಾಡಲಿಲ್ಲ.

* * *

ನಂಜರಾಜಪಟ್ಟಣದಲ್ಲಿ, ಸುದ್ದಿ ಮುಟ್ಟಿದ ದಿನ ಪೂಜಾವಿಧಿಗಳನ್ನು ಪಂಚಾಕ್ಷರಿ ಮರೆತ.

ಕಳೆದ ಕೆಲ ದಿವಸಗಳಿಂದ ಶಿವಾಚಾರ್ಯರ ದೇಹಸ್ಥಿತಿ ಉಲ್ಬಣಿಸಿತ್ತು.

ಹೇಳಲೋ ಬೇಡವೋ ಎಂದು ಬಹಳ ಹೊತ್ತು ಅನಿಶ್ಚಿತತೆಯಲ್ಲಿ ಕಳೆದು ಕಡೆಗೆ ಪಂಚಾಕ್ಷರಿಯೆಂದ :

“ಗುರುಗಳೇ, ಮಡಕೇರಿಯಿಂದ ಅಶುಭವಾರ್ತೆ ಬಂದಿದೆ.”

ಶಿವಾಚಾರ್ಯರು ಮೌನವಾಗಿ ಶೂನ್ಯದತ್ತ ಬಿರುನೋಟ ಬೀರಿ, ಬಳಿಕ ಮೆಲ್ಲನೆ ತುಟಿ ತೆರೆದು, “ನಾನು ಬಲ್ಲೆ” ಅಂದರು.

ಅದೇ ಅವರಾಡಿದ ಕೊನೆಯ ಮಾತಾಯಿತು.

* * *

ಆ ಘಟನೆ ನಡೆದುದು ಕ್ರಿಸ್ತಶಕ ಸಾವಿರದ ಎಂಟುನೂರ ಮೂವತ್ತೇಳರಲ್ಲಿ. ಅಂದರೆ ಶಾಲಿವಾಹನ ಶಕ ಸಾವಿರದ ಏಳನೂರ ಐವತ್ತೊಂಬತ್ತು—ಹೇವಳಂಬಿ ಸಂವತ್ಸರ.

ಬಂಡಾಯದ ಪ್ರಮುಖರಿಗೆಲ್ಲ ಆಜೀವ ಕಾರಾಗೃಹವಾಸ ವಿಧಿಸಲ್ಪಟ್ಟಿತು. ಕೆಲವರಿಗೆ ನಾಲ್ಕು, ಆರು, ಹತ್ತು ವರ್ಷಗಳ ಶಿಕ್ಷೆಯಾಯಿತು. ಬೇರೆ ಕೆಲವರು ತಪ್ಪಿಸಿಕೊಂಡರು.

ಅಪರಂಪಾರಸ್ವಾಮಿಯನ್ನು ಬೆಂಗಳೂರಿಗೆ ಒಯ್ದರು. ಎತ್ತಿನ ಬಂಡಿಯಲ್ಲಿ ರಾಜ-ಕೈದಿ. ಸುತ್ತಲೂ ಆಂಗ್ಲ ಕುದುರೆ ಸವಾರರು. ಅದರ ಹಿಂದೆ ಹಾಗೂ ಮುಂದೆ ಕರಿಯ ಸಿಪಾಯರು. ಮಡಕೇರಿಯ ಜನರಿಗೆ ಸುಳಿವು ಸಿಗಬಾರದೆಂದು ಇವರ ಪಯಣ ಇರುಳಲ್ಲಿ ಹೊರಟಿತು.

ಪೆರಿಯಾಪಟ್ಟಣದ ಹತ್ತಿರ ಇವರು ತಂಗಿದಾಗ, ಗಾಡಿಯ ತಟಿಕೆಯ ಸಂದಿಯೊಳಗಿಂದ ಯಾರೋ ಆಗಾಗ್ಗೆ ಇಣಿಕಿ ನೋಡುತ್ತಿದ್ದಂತೆ ಅಪರಂಪಾರಸ್ವಾಮಿಗೆ ಭಾಸವಾಯಿತು.

ಆತ ತಟಿಕೆಯ ಬದಿಗೆ ಸರಿದು, ತೂತಿನಿಂದ ಹೊರ ನೋಡಿದ. ಎಲ್ಲರೂ ಸಮವಸ್ತ್ರ ಧರಿಸಿದ್ದ ಸಿಪಾಯರೇ.

ಮತ್ತೊಮ್ಮೆ ಒಂದು ಕಣ್ಣು ತಟಿಕೆಯ ಬಳಿ ಬಂತು.

ಸ್ವರವೊಂದು ಕೇಳಿಸಿತು :

“ಮಲ್ಲಪ್ಪಣ್ಣನೂ ನಾನೂ ಜತೆಯಾಗೇ ಅದೇವೆ.”

ಕಣ್ಣು ದೂರ ಸರಿಯಿತು. ಅಪರಂಪಾರ ದಿಟ್ಟಿಸಿ ನೋಡಿದ. ಕುಂಪಣಿ ಸಿಪಾಯರ ಉಡುಪೇ.

“ಶಂಕರಪ್ಪನದಲ್ಲವೆ ಸ್ವರ ?” ಎಂದುಕೊಂಡ, ಅಪರಂಪಾರಸ್ವಾಮಿ.

ಆತ ಅಂತರ್ಮುಖಿಯಾಗಿ ಶಿವಧ್ಯಾನದಲ್ಲಿ ನಿರತನಾದ.

## ೬೦

ಹೇವಿಳಂಬಿ, ದಕ್ಷಿಣ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಬಲಗೊಂಡುದನ್ನು ಕಂಡ ಸಂವತ್ಸರ. ಕೊಡಗು ಮೈಸೂರುಗಳಿಂದ ಪರಕೀಯರನ್ನುಹೊಡೆದೋಡಿಸಲು ಅಪರಂಪಾರಸ್ವಾಮಿ

ನಡೆಸಿದ ಯತ್ನ ವಿಫಲವಾಯಿತಲ್ಲ ? ಕನ್ನಡ ಜಿಲ್ಲೆಯನ್ನು ಆಂಗ್ಲರ ಹಿಡಿತದಿಂದ ವಿಮುಕ್ತಗೊಳಿಸಲು ಪುಟ್ಟಬಸವ ಮತ್ತು ಸಂಗಡಿಗರು ನಡೆಸಿದ ಪ್ರಯತ್ನಕ್ಕೂ ಅದೇ ಗತಿಯಾಯಿತು.

ಪುಟ್ಟಬಸವ ಕಲ್ಯಾಣಸ್ವಾಮಿ ಎಂಬ ಹೆಸರನ್ನು ಹೊತ್ತು, ಸಂಪಾಜೆ ಘಟ್ಟದ ಮಾರ್ಗವಾಗಿ ಸುಳ್ಯಕ್ಕಿಳಿದ. ಅವನ ಸುತ್ತಲೂ ಜಾತಿ ಮತಗಳ ವ್ಯತ್ಯಾಸವಿಲ್ಲದೆ ಜನ ನೆರೆದರು. ಶಸ್ತ್ರಾಸ್ತ್ರಗಳಿಗಿಂತಲೂ ಅದಮ್ಯ ಉತ್ಸಾಹವೇ ಆ ಪಡೆಯ ಮೂಲನಿಧಿಯಾಗಿತ್ತು. ಬ್ರಿಟಿಷರೂ ಅವರ ಹಸ್ತಕರೂ "ಕಲ್ಯಾಣಪ್ಪನ ದಂಡು ಬಂತು" ಎಂದು ಕಕ್ಕಾವಿಕ್ಕಿಯಾದರು. ಬೆಳ್ಳಾರೆ, ಪುತ್ತೂರು, ಬಂಟವಾಳಗಳ ದಾರಿಯಾಗಿ ಈ ದಂಡು ಮಂಗಳೂರನ್ನು ತಲಪಿತು. ಅದನ್ನು ವಶಪಡಿಸಿಕೊಂಡಿತು ಕೂಡಾ. ಆದರೆ ಆಂಗ್ಲರು ತಲಚೇರಿಯಿಂದ ಸಮುದ್ರಮಾರ್ಗವಾಗಿ ಸೇನಾ ತುಕ್ಕಡಿಯನ್ನು ತಂದರು. ಇತ್ತ ಲೀಹಾರ್ಡಿಯಿಂದ ಅವಮಾನಿತನಾದ ಬೋಪಣ್ಣ, ಬಂಡಾಯಗಾರರ ಹುಟ್ಟಡಗಿಸಿಯೇ ಮಡಕೇರಿಗೆ ಮರಳುವೆ ಎಂದು ಶಪಥಮಾಡಿ, ಒಂದು ತುಕ್ಕಡಿಯೊಡನೆ ಘಟ್ಟವಿಳಿದು ಬಂದ. ಅವನ ಪಾಲಿಗೆ ಅದು ಅಗ್ನಿಪರೀಕ್ಷೆ. ಅದರಲ್ಲಿ ಜಯಸಿದಾಗಲೇ ಅವನು ನಿಷ್ಕಳಂಕನೆಂಬುದು ಲೋಕಶ್ರುತವಾಗಬೇಕು ! ಹೀಗೆ, ಎರಡು ಕಡೆಗಳಿಂದಲೂ ಕಲ್ಯಾಣಸ್ವಾಮಿಯ ದಂಡನ್ನು ವೈರಿಪಡೆಗಳು ಘಾಸಿಗೊಳಿಸಿದುವು. ಅಡಕೊತ್ತಿ ಒತ್ತಿತು. ಅಡಕೆ ಹೋಳು ಹೋಳಾಯಿತು, ಚೂರು ಚೂರಾಯಿತು.

ಕಲ್ಯಾಣಸ್ವಾಮಿಯನ್ನೂ ಅವನ ಜತೆಗಾರನಾಗಿದ್ದ ಲಕ್ಷ್ಮಪ್ಪ ಬಂಗರಾಜನನ್ನೂ ಮಂಗಳೂರಿನ ಬಳಿ ಗಲ್ಲಿಗೇರಿಸಿದರು. ಬೇರೆಯೂ ಹದಿನಾಲ್ಕು ಜನರಿಗೆ ಗಲ್ಲಾಯಿತು. ಇನ್ನೂ ಅನೇಕರಿಗೆ ಕಾರಾಗೃಹವಾಸ ಲಭಿಸಿತು. ಚೆಟ್ಟಿಯನ್ನೂ ಕರ್ತುವನ್ನೂ ಸಾಗರದಾಚೆ ಸಿಂಗಾಪುರಕ್ಕೆ ಒಯ್ದರು.

ಆಂಗ್ಲರ ಒಟ್ಟು ವಿಜಯಕ್ಕೆ ಮುಖ್ಯ ಕಾರಣರು: ಪೊನ್ನಪ್ಪ ಮತ್ತು ಬೋಪು. ಅವರು ಬಗೆಬಗೆಯಾಗಿ ಕಂಪೆನಿ ಸರಕಾರದಿಂದ ಸನ್ಮಾನಿತರಾದರು. ಪೊನ್ನಪ್ಪನ ಗೌರವಾರ್ಥ ಕೊಡಗಿನ ಒಂದೂರು ಪೊನ್ನಂಪೇಟೆಯಾಯಿತು. ಹಲವರಿಗೆ ಜಹಗೀರುಗಳು ದೊರೆತುವು.

ಲೀಹಾರ್ಡಿ ದಿವಾನದ್ವಯರನ್ನು ಕರೆಸಿ ನುಡಿದ :

"ಗವರ್ನರ್ ಸಾಹೇಬರು ನಿಮ್ಮಿಬ್ಬರನ್ನೂ ತಾರೀಫು ಮಾಡಿ ಬರೆದಿದ್ದಾರೆ. ಯುದ್ಧದಲ್ಲಿ ನಮ್ಮ ಪರವಾಗಿ ಸತ್ತವರ ಕುಟುಂಬಗಳಿಗೆ ಮೂರು ತಲೆಗಳ ಮಾಸಾಶನ ಕೊಡಬೇಕು ಅಂತ ಆಜ್ಞಾಪಿಸಿದ್ದಾರೆ."

ಪೊನ್ನಪ್ಪನೆಂದ :

"ಘನತೆವೆತ್ತ ಗವರ್ನರ್ ಸಾಹೇಬರು ದಯಾಳುಗಳು !"

"ಅಷ್ಟೇ ಅಲ್ಲ. ಕಾಟಕಾಯಿ ಅಡಗಿಸೋದರಲ್ಲಿ ಭಾಗಿಯಾದವರಿಗೆ ಸರಪಣಿ ಸಮೇತ ಚಿನ್ನದ ಪದಕ ಕೊಡಬೇಕಂತ ಮಾಡಿದೇವೆ."

"ಕೊಡಗಿನ ಪ್ರಜೆಗಳಿಗೆ ಇದರಿಂದ ಹರ್ಷವಾಗತದೆ."

"ಆ ಪದಕದ ಒಂದು ಮೈಯಲ್ಲಿ **'For distinguished conduct and loyalty to the British Government. Coorg, April 1837'** ಅಂತ ಬರೆಸೋಣ. ಇನ್ನೊಂದು ಮೈಯಲ್ಲಿ ಅವರ ಕ್ಯಾನರೀಸ್ ತರ್ಜುಮೆ ಹಾಕಿಸೋಣ."

"ಖಾವಂದರಿಗೆ ಕೃತಜ್ಞತೆ ಸೂಚಿಸೋದಕ್ಕೆ ಯಾವ ಪದ ಬಳಸಬೇಕೋ ತೋಚುತ್ತಿಲ್ಲ."

"ಬೋಪನ್, ಸುಮ್ಮನಿದೀರಲ್ಲ ? ಪದಕದ ತೂಕ ಎಷ್ಟಿರತದೆ ಹೇಳತೀರಾ ?"

ಬೋಪಣ್ಣನೆಂದ :

"ತಾವೇ ತಿಳಿಸಬೇಕು, ಖಾವಂದರೇ."

"ಹನ್ನೊಂದೂವರೆ ತೊಲ !"

ಆಶ್ಚರ್ಯದಿಂದ ತೆರೆದುಕೊಂಡ ಬೋಪಣ್ಣನ ಬಾಯಿ ಪುನಃ ಮುಚ್ಚಿಕೊಳ್ಳುವುದನ್ನು ಮರೆಯಿತು.

...ದಿವಾನ ಲಕ್ಷ್ಮೀನಾರಾಯಣ ಮಾತ್ರ ಆಂಗ್ಲ ಒಡೆಯರ ಅವಕೃಪೆಗೆ ಪಾತ್ರನಾದ.

ಕೊಡಗಿಗೊದಗಿದ ದುರವಸ್ಥೆಗೆ ಒಂದು ಬಗೆಯಲ್ಲಿ ತಾನೂ ಕಾರಣನಾದೆ ; ಚಿಕವೀರ ರಾಜನ ವಿರುದ್ಧ ಬೋಪಣ್ಣ ಒಳಸಂಚು ನಡೆಸಿದಾಗ ತಾನು ಪ್ರತಿಭಟಿಸಲಿಲ್ಲ ; ಆಂಗ್ಲರು ಅರಸೊತ್ತಿಗೆಯನ್ನೇ ಮುಕ್ತಾಯಗೊಳಿಸಲು ಹೊರಟಾಗ ತಾನು ಸಮ್ಮತಿಸಬಾರದಿತ್ತು ; ರಾಜಕುಮಾರಿಗಾದರೂ ಪಟ್ಟ ದೊರಕಿಸುವಂತೆ ಯತ್ನಿಸಬೇಕಾಗಿತ್ತು...

—ಇವೆಲ್ಲ ವಿಚಾರಗಳು ಲಕ್ಷ್ಮೀನಾರಾಯಣನನ್ನು ಕಾಡಿದುವು. ಆತ ತನ್ನ ಉದ್ಯೋಗಕ್ಕೆ ಸಂಬಂಧಿಸಿ ನಿರುತ್ಸಾಹಿಯೂ ನಿರಾಸಕ್ತನೂ ಆದ.

ಬಂಡಾಯದ ಘೋಷ ಕೊಡಗಿನಾದ್ಯಂತ ಮೊರೆದಾಗ, ಕನ್ನಡ ಜಿಲ್ಲೆಯನ್ನೂ ಆವರಿಸಿದಾಗ, ಅವನಿಗೆ ಸಹಜವಾಗಿಯೇ ಸಂತೋಷವೆನಿಸಿತು. ಗೂಢಚಾರರ ಮೂಲಕ ಬಂಡಾಯದ ಕೆಲ ಸಿದ್ಧತೆಗಳಿಗೆ ಸಂಬಂಧಿಸಿ ಅವನು ಮಾಹಿತಿ ಪಡೆದಿದ್ದ. ಅದು ಇತರ ದಿವಾನರಿಗೆ ತಿಳಿಯದು ಎಂಬುದು ಖಚಿತವಾದಾಗ, ಅವರಿಗಾಗಲೀ ಲೀಹಾರ್ಡಿಗಾಗಲೀ ತಾನಾಗಿ ತಿಳಿಸುವ ಗೊಡವೆಗೆ ಆತ ಹೋಗಿರಲಿಲ್ಲ.

ಲಕ್ಷ್ಮೀನಾರಾಯಣ ಮೈಗಳ್ಳ, ವೇತನಕ್ಕಷ್ಟೇ ಕೈಯೊಡ್ಡುವವನು—ಎಂದು ಲೀಹಾರ್ಡಿ ಮೊದಲು ಸಿಟ್ಟಾದ. ಬಳಿಕ, ಇವನು ವಿದ್ರೋಹಿಗಳ ಬೆಂಬಲಿಗನಿರಬಹುದು—ಎಂದು ಸಂಶಯ ತಳೆದ. ಮುಂದೆ ರಾಜದ್ರೋಹದ ಆರೋಪ ಈತನ ಮೇಲೆ ಹೊರಿಸುವುದೇ ಸರಿ— ಎಂದು ತೀರ್ಮಾನಿಸಿದ. ಆಂಗ್ಲರ ವಕ್ರನೋಟಕ್ಕೆ ಗುರಿಯಾದವನ ಗತಿ ಏನಾಗುತ್ತದೆಂದು ಇತರರು ತಿಳಿಯಲಿ—ಎಂಬ ಅಪೇಕ್ಷೆ ಅವನಿಗೆ.

ಮೈಸೂರಿನ ದಿವಾನ ವೆಂಕಟರಮಣಯ್ಯನ ಉದ್ಯೋಗ ಮಾತ್ರ ಹೋಗಿತ್ತು. ಇಲ್ಲಿ ಅದರ ಜತೆಗೆ ದಿವಾನ ಲಕ್ಷ್ಮೀನಾರಾಯಣನ ಸ್ವಾತಂತ್ರ್ಯವೂ ಅಪಹರಿಸಲ್ಪಟ್ಟಿತು.

ಲೀಹಾರ್ಡಿ, ಪೊನ್ನಪ್ಪ–ಬೋಪಣ್ಣರ ಎದುರಲ್ಲಿ ಲಕ್ಷ್ಮೀನಾರಾಯಣನನ್ನು ಹೀನಾಯವಾಗಿ ಜರೆದ.

"ನೀನು ನೀಚ ! ಸ್ವಾಮಿದ್ರೋಹಿ !"

ಶಾಂತವಾಗಿ ಲಕ್ಷ್ಮೀನಾರಾಯಣನೆಂದ :

"ನೀಚ ಹೌದೋ ಅಲ್ಲವೋ ಹೇಳಲಾರೆ. ಸ್ವಾಮಿದ್ರೋಹಿ ಎನ್ನುವುದರಲ್ಲಿ ಮಾತ್ರ ಅನುಮಾನವಿಲ್ಲ."

ಲೀಹಾರ್ಡಿ ಹುಬ್ಬು ಹಾರಿಸಿ ಪೊನ್ನಪ್ಪ–ಬೋಪಣ್ಣರ ಕಡೆ ನೋಡಿ ಹೇಳಿದ :

"ಕೇಳಿದಿರಾ ! ಸ್ವಾಮಿದ್ರೋಹಿ ಅಂತ ಒಪ್ಪಿಕೊಳ್ಳುತಾ ಇದಾನೆ."

"ಉಪ್ಪುತಿಂದ ಮನೆಗೆ ಎರಡು ಬಗೆದು, ನೀವು ಇಲ್ಲಿ ಬೇರೂರೋದಕ್ಕೆ ಅವಕಾಶ

ಮಾಡಿಕೊಟ್ಟೆ. ಇದು ಸ್ವಾಮಿದ್ರೋಹವಲ್ಲದೆ ಇನ್ನೇನು ?"

ಹಾವನ್ನು ತುಳಿದವನಂತೆ ಲೀಹಾರ್ಡಿ ಬೆಚ್ಚಿಬಿದ್ದು, ಸ್ವತಃ ತಾನೇ ಹಾವಿನಂತೆ ಪೂತ್ಕರಿಸಿದ :

"ಅಧಮ ! ನಿನ್ನನ್ನು ದಸ್ತಗಿರಿ ಮಾಡಿದ್ದೇವೆ !"

ಕೆಳಮುಖವಾಗಿ ಕೈಗಳನ್ನು ಜೋಡಿಸಿ ಲಕ್ಷ್ಮೀನಾರಾಯಣನೆಂದ :

"ಒಪ್ಪಿಗೆ. ಬೇಡಿ ಹಾಕಬಹುದು."

...ಲಕ್ಷ್ಮೀನಾರಾಯಣ ಬಂಧಿತನಾದ. ಸ್ವಲ್ಪ ಕಾಲ ಬೆಂಗಳೂರು—ಮಡಕೇರಿಗಳ ನಡುವೆ ಔಪಚಾರಿಕ ಪತ್ರವ್ಯವಹಾರಗಳು ನಡೆದುವು. ಆ ಬಳಿಕ ತನ್ನ ಕೈದಿಯನ್ನು ಬೆಂಗಳೂರಿನ ಸೆರೆಮನೆಗೆ ಲೀಹಾರ್ಡಿ ಕಳುಹಿಸಿಕೊಟ್ಟ.

## ೬೧

"ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತೆನ್ನಯ ಕಾಯಗುಣ."

—ಬೆಂಗಳೂರು ಸೆರೆಮನೆಯ ಬೆಳಕಿಲ್ಲದೊಂದು ಕೊಠಡಿಯಲ್ಲಿ ಕುಳಿತು ಅಪರಂಪಾರ ಸ್ವಾಮಿ ಚಿಂತಿಸಿದ.

ದಿನಗಳು, ಮಾಸಗಳು, ಯಾವ ವಾರ ? ಯಾವ ತಿಥಿ ? ಬಲ್ಲವರು ಯಾರು ? ಕೇಳ ಬೇಕು ಯಾರನ್ನು ?

ಹಗಲಾಗುತ್ತಿತ್ತು, ಇರುಳಾಗುತ್ತಿತ್ತು; ಮತ್ತೆ ಹಗಲು, ಮತ್ತೆ ಇರುಳು. ಸೂರ್ಯ ಗೋಲ ಹೊರಗೆ ಉರಿದಾಗ ಎತ್ತರದ ಛಾವಣಿಯ ಸೂರುಗಳೆಡೆಯಿಂದ ಒಂದೆರಡು ಕಿರಣಗಳು ಒಳಬರುತ್ತಿದ್ದವು. ರಾತ್ರೆ ಚಂದ್ರನಿದ್ದರೆ ಒಂದಿಷ್ಟು ಮಂದಪ್ರಕಾಶ. ಇಲ್ಲವೋ ಕಪ್ಪು ಕತ್ತಲು.

ಸೆರೆಮನೆಯ ಅಧಿಕಾರಿ—ಆಂಗ್ಲರವನು—ದಿನಕ್ಕೊಮ್ಮೆ ಬರುತ್ತಿದ್ದ. ಹರಕು ಹಿಂದೂ ಸ್ಥಾನಿಯಲ್ಲಿ ಅವನು ಮಾತನಾಡುತ್ತಿದ್ದ :

"ಏನ್ಮಾಡುತಿದೀಯಾ, ಸ್ವಾಮಿ ?"

ಮೊದಲು ಕೆಲವು ದಿನ ತುಟಿಪಿಟ್ಟೆನ್ನಲಿಲ್ಲ ಅಪರಂಪಾರ. ಮುಂದೆ ಮಾನವ ಪ್ರವೃತ್ತಿ ಗೆದ್ದಿತು. ಉತ್ತರವಾಗಿ ಒಂದು ಮಾತಿಗೆ ಒಂದು ಮಾತು.

"ಶಿವಧ್ಯಾನ ಮಾಡತಿದೀಯಾ ?"

"ಹೂಂ."

"ಊಟ ಆಯಿತಾ ?"

"ಹೂಂ."

"ನಿಮ್ಮ ಜನಕ್ಕೆ ಸೋಲಾಯಿತಂತ ಒಪ್ಪುತೀಯಾ ?"

"ಮರುಳೆ, ಸೋತವರು ಯಾರು ? ಗೆದ್ದವರು ಯಾರು ?"

"ಅಂದರೆ ?"

"ಜನಮನವ ಗೆಲಲಾರದವನೇ ಪರಾಜಿತ."

"ನೋಡಿದರೆ ನೀನು ಬುದ್ಧಿವಂತ. ಹಾಗಿದ್ದೂ ಮುಠ್ಠಾಳ ಕೆಲಸ ಮಾಡಿದೆಯಲ್ಲಾ!"

"ಕನ್ನವನಿಕ್ಕಿ ಮನೆಯೋ ನಿಮ್ಮದೆನುತೀರಾ ? ತೊಲಗಪ್ಪ ಆಚೆಗೆ !"

ಇದೇ ಅಥವಾ ಇಂಥದೇ ಮಾತುಕತೆ.

ಕೊಡಗಿನೊಳಗೆ ಮಾತ್ರವಲ್ಲ ಕನ್ನಡ ಜಿಲ್ಲೆಯಲ್ಲೂ ತನ್ನವರಿಗೆ ಸೋಲಾಯಿತೆಂದು ಅಪರಂಪಾರ ತಿಳಿದುದು ಆ ಅಧಿಕಾರಿಯಿಂದ.

"ಸೋತೆ ಅಂತ ಈಗಲಾದರೂ ಒಪ್ಪಿಕೊಳ್ಳುತೀಯಾ ?"

"ಕೆಲವರನ್ನು ಕೊಂದ ಮಾತ್ರಕ್ಕೆ ಸ್ವಾತಂತ್ರ್ಯದ ಹಂಬಲ ಸಾಯುತದಾ ?"

"ನೀನೊಬ್ಬ ಹುಚ್ಚ."

"ನಿಜವಪ್ಪ. ನನಗೆ ಸ್ವಾತಂತ್ರ್ಯದ ಹುಚ್ಚು."

ಇನ್ನೊಂದು ದಿನ ಅಧಿಕಾರಿ ಕೇಳಿದ :

"ದಿವಾನ ಲಕ್ಷ್ಮೀನಾರಾಯಣನನ್ನು ಬಲ್ಲೆಯಾ ?"

"ನಿಮ್ಮ ಕಿಂಕರ. ಹುಲಿ ಹಿಡಿಯಿತಾ ಅವನನ್ನು ?"

"ಹುಲಿಯಲ್ಲ ಸಿಂಹ. ನಮ್ಮ ಅತಿಥಿಯಾಗಿ ಇಲ್ಲಿಗೇ ಬಂದಿದಾನೆ. ಮುಂದುಗಡೆ ಸಾಲಿನಲ್ಲಿ ಇರಿಸಿದೇವೆ."

"ಓ ! ನಿಮ್ಮ ಚಾಕರರ ಮೇಲೂ ಸಂಶಯ ತಳೆಯುವ ದುರ್ಗತಿ ಒದಗಿತೆ ನಿಮಗೆ?"

"ನಿಮ್ಮವರಿಗೆ ಅವನು ಸಹಾಯ ಮಾಡಿಲ್ಲ ಅನ್ನುತೀಯಾ ?"

"ದ್ರೋಹಿಗಳ ನೆರವ ನಂಬಿ ಸ್ವಾತಂತ್ರ್ಯವೀರರು ಹೋರಾಟದ ಕಣಕ್ಕೆ ಇಳಿಯುವು ದಿಲ್ಲವಪ್ಪ..."

—ಅಪರಂಪಾರ ಯೋಚಿಸಿದ. ಲಕ್ಷ್ಮೀನಾರಾಯಣನ ಬಂಧನದ ಅರ್ಥವೇನು ? ಜ್ಯೋತಿ ಆರಿಲ್ಲ ಎಂದಾಯಿತು ಹಾಗಾದರೆ. ಅವರಿಗೆ ಅಲ್ಲಿ ಪ್ರತಿಭಟನೆ ಹೆಚ್ಚುತ್ತಿರಬೇಕು. ಅಥವಾ ಎಲ್ಲವೂ ಮುಗಿದೇಹೋಯಿತೋ ? ಸಂತೆಯ ಗದ್ದಲದ ಅನಂತರ ನೆಲ ಗುಡಿಸಿ ಕಸ ಕಡ್ಡಿಗಳನ್ನೆಲ್ಲ ಎತ್ತಿಹಾಕುತ್ತಿರುವರೋ ?

ಅವನ ಮನಸ್ಸು ರೋಧಿಸಿತು.

"ಶಂಕರಾ ! ನೀನೆನ್ನ ಪರಿಭವದ ಬಾಧೆಯನು ನೋಡು."

* * *

ಕೊಡಗನ್ನು ಇಂಗ್ಲಿಷರು ವಶಪಡಿಸಿಕೊಂಡಾಗ ರಾಜ್ಯದ ಬೊಕ್ಕಸದಲ್ಲಿ ಒಂದೂವರೆ ಲಕ್ಷ ಪವನು ನಿಧಿಯಿತ್ತು. ಅದರಿಂದ ತೃಪ್ತರಾದ ಆಂಗ್ಲರು ಅರಮನೆಯ ಭಂಡಾರವನ್ನು ಚಿಕವೀರರಾಜ ಒಯ್ದಾಗ ಅಡ್ಡಿಮಾಡಲಿಲ್ಲ. ಅಲ್ಲದೆ, ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಎಂಬತ್ತು ಸಾವಿರ ಪವನು ಹಣವನ್ನು ದೊಡ್ಡವೀರರಾಜೇಂದ್ರ ಇರಿಸಿದ್ದ. ಶೇಕಡ ಹನ್ನೆರಡೂವರೆಯ ಬಡ್ಡಿ ಅದಕ್ಕೆ. ಕಂಪೆನಿ ಲಿಂಗರಾಜನಿಗೆ ಬಡ್ಡಿಯನ್ನೂ ಕೊಟ್ಟಿರಲಿಲ್ಲ. ಮೂಲ ನಿಧಿಯನ್ನೂ ಹಿಂದಿರುಗಿಸಿರಲಿಲ್ಲ. ಚಿಕವೀರರಾಜೇಂದ್ರ ಅರಸನಾದಾಗಲೂ ಅಷ್ಟೆ. ಕೊಡಗು ತಮ್ಮ ಅಧೀನವಾದಾಗ ಆ ಹಣವೂ ತಮ್ಮದಾಯಿತು ಎಂದು ಇಂಗ್ಲಿಷರು ಸಾರಿದರು.

ವೇಲೂರಿನ ಕಲೆಕ್ಟರನೆಂದ :

"ಕಲಕತ್ತೆಗೋ ? ಕಾಶಿಗೋ ? ನಿಮ್ಮ ನಿರ್ಧಾರ ತಿಳಿಸಿಬಿಡಿ."

ರಾಣಿಯೊಡನೆಯೂ ಸೋಮಯ್ಯ–ತಿಮ್ಮಣ್ಣಗೌಡರೊಡನೆಯೂ ಆ ಮೊದಲೇ ಸಮಾಲೋಚನೆ ನಡೆಸಿದ್ದ ಚಿಕವೀರರಾಜನೆಂದ :

"ರಾಜ್ಯ ಬಿಟ್ಟುಬಂದೆವು. ಅದರ ಹೊರಗೂ ಕೂಡಾ ನಮಗಿಷ್ಟಬಂದಲ್ಲಿ ನಾವಿರುವಂತಿಲ್ಲ ಅಲ್ಲವೆ ?"

"ದಕ್ಷಿಣದಲ್ಲಿ ನೀವೆಲ್ಲರೂ ಇರಬಾರದು. ಫಕೀರರು, ಇತರ ಕ್ಷುದ್ರಜನರು ನಿಮ್ಮ ಭೇಟಿಗೆ ಬರುತಾರೆ. ನಿಮಗೂ ತೊಂದರೆ, ನಮಗೂ ತೊಂದರೆ."

"ಅಲ್ಲವೆ ನಾವು ಕ್ಷೇಮವಾಗಿರಬೇಕೂಂತ ಎಷ್ಟೊಂದು ಮುತುವರ್ಜಿ ವಹಿಸುತೀರಿ ! ಟೀಪುವಿನ ಮಕ್ಕಳು ಮೊಮ್ಮಕ್ಕಳನ್ನು ಇಲ್ಲಿಂದ ಒಯ್ದು ಕಲಕತ್ತೆಯಲ್ಲಿಟ್ಟಿದೀರಿ ಅಲ್ಲವೆ ?"

"ಹೌದು."

"ವೇಲೂರಲ್ಲೇ ಇರುತೇವೆ ಎಂದು ಆಗ್ರಹ ಮಾಡಿದರೆ ನಮ್ಮನ್ನೂ ಬಲಾತ್ಕಾರವಾಗಿ ಅಲ್ಲಿಗೆ ಒಯ್ಯುತೀರಿ."

"ಅಂಥ ಕಹಿ ಪ್ರಸಂಗ ಉಂಟಾಗದು ಅಂದುಕೊಂಡಿದೇವೆ."

"ಆಗಲಿ. ಕಾಶಿಯಲ್ಲಿ ನೆಲೆಸುವುದು ನಮಗೆ ಒಪ್ಪಿಗೆ. ಯಾರಿಲ್ಲದೆ ಹೋದರೂ ಅಲ್ಲಿ ವಿಶ್ವೇಶ್ವರನಿರುತಾನೆ."

"ಸಂತೋಷ. ನಿಮಗೆ ಆರು ಸಾವಿರ ಪವನು ವರ್ಷಾಶನ ಕೊಡಬೇಕೂಂತ ಕಂಪೆನಿ ಸರಕಾರ ತೀರ್ಮಾನಿಸಿದೆ."

"ಆರೇ ಸಾವಿರ ? ನಮ್ಮ ಪರಿವಾರದಲ್ಲಿ ಇನ್ನೂರು ಜನಕ್ಕಿಂತಲೂ ಹೆಚ್ಚಿದ್ದಾರೆ."

"ಕೆಲವರನ್ನು ಇಲ್ಲೇ ಬಿಟ್ಟುಬಿಡಿ. ನೌಕರಿ ಕೊಡುತೇವೆ."

"ಹೆತ್ತ ತಾಯಿಗೆ ಮಕ್ಕಳು ಹೊರೆಯಲ್ಲ. ಇವರೆಲ್ಲರೂ ನಮ್ಮ ಜತೆ ಬರುತಾರೆ. ವರ್ಷಾಶನದ ವಿಷಯ ಮುಂದೆ ನೋಡಿಕೊಳ್ಳೋಣ."

"ಒಳ್ಳೇದು. ನಿಮ್ಮ ದಾರಿ ಕಾವಲಿಗೆ ತುಕಡಿ ಸಿದ್ಧವಾಗಿದೆ."

"ಯಾವ ಪ್ರಸ್ತಾಪ ಮಾಡಬೇಕಾದರೂ ಯೋಗ್ಯ ಏರ್ಪಾಟು ಮೊದಲೇ ಮಾಡಿರುತೀರಿ ಅಲ್ಲವೆ ?"

"ನಾಳೆ ಹೊರಡುತೀರಾ ?"

"ಜೋಯಿಸರನ್ನು ಕರೆಸಿ ಮುಹೂರ್ತ ಇತ್ಯಾದಿ ನೋಡಬೇಕು."

"ಅವಶ್ಯವಾಗಿ ಆಗಲಿ. ಮುಂದಿನ ಎರಡು ಮೂರು ದಿನಗಳಲ್ಲಿ ನೀವು ಯಾವತ್ತು ಬೇಕಾದರೂ ಹೊರಡಬಹುದು."

* * *

ಚನ್ನಬಸಪ್ಪ ಪತ್ನಿ ದೇವಮ್ಮಾಜಿಯೊಡನೆ ಬೆಂಗಳೂರಿಗೆ ಬಂದು ಕಂಪೆನಿ ಸರಕಾರದ ಪ್ರತಿನಿಧಿಯೊಡನೆ, "ನಮ್ಮ ಗತಿಯೇನು ?" ಎಂದು ಕೇಳಿದ.

ದೊರೆತ ಉತ್ತರ :

"ಚಿಕವೀರರಾಜನ ಜತೆ ಕಾಶಿಗೆ ಹೋಗುತೀರೇನು ?"

ಕೈಯಲ್ಲಿ ಬಂದೂಕು ಇದ್ದಿದ್ದರೆ ಆ ಅಧಿಕಾರಿಯನ್ನು ಚನ್ನಬಸಪ್ಪ ಅಲ್ಲಿಯೇ ಸುಟ್ಟು ಬಿಡುತ್ತಿದ್ದ. ಈಗಲೂ ಕತ್ತು ಹಿಸುಕಿ ಕೊಂದುಬಿಡಲೇ ಎನಿಸಿತು. ಆತ ದೇವಮ್ಮಾಜಿ ಯತ್ತ ನೋಡಿದ. ಅವಳ ಕಣ್ಣುಗಳಿಂದ ಕಂಬನಿ ಹರಿಯುತ್ತಿದ್ದುದನ್ನು ಕಂಡು ಧರೆಗಿಳಿದು ಹೋದ.

ಇಳಿದನಿಯಲ್ಲಿ ಅವನೆಂದ :

"ಸಿಂಹಾಸನಕ್ಕೆ ನಮಗಿರುವ ಹಕ್ಕಿನ ವಿಷಯ ಖಾವಂದರನ್ನು ಕೇಳೋಣ ಅಂತ ಬಂದೆವು."

"ನಿಮಗೆ ತಿಳಿಯದ್ದಲ್ಲ. ನಿಮ್ಮ ರಾಜ್ಯದ ಪ್ರಜಾಪ್ರಮುಖರು ಸೇರಿ, ಸರ್ವಾನುಮತ ದಿಂದ, ಹಾವೇರಿವಂಶದ ಯಾರಿಗೂ ತಮ್ಮನ್ನು ಒಪ್ಪಿಸಬಾರದೂಂತ ವಿನಂತಿ ಮಾಡಿ ಕೊಂಡರಲ್ಲ ? ಪ್ರಜೆಗಳ ಅಪೇಕ್ಷೆಗೆ ವಿರುದ್ಧವಾಗಿ ಯಾವತ್ತೂ ನಾವು ವರ್ತಿಸುವವರಲ್ಲ."

ಹಿಂದೆಯಾಗಿದ್ದರೆ 'ಈ ಠಕ್ಕು ಮಾತು ನಿಲ್ಲಿಸು !' ಎಂದು ಚನ್ನಬಸಪ್ಪ ಗದರುತ್ತಿದ್ದ. ಈಗ ಏನನ್ನೂ ಹೇಳಲಿಲ್ಲ.

ಕೆಲ ನಿಮಿಷ ಮೌನವಾಗಿದ್ದು ಚನ್ನಬಸಪ್ಪನೆಂದ :

"ಇದು ತಮ್ಮ ಆಖೈರು ತೀರ್ಮಾನ ಅನ್ನಿ."

"ಹೌದು."

ಆಗ ದೇವಮ್ಮಾಜಿ ಅಂದಳು :

"ಊರಿಗೆ ಹೋಗಿ ಸಾಯಬೇಕೂಂತ ನನಗೊಂದು ಆಸೆ ಅದೆ."

ಮಾತಿನ ನಡುನಡುವೆ ಆ ದೊರೆ ಮಗಳನ್ನು ಅಧಿಕಾರಿ ನೋಡುತ್ತಲಿದ್ದ. ಹಾಗೆ ಆತ ನೋಡಿದಾಗಲೆಲ್ಲ ಚನ್ನಬಸಪ್ಪನ ಮೈ ಉರಿಯುತ್ತಿತ್ತು.

ಅಧಿಕಾರಿಯೆಂದ :

"ಸಾಯೋದು ? ನಿಮಗಿನ್ನೂ ಚಿಕ್ಕ ವಯಸ್ಸು. ಅಲ್ಲದೆ—"

ಮಾತನ್ನು ಪೂರ್ತಿಗೊಳಿಸಲು ಅವನಿಗೆ ಅವಕಾಶವೀಯದೆ ಚನ್ನಬಸಪ್ಪನೆಂದ :

"ನಮ್ಮ ಪತ್ನಿ ಬಹಳ ಕಾಲದ ನಂತರ ಬಸಿರಾಗಿದ್ದಾರೆ. ಹೆರಿಗೆಗೆ ಅಪ್ಪಂಗಳಕ್ಕೆ ಹೋಗ ಬೇಕೂಂತ ಅವರ ಆಸೆ."

ಹೆಣ್ಣಿನ ಬಗೆಗೆ ಕನಿಕರ ತೋರಿ ಅವಳ ಮೆಚ್ಚುಗೆ ಗಳಿಸಬೇಕೆಂಬ ಅಪೇಕ್ಷೆ ಅಧಿಕಾರಿಗೆ. ಅದರ ಜತೆಗೆ, ಇವಳಿಗೆ ಗಂಡು ಹುಟ್ಟಿದರೆ ಮುಂದೆ ತೊಂದರೆಯಾಗುವುದೇನೋ ಎಂಬ ಶಂಕೆ.

ಅವನೆಂದುಕೊಂಡ: ಹೋಗಲಿ. ಇವರಿಂದೇನಾದೀತು ? ಜನರಂತೂ ತಮ್ಮ ರಾಜ ನಿಗೆ ದ್ರೋಹ ಬಗೆದ ಚನ್ನಬಸಪ್ಪನನ್ನು ಇಷ್ಟಪಡುವುದಿಲ್ಲ. ಅಣ್ಣನಿಗೆ ಕೇಡೆಣಿಸಿದ ತಂಗಿಯ ವಿಷಯದಲ್ಲೂ ಅವರು ಗೌರವ ತೋರುವುದಿಲ್ಲ. ಇಷ್ಟರ ಮೇಲೂ ಕಿರುಕುಳ ವಾಯಿತೆಂದರೆ ಇವರನ್ನು ಹಿಡಿದು ಗಡೀಪಾರು ಮಾಡಿಸುವುದು ಎಷ್ಟರ ಕೆಲಸ ? ಅಲ್ಲದೆ, ಹೊರಗೇ ಉಳಿದರೆ ಅಲ್ಲಿ ಇಲ್ಲಿ ಸಂಚರಿಸಿ ತಮಗೆ ಅನ್ಯಾಯವಾಯಿತೆಂದು ಪ್ರಚಾರ ಮಾಡುತ್ತಾರೆ. ಈ ಅಂಶವನ್ನು ವರದಿಯಲ್ಲಿ ಗವರ್ನರರಿಗೆ ಮನಗಾಣಿಸಿಕೊಟ್ಟರಾಯಿತು. ಅಪ್ಪಂಗಳಕ್ಕೆ ಇವರನ್ನು ಕಳುಹಿಸಿದ ತನ್ನ ತೀರ್ಮಾನ ಸರಿಯೆಂದು ಅವರು ನಿಸ್ಸಂದೇಹ ವಾಗಿ ಒಪ್ಪುವರು.

ದೇವಮ್ಮಾಜಿಯ ಕಡೆ ನೋಡಿ ಕಂಠವನ್ನು ಆದಷ್ಟು ಮೃದುಗೊಳಿಸಿ ಅಧಿಕಾರಿಯೆಂದ :

"ಆಗಲಿ ರಾಜಕುಮಾರಿ. ಅಪ್ಪಂಗಳಕ್ಕೆ ಹೋಗುವಿರಂತೆ."

...ಪ್ರಯಾಣದ ವೇಳೆಯಲ್ಲಿ ದೇವಮ್ಮಾಜಿ ಗಂಡನೊಡನೆ ಅಂದಳು :

"ಒಳ್ಳೇವನು. ಇಗ್ರೇಜಿಯವರೆಲ್ಲಾ ಹೀಗೆ ಇದ್ದಿದ್ದರೆ ನಮಗೆ ಈ ಗತಿಯಾಗ್ತಿರ್ಲಿಲ್ಲ."

ಚನ್ನಬಸಪ್ಪ ಸಿಟ್ಟಿನಿಂದ ನುಡಿದ :

"ವಿಶ್ವಾಸಘಾತಕರು ! ಆ ಕೆಂಪು ಮುಸುಡಿನವರನ್ನ ನೀವು ಹೊಗಳೋದು ನನಗಿಷ್ಟ ವಿಲ್ಲ."

ಅವನ ಮನಸ್ಸು ಒಳಗಿಂದೊಳಗೇ ಮಿಡಿಯಿತು :

'ಗಣಪತೀನ ಮಾಡೋಕೆ ಹೋದೆ. ಇನ್ನೇನೋ ಆಯಿತು.'

...ದೇವಮ್ಮಾಜಿಯನ್ನು ಅಪ್ಪಂಗಳದಲ್ಲಿ ಬಿಟ್ಟು, ಚನ್ನಬಸಪ್ಪ ಮಡಕೇರಿಗೆ ಹೋಗಿ ಲೀಹಾರ್ಡಿಗೆ ಮುಜುರೆ ಸಲ್ಲಿಸಿದ.

"ನೀವು ನಿಮ್ಮ ಜಹಗೀರಿನ ಆದಾಯದ ಲೆಕ್ಕಪತ್ರ ಇಡಬೇಕು. ವರ್ಷಂಪ್ರತಿ ಒಂದಂಶ ನಮ್ಮ ಖಜಾನೆಗೆ ಸಂದಾಯ ಮಾಡಬೇಕು. ಎಷ್ಟು ಅಂತ ಮುಂದೆ ತಿಳಿಸತೇವೆ."

"ಅಂದರೆ ನಾವು ತಮ್ಮ ಒಕ್ಕಲಾಗುತೇವೆ, ಅನ್ನಿ."

"ಛೆ ! ಛೆ ! ಇದು ನಿಮಗೆ ನಾವು ನೀಡುವ ರಕ್ಷಣೆಗೆ ಪ್ರತಿಫಲ..."

ನಾಲಗೆಯ ತುದಿಯವರೆಗೂ ಬಂದ ಕಟೂಕ್ತಿಯನ್ನು ಹತ್ತಿಕ್ಕಿ ಚನ್ನಬಸಪ್ಪನೆಂದ :

"ಒಳ್ಳೇದು ಖಾವಂದರೇ. ಈ ರಕ್ಷಣೆ ಆಚಂದ್ರಾರ್ಕವಾಗಿ ನಡೆಯಲಿ..."

"ಖಂಡಿತ, ಖಂಡಿತ."

ಅಲ್ಲಿಂದ ಹೊರಬಿದ್ದು ಚನ್ನಬಸಪ್ಪ ದಿವಾನರನ್ನು ಕಂಡ.

"ಕೈಕೊಟ್ಟಿರಿ" ಎಂದ.

"ತೆಪ್ಪಗೆ—ಮುಚ್ಕೊಂಡ್ಹೋಗು. ಇಲ್ಲದೀರ ಜಾಗೀರೂ ಕೈಬಿಟ್ಟಾತು" ಎಂದ ಪೊನ್ನಪ್ಪ.

ಬೋಪಣ್ಣನೆಂದ :

"ತಮ್ಮ, ನಿನ್ನ ಒಳ್ಳೇದಕ್ಕೆ ಒಂದು ಮಾತು ಹೇಳತೀನಿ. ಯಾರ ಹತ್ತಿರಲೂ ನಾಲಗೆ ಸಡಿಲಬಿಟ್ಟು ಮಾತಾಡಬೇಡ."

"ಆಗಲಿ. ನಾ ನಾಲಗೆ ಕೊಯ್ಕೋತೀನಿ. ನೀವು ಸುಖವಾಗಿ ಬಾಳಿ" ಎಂದು ನುಡಿದು ಚನ್ನಬಸಪ್ಪ ಹೊರಟುಹೋದ.

* * *

ದೇವಮ್ಮಾಜಿ ತನ್ನ ಗಂಡನೊಡನೆ ಅಪ್ಪಂಗಳಕ್ಕೆ ಹಿಂತಿರುಗುವುದಕ್ಕೆ ಮುನ್ನವೇ ಗಂಗಮ್ಮ ಮಗಳೊಡನೆ ಪಟ್ಟುಹಿಡಿದಿದ್ದಳು :

"ಇಲ್ಲಿ ಇರೋಣ ಬ್ಯಾಡ. ನಮ್ಮ ಹಳ್ಳಿಗೆ ಒಂಟೋಗಾನ."

ಪ್ರತಿ ದಿನವೂ ಅದೇ ಆಗ್ರಹ.

ರಾಜಮ್ಮಾಜಿ ಕೊಡುತ್ತ ಬಂದುದೊಂದೇ ಉತ್ತರ :

"ಇದು ನನ್ನ ಗಂಡನ ಮನೆ. ನಾ ಇಲ್ಲೇ ಇರತೀನಿ."

ದೇವಮ್ಮಾಜಿ ಹಿಂತಿರುಗಿದ ಮೇಲೆ ಗಂಗಮ್ಮ ಮತ್ತಷ್ಟು ಹಟ ತೊಟ್ಟಳು :

"ಇಲ್ಲಿಯ ಸೌಭಾಗ್ಯ ಕಂಡದ್ದಾಯಿತಲ್ಲ ? ಓಗಿಬಿಡಾನ ಬಾ ಮಗ."

ರಾಜಮ್ಮಾಜಿಯ ಉತ್ತರದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ :

"ಇದು ನನ್ನ ಗಂಡನ ಮನೆ. ನಾ ಇಲ್ಲೇ ಇರತೀನಿ."

ಗಂಗಮ್ಮ ಕೊನೆಯಲ್ಲಿ ಅಂದಳು :

"ಹುಚ್ಮುಂಡೆ ವ್ಯಾಮೋಹ. ಮದುವೆ ಮಾಡಿಕೊಟ್ಟೆ. ಗಂಡ ಹೆಂಡತಿ ಸುಖವಾಗಿ

ಬಾಳ್ವೆ ಮಾಡೋದನ್ನೂ ಕಂಡೆ! ಮೊಮ್ಮಕ್ಕಳನ್ನು ಎತ್ತಿ ಆಡಿಸಿದೆ! ನಾನು ಇನ್ನೂ ಇಲ್ಲಿ ಯಾಕಿರಬೇಕು, ಅಂತೀನಿ? ಹೊರಡತೀನಿ ನಮ್ಮವ್ವ.''

ಗಂಗಮ್ಮ ಹೊರಟೇಬಿಟ್ಟಳು. ಮಲೆತಿರಿಕೆ ಬೆಟ್ಟದ ತಪ್ಪಲಿಗೆ ಪಯಣ. ಮೇನೆ ಇರಲಿಲ್ಲ, ಬೋವಿಗಳಿರಲಿಲ್ಲ, ರಾಜಭಟರಿರಲಿಲ್ಲ. ಒಬ್ಬ ಆಳು ಮತ್ತು ಆಕೆ. ಕಾಲ್ನಡಿಗೆ.

ತಾಯಿ ಹೋದಳೆಂದು ರಾಜಮ್ಮಾಜಿ ಅಳಲಿಲ್ಲ.

## ೬೨

ಪೆರಿಯಾಪಟ್ಟಣದ ಹತ್ತಿರವೋ ಎಲ್ಲೋ ಇರಬೇಕು; ಶಂಕರಪ್ಪನ ಧ್ವನಿ ಕೇಳಿಸಿತ್ತಲ್ಲ? ಮಲ್ಲಪ್ಪಣ್ಣನೂ ತಾನೂ ಬೆಂಗಳೂರಿಗೆ ಬರುತಿದೇವೆ—ಎಂದು ಹೇಳಿದಂತೆ ಆಗಿತ್ತಲ್ಲ? ಆದರೆ ತಡಿಕೆಯ ರಂಧ್ರದಿಂದ ದಿಟ್ಟಿಸಿ ನೋಡಿದಾಗ ಏನನ್ನು ಕಂಡೆ? ಕುಂಪಣಿ ಸಿಪಾಯರ ಸಮವಸ್ತ್ರವನ್ನು ಮಾತ್ರ...

ಮಲ್ಲಪ್ಪನೂ ಶಂಕರಪ್ಪನೂ ಆ ಉಡುಗೆಯಲ್ಲಿ ಇದ್ದುದೇ ಹೌದಾದರೆ ಮುಂದೆ ಏನಾದರು?

ಆ ಉಡುಪನ್ನು ಅವರು ಧರಿಸುವುದಾದರೂ ಹೇಗೆ ಸಾಧ್ಯವಾಯಿತು? ಅವರು ಕುಂಪಣಿ ಸರಕಾರದ ನೌಕರರಾದರೆ? ಛೆ! ಛೆ!

ಊಹೂಂ. ಶಂಕರಪ್ಪನ ಧ್ವನಿ ಎಂದು ತಾನು ಭ್ರಮಿಸಿರಬೇಕು, ಅಷ್ಟೆ. ಆ ದಿನ ಆತನನ್ನು ಧೂರ್ತರು ಮರಕ್ಕೆ ಬಿಗಿದುದನ್ನು ಕಣ್ಣಾರೆ ಕಾಣಲಿಲ್ಲವೆ ತಾನು?

ಧೂರ್ತರು ಹೊರಟುಹೋದ ಬಳಿಕ ಯಾರಾದರೂ ಸಹಾಯಕ್ಕೆ ಬಂದು ಶಂಕರಪ್ಪ ಬದುಕಿ ಉಳಿದಿದ್ದರೆ?

—ಯೋಚನೆ ಹಾಗೂ ಹರಿಯುತ್ತಿತ್ತು; ಹೀಗೂ ಹರಿಯುತ್ತಿತ್ತು.

ಇದೊಂದು ಬಗೆಹರಿಯದ ಸಮಸ್ಯೆ, ಎಂದುಕೊಂಡ ಅಪರಂಪಾರಸ್ವಾಮಿ.

ಆದರೊಂದು ದಿನ ಒಗಟು ಒಡೆಯಿತು.

ಸೆರೆಮನೆಯಲ್ಲಿ ಊಟ ನೀಡುವ ವೇಳೆ ಸದ್ದುಗದ್ದಲ ಬಹಳ. ಒಂದಕ್ಕೊಂದು ತಗಲಿಕೊಂಡು ಸಾಲಾಗಿ ಕಟ್ಟಿದ ಕೊಠಡಿಗಳು. ಅವುಗಳೆದುರು ಉದ್ದಕ್ಕೂ ಜಗಲಿ. ಅನ್ನದ ಕಡಾಯಿಯನ್ನು ಹೊತ್ತು ಜಗಲಿಯ ಒಂದು ಕೊನೆಯಲ್ಲಿ ಇಬ್ಬರು ಆಳುಗಳು ಕಾಣಿಸಿಕೊಳ್ಳುತ್ತಿದ್ದರು. ಅವರ ಜತೆಯಲ್ಲಿ ಬಡಿಸುವವನಿರುತಿದ್ದ. ಕೊಠಡಿಯ ಎದುರು ನಿಂತು ಅವನು ''ತಟ್ಟೆ!'' ಎಂದು ಕೂಗುವ. ಕೈದಿ ತನ್ನಲ್ಲಿರುವ ತಟ್ಟೆಯನ್ನು ಬಾಗಿಲ ಬಳಿ ಹಿಡಿಯಬೇಕು. ಬಡಿಸುವವನು ನಿರ್ದಿಷ್ಟ ಮಾಪನವಾದ ದೊಡ್ಡ ಸೌಟಿನ ತುಂಬ ಅನ್ನವನ್ನೊಯ್ದು ತಟ್ಟೆಗೆ ಸುರಿಯುತ್ತಿದ್ದ. ಅದು ಉಪ್ಪು ಸೋಂಕಿದ ಅನ್ನ. ಆ ಮೂವರು ಮುಂದೆ ಸಾಗಿದಂತೆ ಇನ್ನೊಬ್ಬ ಆಳು ನೀರಿನೊಡನೆ ಬರುತ್ತಿದ್ದ. ಕೊಡದಿಂದ ಆತ ಕೈದಿಯ ಬಳಿ ಇರುವ ಮಣ್ಣಿನ ಪಾತ್ರೆಗೆ ನೀರು ಸುರಿಯುತ್ತಿದ್ದ. ಹೀಗೆಯೇ ಬರಾಕುಗಳು ಪ್ರತಿಯೊಂದು ಸಾಲಿನ ಎದುರಿಗೂ ನಡೆಯುತ್ತಿತ್ತು.

ಕೈದಿಗಳಲ್ಲಿ ರಾಜಕೀಯ ಕಾರಣಕ್ಕಾಗಿ ಬಂಧಿತರಾದವರಿದ್ದರು. ದಂಡಿನಲ್ಲಿ ಅವಿಧೇಯತೆ ತೋರಿದುದಕ್ಕಾಗಿ ಕಾರಾಗೃಹವಾಸಕ್ಕೆ ಗುರಿಯಾದವರಿದ್ದರು. ಸುಲಿಗೆಗಾರರೋ ದರೋಡೆಖೋರರೋ ಆಗಿ ಕಂಪನಿಯ ರಾಜ್ಯಭಾರಕ್ಕೆ ಅಡ್ಡಿ ಆತಂಕ ಒಡ್ಡಿದವರಿದ್ದರು. ಅನ್ನ ನೀಡು

ವವರು ಕಾಣಿಸಿದರೆ ಸಾಕು, ಕೈದಿಗಳು ಸಾಮಾನ್ಯವಾಗಿ ಜರೆಯುವುದಕ್ಕೋ ಜಗಳಾಡುವುದಕ್ಕೋ ಆರಂಭಿಸುವುದು ಪದ್ಧತಿ. ಉಣ್ಣಲಾಗದ, ಆದರೆ ತಿನ್ನದೆ ಇರಲಾಗದ, ಅನ್ನ. ತಟ್ಟೆಗಳನ್ನು ಹಲವರು ಬಾಗಿಲಿಗೆ ಬಡೆಯುತ್ತಿದ್ದರು, ಚೀರುತ್ತಿದ್ದರು. ಅವಾಚ್ಯ ಪದಗಳನ್ನಾಡುತ್ತಿದ್ದರು.

ಮೊದಲೆಷ್ಟೋ ದಿವಸ ಅಪರಂಪಾರ ಅನ್ನ ಪಡೆದಿರಲಿಲ್ಲ, ಪಡೆದರೂ ತಿಂದಿರಲಿಲ್ಲ. ನೀರೊಂದೇ ಅವನಿಗೆ ಸಾಕಾಗುತ್ತಿತ್ತು.

"ಇದು ಪ್ರಸಾದ ; ಸ್ವೀಕರಿಸದೇ ಹೇಗಿರಲಿ ?'' ಎಂದುಕೊಂಡ ಕೊನೆಗೆ.

ಕಡಾಯಿಯನ್ನು ಯಾವುದಾದರೊಂದು ಕೋಣೆಯ ಮುಂದಿಡುತ್ತಿದ್ದರು. ಕೈದಿಗೂ ಅಕ್ಕಪಕ್ಕದವರಿಗೂ ಅಲ್ಲಿಂದಲೇ ಪೂರೈಕೆಯಾಗುತ್ತಿತ್ತು. ಪುನಃ ತುಸು ದೂರ ಸಾಗಿ ಕಡಾಯಿಯನ್ನು ಕೆಳಗಿಡುತ್ತಿದ್ದರು.

ಈ ದಿನವೂ ಅಪರಂಪಾರನಿಗೆ ಕಲರವ ಕೇಳಿಸಿತು.

ತನ್ನ ಕೊಠಡಿಯ ಬಳಿಗೆ ಕಡಾಯಿ ಬಂದಾಗ ಅಪರಂಪಾರ ತಟ್ಟೆಯನ್ನು ಮುಂದಕ್ಕೆ ಹಿಡಿದು, ಅಂದ :

"ತುಸ ಸಾಕಪ್ಪಾ."

ಬಡಿಸುವವನು ಗದರಿದ :

"ತುಸ ಅಂತೆ ! ಉಪವಾಸ ಬಿದ್ದು ಸತ್ತು ಹೋದೀಯಾ ! ತಿನ್ನು."

ಅನ್ನದ ಕಡಾಯಿ ಮುಂದುವರಿಯಿತು ; ನೀರು ಬರುವುದು ತಡವಾಯಿತು.

ಕೆಲ ಕೈದಿಗಳು ಕೂಗಾಡಿದರು :

"ನೀರು ! ನೀರು !"

ಕಡೆಗೊಮ್ಮೆ ನೀರಿನವನು ಬಂದ.

ಕೈದಿಗಳು ಬಗೆಬಗೆಯಾಗಿ ಅಂದರು :

"ಬಾವಿ ತೋಡಿ ಸೇದ್ಕೊಂಡು ಬಂದೆಯೇನೋ ಕಳ್ಳ ಸೂ—ಮಗನೇ !"

"ದಾರಿ ಸಿಗಲಿಲ್ಲೇನೋ ಚಂಡಾಲ !"

"ನಿನ್ನಮ್ಮನ..."

"ನಿನ್ನೂ ಇಲ್ಲೇ ಮಡಕ್ಕೊತೀವಿ ನೋಡು."

ಇಬ್ಬರು ಮೂವರು ಒಟ್ಟಾಗಿ ಅಂದರು :

"ಇವನು ಹೊಸಬ !"

ಹೊಸ ಆಳು ಅಪರಂಪಾರನ ಕೊಠಡಿಯ ಮುಂದೆ ನಿಂತ. ಅಪರಂಪಾರನ ಲೋಟಕ್ಕೆ ನಿಧಾನವಾಗಿ ನೀರನ್ನು ಬಗ್ಗಿಸುತ್ತ ಆತನ ಕಡೆ ನೋಡಿ ಮುಗುಳುನಕ್ಕ. ಗಿರಿಜಾಮೀಸೆಯ ಮರೆಯಲ್ಲಿದ್ದರೂ ಮುಖ ಪರಿಚಿತವಾಗಿತ್ತು. ಅಪರಂಪಾರನ ಪಾತ್ರೆಗೆ ನೀರು ಸುರಿಯುತ್ತಿದ್ದಂತೆ ಪಿಸುದನಿಯಲ್ಲಿ ಅವಸರ ಅವಸರವಾಗಿ ಆ ಮನುಷ್ಯನೆಂದ :

"ಸ್ವಾಮಿಯೋರೇ, ರಾತ್ರೆ ಅನ್ನೆರಡು ಒಡಿಯೋ ವೇಳೆಗೆ ಮಲ್ಲಪ್ಪ ಕೀಲಿ ತೆಗೀತಾನೆ. ಅವನು ಓದಮ್ಯಾಕೆ ಕ್ಷಣ ಬಿಟ್ಕೊಂಡು ನೀವು ಒರಡಿ. ಎಡಕ್ಕೆ ; ಸಂದೀಲಿ ಮತ್ತೆ ಎಡಕ್ಕೆ ಅಲ್ಲಿಂದ ನೇರ—ಪ್ರಾಕಾರಕ್ಕೆ. ಅಲ್ಲಿ ಮಲ್ಲಪ್ಪ ಕಾದಿರತಾನೆ. ಆಚೆ ಕಡೆ ನಾ ಸಿದ್ಧವಾಗಿರತೀನಿ. ನೆಪ್ಪಿರಲಿ. ರಾತ್ರೆ ಅನ್ನೆರಡಕ್ಕೆ, ಎಡಕ್ಕೆ ; ಸಂದೀಲಿ ಮತ್ತೆ ಎಡಕ್ಕೆ."

ಪಕ್ಕದ ಕೊಠಡಿಯ ಕೈದಿ ಕೂಗಾಡಿದ :

"ಅದೇನ್ಮಾಡ್ತಿದೀಯೇ ಬೋ—ಮಗನೆ ? ತಾರೋ ನೀರು !"

ನೀರಿನ ಪಾತ್ರೆಯನ್ನು ಹಿಡಿದ ಅಪರಂಪಾರಸ್ವಾಮಿ ನಿಂತೇ ಇದ್ದ. ಅವನ ಪಾದಗಳು ಒಮ್ಮಿಂದೊಮ್ಮೆಲೆ ನೆಲಕ್ಕೆ ಬೇರು ಬಿಟ್ಟಿದ್ದುವು. ಮಾತನಾಡಿದ್ದವನು ಶಂಕರಪ್ಪ. ತನ್ನನ್ನು ಸೆರೆಯಿಂದ ಬಿಡಿಸಲು ಅವರು ಹಂಚಿಕೆ ಹೂಡಿದ್ದರು.

ಡವಡವನೆಂದಿತು ಎದೆಗುಂಡಿಗೆ.

ಮರುಕ್ಷಣವೇ ಹೊಸ ಯೋಚನೆಯಿಂದ ಉಸಿರು ಸರಾಗವಾಯಿತು.

ಈ ಪ್ರಯತ್ನ ಯಶಸ್ವಿಯಾಯಿತೆಂದರೆ ತಾನು ಮತ್ತೆ ಕೊಡಗಿಗೆ ಹೋಗಬಹುದು ; ಹೋರಾಟ ಮುಂದುವರಿಸಬಹುದು.

ಆದರೆ, ಮಲ್ಲಪ್ಪ ಕೀಲಿ ಹೇಗೆ ತೆರೆಯುವ ? ಗೋಡೆಯನ್ನೇರಿ ದಾಟುವುದು ಹೇಗೆ ? ಅದರಾಚೆಗೆ, ಓಡಿಹೋಗಲು ಯಾವ ಏರ್ಪಾಟನ್ನು ಶಂಕರಪ್ಪ ಮಾಡುವ ?

ಆ ವಿವರವನ್ನು ಕೇಳಲು ಅವಕಾಶವೇ ದೊರೆಯಲಿಲ್ಲ. ಶಂಕರಪ್ಪ ಒಂದು ನಿಮಿಷ ಹೆಚ್ಚು ನಿಂತಿದ್ದರೂ ಉಳಿದವರಿಗೆ ಸಂದೇಹ ಬರುತ್ತಿತ್ತು.

ನೀರಿನ ಪಾತ್ರೆಯನ್ನು ಅನ್ನದ ತಟ್ಟೆಯ ಬಳಿ ಇರಿಸಿ, ಕುಳಿತುಕೊಂಡು, ಅಪರಂಪಾರ ಯೋಚನಾಮಗ್ನನಾದ.

ಯೋಚನೆ ಶಿವಧ್ಯಾನದಲ್ಲಿ ಕೊನೆಗಂಡಿತು. ಅದು ಮುಗಿದಾಗ ಮನಸ್ಸು ಪ್ರಶಾಂತ ವಾಗಿತ್ತು.

ಅಪರಂಪಾರನೆಂದುಕೊಂಡ :

"ನಿನ್ನಿಚ್ಛೆ ಇದ್ದಂತಾಗುತದೆ ಮಹಾದೇವ."

...ಒಂದು ಯುಗವೆನ್ನುವಂತೆ ದೀರ್ಘವಾಗಿದ್ದ ಹಗಲು. ಎಷ್ಟು ಹೊತ್ತಾದರೂ ಕತ್ತಲೆಯೊಡನೆ ಬೆರೆಯಲು ನಿರಾಕರಿಸುತ್ತಿದ್ದ ಸಂಜೆ. ಕತ್ತಲಾದೊಡನೆಯೇ ಹೆಳವನಾಗಿ ಚಲಿಸಲೊಲ್ಲದ ಹೊತ್ತು.

ಅಪರಂಪಾರ ಕ್ಷಣಗಳನ್ನೆಣಿಸಿದ, ಘಳಿಗೆ—ಜಾವಗಳನ್ನು.

ಇಲ್ಲಿ ಈ ಜನ ವೇಳೆಯನ್ನು ಘಂಟೆಗಳಲ್ಲಿ ಎಣಿಸುತ್ತಿದ್ದರು. ಹನ್ನೆರಡಕ್ಕೆ ನಡುರಾತ್ರೆ. ಹನ್ನೆರಡಕ್ಕೆ ಮಧ್ಯಾಹ್ನ. ಆರು ಅಂದರೆ ಬೆಳಿಗ್ಗೆ. ಆರು ಅಂದರೆ ಸಂಜೆ.

ಒಂದು ಘಳಿಗೆಗೆ ಎಷ್ಟು ಘಂಟೆ ? ಅಥವಾ, ಒಂದು ಘಂಟೆಗೆ ಎಷ್ಟು ಘಳಿಗೆ ?

ಅಕೋ ಹೊಡೆಯುತ್ತಿದ್ದಾನೆ : ಒಂದು, ಎರಡು, ಮೂರು...ಹತ್ತಕ್ಕೆ ನಿಂತಿತು.

ಹತ್ತಾದ ಬಳಿಕ ಹನ್ನೊಂದು.

ಹ-ನ್ನೊಂ-ದು.

ಇನ್ನು ಹನ್ನೆರಡು.

ಸೊಳ್ಳೆಗಳ ಗುಂಯಾರವ. ದೂರದಲ್ಲೊಂದು ನಾಯಿ ಬಗುಳುತ್ತಿತ್ತು. ಪ್ರಾಕಾರದ ಮೇಲೆ ಪಹರೆ ನಡೆಸಿರುವವರ ಧ್ವನಿವಿನಿಮಯ :

"ಆಲ್ ಬೇಲ್—ಆಲ್ ಬೇಲ್."

ಅಪರಂಪಾರಸ್ವಾಮಿ ಕೈಬೆರಳುಗಳನ್ನು ಅಸಹನೆಯಿಂದ ಬಾರಿ ಬಾರಿಗೂ ಹಿಸುಕಿಕೊಂಡು ಸದ್ದು ಮಾಡದೆ ಅತ್ತಿತ್ತ ನಡೆದ.

ಘಂಟೆ.

ಎಣಿಸುವ ಅಗತ್ಯವಿರಲಿಲ್ಲ. ಹನ್ನೊಂದಾದ ಬಳಿಕ ಹನ್ನೆರಡೇ. ಆದರೂ ಅಪರಂಪಾರ ಎಣಿಸಿದ.

ಸರಿಯಾಗಿತ್ತು.

ರಪ್–ರಪ್ ರಪ್–ರಪ್.

ಪಾದರಕ್ಷೆಯ ಹೆಜ್ಜೆಗಳು. ಕಾವಲುಗಾರ. [ಮಲ್ಲಪ್ಪ ?]

ಸದ್ದು ಸ್ವಲ್ಪ ದೂರ ಕೇಳಿಸಿ, ನಿಂತುಹೋಗುತ್ತಿತ್ತು. ನಿಮಿಷ ಬಿಟ್ಟು ಮತ್ತೆ ಕೇಳಿಸಿ, ಇಲ್ಲವಾಗುತ್ತಿತ್ತು.

[ಅಲ್ಲಲ್ಲಿ ನಿಂತು ನಿಂತು ತಿರುತಿರುಗಿ ನೋಡಿ ಬರುತ್ತಿದ್ದಾನೆ.]

ರಪ್–ರಪ್ ರಪ್–ರಪ್.

ಜಗಲಿಯಲ್ಲಿ ಮಂದಪ್ರಕಾಶ. ತಾನು ಕಾಣಿಸಿದಂತೆ ಬಾಗಿಲಿನಿಂದ ತುಸು ದೂರದಲ್ಲಿ ಅಪರಂಪಾರ ನಿಂತ.

ಹತ್ತಿರ ಬಂದು, ಕೋಣೆಯ ಮುಂದೆ ಕೊನೆಗೊಂಡ ಕಾಲ ಸಪ್ಪಳ.

ಕಾವಲುಗಾರನ ಪೋಷಾಕು, ಕೈಯಲ್ಲಿ ಬಂದೂಕು. ಇವನಿಗೂ ಗಿರಿಜಾಮೀಸೆ.

ಬೇರೆ ದಿನವಾಗಿದ್ದರೆ "ಮಲ್ಲಪ್ಪಣ್ಣ" ಎಂದು ಆತ್ಮೀಯವಾಗಿ ಕರೆಯಬಹುದಿತ್ತು.

ಅಪರಂಪಾರ ನಿದ್ದೆಹೋಗಿಲ್ಲವಷ್ಟೆ ಎಂದು ಇಣಿಕಿನೋಡಿ, ನಿಂತಿದ್ದ ವ್ಯಕ್ತಿಯ ರೂಪು ರೇಖೆಗಳನ್ನು ಕಂಡು ಸಮಾಧಾನಗೊಂಡು, ಆ 'ಕಾವಲುಗಾರ' ಮೆಲ್ಲನೆ ಕೊಠಡಿಯ ಬೀಗ ವನ್ನು ತೆರೆದ.

ರಪ್–ರಪ್ ರಪ್–ರಪ್.

ಮುಂದಕ್ಕೆ ಹೊರಟುಹೋದ 'ಕಾವಲುಗಾರ.'

ಅಪರಂಪಾರ ಬಲ್ಲ : ಎಡಕ್ಕೆ, ಮತ್ತೆ ಎಡಕ್ಕೆ.

ತಾನು ಅವನನ್ನು ಹಿಂಬಾಲಿಸಬೇಕು...

['ಕ್ಷಣ ಬಿಟ್ಕೊಂಡು'...]

ಅಪರಂಪಾರ ಬಾಗಿಲನ್ನು ಮುಟ್ಟಿದ. ಸ್ಪರ್ಶಮಾತ್ರಕ್ಕೇ ಅದು ಕಿರಿಚಿಕೊಂಡಿತು.

[ಇತರರಿಗೆ ಎಚ್ಚರವಾಗದೆ ಈ ಸದ್ದಿಗೆ ?]

ಏನು ಮಾಡಲಿ ತಾನು ? ಇಷ್ಟೊಂದು ಸಪ್ಪಳವಾಗುತ್ತಿದೆಯಲ್ಲ ?

ರಪ್–ರಪ್ ರಪ್–ರಪ್.

ಇದೇನು ? ಮಲ್ಲಪ್ಪ ಮತ್ತೆ ಬರುತ್ತಿರುವನೆ ?

ರಪ್–ರಪ್ ರಪ್–ರಪ್.

ಅಲ್ಲ ! ಇದು ಇತ್ತ ಕಡೆಯಿಂದ ! ಬೇರೆ ಯಾವನೊ ಕಾವಲುಗಾರ.

ಆತ ದಾಟಿಹೋಗಿರುವವರೆಗೂ ಕಾದಿರಲೆ ? ತನ್ನ ಬಾಗಿಲ ಕಡೆಗೆ ಅವನ ದೃಷ್ಟಿ ಹೊರಳಿದರೆ ?

"ಹುಚ್ಚಪ್ಪ ! ಹೊಂಟೋಗು !"

ಪಿಸು ಮಾತು ಬಂದುದು ಮಗ್ಗುಲ ಕೊಠಡಿಯಿಂದ. ಅಂಥ ಭಾಗ್ಯ ತನಗಿಲ್ಲವೆಂದು ಕರುಬದೆ ಕೊಲೆಪಾತಕಿ ಕೈದಿ ಹೇಳುತ್ತಿದ್ದ : 'ಹೊರಟು ಹೋಗು !'

ರಪ್ ರಪ್ ಸದ್ದು ನಿಂತಿತು. ಮರಳಿ ಬಂದ ಕಡೆಗೇ ಆತ ತಿರುಗಿರಬಹುದು. ತಾನಿನ್ನು ತಡಮಾಡಬಾರದು.

ಅಪರಂಪಾರ ಜರ್ರೆಂದು ಬಾಗಿಲನ್ನು ತಳ್ಳಿದ. ಸಪ್ಪಳ ಕರ್ಣಕಠೋರವಾಗಿತ್ತು. ಹೊರಳಿ ನೋಡದೆ ಆತ ಧಾವಿಸಿದ—ಎಡಕ್ಕೆ, ಮತ್ತೆ ಎಡಕ್ಕೆ.

ಶಿಳ್ಳು.

"ನಿಲ್ಲು! ನಿಲ್ಲು!"

ಶಿಳ್ಳು ಪುನಃ.

ಶಿಳ್ಳಿಗೆ ಪ್ರತ್ಯುತ್ತರವಾಗಿ ಮತ್ತೊಂದು ಶಿಳ್ಳು ಕೇಳಿಸಿತು, ದೂರದಿಂದ.

ಘಂಟೆ ಬಾರಿಸಿತು—ಅಪಾಯದ ಘಂಟೆ.

"ನಿಲ್ಲು! ನಿಲ್ಲು!"

ಧಡ್ ಧಡ್ ಧಡ್.

ಓಡುವ ಸದ್ದು.

ಎಚ್ಚೆತ್ತ ಕೈದಿಯೊಬ್ಬ ಕೂಗಿಕೊಂಡ:

"ಭಲೆ ಬಹಾದ್ದೂರ್!"

ಕತ್ತಲಲ್ಲೂ ಅಪರಂಪಾರಸ್ವಾಮಿ ನೇರವಾಗಿ ಓಡಿದ್ದ. ಪ್ರಾಕಾರದ ಬುಡದಲ್ಲಿ ಮಲ್ಲಪ್ಪ ನಿಂತಿದ್ದ:

"ಹತ್ತಿ ಸ್ವಾಮಿಯೋರು, ಹಗ್ಗ ಇಳಿಬಿಟ್ಟದೆ!"

ಬಲವಾದ ಹಗ್ಗ. ಮಲ್ಲಪ್ಪ ಅದನ್ನು ಅಪರಂಪಾರನ ಕೈಗಿತ್ತ.

"ಏರಿಹೋಗಿ!"

ಹತ್ತಿರದಿಂದಲೇ ಕೇಳಿಸಿತು:

"ಗುಂಡು ಹಾರಿಸ್ತೀನಿ, ನಿಲ್ಲು!"

ಮಲ್ಲಪ್ಪ, ಎವೆಮುಚ್ಚಿ ತೆರೆಯುವುದರೊಳಗೆ ಅಪರಂಪಾರನಿಗೆ ಅಡ್ಡವಾಗಿ ನಿಂತಿದ್ದ. ಬಂದೂಕನ್ನೆತ್ತಿ, ಧ್ವನಿಬಂದ ಕಡೆಗೆ ಆತ ಗುರಿಯಿಟ್ಟ.

ಇನ್ನು ಹಾರಿಸಬೇಕು.

"ಢಂ!"

ಅದು ಬಂದುದು ಎದುರುಗಡೆಯಿಂದ. ಬಡೆದುದು ಮಲ್ಲಪ್ಪನ ಎದೆಗೆ.

''ಹಾ!''

''ಏನಾಯ್ತು ಮಲ್ಲಪ್ಪಣ್ಣ? ಮಲ್ಲಪ್ಪಣ್ಣ—''

ಅಪರಂಪಾರ ಹಗ್ಗವನ್ನು ಬಿಟ್ಟು ಕೆಳಗುರುಳಿದ ಮಲ್ಲಪ್ಪನನ್ನು ಹಿಡಿದುಕೊಂಡ.

''ಆಯ್! ಸ್ವಾಮಿಯೋರೆ...ನಾ...ಹೋಗತೇನಿ...ಶಿವ ಶಿವ—''

''ಮಲ್ಲಪ್ಪಣ್ಣ! ಮಲ್ಲಪ್ಪಣ್ಣ!"

ಅಪರಂಪಾರ ಧ್ವನಿ ತೆಗೆದು ಅತ್ತ:

''ಅಣ್ಣ! ಏನಾಗ್ಹೋಯ್ತುವೋ!''

ಕಾವಲುಗಾರ ಬಂದ; ಕಂದೀಲುಗಳೊಡನೆ ಸಿಪಾಯಿಗಳು ಬಂದು ತಲಪಿದರು.

''ಹಿಡಿಯಿರಿ ಅವನನ್ನು!''

ಕಾವಲುಗಾರನೆಂದ :

''ಇವನು ಕೊಡಗಿನ ಜಂಗಮ ! ಹಿಡಿದು ಕಟ್ಟಿ ! ಸಂಕೋಲೆ ತನ್ನಿ ! ಕಾಲಿಗೆ—ಕೈಗೆ !''

''ದೀಪ ಈ ಕಡೆ ಹಾಯಿಸು. ನೋಡಿದಿರಾ ? ಹಗ್ಗ !''

''ಯಾರಾದರೂ ಹೊರಬದಿಗೆ ಓಡಿ. ಅಲ್ಲಿ ಇವನ ಕಡೆಯವರು ಕಾದಿರತಾರೆ.''

ಅಪರಂಪಾರನ ಮೆದುಳಲ್ಲಿ ಮಿಂಚಿತು. ಇವರು ಆ ಕಡೆಗೆ ಹೋದರೆಂದರೆ ಶಂಕರಪ್ಪ ಸಿಕ್ಕಿಬೀಳುವ.

ಅವನೆಂದ :

''ನಾ ಒಬ್ಬನೇ ಕಾಣಿರೋ ! ನನ್ನ ಹಿಡಿಯಿರಿ !''

''ನಿನ್ನನ್ನೂ ಹಿಡೀತೀವಿ. ನಿನ್ನಪ್ಪನನ್ನೂ ಹಿಡೀತೀವಿ, ಬೋ—ಮಗನೆ.''

ಅಪರಂಪಾರ ಅಂದುಕೊಂಡ :

''ಇಲ್ಲ, ಶಂಕರಪ್ಪ ಸಿಕ್ಕಿಬೀಳಲಾರ. ಗುಂಡಿನ ಸಪ್ಪಳ, ಈ ಗದ್ದಲ, ಕೇಳಿ ಅವನು ತಪ್ಪಿಸಿಕೊಂಡಿರುತಾನೆ.''

ಕಾವಲುಗಾರನೆಂದ :

''ಅಲ್ಲ—ಸಿಪಾಯಿ ದಿರಸು ಹಾಕ್ಕೊಂಡಿರೋ ಇವನು ಯಾರು ? ನಮ್ಮವರನ್ನೇ ನಾ ಕೊಂದೆನಾ ?''

ಗುಂಡು ತಗಲಿ ಸತ್ತವನ ರುಂಡವನ್ನು ಕಂದೀಲುಗಳ ಪ್ರಭೆ ಆವರಿಸಿತು.

ಅದೇ ಕಾವಲುಗಾರ ಉದ್ಗರಿಸಿದ :

''ಇವನೇ ಕಣಪ್ಪೋ ನನಗೆ ಸುವಾಸನೆ ತಂಬಾಕ ತಿನಿಸಿದವನು ! ನಮ್ಮ ಸಿಪಾಯಿಽನೇ ಅಂತಿದ್ದೆ. ಬೀಗದ ಕೈಗೊಂಚಲು ಎಲ್ಲಿ ಕಳೆಯಿತೋ ಅಂತ ದಿಗಿಲಾಗಿತ್ತು. ತೂಕಡಿಸಿ ಬಿದ್ದವನಿಗೆ ಎಚ್ಚರವಾದಾಗ ಅದಿರಲಿಲ್ಲ ! ಇವನು ಕದ್ದು ಇಲ್ಲಿ ಎಲ್ಲೋ ಎಸೆದಿರಬೇಕು.''

ಸಂಕೋಲೆಗಳು ಬಂದುವು. ಹಿಡಿದು ನಿಲ್ಲಿಸಿದ್ದ ಅಪರಂಪಾರನ ಕೈಕಾಲುಗಳಿಗೆ ಅವು ಗಳನ್ನು ತೊಡಿಸಿದರು.

ಸೆರೆಮನೆಯ ಅಧಿಕಾರಿ ಇಬ್ಬರು ಆಂಗ್ಲ ಸಿಪಾಯರ ಜತೆ ಓಡಿಬಂದ.

''ಎಲಾ ಫಕೀರ !'' ಎಂದ ಆತ, ಅಪರಂಪಾರನನ್ನು ನೋಡಿ.

ಸತ್ತವನನ್ನೂ ಅವನು ದಿಟ್ಟಿಸಿದ.

ಸಿಪಾಯಿಗಳ ಕಡೆ ತಿರುಗಿ ಅವನೆಂದ :

''ಇದು ರಾಜಕೀಯ ಪ್ರಕರಣ. ಚೀಫ್ ಕಮಿಾಶನರಿಗೆ ವರದಿ ಮಾಡ್ಬೇಕು. ಈ ಸತ್ತ ಸಿಪಾಯಿಯ ಬಗ್ಗೆ ವಿಚಾರಿಸಬೇಕು. ಇದರ ಹಿಂದೆ ದೊಡ್ಡ ಒಳಸಂಚಿದ್ದೀತು. ಆ ಫಕೀರ ನನ್ನು ಕಛೇರಿಯ ಪಕ್ಕದ ಕೊಠಡಿಯಲ್ಲಿ ಬಂಧನದಲ್ಲಿಡಿ. ನಾನು ಚೀಫ್ ಕಮಿಾಶನರನ್ನು ಎಬ್ಬಿಸಿ ಕರೆತರತೇನೆ.''

ಹೆಬ್ಬಾಗಿಲಿನಿಂದ ಹೊರಹೋಗಿ ಗೋಡೆಯನ್ನು ಬಳಸಿ ಬಂದವರು, ಯಾರನ್ನೂ ಕಾಣಲಿಲ್ಲ. ಪ್ರಾಕಾರದಿಂದ ಇಳಿಸಿ ಮರದ ಕಾಂಡಕ್ಕೆ ಬಿಗಿದಿದ್ದ ಹಗ್ಗದ ಹೊರತಾಗಿ ಬೇರೇನೂ ಅಲ್ಲಿರಲಿಲ್ಲ.

ಮಲ್ಲಪ್ಪ ಮಡಿದ ಘಳಿಗೆಯಲ್ಲಿ ಅಪರಂಪಾರನ ಕಣ್ಣುಗಳಿಂದ ಸುರಿದ ಕಂಬನಿ ಎಂದೋ ಆರಿಹೋಗಿತ್ತು. ಆ ಕಣ್ಣುಗಳೀಗ ಎರಡು ಕೆಂಡಗಳಂತೆ ಪ್ರಜ್ವಲಿಸುತ್ತಿದ್ದುವು. ಸಂಕೋಲೆ

ಗಳ ಝಣತ್ಕಾರದ ಹಿನ್ನೆಲೆಯಲ್ಲಿ ಆತ ಮತ್ತೊಮ್ಮೆ ಮದಗಜವಾಗಿ, ಸಿಪಾಯರ ನಡುವೆ ನಡೆದ.

## ೭೩

ಮುಂಜಾನೆಯಿಂದಲೇ ಮೋಡ ಕವಿದಿತ್ತು. ಸೂರ್ಯ ಉದಯಿಸಿದ್ದ. ಮೂರು ನಾಲ್ಕು ಘಳಿಗೆಗಳ ಕಾಲ ಅವನ ಮಾರ್ಗಕ್ರಮಣವೂ ನಡೆದಿತ್ತು. ಆದರೆ ಆತನ ಮುಖ ಕಂಡವರಿಲ್ಲ.

ಬೆಳಿಗ್ಗೆ ಒಂಭತ್ತು ಘಂಟೆಯ ವೇಳೆಗೆ ವಿಚಾರಣೆ ಮುಗಿಯಿತು. ಸತ್ತ ಸಿಪಾಯಿ 'ಮಹಾದೇವ' ಎಂದು ಹೆಸರನ್ನು ಕೊಟ್ಟಿದ್ದ. ಇತ್ತೀಚೆಗೆ ದಂಡಿಗೆ ಭರ್ತಿಯಾದವನು. ಶಂಭು ಎಂಬವನು ಅವನ ಸಂಗಡಿಗ. ಈ ನಡುವೆ ಇಬ್ಬರ ವರ್ತನೆಯೂ ಸಂಶಯಾಸ್ಪದ ವಾಗಿ ಕಂಡಿತ್ತು. ಇವರಿಬ್ಬರೂ ಪಿತೂರಿಗಾರರೆಂಬುದು ಸ್ಪಷ್ಟವಾಗಿತ್ತು.

'ಮಲ್ಲಪ್ಪ'—'ಮಲ್ಲಪ್ಪ' ಎಂದು ಗುಂಡು ತಗಲಿ ಉರುಳಿದ ಸಿಪಾಯಿಯನ್ನು ಅಪರಂಪಾರ ಕರೆದುದನ್ನು ಕಾವಲುಗಾರ ಕೇಳಿದ್ದ.

ಅಪರಂಪಾರನನ್ನು ಪ್ರಶ್ನಿಸಲಾಯಿತು :

"ಅವನ ನಿಜವಾದ ಹೆಸರೇನು ?"

ಉತ್ತರ ಬರಲಿಲ್ಲ.

ಈ ಹಂಚಿಕೆಯಲ್ಲಿ ಬೇರೆ ಯಾರು ಯಾರು ಸೇರಿಕೊಂಡಿದಾರೆ ?"

ಮೌನ.

"ಮೂಕನಾದೆಯಾ ನೀನು ? ತಾಳು, ನಿನ್ನ ಕುರುಡ ಮಾಡ್ತೇವೆ !"

ಕೊಡಲಾದ ತೀರ್ಪು :

"ಅಪರಂಪಾರನ ಎರಡೂ ಕಣ್ಣುಗಳನ್ನು ಕೀಳಬೇಕು !"

ಆಜ್ಞೆ ಕೇಳಿ, ಬಿಳಿಯ ಸಿಪಾಯರ ಕಣ್ಣುಗಳು ಮಿನುಗಿದುವು. ಕರಿಯ ಸಿಪಾಯರಲ್ಲಿ ಕೆಲವರ ಮುಖಗಳು ಮತ್ತಷ್ಟು ಕಪ್ಪಿಟ್ಟುವು.

ತೀರ್ಪನ್ನು ಕೃತಿಗಿಳಿಸಲು ನಿಯೋಜಿತರಾದವರು ಇಬ್ಬರು ಆಂಗ್ಲ ಸಿಪಾಯರು :

ಅಪರಂಪಾರನನ್ನು ಸೆರೆಮನೆಯ ಕಛೇರಿಯ ಮುಂದಿನ ಅಂಗಳಕ್ಕೆ ನಡೆಸಿ ತಂದರು.

ಅಪರಂಪಾರ ಕ್ಷಮೆಯಾಚಿಸಲಿ—ಎಂದು, ಬೆದರಿಸುವುದಕ್ಕೋಸ್ಕರ ಆ ತೀರ್ಪು ಕೊಟ್ಟರೆ ?

ಆಂಗ್ಲರ ವಿಚಾರಣೆ ತೀರ್ಮಾನಗಳ ವೈಖರಿಯನ್ನು ಬಲ್ಲ ಯಾರಿಗೂ ಅಂತಹ ಭ್ರಮೆ ಇರುವುದು ಸಾಧ್ಯವಿರಲಿಲ್ಲ.

ಒಬ್ಬನಿಗೆ ಮಾತ್ರ ಅಂತಹ ಭ್ರಮೆ ಇತ್ತು. ಆತ ಡಾಕ್ಟರ್ ಕ್ಯಾಂಪ್‌ಬೆಲ್. ಸ್ವಲ್ಪ ಸಮಯದ ಹಿಂದೆಯಷ್ಟೇ ಆ ತರುಣ ವಿಲಾಯತಿಯಿಂದ ಹಿಂದೂಸ್ಥಾನಕ್ಕೆ ಬಂದಿದ್ದ. 'ದರಬಾರಿನ ವೈದ್ಯ' ಎಂದು ಬೆಂಗಳೂರು ಠಾಣ್ಯಕ್ಕೆ ಆತ ಕಳುಹಲ್ಪಟ್ಟಿದ್ದ. ಗುಂಡು ತಗಲಿದ ಸಿಪಾಯಿಯ ಶವ ಪರೀಕ್ಷೆಗೆಂದು ಈಗ ಅವನನ್ನು ಕರೆಸಲಾಗಿತ್ತು. ವಿಚಾರಣೆ ಮುಗಿಯುವವರೆಗೂ ಸೆರೆಮನೆಯ ಆವರಣದಲ್ಲಿರಬೇಕೆಂದು ಅವನು ಆಜ್ಞಪ್ತನಾಗಿದ್ದ.

ಒಂದು ಬಂಡಾಯದ ನಾಯಕನೆಂದು ಹೇಳಲಾದ ಅಪರಂಪಾರನನ್ನು—ಒಬ್ಬ ವಿರಕ್ತ

ನನ್ನು—ಕಾಣುವ ಕುತೂಹಲ ಕ್ಯಾಂಪ್‌ಬೆಲ್‌ಗೂ ಇತ್ತು. ವಿಚಾರಣೆಯ ವೇಳೆ ಆತ ಒಬ್ಬ ಪ್ರೇಕ್ಷಕನಾದ.

ಆದರೆ ಕೊನೆಯ ಅಂಕದ ಸಿದ್ಧತೆ ಕಂಡಾಗ, ಅವನು ತಲ್ಲಣಿಸಿ ಹೋದ...

ಈಗಲೂ ಹೊರಬರಲಾರೆ, ಎಂದು ಮೋಡಗಳ ಮರೆಯಲ್ಲೇ ಸೂರ್ಯ ನಿಂತ.

"ಅಟೇನ್-ಶನ್ !"

ಹಿಮ್ಮಡಿಗಳ ಸಪ್ಪಳಗಳ ಬಳಿಕ—

"ಜಾಕ್ಸನ್—ಮಾರ್ಚ್ !"

ಒಂದು ಬಯನೆಟ್ಟು ಅಲುಗದೆ ನಿಂತ ಅಪರಂಪಾರನ ಎಡಗಣ್ಣನ್ನು ತಿವಿಯಿತು.

"ಮಹಾದೇವ !' ಎಂದು ಅಪರಂಪಾರ ಉದ್ಗರಿಸಿದ.

ಪ್ರೇಕ್ಷಕನಾಗಿದ್ದ ಒಬ್ಬ ಆಂಗ್ಲ ಸಿಪಾಯಿ ಮಗ್ಗುಲಲ್ಲಿದ್ದವನೊಡನೆ ಪಿಸುದನಿಯಲ್ಲಿ ಅಂದ:

"ಸತ್ತುಹೋದನಲ್ಲ ಆ ಸೈನಿಕ ? ಅವನನ್ನು ನೆನಸುತಿದಾನಾ ?"

ಅವನ ಬಂಧು ನುಡಿದ :

"ಇಲ್ಲ. ಅದು ಅವರ ದೇವರ ಹೆಸರು."

ಆಜ್ಞೆ ಮತ್ತೆ ಕೇಳಿಸಿತು :

"ಜೋನ್ಸ್—ಮಾರ್ಚ್ !"

ಕಣ್ಣಾಲಿ ಹೊರಬಂದು ಎಡಗಡೆಯೊಂದರಿಂದಲೇ ರಕ್ತ ಧುಮ್ಮಿಕ್ಕುತ್ತಿದ್ದ ಅಪೂರ್ಣ ಚಿತ್ರ. ಇನ್ನೊಂದು ಬಯನೆಟ್ಟು ಬಲಗಣ್ಣನ್ನು ತಿವಿದು, ಆ ಚಿತ್ರವನ್ನು ಪೂರ್ಣಗೊಳಿಸಿತು.

"ಮಹಾದೇವ !"

ಕ್ಯಾಂಪ್‌ಬೆಲ್ ದೃಶ್ಯ ನೋಡಲಾರದೆ ತನ್ನ ಕಣ್ಣುಗಳನ್ನು ಮುಚ್ಚಿಕೊಂಡ.

ಆ ಗಾಯಗಳಿಗೆ ಪಟ್ಟಿ ಕಟ್ಟಬೇಕೆಂದು ಡಾಕ್ಟರ್ ಕ್ಯಾಂಪ್‌ಬೆಲ್‌ಗೆ ಸೂಚಿಸಲಾಯಿತು.

ಆ ಅಸಹಾಯತೆಯಲ್ಲೂ ಎಂಥ ಗಾಂಭೀರ್ಯವಿತ್ತು ಅಪರಂಪಾರನ ನಿಲುವಿನಲ್ಲಿ !

ಕ್ಯಾಂಪ್‌ಬೆಲ್ ಅಂದ :

"ರೋಗಿ ಕೂತುಕೊಳ್ಳಬೇಕು."

ಸಿಪಾಯಿಯೊಬ್ಬ ಪೀಠ ತಂದು, "ಕೂತ್ಕೊಳ್ಳಿ" ಎಂದ. ಅವನ ಅರಿವಿಲ್ಲದಂತೆಯೇ ಬಹುವಚನದ ಆ ಪದ ತುಟಿಗಳಿಂದ ಹೊರಬಿದ್ದಿತ್ತು.

ಇಬ್ಬರು ಸಿಪಾಯರು ಅಪರಂಪಾರನ ರೆಟ್ಟೆಗಳನ್ನು ಹಿಡಿದು ಪೀಠಕ್ಕೆ ಜಗ್ಗಿದರು.

"ಶಿವ ! ಶಿವ ! ಶಿವ !"

ಕ್ಯಾಂಪ್‌ಬೆಲ್ ಆತನ ಬಳಿ ಸಾರಿ, ಹಿಂದೂಸ್ಥಾನಿಯಲ್ಲಿ ಅಂದ :

"ನಾನು ಡಾಕ್ಟರ್, ವೈದ್ಯ. ನನ್ನ ಕರ್ತವ್ಯ ಮಾಡುತೇನೆ. ಕಣ್ಣುಗಳಿಗೆ ಔಷಧಿ ಹಾಕುತೇನೆ."

ಈಗ ಅಪರಂಪಾರ ಮುಂಗೈಗಳೆರಡನ್ನೂ ಎತ್ತಿ ಅದುರುವ ಕಂಠದಲ್ಲಿ ನುಡಿದ :

"ಔಷಧಿ ? ಹುಣ್ಣಿನ ಮೇಲೆ ಬರೆ ? ಕುರುಡನ ಮಾಡಿದ ಬಳಿಕ ಪಾದಪೂಜೆ ? ಮರುಳೆ ಸರಿಯುತ್ತ !"

ಅಪರಂಪಾರ ಏಳಲೆತ್ನಿಸಿದ. ಅವನನ್ನು ಬಲಾತ್ಕಾರವಾಗಿ ಪೀಠಕ್ಕೆ ಒತ್ತಿ ಹಿಡಿದಾಗ ಆತ ಕೂಗಾಡಿದ :

"ಮುಟ್ಟದಿರಿ, ಮುಟ್ಟದಿರಿ! ಹೊಲಸು ಕೈಗಳಿಂದ ನನ್ನ ಮಲಿನ ಮಾಡದಿರಿ!"

ಅವನು ಪ್ರತಿಭಟಿಸುತ್ತಿದ್ದಂತೆಯೇ ಕಣ್ಣುಗಳಿಗೆ ಔಷಧಿ ಲೇಪಿಸಿ ಪಟ್ಟಿ ಕಟ್ಟಲಾಯಿತು.

ಕ್ಯಾಂಪ್‌ಬೆಲ್ ಅಂದ:

"ಗುಣವಾಗುವವರೆಗೂ ಕೈಗಳ ಬೇಡಿ ಹಾಗೆಯೇ ಇರಲಿ. ಗಾಯವನ್ನು ತುರಿಸಿದ ನೆಂದರೆ ಮೈಗೆ ನಂಜೇರೀತು."

ಸೆರೆಮನೆಯ ಆವರಣದಲ್ಲಿ ಒಂಟಿಯಾಗಿ ಪ್ರತ್ಯೇಕವಾಗಿದ್ದ ಕೊಠಡಿಯೊಂದಿತ್ತು. ಅಲ್ಲಿಗೆ ಅಪರಂಪಾರನನ್ನು ಕರೆದೊಯ್ಯಬೇಕೆಂದು ಸೆರೆಮನೆಯ ಅಧಿಕಾರಿ ಆಜ್ಞಾಪಿಸಿದ.

ಕಾಲುಗಳ ಸಂಕೋಲೆಯನ್ನು ಬಿಚ್ಚಿ ಕೈದಿಗೆ ಸಿಪಾಯರೆಂದರು:

"ನಡೆ!"

ಅಪರಂಪಾರ ತಲೆ ಎತ್ತಿ ಎದ್ದು ನಿಂತ. ಅವನ ಮೈಯೆಲ್ಲ ಕಂಪಿಸುತ್ತಿತ್ತು. ಆತನೇ ಗೆದ್ದವನು, ಉಳಿದವರು ಕೈದಿಗಳು—ಎನ್ನುವಂತಿತ್ತು ಅವನ ಠೀವಿ.

ಕಣ್ಣು ಕಾಣಿಸದಿದ್ದರೂ ಧೀರನಡಿಗೆಯ ಹೆಜ್ಜೆಗಳನ್ನಿಡುತ್ತ ಸಿಪಾಯರ ಜತೆ ಆತ ನಡೆದ.

...ಸೂರ್ಯನೀಗ ಮುಖ ತೋರಿಸಿ ಉದಾರವಾಗಿ ಬೆಳಕು ಚೆಲ್ಲಿದ.

ಆದರೆ ಅಪರಂಪಾರನ ಪಾಲಿಗೆ ಹಗಲೇನು? ಇರುಳೇನು? ಅವನ ಮುಂದಿತ್ತು ಏಕಪ್ರಕಾರವಾದ ಅನಂತ ಕಾಲ.

ಕೊಠಡಿಯಲ್ಲಿ ಒಬ್ಬನೇ ಉಳಿದಾಗ ಆತನೆಂದ:

"ಓಡಿವ ಕೈಯ ಮೇಲೆ ಕತ್ತಲೆಯಯ್ಯಾ! ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ! ಗುಹೇಶ್ವರನೆಂಬುದು ಅತ್ತಲೆಯಯ್ಯಾ!"

## ೩೪

ದಿನಗಳು ಕಳೆದುವು. ಅಪರಂಪಾರನ ಗಾಯ ಮಾಸಿತು. ಮೈಗಾದ ಗಾಯ. ಮನಸ್ಸಿನದು ಮಾತ್ರ ತೀವ್ರ ನೋವಿನ ನಿತ್ಯ ಕಾಹಿಲೆಯಾಯಿತು.

ಅಪರಂಪಾರನಿಗೆ ಆಶ್ಚರ್ಯ ಉಂಟುಮಾಡಿದ ಒಂದು ಸಂಗತಿಯೆಂದರೆ, ಆಂಗ್ಲರ ವಿಷಯದಲ್ಲಿ ಅವನ ಹೃದಯ ಕಲ್ಲಾಗಿದ್ದರೂ ಔಷಧೋಪಚಾರ ನೀಡಲೆಂದು ಡಾಕ್ಟರ್ ಕ್ಯಾಂಪ್‌ಬೆಲ್ ಬಂದಾಗ, ಒಳಗಿನಿಂದ ಮಾರ್ದವತೆಯ ಸೆಲೆಗಳು ತುಸು ಒಸರುತ್ತಿದ್ದುವು.

ಒಮ್ಮೆ ಆತ ಕೇಳಿದ:

"ನಿಜವಾಗಿಯೂ ವಿಲಾಯತಿಯವರಾ ನೀವು?"

"ಹೌದು, ಸ್ವಾಮೀಜಿ. ಯಾಕೆ ಕೇಳಿದಿರಿ?"

"ಸುಮ್ಮನೆ. ನಂಬಿಕೆ ಹುಟ್ಟುತಾ ಇಲ್ಲ."

"ಸುಳ್ಳಲ್ಲ, ಸ್ವಾಮೀಜಿ. ನಾನು ಇಂಗ್ಲಿಷರವನೇ."

ಭಾರತೀಯರು ಅನಾಗರಿಕರು, ಅವರನ್ನು ಸುಶಿಕ್ಷಿತರನ್ನಾಗಿ ಮಾಡುವುದು ಕ್ರಿಸ್ತಮತೀಯರ—ಅದರಲ್ಲೂ ಆಂಗ್ಲರ—ಪವಿತ್ರ ಕರ್ತವ್ಯ, ಎಂಬುದನ್ನು ಕ್ಯಾಂಪ್‌ಬೆಲ್ ದೃಢವಾಗಿ ನಂಬಿದವನು. ಆದರೂ, ಅಪರಂಪಾರನನ್ನು ಕುರುಡನನ್ನಾಗಿ ಮಾಡಿದ ದೃಶ್ಯ ಅವನ ಕಣ್ಣಿಗೆ ಕಟ್ಟಿದಾಗಲೆಲ್ಲ, ಕ್ರಿಸ್ತನ ನೆನಪಾಗುತ್ತಿತ್ತು. ಶಿಲುಬೆಯ ಮೇಲೆ ಏಸು. ಅಂಗೈ

ಗಳಿಗೂ ಪಾದಗಳಿಗೂ ಮೊಳೆಗಳು. ಸೋರುತ್ತಿದ್ದ ರಕ್ತ. ಅಪರಂಪಾರ ಆ ಘಳಿಗೆಯಲ್ಲಿ ತೋರಿದ ನಿಶ್ಚಲತೆಯ ರಹಸ್ಯವೇನು ? ಆ ಅಂತಃಶಕ್ತಿಯ ನೆಲೆ ಯಾವುದು ? ಶ್ರದ್ಧೆಯೆ? ಧರ್ಮವೆ ? ದೈವಿಕತೆಯ ಮಟ್ಟವನ್ನು ತಲಪಿದ ಅತಿಮಾನವತ್ವವೆ ?

ರಾಜಕಾರಣಿಗಳಾದ ಸ್ವದೇಶ ಬಾಂಧವರೊಡನೆ ಚರ್ಚಿಸುವ ವಿಷಯವಲ್ಲ ಅದು. ಆದರೂ ಅಂತರಂಗದಲ್ಲಿ, ನಿತ್ಯದ ಚಿಂತನೆಯಲ್ಲಿ ಆ ವಿಷಯ ಅವನನ್ನು ಕಾಡಿತು.

...ಅಪರಂಪಾರ ದೇವರನ್ನು ಕೇಳುತ್ತಿದ್ದ :

"ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೇ ಬರಲಿ."

ಆವರೆಗಿನ ಬದುಕನ್ನು ಅವಲೋಕಿಸುತ್ತ ಆತ ಅಂದುಕೊಳ್ಳುತ್ತಿದ್ದ :

"ಕಿಚ್ಚಿಲ್ಲದ ಬೇಗೆಯಲಿ ಬೆಂದೆ. ಏರಿಲ್ಲದ ಗಾಯದಲಿ ನೊಂದೆ...ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ, ಉಭಯವನೊಡಗೂಡದ ಚಿಮ್ಮಣ, ರೂಹಿಲ್ಲದ ಚಾಣ, ಹಲ್ಲಿಲ್ಲದ ಹಣಿಗೆ ಹಿಡಿದು ಬಂದೆ...ಹೇಡಿ ಬಿರುದ ಕಟ್ಟಿದಂತಾಯಿತೆನ್ನ ವೇಷ...ಹಗರಣ ನಗೆಗೇಡೆಯಾಯಿತ್ತು."

ತನ್ನನ್ನು ತಾನೇ ಸಂತೈಸುತ್ತಿದ್ದ :

"ಮನುಜ, ನಿನಗಾದ ನೋವಿಂಗೆ ಚಿಂತಿಸುವರೆ ?"

* * *

'ಸಿಪಾಯಿ ಶಂಭು'ವಾಗಿದ್ದ ಶಂಕರಪ್ಪ, ಆ ರಾತ್ರೆ ಆಂಗ್ಲರ ಕೈಗೆ ಬೀಳಲಿಲ್ಲ. ಅನಂತರವೂ ಅವರಿಗೆ ಸಿಗಲಿಲ್ಲ. ಏನು ನಡೆಯಿತೆಂಬುದರ ಪೂರ್ಣ ವಿವರ ಆತನಿಗೆ ತಿಳಿಯಲು ಒಂದೆರಡು ದಿನ ಬೇಕಾಯಿತು. ತಿಳಿದಾಗ ಅವನು, "ಅಯ್ಯೋ ಶಿವನೇ ! ಹೀಗೂ ಆಯಿತೆ ?" ಎಂದು ಗೋಳಾಡಿದ.

ಮಲ್ಲಪ್ಪ ಇನ್ನಿಲ್ಲ ; ಸ್ವಾಮಿಯ ಕಣ್ಣುಗಳನ್ನು ಕಿತ್ತರು—ನಡೆದು ಹೋದ ಆ ಘಟನೆಯನ್ನು ನಂಬಲು ಅವನಿಗೆ ಬಹಳ ಹೊತ್ತು ಹಿಡಿಯಿತು.

ಕರಿಯ ಸಿಪಾಯರು 'ಮಹದೇವ'ನ ಶವವನ್ನು ಮಣ್ಣು ಮಾಡಿದ್ದ ತಾಣವನ್ನು ಶಂಕರಪ್ಪ ಗೊತ್ತುಹಚ್ಚಿದ. ಒಂದು ಇರುಳೆಲ್ಲ ಅಲ್ಲಿದ್ದು ಕಣ್ಣೀರಿನಿಂದ ನೆಲ ತೋಯಿಸಿದ.

ಶಂಕರಪ್ಪ ಇನ್ನು ತುಕ್ಕಡಿಯಲ್ಲಿ ಸಿಪಾಯಿಯಾಗಿ ಇರುವಂತಿಲ್ಲ. ಸೆರೆಮನೆಯೊಳಗೆ ಚಾಕರನಾಗಿ ಇದ್ದರೆ ಒಂದಲ್ಲ ಒಂದು ರೀತಿಯಲ್ಲಿ ಅಪರಂಪಾರಸ್ವಾಮಿಯ ಸೇವೆ ಮಾಡಬಹುದು. ಆದರೆ, ತನ್ನನ್ನು ಹಿಡಿಯಬೇಕೆಂದು ಆಜ್ಞೆಯಾಗಿರುವಾಗ, ಅಂತಹ ಹುಚ್ಚು ಸಾಹಸ ತರವಲ್ಲ. ಮುಂದೇನು ಮಾಡಬೇಕು ತಾನು ?

ಮಡಕೇರಿಯಲ್ಲಿ ನೆಲೆಸೋಣವೆಂದರೆ ಅದೂ ಗಂಡಾಂತರದ ಯೋಚನೆಯೇ. ಆತ ಅಪರಂಪಾರನ ಹಿಂಬಾಲಕನಾದುದನ್ನು ಅರಿತ ಕೆಲವರಿದ್ದರು. ಅವರಿಂದ ತನಗೆ ತೊಂದರೆಯಾಗಲೂಬಹುದು.

ಮಕ್ಕಳು ದೊಡ್ಡವರಾಗಿದ್ದರು. ಅವರನ್ನು ಸಂಪಾದನೆಯ ದಾರಿಗೆ ಹಚ್ಚಬೇಕು...

ಸಂಸಾರವನ್ನು ಬೆಂಗಳೂರಿಗೇ ಕರೆತಂದರೆ ? ಇಲ್ಲಿಯೇ ತಾನು ಸ್ಥಿರವಾಗಿ ನೆಲಸಿದರೆ ? ನಾಳೆ ಪರಿಸ್ಥಿತಿ ಹೇಗೆ ರೂಪುಗೊಳ್ಳುವುದೋ ಯಾರು ಬಲ್ಲ ? ತಾನು ಇಲ್ಲಿಯೇ ಇರುವುದರಿಂದ ಸ್ವಾಮಿಯವರಿಗೆ ತನ್ನಿಂದ ಯಾವುದಾದರೊಂದು ಬಗೆಯ ಸಹಾಯವಾಗಲೂ ಬಹುದು...

ಕೊನೆಯ ಯೋಚನೆಯೇ ಸರಿ—ಎಂದುಕೊಂಡ ಶಂಕರಪ್ಪ.

ಗೂಢಚಾರರ ಸುಳಿವು ಹತ್ತದಂತೆ ತನ್ನ ಸಂಸಾರವನ್ನು ಮಡಕೇರಿಯಿಂದ ಕರೆದು ತರುವುದಕ್ಕೆ ಮುನ್ನ, ಹೊಸಳ್ಳಿಗೆ ಶಂಕರಪ್ಪ ಹೋಗುವುದು ಅಗತ್ಯವಿತ್ತು. ಮಲ್ಲಪ್ಪನ ಸಾವನ್ನು ಕುರಿತು ಅಕ್ಕವ್ವನಿಗೆ ಹೇಳಬೇಕಲ್ಲ? 'ನನ್ನ ಆಸೆ ಇನ್ನು ಬಿಟ್ಟುಬಿಡು' ಎಂದು ತನ್ನ ಹೆಂಡತಿಗಾದರೂ ಹೇಳಬಹುದು; 'ನಿನ್ನ ಗಂಡ ತೀರಿಹೋದ' ಎಂದು ಇನ್ನೊಬ್ಬನ ಹೆಂಡತಿಗೆ ಹೇಳುವುದಕ್ಕಾಗದು. ಅಕ್ಕವ್ವನನ್ನು ಕಾಣುವ ಸನ್ನಿವೇಶವನ್ನು ಚಿತ್ರಿಸಿಕೊಂಡಾಗ ಲೆಲ್ಲ ಅವನಿಗೆ ಭಯವಾಗುತ್ತಿತ್ತು.

ಆದರೆ ವಾಸ್ತವದಲ್ಲಿ ಅದು ಅಷ್ಟೊಂದು ಭಯಾನಕವಾಗಿರಲಿಲ್ಲ. ಮೀಸೆ ಬೋಳಿಸಿ ಕೊಂಡು ವರ್ತಕನಂತೆ ವೇಷ ಮರೆಸಿಕೊಂಡು ಶಂಕರಪ್ಪ ಕೊಡಗನ್ನು ಪ್ರವೇಶಿಸಿದ. ಹೊಸಳ್ಳಿ ಯನ್ನು ತಲಪಿ, ಅಕ್ಕವ್ವನನ್ನು ಕಂಡ.

"ಅಕ್ಕಾ, ನಾನು ಯಾವ ಪಾಪ ಮಾಡಿದೇನೋ ಏನೋ? ಒಬ್ಬನೇ ಬಂದಿದೀನಿ."

ಅಕ್ಕವ್ವ ತನ್ನ ಹಣೆಯೊರೆಸಿಕೊಂಡಳು. ಕರಿಮಣಿಸೂತ್ರವನ್ನು ಕಿತ್ತಳು. ಅಪರಂಪಾರ ಸ್ವಾಮಿಗೆ ವಿಧಿಸಲಾದ ಶಿಕ್ಷೆಯ ಬಗೆಗೆ ಹೇಳಿದಾಗ ಮಾತ್ರ ಅವಳ ಅಳಲಿನ ಕಟ್ಟೆಯೊಡೆ ಯಿತು.

ಚೇತರಿಸಿಕೊಂಡ ಮೇಲೆ, ಮಲ್ಲಪ್ಪಗೌಡನ ಕೊನೆಯ ದಿನಗಳ ಸಾಹಸದ ಕಥೆಯನ್ನು ತನ್ನ ಮುಂದಿನ ದಾರಿಯ ಬುತ್ತಿಯಾಗಿ ಆಕೆ ಸ್ವೀಕರಿಸಿದಳು.

...ಶಂಕರಪ್ಪ ಮಡಕೇರಿಗೆ ಬಂದು ಹೋದ ಬಳಿಕ ಅವನ ಹೆಂಡತಿ ಬಹಿರಂಗವಾಗಿ ನಾಲ್ಕು ಜನರೆದುರು ಅಂದಳು:

"ನಮಗಿನ್ನು ಯಾರೂ ದಿಕ್ಕಿಲ್ಲ. ಮಕ್ಕಳ ಜತೆ ಮೈಸೂರಿಗೆ ಹೋಗಿ ಏನಾದರೂ ಚಾಕರಿ ಮಾಡಿಕೊಂಡು ಬದುಕಿರತೇನೆ."

ಒಂದು ದಿನ ಹೇರುಬಂಡಿಗಳು ಮೈಸೂರಿನ ಕಡೆ ಹೊರಟಾಗ ಶಂಕರಪ್ಪನ ಸಂಸಾರವೂ ಮಡಕೇರಿಯನ್ನು ತ್ಯಜಿಸಿತು.

ಅವರಿಗಾಗಿ ಶಂಕರಪ್ಪ ಮೈಸೂರಲ್ಲಿ ಕಾದಿದ್ದ. ಆತ ಅವರನ್ನು ಬೆಂಗಳೂರಿಗೆ ಕರೆದೊಯ್ದ. ಅಲ್ಲಿ ಊರಿನ ಹೊರವಲಯದಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ಅವರು ವಾಸಿಸತೊಡ ಗಿದರು. ಶಂಕರಪ್ಪ ಕಡಲೆಪುರಿ ಚಿಲ್ಲರೆ ವ್ಯಾಪಾರವನ್ನು ಕೈಗೊಂಡ. ದೊಡ್ಡವರಾಗಿದ್ದ ಶಂಕರಪ್ಪನ ಮಕ್ಕಳಿಬ್ಬರೂ, ತಾವು ಶಿವಮೊಗ್ಗಿ ಕಡೆಯವರೆಂದು ಹೇಳಿಕೊಂಡು, ಮಂಡಿ ಪೇಟೆಯಲ್ಲಿ ವರ್ತಕರ ಬಳಿ ಊಳಿಗಕ್ಕೆ ನಿಂತರು.

* * *

ದೇವಮ್ಮಾಜಿ ಅಪ್ಪಂಗಳದಲ್ಲಿ ತಾಯಿಯಾದಳು. ಹುಟ್ಟಿದ್ದು ಹೆಣ್ಣು.

"ಹಾಲೇರಿ ವಂಶದಲ್ಲಿ ಹೆಣ್ಣೇ ಜಾಸ್ತಿ. ನಾ ಅರಸನಾಗಿದ್ದಿದ್ದರೆ ನನ್ನ ಮಗಳಿಗೆ ಒಬ್ಬ ಕೊಡವ ಗಂಡನ್ನ ತರತಿದ್ದೆ. ಅರಸಲ್ಲವಲ್ಲ!" ಎಂದು ಚನ್ನಬಸಪ್ಪ ಮೂದಲಿಸಿದ.

ಮುಂದಿನ ವರ್ಷವೆ ದೇವಮ್ಮಾಜಿ ಒಂದು ಗಂಡನ್ನು ಹೆತ್ತಳು. ಮಗು ಬಡವಾಗಿತ್ತು.

"ಅಯ್ಯೋ! ಅರಸಾಗುವ ಲಕ್ಷಣ ಕಾಣಿಸತದಾ ಇದರ ಮುಖದಲ್ಲಿ?" ಎಂದು ಚನ್ನಬಸಪ್ಪ ಕಟೂಕ್ತಿಯಾಡಿದ.

ತನ್ನ ದುಃಖ ತೋಡಿಕೊಳ್ಳಲು ದೇವಮ್ಮಾಜಿಗಿದ್ದುದೊಂದೇ ಆಸರೆ—ರಾಜಮ್ಮಾಜಿ.

ರಾಜಮ್ಮಾಜಿ ಅನ್ನುತ್ತಿದ್ದಳು :

"ಅಕ್ಕಾ, ದುಃಖಿಸಬೇಡ. ಯಾವುದಕ್ಕೂ ಕಾಲ ಬರಬೇಕು, ಅಲ್ಲವಾ ?"

ಕಾಲನ ಕರೆ ಹಳ್ಳಿಯಲ್ಲಿ ಗಂಗಮ್ಮನಿಗೆ ಬಂದಿತ್ತು. ಅವಳ ಒಡಹುಟ್ಟಿದವನು, ಅಪ್ಪಂಗಳದ ಹಾದಿಯಾಗಿ ಹೋಗುತ್ತಿದ್ದ ಒಬ್ಬನೊಡನೆ ಸುದ್ದಿ ಕಳುಹಿದ್ದ :

ಅಪ್ಪಂಗಳದಿಂದ ಹಿಂತಿರುಗಿದಾಗಿನಿಂದಲೂ ಗಂಗಮ್ಮನಿಗೆ ಆಗಾಗ್ಗೆ ಮತಿಭ್ರಮಣೆ ಯಾಗುತ್ತಿತ್ತಂತೆ. ಕಳೆದ ತಿಂಗಳಲ್ಲಿ ಆ ಕಾಹಿಲೆ ಪ್ರಕೋಪಕ್ಕೆ ಹೋಯಿತಂತೆ. ಕೆಲ ದಿನಗಳ ಹಿಂದೆ ಒಮ್ಮೆ ಮೂರ್ಛೆ ತಪ್ಪಿದವಳು ಪುನಃ ಚೇತರಿಸಿಕೊಳ್ಳಲಿಲ್ಲವಂತೆ.

ಅದನ್ನು ಕೇಳಿದ ರಾಜಮ್ಮಾಜಿ ರೋದಿಸಲಿಲ್ಲ. ಎರಡು ದಿನ ಮಂಕು ಕವಿದವಳಂತೆ ವರ್ತಿಸಿದಳು. ನಿಂತಲ್ಲೆ ನಿಂತುಬಿಡುತ್ತಿದ್ದಳು. ಕುಳಿತಲ್ಲೆ ಕುಳಿತುಬಿಡುತ್ತಿದ್ದಳು. ಮೂರನೆಯ ದಿನ ನಿತ್ಯದಂತೆ ಮನೆಗೆಲಸದಲ್ಲಿ ನಿರತಳಾದಳು.

ದೇವಮ್ಮಾಜಿಯೊಡನೆ ಅವಳೆಂದಳು :

"ನಮ್ಮಮ್ಮ ಏನೇನೋ ಆಸೆ ಕಟ್ಕೊಂಡಿದ್ಲು. ಒಂದು ದಿನವಾದರೂ ಸುಖವಾಗಿರಲಿಲ್ಲ. ಪಾಪ ! ಪಡೆದು ಬಂದಿದ್ದರಲ್ಲವಾ ಅದೆಲ್ಲ ?"

## ೬೫

ಕುಳಿತು ತಿನ್ನಲು ಕುಡಿಕೆ ಹೊನ್ನು ಸಾಲದು. ಚಿಕವೀರರಾಜನ ಬಳಿ ಹೊನ್ನು ತುಂಬಿದ ಹಲವು ಕುಡಿಕೆಗಳಿದ್ದುವು. ಆದರೂ ಆ ನಿಧಿ ಬರಬರುತ್ತ ಸ್ವಾಭಾವಿಕವಾಗಿಯೇ ಕರಗಿತು.

ಅರಸೊತ್ತಿಗೆಯನ್ನು ಮರಳಿ ಪಡೆಯುವ ಅವನ ನಿರೀಕ್ಷೆ ಈಗ ಬರಿಯ ಕನಸಾಯಿತು.

ಕಂಪೆನಿ ಸರಕಾರ ಕೊಡಲೊಪ್ಪಿದ ಆರು ಸಾವಿರ ಪವನುಗಳ ವರ್ಷಾಶನವನ್ನು ಚಿಕವೀರ ರಾಜೇಂದ್ರ ಸ್ವೀಕರಿಸಿದ.

"ನಮಗೋಸ್ಕರ ಅಲ್ಲ. ಇದು ನಮ್ಮ ಪರಿವಾರದ ಅಲ್ಪಸ್ವಲ್ಪ ವೆಚ್ಚಕ್ಕೆ" ಎಂದ ಆತ.

ಮಾಸಗಳು ವರ್ಷಗಳಾದುವು.

"ಅರಸ ಊರಿಗೆ ಹಿಂತಿರುಗುವ ಮಾತೇ ಇಲ್ಲ. ನಾವು ಇನ್ನೆಷ್ಟು ವರ್ಷ ಅಂತ ಇಲ್ಲಿ ಇರೋಣ ?" ಎಂದು ಪರಿವಾರದ ಕೆಲವರು ತಮ್ಮ ತಮ್ಮೊಳಗೇ ಆಡಿಕೊಂಡರು.

ಅದಷ್ಟು ಜನರನ್ನು ಕೊಡಗಿಗೆ ಕಳುಹಿಬಿಡಬೇಕೆಂದು ಚಿಕವೀರರಾಜನಿಗೂ ಅನಿಸಿತ್ತು. ಆದರೆ, ಅದು ನಿಷ್ಠುರದ ವರ್ತನೆಯಾಗುತ್ತದೆಂದು ಅವನು ಹಿಂಜರಿದಿದ್ದ. ಈಗ ಪರಿವಾರದ ಜನರಿಂದಲೇ ಆ ಪ್ರಸ್ತಾಪ ಬಂದಾಗ ಅವನು ಕ್ಷಿಪ್ರ ತೀರ್ಮಾನವನ್ನು ಕೈಕೊಂಡ.

ಹಲವು ಕುಟುಂಬಗಳು ಸನ್ಮಾನಿತವಾಗಿ ಹುಟ್ಟೂರಿಗೆ ಮರಳಿದುವು.

ರಾಜ್ಯ—ಅಧಿಕಾರಗಳಿಲ್ಲದೆ ಹೋದರೂ ಚಿಕವೀರರಾಜ ಅರಸನಂತೆ ಬಾಳ್ವೆ ನಡೆಸಿದ.

ರಾಣಿಯನ್ನೂ ರಾಜಕುಮಾರಿಯನ್ನೂ ಓಲೈಸಲು ದಾಸದಾಸಿಯರು, ನಿವಾಸಕ್ಕೆ ದ್ವಾರ ಪಾಲಕರು, ಅಂಗರಕ್ಷಕರು, ಕುದುರೆಗಳು, ಸಾರೋಟು, ಇಬ್ಬರು ಮೂವರು ಉಪಪತ್ನಿ ಯರು—ಸಣ್ಣ ಪ್ರಮಾಣದ್ದೇ ಆದರೂ ಅರಮನೆಯ ಶೋಭೆಯಿತ್ತು ಚಿಕವೀರರಾಜನ ವಸತಿಗೆ.

ಉಪಪತ್ನಿಯರಲ್ಲಿ ಅರಸನಿಗೆ ಗಂಡುಮಕ್ಕಳೂ ಹುಟ್ಟಿದರು.

ಮಡಕೇರಿಯ ಅರಮನೆಯಿಂದ ತಂದಿದ್ದ ಅಮೂಲ್ಯ ಆಭರಣಗಳ, ಅನರ್ಘ್ಯ ರತ್ನ ವಜ್ರ ವೈಡೂರ್ಯಗಳ, ಸಂಪತ್ತೊಂದು ಚಿಕವೀರರಾಜನ ವಶವಿತ್ತು. ಆ ಸಂದೂಕಕ್ಕೆ ರಾಣಿ ಗೌರಮ್ಮನೇ ಒಡತಿ. ಅರಸ ಅಂತರ್ಮುಖಿಯಾಗಿ ದಿನಕಳೆದರೆ, ಗೌರಮ್ಮ—ತನ್ನನ್ನು ಅನಾರೋಗ್ಯ ಪದೇಪದೇ ಪೀಡಿಸುತ್ತಿದ್ದರೂ—ಅರಮನೆಯ ಯಾಜಮಾನ್ಯ ವಹಿಸಿ ಎಲ್ಲ ವನ್ನೂ ಸರಿತೂಗಿಸಿಕೊಂಡು ಹೋಗುತ್ತಿದ್ದಳು. ರಾಣಿಯ ವಿಷಯದಲ್ಲಿ ಚಿಕವೀರರಾಜನಿಗಿದ್ದ ಪ್ರೇಮವಿಶ್ವಾಸ ಎಂದೂ ಕುಗ್ಗಲಿಲ್ಲ.

ಅವನ ವಿಶೇಷ ಒಲವಿಗೆ ಪಾತ್ರಳಾಗಿದ್ದವಳು ರಾಜಕುಮಾರಿ. ಅವಳೀಗ ಯುವತಿ. ತಾನಲ್ಲದೆ ಹೋದರೆ ಇವಳಾದರೂ ಕೊಡಗಿನ ಸಿಂಹಾಸನವೇರಬೇಕು ಎಂಬ ಬಯಕೆ ಚಿಕವೀರರಾಜನಿಗೆ. ಇಂಗ್ಲೆಂಡಿನಲ್ಲಿ ವಿಕ್ಟೋರಿಯಾ ರಾಣಿ ಆಳತೊಡಗಿದ್ದಳು. ಸ್ತ್ರೀಯೊಬ್ಬಳು ದೊಡ್ಡ ಸಾಮ್ರಾಜ್ಯದ ಚಕ್ರವರ್ತಿನಿಯಾಗಬಲ್ಲಳಾದರೆ, ವೀರ ಸಂತಾನವಾದ ತನ್ನ ಪುತ್ರಿ ಕೊಡಗನ್ನು ಆಳಬಾರದೆ ?

ರಾಜಕುಮಾರಿಯನ್ನು ಎಲ್ಲರೂ ಕಿರಿಯ ರಾಣಿ ಎಂದೇ ಕರೆಯುತ್ತಿದ್ದರು.

"ಇವಳು ಕಿರಿಯ ಗೌರಮ್ಮ, ಎನ್ನುತ್ತಿದ್ದ ಅರಸ, ರಾಣಿಯೊಡನೆ ಅಪರೂಪದ ಸರಸ ಸಲ್ಲಾಪದಲ್ಲಿ ತಾನು ಮಗ್ನನಾದಾಗ.

ಕಿರಿಯ ಗೌರಮ್ಮನಿಗೆ ಶಿಕ್ಷಣ ಕೊಡಿಸುವುದಕ್ಕಾಗಿ ಆಂಗ್ಲ ಮಹಿಳೆಯೊಬ್ಬಳನ್ನು ಚಿಕವೀರರಾಜ ನೇಮಿಸಿದ. ಬದಲಾಗುತ್ತಿದ್ದ ಲೋಕದಲ್ಲಿ ಪಾಶ್ಚಾತ್ಯರ ವಿಚಾರಗಳನ್ನೂ ಸಾಧನೆಗಳನ್ನೂ ತಿಳಿದಿರುವುದು ಅಗತ್ಯವೆಂದು ಅವನಿಗೆ ಅನಿಸಿತ್ತು.

ಈಸ್ಟ್ ಇಂಡಿಯಾ ಕಂಪೆನಿಯ ಪ್ರಮುಖ ಅಧಿಕಾರಿಗಳು ಹಲವರು ಚಿಕವೀರರಾಜನೆಡೆಗೆ ಆಕರ್ಷಿತರಾದರು. ಹತ್ತು ವರ್ಷಗಳಿಗೆ ಹಿಂದೆ ತಾವು ಪದಚ್ಯುತಗೊಳಿಸಿದ ಅರಸ ಈತ—ಎಂಬುದನ್ನು ಮರೆತು, ಲಾರ್ಡ್ ಎಲೆನ್‌ಬರೋ, ಗವರ್ನರ್ ಜನರಲನ ಏಜೆಂಟನಾದ ಲೆಫ್ಟಿನೆಂಟ್ ಕರ್ನಲ್ ಕಾರ್ಪೆಂಟರ್, ಅವನ ಅನಂತರ ಆ ಸ್ಥಾನಕ್ಕೆ ಬಂದ ಮೆಕ್ ಗ್ರಿಗೊರ್—ಇವರೆಲ್ಲ ಚಿಕವೀರರಾಜನ ಮಿತ್ರರಾದರು.

ಅರಸನ ದೊಡ್ಡಪ್ಪ ದೊಡ್ಡ ವೀರರಾಜೇಂದ್ರ ಅಸ್ವಸ್ಥನಾಗಿದ್ದಾಗ ಮದರಾಸಿನಿಂದ ಬಂದು ಆತನಿಗೆ ಚಿಕಿತ್ಸೆ ಮಾಡಿದ್ದ ಆಂಗ್ಲ ವೈದ್ಯನೊಬ್ಬನಿದ್ದ—ಡಾಕ್ಟರ್ ಮೇಗ್‌ಲಿಂಗ್. ಕೊಡಗಿನ ಜನ ಅವನನ್ನು ಆತ್ಮೀಯತೆಯಿಂದ ಮೇಗ್‌ಲಿಂಗ ಎಂದು ಕರೆದದ್ದುಂಟು. ಚಿಕವೀರರಾಜನ ರಾಜ್ಯಭಾರದ ಮೊದಲ ವರ್ಷಗಳಲ್ಲಿ ಮೇಗ್‌ಲಿಂಗ್ ಒಂದೆರಡು ಸಾರಿ ಮಡಕೇರಿಗೆ ಬಂದಿದ್ದ. ಮುಂದೆ ಅವನಿಗೆ ಕಲಕತ್ತೆಗೆ ವರ್ಗವಾಯಿತು. ವಯಸ್ಸಾದ ಮೇಲೆ, ಉದ್ಯೋಗದಿಂದ ನಿವೃತ್ತನಾಗಿ ತಾಯ್ನಾಡಿಗೆ ಮರಳಲು ಆತ ತೀರ್ಮಾನಿಸಿದ. ಹಾಗೆ ಹೊರಡುವುದಕ್ಕೆ ಮುನ್ನ ಚಿಕವೀರರಾಜೇಂದ್ರನನ್ನು ಕಂಡು ಹೋಗಲೆಂದು ಅವನು ಕಾಶಿಗೆ ಬಂದ.

ಅರಸನೆಂದ :

"ಬನ್ನಿ ಮೇಘಲಿಂಗರೇ, ಕುಶಾಲು ತೋಪುಗಳನ್ನು ಹಾರಿಸಿ ವೈಭವದ ಸ್ವಾಗತ ನೀಡಲು ಈಗ ನಾನು ಅಶಕ್ತ. ಇದು ಬಡವನ ಆತಿಥ್ಯ. ಸ್ವೀಕರಿಸಬೇಕು."

ಚಿಕವೀರರಾಜನನ್ನೂ ಅವನ ಸಂಸಾರವನ್ನೂ ಆಗಿನ ಇರುವಿಕೆಯಲ್ಲಿ ಕಂಡು ಮೇಗ್ ಲಿಂಗನ ಹೃದಯ ತುಡಿಯಿತು :

"ಮಹಾಸ್ವಾಮಿ, ಹೀಗಾಗಬಾರದಿತ್ತು. ನನಗೆ ನಿಜವಾಗಿಯೂ ಖೇದವಾಗಿದೆ ; ನಿಜ ವಾಗಿಯೂ ಖೇದವಾಗಿದೆ."

"ಮರೆತುಬಿಡಿ ಅದನ್ನು" ಎಂದು ಅರಸ ನುಡಿದು, ದಾಸಿಯೊಬ್ಬಳನ್ನು ಕರೆದು ಆಜ್ಞಾಪಿಸಿದ :

"ಮೇಘಲಿಂಗರು ಬಂದಿದಾರೆ ಅಂತ ರಾಣಿಯವರಿಗೆ ತಿಳಿಸು."

...ಹಲವು ಮಾತುಗಳನ್ನಾಡಿದ ಬಳಿಕ ಮೇಗ್‌ಲಿಂಗ್ ಅಂದ :

"ಮಹಾಸ್ವಾಮಿ, ತಾವು ಇಂಗ್ಲೆಂಡಿಗೆ ಬರುವ ಯೋಚನೆ ಮಾಡಬೇಕು. ಮಹಾರಾಣಿಯವರನ್ನೂ ರಾಜಕುಮಾರಿಯನ್ನೂ ಕರೆದುಕೊಂಡು ಬರಬೇಕು. ಅಲ್ಲಿ ನನ್ನ ಅತಿಥಿಗಳಾಗಿರಬೇಕು—ನಿಮಗೆ ನ್ಯಾಯ ದೊರಕಿಸಿಕೊಡುತೇನೆ. ಒಲ್ಲೆ ಅನ್ನಬೇಡಿ."

"ವಿಲಾಯತಿಯೆಲ್ಲಿ—ಕಾಶಿಯೆಲ್ಲಿ..." ಎಂದು ತಲೆಯಲ್ಲಾಡಿಸಿದಳು ಗೌರಮ್ಮ, ಅರಸ ಪ್ರತಿಕ್ರಿಯೆ ವ್ಯಕ್ತಪಡಿಸುವುದಕ್ಕೂ ಮುನ್ನ.

"ವಿಚಾರಮಾಡಿ, ಮಹಾರಾಣಿಯವರೆ. ಇದರಿಂದ ತಮಗೆ ಪ್ರಯೋಜನವಾಗುತದೆ. ನಾನು ಮುದುಕನಾದೆ. ಈಗ ಯಾರ ನೌಕರಿಯಲ್ಲೂ ಇಲ್ಲ, ಸ್ವತಂತ್ರ. ಕೊಡಗಿನ ರಾಜ್ಯ ತಮಗೆ ಮರಳಿ ಸಿಗುವಂತೆ ಮಾಡಿ ನಾನು ಕಣ್ಣು ಮುಚ್ಚುತೇನೆ. ಆಗ ಮಾತ್ರ ನನ್ನ ಆತ್ಮಕ್ಕೆ ಶಾಂತಿ ದೊರೆತೀತು."

ಚಿಕವೀರರಾಜನೆಂದ :

"ಮೇಘಲಿಂಗರೆ, ನಿಮ್ಮ ವಿಶ್ವಾಸ ದೊಡ್ಡದು. ಇರಲಿ, ಮುಂದೆ ಈ ವಿಷಯವಾಗಿ ನಾವು ನಿಮಗೆ ಬರೆಯುತೇವೆ."

...ಮೇಗ್‌ಲಿಂಗ್ ಸ್ವದೇಶಕ್ಕೆ ತೆರಳಿದ. ಅವನು ಬಿತ್ತಿಹೋಗಿದ್ದ ಬೀಜ ಚಿಕವೀರರಾಜನ ಮನಸಿನಲ್ಲಿ ಮೊಳೆತಿತು. ಇಂಗ್ಲೆಂಡಿಗೆ ಹೋಗಿ ರಾಜ್ಯಪ್ರಾಪ್ತಿಗಾಗಿ ಯತ್ನಿಸುವುದು ಸಮಂಜಸ ; ಅಷ್ಟೇ ಅಲ್ಲ. ಈಗ ಉಳಿದಿರುವುದು ಅದೊಂದೇ ಮಾರ್ಗ—ಎಂಬುದು ಅವನಿಗೆ ಮನದಟ್ಟಾಯಿತು.

ಇದ್ದುದೊಂದೇ ತೊಂದರೆ—ರಾಣಿ ಗೌರಮ್ಮನ ಶರೀರಸ್ಥಿತಿ."

ಅವಳೆಂದಳು :

"ಸಮುದ್ರ ಪಯಣ. ಈ ಜೀವ ಅದನ್ನು ತಡಕೋತದಾ ? ಹಡಗಿನಲ್ಲೇ ಶಿವ ಅಂತ ಕಣ್ಣು ಮುಚ್ಚುತೀನಿ. ಕಡಲಿಗೆ ಎಸೀತೀರಾ ? ವಿಶ್ವೇಶ್ವರನ ಸಾನ್ನಿಧ್ಯದಲ್ಲೇ ನಾನು ಸತ್ತರಾಗುತ್ತಿತ್ತು."

ಗೌರಮ್ಮನ ಕಳೆಗುಂದಿದ ಮುಖವನ್ನು ನೋಡಿ, ವಿದೇಶ ಪ್ರವಾಸದ ತನ್ನ ವಿಚಾರವನ್ನು ಚಿಕವೀರರಾಜ ದೂರ ತಳ್ಳಿದ.

ಆದರೆ ಸ್ವಲ್ಪ ಸಮಯದೊಳಗಾಗಿಯೇ ಪರಿಸ್ಥಿತಿ ಬದಲಾಯಿಸಿತು.

ರಾಣಿ ಗೌರಮ್ಮ ವಿಷಮಶೀತಜ್ವರದಿಂದ ನರಳಿದಳು. ಮೊದಲೇ ಸೊರಗಿದ್ದ ಜೀವ ಆ ಆಘಾತದಿಂದ ಚೇತರಿಸಿಕೊಳ್ಳಲಾರದೇ ಹೋಯಿತು. ಯಾವ ಔಷಧೋಪಚಾರಕ್ಕೂ ಕಾಹಿಲೆ ಜಗ್ಗಲಿಲ್ಲ.

ಒಂದು ಸಂಜೆ ಜ್ವರ ಇಳಿಯಿತು. ಮುಖದಲ್ಲಿ ಗೆಲುವು ಮೂಡಿತು.

ಹೊರಗೆ ಒಬ್ಬನೇ ಕುಳಿತಿದ್ದ ಅರಸನೆಡೆಗೆ ಮಗಳು ಓಡಿ ಬಂದಳು.

"ಅಪ್ಪಾಜಿ! ಅಪ್ಪಾಜಿ! ಅಮ್ಮನಿಗೆ ಜ್ವರ ಕಮ್ಮಿಯಾಗಿದೆ. ಕರೀತಾಳೆ. ನೀವು ಬರಬೇಕಂತೆ."

ಗೌರಮ್ಮನ ಪಾಲಿಗೆ ಸಾವು ಬದುಕಿನ ಎಲ್ಲ ಯಾತನೆಗಳಿಂದ ಬಿಡುಗಡೆ, ತಾನು ದುಃಖಿಸಬಾರದು—ಎಂಬ ಅಂತಿಮ ತೀರ್ಮಾನಕ್ಕೆ ಬಂದಿದ್ದ ಚಿಕವೀರರಾಜ, ಮಗಳ ಧ್ವನಿಯಲ್ಲಿ ಒಡಮೂಡಿದ್ದ ಹರ್ಷವನ್ನು ಕಂಡವನೇ ಲಗುಬಗೆಯಿಂದ ಎದ್ದು, ಆಕೆಯನ್ನು ಹಿಂಬಾಲಿಸಿದ.

ಅರಸ ಹತ್ತಿರ ಬಂದಾಗ ಗೌರಮ್ಮ ಅಂದಳು:

"ಕೂತ್ಕೊಳ್ಳಿ...ತೊಡೆಯ ಮೇಲೆ ತಲೆ—ಇರಿಸಿಕೊಳ್ಳಿ."

ಹಾಗೆ ಮಿಸುಕಾಡಬಾರದು, ಬೇಡ—ಎನ್ನಲು ಹೊರಟಿದ್ದ ಚಿಕವೀರರಾಜ—ಆದರೆ, ಮಡದಿಯ ಗುಳಿ ಬಿದ್ದಿದ್ದ ಕಣ್ಣುಗಳಲ್ಲಿ ಆಸೆಯ ಕುಡಿಗಳು ತೂರಾಡುತ್ತಿದ್ದುದನ್ನು ಆತ ಕಂಡ.

ತಾನು ಪಲ್ಲಂಗದ ಮೇಲೆ ಆಕೆಯ ಶಿರಸ್ಸಿನ ಬಳಿ ಕುಳಿತು, ಮೃದುವಾಗಿ ತನ್ನ ತೊಡೆಯ ಮೇಲೆ ಆಕೆಯ ತಲೆಯನ್ನಿರಿಸಿದ.

ದಾಸಿ ಬಂದು ಪಿಸುನುಡಿದಳು:

"ವೈದ್ಯರು ಒಳಕ್ಕೆ ಬರಲೇ ಅಂತ ಕೇಳುತಿದಾರೆ."

"ಬೇಡ—ಅನ್ನಿ" ಎಂದಳು ಗೌರಮ್ಮ, ಗಂಡನೊಡನೆ. ಅವಳ ತುಟಿಗಳ ಮೇಲೆ ಕ್ಷೀಣ ಮಂದಹಾಸವೊಂದು ಮಿಂಚಿ ಮಾಯವಾಯಿತು.

"ಹೊರಗೆ ಕೂತಿರಲಿ" ಎಂದ ಅರಸ, ದಾಸಿಗೆ.

ಗೌರಮ್ಮನೆಂದಳು:

"ದೀಪ ತರಿಸಿ, ಕಾಣಿಸತಾ ಇಲ್ಲ. ನಿಮ್ಮನ್ನ ನೋಡಬೇಕು."

ಸೂರ್ಯ ಮುಳುಗಲು ಮತ್ತೂ ಒಂದು ಘಳಿಗೆಯಿತ್ತು. ಆದರೂ ತಾಯಿಯ ಅಪೇಕ್ಷೆಯಂತೆ ರಾಜಕುಮಾರಿ ನೀಲಾಂಜನವನ್ನು ಹಚ್ಚಿಸಿದಳು.

ಗೌರಮ್ಮ ಕೆಲ ನಿಮಿಷ ಗಂಡನ ಮುಖವನ್ನೇ ಎವೆಯಿಕ್ಕದೆ ದಿಟ್ಟಿಸಿದಳು.

ಕಣ್ಣಿನ ರೆಪ್ಪೆಗಳಿಗೆ ಮುಚ್ಚಿಕೊಳ್ಳುವ ಶಕ್ತಿಯೇ ಇದ್ದಂತಿಲ್ಲ—ಎನಿಸಿತು ಚಿಕವೀರರಾಜನಿಗೆ. ಅವನಿಗೆ ದಿಗಿಲಾಯಿತು.

ಗೌರಮ್ಮ ನಿಧಾನವಾಗಿ ಅಂದಳು:

"ಇಲ್ಲಿ ಬಾ ಮಗಳೇ, ಕೂತುಕೊ."

ರಾಜಕುಮಾರಿ ಸಮೀಪಿಸಿ ಪಲ್ಲಂಗದ ಅಂಚಿನ ಮೇಲೆ ಕುಳಿತಳು.

"ದೊರೆ, ನಾ ಇನ್ನು ಹೋಗತೀನಿ...ಕಂದಮ್ಮ ತಾಯಿ ಇಲ್ಲದ ತಬ್ಬಲಿಯಾಗುತಾಳೆ... ನೋಡಿಕೊಳ್ಳಿ...ಇವಳ ಮೇಲಿನ ಮಮಕಾರದಿಂದ ಬೇರೆ ಆ ಮಕ್ಕಳನ್ನ ಕಡೆಗಣಿಸಬೇಡಿ... ಮಗಳ ಕರಕೊಂಡು ವಿಲಾಯತಿಗೆ ಹೋಗಿ ಬನ್ನಿ...ರಾಜ್ಯ ಸಿಕ್ಕಾತು...ಇವಳ ರಾಣಿ ಮಾಡಿ...ಒಳ್ಳೆ ವರ ನೋಡಿ ಮದುವೆ ಮಾಡಿಸಿ..."

ಅರಸನೆಂದ:

"ನೀವು ಚಿಂತಿಸಬಾರದು. ಹೆಚ್ಚು ಮಾತಾಡಬೇಡಿ. ಆಯಾಸವಾಗತದೆ."

ಗೌರಮ್ಮ ನುಡಿದಳು:

"ನೀನು ಅನ್ನಿ."

ಚಿಕವೀರರಾಜನಿಗೆ ದುಃಖ ಒತ್ತರಿಸಿ ಬಂತು. ಗೊಗ್ಗರ ಧ್ವನಿಯಲ್ಲಿ ಅವನೆಂದ :

"ಹ್ಞ ಚಿನ್ನ."

"ಓಂಕಾರೇಶ್ವರನಿಗೆ ನನ್ನ ಹೆಸರಿಲೆ ವರ್ಷ ವರ್ಷ ಸೇವೆ ಆಗೋ ಹಾಗೆ ಮಾಡತೀರಾ?"

ಅವಳೀಗ ತನ್ನ ರಾಜ್ಯದ ರಾಜಧಾನಿಯನ್ನು ತಲಪಿದ್ದಳು.

"ಮಾಡತೀನಿ ಚಿನ್ನ."

"ಇಷ್ಟೆ. ಬೇರೆ ಯಾವ ಆಸೇನೂ ನನಗಿಲ್ಲ..."

ಧ್ವನಿ ಇಂಗಿತು. ಗಂಟಲಲ್ಲಿ ಗೊರ ಗೊರ ಸಪ್ಪಳವಾಯಿತು.

ಕಾತರನಾದ ಅರಸ ಏರಿದ ಧ್ವನಿಯಲ್ಲಿ ಅಂದ :

"ಮಗೂ, ಗಂಗೋದಕ ತಾ!"

ರಾಜಕುಮಾರಿ ಕೊಠಡಿಯಿಂದ ಹೊರಕ್ಕೆ ಧಾವಿಸಿ ಗಂಗೆಯ ನೀರಿನೊಡನೆ ಬಂದಳು.

ಗವಿಯ ಆಳದಿಂದ ಗೌರಮ್ಮನ ಧ್ವನಿ ಕೇಳಿಸಿತು :

"ಅ-ಪ್ಪ-ಣೆ-ಕೊ-ಡಿ..."

ಒಂದು ಗುಟುಕು ನೀರು...

"ಮ-ಹಾ-ದೇ-ವ ಮ-ಹಾ-ದೇ-ವ..."

ಗೌರಮ್ಮನ ಕೊನೆಯುಸಿರು ಆಕೆಯ ಶರೀರವನ್ನು ಬಿಟ್ಟು ಹೋಯಿತು.

ಅರಸನ ತೊಡೆಯ ಮೇಲಿದ್ದ ಅವಳ ತಲೆ ಒಂದು ಮಗ್ಗುಲಿಗೆ ಹೊರಳಿತು.

"ಅಮ್ಮಾ!" ಎಂದು ಚೀರುತ್ತ ರಾಜಕುಮಾರಿ ತನ್ನ ತಾಯಿಯ ದೇಹದ ಮೇಲೆ ಬಿದ್ದಳು. ಚಿಕವೀರರಾಜ ಗಾಳಿಗೆ ಸಿಲುಕಿದ ತರಗೆಲೆಯಾದ.

ಮೃತ್ಯು ತನಗೆ ಕೈಕೊಟ್ಟುದನ್ನು ಕಣ್ಣಾರೆ ಕಾಣಲು ವೈದ್ಯ ಒಳ ಬಂದ...

* * *

ಕೊಡಗಿನಿಂದ ವರ್ಷ ವರ್ಷವೂ ಯಾತ್ರಾರ್ಥಿಗಳಾಗಿ ಯಾರಾದರೂ ಕಾಶಿಗೆ ಬರುತ್ತಿದ್ದರು. ಬಂದವರು ಚಿಕವೀರರಾಜನ ಮನೆಯಲ್ಲೆ ಬಿಡಾರ ಹೂಡುತ್ತಿದ್ದರು.

ಈ ಸಲ ತಂಡ ಬಂದಾಗ, ರಾಣಿ ಗೌರಮ್ಮನ ಹೆಸರಲ್ಲಿ ವರ್ಷಂಪ್ರತಿ ಓಂಕಾರೇಶ್ವರನಿಗೆ ಸೇವೆ ನಡೆಸಲು ಬೇಕಾಗುವಷ್ಟು ಹೊನ್ನನ್ನು ಮಡಕೇರಿಯ ದೇವಾಲಯಕ್ಕೆ ಚಿಕವೀರರಾಜ ಕಳುಹಿಸಿಕೊಟ್ಟ.

ಅದು ಸಾವಿರದ ಎಂಟುನೂರ ಐವತ್ತನೆಯ ವರ್ಷ.

ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಏರ್ಪಾಟು ಮಾಡುವುದಕ್ಕೋಸ್ಕರ ಇಂಗ್ಲೆಂಡಿಗೆ ಹೋಗಬಯಸುವುದಾಗಿಯೂ ಇದಕ್ಕೆ ಅನುಮತಿ ನೀಡಬೇಕೆಂದೂ ಚಿಕವೀರರಾಜ ಗವರ್ನರ್ ಜನರಲನಿಗೆ ಮನವಿ ಸಲ್ಲಿಸಿದ.

ಕಂಪೆನಿ ಸರಕಾರ ಒಪ್ಪಿಗೆ ಕೊಡಲು ಎರಡು ವರ್ಷ ಹಿಡಿಯಿತು.

## ೬೬

ಹಿಂದೂಸ್ಥಾನದಿಂದ ಹೊರಟ ಹಾಯಿ ಹಡಗು ಆರು ತಿಂಗಳ ದೀರ್ಘ ಪ್ರವಾಸದ ಬಳಿಕ ಸಾವಿರದ ಎಂಟುನೂರ ಐವತ್ತೆರಡರ ವಸಂತ ಮಾಸದಲ್ಲಿ ಇಂಗ್ಲೆಂಡನ್ನು ತಲಪಿ

ಥೇಮ್ಸ್ ನದೀ ಮುಖವನ್ನು ಹೊಕ್ಕಿತು. ಆ ಹಡಗಿನಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳಿದ್ದರು ; ಆಂಗ್ಲ ಸೈನ್ಯದ ಸಣ್ಣ ದೊಡ್ಡ ಉದ್ಯೋಗಿಗಳಿದ್ದರು. ಅವರೆಲ್ಲ ನಿವೃತ್ತಿ ಹೊಂದಿಯೋ ರಜೆ ಪಡೆದೋ ಸಂಸಾರ ಸಮೇತರಾಗಿ ಹುಟ್ಟೂರಿಗೆ ಮರಳುತ್ತಿದ್ದ ಜನ. ಅಲ್ಲದೆ ಹಿಂದೂಸ್ಥಾನದ ಹಾಗೂ ಪೂರ್ವ ಏಷ್ಯದ ಅಮೂಲ್ಯ ಸರಕುಗಳು ಹಡಗಿನಲ್ಲಿದ್ದುವು. ಕಡಮೆ ಬೆಲೆಗೆ ಕೊಂಡಂಥವು ; ಕೊಳ್ಳೆ ಹೊಡೆದು ತಂದಂಥವು. ಪೂರ್ವ ದಿಕ್ಕಿನ ರಾಷ್ಟ್ರಗಳಿಂದ ದೋಚಿ ತಂದಿದ್ದ ನಿಧಿ ನಿಕ್ಷೇಪಗಳಿದ್ದುವು. ಆ ಹಡಗಿನಲ್ಲಿ ಇಬ್ಬರು ಭಾರತೀಯರೂ ಇದ್ದರು : ಕೊಡಗಿನ ಪದಚ್ಯುತ ದೊರೆ ಚಿಕವೀರರಾಜ ಹಾಗೂ ಆತನ ಯುವತಿ ಮಗಳು ಕಿರಿಯ ಗೌರಮ್ಮ. ಅವರ ಮೇಲ್ವಿಚಾರಣೆಗೆಂದು ಕಂಪೆನಿಯ ಅಧಿಕಾರಿಯೊಬ್ಬನಿದ್ದ.

ಅಮೂಲ್ಯ ಉಡುಗೆ ತೊಡುಗೆಗಳ ರತ್ನಖಚಿತ ಆಭರಣಗಳ ಆ ಸುಂದರಿಯನ್ನೂ ಸದಾ ಗಂಭೀರವಾಗಿರುತ್ತಿದ್ದ ಎತ್ತರದ ನಿಲುವಿನ ಸ್ಥೂಲಕಾಯನಾದ ಆಕೆಯ ತಂದೆಯನ್ನೂ ಸಹ ಪ್ರವಾಸಿಗಳು ಮೊದಮೊದಲು ಕುತೂಹಲದಿಂದ ಕಂಡರು.ಅವರ ಸಿರಿವಂತಿಕೆಗಾಗಿ ಅಸೂಯೆ ಪಟ್ಟವರು ಕೆಲವರು. ಸ್ನೇಹ ಸಂಪಾದಿಸಲು ಯತ್ನಿಸಿದವರು ಕೆಲವರು. ವರ್ಣೀಯರು ಎಂಬ ಹಿರಿತನದ ಭಾವನೆಯಿಂದ ಅವರನ್ನು ಸ್ವಲ್ಪ ಕಾಲ ದೂರವಿಟ್ಟವರು ಬೇರೆ ಕೆಲವರು.

ಯುವತಿಗೆ ಇಂಗ್ಲಿಷ್ ಬರುತ್ತಿತ್ತು. ಆಕೆಯ ತಂದೆ ಅಲ್ಪ ಸ್ವಲ್ಪ ಆ ಭಾಷೆಯನ್ನು ತಿಳಿದುಕೊಳ್ಳಬಲ್ಲನಾದರೂ ಹಿಂದೂಸ್ಥಾನಿಯಲ್ಲೇ ಮಾತನಾಡುತ್ತಿದ್ದ. ಅಲ್ಲಿದ್ದ ಇಂಗ್ಲಿಷರಿಗಂತೂ ಹಿಂದೂಸ್ಥಾನಿಯ ಸಾಮಾನ್ಯ ಜ್ಞಾನವಿದ್ದೇ ಇತ್ತು.

ದಿನ ಕಳೆದಂತೆ, ಸಸ್ಯಾಹಾರಿಗಳಾದ ತಂದೆ ಮಗಳು ಹಡಗಿನಲ್ಲಿ ಜನಪ್ರಿಯರಾದರು. ಚಿಕವೀರರಾಜ ತನ್ನ ಗಾಂಭೀರ್ಯವನ್ನುಳಿಸಿಕೊಂಡೇ ಅವರೊಡನೆ ಬೆರೆತ.

ಕೆಲವರು ತಮ್ಮತಮ್ಮೊಳಗೆ ನಗೆಯಾಡಿದರು :

"ಮುದುಕ ಅಳಿಯನ ಶೋಧೆಗೆ ಹೊರಟಿದಾನೆ !"

"ರಾಜ್ಯ ಕಳಕೊಂಡರೂ ಧಿಮಾಕು ಬಿಟ್ಟಿಲ್ಲ."

"ಬಡಪಾಯಿ."

ಸೂರ್ಯ ನಕ್ಕು, ಹಿಮ ಕರಗಿ, ಗಿಡಮರಗಳು ಚಿಗುರಿ ಹೂಬಿಟ್ಟ ಲಂಡನ್ ನಗರ ಹಡಗಿನಿಂದ ಬಂದಿಳಿದವರನ್ನು ಸ್ವಾಗತಿಸಿತು.

ವೃದ್ಧ ಮೇಗ್‌ಲಿಂಗ್ ಅಲ್ಲಿದ್ದ.

ಚಿಕವೀರರಾಜನನ್ನೂ ರಾಜಕುಮಾರಿಯನ್ನೂ ಸ್ವಾಗತಿಸುತ್ತ ಅವನೆಂದ :

"ನನಗೆ ತುಂಬಾ ಸಂತೋಷವಾಗಿದೆ ; ನನಗೆ ತುಂಬಾ ಸಂತೋಷವಾಗಿದೆ."

ಮಹಾರಾಣಿ ತೀರಿಕೊಂಡುದನ್ನು ತಿಳಿಸಿ ರಾಜ ಹಿಂದೆಯೇ ಮೇಗ್‌ಲಿಂಗ್‌ಗೆ ಪತ್ರ ಬರೆದಿದ್ದ. ಈತ ತನ್ನ ಸಂತಾಪ ಸಹಾನುಭೂತಿಯನ್ನು ವ್ಯಕ್ತಪಡಿಸಿ ಉತ್ತರವಿತ್ತಿದ್ದ. ಪತ್ರದ ಕೊನೆಯಲ್ಲಿ ಮತ್ತೊಮ್ಮೆ ಆಮಂತ್ರಣ ನೀಡಿದ್ದ, ಮಗಳೊಡನೆ ಅರಸ ತನ್ನ ದೇಶಕ್ಕೆ ಬರಬೇಕು—ಎಂದು.

ಮೇಗ್‌ಲಿಂಗ್, ವಾರ್ವಿಕ್ ರಸ್ತೆಯಲ್ಲಿ ಒಂದು ಸೌಧವನ್ನು ಅರಸನ ವಸತಿಗಾಗಿ ಬಾಡಿಗೆಗೆ ಹಿಡಿದಿದ್ದ. ಅದರ ಹೆಸರು 'ಕ್ಲಿಫ್ಟನ್ ವಿಲ್ಲಾ" ಕಟ್ಟಡ ಭವ್ಯವಾಗಿತ್ತು.

ಪಾದಚಾರಿಗಳು, ಅಶ್ವಾರೋಹಿಗಳು, ಸಾರೋಟುಗಳಿಂದ ಲಂಡನ್ ನಗರದ ಬೀದಿಗಳು ತುಂಬಿದ್ದುವು. ಹಿಂದೂಸ್ಥಾನದಲ್ಲಿ ಇಂಗ್ಲಿಷರು ತೋರುತ್ತಿದ್ದ ಬಾಹ್ಯಾಡಂಬರ ಸೋಗಿನ

ಠೀವಿಗಳೊಂದೂ ಇಲ್ಲದೆ ಇಲ್ಲಿ ಜನ ಸರಳವಾಗಿ ವರ್ತಿಸುತ್ತಿದ್ದರು.

ಪ್ರಾಚೀನ ಸೌಧಗಳು, ಅನೇಕ ಅರಮನೆಗಳು, ದೇವಾಲಯಗಳು, ಸಾಮಾನ್ಯ ವಸತಿಗಳು—ಒಂದು ಚೂರು ನೆಲವೂ ಹಾಳಾಗದಂತೆ ಆ ನಗರವನ್ನು ನಿರ್ಮಿಸಿದ್ದರು, ಸಮುದ್ರದಿಂದ ಸುತ್ತುವರಿಯಲ್ಪಟ್ಟ ಆ ದ್ವೀಪವಾಸಿಗಳು. ವಿಶ್ವದ ಹತ್ತು ಮೂಲೆಗಳಿಂದ ಅವರು ಕೊಳ್ಳೆ ಹೊಡೆದು ತಂದ ಸಂಪತ್ತು ಆ ನಗರದಲ್ಲಿ ಮೈಮುರಿದು ಬಿದ್ದಿತ್ತು.

ಸಾರೋಟಿನಲ್ಲಿ ಬೀದಿಗಳುದ್ದಕ್ಕೂ ಹೋಗುತ್ತ ಮೇಗ್‌ಲಿಂಗ್ ಅನ್ನುತ್ತಿದ್ದ :

"ಇದು ಹೈಡ್‌ಪಾರ್ಕ್, ಮಹಾಸ್ವಾಮಿ. ನಮ್ಮ ನಗರದ ಪ್ರಖ್ಯಾತ ಉದ್ಯಾನ... ಅಕೋ, ಅದು ವೀರರ ಸೇತುವೆ—ನೈಟ್ಸ್ ಬ್ರಿಜ್...ಇದು ಕೆನ್ಸಿಂಗ್ಟನ್ ರಸ್ತೆ. ಅದು ಪುಷ್ಪೋದ್ಯಾನ. ಹಿಂದೆ ಈ ವಿಸ್ತಾರ ಪ್ರದೇಶ ಚಕ್ರವರ್ತಿಗಳ ಸೊತ್ತಾಗಿತ್ತು. ಅವರ ಲ್ಲೊಬ್ಬರು ಸಾರ್ವಜನಿಕರ ಉಪಯೋಗಕ್ಕಿರಲಿ ಅಂತ ಬಿಟ್ಟುಕೊಟ್ಟರು..."

ಕ್ಲಿಫ್ಟನ್ ವಿಲ್ಲಾ ಚಿಕವೀರರಾಜನಿಗೆ ಮೆಚ್ಚುಗೆಯಾಯಿತು. ಬಿಳಿಯ ಅಡುಗೆಯವರಿದ್ದರು, ನೀಗ್ರೋ ಆಳುಗಳಿದ್ದರು. ಲಾಯದಲ್ಲಿ ಕುದುರೆಗಳಿದ್ದುವು. ಸಾರೋಟು ಸೊಗಸಾಗಿತ್ತು.

ಮೇಗ್‌ಲಿಂಗ್ ಅಂದ :

"ಇಲ್ಲೇ ಸಮೀಪದಲ್ಲೇ ನನ್ನ ಮನೆ."

ಕಿರಿಯ ಗೌರಮ್ಮನ ಕಡೆ ನೋಡಿ ಅವನೆಂದ :

"ನಿಮ್ಮ ದೇಶಕ್ಕೆ ನಾನು ಮೊದಲು ಬಂದಾಗ ಎಲ್ಲಾ ಚಿತ್ರವಿಚಿತ್ರವಾಗಿ ಹೇಗೆ ನನಗೆ ಅನಿಸಿತ್ತೋ, ಈಗ ರಾಜಕುಮಾರಿಗೆ ಹಾಗೆಯೇ ಅನಿಸುತ್ತಿರಬಹುದು."

ಕಿರಿಯ ಗೌರಮ್ಮ ಮುಗುಳುನಕ್ಕು ಇಂಗ್ಲಿಷಿನಲ್ಲಿ ಅಂದಳು :

"ಲಂಡನ್ ನಗರದ ವಿಷಯ ನಾನು ಕೇಳಿ ಬಲ್ಲೆ. ಓದಿ ತಿಳಕೊಂಡಿದ್ದೇನೆ. ಬಾಲ್ಯದಲ್ಲಿ ನೋಡಿ ಮರೆತುಹೋದ ಊರಿಗೆ ಪುನಃ ಬಂದಹಾಗೆ ಅನಿಸತಾ ಇದೆ."

"ಓ ! ಎಷ್ಟು ಸೊಗಸಾಗಿ ಅಂದಿರಿ !" ಎಂದ ಮೇಗ್‌ಲಿಂಗ್.

ಚಿಕವೀರರಾಜ ಹೆಮ್ಮೆಯಿಂದ ಮಂದಸ್ಮಿತನಾದ.

...ಒಂದಷ್ಟು ತಿಂಗಳು ವಿಹಾರದಲ್ಲಿ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನದಲ್ಲಿ ಪ್ರತಿಷ್ಠಿತರ ಪರಿಚಯ ಮಾಡಿಕೊಳ್ಳುವುದರಲ್ಲಿ ಭೇಟಿ, ಮರುಭೇಟಿಗಳಲ್ಲಿ ಕಳೆಯಿತು.

ಈಸ್ಟ್ ಇಂಡಿಯಾ ಕಂಪೆನಿಯ ಪ್ರತಿನಿಧಿಗಳು ಚಿಕವೀರರಾಜನ ಮೇಲೆ ಕಣ್ಣಿಟ್ಟರು.

ಲಾರ್ಡ್ ಎಲೆನ್‌ಬರೋ ತೀರಿಕೊಂಡಿದ್ದ. ಲೆಫ್ಟಿನೆಂಟ್ ಕರ್ನಲ್ ಕಾರ್ಪೆಂಟರ್ ಚಿಕವೀರರಾಜ ಬಂದುದಕ್ಕೆ ಸಂತೋಷ ವ್ಯಕ್ತಪಡಿಸಿದ.

ನೇಮಕ ಪತ್ರಗಳನ್ನು ಪಡೆದು ಹಿಂದೂಸ್ಥಾನಕ್ಕೆ ಹೊಸದಾಗಿ ಹೋಗುವವರಿಗೂ ಅಲ್ಲಿಂದ ಹಿಂತಿರುಗುವವರಿಗೂ ವಾರ್‌ವಿಕ್ ರಸ್ತೆಯ ಕ್ಲಿಫ್ಟನ್ ವಿಲ್ಲಾ ಯಾತ್ರಾಸ್ಥಳವಾಯಿತು. ಚಿಕವೀರರಾಜನ ಆತಿಥ್ಯ ಲಂಡನ್ನಿನ ಮನೆಮಾತಾಯಿತು.

## ೩೭

ಚಿಕವೀರರಾಜನನ್ನು ಕುರಿತು ಆಳುವ ವೃತ್ತಗಳಲ್ಲಿ ಸದಭಿಪ್ರಾಯ ಮೂಡುವಂತೆ ಮೇಗ್‌ಲಿಂಗ್ ಹೃತ್ಪೂರ್ವಕವಾಗಿ ಶ್ರಮಿಸಿದ. ಪ್ರಮುಖ ವ್ಯಕ್ತಿಗಳಿಗೆಲ್ಲ ಮೂರು ಪತ್ರಗಳನ್ನು ಆತ ತೋರಿಸುತ್ತಿದ್ದ.

ಒಂದು, ಲಾರ್ಡ್ ಎಲೆನ್‌ಬರೋ ೧೮೪೧ರಲ್ಲಿ ಹಿಂದೂಸ್ಥಾನದಲ್ಲಿದ್ದಾಗ ಚಿಕವೀರರಾಜನಿಗೆ ಬರೆದುದು :

"...ತಮ್ಮ ವೈಯಕ್ತಿಕ ಪರಿಚಯ ಲಾಭದ ಅದೃಷ್ಟವಿದ್ದ ನನ್ನ ದೇಶಬಾಂಧವರೆಲ್ಲ ತಮ್ಮ ಗುಣಗಳನ್ನು ಕುರಿತು, ಕಾಶಿಯ ವಾಸ್ತವ್ಯದಲ್ಲಿ ತಾವು ನಡೆದುಕೊಂಡಿರುವ ರೀತಿಯನ್ನು ಕುರಿತು, ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಆ ಅಭಿಪ್ರಾಯ ಸಹಾನುಭೂತಿಯ ನನ್ನ ಭಾವನೆಗಳನ್ನು ಬಹಳವಾಗಿ ಬಲಪಡಿಸಿದೆ. ತಮಗೆ ತೃಪ್ತಿಕರವೂ ಘನತೆವೆತ್ತ ತಮ್ಮ ವಂಶಕ್ಕೆ ಗೌರವೋಚಿತವೂ ಆದ ಪ್ರಾಯೋಗಿಕವಾದ ಏರ್ಪಾಟೊಂದನ್ನು ಮಾಡುವುದು ಸಾಧ್ಯವಾಗಬೇಕೆಂಬುದು ನನ್ನ ತೀವ್ರ ಬಯಕೆಯಾಗಿದೆ."

ಚಿಕವೀರರಾಜನಿಗೆ ೧೮೪೮ರಲ್ಲಿ ಕಾರ್ಪೆಂಟರ್ ಬರೆದುದು :

"ಕೊಡಗಿನ ಶ್ರೀಮನ್ಮಹಾರಾಜರಿಗೆ ವಿದಾಯ ಹೇಳುವ ಈ ಸಂದರ್ಭದಲ್ಲಿ ನನ್ನಲ್ಲಿ ಅವರು ಉಂಟುಮಾಡಿರುವ ಮಧುರ ಭಾವನೆಗಳನ್ನು ಕುರಿತು ನಾನೊಂದು ಪ್ರಮಾಣ ಪತ್ರವನ್ನು ಕೊಡದಿರಲಾರೆ. ನಮ್ಮ ಪರಿಚಯದ ಹದಿನಾಲ್ಕು ವರ್ಷಗಳ ದೀರ್ಘಾವಧಿಯಲ್ಲಿ ಅವರು ತೋರಿದ ಶಾಂತ, ಸ್ನೇಹಪರ ಹಾಗೂ ಅತ್ಯುತ್ಕೃಷ್ಟ ನಡತೆಯ ಬಗೆಗೆ ಇಲ್ಲಿ ಬರೆಯಲು ನನಗೆ ಬಹಳ ಸಂತೋಷವೆನಿಸುತ್ತಿದೆ."

ಮೆಕ್ ಗ್ರಿಗರ್‌ನಿಂದ, ೧೮೪೯ರಲ್ಲಿ :

"ತಾವು ಶಾಂತ ಹಾಗೂ ಸರಳ ನಡತೆಯಿಂದ, ಎಲ್ಲಾ ಸಂದರ್ಭಗಳಲ್ಲೂ ಸರಿಯಾದ ವರ್ತನೆಯಿಂದ, ನನ್ನ ಸದಭಿಪ್ರಾಯವನ್ನೂ ಗೌರವವನ್ನೂ ಸಂಪೂರ್ಣವಾಗಿ ಸಂಪಾದಿಸಿದ್ದೀರಿ."

ಹಾಗೆ ತಮ್ಮವರಿಂದಲೇ ಬಣ್ಣಿಸಲ್ಪಟ್ಟ ವ್ಯಕ್ತಿಯನ್ನು ಆಂಗ್ಲ ಪ್ರಮುಖರು ಈಗ ಕಣ್ಣಾರೆ ಕಂಡರು ; ಸಮಾಧಾನಪಟ್ಟರು.

ಮೇಗ್‌ಲಿಂಗ್‌ಗೆ ಅವರೆಂದರು :

"ನಿಮ್ಮ ಮಿತ್ರರಿಗೆ ಅನ್ಯಾಯವಾಗಿದೆ. ಒಪ್ಪುತೇವೆ. ಆದರೆ ಈಸ್ಟ್ ಇಂಡಿಯಾ ಕಂಪೆನಿಯ ನಿರ್ಧಾರಗಳನ್ನು ಬದಲಿಸುವುದು ಸಾಧ್ಯವೆ? ರಾಜಕೀಯವಾಗಿ ಪ್ರಯತ್ನಗಳನ್ನು ಮಾಡುವುದಕ್ಕೆ ಮುಂಚೆ ಬೇರೆ ದಾರಿಗಳೇನಿವೆಯೋ ನೋಡಬೇಕು."

ಅವರ ಮುಂದೆ ಒಂದು ದೃಷ್ಟಾಂತವಿತ್ತು, ದುಲೀಪ್‌ಸಿಂಗನದು. ಪಂಜಾಬಿನ ಸಿಂಹ ರಣಜಿತ್‌ಸಿಂಗನನ್ನು ಇಂಗ್ಲಿಷರು ಸೋಲಿಸಿದಾಗ, ಪಟ್ಟಕ್ಕೆ ಹಕ್ಕುದಾರನಾದ ಅವನ ಪುತ್ರ ಎಳೆಯ ಮಗು. ಆತ ಒಂಬತ್ತು ವರ್ಷದವನಾದಾಗ ತಾಯಿಯಿಂದ ಅವನನ್ನು ಬೇರ್ಪಡಿಸಿ ಇಂಗ್ಲಿಷರು ತಮ್ಮ ದೇಶಕ್ಕೆ ಕರೆದೊಯ್ದರು. ವಿದ್ಯಾಭ್ಯಾಸ ಕೊಡಿಸಿದರು. ಆತ ಕ್ರಿಸ್ತ ಮತಾವಲಂಬಿಯಾದ. ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರನಾಗಿ ಬೆಳೆದ.

ಅವರೆಂದರು :

"ಕೊಡಗಿನ ರಾಜ ತಮ್ಮ ಮಗಳನ್ನು ಚಕ್ರವರ್ತಿನಿಯವರ ರಕ್ಷಣೆಗೆ ಒಪ್ಪಿಸಲಿ. ದುಲೀಪ್‌ಸಿಂಗ್ ನಾಳೆ ಪಂಜಾಬಿನ ಅರಸನಾಗುವುದು ಹೇಗೆ ಸಾಧ್ಯವೋ ಹಾಗೆಯೇ ಆ ರಾಜಕುಮಾರಿ ಕೊಡಗಿನ ರಾಣಿಯಾಗುವುದೂ ಸಾಧ್ಯ."

ಸ್ವತಃ ಮೇಗ್‌ಲಿಂಗನೇ ಈ ಯೋಚನೆಯನ್ನು ಮಾಡಿರಲಿಲ್ಲ ಎಂದಲ್ಲ. ಆದರೆ ಅಪ್ರಿಯ

ವಾದುದನ್ನು ಚಿಕವೀರರಾಜನಿಗೆ ಹೇಳಿ ಅವನಿಗೆ ನೋವುಂಟುಮಾಡುವೆನೇನೋ ಎಂಬ ಭಯ ಆತನಿಗೆ.

ಕಡೆಗೂ ಧೈರ್ಯಮಾಡಿ ಅವನು ಕಾರ್ಯೋನ್ಮುಖನಾದ. ಯೋಜನೆಯ ಮೊದಲ ಹಂತ: ದುಲೀಪ್‌ಸಿಂಗ್ ಚಿಕವೀರರಾಜನಲ್ಲಿ ಸ್ವೀಕರಿಸಿದ ಆತಿಥ್ಯ.

ಕೊಡಗಿನ ಅರಸ ಆ ರಾಜಕುಮಾರನಿಗೆ ಅಂದ :

"ಹಿಂದಿನ ಕಥೆ. ನಿಮ್ಮ ತಂದೆಯವರ ಜತೆ ಸ್ನೇಹ ಬೆಳೆಸಬೇಕು ಅಂಬೋ ಉದ್ದೇಶ ದಿಂದ ಲಾಹೋರ್‌ಸಿಂಗ್ ಅಂತ ಒಬ್ಬನನ್ನು ಮಡಕೇರಿಯಿಂದ ರಾಯಭಾರಿಯಾಗಿ ನಾವು ಕಳಿಸಿದ್ದೆವು. ಮುಂದೆ ಸ್ವಲ್ಪ ಸಮಯದಲ್ಲೇ ನಮ್ಮ ರಾಜ್ಯದ ಮೇಲೆ ಇಂಗ್ಲಿಷರ ಆಕ್ರಮಣ ನಡೆಯಿತು. ನಮ್ಮ ರಾಯಭಾರಿ ಲಾಹೋರ್ ತಲುಪಿದನೋ ಇಲ್ಲವೋ ಒಂದೂ ತಿಳಿಯದೆ ಹೋಯಿತು."

ದುಲೀಪ್‌ಸಿಂಗ್‌ಗೆ ತಂದೆಯನ್ನು ಕುರಿತ ಪ್ರಸ್ತಾಪ ಕಸಿವಿಸಿಯುಂಟುಮಾಡಿದಂತೆ ಕಂಡಿತು.

ಆತನೆಂದ :

"ಆಗಿನ ಕಾಲದಲ್ಲಿ ಏನೇನೋ ನಡೆದುಹೋಯ್ತು. ಆ ವಿಷಯ ಈಗ ಮಾತನಾಡಿ ಪ್ರಯೋಜನವಿಲ್ಲ ಅನಿಸ್ತದೆ."

ಚಿಕವೀರರಾಜನ ಪ್ರತಿಕ್ರಿಯೆಯನ್ನೂ ನಿರೀಕ್ಷಿಸದೆ ದುಲೀಪ್‌ಸಿಂಗ್, ಇಂಗ್ಲೆಂಡಿನಲ್ಲಿ ತಾನು ಕಂಡು ಅನುಭವಿಸಿದ ಸಂಗತಿಗಳನ್ನು ಕುರಿತು, ತಾನು ಆ ದೇಶದ ಪ್ರಜೆಯೋ ಎಂಬ ಅಭಿಮಾನದಿಂದ, ಮಾತನಾಡಿದ.

ಅವನು ತೆರಳಿದ ಬಳಿಕ ಮೇಗ್‌ಲಿಂಗನೆಂದ :

"ಚುರುಕು ಹುಡುಗ. ಒಬ್ಬನೇ ಇದ್ದು ಸ್ವಲ್ಪ ವಿಚಿತ್ರವಾಗಿ ಬೆಳೆದಿದ್ದಾನೆ, ಅಷ್ಟೆ. ಹಿರಿಯರಾದವರ ರಕ್ಷಣೆ ಅವನಿಗೆ ದೊರೆತಿದ್ದರೆ ಇನ್ನೂ ಉತ್ತಮನಾಗುತ್ತಿದ್ದ."

ಚಿಕವೀರರಾಜ ಒಪ್ಪಿದ :

"ನಿಮ್ಮ ಶಿಕ್ಷಣ ಪದ್ಧತಿಯಿಂದಂತೂ ಮನುಷ್ಯ ಪೂರ್ತಿಯಾಗಿ ಬದಲಾಗತಾನೆ."

ಆ ದಿನ ಮಾತು ಮುಂದುವರಿಸುವುದು ಮೇಗ್‌ಲಿಂಗನಿಂದ ಆಗಲಿಲ್ಲ.

...ಮುಂದೆಯೊಮ್ಮೆ ಇದ್ದಕ್ಕಿದ್ದಂತೆ ಸಂದರ್ಭ ಒದಗಿ ಬಂತು.

ಬೇಸರದಲ್ಲಿದ್ದ ಅರಸನೆಂದ :

"ಇಲ್ಲಿಗೆ ಬಂದು ಹತ್ತರ ಹತ್ತರ ಎರಡು ವರ್ಷವಾಗತಾ ಬಂತು. ನಮ್ಮ ಹಕ್ಕಿನ ಪ್ರಸ್ತಾಪ ಮಾಡುವುದು ಆಗಲಿಲ್ಲ."

ಮೇಗ್‌ಲಿಂಗ್ ನುಡಿದ :

"ಸಸೂತ್ರವಾಗಿ ಕೆಲಸ ಆಗಬೇಕಾದರೆ ಇರುವುದು ಒಂದೇ ದಾರಿ. ರಾಜಕುಮಾರಿಯ ಮೇಲೆ ಚಕ್ರವರ್ತಿನಿಯ ಕೃಪಾಕಟಾಕ್ಷ ಬೀಳಬೇಕು."

"ನಾವು ಬಯಸುವುದಾದರೂ ಅದನ್ನೇ ಅಲ್ಲ ?"

"ರಾಜಕುಮಾರಿಗೆ ತಾಯಿಯಿಲ್ಲ. 'ತಮ್ಮ ಉಡಿಯಲ್ಲಿ ಹಾಕಿದೇನೆ; ದೇವಮಾತೆಯಾಗಿ ಸಲಹುವ ಕೃಪೆಮಾಡಿ' ಅಂತ ಚಕ್ರವರ್ತಿನಿಯನ್ನು ಪ್ರಾರ್ಥಿಸಬೇಕು."

"ಅಂದರೆ ಅವಳನ್ನು ಬಿಟ್ಟು ನಾವಿರಬೇಕೆ ?"

"ಛೆ! ಅಲ್ಲ! ಅದೊಂದು ನಾಮಕರಣ ಸಮಾರಂಭ ಮಾತ್ರ."

ಚಿಕವೀರರಾಜ ಮೇಗ್‌ಲಿಂಗನನ್ನು ಕ್ಷಣ ದಿಟ್ಟಿಸಿ ನೋಡಿ ಅಂದ :

"ಯುವರಾಣಿ ಬೇರೊಂದು ಹೆಸರಿಟ್ಟುಕೊಳ್ಳಬೇಕು ಅಂತೀರೊ ?"

"ಇರುವ ಹೆಸರಿನ ಜತೆಗೆ ಇನ್ನೊಂದು."

"ಮತದೀಕ್ಷೆಯ ವಿಷಯ ನೀವು ಹೇಳುತಿರೋದು."

ಉಗುಳು ನುಂಗಿ ಮೇಗ್‌ಲಿಂಗನೆಂದ :

"ಹಿಂದೂಸ್ಥಾನದಲ್ಲಿ ಎಷ್ಟೋ ಜನರ ಮತಾಂತರಕ್ಕೆ ಕಾರಣನಾಗಿದೇನೆ, ನಿಜ. ಆದರೆ ನಿಮ್ಮ ಮಗಳಿಗೊಂದು ದೀಕ್ಷೆ ವಿಧಿಸುವುದರಿಂದ ನಾನು ಸ್ವರ್ಗದಲ್ಲಿ ಹೆಚ್ಚಿನ ಸ್ಥಾನವನ್ನೇನೂ ಪಡೆಯುವುದಿಲ್ಲ. ಚಕ್ರವರ್ತಿನಿ ದೊಡ್ಡ ಮನಸ್ಸು ಮಾಡಿ ಕೊಡಗನ್ನು ಪುನಃ ನಿಮಗೆ ಕೊಡಿಸುವಂತಾಗಲಿ—ಅಂತ ಈ ಸಲಹೆ ಮಾಡಿದೇನೆ."

ಚಿಕವೀರರಾಜನೆಂದ :

"ಇವತ್ತು ರಾತ್ರೆ ನನಗೆ ನಿದ್ದೆ ಬರದು."

...ಆ ರಾತ್ರೆಯಷ್ಟೇ ಅಲ್ಲ, ಮುಂದೆ ಹಲವು ರಾತ್ರೆ ಚಿಕವೀರರಾಜ ನಿದ್ರಿಸಲಿಲ್ಲ.

ಒಂದು ಸಂಜೆ ಹಿಮ ಬೀಳುತ್ತಿತ್ತು. ಸಾರೋಟಿನಲ್ಲಿ ಲಂಡನ್ ಸೇತುವೆಯ ತನಕ ಹೋಗಿ, ವಾಹನವನ್ನು ಅಲ್ಲಿ ನಿಲ್ಲಿಸಿ, ಚಿಕವೀರರಾಜ ಸೇತುವೆಯ ಮೇಲೆ ಒಬ್ಬನೇ ನಡೆದ. ಆಂಗ್ಲ ಪೋಷಾಕು ಧರಿಸಿದ್ದ ವರ್ಣೀಯ. ಸುರಿಯುತ್ತಿದ್ದ ಹಿಮವರ್ಷದಲ್ಲಿ ಇತರ ದಾರಿಹೋಕರಿಗೆ ಅದು ಕಾಣಿಸುತ್ತಿರಲಿಲ್ಲ. ಸೇತುವೆಯ ಮಧ್ಯೆ ಅಂಚಿಗೆ ತಗಲಿ ನಿಂತು, ಆತ ಥೇಮ್ಸ್ ನದಿಯನ್ನೂ ಅಳಿವೆ ಬಾಗಿಲನ್ನೂ ನೋಡಿದ. ಕಾವೇರಿ ಅವನ ಹುಟ್ಟೂರಿನ ನದಿ. ಗಂಗೆಯನ್ನು ಅವನು ಬಲ್ಲ. ಇಲ್ಲಿಯ ಜನರಿಗೆ ಥೇಮ್ಸ್ ಪವಿತ್ರವಾದುದು. ಧಾರ್ಮಿಕ ಅರ್ಥದಲ್ಲಿ ಅಲ್ಲವಾದರೂ ಇತಿಹಾಸ—ಸಾಧನೆಗಳ ದೃಷ್ಟಿಯಿಂದ ಅದಕ್ಕೆ ಮಹತ್ವ. ಈ ಸೇತುವೆಯನ್ನು ಹದಿನೆಂಟು ಶತಮಾನಗಳಿಗೆ ಹಿಂದೆ ಕ್ಲಾಡಿಯಸ್ ಎಂಬ ರೋಮನ್ ಸಮ್ರಾಟ ಇಂಗ್ಲೆಂಡನ್ನು ಆಕ್ರಮಿಸಿದಾಗ ಕಟ್ಟಿದನಂತಲ್ಲ ? ಹಿಂದೊಮ್ಮೆ ಈ ದೇಶವೂ ಪರಕೀಯರ ಕೆಳಗೆ ನರಳಿತ್ತು. ಈಗ ಅದೇ ದೇಶ ಇತರರನ್ನು ದಾಸ್ಯದಲ್ಲಿ ಬಿಗಿದಿದೆ. ತಾನೊಬ್ಬ ಕೈದಿ. ಗೊತ್ತುಗುರಿಯಿಲ್ಲದೆ ಬದುಕಿನ ಸಾಗರದಲ್ಲಿ ಅಲೆಯುವ ಕಡ್ಡಿಯಾದೆ. ವೇಲೂರಿನ ಕೋಟೆಯೊಳಗಿನ ಅರಮನೆಗಿಂತ ಏನು ಭಿನ್ನ ಈ ಕ್ಲಿಫ್ಟನ್ ವಿಲ್ಲಾ ? ಈ ಸೇತುವೆಯಿಂದ ಕೆಳಗೆ ತಾನು ಧುಮುಕಿದರೊ ? ಉಂಟೆ ? ಆತ್ಮಹತ್ಯೆ ಮಾಡಿಕೊಳ್ಳಲೇ ತಾನು ? ತನ್ನ ಮಗಳ ಗತಿ ? ಏನೇ ಆಗಲಿ ವಿಫಲನಾಗಿ ಈ ದೇಶದಿಂದ ಮರಳಬಾರದು. ಕಳೆದುಹೋದ ರಾಜ್ಯವನ್ನು ತಾನು ಪಡೆಯಲೇ ಬೇಕು. ಹೇಗೆ ? ಈ ಜನರಿಗೆ ಧರ್ಮದ ಹುಚ್ಚು. ಎಲ್ಲ ಧರ್ಮಗಳೂ ಒಂದೇ ಅಲ್ಲವೆ ? ಅವರ ಆಸೆ ತೀರಿಸಿಕೊಳ್ಳಲಿ. ತಾನೇನು ಪಾಪಿಯಾಗುತೇನೆಯೆ ? ಅಂತೂ ದೊಡ್ಡಪ್ಪನ ಕಾಲದಲ್ಲಿ ಮಡಕೇರಿಯಲ್ಲಿ ಸಾಧಿಸಲಾಗದುದನ್ನು ಈ ಮೇಘಲಿಂಗ ಈಗ ಆಗಮಾಡುತಿದಾನೆ. ಇಲ್ಲ. ಅವನನ್ನು ತಾನು ಜರೆಯಬಾರದು. ಪಾಪ, ಅವನಿಂದ ಏನು ತಾನೆ ಆದಾತು ? ಆತನ ಪ್ರೇರಣೆಯಿಂದಲೇ ಇಷ್ಟು ದೂರ ಬಂದೆ. ಈಗ ಅವನನ್ನು ತುಚ್ಛನೆಂದು ಹೀಗಳೆಯಲೆ ? ಹಾಗೆ ಮಾಡಲಾರೆ. ಇಷ್ಟರಲ್ಲಿ, ಅವನು ಹೇಳಿದ್ದಾದರೂ ಏನು ? ಪುನರ್ನಾಮಕರಣ. ನಾಮ ಮಾತ್ರ ದೀಕ್ಷೆ... ಮಗಳ ಅಭಿಪ್ರಾಯವೇನಿದ್ದೀತು ಇದರಲ್ಲಿ ? ಅದನ್ನು ತಾನು ತಿಳಿಯಬೇಕು. ಅವಳಿಗೆ

ಒಪ್ಪಿಗೆಯಾಗದುದನ್ನು ಎಂದಾದರೂ ಮಾಡಿಯೇನೆ ?...

—ಸೇತುವೆಯ ಮೇಲಿಂದ ಚಿಕವೀರರಾಜ ಮರಳಿ ಸಾರೋಟಿನ ಬಳಿಗೆ ನಡೆದ. ಕ್ಲಿಫ್ಟನ್ ವಿಲ್ಲಾ ತಲಪಿದ.

ಅಲ್ಲಿ ಮೇಗ್‌ಲಿಂಗ್ ಅವನಿಗಾಗಿ ಕಾದಿದ್ದ :

"ಅವೊತ್ತು ತಮ್ಮ ಮನಸ್ಸನ್ನು ನೋಯಿಸಿದೆ. ಕ್ಷಮೆ ಕೇಳೋಕೆ ಬಂದಿದೇನೆ" ಎಂದ ಆತ.

ಅರಸನೆಂದ :

"ರಾಜಕುಮಾರಿಯ ಮುಂದೆ ಪ್ರಸ್ತಾಪ ಮಾಡೋಣ. ಅವಳು ಹೇಗೆ ಹೇಳುತಾಳೋ ಹಾಗೆ."

## ೬೮

ತನ್ನ ಮಗಳಿಗೆ ದೇವಮಾತೆಯಾಗಬೇಕೆಂದು ಕೊಡಗಿನ ಪದಚ್ಯುತ ರಾಜ ಅರ್ಪಿಸಿದ ಪ್ರಾರ್ಥನಾ ಪತ್ರವನ್ನು ಬ್ರಿಟಿಷ್ ಸಾಮ್ರಾಜ್ಞಿ ವಿಕ್ಟೋರಿಯಾ ಮಾನ್ಯಮಾಡಿದಳು.

ಕೊಡಗಿನ ರಾಜಕುಮಾರಿ, ವಿಕ್ಟೋರಿಯಾ ಗೌರಮ್ಮ ಎಂದು ಹೊಸ ಹೆಸರು ಪಡೆದಳು. ಆ ಸಮಾರಂಭ ಅರಮನೆಯೊಳಗಿನ ದೇವಾಲಯದಲ್ಲಿ ಕೆಲವೇ ಜನ ಆಮಂತ್ರಿತ ರೆದುರು ನಡೆಯಿತು. ಚಿಕವೀರರಾಜ ಪ್ರೇಕ್ಷಕನಂತೆ ಅದನ್ನು ಈಕ್ಷಿಸಿದ. ವಿಕ್ಟೋರಿಯಾ ರಾಣಿ, ತನ್ನ 'ಮಗಳು' ವಿಕ್ಟೋರಿಯಾ ಗೌರಮ್ಮನ ಮೈದಡವಿದಾಗ, ಇದು ಹೊಸ ಸಂಭವಕ್ಕೆ ನಾಂದಿ ಎಂದು ಆತ ಭ್ರಮಿಸಿದ.

'ಮಗಳು' 'ತಾಯಿ'ಗೆ ಅನರ್ಘ್ಯ ರತ್ನಗಳ ಕಾಣಿಕೆ ಒಪ್ಪಿಸಿದಳು.

ಚಿಕವೀರರಾಜ ತನ್ನ ಮಗಳ ಧರ್ಮಮಾತೆಗೆ ಮಂಡಿಯೂರಿ ನಮಿಸಿದ.

ಅಷ್ಟೆ.

ಕಾಲ ಕಳೆಯಿತು. ದುಲೀಪಸಿಂಗನೂ ಪಂಜಾಬಿನ ಅರಸನಾಗಲಿಲ್ಲ; ವಿಕ್ಟೋರಿಯಾ ಗೌರಮ್ಮನೂ ಕೊಡಗಿನ ರಾಣಿಯಾಗಲಿಲ್ಲ.

ಕಾರ್ಪೆಂಟರ್ ಅಂದ :

"ತಾವು ಸುಮ್ಮನಿರಬಾರದು. ತಮಗೆ ಅನ್ಯಾಯವಾಗಿದೆ ; ಕಂಪೆನಿಯ ವಶವಿರುವ ನಿಧಿ ಕೊಡಿಸಬೇಕು ಅಂತ ನ್ಯಾಯಸ್ಥಾನದಲ್ಲಿ ದೂರಿಕೊಳ್ಳುವುದು ವಿಹಿತ. ಅದಕ್ಕೆ ಪೂರ್ವ ಭಾವಿಯಾಗಿ ಪತ್ರಿಕೆಗಳ ಬೆಂಬಲ ಪಡೆಯಿರಿ. ಪಾರ್ಲಿಮೆಂಟಿನ ಕೆಲ ಸದಸ್ಯರನ್ನು ಒಲಿಸಿ ಕೊಳ್ಳಿ. ವಕೀಲರನ್ನು ನೇಮಿಸೋಣ. ವೆಚ್ಚವಾಗುತದೆ ಅಂತ ಹಿಂದೆ ಮುಂದೆ ನೋಡ ಬಾರದು."

ಲಂಡನಿನ ಪತ್ರಿಕೆಗಳಲ್ಲಿ ಚಿಕವೀರರಾಜ ಸಂಪಾದಕರಿಗೆ ಬರೆದ ಪತ್ರಗಳು ಪ್ರಕಟ ವಾದುವು.

ಸಾವಿರದ ಎಂಟುನೂರ ಐವತ್ತಾರರಲ್ಲಿ 'ಡೇಲಿ ನ್ಯೂಸ್' ಪತ್ರಿಕೆಯಲ್ಲಿ ಪ್ರಕಟವಾದ ಆತನ ಒಂದು ಪತ್ರ, ಸತ್ಯಸಂಗತಿಗಳನ್ನು ಮುಸುಕಿದ್ದ ತೆರೆಯನ್ನು ಬದಿಗೆ ಎಳೆಯಿತು.

ಅದರಲ್ಲಿ ಆತನೆಂದ :

...ಕೊಡಗಿನ ಜನತೆ, ಘನತೆವೆತ್ತ ಕಂಪೆನಿಯ ಪ್ರಜೆಗಳಾಗಲು ಇಷ್ಟಪಡುತ್ತಾರೆಂಬುದು

ನಿಜವಲ್ಲ. ಅವರು ತಲೆಬಾಗಿದರು ಎಂಬುದನ್ನು ನಾನೊಪ್ಪುತ್ತೇನೆ. ಆದರೆ ಯಾವ ಕಾರಣ ದಿಂದ? ತಮ್ಮ ಅರಸನನ್ನು ಅವರು ಕಳೆದುಕೊಂಡಿದ್ದರು. ಬಲಗುಂದಿದರಾದುದರಿಂದ ಹಾಗೂ ತಮ್ಮನ್ನು ಮುನ್ನಡೆಸಲು ನಾಯಕನಿಲ್ಲದುದರಿಂದ, ತಮ್ಮ ಭಾವನೆಗಳೇನೇ ಇದ್ದರೂ, ಬಲಶಾಲಿಯಾದ ಎದುರಾಳಿಗೆ ಅವರು ಶರಣಾಗಬೇಕಾಯಿತು...ನಾವು ನಿರ್ವಾ ಸಿತರಾಗಿದ್ದಾಗ, ಆಂಗ್ಲರ ಗೌರವಕ್ಕಾಗಲೀ ಸಹಾನುಭೂತಿಗಾಗಲೀ ಪಾತ್ರನಲ್ಲದ ವ್ಯಕ್ತಿ ಯೆಂದು ನಮ್ಮನ್ನು ಚಿತ್ರಿಸಲಾಯಿತು. ಆದರೆ, ಸಂಪಾದಕರೇ, ಯಾವ ಪಾತಕವನ್ನೂ ಮಾಡದ ಮನಸ್ಸಾಕ್ಷಿಯಿಂದೊಡಗೂಡಿ ನಾವಿಲ್ಲಿ ನಿಂತಿದ್ದೇವೆ...ನಮ್ಮ ರಾಜ್ಯವನ್ನು ನಮ್ಮಿಂದ ಕಸಿದುಕೊಳ್ಳಲಾಯಿತು. ನಮ್ಮ ಸಹಸ್ರಾರು ಪ್ರಜೆಗಳು ನಮ್ಮ ಅಸಹಾಯ ಸ್ಥಿತಿಗಾಗಿ ರೋದಿಸುತ್ತಲಿದ್ದಂತೆ, ಅವಸರ ಅವಸರವಾಗಿ ನಮ್ಮನ್ನು ರಾಜಕೈದಿಯಂತೆ ನಮ್ಮ ರಾಜ್ಯದ ಹೊರಕ್ಕೆ ಕರೆದೊಯ್ಯಲಾಯಿತು."

ಪಾರ್ಲಿಮೆಂಟಿನ ಕೆಲ ಸದಸ್ಯರು ಈಸ್ಟ್ ಇಂಡಿಯಾ ಕಂಪೆನಿಯ ದುರ್ವರ್ತನೆಯನ್ನು ಪ್ರಸ್ತಾಪಿಸಿದರು.

ಛಾನ್ಸರಿ, ಇಂಗ್ಲೆಂಡಿನ ಉಚ್ಚ ನ್ಯಾಯಸ್ಥಾನದ ಒಂದು ವಿಭಾಗ. ಅಲ್ಲಿಗೆ ಚಿಕವೀರರಾಜ ದೂರುಕೊಟ್ಟ.

[ಪದಚ್ಯುತನಾಗಿ ಇಪ್ಪತ್ತೈದು ವರ್ಷಗಳಿಗೂ ಮೇಲಾಗಿದ್ದರೂ ಮೈಸೂರಿನ ಕೃಷ್ಣರಾಜ ಒಡೆಯನ ಪರವಾಗಿ ವಕೀಲರು ಲಂಡನ್ನಿನಲ್ಲಿ ಆಗ ವಾದ ನಡೆಸಿದ್ದರು!]

ಚಿಕವೀರರಾಜನ ದೂರಿನ ವಿಚಾರಣೆ ಇಂಗ್ಲೆಂಡಿನ ಜನತೆಯ ಗಮನವನ್ನು ಸೆಳೆಯಿತು.

ಈಸ್ಟ್ ಇಂಡಿಯಾ ಕಂಪೆನಿ ಕೊಡಗಿನ ಪದಚ್ಯುತ ರಾಜನಿಗೆ ತಾನು ಸಲ್ಲಿಸುತ್ತಿದ್ದ ವಿಶ್ರಾಂತಿವೇತನವನ್ನು ನಿಲ್ಲಿಸಿತು. ಆತ ತಕ್ಷಣವೇ ಹಿಂದೂಸ್ಥಾನಕ್ಕೆ ಹಿಂತಿರುಗಿ ಪುನಃ ಕಾಶಿ ಯಲ್ಲಿ ನೆಲೆಸಬೇಕು; ಆಗ ವೇತನ ಕೊಡಲಾಗುವುದು—ಎಂದಿತು.

ಚಿಕವೀರರಾಜ ಕಂಪೆನಿಯ ನಿರ್ದೇಶಕರ ಆಸ್ಥಾನಕ್ಕೆ ಪ್ರತಿಭಟನೆ ಸಲ್ಲಿಸಿದ:

"ಇನ್ನೂ ಸ್ವಲ್ಪ ಕಾಲ ಈ ದೇಶದಲ್ಲಿ ನಾವಿದ್ದರೆ ಘನತೆವೆತ್ತ ಕಂಪೆನಿಗೆ ಯಾವ ರೀತಿ ಯಲ್ಲಿ ಅಪಾಯ ತಟ್ಟುವುದೋ ನಮಗೆ ತಿಳಿಯದಾಗಿದೆ.

"ನಾವು ಹಿಂದೂಸ್ಥಾನಕ್ಕೆ ಈಗಲೇ ಸ್ಥಳಾಂತರ ಹೊಂದುವುದರಿಂದ ಛಾನ್ಸರಿಯಲ್ಲಿರುವ ಖಟ್ಲೆಯ ವ್ಯವಹರಣೆಗೆ ಧಕ್ಕೆಯುಂಟಾಗುವುದು.

"ಶ್ರೀಮನ್ಮಹಾರಾಜ ದುಲೀಪಸಿಂಗರಿಗೆ ನಮ್ಮದಕ್ಕಿಂತಲೂ ನಾಲ್ವತ್ತು ಪಟ್ಟು ದೊಡ್ಡ ದಾದ ವಿಶ್ರಾಂತಿವೇತನ ಕೊಡುತ್ತಿದ್ದೀರಿ. ಅಷ್ಟನ್ನೂ ಇಂಗ್ಲೆಂಡಿನಲ್ಲೇ ವ್ಯಯ ಮಾಡಲು ಅವಕಾಶವಿತ್ತಿದ್ದೀರಿ. ಅವರ ಇಲ್ಲಿನ ವಾಸ್ತವ್ಯದ ಬಗೆಗೆ ಯಾವ ನಿರ್ಬಂಧವನ್ನೂ ಹೊರಿ ಸಿಲ್ಲ. ನಮ್ಮೊಬ್ಬರ ವಿಷಯದಲ್ಲೇ ಹೀಗೆ ಯಾಕೆ ಎಂದು ಕೇಳಬಹುದೆ?

"ನಮ್ಮ ಪ್ರಕರಣವನ್ನು ಶಾಂತವಾಗಿ ಪರಿಶೀಲಿಸಿದ ಮೇಲೆ, ತಾವುಗಳು ಒಬ್ಬೊಬ್ಬರೂ ಎದೆಯ ಮೇಲೆ ಕೈ ಇರಿಸಿ,'ಕೊಡಗಿನ ವೃದ್ಧರಾಜನ ವಿಶ್ರಾಂತಿವೇತನವನ್ನು ತಡೆಹಿಡಿಯಲು ಅನುಮೋದನೆ ಕೊಡುತ್ತೇನೆ'—'ನನಗೆಂದೂ ಯಾವ ಕೆಡುಕನ್ನೂ ಮಾಡದ ಈ ಮುದುಕ ನನ್ನು ಭಾರತಕ್ಕೆ ಹಿಂತೆರಳುವಂತೆ ಬಲಾತ್ಕರಿಸುವುದಕ್ಕೆ ಅನುಮೋದನೆ ಕೊಡುತ್ತೇನೆ'— 'ಆತನ ಪ್ರೀತಿಯ ಮಗಳಿಂದ ಆತನನ್ನು ಬೇರ್ಪಡಿಸುವುದಕ್ಕೆ ಅನುಮೋದನೆ ಕೊಡುತ್ತೇನೆ' 'ಆತನಿಗೂ ಆತನ ವಕೀಲರಿಗೂ ನಡುವೆ ಸಾಗರಗಳ ಅಂತರ ಕಲ್ಪಿಸಿ ನ್ಯಾಯವಾದುದೆಂದು

ಆತ ನಂಬಿರುವ ಹಕ್ಕನ್ನು ಪಡೆಯದಂತೆ ಅಡ್ಡಿ ಮಾಡುವುದಕ್ಕೆ ಅನುಮೋದನೆ ಕೊಡುತ್ತೇನೆ' —ಎಂದು ಸಾರುವಿರಾ ?

"ಒಬ್ಬೊಬ್ಬರಾಗಿ ನೀವು ಧಿಕ್ಕರಿಸುವಂಥದನ್ನು ಸಾಂಘಿಕವಾಗಿ ಅನುಮೋದಿಸುವಿರಾ ?

"ವಿಸ್ತಾರವಾದ ಶಕ್ತಿಯುತವಾದ ಸಾಮ್ರಾಜ್ಯದ ಒಡೆಯರೆಂದಲ್ಲ, 'ನೀನು ನಿನ್ನ ಬಗ್ಗೆ ಇತರರಿಂದ ಯಾವ ವರ್ತನೆಯನ್ನು ಅಪೇಕ್ಷಿಸುತ್ತೀಯೋ ಅದೇ ವರ್ತನೆಯನ್ನು ಇತರರ ವಿಷಯದಲ್ಲಿ ತೋರು' ಎಂಬ ಕ್ರಿಸ್ತೀಯ ಭಾವನೆಯಿಂದ, ನನ್ನ ಪರಿಸ್ಥಿತಿಯನ್ನು ಗಮನಿಸ ಬೇಕೆಂದು ಕೇಳುತ್ತಿದ್ದೇನೆ."

ಕಂಪೆನಿಯ ಸಂಚಾಲಕರು 'ನಾವು ಕಿವುಡರು' ಎಂದರು.

ನ್ಯಾಯಸ್ಥಾನ ಪ್ರಸಂಗವನ್ನು ಗಮನಿಸಿ 'ವ್ಯವಹರಣೆ ಮುಗಿಯುವ ತನಕ ಫಿರ್ಯಾದಿಯು ಇಲ್ಲಿಯೇ ಇರಲಿ' ಎಂದಿತು.

ಕಂಪೆನಿ, 'ವಿಶ್ರಾಂತಿ ವೇತನ ಮಾತ್ರ ನಾಸ್ತಿ' ಎಂದು ಸ್ಪಷ್ಟಪಡಿಸಿತು.

ವ್ಯವಹರಣೆ ಮುಗಿಯುತ್ತ ಬಂದಾಗ ಚಿಕವೀರರಾಜ ವಿಕ್ಟೋರಿಯಾ ರಾಣಿಗೇ ಒಂದು ಮನವಿಯನ್ನು ಸಲ್ಲಿಸಿದ.

ಪದಚ್ಯುತನಾಗಿ ಈ ಇಪ್ಪತ್ತನಾಲ್ಕು ವರ್ಷಗಳ ಕಾಲ ತನ್ನನ್ನು ಕೈದಿಯಾಗಿ ಪರಿಗಣಿಸಿದ್ದಾಯಿತು. ಇನ್ನಾದರೂ ವೈಯಕ್ತಿಕ ಸ್ವಾತಂತ್ರ್ಯವನ್ನು ತನಗೆ ಕೊಡಬೇಕು. ಹಿಂದೂಸ್ಥಾನಕ್ಕೆ ಮರಳುವಂತೆ ಒತ್ತಾಯಿಸಬಾರದು. ಅಲ್ಲಿಗೆ ಹೋಗುವ ಇರಾದೆ ತನಗಿದೆ. ತನ್ನ ಉಳಿದ ಮಕ್ಕಳೊಡನೆ, ಅವರಿಗೆ ಶಿಕ್ಷಣ ಕೊಡಿಸುವುದಕ್ಕಾಗಿ, ಇಲ್ಲಿಗೆ ತಾನು ಹಿಂತಿರುಗುತ್ತೇನೆ. ಈ ದೇಶ ಹಾಗೂ ಹಿಂದೂಸ್ಥಾನಗಳ ನಡುವೆ ಸಂಚರಿಸುವ ಸ್ವಾತಂತ್ರ್ಯವನ್ನು ತನಗೆ ನೀಡಬೇಕು. ವಿಶ್ರಾಂತಿ ವೇತನದ ಬದಲು ತನ್ನ ಮುಂದಿನ ಪೀಳಿಗೆ ಗೌರವದಿಂದ ಬಾಳಲು ಅನುಕೂಲವಾಗುವಂತೆ ಜಹಗೀರು ದಯಪಾಲಿಸಬೇಕು

—ಎಂದು ಆ ಮನವಿಯಲ್ಲಿ ಅವನು ಯಾಚಿಸಿದ.

ಆದರೆ ಆತ ಕೈ ಜೋಡಿಸಿ ನಿಂತ ಆ ಘಳಿಗೆ ಅತ್ಯಂತ ಕ್ರೂರವಾಗಿತ್ತು !

## ೬೯

ಸಾವಿರದ ಎಂಟುನೂರ ಐವತ್ತೇಳು, ಹಿಂದೂಸ್ಥಾನದ ಪಾಲಿಗೆ ಮುಂದೆಂದೂ ಮರೆಯಲಾಗದ ವರ್ಷ.

ರಾಷ್ಟ್ರೀಯ ಚೇತನ ಸಿಡಿದೆದ್ದು, ಪರಕೀಯ ಸುಲಿಗೆಯನ್ನು ತಡೆಗಟ್ಟಲೆತ್ನಿಸಿತು. ಅಲ್ಲಲ್ಲಿ ಅಸಂತೋಷದ ಹೊಗೆಯಾಡುತ್ತಿದ್ದೆಡೆಗಳಲ್ಲಿ ಬೆಂಕಿ ಭುಗಿಲ್ಲೆಂದಿತು.

ಆಂಗ್ಲರ ಚಾಕರರಾಗಿ ಹಲವು ಹೋರಾಟಗಳನ್ನು ಜಯಿಸಿ ಕೊಟ್ಟಿದ್ದ ದೇಶೀಯ ಸಿಪಾಯರೇ ತಮ್ಮ ಒಡೆಯರ ವಿರುದ್ಧ ದಂಗೆ ಎದ್ದರು. ಆಂಗ್ಲರು ನೀಡಿದ್ದ ಬಂದೂಕುಗಳು ಅವರಿಗೇ ಇದಿರಾದುವು.

ಏಕ ರಾಷ್ಟ್ರ ಕಲ್ಪನೆಯಿಂದ ಬಂಡಾಯಗಾರರು ಪ್ರೇರಿತರಾಗಿರಲಿಲ್ಲವಾದರೂ, ಅವರ ವರ್ತನೆ ಭಾರತೀಯರ ಸುಪ್ತ ದೇಶಾಭಿಮಾನವನ್ನು ಜಾಗ್ರತಗೊಳಿಸಿತು. ತಾವು ಅಜೇಯರು, ಜಗಜ್ಜೇತರು—ಎಂದೆಣಿಸಿದ್ದ ಆಂಗ್ಲರು ದಾರಿಕಾಣದಾದರು.

ರಾಜರು ಪ್ರಜೆಗಳು, ಹಿಂದೂಗಳು ಮುಸಲ್ಮಾನರು, ಎಲ್ಲರೂ ಒಂದೇ ತಳಹದಿಯ

ಮೇಲೆ ನಿಂತು, ಪರಕೀಯರಿಗೆ ಪ್ರತಿಭಟಿಸಿ ತೋರಿದ ಆ ಘಟನೆ ಅಭೂತಪೂರ್ವವಾಗಿತ್ತು.

ಆದರೂ ಆಂಗ್ಲರು ಗೆದ್ದರು !

ಮಹಾಪೂರದಲ್ಲಿ ಕೊಚ್ಚಿಹೋಗುತ್ತೇವೆ, ಎಂದಿದ್ದರು ಅವರು. ಆದರೆ ಒಮ್ಮೆಲೆ ಬಿರುಗಾಳಿ ನಿಂತು, ನೀರಿಳಿದು, ದೋಣಿ ಕಿಲಕಿಲನೆ ನಕ್ಕಿತು.

ಭಾರತೀಯರಲ್ಲಿ ಏಕೀಕೃತ ನಾಯಕತ್ವವಿರಲಿಲ್ಲ ; ಸಮರ ಸಂಯೋಜನೆ ಇರಲಿಲ್ಲ ; ಸಂಘಟನಾ ಸಾಮರ್ಥ್ಯವಿರಲಿಲ್ಲ. ಹಲವರು ಹೋರಾಡಿದರು. ಹೋರಾಡಿದವರು ಹುತಾತ್ಮರಾದರು. ಅಲ್ಲಿಗಾಯಿತು.

ಇಂಗ್ಲೆಂಡು, ತನ್ನ ಸಾಮ್ರಾಜ್ಯದ ಗತಿ ಏನಾಗುವುದೋ ಎಂದು ಗಾಬರಿಗೊಂಡಿತ್ತು. ಗಂಡಾಂತರ ಕಳೆದಾಗ ಅದು ಸಮಾಧಾನದ ನಿಟ್ಟುಸಿರನ್ನು ಬಿಟ್ಟಿತು.

ವಿಕ್ಟೋರಿಯಾ ರಾಣಿ ಈಸ್ಟ್ ಇಂಡಿಯಾ ಕಂಪೆನಿಯಿಂದ ಹಿಂದೂಸ್ಥಾನದ ಆಡಳಿತಾಧಿಕಾರವನ್ನು ತಾನೇ ವಶಪಡಿಸಿಕೊಂಡಳು.

ಸಾವಿರದ ಎಂಟುನೂರ ಐವತ್ತೆಂಟರ ಕೊನೆಯಲ್ಲಿ ಆಕೆಯ ಘೋಷಣೆ ಹೊರಟಿತು :

"ಅವರ ಸುಖ ಸಮೃದ್ಧಿಯಲ್ಲಿ ನಮ್ಮ ಬಲವಿರುತ್ತದೆ ; ಅವರ ಸಂತೃಪ್ತಿಯಲ್ಲಿ ನಮ್ಮ ಭದ್ರತೆ ಇರುತ್ತದೆ; ಅವರ ಕೃತಜ್ಞತೆಯೇ ನಮಗೆ ದೊರೆಯುವ ಶ್ರೇಷ್ಠ ಪ್ರತಿಫಲ."

ಉದಾತ್ತ ವಿಚಾರಗಳು !

ಆ ಎಲ್ಲ ಅವಸ್ಥಾಂತರಗಳ ನಡುವೆ ಚಿಕವೀರರಾಜನ ಮೊರೆಯನ್ನು ಯಾರು ಕೇಳಬೇಕು ?

ದಿಲ್ಲೀಶ್ವರ ಬಹಾದ್ದೂರ್ ಷಹನೇ ಆಂಗ್ಲರ ಸೆರೆಯಾಳಾಗಿ ನಿರ್ವಾಸಿತನಾದ ಮೇಲೆ ಕೊಡಗಿನ ಚಿಕವೀರರಾಜ ಯಾವ ಲೆಕ್ಕ ?

ಥಾನ್ಸರಿಯ ವ್ಯವಹರಣೆಯಲ್ಲಿ ಅವನು ಗೆಲ್ಲಲಿಲ್ಲ. ಶಸ್ತ್ರಾಸ್ತ್ರಗಳ ಯುದ್ಧದಲ್ಲಿ ಸೋತಿದ್ದವನು ಕಾನೂನುಗಳ ಕಾಳಗದಲ್ಲೂ ಪರಾಜಿತನಾದ.

ಹಿಂದೂಸ್ಥಾನಕ್ಕೆ ಹೊರಡು—ಎನ್ನಲು ಈಸ್ಟ್ ಇಂಡಿಯಾ ಕಂಪೆನಿ ಈಗಿರಲಿಲ್ಲ.

ಆದರೆ, ತನ್ನ ಜೀವಮಾನದಲ್ಲಿ ಎಷ್ಟೋ ಜನರಿಗೆ ಜಹಗೀರುಗಳನ್ನು ಕೊಟ್ಟಿದ್ದ ಕೊಡಗಿನ ದೊರೆಗೆ, ಬ್ರಿಟಿಷ್ ಸಾಮ್ರಾಜ್ಞಿ ಒಂದೇ ಒಂದು ಜಹಗೀರನ್ನೂ ದಯಪಾಲಿಸಲಿಲ್ಲ.

—ಕೊಡಗಿನ ರಾಜಕುಮಾರಿ ವಿಕ್ಟೋರಿಯಾ ಗೌರಮ್ಮ ಆಂಗ್ಲ ಕ್ಯಾಪ್ಟನೊಬ್ಬನನ್ನು ಮದುವೆಯಾದಳು.

'ಒಳ್ಳೇ ವರನ ನೋಡಿ ಮದುವೆ ಮಾಡಿಸಿ' ಎಂದಿದ್ದಳು ರಾಣಿ ಗೌರಮ್ಮ, ಮರಣಶಯ್ಯೆಯಲ್ಲಿ ಮಲಗಿದ್ದಾಗ.

ಒಳ್ಳೆಯ ವರ ಹೌದೋ ಅಲ್ಲವೋ. ಗೌರಮ್ಮ ಬದುಕಿದ್ದರೆ ಒಪ್ಪುತ್ತಿದ್ದಳೋ ಇಲ್ಲವೋ. ಚಿಕವೀರರಾಜ ಹೆಚ್ಚಿನ ಯೋಚನೆ ಮಾಡದೆ ಮಾವನಾದ. ಆತ ನೀಡಿದ ಭೋಜನಕೂಟಕ್ಕೆ 'ದೇವಮಾತೆ' ಬಂದಿರಲಿಲ್ಲವಾದರೂ ಲಂಡನ್ ನಗರದ ಪ್ರತಿಷ್ಠಿತರು ಸಹಸ್ರಗಟ್ಟಲೆಯಲ್ಲಿ ಆಗಮಿಸಿದರು.

ತನ್ನಲ್ಲಿ ಇನ್ನೂ ಉಳಿದಿದ್ದ ನವರತ್ನಗಳನ್ನೆಲ್ಲ ಚಿಕವೀರರಾಜ ಮಗಳಿಗೆ ಮದುವೆಯ ಉಡುಗೊರೆಯಾಗಿ ಕೊಟ್ಟ.

ಇಷ್ಟಾದ ಮೇಲೆ, ಅನಾರೋಗ್ಯ ಬಾಗಿಲು ತಟ್ಟಿ, 'ನನ್ನನ್ನು ಸತ್ಕರಿಸು' ಎಂದಿತು.

ಮಾತೃಭೂಮಿ ದೂರದಿಂದ ಅವನನ್ನು ಕರೆಯುತ್ತಿತ್ತು.

ಮಕ್ಕಳಲ್ಲಿ ಹಿರಿಯವನಾದ ಸೋಮಶೇಖರ, "ಅಪ್ಪಾಜಿ ಅಕ್ಕನನ್ನು ಕರಕೊಂಡು ವಾಪಸು ಬನ್ನಿ" ಎಂದು ಹಲವಾರು ಸಲ ಬರೆದಿದ್ದ.

ಕಾಶಿಗೆ ಹೋಗಬೇಕು, ತನ್ನ ಮಕ್ಕಳ—ಪರಿವಾರದ ಸುಖ ದುಃಖ ವಿಚಾರಿಸಬೇಕು ಎನಿಸುತ್ತಿತ್ತು ಅರಸನಿಗೆ.

ಆದರೆ ಅಸ್ವಾಸ್ಥ್ಯ, 'ನಿನ್ನನ್ನು ಬಿಡಲೊಲ್ಲೆ' ಎಂದಿತು.

ವೇಗ್‌ಲಿಂಗ್ ಪ್ರಖ್ಯಾತ ವೈದ್ಯರ ಜತೆಗೂಡಿ ಚಿಕವೀರರಾಜನನ್ನು ಪರೀಕ್ಷಿಸಿದ. ಹೊತ್ತು ಹೊತ್ತು ಔಷಧಿ ಸೇವನೆ, ಪಥ್ಯ...

ತನ್ನ ತಂದೆಯೊಂದು ಎಳೆಯ ಮಗು ಎನ್ನುವಂತೆ ಗೌರಮ್ಮ ಆರೈಕೆ ಮಾಡಿದಳು.

ಯಾವ ಯತ್ನವೂ ಫಲಕಾರಿಯಾಗದೆ, ಕೊನೆಯ ಘಳಿಗೆ ಸಮೀಪಿಸಿತು. ವೇಗ್‌ಲಿಂಗ್ ದುಃಖಿತನಾಗಿ, "ತಮ್ಮನ್ನು ಇಲ್ಲಿಗೆ ಕರೆಸಿ ತಪ್ಪು ಮಾಡಿದೆ. ನಾನು ಒಂದೆಣಿಸಿದರೆ ದೈವ ಬೇರೆಯೇ ಬಗೆಯಿತು" ಎಂದ.

ಇಂಥ ಮಾತು ಆಡಬಾರದು, ಎನ್ನುವಂತೆ ಅರಸ ಕೈಸನ್ನೆ ಮಾಡಿದ.

ಅಳಿಯ ಕ್ಯಾಪ್ಟನ್, ಒಬ್ಬ ಪಾದ್ರಿಯನ್ನು ಕರೆತಂದ :

"ಮಾವ, ಸಾಯುವುದಕ್ಕೆ ಮುಂಚೆ ಇದಿಷ್ಟು ಮಾಡಿಸಿಕೋತೀರಾ ?"

ಚಿಕವೀರರಾಜ ಪಾದ್ರಿಯನ್ನು ದಿಟ್ಟಿಸಿ ನೋಡಿ, ಶಾಂತವಾಗಿ ಅಂದ :

"ಕ್ಷಮಿಸಿ, ಒಲ್ಲೆ."

ಗೌರಮ್ಮನ ಕಡೆ ಹೊರಳಿ ಅರಸ ಅಂದ :

"ನಿನ್ನ ನಾ ಚೆನ್ನಾಗಿ ನೋಡ್ಕೊಳ್ಳಿಲ್ಲ."

"ಹಾಗನ್ನಬೇಡಿ, ಅಪ್ಪಾಜಿ."

"ಸೋಮಶೇಖರನನ್ನು ಕರೆಸಿಕೋ, ಕಂದ."

"ಕರೆಸಿಕೋತೀನಿ, ಅಪ್ಪಾಜಿ."

ಕೆಲ ನಿಮಿಷಗಳು ಮೌನವಾಗಿ ಕಳೆದುವು.

"ಗಂಗೋದಕ ತಾ..."

ಎಂಟು ವರ್ಷಗಳ ಹಿಂದೆ ಕಾಶಿಯಿಂದ ತಂದಿದ್ದ ಗಂಗಾಜಲ ಆ ಘಳಿಗೆಗಾಗಿ ಕಾದಿತ್ತು.

ಪ್ರಯಾಸದಿಂದ ಒಂದು ಗುಟುಕನ್ನು ಸ್ವೀಕರಿಸಿ ಚಿಕವೀರರಾಜ ಕೈಗಳನ್ನು ಮೇಲಕ್ಕೆ ಎತ್ತಲೆತ್ನಿಸಿದ.

"ಮಹಾ-ದೇವ...ಮಹಾ—"

ಕೈಗಳು ಕುಸಿದುಬಿದ್ದುವು.

ಅರುವತ್ತು ತುಂಬಿದ್ದ ಅರಸ ಚಿರಶಾಂತಿಯಲ್ಲಿ ಮಲಗಿದ...

...ಚಿಕವೀರರಾಜನ ಶವವನ್ನು ಕೆನ್ಸಾಲ್ ಗ್ರೀನ್ ಸ್ಮಶಾನದಲ್ಲಿ ದಫನ್ ಮಾಡಿದರು.

* * *

ಮಾರನೆಯ ವರ್ಷ ಸೋಮಶೇಖರ ರಾಜೇಂದ್ರಒಡೆಯ ಕಾಶಿಯಿಂದ ಲಂಡನ್ನಿಗೆ ಬಂದು ತಲಪಿದ.

ಗೌರಮ್ಮನನ್ನು ಆತ ಕೇಳಿದ:

"ಅಕ್ಕಾ, ನೀನು ಬರುವುದಿಲ್ಲೇನಕ್ಕ ?"

ಗೌರಮ್ಮ ಅಂದಳು:

"ನೋಡಿದಿಯಲ್ಲ, ಸೋಮು ? ಇದು ನನ್ನ ಗಂಡನ ಮನೆ. ನಾ ಇಲ್ಲೇ ಇರಬೇಕಾದ್ದು ಧರ್ಮ, ಅಲ್ಲವಾ ?"

...ಸೋಮಶೇಖರ, ತಂದೆಯ ಕಿರೀಟ, ಖಡ್ಗಗಳೊಡನೆ ಕಾಶಿಗೆ ಮರಳಿದ. ಅಲ್ಲಿ ರಾಣಿ ಗೌರಮ್ಮನ ಸಮಾಧಿಯ ಪಕ್ಕದಲ್ಲಿ ತಂದೆಗೊಂದು ಸ್ಮಾರಕವನ್ನು ನಿರ್ಮಿಸಿದ.

## ೭೦

ಅಪರಂಪಾರಸ್ವಾಮಿ ತಪ್ಪಿಸಿಕೊಂಡು ಹೋಗಲು ಯತ್ನಿಸಿದುದಕ್ಕೆ ಮುಂಚೆ ಸೆರೆ ಮನೆಯ ಅಧಿಕಾರಿ ಅವನೊಡನೆ ಆಗಾಗ್ಗೆ ಸಂಭಾಷಣೆಗೆ ಬರುತ್ತಿದ್ದನಷ್ಟೆ. ಮುಂದೆ ಕುರುಡ ಸ್ವಾಮಿಯನ್ನು ಒಂಟಿ ಕೊಠಡಿಯಲ್ಲಿ ಇರಿಸಿದ ಬಳಿಕ, ಆತ ಆ ಕಡೆಗೆ ಹಾಯಲಿಲ್ಲ.

ಡಾಕ್ಟರ್ ಕ್ಯಾಂಪ್‌ಬೆಲ್‌ಗೂ ಅವನು ಸೂಚನೆಕೊಟ್ಟ:

"ಅವನ ಜತೆ ಸಲಿಗೆಯಿಂದಿರಬೇಡಿ, ಡಾಕ್ಟರ್. ಕೆಟ್ಟ ಸಹವಾಸ. ಈ ದೇಶೀಯರು ಯಾವ ಘಳಿಗೆಯಲ್ಲಿ ಏನು ಮಾಡುತಾರೋ ಹೇಳುವುದು ಕಷ್ಟ."

ಕ್ಯಾಂಪ್‌ಬೆಲ್ ನಕ್ಕು ನುಡಿದ:

"ಕುರುಡ ಇನ್ನೇನು ತಾನೆ ಮಾಡಾನು ? ಆದರೂ ಥ್ಯಾಂಕ್ಸ್. ಹುಷಾರಾಗಿರತೀನಿ."

ಕ್ಯಾಂಪ್‌ಬೆಲ್ ವಾರಕ್ಕೊಮ್ಮೆಯಾದರೂ ಸೆರೆಮನೆಗೆ ಭೇಟಿ ನೀಡುವುದಿತ್ತು. ಆಗ ಅಪರಂಪಾರನ ಬಳಿಗೆ ಅವನು ತಪ್ಪದೆ ಬರುತ್ತಿದ್ದ.

ಬೂಟುಗಳ ಸಪ್ಪಳದಿಂದಲೇ, ಬರುತ್ತಿರುವಾತ ಕ್ಯಾಂಪ್‌ಬೆಲ್ ಎಂದು ಅಪರಂಪಾರ ನಿಗೆ ತಿಳಿಯುತ್ತಿತ್ತು. ಆತ ಹತ್ತಿರ ಬಂದಂತೆ ಇವನ ಮುಖ ರಂಗೇರುತ್ತಿತ್ತು.

ಆತನ ಧ್ವನಿ ಕೇಳಲು ಇವನ ಕಿವಿಗಳು ನಿಮಿರುತ್ತಿದ್ದುವು:

"ಶರಣು, ಸ್ವಾಮೀಜಿ."

"ಶರಣು, ವೈದ್ಯರೆ."

"ಏನು ಮಾಡುತಾ ಇದೀರಿ ?"

"ನಿಮ್ಮನ್ನ ನೋಡುತಾ ಇದೇನೆ."

ಕ್ಯಾಂಪ್‌ಬೆಲ್‌ಗೆ ಪಿಚ್ಚೆನಿಸುತ್ತಿತ್ತು.

"ಆರೋಗ್ಯವಾಗಿದೀರಾ ?"

"ಹ್ಞ."

"ನಿಮಗೆ ಏನಾದರೂ ಬೇಕೆ ?"

"ಕೊಡುತೀರೇನು ?"

"ಏನು ಬೇಕು ?"

"ನನಗೆ ಸ್ವಾತಂತ್ರ್ಯ—ನನ್ನ ದೇಶಕ್ಕೆ ಸ್ವಾತಂತ್ರ್ಯ."

ಕ್ಯಾಂಪ್‌ಬೆಲ್ ನಿರುತ್ತರನಾಗುತ್ತಿದ್ದ.

"ನೋಡಿದಿರಾ ? ಅದನ್ನು ಕೊಡೋದು ನಿಮ್ಮ ಕೈಲಿಲ್ಲ. ಕೊಡೋದು ಯಾರ ಕೈಲೂ ಇಲ್ಲ. ಕಸಕೊಂಡರೇನೇ ಅದು ಸಿಗೋದು."

...ಅಪರಂಪಾರನ ಪಾಲಿಗೆ, ಪಂಜರದೊಳಗಿನ ಆ ಬದುಕು ಏಕಪ್ರಕಾರವಾಗಿತ್ತು. ಒಂಟಿ ಕೊಠಡಿಯು ಪ್ರತ್ಯೇಕ ಕಟ್ಟಡವಾಗಿದ್ದುದರಿಂದ ಹಗಲು ಸ್ವಲ್ಪ ಹೊತ್ತು ಬಾಗಿಲಿನ ಸರಳುಗಳೆಡೆಯಿಂದ ಸೂರ್ಯ ರಶ್ಮಿಗಳು ಒಳಕ್ಕೆ ಬರುತ್ತಿದ್ದುವು. ತಿಂಗಳಲ್ಲಿ ಕೆಲ ದಿನ ಚಂದ್ರ ಕಿರಣಗಳೂ ತೂರುತ್ತಿದ್ದುವು. ಮಳೆಗಾಲದಲ್ಲಿ ಇರಿಚಲು ಬೀಸಿ ನೀರು ಕೊಠಡಿ ಯೊಳಗೆ ಬರುತ್ತಿತ್ತು. ಅಂತಹ ರಾತ್ರೆ ಮಲಗಲು ಸ್ಥಳವಿರುತ್ತಿರಲಿಲ್ಲ. ಶಿವಧ್ಯಾನ ಮಾಡುತ್ತ ಅಪರಂಪಾರ ಕುಳಿತೇ ಇರುತ್ತಿದ್ದ. 'ಇದು ಶಿವರಾತ್ರಿ ಜಾಗರ' ಎನ್ನುತ್ತಿದ್ದ. ಅಡ್ಡಮಳೆ ಬಂದು ನೀರು ಜೋರಾಗಿ ಒಳಕ್ಕೆ ಸೀರಿದರೆ, ಮೈಯೊಡ್ಡಿ, 'ಕಾವೇರಿ ಸ್ನಾನ' 'ಗಂಗಾ ಸ್ನಾನ' ಎನ್ನುತ್ತಿದ್ದ.

ಕ್ಯಾಂಪ್‌ಬೆಲ್ ಬಂದಾಗ ಆಗೊಮ್ಮೆ ಈಗೊಮ್ಮೆ ಆತ ವಿಚಾರಿಸುತ್ತಿದ್ದ :

"ಇವತ್ತು ಇಂಥ ವಾರ, ಇಂಥ ಮಾಸ, ಇಂಥ ಸಂವತ್ಸರ ಅಂದರೆ ನಿಮ್ಮ ಲೆಕ್ಕದಲ್ಲಿ ಇಂಥ ದಿನ, ಇಷ್ಟನೇ ತಿಂಗಳು, ಇಷ್ಟನೇ ವರ್ಷ, ಹೌದಾ ?"

ಒಂದು ಸಲವೂ ಆತನ ಎಣಿಕೆ ತಪ್ಪಾಗಿರುತ್ತಿರಲಿಲ್ಲ.

ಮನಸ್ಸು ಮುದುಡಿಕೊಂಡ ವೇಳೆಯಲ್ಲಿ, 'ಯೋಚನೆಯ ಪಿಶಾಚಿಗಳೇ ಇನ್ನು ತೊಲಗಿ' ಎಂದು ಗದರಿ ನುಡಿದು, ಉಚ್ಚ ಕಂಠದಲ್ಲಿ ಅಪರಂಪಾರ ಶಿವಶರಣ–ಶರಣೆಯರ ವಚನ ಗಳನ್ನು ಅನ್ನುತ್ತಿದ್ದ. ತುಸು ದೂರದಲ್ಲಿದ್ದ ಕೊಠಡಿ ಸಾಲುಗಳಿಗೆ ಆ ಧ್ವನಿ ಕೇಳಿಸುತ್ತಿತ್ತು. ಕೈದಿಗಳು ತನ್ಮಯರಾಗಿ ಕಿವಿಗೊಡುತ್ತಿದ್ದರು. ಎಷ್ಟೋ ವೇಳೆ ಈತ ಹಾಡತೊಡಗುವುದನ್ನೇ ಆತುರದಿಂದ ಅವರು ಇದಿರು ನೋಡುತ್ತಿದ್ದರು.

ಏಕಾಂತವೂ ಮೌನವೂ ದುಸ್ಸಹವಾದಾಗ ಅಪರಂಪಾರ ಒಮ್ಮೊಮ್ಮೆ ಗಟ್ಟಿಯಾಗಿ ಕೂಗಿ ನುಡಿಯುತ್ತಿದ್ದ :

"ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ!" ಆಗ ಕಾವಲುಗಾರರು "ಅಯ್ನೋರಿಗೆ ಉಚ್ಚಿಡಿದಂಗೈತಪೋ" ಎಂದು ಪರಿಹಾಸ್ಯ ಮಾಡುತ್ತಿದ್ದರು.

ಹೀಗೆ ಎಷ್ಟೊಂದು ವರ್ಷಗಳು ಕಳೆದುವು!

...ದೇಶದಾದ್ಯಂತ ಬಂಡಾಯದ ಬರಸಿಡಿಲು ಎರಗಿದಾಗ, ಕಾವಲುಗಾರರ ಉತ್ಸು ಕತೆಯ ಗಾಬರಿಯ ಸಂವಾದಗಳಿಂದ ಗಂಭೀರವಾದುದೇನೋ ಹೊರಗೆ ನಡೆಯುತ್ತಿದೆ ಎಂದು ಅಪರಂಪಾರ ಊಹಿಸಿದ. ಅವನ ಚೇತನ ಕೆರಳಿತು. ಮನಸ್ಸು ಅಶಾಂತವಾಯಿತು. ಆತ ನಿದ್ದೆಗೆಟ್ಟು, ಇದ್ದಕ್ಕಿದ್ದಂತೆ ಸೆರೆಮನೆಯ ಗೋಡೆಗಳು ಕುಸಿಯಬಹುದು, ಪಾರಾಗಲು ತಾನು ಸಿದ್ಧನಿರಬೇಕು——ಎಂದುಕೊಂಡ.

ಆ ವಾರ ಕ್ಯಾಂಪ್‌ಬೆಲ್ ಬರಲಿಲ್ಲ. ಮತ್ತೊಂದು ವಾರ ಬಂದಾಗ, ಅಪರಂಪಾರ ಪಿಸು ದನಿಯಲ್ಲಿ ಕೇಳಿದ :

"ವೈದ್ಯರೆ, ಹೊರಗೆ ಏನಾಗತಿದೆ ?"

ನಿರುತ್ಸಾಹದ ಧ್ವನಿಯಲ್ಲಿ ಕ್ಯಾಂಪ್‌ಬೆಲ್ ಎಂದ :

"ಏನೂ ಇಲ್ಲ, ಸ್ವಾಮಿಜಿ. ಎಲ್ಲೋ ಉತ್ತರದಲ್ಲಿ ಗದ್ದಲ. ನಿಮ್ಮ ರಾಜ್ಯದಲ್ಲಾಗಲೀ ಇಲ್ಲಾಗಲೀ ಗಲಾಟೆಯಿಲ್ಲ."

ಸಿಟ್ಟಿನಿಂದ ಅಪರಂಪಾರನ ಮುಖ ಗಂಟಿಕ್ಕಿತು. ಆ ದಿನ ಆತ ಮತ್ತೇನನ್ನೂ ಮಾತನಾಡಲಿಲ್ಲ.

...ಒಂದೆರಡು ವರ್ಷಗಳ ಅನಂತರ ಕ್ಯಾಂಪ್‌ಬೆಲ್ ರಜದ ಮೇಲೆ ಇಂಗ್ಲೆಂಡಿಗೆ ಹೊರಟ. ಆತನಿಲ್ಲದ ಅವಧಿಯಲ್ಲಿ ವೈದ್ಯಕೀಯ ಅಧಿಕಾರಿಯಾಗಿದ್ದವನು ಸೆರೆಮನೆಯ ಕಡೆಗೆ ಸಾಧಾರಣವಾಗಿ ಬರುತ್ತಿರಲಿಲ್ಲ. ಬಂದರೂ ಅಪರಂಪಾರನನ್ನು ಮಾತನಾಡಿಸುತ್ತಿರಲಿಲ್ಲ.

ಅಪರಂಪಾರನಿಗೆ ಇದು ವನವಾಸದೊಳಗಿನ ಅಜ್ಞಾತವಾಸವಾಯಿತು.

ಒಂದು ವರ್ಷ ಬಿಟ್ಟು ಹಿಂತಿರುಗಿದ ಕ್ಯಾಂಪ್‌ಬೆಲ್ ತನ್ನ ತಾಯ್ನಾಡಿನಿಂದ ಅಪರಂಪಾರನಿಗಾಗಿ ವಾರ್ತೆಯನ್ನು ತಂದ. ಅದು ಚಿಕವೀರರಾಜನ ವಿಲಾಯತಿ ವಾಸ್ತವ್ಯವನ್ನು ಕುರಿತದ್ದು.

"ನನ್ನ ದೇಶದಲ್ಲಿ ನಿಮ್ಮ ರಾಜನನ್ನು ಎಲ್ಲರೂ ಹೊಗಳುವವರೇ."

ಕ್ಯಾಂಪ್‌ಬೆಲ್ ನೀಡಿದ ವಿವರಗಳೆಲ್ಲ ಕಹಿಯಾಗಿದ್ದುವು. ಮುಖದ ಮೇಲೆ ಯಾವ ಭಾವಗಳನ್ನೂ ಪ್ರಕಟಿಸದೆ, ವೈದ್ಯನಾಡಿದುದನ್ನು ಅಪರಂಪಾರ ಆಲಿಸಿದ.

"ಆತ ಅಸ್ವಸ್ಥನಾಗಿ ತೀರಿಕೊಂಡ. ನಾನು ವಾಪಸು ಬಂದ ಜಹಜಿನಲ್ಲೇ ಆತನ ಕಿರೀಟವನ್ನೂ ಖಡ್ಗವನ್ನೂ ತಂದರು."

ತನ್ನ ಮೌನವನ್ನು ಮುರಿದು, ಒಮ್ಮೆಲೆ ಅಪರಂಪಾರನೆಂದ :

"ವೈದ್ಯರೆ, ಬಹಳ ಹೇಳಿದಿರಿ. ಸಾಕುಮಾಡಿ !"

ಕ್ಯಾಂಪ್‌ಬೆಲ್‌ಗೆ ಆಶ್ಚರ್ಯವಾಯಿತು. ಬಳಿಕ, 'ಇದು ನೊಂದ ಜೀವ. ಒಳಗೆ ಒದ್ದಾಡುತಿದೆ. ಈತ ಮಾತನಾಡಲೊಲ್ಲ' ಎಂದುಕೊಳ್ಳುತ್ತ ಆತ ತನ್ನ ದಾರಿ ಹಿಡಿದ.

ಅದು ಅತೀವವಾದ ಮಾನಸಿಕ ಸಂಕಟ. ಗತಕಾಲದ ಅಸಂಖ್ಯ ಘಟನೆಗಳು, ಅಪರಂಪಾರನನ್ನು ಮುಸುಕಿದ್ದ ಗಾಢಾಂಧಕಾರದಲ್ಲಿ ವಿಕೃತ ಸ್ವರಗಳನ್ನು ಹೊರಡಿಸುತ್ತ ಹುಚ್ಚೆದ್ದು ಕುಣಿದುವು.

"ನಾ ತಾಳಲಾರೆ, ತಾಳಲಾರೆ" ಎಂದು ಅವನ ಹೃದಯ ಗೋಗರೆಯಿತು.

ಒಂದು ವಚನ ಅಪರಂಪಾರನ ನಾಲಗೆಯಿಂದ ಹೊರ ಹೊಮ್ಮಿತು :

"ಅರಿಯಲಿಲ್ಲದ ಅರಿವು, ಮರೆಯಲಿಲ್ಲದ ಮರಹು
ನೋಡಲಿಲ್ಲದ ಬೆರಗು, ನಿಂದುದು ಕೂಡಲ ಚೆನ್ನಸಂಗಯ್ಯ ಲಿಂಗೈಕ್ಯಂಗೆ
ಬೆಳಗು ಕತ್ತಲೆಯ ನುಂಗಿ ಒಳಗೆ ನಾನೊಬ್ಬನೇ ಆದೆ.
ಕಾಂಬ ಕತ್ತಲೆಯ ಕಳೆದುಳಿದು ನಿಮಗಾನು ಗುರಿಯಾದೆ."

## ೭೧

ಲೀಹಾರ್ಡಿಯ ಬದಲು ಕೊಡಗಿಗೆ ಹೊಸ ಆಡಳಿತಗಾರ ಬಂದ.

ಪೊನ್ನಪ್ಪ ವೃದ್ಧಾಪ್ಯದಿಂದ ಸತ್ತ; ಅಷ್ಟೊಂದು ವೃದ್ಧನಲ್ಲದ ಬೋಪಣ್ಣನೂ ಅವನ ದಾರಿ ಹಿಡಿದ.

ವೈಸ್‌ರಾಯ್‌ಯ ಆದೇಶ ಗವರ್ನರರ ಮೂಲಕ ಆಡಳಿತಗಾರನನ್ನು ತಲಪಿತು :

"ಹೊಸ ದಿವಾನರನ್ನು ನೇಮಿಸಬೇಡ. ಇನ್ನು ಅಂಥ ಹುದ್ದೆಗಳ ಅಗತ್ಯವಿಲ್ಲ."

ವ್ಯವಸಾಯ ತಜ್ಞರು ಕೊಡಗಿಗೆ ಭೇಟಿ ಕೊಟ್ಟರು. ಕಾಫಿತೋಟಗಳ ಸ್ಥಾಪನೆಗೆ ಇದು ಯೋಗ್ಯ ತಾಣ ಎಂದರು. ಆದರೆ ತೋಟಗಳಲ್ಲಿ ದುಡಿಯಲು ಆಳುಗಳು ಬೇಕು.

ಕೊಡಗಿನ ಸರಕಾರ ಗುಲಾಮ ಪದ್ಧತಿಯನ್ನು ತೊಡೆದು ಹಾಕಿತು. 'ಸ್ವತಂತ್ರ'ರಾದ ಗುಲಾಮರು ಆಂಗ್ಲ ದೊರೆಗಳ ಕಾಫಿ ತೋಟಗಳಲ್ಲಿ ದುಡಿಯಲು ಸಿದ್ಧವಾದರು. ಘಟ್ಟದ ಕೆಳಗಿನ ಜನ ತಾವೂ ಬರುವೆವೆಂದರು.

...ಕರ್ನಲ್ ಕಬ್ಬನ್ ಹದಿನಾಲ್ಕು ವರ್ಷಗಳ ಕಾಲ ಮೈಸೂರು ರಾಜ್ಯದ ಮುಖ್ಯ ಆಡಳಿತಗಾರನಾಗಿ ಭದ್ರಮುಷ್ಟಿಯಿಂದ ಆಳಿ. ಲಾರ್ಡ್ ಬಿರುದಾಂಕಿತನಾಗಿ, ಸಾವಿರದ ಎಂಟುನೂರ ಅರುವತ್ತೊಂದರಲ್ಲಿ ಬೆಂಗಳೂರಿನಿಂದ ತೆರಳಿದ.

ಬಳಿಕ ಬಂದವನು ಬೌರಿಂಗ್. ಅವನು ಅಧಿಕಾರ ಸ್ವೀಕರಿಸಿದ ಐದನೆಯ ವರ್ಷ ಮುಮ್ಮಡಿ ಕೃಷ್ಣರಾಜ ಒಡೆಯನಿಗೆ ಪುನಃ ರಾಜ್ಯದ ಆಡಳಿತವನ್ನು ಒಪ್ಪಿಸಬೇಕೆಂದು ಇಂಗ್ಲಿಷ್ ಸರಕಾರ ತೀರ್ಮಾನಿಸಿತು.

ಯುವಕ ಮಹಾರಾಜನನ್ನು ರಟ್ಟೆ ಹಿಡಿದು ಕೆಳಕ್ಕೆ ಇಳಿಸಿದ್ದರು. ಮೂವತ್ತಾರು ವರುಷಗಳ ಬಳಿಕ ಎಪ್ಪತ್ತು ದಾಟಿದ ಮುದುಕನನ್ನು ಕೈಹಿಡಿದು ಮೇಲಕ್ಕೊಯ್ದು ಕುಳ್ಳಿರಿಸಿದರು.

ಯದುವಂಶದ ಅರಸನಿಗೆ ಮತ್ತೆ ರಾಜ್ಯಪ್ರಾಪ್ತಿಯಾಯಿತೆಂದು ಪ್ರಜೆಗಳು ಸಂತೋಷ ಪಟ್ಟರು.

"ಶ್ರೀಕೃಷ್ಣಭೂಪ—ಮನೆಗೆಲ್ಲ ದೀಪ" ಎಂದು ಕೊಂಡಾಡಿದರು.

ರಾಜನ ಪುನಃ ಪಟ್ಟಾಭಿಷೇಕ ವಿಜೃಂಭಣೆಯಿಂದ ನಡೆಯಿತು. ರಾಜ್ಯದ ಎಲ್ಲೆಡೆಗಳಲ್ಲೂ ಸಂತೋಷ ಸಂಭ್ರಮ.

ಆ ನಿಮಿತ್ತ, ಬೆಟ್ಟದ ಮೇಲೆ ಚಾಮುಂಡೇಶ್ವರಿಗೂ ಶ್ರೀರಂಗಪಟ್ಟಣದಲ್ಲಿ ರಂಗನಾಥನಿಗೂ ನಂಜನಗೂಡಿನಲ್ಲಿ ನಂಜುಂಡೇಶ್ವರನಿಗೂ ವಿಶೇಷ ಪೂಜೆಗಳಾದುವು.

ಆ ಸಂದರ್ಭದಲ್ಲಿ ರಾಜ್ಯದ ವಿವಿಧ ಸೆರೆಮನೆಗಳಿಂದ, ಅಪಾಯಕಾರಿಗಳಲ್ಲವೆಂದು ಆಂಗ್ಲ ಅಧಿಕಾರಿಗಳು ಪರಿಗಣಿಸಿದ ಅನೇಕ ಕೈದಿಗಳನ್ನು ಬಿಡುಗಡೆ ಮಾಡಲಾಯಿತು.

ಶ್ರೀರಂಗಪಟ್ಟಣದ ಸೆರೆಮನೆಯಿಂದ ಹೊರಬಂದವರಲ್ಲಿ, ನಡುಬಾಗಿದ ಮೂಳೆಯ ಹಂದರವೊಂದಿತ್ತು.

ಆ ಮನುಷ್ಯ ಕಾವಲುಗಾರರನ್ನು ಕೇಳಿದ :

"ಇದೇನು ಜಾತ್ರೆ ? ಯಾಕೆ ಬಿಟ್ಟಿರಿ ನಮ್ಮನ್ನು ? ಒಳಗೇ ಹಾಯಾಗಿತ್ತಲ್ಲ !"

"ಹೊರಟ್ಹೋಗು, ಮಹಾರಾಜರಿಗೆ ಇವತ್ತು ಪಟ್ಟಾಭಿಷೇಕ."

ಆತ ಪ್ರಶ್ನಿಸಿದ :

"ಯಾವ ಮಹಾರಾಜರಿಗಪ್ಪ ?"

"ಕೃಷ್ಣರಾಜ ಒಡೆಯರಿಗೆ ! ಅರಸನ ಹೆಸರೂ ತಿಳೀದಾ ನಿಂಗೆ ?"

ಆ ವ್ಯಕ್ತಿಯ ಹುಬ್ಬುಗಳು ಮೇಲೇರಿದುವು. ಗಂಟು ಕಟ್ಟಲೆತ್ನಿಸಿ ಮತ್ತೆ ಸಡಿಲಗೊಂಡುವು.

ಆತ ನಿಧಾನವಾಗಿ ಅಂದ :

"ಒಬ್ಬ ರಾಜನಿಗಾದರೂ ಪಟ್ಟ ಸಿಗ್ತಲ್ಲ! ಮೈಸೂರು ರಾಜ್ಯವಾದರೂ ಸ್ವತಂತ್ರ ವಾಯ್ತಲ್ಲ! ಸಂತೋಷವಪ್ಪ!"

ಪ್ರಯಾಸಪಡುತ್ತ ಆತ ಮುಂದೆ ನಡೆದ.

'ನಂಜರಾಜಪಟ್ಟಣಕ್ಕೆ ಹೋಗಬೇಕು. ಯಾವುದು ದಾರಿ? ಸ್ವಾಮಿಗಳು ಹೇಗಿದಾರೋ! ಯಾರನ್ನು ಕೇಳಿದರೆ ತಿಳಿದಾತು?'

—ಎಂದು ತನ್ನಷ್ಟಕ್ಕೇ ಅವನು ಗೊಣಗಿದ.

ಮುಂದೆ ಐದು ದಿನ ಕಾವೇರಿ ದಂಡೆಯಲ್ಲಿ ಜನ ಅವನನ್ನು ಕಂಡರು.

ಪ್ರಯಾಣಕ್ಕೆಂದು ಆತ ಒಂದು ಊರುಗೋಲನ್ನೂ ದೊರಕಿಸಿಕೊಂಡಿದ್ದ. ಆದರೆ, ದಿನ ದಿಂದ ದಿನಕ್ಕೆ ಅವನು ಶಕ್ತಿಗುಂದುತ್ತಲಿದ್ದುದು ಸ್ಪಷ್ಟವಾಗಿತ್ತು.

ಆರನೆಯ ದಿನ, ಊರುಗೋಲು ಮಾತ್ರ ದಂಡೆಯ ಮೇಲಿತ್ತು. ವ್ಯಕ್ತಿ ಇರಲಿಲ್ಲ.

## ೭೨

ಕೆಲ ತಿಂಗಳ ಅನಂತರದ ಮಾತು.

ಒಂದು ರಾತ್ರೆ ಅಪರಂಪಾರ ನಿದ್ದೆಯಲ್ಲಿ ಚಿಟ್ಟನೆ ಚೀರಿಕೊಂಡ. ಎಚ್ಚರವಾಯಿತು. ಗಡಬಡಿಸಿ ಎದ್ದು ಕುಳಿತ.

ಕೆಟ್ಟ ಕನಸು.

[ಕೆಟ್ಟದೆ? ಕೆಟ್ಟದೆ?]

ಕನಸಿನಲ್ಲಿ ಅತಿ ವಿಸ್ತಾರದ ಎರಡು ಅಂಗೈಗಳು ಒಂದಕ್ಕೊಂದು ಜೋಡಿಯಾಗಿ ಅವನ ಮುಂದೆ ಕಾಣಿಸಿಕೊಂಡಿದ್ದುವು. ಕೋಮಲ ಸುಸ್ಪಷ್ಟವಾದ ರೇಖೆಗಳು. ಅಂಗೈಗಳ ಹೊರತು ಬೇರೆ ಅವಯುವಗಳಿರಲಿಲ್ಲ. ಆದರೆ ಹೆಣ್ಣು ಧ್ವನಿಯೊಂದು ಗಹಗಹಿಸಿ ನಗುತ್ತಿತ್ತು. ಅಂಗೈಗಳು ಕ್ರಮೇಣ ಹಿಂದಕ್ಕೆ ಸರಿಯತೊಡಗಿ, ಕಿರಿದಾಗಿ–ಕಿರಿದಾಗಿ, ಚುಕ್ಕೆಯಾಗಿ ಶೂನ್ಯ ದಲ್ಲಿ ಲೀನವಾಗಿಬಿಟ್ಟುವು.

ಕಣ್ಣಿಲ್ಲದವನು ತಾನು. ಅಂಗೈಗಳನ್ನು ಕಾಣುವುದೆಂದರೇನು? ಹೇಗೆ ಕಂಡೆ?

ಕನಸು, ನಿಜ. ಆದರೆ ಅದರ ಅರ್ಥ?

ಅಥವಾ ಜಾಗೃತಾವಸ್ಥೆಯಲ್ಲೇ ಕಂಡೆನೊ? ಅಂಗೈಗಳು ತನ್ನ ಮುಂದೆಯೇ ಇವೆಯೊ ಏನೊ?

ಆ ನಗೆ? ಎದುರಲ್ಲಿ ಯಾರೂ ಇಲ್ಲವಷ್ಟೆ? ತನ್ನನ್ನು ಅಣಕಿಸುತ್ತಿಲ್ಲವಷ್ಟೆ?

ಇರಲಾರದು. ನೆನಪಾಗುತ್ತಿದೆ. ಆ ಅಂಗೈಗಳನ್ನು ತಾನು ಹಿಂದೆ ಕಂಡಿದ್ದೆ—ಕಂಡಿದ್ದೆ.

ಆದರೆ, ಕನಸಿನಲ್ಲಿ ಯಾಕೀಗ? ಯಾಕೆ?

...ಉತ್ತರವಿರಲಿಲ್ಲ. ಅಪರಂಪಾರ ಗೋಡೆಗೊರಗಿ ಕುಳಿತು 'ಶಿವ ಶಿವ ಶಿವ' ಎನ್ನುತ್ತ ಮನಸಿಗೆ ನೆಮ್ಮದಿ ತಂದುಕೊಳ್ಳಲು, ಇರುಳನ್ನು ಕಳೆಯಲು, ಯತ್ನಿಸಿದ.

* * *

ಅಪರಂಪಾರ ಕನಸು ಕಂಡ ಘಳಿಗೆಯಲ್ಲಿ, ದೂರದ ಅಪ್ಪಂಗಳದಲ್ಲಿ, ರಾಜಮ್ಮಾಜಿಗೆ ಪ್ರಾಣೋತ್ಕ್ರಮಣವಾಗಿತ್ತು.

ನಡುವಯಸ್ಸು ದಾಟಿದ್ದ ನಿರ್ಭಾಗ್ಯೆ. ಕೂದಲೆಲ್ಲ ಬಿಳುಪು. ಆದರೆ ಮುಖದ ಮೇಲೆ ಒಂದೂ ಸುಕ್ಕು ಇರಲಿಲ್ಲ.

ಶೀತವೆ ? ನೆಗಡಿಯೆ ? ಜ್ವರವೆ ?

—ಒಮ್ಮೆಯೂ ಕಾಹಿಲೆ ಮಲಗಿದವಳಲ್ಲ ಆಕೆ.

ಈ ಕೆಲ ವರ್ಷಗಳಲ್ಲಿ ಸದಾ ಹಾಸಿಗೆ ಹಿಡಿದಿರುತ್ತಿದ್ದ ದೇವಮ್ಮಾಜಿ ಅನ್ನುವುದಿತ್ತು :

"ನೀನು ಕಲ್ಲುಗುಂಡು ಕಣಮ್ಮ."

ಆ ಕಲ್ಲುಗುಂಡು ಒಮ್ಮಿಂದೊಮ್ಮೆಲೆ ಸಿಡಿದಿತ್ತು.

ಇದ್ದ ಕೆಲ ಆಳು ಕಾಳುಗಳೂ ಗುಲಾಮ ಪದ್ಧತಿ ನಿರ್ನಾಮವಾದ ಮೇಲೆ ಅಪ್ಪಂಗಳವನ್ನು ಬಿಟ್ಟು, ಕಾಫಿ ತೋಟಗಳಲ್ಲಿ ದುಡಿಯಲೆಂದು ಹೊರಟುಹೋಗಿದ್ದರು. ಒಬ್ಬನೇ ಒಬ್ಬ ವೃದ್ಧ, 'ನಾನು ಉಟ್ಟಿದ್ದೂ ಇಲ್ಲೇ, ಸಾಯೋದೂ ಇಲ್ಲೇ' ಎಂದು ಹಿಂದೆ ಉಳಿದಿದ್ದ.

ಹೀಗೆ, ಹೆಚ್ಚಿನ ಹೊರೆಯಾದ ಎಲ್ಲ ಕೆಲಸಗಳನ್ನೂ ರಾಜಮ್ಮಾಜಿ ಮಾಡುತ್ತಿದ್ದಳು. ತೊಳೆದು ಸಾರಿಸಿ ಮಲಗುವ ವೇಳೆಗೆ ನಡು ಇರುಳಾಗುತ್ತಿತ್ತು.

ಆ ರಾತ್ರೆ ಎಲ್ಲರೂ ಉಂಡರು. ಎಲ್ಲರೂ ಅಂದರೆ—ಚನ್ನಬಸಪ್ಪ, ದೇವಮ್ಮಾಜಿ, ಅವರ ಯುವಕ ಮಗ [ಮಗಳನ್ನಾಗಲೇ ಮದುವೆ ಮಾಡಿಕೊಟ್ಟಿತ್ತು]—ವೃದ್ಧ ಆಳು ಮತ್ತು ರಾಜಮ್ಮಾಜಿ.

"ಹೊಲದ ಕಡೆ ಹೋಗಿ ಬರತೀನಿ" ಎಂದು ಮಗ ಹೊರಬಿದ್ದ.

ಹೊಲ ಕಾಯುವುದೆಲ್ಲ ಸುಳ್ಳು ; ಯಾವುದೋ ದುರ್ಜನರ ಸಂಗವಿರಬೇಕು—ಎಂಬ ಸಂದೇಹ ಚನ್ನಬಸಪ್ಪನಿಗೆ. ಆದರೆ ಹಾಗೆಂದು ಮಗನನ್ನು ಗದರಿಸಲಾರ.

"ಮುಂದೇದು ಹಾಳಾಗಿ ಹೋಗತದೆ" ಎಂದು ಗೊಣಗುತ್ತ ಆತ ತನ್ನ ಕೊಠಡಿಗೆ ಹೋದ.

ದೇವಮ್ಮಾಜಿ, "ತಲೆನೋವು, ನಡನೋವು" ಎನ್ನುತ್ತ ಹಾಸಿಗೆಯ ಮೇಲೆ ಬಿದ್ದುಕೊಂಡಳು.

ವೃದ್ಧ, "ಬಿಸಿ ಅಡಿಕೆ ನೀಡ್ರವ್ವಾ" ಎಂದು ಕೇಳಿ ಇಸಕೊಂಡು, ಬಾಗಿಲ ಬಳಿ ಬಿದ್ದಿದ್ದ ಚಪ್ಪಡಿ ಕಲ್ಲಿನ ಮೇಲೆ ಕುಟ್ಟತೊಡಗಿದ.

ರಾಜಮ್ಮಾಜಿ ಕತ್ತಲಲ್ಲಿ ಹಿತ್ತಿಲಿಗೆ ಹೋಗಿ ಬಾವಿಯಿಂದ ನೀರು ಸೇದಿದಳು. ಭಾರವಾದ ಬಿಂದಿಗೆ. ಹೊತ್ತುಕೊಂಡು ಒಳಗೆ ಬಂದಿದ್ದಳಷ್ಟೆ. ಎದೆಯಲ್ಲೇನೋ ನೋವಾಯಿತು. ಲೆಕ್ಕಿಸದೆ ತೊಳೆಯುವ ಬಳೆಯುವ ಕೆಲಸದಲ್ಲಿ ತೊಡಗಿದಳು. ಮತ್ತೆ ನೋವು ಕಾಣಿಸಿಕೊಂಡಿತು. ತಾಳಲಾಗದೆ, "ಯಪ್ಪೊ ! ಯಪ್ಪೊ ! ನೋವು !" ಎಂದು ಕೂಗಿಕೊಂಡಳು.

ವೃದ್ಧ ಮನೆಯ ಬಳಿಗೆ ಬರುವುದು 'ಪೊಲೆ', ಹೊರಗೇ ನಿಲ್ಲಬೇಕು. ಅಲ್ಲಿಂದಲೇ ಆತ ಕೂಗಿದ :

"ಧಣೇರೇ ! ಅಮ್ಮಣ್ಣಿ ! ಬಿರ್ರನೆ ಬರ್ರಿ !"

ರಾಜಮ್ಮಾಜಿಯ ರೋದನ ಹೆಚ್ಚಿತು.

ಚನ್ನಬಸಪ್ಪನೂ ದೇವಮ್ಮಾಜಿಯೂ ಬಂದರು.

"ಏನಾಯ್ತು ರಾಜಮ್ಮಾಜಿ ? ಏನಾಯ್ತು ?" ಎಂದು ದೇವಮ್ಮಾಜಿ ಕೇಳಿದಳು.

ರಾಜಮ್ಮಾಜಿ ಎದೆಯ ಎಡಭಾಗವನ್ನು ಎರಡೂ ಕೈಗಳಿಂದ ಒತ್ತಿಕೊಂಡೇ, "ನೋವು ! ನೋವು !" ಎನ್ನುತ್ತಾ ಹೊರಳಾಡಿದಳು.

ಒಂದರ್ಧ ಘಳಿಗೆಯ ಯಾತನೆ. ನೋಡುತ್ತಿದ್ದ ಮೂವರೂ ಅಸಹಾಯರಾಗಿ ನಿಂತರು.

ರಾಜಮ್ಮಾಜಿ ಬೊಗಸೆ ಬೊಗಸೆಯಾಗಿ ರಕ್ತ ಕಾರಿದಳು.

ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲವೂ ಶಾಂತವಾಯಿತು.

...ಅರಮನೆ ಎಂಬ ಹೆಸರಿದ್ದ ಅಪ್ಪಂಗಳದ ಆ ಮನೆಯ ವಿಸ್ತಾರವಾದ ಹಿತ್ತಿಲ ಒಂದು ಮೂಲೆಯಲ್ಲಿ, ಕಂದೀಲ ಬೆಳಕಿನಲ್ಲಿ, ನೆಲವನ್ನು ವೃದ್ಧ ಆಳವಾಗಿ ಅಗೆದ.

ಚನ್ನಬಸಪ್ಪನೂ ದೇವಮ್ಮಾಜಿಯೂ ಶವವನ್ನು ಮೀಯಿಸಿ ಅಲಂಕರಿಸಿದರು. ಅವರೇ ಅದನ್ನು ಹೊತ್ತು ಭೂಮಿತಾಯಿಯ ಮಡಿಲಿಗೆ ಅರ್ಪಿಸಿದರು.

ಹಿಂತಿರುಗಿದ ಬಳಿಕ ದೇವಮ್ಮಾಜಿ ಆಳಿಗೆ ಅಂದಳು :

"ನೀನೇ ಬಂದು ಈ ನೆಲ ಎಲ್ಲ ಸ್ವಚ್ಛ ಮಾಡಪ್ಪ, ಮಡಿಯೊ ? ಪೊಲೆಯೊ ?—ಬೆಂಕಿ ಹಾಕ. ಬಾ ಒಳಕ್ಕೆ."

* * *

ಬೆಂಗಳೂರಲ್ಲಿ ಶಂಕರಪ್ಪನ ಜೀವನ ಹೆಚ್ಚು ಹೆಚ್ಚು ದುಸ್ತರವಾಗುತ್ತ ಸಾಗಿತ್ತು. ಮಕ್ಕಳು ಬೇರೆ ಬೇರೆಯಾಗಿ ತಮ್ಮ ಸಂಸಾರಗಳನ್ನು ಸಾಕಿಕೊಂಡಿರುತ್ತಿದ್ದರು. ವೃದ್ಧ ದಂಪತಿ ತಮ್ಮ ಪಾಡಿಗೆ ತಾವು ಇರಬೇಕಾಗಿ ಬಂತು. ಕಡಲೆಪುರಿ ವ್ಯಾಪಾರದಿಂದ ಬರುವುದು ಒಪ್ಪೊತ್ತಿಗೂ ಸಾಲುತ್ತಿರಲಿಲ್ಲ.

ಕೊಡಗಿನಲ್ಲಿ ಕಾಫಿ ತೋಟಗಳು ಆರಂಭವಾಗಿರುವುದೂ ಎಷ್ಟು ಜನರಿಗೆ ಬೇಕಾದರೂ ಕೆಲಸ ದೊರೆಯುತ್ತಿರುವುದೂ ಎಲ್ಲರ ಬಾಯಲ್ಲೂ ಕೇಳಿಬರುತ್ತಿದ್ದ ಸುದ್ದಿಯಾಗಿತ್ತು. ತಾನೂ ಒಮ್ಮೆ ನೋಡಿ ಬರಬೇಕೆಂಬ ಆಸೆ ಶಂಕರಪ್ಪನಿಗೆ. ಊರು ಬಿಟ್ಟು ಮೂವತ್ತು ವರ್ಷಗಳಿಗೆ ಮೇಲಾಯಿತಲ್ಲ ? ಇನ್ನು ಜನರಿಗೆ ತನ್ನ ಗುರುತು ಸಿಗುತ್ತದೆನ್ನುವುದು ಸುಳ್ಳು.

ಎರಡೇ ವಾರದೊಳಗೆ ಬರುತೇನೆ. ನೀನು ಹಿರೇ ಮಗನ ಮನೇಲಿರು. ಸೊಸೆ ಬೇಡ ಅಂದರೆ ಕಿರೇ ಮಗನಲ್ಲಿಗೆ ಹೋಗು" ಎಂದು ಹೆಂಡತಿಯನ್ನು ಒಪ್ಪಿಸಿ, ಶಂಕರಪ್ಪ ಕೊಡಗಿಗೆ ಹೊರಟ.

ಬಳಸು ದಾರಿಯಾದರೇನಂತೆ ? ಅಪ್ಪಂಗಳಕ್ಕೆ ಹೋಗಿಯೇ ಆತ ಮಡಕೇರಿ ಸೇರಬೇಕು.

ಅವನ ಹರಕು ಕೋಟಿನ ಒಳಜೇಬಿನಲ್ಲೊಂದು ಹೊರೆಯಿತ್ತು. ಸಾಧ್ಯವಾದರೆ ಅಪ್ಪಂಗಳದಲ್ಲಿ ಅದನ್ನು ಇಳಿಸಬೇಕೆಂಬ ಅಪೇಕ್ಷೆ ಅವನದು.

ಪಾಳುಬಿದ್ದಿದ್ದ ಅಪ್ಪಂಗಳದ ಅರಮನೆಯ ಮುಂದೆ ಚಪ್ಪಡಿ ಕಲ್ಲಿನ ಮೇಲೆ ವೃದ್ಧ ಆಳು ಕುಳಿತಿದ್ದ.

ಶಂಕರಪ್ಪ ಕೇಳಿದ :

"ಎಲ್ಲರೂ ಚೆಂದಾನಾ ?"

ವೃದ್ಧ ಮಾತನಾಡಲಿಲ್ಲ.

"ರಾಜಮ್ಮಾಜಿಯೋರು ಒಳಗದಾರಾ ?"

"ಏನು ಜಂಬ್ರ ?"

"ಒಸಿ ಮಾತಾಡಬೇಕಿತ್ತು."

ವೃದ್ಧ ಅಂದ :

"ಅದಾರೆ [ಮೇಲಕ್ಕೆ ಬೊಟ್ಟುಮಾಡಿ] ಆ ಲೋಕದಾಗದಾರೆ. ಓಗಿ ನೋಡತೀಯಾ ? ಇವತ್ತಿಗೆ ಎಂಟು ದಿವಸ ಆತು. ರಕ್ತಕಾರಿ ಸತ್ತ್ರೋದ್ರು ಆ ಮಾತಾಯಿ...ಅಯ್ಯೊ !"

## ೭೩

ತಾನು ಹುಟ್ಟಿ ಬೆಳೆದ ಕೊಡಗು ಇದೆ ಏನು ?—ಎನ್ನುವಂತಾಯಿತು ಶಂಕರಪ್ಪನಿಗೆ, ದೇಶದ ಸ್ಥಿತಿಗತಿಗಳನ್ನು ಗಮನಿಸಿದಾಗ.

ಸಮಯ ಸಾಧಕರ ಸಂತತಿ ವಿಪುಲಗೊಂಡಿತ್ತು. ಆಳುವವರ ತಾಳಕ್ಕೆ ತಕ್ಕಂತೆ ಕುಣಿಯು ವವರೇ ಎಲ್ಲರೂ. ಅದು ಇಷ್ಟವಾಗದವರು ತಮ್ಮ ಪಾಡಿಗೆ ತಾವಿದ್ದರು.

ಒಂದೆರಡು ಕಾಫಿ ತೋಟಗಳನ್ನೂ ಶಂಕರಪ್ಪ ಕಂಡ. ಅಲ್ಲಿ ಜನರನ್ನು ದನಗಳಂತೆ ದುಡಿಸಿಕೊಳ್ಳುತ್ತಿದ್ದರು. ಆಂಗ್ಲ ಮಾಲಿಕ ಕೈಯಲ್ಲಿ ಚಾಟಿ ಹಿಡಿದು ಕುದುರೆಯ ಮೇಲೆ ಅತ್ತಿತ್ತ ಹೋಗುತ್ತಿದ್ದುದನ್ನು ಕಂಡಾಗ ಶಂಕರಪ್ಪನ ಕಣ್ಣುಗಳಿಂದ ಕಿಡಿ ಕಾರಿತು.

ಆತ ಬೆಂಗಳೂರಿಗೆ ಹಿಂತಿರುಗಿದ :

"ಕಾಫಿ ತೋಟದ ಕೆಲಸ ನಮಗೆ ಹೇಳಿದ್ದಲ್ಲ" ಎಂದು ಹೆಂಡತಿಗೆ ತಿಳಿಸಿದ.

...ದಿವಾನ ಲಕ್ಷ್ಮೀನಾರಾಯಣನ ಮಕ್ಕಳು ತಮ್ಮ ವೃದ್ಧ ತಂದೆಯ ಬಿಡುಗಡೆಗಾಗಿ ಪ್ರಯತ್ನ ನಡೆಸಿದ್ದರು. ಮೈಸೂರಿನ ಅರಸನಿಗೂ ಆಂಗ್ಲ ಪ್ರತಿನಿಧಿ ಬೌರಿಂಗನಿಗೂ ಅವರು ಮನವಿಗಳನ್ನು ಸಲ್ಲಿಸಿದರು.

"ಇದು ಕೊಡಗಿಗೆ ಸಂಬಂಧಿಸಿದ ವಿಷಯ" ಎಂದ ಕೃಷ್ಣಭೂಪಾಲ.

ಲಕ್ಷ್ಮೀನಾರಾಯಣನ ಮಕ್ಕಳು, "ನಾವೀಗ ಬೆಂಗಳೂರಲ್ಲಿ ನೆಲೆಸಿದ್ದೇವೆ. ಶ್ರೀಮನ್ಮಹಾ ರಾಜರ ಪ್ರಜೆಗಳಾಗಿದ್ದೇವೆ" ಎಂದರು.

ಕೃಷ್ಣಭೂಪಾಲ ಅವರ ಮನವಿಯನ್ನು, "ಕೊಡಗಿನ ಪ್ರಕರಣ. ಖಾವಂದರಿಗೆ ಸೇರಿದ್ದು. ಕನಿಕರ ತೋರಿಸಬಹುದೇನೋ—ಅಂತ ತಮ್ಮಲ್ಲಿಗೆ ಕಳುಹಿಸುತ್ತಿದ್ದೇವೆ" ಎಂದು ಬರೆದು ಬೌರಿಂಗನಿಗೆ ತಲಪಿಸಿದ.

"ಕೊಡಗು ! ಓ ! ಆ ಕಪಾಟದಲ್ಲಿ ಇನ್ನೂ ಎಲುಬು ಗೂಡುಗಳು ಉಳಿದಿವೆಯೇನು?" ಎಂದು ಬೌರಿಂಗ್, ಹಳೆಯ ದಾಖಲೆಗಳನ್ನು ತರಿಸಿದ.

"ಡಾಕ್ಟರ್, ಈ ಕೈದಿಯ ಬಗ್ಗೆ ಒಂದು ವೈದ್ಯಕೀಯ ವರದಿ ಬೇಕು" ಎಂದು ಕ್ಯಾಂಪ್‌ಬೆಲ್‌ಗೆ ತಿಳಿಸಿದ.

ಲಕ್ಷ್ಮೀನಾರಾಯಣ ಮುದುಕ; ಆರೋಗ್ಯವೂ ಸರಿಯಾಗಿಲ್ಲ—ಸಾಕ್ಷ್ಯ ನುಡಿಯಿತು ಕ್ಯಾಂಪ್‌ಬೆಲ್‌ನ ವರದಿ.

ಅದರಲ್ಲಿ ಮತ್ತೂ ಒಂದು ವಿಷಯವಿತ್ತು :

"ಇನ್ನೂ ಒಬ್ಬ ವೃದ್ಧ ಕೈದಿಯ ವಿಚಾರವಾಗಿ ತಮ್ಮ ಗಮನ ಸೆಳೆಯಬೇಕಾಗಿದೆ. ಇವನ ಹೆಸರು ಅಪರಂಪಾರಸ್ವಾಮಿ, ಅಂತ. ಕುರುಡ. ಒಂದು ವರ್ಷದ ಹಿಂದೆ ಅವನಿ ಗೊಂದು ಕೆಟ್ಟ ಕನಸು ಬಿದ್ದಿತಂತೆ. ಅಂದಿನಿಂದ ಒಂದೇ ಸಮನೆ ಕೃಶವಾಗುತ್ತಿದ್ದಾನೆ. ಇವ ನನ್ನೂ ಬಿಟ್ಟುಬಿಡಬಹುದು ಅಂತ ತೋರುತದೆ."

ಬೌರಿಂಗ್ ವೈದ್ಯನ ವರದಿಯನ್ನು ಪರಿಶೀಲಿಸಿ, ಕೊಡಗಿನ ಕಡತಗಳನ್ನು ಮತ್ತೊಮ್ಮೆ

ತೆರೆದು ನೋಡಿದ. ಅಪರಂಪಾರನ ಇತಿಹಾಸ ಸ್ವಾರಸ್ಯವಾಗಿತ್ತು. ಓದಿ ಅವನೆಂದ :

"ಹುಂ! ಇವನು ಫಕೀರ. ದಿಕ್ಕಿಲ್ಲದವನು. ಬಿಡುಗಡೆ ಮಾಡಿ ಅಂತ ಯಾರು ಬೇಡು ತಾರೆ ? ಈ ಮುದುಕರನ್ನೆಲ್ಲ ಇಲ್ಲಿ ಯಾವ ಲೌಕಿಕ ಪ್ರಯೋಜನಕ್ಕೆ ಇಟ್ಟುಕೊಂಡಿದಾರೋ ಕಾಣೆ."

ಕೊಡಗಿನ ಈ ಕೈದಿಗಳನ್ನು ಬಿಡುಗಡೆ ಮಾಡಬಹುದು—ಎಂದು ಬೌರಿಂಗ್ ಆಜ್ಞೆ ಹೊರಡಿಸಿದ.

...ಬರಬೇಕಾದ ದಿನಕ್ಕಿಂತಲೂ ಮುಂಚೆಯೇ ಪರಿಚಿತ ಬೂಟುಗಳ ಸಪ್ಪಳ ಕೇಳಿ ಅಪರಂಪಾರನಿಗೆ ಆಶ್ಚರ್ಯವಾಯಿತು.

"ಶರಣು ಸ್ವಾಮಿಜಿ."

"ಶರಣು ವೈದ್ಯರೆ."

ವೈದ್ಯನ ಧ್ವನಿಯಲ್ಲಿ ಕಂಪನವಿತ್ತು.

"ನಿಮಗೊಂದು ಸಿಹಿ ಸುದ್ದಿ ತಂದಿದೇನೆ."

"ನಿಮ್ಮ ಔಷಧವಷ್ಟೇ ಕಹಿ. ಮಾತು ಯಾವಾಗಲೂ ಸಿಹೀನೇ ಅಲ್ಲವಾ ?"

"ನಿಮ್ಮನ್ನು ಬಿಡುಗಡೆ ಮಾಡುತಾರೆ."

ಅಪರಂಪಾರನ ತುಟಿಗಳು ಬಿಗಿದುಕೊಂಡುವು. ಗವಿಗಳ ಮೇಲೆ ಎವೆಯ ಅವಶೇಷಗಳು ಪಟಪಟನೆ ಬಡಿದುವು.

ಕ್ಯಾಂಪ್‌ಬೆಲ್ ಮತ್ತೆ ಅಂದ :

"ಇನ್ನು ನೀವು ಸ್ವತಂತ್ರರು. ಸ್ವಲ್ಪ ಹೊತ್ತಿನಲ್ಲೇ ಬಿಟ್ಟುಬಿಡುತಾರೆ."

ಅಪರಂಪಾರ ತುಟಿ ತೆರೆದ :

"ಇದೂ ಒಂದು ಇರಲಿ ಎನ್ನುತಾನಾ ಮಹದೇವ ? ಈ ಸೆರೆಮನೆಯಿಂದ ಇನ್ನೊಂದು ಸೆರೆಮನೆಗಾ ನಮಗೆ ಬಿಡುಗಡೆ ?...ನಮ್ಮ ಸಹವಾಸ ನಿಮಗೆ ಸಾಕಾಯಿತಾ ವೈದ್ಯರೆ ?"

"ಹಾಗಲ್ಲ, ಸ್ವಾಮಿಜಿ. ಅಗಲಿಕೆ ಯಾವಾಗಲೂ ಬೇಸರದ ಸಂಗತಿ. ಆದರೆ, ಸೆರೆ ಮನೆಯಿಂದ ನೀವು ಹೊರಹೋದಿರಿ ಅಂದರೆ ನನಗೆಷ್ಟೋ ಸಮಾಧಾನ."

"ಇವನನ್ನ ಬಿಡಿ—ಅಂತ ನೀವೇ ಸಲಹೆ ಮಾಡಿದಿರಾ ?"

"ಅದು ದೊಡ್ಡದಲ್ಲ. ಹೇಳಿ, ಸ್ವಾಮಿಜಿ. ನಿಮಗೇನಾದರೂ ಸಹಾಯ ಬೇಕೆ ?"

"ಸಹಾಯ ? ಹ್ಞ. ಮೂವತ್ತೆರಡು ವರ್ಷ ಆಯಿತು ಇಲ್ಲಿಗೆ ಬಂದು. ಒಮ್ಮೆಯೂ ನಿಮ್ಮನ್ನು ಏನೂ ಕೇಳಲಿಲ್ಲ. ಎಲ್ಲ ಹತ್ತಿರ ಬನ್ನಿ. ನಿಮ್ಮನ್ನಿಷ್ಟು ಸರಿಯಾಗಿ ನೋಡ ಬೇಕು."

ಅಪರಂಪಾರ ನಡುಗುವ ಬೆರಳುಗಳನ್ನು ಸರಳುಗಳ ಹೊರಗೆ ತೂರಿ ವೈದ್ಯನ ತಲೆ ಮುಖ ಭುಜಗಳನ್ನು ಮುಟ್ಟಿದ.

"ಮುಖದ ಗೆರೆಗಳು ಆಳವಾಗಿವೆ. ನನ್ನ ಹಾಗೆಯೇ ಮುದುಕರಾದಿರಿ, ಅಲ್ಲ ? ಒಳ್ಳೇದು. ನನಗೆ ನಾಪಿತನ ಸೇವೆ ದೊರಕಿಸಿ ಕೊಡಿ. ಯಾರಾದರೂ ತಲೆಯ ಮೇಲೆ ಎರಡು ಬಿಂದಿಗೆ ನೀರು ಸುರಿಯಲಿ. ಈ ವಸನಗಳನ್ನು ಇಲ್ಲಿಯೇ ತ್ಯಜಿಸುತೇನೆ. ನಮ ಗೊಂದು ನಿಲುವಂಗಿ—ಜೋಳಿಗೆ ಕೊಡಿಸಿ. ಇದೇ ನೀವು ಮಾಡಬೇಕಾದ ಸಹಾಯ."

ಭಾವೋದ್ವೇಗವನ್ನು ಬಯಲುಗೊಳಿಸುತ್ತಿದ್ದ ಧ್ವನಿಯಲ್ಲಿ ಕ್ಯಾಂಪ್‌ಬೆಲ್ ನುಡಿದ :

"ಆಗಲಿ ಒಂದು ಊರುಗೋಲೂ ಬೇಡವೆ ?"

"ಛೆ ! ನಾನು ಕುರುಡ ಅಲ್ಲವಾ ?"

"ಇಲ್ಲಿಂದ ಎಲ್ಲಿಗೆ ಹೋಗುತೀರಿ, ಸ್ವಾಮಿಜಿ ?"

"ಎಲ್ಲಿಗೆ ?! ಕೊಡಗಿಗೆ !"

"ದೂರದ ಪ್ರಯಾಣ. ಸಾಧ್ಯವಿದ್ದರೆ ಏರ್ಪಾಟು ಮಾಡುತ್ತಿದ್ದೆ. ಆದರೆ ನನಗೆ ಅಧಿಕಾರವಿಲ್ಲ."

"ನಾನು ನಡೆಯೆನೆ ? ನೋಡುತ್ತಿರಿ. ನನ್ನ ಕಾಲುಗಳಿಗೆ ರೆಕ್ಕೆ ಹುಟ್ಟುತವೆ."

"ಬೇಕಿದ್ದರೆ ಇಲ್ಲಿಯ ಮಠಕ್ಕೆ ಸಿಪಾಯರು ನಿಮ್ಮನ್ನು ಒಯ್ದು ಮುಟ್ಟಿಸುವ ಹಾಗೆ ವ್ಯವಸ್ಥೆ ಮಾಡುತೇನೆ."

"ವೀರಜಂಗಮನಿಗೆ ರಾಜಪಹರೆ ! ಆಗಲಿ, ಆಗಲಿ."

"ನೀವು ಕೇಳಿರುವುದೆಲ್ಲ ಬರುತದೆ. ಇನ್ನು ನಮ್ಮ ನಿಮ್ಮ ಭೇಟಿಯಿಲ್ಲ. ನಾನು ಬರಲಾ ? ದೇವರು ನಿಮ್ಮನ್ನು ರಕ್ಷಿಸಲಿ !"

ಆರ್ತನಾದದಂತಿದ್ದ ಧ್ವನಿಯಲ್ಲಿ ಅಪರಂಪಾರನೆಂದ :

"ಬರುತೀರಾ ಶಿವ ? ಬರುತೀರಾ ? ಬರುತೀರಾ ?"

## ೭೪

ಸೊರಗಿದ ಎತ್ತರದ ದೇಹ. ದೃಷ್ಟಿವಿಹೀನ. ಮೊಣಕಾಲುಗಳನ್ನು ಮುಚ್ಚಿ ಕೆಳಗಿಳಿದಿದ್ದ ಹೊಚ್ಚ ಹೊಸ ನಿಲುವಂಗಿ ; ಜೋಳಿಗೆ, ಹಾವುಗೆಗಳು. [ಅಪರಂಪಾರ ಕೇಳಿರದೆ ಇದ್ದರೂ ಆ ವೈದ್ಯ ಅವನ್ನು ಒದಗಿಸಿದ್ದ.] ನಡೆಗೋಲು.

ಎಡಬಲಗಳಲ್ಲಿದ್ದ ಸಿಪಾಯರೆನ್ನುತ್ತಿದ್ದರು :

"ಆಚೆ, ಈ ಕಡೆಗೆ."

ತಾನು ಕುರುಡನಲ್ಲ ಎನ್ನುವಂತೆ ಅಪರಂಪಾರ ನಡೆದ, ಎಡವುತ್ತ ನಡೆದ.

"ಕೈ ಹಿಡಿಯಲಾ ?" ಎಂದ ಒಬ್ಬ ಸಿಪಾಯಿ.

"ಬೇಡ !"

ಇಕ್ಕೆಲಗಳಲ್ಲೂ ಜನ ನಿಂತು ಆ ದೃಶ್ಯವನ್ನು ನೋಡಿದರು. ಕುರುಡ ಜಂಗಮ ಯಾರು ಎಂದು ಅವರಿಗೆ ತಿಳಿಯದು.

"ಕಳವು ಗಿಳವು ಮಾಡಿದ್ದಾನು. ಹಿಡಕೊಂಡು ಹೋಗ್ತಿದಾರೆ" ಎಂದರು ಒಬ್ಬಿಬ್ಬರು.

ಅವರು ಅರ್ಧ ದಾರಿ ನಡೆದಿದ್ದರಷ್ಟೆ. ಒಮ್ಮೆಲೆ ಅಪರಂಪಾರ ನಿಂತ.

"ಯಾರೋ ಕರೀತಾ ಇದಾರೆ" ಎಂದ, ಆತ ಗಟ್ಟಿಯಾಗಿ.

ಯಾರೂ ಇರಲಿಲ್ಲ.

ಪುನಃ ಅವರು ನಡೆಯತೊಡಗಿದರು.

ಅಷ್ಟರಲ್ಲೆ ಕಡಲೆಪುರಿ ಮೂಟೆಯನ್ನು ಬೆನ್ನ ಮೇಲೆ ಹಾಕಿದ್ದವನೊಬ್ಬ, "ಸ್ವಾಮಿಯೋರೆ, ಸ್ವಾಮಿಯೋರೇ !" ಎಂದು ಕೂಗುತ್ತ ಜನರ ಗುಂಪನ್ನು ಭೇದಿಸಿಕೊಂಡು ರಸ್ತೆಯ ಒಂದು ಮಗ್ಗುಲಿಂದ ಓಡಿಬಂದ.

ಅಪರಂಪಾರ ನಿಂತ.

ಆ ಮನುಷ್ಯ ಮೂಟೆಯನ್ನು ಕೆಳಕ್ಕೆ ಕುಕ್ಕಿ, ಜಂಗಮನ ಪಾದಗಳನ್ನು ಹಿಡಿದುಕೊಂಡು, ನಿರ್ಲಜ್ಜ ಆನಂದಾಶ್ರುವನ್ನು ಸುರಿಸುತ್ತ, "ಸ್ವಾಮಿಯೋರೆ! ಸ್ವಾಮಿಯೋರೆ!" ಎಂದು ಬಾರಿ ಬಾರಿಗೂ ಅಂದ.

ಅಂಬಾ ಎಂದು ತಾಯಿಯ ಬಳಿಗೆ ಓಡಿಬಂದ ಕರು..

ಅಪರಂಪಾರ ಬಾಗಿ, ಗೋಗರೆಯುತ್ತಿದ್ದವನ ಮೈದಡವಿದ.

"ಏಳು, ಶಂಕರಪ್ಪ!"

"ಬಂದಿರಾ ಸ್ವಾಮಿಯೋರೆ ?"

"ಹ್ಞ ಶಂಕರಪ್ಪ, ಬಂದಿದೇವೆ."

ಥರಥರ ಕಂಪಿಸುತ್ತಿದ್ದ ಶಂಕರಪ್ಪನೆದ್ದು, ಅಪರಂಪಾರನ ಎಡಗೈಯನ್ನು ಹಿಡಿದುಕೊಂಡ.

ಸಿಪಾಯರನ್ನು ಕುರಿತು ಅಪರಂಪಾರನೆಂದ :

"ನೀವಿನ್ನು ಹೋಗಬಹುದು."

ಒಬ್ಬ ಸಿಪಾಯಿಯೆಂದ :

"ಮಂಠಕ್ಕೆ ಮುಟ್ಟಿಸು ಅಂತ ಆಡ್ರಾಗಿತ್ತು."

"ನಮಗೀಗ ದಾರಿ ಕಾಣುತದೆ. ಕಣ್ಣುಗಳು ಬಂದಿವೆ."

ಸಿಪಾಯರು, ಬಹಳ ಕಾಲ ತಾವು ಕೈದಿಯಾಗಿ ಕಂಡಿದ್ದ ಮನುಷ್ಯನಿಗೆ ಕೈಜೋಡಿಸಿ ನಮಿಸಿ, ಸೆರೆಮನೆಯ ದಾರಿ ಹಿಡಿದರು.

ಶಂಕರಪ್ಪ ಕೇಳಿದ್ದು ಸುಳ್ಳಾಗಿರಲಿಲ್ಲ. ಕುರುಡನಾದರೇನು ? ಕುಂಟನಾದರೇನು ? ಅವನ ಸ್ವಾಮಿ, ಅವನ ಸ್ವಾಮಿಯೇ.

"ನನ್ನ ಮನೆಗೆ ಹೋಗೋಣವಾ, ಸ್ವಾಮಿಯೋರೆ ?"

"ಇಲ್ಲಿ ಮನೆ ಮಾಡಿದೀಯಾ ?"

"ಹೌದು, ನಮ್ಮಪ್ಪ."

"ನಡೆ...ಹಾಗೇ, ದಾರಿಯಲ್ಲಿ ಈಶ್ವರ ಗುಡಿ ಇದ್ದರೆ ಅವನಿಗಿಷ್ಟು ಕೈಮುಗಿಯಬೇಕಲ್ಲ?"

"ಕರಕೊಂಡು ಹೋಗುತ್ತೇನೆ, ಸ್ವಾಮಿಯವರೆ."

"ಅದೇನೋ ಕೆಳಕ್ಕಿಟ್ಟೆ..."

"ಕಡಲೆ ಪುರಿ."

"ವ್ಯಾಪಾರ ಮಾಡುತೀಯಾ ?"

"ಹೊಟ್ಟೆಪಾಡಿಗೇನಾದರೂ ಬೇಕಲ್ಲ, ನಮ್ಮಪ್ಪ."

"ನಿಜ, ಮೂಟೆ ಎತ್ತಿಕೊ."

ಶಂಕರಪ್ಪ ಚೀಲವನ್ನೆತ್ತಿಕೊಂಡು ಬೆನ್ನಿಗೇರಿಸಿದ. ತನ್ನ ಬಲಗೈಯಿಂದ ಅಪರಂಪಾರನ ಎಡಗೈಯನ್ನು ಹಿಡಿದುಕೊಂಡ.

ನಡೆಯತೊಡಗುತ್ತ, ನೆರೆದಿದ್ದ ಜನರನ್ನುದ್ದೇಶಿಸಿ, "ದಾರಿ ಬಿಡಿ! ದಾರಿ ಬಿಡಿ!" ಎಂದ ಆತ.

'ಮಹಾಸ್ವಾಮಿಯವರು ಬಿಜಯಂಗೈಯುತಿದಾರೆ. ಹೋಷಿಯಾರ್!' ಎಂಬ ದನಿಯಿತ್ತು, ಶಂಕರಪ್ಪ ನುಡಿದ ಮಾತಿನಲ್ಲಿ.

## ೭೫

ಶಂಕರಪ್ಪನ ಮನೆಯಲ್ಲಿ ಅವನ ಹೆಂಡತಿ, "ಎಸರಿಡತೀನಿ" ಎಂದಳು.

ಅಪರಂಪಾರನೆಂದ :

"ಇಡು ತಾಯಿ. ಆದರೆ ಉಂಡೇನು ಅಂತ ಭರವಸೆ ಇಲ್ಲ."

ಶಂಕರಪ್ಪನನ್ನು ಆತ ಕೇಳಿದ :

"ಕೊಳ್ಳಲು ಕಾಸಿಲ್ಲ. ಕಡಲೆ ಪುರಿ ಕೊಡತೀಯೇನಪ್ಪ ?"

"ಅಯ್ಯೋ ಸ್ವಾಮಿಯೋರೆ !"

ಶಂಕರಪ್ಪ ಮೂಟೆಯನ್ನೇ ಅಪರಂಪಾರನ ಮುಂದಿರಿಸಿದ.

ಒಂದಿಷ್ಟನ್ನು ಜಗಿದು ಅಪರಂಪಾರನೆಂದ :

"ರುಚಿಯಾಗಿದೆ, ಆದರೆ ಕಡಲೆಪುರಿ ತಿನ್ನುವ ಕಾಲ ಕಳೆಯಿತು. ನಾನು ಮುದುಕ, ಅಲ್ಲವಾ ? ಹಲ್ಲುಗಳು ಕಡಮೆಯಾಗಿವೆ."

ಶಂಕರಪ್ಪ ಗಹಗಹಿಸಿ ನಕ್ಕ. ಸ್ವತಃ ಅವನ ಬಾಯಲ್ಲೇ ಎಷ್ಟು ಉಳಿದಿದ್ದುವು ? ನಕ್ಕಾಗ ಸ್ಪಷ್ಟವಾಗುತ್ತಿತ್ತು. ಆದರೆ ಅಪರಂಪಾರ ಕಾಣಲಾರ.

...ಉಣ್ಣಲು ಕುಳಿತಾಗಲೂ ಅಷ್ಟೆ. ಅಪರಂಪಾರನ ಬೆರಳುಗಳು ಎಲೆಯ ಮೇಲೆಲ್ಲ ಓಡಾಡಿದುವು. ಗಂಟಲೊಳಗಿಳಿದುದು ಒಂದೇ ತುತ್ತು.

"ಸಾಕು ಶಂಕರಪ್ಪ. ಸವಿಯಾದ ಅಡುಗೆ. ಆದರೆ ನಾ ಉಣ್ಣಲಾರೆ. ಈ ದೇಹ ಬೇಡ ಅನುತಿದೆ."

...ಆದರೆ ಒಂದನ್ನು ಮಾತ್ರ ಆ ಜೀವ ಕೇಳುತ್ತಿತ್ತು. ತಾನು ಕೊಡಗಿಗೆ ಹೋಗ ಬೇಕು—ಎಂಬುದನ್ನು.

"ನಾನು ಕೊಡಗಿಗೆ ಹೋಗಬೇಕು, ಶಂಕರಪ್ಪ. ಮುಂದಣೂರಿಗೆ ಬಟ್ಟೆ ಇದೆ ಹೋಗೆಂದಡೆ ಅಂಧಕನೇನು ಬಲ್ಲ ಹೇಳು ? ಅಲ್ಲಿ ತನಕ ಬರತೀಯಾ ?"

"ಬರದೆ ಉಂಟೆ ಸ್ವಾಮಿಯೋರೆ ? ಈ ದೇಹದಲ್ಲಿ ಉಸಿರಿರುವವರೆಗೂ ನಿಮ್ಮ ನಾನು ಬಿಟ್ಟಿರುತೀನಾ ?"

"ನಾಳೆ ನಸುಕಿನಲ್ಲೆ ಹೊರಡೋಣವಾ ?"

"ಹೇಗೆ ಅಂತೀರೋ ಹಾಗೆ."

"ನಿನ್ನ ಹೆಂಡತಿ—"

"ಮಕ್ಕಳ ಮನೆಯಲಿರುತಾಳೆ. ತಿಳೀದಾ ? ನಾನು ಚಾವಡಿಕಾರ ಅಲ್ಲವಾ ?"

ಅಪರಂಪಾರ ಶಂಕರಪ್ಪನ ಪತ್ನಿಯನ್ನು ಉದ್ದೇಶಿಸಿ ಅಂದ :

"ಕರಕೊಂಡು ಹೋಗಲಾ, ತಾಯಿ ?"

"ಹೋಗಿ, ಸೋಮಿಯೋರೆ. ನಾನು ಬೇಡ ಅಂದೇನಾ ?"

...ಮಾರನೆಯ ದಿನ ನಸುಕಿನಲ್ಲಿ ಶಂಕರಪ್ಪನೂ ಅಪರಂಪಾರನೂ ಕೊಡಗಿಗೆಂದು ಬೆಂಗಳೂರಿನಿಂದ ಪಯಣ ಬೆಳೆಸಿದರು. ನಡಿಗೆ ಸುಲಭವಾಗಿರಲಿಲ್ಲ. ಅಪರಂಪಾರನ ಕಾಲುಗಳಿಗೆ ರೆಕ್ಕೆ ಹುಟ್ಟಲಿಲ್ಲ.

ಅವನೆಂದ :

"ಗತಿಗೆಟ್ಟು ಧೃತಿಗೆಟ್ಟು ಮತಿಗೆಟ್ಟವ ನಾನಯ್ಯಾ, ನಡೆವರೆ ಶಕ್ತಿಯಿಲ್ಲ ನುಡಿವರೆ ಜಿಹ್ವೆಯಿಲ್ಲ..."

ದಾರಿಯುದ್ದಕ್ಕೂ ಅಲ್ಲಲ್ಲಿ ಅವರು ತಂಗುತ್ತ ನಡೆದರು.

ಅಪರಂಪಾರನ ಅಸಹಾಯ ಸ್ಥಿತಿಯನ್ನು ನೋಡುತ್ತ ಶಂಕರಪ್ಪ ಚಿಂತೆಗೀಡಾದ.

'ಹೀಗೆ ಏಸು ದಿನ ಸಾಧ್ಯ ಆದಾತು?'

ಹತ್ತು ದಿನ ನಡೆದ ಬಳಿಕ ಶ್ರೀರಂಗಪಟ್ಟಣ ಬಂತು.

ಅಪರಂಪಾರನೆಂದ:

"ಸಿದ್ಧಲಿಂಗನ ಇಲ್ಲೇ ಸೆರೆಯಲ್ಲಿ ಕೂಡಹಾಕಿದರು. ಆ ಅಯ್ಯ ಈಗ ಇರಲಾರ ಅನಿಸತದೆ."

"ಇಲ್ಲಿಂದ ಕಾಲುದಾರಿಯಾಗಿ ಪೆರಿಯಾಪಟ್ಟಣಕ್ಕೆ ಹೋಗೋಣವೆ? ಅಲ್ಲ—ಮೈಸೂರಿಗಾಗಿ."

"ಮೈಸೂರಿಗೆ ಬೇಡ, ಕೃಷ್ಣರಾಜ ಒಡೆಯರು ಆಳುತಿದಾರೆ ಅಂದೆಯಲ್ಲ? ಅವರಿಗೆ ಯಾಕೆ ತೊಂದರೆ? ಒಂದು ಕಾಲದಲ್ಲಿ ಅರಮನೆಯ ಕೈದೋಟದಲ್ಲಿ ಅವರ ಕಂಡಿದ್ದೆ ಅಂತ ಹೇಳಿಕೊಳ್ಳಲೇ?...ಅದಕ್ಕಲ್ಲ ಬಸಪ್ಪಾಜಿ ಅರಸರ ನೋಡೋದಕ್ಕೆ—ಅನ್ನಬೇಡ. ಅವರ ಇಳಿ ವಯಸ್ಸಿನಲ್ಲಿ ಹಳೆಯ ನೆನಪನ್ನು ಯಾಕೆ ಮಾಡಿಕೊಡಲಿ? ನಮ್ಮ ಹತ್ತರ ಯಾವ ರಾಜಕಾರ್ಯ ಇದೆ ಅವರ ಜತೆ ಚರ್ಚಿಸೋಕೆ?"

ಕಾವೇರಿಯಲ್ಲಿ ಮಿಂದು, ಕಾಲುಗಳನ್ನೆಳೆದುಕೊಂಡು, ಪೆರಿಯಾಪಟ್ಟಣದತ್ತ ಅವರು ನಡೆದರು.

"ದಾರಿ ನೆನಪಾಗತಾ ಇದೆ, ಶಂಕರಪ್ಪ. ಆ್ಹ! ಇದು ಕೊಡಗಿನ ಕಡೆಯಿಂದ ಬೀಸು ತಿರೋ ಗಾಳಿ. ನೋಡಿದೆಯಾ, ಸುವಾಸನೆ!"

"ಉತ್ತರ ದಿಕ್ಕಿಗೆ ಹೋದರೆ ಬೆಟ್ಟದಪುರ ತಲಪುತ್ತೇವೆ, ಸ್ವಾಮಿಯವರೆ."

"ಬಲ್ಲೆ. ಆದರೆ, ಹೋಗಿ ಏನು ಮಾಡಲಿ? ಏನೂಂತ ಹೇಳಲಿ ಮಲ್ಲಿಕಾರ್ಜುನನಿಗೆ?"

...ಸಿದ್ದೇಶ್ವರ ಘಟ್ಟ ಬಂದಿತು.

"ಕೊಡಗಿನ ನೆಲ, ಸ್ವಾಮಿಯವರೆ."

"ಹಾ! ತಾಳು!"

ಅಪರಂಪಾರ ಹಾವುಗೆಗಳನ್ನು ಕಳಚಿದ. ನೆಲಕ್ಕೆ ಸಾಷ್ಟಾಂಗ ಪ್ರಣಾಮ ಮಾಡಿದ. ಒಂದು ಹಿಡಿ ಮಣ್ಣನ್ನು ಅಂಗೈಯಲ್ಲೆತ್ತಿಕೊಂಡು ಅದನ್ನು ಚುಂಬಿಸಿದ. ತಲೆಯ ಮೇಲೆ ಧರಿಸಿಕೊಂಡ.

"ಇನ್ನು ನಡೆ."

ಆ ರಾತ್ರೆ ಅಪರಂಪಾರನ ಮೈ ಬಿಸಿಯಾಯಿತು.

"ಸ್ವಲ್ಪ ದಿನ ಇಲ್ಲೆ ಇದ್ದು ಪಯಣ ಮುಂದರಿಸಾನ, ಆಗದಾ ಸ್ವಾಮಿಯೋರೆ?"

"ಛೆ! ಛೆ! ಇಷ್ಟಕ್ಕೆಲ್ಲ ಭಯವೇ? ಕೈ ಹಿಡಿ. ಎಬ್ಬಿಸು."

"ಹಾಲೇರಿಗಲ್ಲವೆ?"

"ಇನ್ನೆಲ್ಲಿಗೆ?"

"ನಂಜರಾಜಪಟ್ಟಣದಲ್ಲಿ ಈಗ ಯಾರೂ ಇಲ್ಲ."

''ಯಾರೂ ಇಲ್ಲ ಅನ್ನಬೇಡ. ಶಿವಾಚಾರ್ಯರ ದಿವ್ಯಾತ್ಮ ಸುಳಿದಾಡತಿರತದೆ.''

''ಅಪ್ಪಂಗಳದಲ್ಲಿ—''

''ಗೊತ್ತು. ಹೇಳಬೇಡ.''

ಜ್ವರ ಇಳಿಯಲಿಲ್ಲ. ಅದರ ಅಮಲಿನಲ್ಲೇ ಅಪರಂಪಾರ ನಡೆದ.

''ಶಿವನೆ ! ಒಮ್ಮೆ ನಮ್ಮನ್ನ ಹಾಲೇರಿಗೆ ಮುಟ್ಟಿಸು. ಅಲ್ಲಿ ಸ್ವಾಮಿಯೋರು ಖಂಡಿತ ಸರಿಹೋಗತಾರೆ''

ಎಂದು ಶಂಕರಪ್ಪ ದೇವರನ್ನು ಕೇಳಿಕೊಂಡ.

ಐದು ದಿನಗಳ ಪ್ರವಾಸಕ್ಕೆ ಹತ್ತು ದಿನ...

ಹಾಲೇರಿ ಹತ್ತಿರ ಬರುತ್ತಿದ್ದಂತೆ ಒಂದು ಗೂಬೆ ಕೂಗಿತು.

''ಹಗಲು ಕಾಣದ ಗೂಗೆ ಇರುಳಾಯಿತೆಂದರೆ ಜಗಕೆ ಇರುಳಪ್ಪುದೆ ಮರುಳೇ ! ನೀನು ನಿಲ್ಲಬೇಡ, ಶಂಕರಪ್ಪ.

ಸೂರ್ಯಾಸ್ತಕ್ಕೆ ಮುನ್ನವೇ ಗೂಬೆ ಹಾಗೆ ಕೂಗಿದುದು ಅಪಶಕುನ ಎನಿಸಿತು ಶಂಕರಪ್ಪನಿಗೆ.

ಅವರ ಹೃದಯ ರೋಧಿಸಿತು.

"ದೇವರೇ, ಸ್ವಾಮಿಯೋರನ್ನ ಕಾಪಾಡು."

...ಅಂತೂ ಅವರು ಹಾಲೇರಿ ಸೇರಿದರು.

"ಕೊಳಕ್ಕೆ ಕರಕೊಂಡು ಹೋಗು, ಶಂಕರಪ್ಪ. ನೀರಿನಲ್ಲಿ ಕಾಲಾಡಿಸತೀವಿ, ಕೈ ಆಡಿಸತೀವಿ."

ಅದಾದಮೇಲೆ :

"ಮಿಂದು ಶಿವಧ್ಯಾನಕ್ಕೆ ಕುಳಿತುಕೊಳ್ಳಲೆ ?"

"ಬೇಡಿ ಸೋಮಿಯೋರೆ. ಮೈ ಕೆಂಡವಾಗದೆ."

"ಹುಚ್ಚಪ್ಪ ! ಎಲ್ಲಿ ಕೈಹಿಡಿ, ಮಿಾಯತೀನಿ."

ಮಿಂದ ಬಳಿಕ ಮಹಾದೇವನ ಧ್ಯಾನ.

ಅಪರಂಪಾರ ಧ್ವನಿಯೊಂದು ವೃತ್ತಾಕಾರವಾಗಿ ಸುತ್ತುತ್ತ ಅಲೆಯಿತು :

"ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು, ಅರಿವು ಮರೆಯಿತ್ತು, ಕುರುಹುಗೆಟ್ಟಿತ್ತು, ಗತಿಯನರಸಲುಂಟೆ ? ಅಂಗವೆಲ್ಲ ನಷ್ಟವಾಗಿ ಲಿಂಗಲೀನವಾಯಿತ್ತು, ಕಂಗಳಂಗದ ಕಳೆಯು ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರಾ...ಅಂಗವೆಲ್ಲ–ನಷ್ಟವಾಗಿ–ಲಿಂಗಲೀನವಾಯಿತ್ತು... ಅಂಗವೆಲ್ಲ–ನಷ್ಟವಾಗಿ–ಲಿಂಗಲೀನವಾಯಿತ್ತು..."

ಕುಳಿತಿದ್ದ ಅಪರಂಪಾರ ಪ್ರಜ್ಞೆ ತಪ್ಪಿ ಬಿದ್ದ. ಅವನನ್ನು ಶಂಕರಪ್ಪ ಪಾವಟಿಗೆಯ ಮೇಲೆ ಮಲಗಿಸಿದ. ಉತ್ತರೀಯವನ್ನು ನೀರಿನಲ್ಲಿ ತೋಯಿಸಿ ತಂದು ಹಣೆ ಮುಖಗಳಿಗೆ ತಟ್ಟಿದ.

ಅಪರಂಪಾರನಿಗೆ ಪ್ರಜ್ಞೆ ಮರಳಲಿಲ್ಲ.

ಸೂರ್ಯಾಸ್ತವಾಯಿತು. ಚಾವಡಿಕಾರ ಶಂಕರಪ್ಪ, ಜಂಗಮನ ದೇಹದ ಬಳಿ ರಾತ್ರಿ ಇಡೀ ಕಾವಲು ಕುಳಿತ.

* * *

ಅದು ಕ್ರಿಸ್ತಶಕ ಸಾವಿರದ ಎಂಟುನೂರ ಎಪ್ಪತ್ತನೆಯ ವರ್ಷದ—ಶಾಲಿವಾಹನ ಶಕ ಸಾವಿರದ ಏಳುನೂರ ಎಪ್ಪತ್ತೆರಡನೆಯ ಪ್ರಮೋದೂತ ಸಂವತ್ಸರದ—ಒಂದು ದೀರ್ಘ ರಾತ್ರಿ.

* * *

ಬೆಳಿಗ್ಗೆ ಶಂಕರಪ್ಪ ಹಳ್ಳಿಗರನ್ನು ಕರೆತಂದು ಶವಸಂಸ್ಕಾರಕ್ಕಾಗಿ ಕೊಳದ ಬಳಿ ಒಂದು ಕುಣಿ ತೋಡಿಸಿದ.

'ಹಾಲೇರಿವಂಶದ ಸ್ಥಾಪಕನನ್ನೂ ಇಲ್ಲೇ ಎಲ್ಲೋ ಮಣ್ಣು ಮಾಡಿರಬೇಕು' ಎಂದು ಅವನಿಗೆ ಅನಿಸಿತು.

ಅಪರಂಪಾರನ ಪಾರ್ಥಿವ ಶರೀರವನ್ನೆತ್ತಿಕೊಂಡಾಗ ಶಂಕರಪ್ಪನಿಗೆ ಒಂದು ಕ್ಷಣ ಅಳುಕಿತು.

ಐವತ್ತು ವರ್ಷಗಳಿಗೆ ಹಿಂದೆ ತಾನೊಮ್ಮೆ ಎತ್ತಿದ್ದಾಗ ಆ ಜೀವದಲ್ಲಿ ಕಾವಿತ್ತು.

ಈಗ ?

ಶಂಕರಪ್ಪ ನಿಂತ.

"ನನಗೆ ಹುಚ್ಚು !" ಎಂದುಕೊಂಡು, ಮುಂದೆ ಚಲಿಸಿ, ಅಪರಂಪಾರನನ್ನು ಕುಣಿಯಲ್ಲಿ ಇಳಿಬಿಟ್ಟ.

ತನ್ನ ಹರಕು ಕೋಟಿನ ಜೇಬಿನೊಳಗಿಂದ ಒಂದು ಪುಡಿಕೆಯನ್ನು ಜಾಗರೂಕತೆಯಿಂದ ಹೊರ ತೆಗೆದು ಬಿಚ್ಚಿ, ಅದರೊಳಗಿದ್ದ ಒಂದು ರತ್ನಹಾರವನ್ನು ಕುಣಿಯೊಳಕ್ಕೆ ಮೆಲ್ಲನೆ ಇಳಿಸಿದ.

ನಾಲ್ಕೂ ಕಡೆಗಳಿಂದ ಮಣ್ಣು ಮುಚ್ಚಿಕೊಂಡಿತು.

ಶಂಕರಪ್ಪ, ಅಪರಂಪಾರ ಕಣ್ಮರೆಯಾದುದನ್ನು ನೋಡುತ್ತ ನಿಂತ.

ನೆರೆದಿದ್ದವರಲ್ಲಿ ಯಾರೋ ಅಂದರು :

"ಶರಣರ ಗುಟ್ಟು ಮರಣದಲ್ಲಿ..."

---

೨೧೬



## ನಿರಂಜನ ಅವರ ಕಾದಂಬರಿಗಳು

ವಿಮೋಚನೆ
ಬನಶಂಕರಿ
ಸೌಭಾಗ್ಯ
ಅಭಯ
ದೂರದ ನಕ್ಷತ್ರ
ನವೋದಯ
ರಂಗಮ್ಮನ ವಠಾರ
ಪಾಲಿಗೆ ಬಂದ ಪಂಚಾಮೃತ
ಏಕಾಂಗಿನಿ
ಚಿರಸ್ಮರಣೆ
ಕೊನೇ ನಮಸ್ಕಾರ
ಮಿಣುಕುಹುಳ
ವಿಲಾಸಿನಿ
ಅಂಜನ
ವಿಶಾಲಾಕ್ಷಿ
ದೀಕ್ಷೆ
ಕಲ್ಯಾಣಸ್ವಾಮಿ
ತೊಟ್ಟಿಲು ತೂಗದ ಕೈ
ಹೆಣ್ಣಾಗಿ ಕಾಡಿತ್ತು ಮಾಯೆ
ಬಂಗಾರದ ಜಿಂಕೆ
ನಂದಗೋಕುಲ
ಸ್ವಾಮಿ ಅಪರಂಪಾರ
ನೋವು
ಸ್ಮರಣೆಯೊಂದೇ ಸಾಲದೆ ?
ಮೃತ್ಯುಂಜಯ

BLOSSOM
Ph: 25320400
₹ 30

ಮುಖಚಿತ್ರ : ವೆಂಕಟೇಶ್

ಡಿ. ವಿ. ಕೆ. ಮೂರ್ತಿ : : ಪ್ರಕಾಶಕರು : : ಮೈಸೂರು-೪